ಕನ್ನಡ ತೆಲುಗು ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಮುಖಿ

(ಆರಂಭದ ಕಾದಂಬರಿಗಳನ್ನು ಅನುಲಕ್ಷಿಸಿ)

(ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯಕ್ಕೆ ಸಲ್ಲಿಸಿದ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧನೆ
ಮುಕ್ತಿಯಾರ್‌ಬಿ

ಮಾರ್ಗದರ್ಶನ
ಡಾ. ಎ. ಮೋಹನ ಕುಂಟಾರ್
ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ

ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ–583279
೨೦೧೩

562

ಕನ್ನಡ ತೆಲುಗು ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಮುಖಿ

(ಆರಂಭದ ಕಾದಂಬರಿಗಳನ್ನು ಅನುಲಕ್ಷಿಸಿ)

(ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯಕ್ಕೆ ಸಲ್ಲಿಸಿದ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧನೆ

ಮುಕ್ತಿಯಾರ್‌ಬಿ

ಮಾರ್ಗದರ್ಶನ

ಡಾ. ಎ. ಮೋಹನ ಕುಂಟಾರ್

ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ

ಭಾಷಾಂತರ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ-೫೮೩೨೭೬

೨೦೧೩

ಪ್ರಮಾಣ ಪತ್ರ

ಕನ್ನಡ–ತೆಲುಗು ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಮುಖಿ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು **ಡಾ. ಎ.ಮೋಹನ ಕುಂಟಾರ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಸದರಿ ಮಹಾಪ್ರಬಂಧವು ಈ ಮೊದಲು ಯಾವ ಪದವಿಗೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮುಕ್ತಿಯಾರ್ ಬಿ
ಸಂಶೋಧನ ವಿದ್ಯಾರ್ಥಿ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೪.೦೬.೨೦೧೩

ಮಾರ್ಗದರ್ಶಕರ ದೃಢೀಕರಣ ಪತ್ರ

ಮುಕ್ತಿಯಾರ್‌ಬಿ. ಅವರು **ಕನ್ನಡ–ತೆಲುಗು ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಮುಖಿ** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವ ಪದವಿಗೂ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮೋಹನ ಕುಂಟಾರ್

ಡಾ. ಎ. ಮೋಹನ ಕುಂಟಾರ್
ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಸ್ಥಳ: ವಿದ್ಯಾರಣ್ಯ
ದಿನಾಂಕ: ೨೮/೦೬/೨೦೧೨

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

ಪ್ರಸ್ತಾವನೆ

ಅಧ್ಯಯನದ ಉದ್ದೇಶ

ಅಧ್ಯಯನದ ವ್ಯಾಪ್ತಿ

ಅಧ್ಯಯನದ ವಿಧಾನ

ಇದುವರೆಗೆ ನಡೆದಿರುವ ಅಧ್ಯಯನಗಳು

ಅಧ್ಯಯನದ ಮಹತ್ವ

ಅಧ್ಯಯನದ ರೂಪುರೇಷೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

ಪ್ರಸ್ತಾವನೆ

ಬದಲಾಗುವಿಕೆಯೇ ಕಾಲದ ಪ್ರಧಾನ ಗುಣ. ಈ ಮಾತು ಸಾಮಾಜಿಕ ಜೀವನ ಮೌಲ್ಯಗಳಿಗೂ ಅನ್ವಯಿಸಬಹುದು. ಸಾಮಾಜಿಕ ಜೀವನದಲ್ಲಿ ಬದಲಾವಣೆಗೆ ಒಳಪಟ್ಟ ಅಂಶಗಳನ್ನು ಆಧುನಿಕತೆ ಎಂತಲೂ, ಬದಲಾವಣೆಗೆ ಒಳಪಡಲು ಹಿಂಜರಿಯುವ ಅಂಶಗಳನ್ನು ಸಂಪ್ರದಾಯವೆಂತಲೂ ಸಾಮಾನ್ಯವಾಗಿ ಗುರುತಿಸಿಕೊಂಡು ಬರಲಾಗಿದೆ. ಇದನ್ನು ಜಗತ್ತಿನ ಯಾವುದೇ ಸಮುದಾಯದ ಯಾವುದೇ ಭಾಷೆಯ ಸಮಾಜ ಎದುರಿಸುತ್ತಿರುವ ಸಮಸ್ಯೆಯಾಗಿ ಗುರುತಿಸಬಹುದು.

ಆ ಬದಲಾಗುವಿಕೆಯ ಕಾರ್ಯ ಸ್ವರೂಪದಲ್ಲಿ ಆಂತರಿಕ ಒತ್ತಡಗಳು ಮತ್ತು ಬಾಹ್ಯ ಪ್ರೇರಣೆಗಳು ಆಯಾ ಕಾಲಘಟ್ಟದ ಸಾಂದರ್ಭಿಕ ಸ್ಥಿತಿಗತಿಗಳಲ್ಲಿ ಕಾರ್ಯ ನಿರ್ವಹಿಸಿರುವುದನ್ನು ಕಾಣಬಹುದು. ಹಾಗಾಗಿ ಒಂದು ಸಮಾಜದೊಳಗಿನ ಜೀವನ ಮೌಲ್ಯಗಳ ವಿಭಿನ್ನ ಅಂಶಗಳು ಸಂಘರ್ಷಕ್ಕೆ ಒಳಗಾಗುವ ಹಾಗೆಯೇ ಹೊಂದಾಣಿಕೆಗೂ ಒಳಗಾಗುವುದನ್ನು ಕಾಣುತ್ತೇವೆ.

ಸಾಮಾಜಿಕ ಮೌಲ್ಯಗಳು ಎದುರಿಸಿದ ಈ ಸಮಸ್ಯೆಗಳು ಆಯಾ ಸಮಾಜವನ್ನು ಮುನ್ನಡೆಸುವ, ಸುಧಾರಿಸುವ ಪ್ರಯತ್ನವಾಗಿ ನಂತರದ ಕಾಲಘಟ್ಟದಲ್ಲಿ ಕಂಡುಬರುತ್ತದೆ. ಇಂತಹ ಬೆಳವಣಿಗೆಗಳು ಸಾಹಿತ್ಯರೂಪದಲ್ಲಿ ದಾಖಲೆಗೊಂಡು ಒಂದು ಕಾಲಘಟ್ಟದ ಸಮಾಜವನ್ನು ಅಧ್ಯಯನ ಮಾಡಲು ಆಕರಗಳಾಗಿಯೂ ಒದಗುತ್ತವೆ. ಇದಕ್ಕೆ ನಿದರ್ಶನವಾಗಿ ಕನ್ನಡ ಮತ್ತು ತೆಲುಗು ಭಾಷೆಯ ಕಾದಂಬರಿ ಪ್ರಕಾರದ ಆರಂಭಿಕ ಕಾಲಘಟ್ಟದ ಕೃತಿಗಳು ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಕಲಾಪ್ರಕಾರವಾಗಿ ಕಂಡುಬರುತ್ತವೆ.

ಈ ಎರಡು ಭಾಷೆಗಳಲ್ಲಿ ಕಾದಂಬರಿ ಪ್ರಕಾರ ೧೯ನೆಯ ಶತಮಾನದ ಕೊನೆಯ ಎರಡು ದಶಕಗಳ ಅವಧಿಯಲ್ಲಿ ರೂಪುಗೊಂಡಿದೆ. ಸರಿಸುಮಾರು ಒಂದೇ ರೀತಿಯ ಸಾಂಸ್ಕೃತಿಕ ಪರಿಸರವುಳ್ಳ, ದ್ರಾವಿಡ ಸಂಸ್ಕೃತಿಯ ಹಿನ್ನೆಲೆಯುಳ್ಳ ಈ ಭಾಷೆಗಳು ನೆರೆಯ ರಾಜ್ಯಗಳಲ್ಲಿ ಅನ್ಯೋನ್ಯವಾಗಿ ಬೆಳೆದು ಬಂದಿವೆ. ಎರಡೂ ಭಾಷೆಯ ಆಚಾರ ವಿಚಾರಗಳಲ್ಲಿ ಸಮಾನತೆಯನ್ನು ಕಾಣಬಹುದು. ಪ್ರಾಚೀನ

ಕಾಲದ ಕವಿಗಳಾದ ಪಂಪ ಮತ್ತು ನನ್ನಯ ಎರಡೂ ಭಾಷೆಗಳಲ್ಲಿ ಪರಿಣಿತರೆ ಆಗಿದ್ದರು. ಭಾಷಾ ವಿದ್ವಾಂಸರು ಹೇಳುವಂತೆ ಕನ್ನಡ-ತೆಲುಗು ಭಾಷೆಗಳಿಗೆ ಒಂದೇ ತೆರನ ಲಿಪಿ ಬಳಕೆಯಾಗುತ್ತಿತ್ತು. ಎರಡೂ ಭಾಷೆಗಳ ನಡುವೆ ಕೊಡು-ಕೊಳ್ಳುವ ಬಾಂಧವ್ಯ ಹಿಂದಿನ ಕಾಲದಿಂದಲೂ ನಡೆದು ಸಾಂಸ್ಕೃತಿಕ ಸ್ನೇಹ ಸಂಬಂಧ ಉಳಿದುಬಂದಿದೆ. ತೆಲುಗು ನಾಡಿನವನಾದ ಪಂಪ ಕನ್ನಡದ ಆದಿಕವಿ ಎಂಬ ಕೀರ್ತಿಗೆ ಪಾತ್ರನಾದರೂ ಅವನ ಮನೆ ಮಾತು ತೆಲುಗು ಆಗಿತ್ತು. ಕನ್ನಡದ ಕವಿ ರತ್ನತ್ರಯರಲ್ಲಿ ಮೊದಲಿಗನಾದ ಪಂಪ ತೆಲುಗಿನಲ್ಲೂ ಕೃತಿ ರಚನೆ ಮಾಡಿದ್ದಾನೆ ಎಂದು ಹೇಳಲಾಗಿದೆ. (ಮದರಾಸು ವಿ.ವಿ. ಪ್ರಕಟಣೆ, ತೆಲುಗು ಕವಿ ಚರಿತ್ರೆ)

ಪಂಪನ ನಂತರದ ಕವಿ ಪೊನ್ನ ಕೂಡ ರಾಯಲ ಸೀಮೆಯ ಈಗಿನ ಚಿತ್ತೂರು ಜಿಲ್ಲೆಯಲ್ಲಿರುವ ಪುಂಗನೂರಿನವನು. ಈತನ ಮನೆ ಮಾತು ಕೂಡ ತೆಲುಗು ಆಗಿತ್ತು. ಹಾಗೆಯೆ ನನ್ನಯನ ಮನೆಮಾತು ಕನ್ನಡವೆ ಆಗಿದ್ದರೂ ಅವನು ತೆಲುಗಿನಲ್ಲಿ ಆದಿಕವಿ ಎಂದು ಹೆಸರು ಪಡೆದ. ೧೩೬೯ರಲ್ಲಿ ರಚಿತವಾದ ಭೀಮ ಕವಿಯ ಕನ್ನಡ ಬಸವ ಪುರಾಣ ಪಾಲ್ಕುರಿಕೆ ಸೋಮನಾಥ ಕವಿಯ ತೆಲುಗು ಕೃತಿಯ ಅನುವಾದವಾಗಿದೆ. ಸುಮಾರು ಮೂರು ಶತಮಾನಗಳವರೆಗೆ ಆಳಿದ ವಿಜಯನಗರ ಅರಸರ ಕಾಲದಲ್ಲಿ ಈ ಎರಡೂ ಭಾಷೆಗಳಿಗೆ ಸಮಾನ ಪ್ರೋತ್ಸಾಹವಿತ್ತು. ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಅಷ್ಟ ದಿಗ್ಗಜರಲ್ಲಿ ಎರಡೂ ಭಾಷೆಯ ಕವಿಗಳಿದ್ದು ಸಮಾನ ಅವಕಾಶ ನೀಡಲಾಗಿತ್ತು.

ಈ ಭಾಷೆಗಳ ಬಾಂಧವ್ಯ ಶಾತವಾಹನ, ಚಾಲುಕ್ಯ, ಚೋಳ, ಕಾಕತೀಯ ಅರಸರ ಕಾಲದಿಂದ ಈಗಿನವರೆಗೂ ನಡೆದುಬಂದಿದೆ. ಕನ್ನಡ ನಾಡಿನಲ್ಲಿ ತೆಲುಗು ಭಾಷೆ ಅಷ್ಟೇ ಅಲ್ಲದೆ ಸಾಹಿತ್ಯವೂ ರಾಜಾಶ್ರಯ ಪಡೆದಿತ್ತು. ತೆಲುಗು ಕವಿ ಶ್ರೀನಾಥ ಕನ್ನಡ ಪ್ರದೇಶಗಳಲ್ಲಿ ಸಂಚರಿಸಿ ಕೃತಿ ರಚನೆ ಮಾಡಿ ಅನೇಕ ರಾಜರಿಂದ ಸನ್ಮಾನಿತನಾದ ಉಲ್ಲೇಖಗಳಿವೆ. ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಮೈಸೂರು ತೆಲುಗು ಸಾಹಿತ್ಯ ಒಂದು ಪ್ರಧಾನ ಘಟ್ಟವಾಗಿದೆ. ಈ ಕಾಲಾವಧಿಯಲ್ಲಿ (೧೭೦೦-೧೭೫೦) ಕನ್ನಡ ನಾಡಿನಲ್ಲಿ ತೆಲುಗರು ಮಾತ್ರವಲ್ಲದೆ ಕನ್ನಡಿಗರೂ ತೆಲುಗು ಕಾವ್ಯಗಳನ್ನು ರಚಿಸಿದ್ದಾರೆ. ಬೆಂಗಳೂರು ನಗರದ ನಿರ್ಮಾಪಕನಾದ ಕೆಂಪೇಗೌಡ ತೆಲುಗಿನವನೆಂಬ ಅಭಿಪ್ರಾಯವಿದೆ. ಅವನ ಹೆಸರಿನಲ್ಲಿ 'ಗಂಗಾ ಗೌರಿ ವಿಲಾಸಮು' ಎಂಬ ತೆಲುಗು ಯಕ್ಷಗಾನ ಕೃತಿಯಿದೆ (ಕರ್ನಾಟಕ;ಸಂಪುಟ ೧).

ಪಂಪನ ತಮ್ಮನಾದ ಜಿನವಲ್ಲಭನ ಹೆಸರಿನಲ್ಲಿರುವ ಶಾಸನದಲ್ಲಿ ಕನ್ನಡ ಪದ್ಯಗಳ ಜೊತೆಗೆ ತೆಲುಗು ಪದ್ಯಗಳ ಉಲ್ಲೇಖ ಇವೆ. ಕರ್ನಾಟಕದಲ್ಲಿ ಚಿಕ್ಕದೇವರಾಯನ ಕಾಲದಲ್ಲಿ ಕಳಲೆ ವೀರರಾಜ ಕವಿ ಸೇನಾಪತಿಯೂ ಬಹು ಭಾಷಾ ಕೋವಿದನೂ ಸಾಹಿತ್ಯಜ್ಞನೂ ಆಗಿದ್ದ.

ಆಧುನಿಕ ಕಾಲದಲ್ಲಿ ಉಲಚನಾಡು ವೆಂಕಟರಮಣ ಕವಿ (೧೮೫೦) ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನಲ್ಲೂ ವಾಸಿಷ್ಠ ರಾಮಾಯಣ ಬರೆದಿದ್ದಾನೆ. ಇಂದಿನ ಕಾಲದಲ್ಲೂ ಆಲೂರು ರಾಮಕವಿ, ಜೋಳದರಾಶಿ ದೊಡ್ಡನಗೌಡ ಮೊದಲಾದವರು ಎರಡೂ ಭಾಷೆಗಳಲ್ಲಿ ಕೃತಿ ಬರೆದು ಕರ್ನಾಟಕದ ತೆಲುಗು ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ತೆಲುಗಿನ ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯ ಚರಿತ್ರೆಯನ್ನು ನೀಲಕಂಠಾಚಾರ್ಯ ಕನ್ನಡಿಸಿದ್ದಾನೆ. ಚಾಮರಸನ ಪ್ರಭುಲಿಂಗಲೀಲೆಯನ್ನು ಪಿಡುಪರ್ತಿ ಸೋಮನಾಥ ಕವಿ ತೆಲುಗಿಗೆ ಭಾಷಾಂತರ ಮಾಡಿದ್ದಾನೆ. ಕನ್ನಡ-ತೆಲುಗು ಛಂದಸ್ಸಿನ ಹೋಲಿಕೆ ಬಹಳ ಹತ್ತಿರವಾದುದು. ಸಂಸ್ಕೃತ ವೃತ್ತಗಳನ್ನು ಕನ್ನಡದವರು ತೆಗೆದುಕೊಂಡಿರುವಂತೆ ತೆಲುಗರೂ ತೆಗೆದುಕೊಂಡಿದ್ದಾರೆ. ಅನೇಕ ಛಂದೋಗ್ರಂಥಗಳು ಪರಸ್ಪರ ಪ್ರಭಾವಕ್ಕೆ ಒಳಗಾಗಿವೆ (ಕರ್ನಾಟಕ ಸಂಪುಟ:೧). ಈ ಭಾಷಾ ಸಾಹಿತ್ಯಗಳು ಒಂದಕ್ಕೊಂದು ಪೂರಕವಾಗಿ ಬೆಳೆದು ಸಂಸ್ಕೃತ ಭಾಷೆಯ ಸಂಪ್ರದಾಯವನ್ನು ಬಹುಮಟ್ಟಿಗೆ ಸ್ವೀಕರಿಸಿವೆ. ಎರಡೂ ಭಾಷೆಗಳ ಕೃತಿಗಳಲ್ಲಿ ಪರಸ್ಪರ ಭಾಷಾಂತರಗಳ ಪಾತ್ರ ಗಮನಾರ್ಹವಾಗಿವೆ. ಇದರಿಂದ ಪಾಶ್ಚಾತ್ಯ ವಿಚಾರಧಾರೆಗಳು ದೇಶ ಭಾಷೆಗಳಲ್ಲಿ ವ್ಯಾಪಕವಾದವು.

ಇಪ್ಪತ್ತನೆಯ ಶತಮಾನದ ಆರಂಭದಿಂದಲೇ ಕನ್ನಡದ ಮಾಸ್ತಿ, ಡಿ.ವಿ.ಜಿ., ದೇವುಡು, ಶಿವರಾಮ ಕಾರಂತ, ತ್ರಿವೇಣಿ, ಯು.ಆರ್.ಅನಂತಮೂರ್ತಿ, ಶ್ರೀಕೃಷ್ಣ ಆಲನಹಳ್ಳಿ, ಪೂರ್ಣಚಂದ್ರ ತೇಜಸ್ವಿ ಮೊದಲಾದವರ ಕೃತಿಗಳು ತೆಲುಗಿಗೆ ಭಾಷಾಂತರವಾಗಿವೆ. ತೆಲುಗಿನ ವೀರೇಶಲಿಂಗಂ ಪಂತುಲು, ಗುರಜಾಡ ಅಪ್ಪಾರಾವ್, ವಿಶ್ವನಾಥ ಸತ್ಯನಾರಾಯಣ, ಚಲಂ, ಶ್ರೀ.ಶ್ರೀ., ಸಿ. ನಾರಾಯಣರೆಡ್ಡಿ, ದಿಗಂಬರ ಕವಿಗಳು, ರಂಗನಾಯಕಮ್ಮ, ಯಂಡಮೂರಿ ವೀರೇಂದ್ರನಾಥ ಮೊದಲಾದವರ ಕೃತಿಗಳು ಕನ್ನಡಕ್ಕೆ ಬಂದಿವೆ. ಇದರಿಂದ ಎರಡೂ ಭಾಷೆಗಳ ತೌಲನಿಕ ಅಧ್ಯಯನಕ್ಕೆ ಸಹಕಾರಿಯಾಗಿದೆ.

ಈ ಎರಡೂ ಭಾಷೆಗಳಲ್ಲಿ ಪ್ರಕಟವಾದ ಆರಂಭಿಕ ಕಾಲಘಟ್ಟದ ಕಾದಂಬರಿಗಳಲ್ಲಿ ಒಂದು ಬಗೆಯ ಸಮಾನ ಮತ್ತು ಭಿನ್ನ ಗುಣಗಳನ್ನು ಕಾಣಬಹುದು. ಇವು ಒಳಗೊಂಡಿರುವ ಸಮಾನ ಆಶಯಗಳಲ್ಲಿ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳು, ಅವರ ಶಿಕ್ಷಣ ಮುಂತಾದವು ಪ್ರಧಾನವಾಗಿ ಕಂಡುಬರುವುದು ಕುತೂಹಲಕಾರಿಯಾಗಿದೆ. ಏಕೆಂದರೆ ಕನ್ನಡ ಭಾಷೆಯಲ್ಲಿ ಕಾದಂಬರಿ ಪ್ರಕಾರದ ಬರವಣಿಗೆಗಳು ಪ್ರಕಟವಾಗುವ ಸಂದರ್ಭದಲ್ಲಿ ಬಂಗಾಳದ ಕಾದಂಬರಿಗಳನ್ನು ನೇರಾನುವಾದ ಮಾಡಿಕೊಂಡ ಪರಿಣಾಮವಾಗಿ ಇಡೀ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಬಂಗಾಳದಲ್ಲಿ ಕಾಣಿಸಿಕೊಂಡ ಸುಧಾರಣಾವಾದಿಯ ನಿಟ್ಟು-ನೋಟಗಳು ಕಾಣಿಸಿಕೊಂಡಿದ್ದು ಚಾರಿತ್ರಿಕ ಬೆಳವಣಿಗೆಯ ಭಾಗವಾಗಿದೆ. ತೆಲುಗು ಕಾದಂಬರಿಗಳ ಆರಂಭಿಕ ಘಟ್ಟದ ಕೃತಿಗಳು ಇಂತಹ ಪ್ರೇರಣೆಗೆ ಒಳಗಾಗಿದ್ದರೂ ಈ ಭಾಷೆಯ ಆರಂಭಿಕ ಕಾದಂಬರಿಕಾರರಾದ ವೀರೇಶಲಿಂಗಂ ಪಂತುಲು ಅವರು ಬಂಗಾಳದಲ್ಲಿ ಆರಂಭವಾದ ಸ್ತ್ರೀ ಕುರಿತ ಸುಧಾರಣಾವಾದಿ ನೋಟ ಮತ್ತು

ರಾಷ್ಟ್ರೀಯ ಮನೋಭಾವದ ಹೋರಾಟದಿಂದ ಪ್ರಭಾವಿತರಾಗಿದ್ದರು. ಹಾಗಾಗಿ ತಮ್ಮ ವೈಯಕ್ತಿಕ ಜೀವನದ ಸ್ವಂತ ಉದಾಹರಣೆಯ ಹಿನ್ನೆಲೆಯಲ್ಲಿ ಸಮಾಜ ಸುಧಾರಕ ವ್ಯಕ್ತಿತ್ವವನ್ನೂ ಅಂತಹ ವಿಚಾರ ಪ್ರತಿಪಾದಿಸುವ ಕೃತಿಗಳನ್ನೂ ರಚಿಸಿದರು. ಇವರನ್ನು ಅನುಸರಿಸಿದ ತೆಲುಗು ಭಾಷೆಯ ಇತರೆ ಕಾದಂಬರಿಕಾರರು ಪ್ರಗತಿಪರ ಮನೋಭಾವನೆಯುಳ್ಳ ಕಾದಂಬರಿಗಳನ್ನು ರಚಿಸಿರುವುದು ತರ್ಕಬದ್ಧವೆಂದು ಊಹಿಸಬಹುದು.

ಈ ಎರಡೂ ಭಾಷೆಯ ಆರಂಭಿಕ ಕಾದಂಬರಿಗಳಲ್ಲಿ ಕಾಣುವ ಆಶಯಗಳನ್ನು ಪ್ರೇರಣೆ ಪಡೆಯುವಲ್ಲಿ ಹೀಗೆ ಭಿನ್ನತೆ ಕಾಣಬಹುದು. ಹಾಗಿದ್ದರೆ ಈ ಭಾಷಾ ಸಮುದಾಯಗಳು ಭಿನ್ನ ಸಾಮಾಜಿಕ ಸ್ವರೂಪವನ್ನು ಪಡೆದಿದ್ದವೇ ಅಥವಾ ಒಂದೇ ಸ್ವರೂಪದ ಸಾಮಾಜಿಕ ವ್ಯವಸ್ಥೆಯಿದ್ದರೂ ಭಿನ್ನ ಪ್ರೇರಣೆಯ ಸ್ವರೂಪಕ್ಕೆ ಇದ್ದ ಕಾರಣಗಳು ಕೇವಲ ಸಾಂದರ್ಭಿಕವಾಗಿದ್ದುವೆ ಎಂಬಂಥ ಪ್ರಶ್ನೆಗಳು ಈ ಎರಡೂ ಭಾಷಾ ಕಾದಂಬರಿಗಳ ಸಮಾನತೆ ಮತ್ತು ಭಿನ್ನತೆಗಳನ್ನು ಗಮನಿಸುವಾಗ ಮುಂದೆ ಬರುತ್ತವೆ.

ಆದರೆ ಭಾರತದಲ್ಲಿ ವಸಾಹತುಶಾಹಿ ಆಡಳಿತ ತನ್ನ ಅಸ್ತಿತ್ವ ನೆಲೆಗೊಳಿಸುವ ಹಿನ್ನೆಲೆಯಲ್ಲಿ ಪ್ರಚೋದಿಸಿದ ಸುಧಾರಣಾ ಪ್ರವೃತ್ತಿ ಪ್ರಾಚ್ಯ ಮತ್ತು ಪಾಶ್ಚಾತ್ಯ ಮೌಲ್ಯಗಳ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿತು. ಭಾರತೀಯ ಸಂಸ್ಕೃತಿಗೆ ವೈಜ್ಞಾನಿಕ ಮನೋಭಾವ ಅಳವಡುವ ಅಗತ್ಯವನ್ನು ಮನಗಾಣಿಸಿತು. ಇದರಿಂದ ಭಾರತೀಯ ಸಮಾಜದ ಲೋಪದೋಷಗಳು, ಮೌಢ್ಯತೆಗಳು ವಿಮರ್ಶೆಗೆ ಒಳಗಾದವು. ಭಾರತದ ಸಾಂಪ್ರದಾಯಿಕ ಸಮಾಜದಲ್ಲಿ ಮಡುಗಟ್ಟಿದ್ದ ಲಿಂಗ ಭೇಧ, ಜಾತಿ ಭೇಧ ತಾರತಮ್ಯತೆಗೆ ಎದುರಾಗಿ ವ್ಯಕ್ತಿಯ ಘನತೆ, ಹಕ್ಕು, ಸ್ವಾತಂತ್ರ್ಯ ಪರವಾದ ವಿಚಾರಗಳು ಮುಂಚೂಣಿಗೆ ಬಂದವು. ಪರಕೀಯವಾದುದೆಲ್ಲ ನೂತನವೂ ಶ್ರೇಷ್ಠವೂ ಎಂಬ ನಿಲುವನ್ನು ಪರೋಕ್ಷವಾಗಿ ಒಪ್ಪಿಕೊಳ್ಳುವಂತೆ ಮಾಡಿ ಕಳವಳಕ್ಕೆ ದಾರಿ ಮಾಡಿಕೊಟ್ಟಿತು. ಹಾಗಾಗಿ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. ಇದನ್ನು ಪ್ರತಿತಂತ್ರದ ಮೂಲಕ ಎದುರಿಸುವ ಹುನ್ನಾರದಲ್ಲಿ ಭಾರತದ ಹಿಂದೂ ಸಂಸ್ಕೃತಿ ತನ್ನ ಯಜಮಾನಿಕೆಯನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡಿದಂತೆ ಕಾಣುತ್ತದೆ. ಅದು ಸಾಮಾಜಿಕ ಜೀವನ ಮೌಲ್ಯಗಳ ಪರಾಮರ್ಶೆಯ ನೆಪದಲ್ಲಿ ಸುಧಾರಣೆಯ ಮುಖವಾಡ ತೊಟ್ಟಂತೆಯೂ ಕಾಣುತ್ತದೆ. ಹಾಗಾಗಿ ವೇದಗಳ ಕಾಲದಲ್ಲಿ ಭಾರತದ ಸ್ತ್ರೀಯರ ಸ್ಥಾನಮಾನ ಉನ್ನತ ಮಟ್ಟದಲ್ಲಿತ್ತೆಂದೂ ಆಕೆ ಆಗ ಮನೆಯ ಕೆಲಸಕ್ಕೆ ಮಾತ್ರ ನಿಯುಕ್ತಳಾಗದೆ ಸ್ವತಃ ಶ್ಲೋಕಗಳನ್ನು ರಚಿಸುವಷ್ಟು ವಿದ್ಯಾವಂತೆಯೂ ಜ್ಞಾನಿಯೂ ಆಗಿದ್ದಳೆಂದು ಗಾರ್ಗಿ ಮೊದಲಾದ ಸ್ತ್ರೀಯರ ಸಾಧನೆಯನ್ನು ಮುಖ್ಯವಾಗಿ ಮುಂಚೂಣಿಗೆ ತಂದದ್ದು ಕಂಡುಬರುತ್ತದೆ. ಈ ಮೂಲಕ ಭಾರತದ ಹಿಂದೂ ಸಂಸ್ಕೃತಿಯನ್ನು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡಿದ್ದನ್ನು ಕಾಣುತ್ತೇವೆ.

ಸ್ತ್ರೀಯರ ಸ್ಥಾನಮಾನ ಅಧೋಗತಿಗೆ ಇಳಿಯಲು ನಂತರದ ಕಾಲಘಟ್ಟದಲ್ಲಿ ಭಾರತ ಮುಸ್ಲಿಮರ ದಾಳಿಗೆ ಒಳಗಾದುದೇ ಮುಖ್ಯ ಕಾರಣವೆಂದು ಹೇಳಲಾಗುತ್ತದೆ. ಭಾರತದಲ್ಲಿನ ಸ್ತ್ರೀಯರ ಸ್ಥಿತಿಗತಿಗಳಿಗೂ ಹಿಂದೂ ಸಂಸ್ಕೃತಿ ಸ್ತ್ರೀಯರನ್ನು ದಮನಿತ ಸ್ಥಿತಿಯಲ್ಲಿ ಹಿಡಿದಿಟ್ಟ ಪುರುಷ ಪರ ಜೀವನ ಮೌಲ್ಯಗಳಿಗೂ ಇದ್ದ ಸಂಬಂಧವನ್ನು ಮರೆಮಾಚಲು ಇಂಥ ಪ್ರಯತ್ನಗಳು ನಡೆದದ್ದೂ ಕಂಡುಬರುತ್ತದೆ. ಭಾರತದ ಸಾಮಾಜಿಕ ವ್ಯವಸ್ಥೆಯ ಈ ಮಂಥನದ ಸುಳಿಗೆ ಆ ಕಾಲದ ಕನ್ನಡ ಮತ್ತು ತೆಲುಗು ಕಾದಂಬರಿಗಳು ಸಿಲುಕಿರುವುದು ಅಚ್ಚರಿಯ ವಿಷಯವೇನಲ್ಲ. ಅವು ಸಾಮಾಜಿಕ ಬದ್ಧತೆ ಮತ್ತು ನಿಷ್ಠೆಯನ್ನು ಸಾರುವಂತೆ ಕಾಣುತ್ತವೆ. ಈ ಹಿನ್ನೆಲೆಯಲ್ಲಿ ಈ ಕಾದಂಬರಿಗಳು ಸಂಪ್ರದಾಯ ಮತ್ತು ಆಧುನಿಕತೆಯನ್ನು ಸ್ವೀಕರಿಸಿದ ಅಥವಾ ವಿಮರ್ಶಿಸಿದ ಬಗೆ ಯಾವುದು, ಇದು ತನ್ನ ಭಾಷಿಕ ಸಮುದಾಯದ ಸಾಮಾಜಿಕ ವ್ಯವಸ್ಥೆಗೆ ತೋರಬಯಸಿದ ವಿವೇಕದ ಮಟ್ಟ ಯಾವ ಬಗೆಯದು, ಸಾಮಾಜಿಕ ಚಲನೆಯನ್ನು ಮುನ್ನಡೆಸಿದ ಬಗೆ ಯಾವುದು ಎಂಬಂಥ ಪ್ರಶ್ನೆಗಳು ಕನ್ನಡ ಮತ್ತು ತೆಲುಗು ಕಾದಂಬರಿಗಳ ಅಧ್ಯಯನದಲ್ಲಿ ಆಸಕ್ತಿಯನ್ನು ಹುಟ್ಟು ಹಾಕುವುದರ ಜೊತೆಗೆ ಪ್ರಸ್ತುತ ಅಧ್ಯಯನಕ್ಕೆ ಪ್ರೇರಣೆಯನ್ನು ಒದಗಿಸುವಂತಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ಆರಿಸಿಕೊಂಡ ಕಾದಂಬರಿಗಳ ಎರಡೂ ಭಾಷೆಯ ಲೇಖಕರು ಬಹುಪಾಲು ಪುರುಷರೇ ಆಗಿದ್ದಾರೆ. ಈ ಗುಂಪಿನಲ್ಲಿರುವ ಲೇಖಕಿಯ ನಿಲುವು ಸ್ತ್ರೀ ಪರವಾಗಿರುವಂತೆ ಮೇಲುನೋಟಕ್ಕೆ ಕಾಣುತ್ತದೆ. ಆದರೆ ಅವರ ಸಾಂಪ್ರದಾಯಿಕ ಧೋರಣೆಗಳು ಪುರುಷರ ಜೀವನ ಮೌಲ್ಯಗಳ ಸಮರ್ಥನೆಯಂತಿರುವುದು ಅಚ್ಚರಿಯ ಸಂಗತಿಯಾಗಿದೆ. ಪುರುಷ ಬರಹಗಾರರು ಸುಧಾರಣಾ ಮನೋಭಾವವನ್ನು ಸಾರಾಸಗಟಾಗಿ ಪ್ರತಿಬಿಂಬಿಸುತ್ತಾರೆ. ಅವರಲ್ಲಿ ಒಬ್ಬೊಬ್ಬರೂ ಎತ್ತುವ ಧ್ವನಿ, ತಾಳುವ ನಿಲುವು, ಧೋರಣೆಗಳು ಭಿನ್ನವಾಗಿರುವಂತೆ ತೋರುತ್ತದೆ. ಸುಧಾರಣಾ ಪರ ನಿಲುವು ಸಾರುವ ಕಾದಂಬರಿಗಳು ಸಂಪೂರ್ಣವಾಗಿ ಸುಧಾರಣಾ ನಿಲುವನ್ನು ಸಮರ್ಥಿಸುವಲ್ಲಿ ಸೋತಿರುವ ನೆಲೆಗಳನ್ನೂ ಕಾಣಬಹುದು. ಸ್ತ್ರೀ ಸಮಸ್ಯೆಯ ಹಲವು ಆಯಾಮಗಳನ್ನು ಮುಂದಿಟ್ಟುಕೊಂಡು ಸಂಪ್ರದಾಯವಾದಿ ಧೋರಣೆಯನ್ನು ಒಪ್ಪಿಕೊಂಡ ಲೇಖಕರನ್ನೂ ಇಲ್ಲಿ ಗುರುತಿಸಬಹುದು. ಸಂಪ್ರದಾಯ ಮತ್ತು ಆಧುನಿಕ ಚಿಂತನೆಯ ತಾಕಲಾಟಕ್ಕೆ ಸಿಲುಕಿದ ಕೆಲವು ಲೇಖಕರು ಯಾವ ಕಡೆಯೂ ವಾಲದೆ ವಾಸ್ತವ ಸಾಮಾಜಿಕ ಚಿತ್ರಣವನ್ನು ನಿರೂಪಿಸುತ್ತಲೇ ಅದನ್ನು ವಿಡಂಬಣೆಗೆ ಒಳಪಡಿಸಿದ ಕ್ರಮವನ್ನೂ ನೋಡಬಹುದು. ಇಂತಹ ಹಲವು ಬಗೆಯ ಭಿನ್ನತೆಗಳು ಕಾಣಿಸಿಕೊಳ್ಳುವಲ್ಲಿ ಈ ಎಲ್ಲ ಲೇಖಕರು ಮಂಡಿಸಿದ ವಸ್ತು, ಆಶಯ, ತಂತ್ರಗಾರಿಕೆಯಲ್ಲಿ ಸಮಾನತೆ ಇಲ್ಲದಿರುವುದು ಕಾರಣವಾಗಿರಬಹುದು. ಸ್ತ್ರೀ ಸಮಸ್ಯೆ ಮತ್ತು ಸ್ತ್ರೀ ಸುಧಾರಣೆ ಈ

ಎಲ್ಲರ ಮುಖ್ಯ ಆಶಯವಾಗಿದ್ದರೂ ಈ ಕುರಿತು ತಳೆಯುವ ಅಂತಿಮ ವಿಚಾರಗಳು ಲೇಖಕರ ವೈಯಕ್ತಿಕ ಆಲೋಚನಾ ಕ್ರಮವನ್ನು ಮಾತ್ರ ಪ್ರತಿನಿಧಿಸುತ್ತದೆಯೇ ಅಥವಾ ಈ ಲೇಖಕರ ಭಿನ್ನಾಭಿಪ್ರಾಯಗಳು ಸ್ತ್ರೀ ಸಮಸ್ಯೆ ಮತ್ತು ಸುಧಾರಣೆಯ ರೀತಿ ನೀತಿಗಳ ಬಗ್ಗೆ ತಳೆದ ಭಿನ್ನಾಭಿಪ್ರಾಯವೇ ಎಂಬುದು ಅಧ್ಯಯನಕ್ಕೆ ಒಳಪಡಬೇಕಾದ ಅಂಶಗಳಾಗಿವೆ.

ಈ ಹಿನ್ನೆಲೆಯಲ್ಲಿ ಸ್ತ್ರೀ ಕುರಿತ ಭಾರತದ ಸಾಂಪ್ರದಾಯಿಕ ಮನೋಭಾವ ತುಡಿದಿರುವ ಕ್ರಮವನ್ನು ಹೀಗೆ ಗುರುತಿಸಬಹುದು. ಭಾರತದ ಸಾಮಾಜಿಕ ಜೀವನದ ಮೌಲ್ಯಗಳು ಮನುಸ್ಮೃತಿಯನ್ನು ಆಧರಿಸಿದಂತಿದೆ. ಈ ಕೃತಿಯನ್ನು ಭಾರತೀಯ ಸಾಮಾಜಿಕ ಜೀವನ ರೂಪಿಸಿದ ಸಂವಿಧಾನದ ಕೃತಿ ಎಂದು ಹೇಳಲಾಗುತ್ತದೆ. ಇದು ಮೊದಲ ಬಾರಿಗೆ ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲವೆಂದು ಹೇಳಿ ಪುರುಷ ಪರವಾದ ಲಿಂಗಭೇದ ನೀತಿಯನ್ನು ಸ್ಥಾಪಿಸಿದೆ. ಬಾಲ್ಯದಲ್ಲಿ ತಂದೆಯ ಅಧೀನದಲ್ಲೂ, ಯೌವ್ವನದಲ್ಲಿ ಗಂಡನ ಅಧೀನದಲ್ಲೂ, ಮುಪ್ಪಿನಲ್ಲಿ ಮಗನ ಅಧೀನದಲ್ಲೂ ಹೆಣ್ಣು ಇರಬೇಕೆಂದು ವಿಧಿಸಿ ಹೆಣ್ಣನ್ನು ಪುರುಷಾಧೀನಳನ್ನಾಗಿ ಮಾಡಿದೆ. ಈ ಕೃತಿ ರಚಿತವಾದ ಕಾಲಾವಧಿಯ ಪೂರ್ವದಲ್ಲಿ ಹೆಣ್ಣು ಸಮಾಜದಲ್ಲಿ ಹೊಂದಿದ್ದ ಎಲ್ಲ ಬಗೆಯ ಸ್ವಾತಂತ್ರ್ಯ, ಹಕ್ಕು, ಘನತೆ, ಗೌರವಗಳನ್ನು ಕಸಿದುಕೊಂಡಂತೆ ನಿಯಮಗಳನ್ನು ನಿರೂಪಿಸಿದೆ.

ಭಾರತದಲ್ಲಿ ಸಮಾಜ ಸುಧಾರಣೆಗೆ ಚಾಲನೆ ದೊರೆತ ಕಾಲಾವಧಿಯಲ್ಲಿದ್ದ ಸತಿಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆ, ವಿಧವಾ ಸಮಸ್ಯೆ, ಸ್ತ್ರೀ ಅನಕ್ಷರತೆ ಮುಂತಾದ ಹೆಣ್ಣಿನ ಸ್ಥಿತಿಗತಿಗಳಿಗೂ ಮನುಸ್ಮೃತಿ ನಿರೂಪಿತ ಪುರುಷಾಧೀನ ಅಥವಾ ಸ್ತ್ರೀ ದಮನ ನಿಯಮಗಳಿಗೂ ಹೀಗೆ ನೇರ ಸಂಬಂಧ ಏರ್ಪಡುವುದು. ಭಾರತೀಯ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಗಳು ನಡು ಮಧ್ಯದಲ್ಲೇ ಅಧೋಗತಿಗೆ ಇಳಿದಂತೇನೂ ಕಾಣುವುದಿಲ್ಲ. ಮನುಸ್ಮೃತಿಯಲ್ಲಿ ನಿರೂಪಿತ ಸ್ಥಿತಿ ನಿಯಮಗಳ ಸ್ವರೂಪದಲ್ಲಿ ಕಂಡುಬಂದರೆ ಸಮಾಜ ಸುಧಾರಣಾ ಚಳವಳಿ ಕಾಲದಲ್ಲಿ ಅದು ಸಮಾಜದಲ್ಲಿ ಆಚರಣೆಯ ಸ್ವರೂಪದ ಸ್ಥಿತಿಯಲ್ಲಿ ಇದ್ದುದನ್ನು ಕಾಣುತ್ತೇವೆ. ಅದರೆ ಲಿಂಗಭೇದ ನೀತಿ ಭಾರತೀಯ ಸಮಾಜದ ಮೂಲ ಸ್ವರೂಪವಾಗಿತ್ತೆಂದು ಹೇಳಬಹುದು.

ಸಮಾಜ ಸುಧಾರಣಾ ಚಳವಳಿಯಲ್ಲಿ ಮುಂಚೂಣಿಯಲ್ಲಿ ನಿಂತ ನಾಯಕರೆಲ್ಲ ಮೇಲು ಜಾತಿಗೆ ಸೇರಿರುವಂತೆ ಕಾಣುವುದು. ಮನುಸ್ಮೃತಿ ಹಿಂದೂ ಸಮಾಜದಲ್ಲಿ ಬ್ರಾಹ್ಮಣ ಪುರುಷ ಪರ ನಿಲುವುಗಳು ಪ್ರತಿಪಾದಿತವಾದಂತಿರುವುದು ಹಾಗೂ ಕನ್ನಡ-ತೆಲುಗು ಕಾದಂಬರಿಗಳ ಆರಂಭಿಕ ಕಾಲಘಟ್ಟದ ಕಾದಂಬರಿಗಳು ನಿರೂಪಿಸಿರುವ ಸ್ತ್ರೀಯರು ಮೇಲುಜಾತಿ ಸಮಾಜದವರಾಗಿರುವುದು ಕೇವಲ ಕಾಕತಾಳೀಯವಲ್ಲವೆಂದು ಹೇಳಬಹುದು. 'ಇಂದಿರಾಬಾಯಿ' ಸಾರಸ್ವತ ಬ್ರಾಹ್ಮಣ ಸಮಾಜದಲ್ಲಿ ನಡೆಯುವಂತೆ ನಿರೂಪಿತವಾಗಿರುವ ಕಾದಂಬರಿಯಾಗಿದ್ದರೆ 'ವಾಗ್ದೇವಿ' ಮಧ್ವ ಬ್ರಾಹ್ಮಣ ಸಮಾಜದಲ್ಲಿ

ನಡೆಯುವ ಘಟನೆಗಳ ಸುತ್ತ ಹೆಣೆದ ಕೃತಿಯಾಗಿದೆ. 'ಇಂದಿರಾ', 'ನಭಾ', ಕಾದಂಬರಿಗಳಾಗಲೀ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಗಳಾಗಲೀ ಆರಂಭದ ತೆಲುಗು ಸಾಮಾಜಿಕ ಕಾದಂಬರಿಗಳಾಗಲೀ ಎಲ್ಲವೂ ಬ್ರಾಹ್ಮಣ ಸಮಾಜದೊಳಗೆ ನಡೆಯುವ ಕತೆಗಳಾಗಿವೆ. ಅಂದರೆ ಸ್ತ್ರೀ ಸ್ಥಾನಮಾನದ ಸಮಸ್ಯೆ ಬ್ರಾಹ್ಮಣ ಸಮಾಜದ ಮೂಲ ಸಮಸ್ಯೆಯಾಗಿದ್ದು, ಅದನ್ನು ಸುಧಾರಿಸಲು ಅದೇ ಸಮಾಜದ ಪುರುಷರು ಮುಂದಾಗಿದ್ದುದು ಕಾಣುತ್ತೇವೆ. ಭಾರತೀಯ ಸಮಾಜದ ಸ್ತ್ರೀ ಸಮಸ್ಯೆಗೂ ಬ್ರಾಹ್ಮಣ ಸಮಾಜಕ್ಕೂ ನಂಟಿರುವುದನ್ನು ಇದು ಸೂಚಿಸುತ್ತದೆ. ಭಾರತೀಯ ಹಿಂದೂ ಸಮಾಜದಲ್ಲಿ ನಿರೂಪಿತವಾದ ಪುರುಷ ಪರ ಜೀವನ ಮೌಲ್ಯಗಳು ನೇರವಾಗಿಯೋ ಪರೋಕ್ಷವಾಗಿಯೋ ಸ್ತ್ರೀ ಸಮಸ್ಯೆಗಳಿಗೆ ಕಾರಣವೂ ಪರಿಹಾರವೂ ಆಗಿರುವಂತಿದೆ. ಆದ ಕಾರಣ ಪುರುಷಪರ ಜೀವನ ಮೌಲ್ಯಗಳ ಸುಧಾರಣೆ ಸ್ತ್ರೀಪರ ಜೀವನ ಮೌಲ್ಯಗಳ ಸುಧಾರಣೆಯನ್ನು ಒಳಗೊಂಡಿದೆ ಎಂದು ಭಾವಿಸಿ ಸ್ತ್ರೀ ಸಮಸ್ಯೆಗಳ ಸುಧಾರಣೆಗೆ ಪುರುಷರು ಮುಂಚೂಣಿಗೆ ಬಂದಂತಿದೆ. ಇವು ಪರಸ್ಪರ ಅವಲಂಬಿತವಾಗಿದ್ದು ಅಧ್ಯಯನದ ಮೂಲಕ ಸ್ಪಷ್ಟಪಡಿಸಿಕೊಳ್ಳಬೇಕಾದ ಅಂಶವಾಗಿದೆ.

ಭಾರತೀಯ ಸಮಾಜದ ಸ್ತ್ರೀ ಸಮಸ್ಯೆ ಕುರಿತು ಬ್ರಿಟಿಷ್ ಆಡಳಿತ ಗಮನ ವಹಿಸದೆ ಇದ್ದಿದ್ದರೆ ಇಲ್ಲಿನ ಪುರುಷ ಸಮಾಜ ಸ್ವತಃ ಈ ವಿಷಯವನ್ನು ಕೈಗೆತ್ತಿಕೊಳ್ಳುತ್ತಿತ್ತು ಎಂದು ಹೇಳಲು ಬರುವುದಿಲ್ಲ. ಸಮಾಜ ಸುಧಾರಕರು ಈ ವಿಷಯ ಕುರಿತು ನಡೆದುಕೊಂಡ ಕ್ರಮದ ಬಗ್ಗೆ ಇತಿಹಾಸದ ಪುಟದಲ್ಲಿ ಸಿಗುವ ವಿವರಗಳು ಇಂಥ ಅನುಮಾನವೊಂದನ್ನು ಹುಟ್ಟುಹಾಕುತ್ತವೆ. ಸಮಾಜ ಸುಧಾರಣಾ ಚಳವಳಿ ಸ್ತ್ರೀ ಮತ್ತು ಕೆಳವರ್ಗಗಳನ್ನು ಕೇಂದ್ರೀಕರಿಸಿ ನಡೆದುದು ತಿಳಿದಿರುವ ವಿಚಾರವೇ ಆಗಿರುವುದನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ ಜ್ಯೋತಿ ಬಾ ಫುಲೆ ಅವರು ಸ್ತ್ರೀ ಶಿಕ್ಷಣದ ಮೂಲಕ ಮಹಿಳೆಯರ ಸ್ಥಿತಿಗಳನ್ನು ಅಂದರೆ ಸಮಾಜದಲ್ಲಿ ಅವರು ಎದುರಿಸುತ್ತಿದ್ದ ಬಾಲ್ಯವಿವಾಹ, ವರದಕ್ಷಿಣೆ ಸಮಸ್ಯೆ, ವಿಧವಾ ವಿವಾಹ ಸಮಸ್ಯೆಗಳಿಗೆ ಪರಿಹಾರ ತೋರುವ ಪ್ರಾಮಾಣಿಕ ಪ್ರಯತ್ನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇದು ಕಾಲಕ್ರಮದಲ್ಲಿ ದಲಿತರ ಸುಧಾರಣೆಯಾಗಿಯೂ ರೂಪ ಪಡೆಯಿತು. ಆ ಕಾಲದಲ್ಲಿ ಜ್ಯೋತಿ ಬಾ ಫುಲೆ, ಪೆರಿಯಾರ್ ರಾಮಸ್ವಾಮಿ ನಾಯ್ಕರ್, ಅಂಬೇಡ್ಕರ್ ಮೊದಲಾದ ಮುಂಚೂಣಿ ನಾಯಕರು ಶೋಷಿತರನ್ನು ಜಾತಿಭೇಧ ಮತ್ತು ಲಿಂಗಭೇದದಿಂದ ಗುರುತಿಸದೆ ಅವರ ಹೀನ ಸ್ಥಿತಿಯನ್ನು ತೊಡೆದುಹಾಕಲು ಪ್ರಯತ್ನ ಪಟ್ಟರು. ಮಾನವನ ಘನತೆಯ ಅರಿವು, ಮಾನವ ಹಕ್ಕುಗಳ ಪ್ರಜ್ಞೆ ಮತ್ತು ಅವರಿಗೆ ಸ್ವಾತಂತ್ರ್ಯ ನೀಡಲು ಯತ್ನಿಸಿದ ಈ ನಾಯಕರನ್ನು ಸಮಾಜ ಸುಧಾರಕರ ಗುಂಪಿನಿಂದ ಪ್ರತ್ಯೇಕಗೊಳಿಸಿ ಅಬ್ರಾಹ್ಮಣ ಚಳವಳಿ ನೇತಾರರೆಂದು ಪ್ರಧಾನವಾಗಿ ಗುರುತಿಸಿದುದನ್ನು ಕಾಣುತ್ತೇವೆ.

ಇದಕ್ಕೊಂದು ನಿದರ್ಶನವಾಗಿ ಮುರಳೀಧರ ಜಗತಾಪರು ನೀಡಿರುವ ವಿವರಗಳು ಈ ಮೇಲಿನ ಅಂಶಕ್ಕೆ ಪೂರಕವಾಗಿದ್ದು ಕುತೂಹಲಕಾರಿಯಾಗಿದೆ. ಜಗತಾಪ ಅವರ ಪ್ರಕಾರ ಮಹಾದೇವ ರಾನಡೆ ೧೮೭೧ರಲ್ಲಿ ಪುಣೆಗೆ ವರ್ಗವಾಗಿ ಬರುವ ವೇಳೆಗೆ ಅವರ ಸೋದರಿಯೊಬ್ಬರು ವಿಧವೆಯಾಗಿದ್ದರು. ರಾನಡೆಯವರು ಜ್ಯೋತಿ ಬಾ ಫುಲೆ ಅವರಿಗೆ ತಮ್ಮ ಸೋದರಿಯ ವಿಷಯ ತಿಳಿಸಿದರು. ಜ್ಯೋತಿ ಬಾ ಅವರು ಇದರಿಂದ ತಮಗಾದ ಅಪಾರ ದುಃಖವನ್ನು ರಾನಡೆಯವರೊಂದಿಗೆ ಹಂಚಿಕೊಂಡು 'ಈ ದೌರ್ಭಾಗ್ಯ' ಪ್ರಸಂಗದಿಂದಾಗಿ ನಿಮಗೆ ಒಂದು ಉತ್ತಮ ಕೆಲಸ ಮಾಡುವ ಅವಕಾಶ ದೊರಕಿದೆ ಎಂದು ಹೇಳಿದರು. ರಾನಡೆಯವರ ಕುತೂಹಲ ಕೆರಳಿ ಜ್ಯೋತಿಬಾ ಅವರಿಗೆ ತಮ್ಮ ಮಾತಿನ ಅರ್ಥವನ್ನು ವಿವರಿಸಿ ಹೇಳಲು ಕೇಳಿದರು. ಆಗ ಜ್ಯೋತಿಬಾ ಅವರು ರಾನಡೆಯವರಿಗೆ 'ನೀವು ಜನರಿಗೆ ಸೂಕ್ತವಾದ ಮಾರ್ಗದರ್ಶನ ನೀಡುತ್ತೀರಿ, ಈಗ ಅದನ್ನು ಸ್ವಂತ ಜೀವನದಲ್ಲಿ ಕಾರ್ಯಗತಗೊಳಿಸುವ ಅವಕಾಶ ನಿಮಗೆ ಸಿಕ್ಕಿದೆ. ನೀವು ನಿಮ್ಮ ವಿಧವೆ ಸೋದರಿಯ ಮರುವಿವಾಹ ಮಾಡಿ ಸಮಾಜಕ್ಕೆ ನೀವೇ ಆದರ್ಶವಾಗಿರಿ. ಸಂಘರ್ಷವಿಲ್ಲದೆ ಯಾವ ಒಳ್ಳೆಯ ಕೆಲಸವೂ ಫಲಿಸುವುದಿಲ್ಲ' ಎಂದರು. ಫುಲೆಯವರ ಮಾತುಗಳನ್ನು ಒಪ್ಪದ ರಾನಡೆಯವರು 'ಮರುವಿವಾಹ ಏನಾದರೂ ಆದಲ್ಲಿ ನಮ್ಮ ತಂದೆಗೆ ತಡೆದುಕೊಳ್ಳಲಾಗದಷ್ಟು ದುಃಖವಾಗುತ್ತದೆ. ಅಲ್ಲದೆ ಪುಣೆಯ ಬ್ರಾಹ್ಮಣರು ನಮಗೆ ಬಹಿಷ್ಕಾರ ಹಾಕುತ್ತಾರೆ" ಎಂದು ಹೇಳಿದರು. ಆಗ ಫುಲೆಯವರು ರಾನಡೆಯವರಿಗೆ ತಮ್ಮ ಸುಧಾರಕನ ಮುಖವಾಡವನ್ನು ತೆಗೆದು ಆಚೆಗೆ ಬಿಸಾಡಲು ಸೂಚಿಸಿದರು. ನಂತರ ರಾನಡೆ ಅವರು ತಮ್ಮ ಮೂವತ್ತೆರಡನೇ ವಯಸ್ಸಿನಲ್ಲಿ ಹನ್ನೊಂದು ವರ್ಷದ ಹುಡುಗಿಯೊಂದಿಗೆ ಲಗ್ನವಾದರೆಂದು ತಿಳಿದುಬರುತ್ತದೆ (ಸುಧಾರಕ ಮಹಾತ್ಮ ಫುಲೆ : ೧೯೯೫: ೯೧-೯೨).

ಸಮಾಜ ಸುಧಾರಣೆಯ ಕಾಲದಲ್ಲೇ ಸ್ತ್ರೀಯರ ಸ್ಥಿತಿಗತಿಗಳಲ್ಲಿನ ಸುಧಾರಣೆ ಪುರುಷಾವಲಂಬಿತವಾಗಿತ್ತು ಅಥವಾ ಪುರುಷ ಪರ ಜೀವನ ಮೌಲ್ಯಗಳನ್ನು ಅನುಸರಿಸಿ ಇತ್ತು ಎಂದು ಇದರಿಂದ ತಿಳಿದುಬರುತ್ತದೆ.

ಈ ಹಿನ್ನೆಲೆಯಲ್ಲಿ ಸುಧಾರಣಾ ಚಳವಳಿಯ ಕಾಲದಲ್ಲಿ ಬಿರುಸಾಗಿ ಚರ್ಚೆಗೆ ಒಳಪಟ್ಟ ಮತ್ತು ಸುಧಾರಣೆಯ ಅಗತ್ಯವನ್ನು ಸಾರಲಾದ ಸ್ತ್ರೀ ಶಿಕ್ಷಣ, ಬಾಲ್ಯವಿವಾಹ, ವರದಕ್ಷಿಣೆ, ಸತಿಪದ್ಧತಿ ಮತ್ತು ವಿಧವಾ ವಿವಾಹ ಸಮಸ್ಯೆಗಳಲ್ಲಿ ಇಂದಿಗೂ ವರದಕ್ಷಿಣೆ ಸಮಸ್ಯೆ ವ್ಯಾಪಕವಾಗಿದೆ. ವಿಧವಾ ಸಮಸ್ಯೆ ಆಂಶಿಕವಾಗಿ ಉಳಿದಿದ್ದರೂ ಇನ್ನುಳಿದ ಸಮಸ್ಯೆಗಳು ಸಂಪೂರ್ಣವಾಗಿ ಕಣ್ಮರೆಯಾದಂತೆ ಕಾಣುತ್ತವೆ. ಈ ಸುಧಾರಣೆಯಿಂದ ಹೆಣ್ಣಿನ ಸ್ಥಿತಿಗತಿಗಳಲ್ಲಿ, ಸ್ಥಾನಮಾನಗಳ ಉನ್ನತೀಕರಣದಲ್ಲಿ ಮಾರ್ಪಾಡಾಗಳಾಗಿವೆಯೆ ಎಂಬ ಪ್ರಶ್ನೆ ಕೇಳಿಕೊಂಡರೆ ಉತ್ತರ ಹುಡುಕಬೇಕಾದ ಸ್ಥಿತಿ ಇನ್ನೂ ಇದೆ. ಈಗಲೂ ಸ್ತ್ರೀಯರು ತಮಗೆ ದಕ್ಕಬೇಕಾದ ಸ್ವಾತಂತ್ರ್ಯ ಪಡೆಯಲು ಹೋರಾಟದ ಮನೋಭಾವ

ತಳೆದಿದ್ದಾರೆ. ಸ್ತ್ರೀ ಸ್ವಾತಂತ್ರ್ಯ ಕೆಲವೊಂದು ಆಚರಣೆಗಳ ಸುಧಾರಣೆ ಅಥವಾ ನಿರ್ಮೂಲನೆಯಿಂದ ಮಾತ್ರವೇ ಸಾಧ್ಯವಿಲ್ಲ ಎಂಬುದು ಇದರಿಂದ ಗೊತ್ತಾಗುವಂತೆ ಇದೆ. ಸುಮಾರು ಎರಡು ಶತಮಾನಗಳ ಕಾಲ ನಡೆದ ಸ್ತ್ರೀ ಸುಧಾರಣಾ ಪ್ರಕ್ರಿಯೆ ನಂತರವೂ ಸ್ತ್ರೀಯರು ಅಧೀನರಾಗಿ ಉಳಿಯಲು ಅಥವಾ ಹಾಗೆ ಭಾವಿಸಲು ಇರುವ ಕಾರಣ ಏನೆಂದು ತಿಳಿಯಬೇಕಿದೆ. ಇದರ ಸುಳುಹುಗಳನ್ನು ಸ್ತ್ರೀ ಸಮಸ್ಯೆಗಳನ್ನೆ ಕೇಂದ್ರವಾಗಿಟ್ಟುಕೊಂಡು ರಚಿತವಾದ ಕನ್ನಡ-ತೆಲುಗು ಆರಂಭಿಕ ಕಾಲದ ಕಾದಂಬರಿಗಳಲ್ಲಿ ಹುಡುಕುವುದು ಈ ಅಧ್ಯಯನದ ಉದ್ದೇಶವಾಗಿದೆ.

ಸ್ತ್ರೀಯರ ಸ್ಥಿತಿಗತಿ ಸುಧಾರಿಸುವಲ್ಲಿ ಪೂರಕವಾಗಿ ಒದಗಿ ಬಂದ ಎಲ್ಲ ಅಂಶಗಳನ್ನು ಆಧುನಿಕ ಚಿಂತನೆಯೆಂದು ಗ್ರಹಿಸಲಾಗಿದೆ. ಪರಂಪರೆಯಲ್ಲಿ ಸ್ತ್ರೀ ಕುರಿತು ಪ್ರತಿಪಾದಿತವಾಗಿದ್ದು ವಾಸ್ತವ ಜೀವನದಲ್ಲಿ ಅಗತ್ಯಕ್ಕೆ ಅನುಗುಣವಾಗಿ ಬದಲಾಗಲು ಒಲವು ತೋರಿಸದ ಪ್ರವೃತ್ತಿಯನ್ನು ಸಾಂಪ್ರದಾಯಿಕ ಚಿಂತನೆಯಾಗಿ ಇಟ್ಟುಕೊಳ್ಳಲಾಗಿದೆ. ಈ ಅಧ್ಯಯನದ ಅನುಕೂಲಕ್ಕೆ ಒದಗುವ ಈ ಪರಿಕಲ್ಪನೆಗಳನ್ನು ಮುಂದೆ ವಿವರಿಸಲಾಗುವುದು ಹಾಗೂ ಈ ಪರಿಕಲ್ಪನೆಗಳ ಮೂಲಕವೇ ಅಧ್ಯಯನ ಕೈಗೊಳ್ಳಲಾಗುವುದು.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನ ಕನ್ನಡ ಮತ್ತು ತೆಲುಗು ಆರಂಭಿಕ ಸ್ವತಂತ್ರ ಸಾಮಾಜಿಕ ಕಾದಂಬರಿಗಳಲ್ಲಿ ತಲಾ ಐದೈದು ಕಾದಂಬರಿಗಳನ್ನು ಆರಿಸಿಕೊಂಡಿದೆ. ಅವುಗಳನ್ನು ಕಾಲಾನುಕ್ರಮದಲ್ಲಿ ಹೀಗೆ ಗುರುತಿಸಬಹುದು. ತೆಲುಗಿನ ವೀರೇಶಲಿಂಗಂ ಪಂತುಲು ಅವರ ೧೮೭೮ರಲ್ಲಿ ಪ್ರಕಟವಾದ ರಾಜಶೇಖರ ಚರಿತ್ರಮು, ೧೮೮೩ರಲ್ಲಿ ಹೊರಬಂದ ಸತ್ಯವತೀ ಚರಿತ್ರೆ, ಚಿಲಕಮರ್ತಿ ಲಕ್ಷ್ಮೀನರಸಿಂಹ ಅವರು ೧೮೯೭ರಲ್ಲಿ ಪ್ರಕಟಿಸಿದ ಅಹಲ್ಯಾಬಾಯಿ ಮತ್ತು ರಾಜರತ್ನಂ, ಗುಲ್ವಾಡಿಯವರು ೧೮೯೮ರಲ್ಲಿ ಹೊರತಂದ ಇಂದಿರಾಬಾಯಿ, ೧೯೦೫ರಲ್ಲಿ ಬೋಳಾರ ಬಾಬುರಾಯರು ಪ್ರಕಟಿಸಿದ ವಾಗ್ದೇವಿ, ೧೯೦೮ರಲ್ಲಿ ಹೊರಬಂದ ಕೆರೂರು ವಾಸುದೇವಾಚಾರ್ಯರ ಇಂದಿರಾ, ೧೯೧೪ರಲ್ಲಿ ಪ್ರಕಟವಾದ ನಂಜನಗೂಡು ತಿರುಮಲಾಂಬಾ ಅವರ ನಭಾ – ವಿರಾಗಿಣಿ, ಅಲ್ಲದೆ ಎಂ.ಎಸ್. ಪುಟ್ಟಣ್ಣನವರು ೧೯೧೫ರಲ್ಲಿ ಪ್ರಕಟಿಸಿದ ಮಾಡಿದ್ದುಣ್ಣೋ ಮಹಾರಾಯ ಹಾಗೂ ೧೯೨೩ರಲ್ಲಿ ಕೇತವರಪು ವೆಂಕಟಶಾಸ್ತ್ರೀ ಅವರು ಪ್ರಕಟಿಸಿದ ಲಕ್ಷ್ಮೀಪ್ರಸಾದಂ ತೆಲುಗು ಕಾದಂಬರಿ.

ಈ ಕನ್ನಡ ಮತ್ತು ತೆಲುಗು ಕಾದಂಬರಿಗಳು ಸ್ತ್ರೀ ಕೇಂದ್ರಿತ ವಸ್ತು-ವಿಷಯಗಳನ್ನು ಆಧರಿಸಿ ಕಥಾ ನಿರೂಪಣೆ ಮಾಡಿವೆ. ಸಮಕಾಲೀನ ಸಮಾಜದಲ್ಲಿ ಚರ್ಚೆಯ ವಿಷಯವಾಗಿದ್ದ ಸ್ತ್ರೀ ಶಿಕ್ಷಣ, ಬಾಲ್ಯವಿವಾಹ, ಸತಿಪದ್ಧತಿ, ವರದಕ್ಷಿಣೆ, ವಿಧವಾ ಸಮಸ್ಯೆ ಮುಂತಾದ ಸಾಮಾಜಿಕ ಸಮಸ್ಯೆಗಳು ಒಂದಲ್ಲ ಒಂದು ಬಗೆಯಲ್ಲಿ ಈ ಕಾದಂಬರಿಗಳ ಭಾಗವಾಗಿವೆ. ಅಲ್ಲದೆ ಈ ಅಂಶಗಳಿಗೆ

ವಿರುದ್ಧವಾಗಿ ಸಮಾಜದಲ್ಲಿ ನೆಲೆಸಿದ್ದ ಸ್ತ್ರೀಯರ ಸ್ಥಾನಮಾನಗಳನ್ನು ಒಳಗೊಂಡಿವೆ. ಹಾಗಾಗಿ ೧೮೭೮ರಿಂದ ೧೮೨೩ವರೆಗಿನ ಸುಮಾರು ಅರ್ಧ ಶತಮಾನದಲ್ಲಿ ಪ್ರಕಟವಾದ ಎರಡೂ ಭಾಷೆಗಳ ಕೃತಿಗಳು ಮತ್ತು ಈ ಕಾದಂಬರಿಗಳಿಗೆ ಸಂಬಂಧಿಸಿದ ಮೇಲೆ ಕಾಣಿಸಿದ ವಿಷಯಗಳನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನಾಗಿ ಇರಿಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನ ವಿಧಾನ ವಿಶ್ಲೇಷಣಾ ಮಾದರಿಯನ್ನು ಅನುಸರಿಸುತ್ತದೆ. ಸುಧಾರಣಾ ಚಳವಳಿಯ ಆಶಯಗಳ ಚೌಕಟ್ಟಿನಲ್ಲಿ ರಚಿತವಾದ ಕನ್ನಡ-ತೆಲುಗು ಆರಂಭಿಕ ಕಾಲದ ಸಾಮಾಜಿಕ ಕಾದಂಬರಿಗಳು ಕಟ್ಟಿಕೊಡುವ ಸುಧಾರಣಾ ಸ್ವರೂಪವನ್ನು ಬಿಚ್ಚಿ ನೋಡುವ ಕ್ರಮವನ್ನು ಅನುಸರಿಸಲಾಗುವುದು. ಈ ಮೂಲಕ ಭಾರತೀಯ ಹಿಂದೂ ಸಮಾಜದಲ್ಲಿ ಸ್ತ್ರೀಯರು ಪುರುಷ ಕಲ್ಪನೆಯಿಂದ ಬಿಡಿಸಿಕೊಂಡ ಪ್ರಮಾಣ ಮತ್ತು ಆ ಕಲ್ಪನೆಯಲ್ಲೇ ಉಳಿದ ಪ್ರಮಾಣ ಎಷ್ಟೆಂಬುದನ್ನು ಪತ್ತೆ ಮಾಡುವ ವಿಧಾನವನ್ನು ಇಲ್ಲಿ ಅಳವಡಿಸಿಕೊಳ್ಳಲಾಗುವುದು. ಹಾಗಾಗಿ ೧೮೭೮ ರಿಂದ ೧೯೨೩ ರವರೆಗಿನ ಕನ್ನಡ-ತೆಲುಗು ಕೃತಿಗಳನ್ನು ಈ ಕಾಲಾವಧಿಯ ಪೂರ್ವದ ಸುಧಾರಣಾವಾದಿ ನಿಲುವುಗಳಿಗೂ, ಈ ಕಾಲಾವಧಿಯ ನಂತರದ ಮಹಿಳೆಯರ ಸ್ಥಾನಮಾನಗಳಲ್ಲಿ ಉಂಟಾದ ಮಾರ್ಪಾಡುಗಳಿಗೂ ಮಾನದಂಡವಾಗಿ ಇರಿಸಿಕೊಳ್ಳಲಾಗಿದೆ.

ಇದುವರೆಗೆ ನಡೆದಿರುವ ಅಧ್ಯಯನಗಳು

ಆರಂಭದ ಕನ್ನಡ ಕಾದಂಬರಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಸಾಕಷ್ಟು ಸಂಶೋಧನೆಗಳು ನಡೆದಿವೆ. ಅವುಗಳಲ್ಲಿ ಯು. ಮಹೇಶ್ವರಿ ಅವರ 'ಇದು ಮಾನುಷಿಯ ಓದು', ಶಿವರಾಮ ಪಡಿಕ್ಕಲ್ ಅವರ 'ನಾಡು-ನುಡಿಯ ರೂಪಕ', ಜಿ.ಎಸ್. ಆಮೂರರ 'ಕನ್ನಡ ಕಥನ ಸಾಹಿತ್ಯ ಕಾದಂಬರಿ', ಪ್ರಹ್ಲಾದ್ ಮುದಗಲ್ ಅವರ 'ಕೆರೂರ ವಾಸುದೇವಾಚಾರ್ಯ ಒಂದು ಅಧ್ಯಯನ', ಪಾಟೀಲ ಸುರೇಶ ಭೀಮರಾವ್ ಅವರ 'ಕನ್ನಡ ಕಾದಂಬರಿಗಳಲ್ಲಿ ವರ್ಗ ಸಂಘರ್ಷ', ಎಸ್.ಬಿ ಅಪ್ಪಾಜಿಗೌಡ ಅವರ 'ನಂಜನಗೂಡು ತಿರುಮಲಾಂಬ ಒಂದು ಅಧ್ಯಯನ', ಎಸ್.ಕೆ. ಕೋದಂಡರಾಮ ಅವರ 'ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ', ಸಿ.ಎನ್. ರಾಮಚಂದ್ರನ್ ಅವರ 'ಕನ್ನಡ ಕಾದಂಬರಿಯ ಮೊದಲ ಘಟ್ಟಗಳು', ವಿವೇಕ ರೈ ಅವರು ಸಂಪಾದಿಸಿದ ವಿಚಾರ ಸಂಕಿರಣದ ಪ್ರಬಂಧಗಳ ಸಂಕಲನ 'ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು' ಹಾಗೂ ವಿ.ಎಂ.ಇನಾಂದಾರರು 'ಇಂದಿರಾ' ಕಾದಂಬರಿಗೆ ಬರೆದ ಮುನ್ನುಡಿ ಪ್ರಮುಖವಾದವು.

ಹಾಗೆಯೇ ತೆಲುಗು ಭಾಷೆಯ ಆರಂಭದ ಕಾದಂಬರಿಗಳನ್ನು ಮುಖ್ಯವಾಗಿಟ್ಟುಕೊಂಡು ಅನೇಕ ಸಂಶೋಧನೆಗಳು ನಡೆದಿವೆ. ಅವುಗಳಲ್ಲಿ ಬಿ.ವಿ. ಕುಟುಂಬರಾವ್ ಅವರ 'ಆಂಧ್ರ ನವಲಾ

ಪರಿಣಾಮಂ', ಶ್ರೀರಾಮಮೂರ್ತಿ ಅವರ 'ತೆಲುಗು ನವಲಾ ರೀತುಲು' (ಕಾದಂಬರಿ ವಿಧಾನಗಳು), ಆನಂದರಾಮಂ ಅವರ 'ತೆಲುಗು ನವಲಲೊ ಕುಟುಂಬ ಜೀವನಂ', ಕೆ. ಮೃಣಾಳಿನಿ ಅವರ 'ತೆಲುಗು ಸಾಂಘಿಕ ನವಲಲೊ ಕಥಾ ಕಥನ ಶಿಲ್ಪಂ', ಸಂಜೀವಮ್ಮ ಅವರ 'ತೆಲುಗು ನವಲಲೊ ಸಾಮಾಜಿಕ ಚೈತನ್ಯ', ಭವಾನಿ ಅವರ 'ತೆಲುಗು ನವಲಲೊ ವಾಸ್ತವಿಕತಾ' ಹಾಗೂ ರಂಗಾಚಾರಿ ಅವರ 'ತೆಲುಗು ನವಲಲೊ ಆಧುನಿಕ ಸ್ತ್ರೀ' ಪ್ರಮುಖವಾದವು.

ಯು. ಮಹೇಶ್ವರಿ ಅವರು 'ಇದು ಮಾನುಷಿಯ ಓದು' ಎಂಬ ಮಹಾಪ್ರಬಂಧವನ್ನು ಆರಂಭದ ಕನ್ನಡದ ಕಾದಂಬರಿಗಳನ್ನು ಅನುಲಕ್ಷಿಸಿ ಬರೆದಿದ್ದಾರೆ. ಇದರಲ್ಲಿ ಕನ್ನಡದ ಮೊದಲ ಕಾದಂಬರಿಗಳನ್ನು ಆಧರಿಸಿ ಸ್ತ್ರೀವಾದಿ ಅಧ್ಯಯನವನ್ನು ಮಾಡಲಾಗಿದೆ. ತಮ್ಮ ಪ್ರಬಂಧದಲ್ಲಿ ಲೇಖಕರು ಸ್ತ್ರೀವಾದದ ವಿವರಣೆ ಹಾಗೂ ಅದರ ವಿಮರ್ಶೆಯ ಸ್ವರೂಪವನ್ನು ಅತ್ಯಂತ ಸುದೀರ್ಘವಾಗಿ ವಿವರಿಸಿದ್ದಾರೆ. ಆರಂಭದ ಕಾದಂಬರಿಗಳಲ್ಲಿಯ ಆದರ್ಶ ನಾಯಕಿಯ ಗುಣಗಳು ಹಾಗೂ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಸ್ಥಾನಮಾನ ಹಾಗೂ ಬದಲಾಗುತ್ತಿರುವ ಸಮಾಜದ ಜೊತೆಗೆ ನಡೆಯುತ್ತಿರುವ ಸ್ಥಿತ್ಯಂತರ ಕುರಿತು ಚರ್ಚಿಸಿದ್ದಾರೆ.

ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದಾಗಿ ಭಾರತೀಯ ಸಮಾಜದಲ್ಲಿ ಹೊಸ ಹೊಸ ವಿಚಾರಗಳು ತಲೆಯೆತ್ತಿದವು. ಇದರಿಂದ ದೇಶೀಯ ಮತ್ತು ಅನ್ಯ ದೇಶೀಯ ಸಂಸ್ಕೃತಿಗಳ ಆಯ್ಕೆಯಲ್ಲಿ ದ್ವಂದ್ವಗಳು ಎದುರಾದವು. ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವ ಸ್ತ್ರೀಯರಿಗೆ ಸುಧಾರಣೆ ಅಗತ್ಯ ಎಂದು ಮನಗಂಡ ಅನೇಕ ಸುಧಾರಕರು ಈ ನಿಟ್ಟಿನಲ್ಲಿ ವಿಶೇಷವಾಗಿ ಶ್ರಮಿಸಿರುವುದನ್ನು ವಿಶ್ಲೇಷಣೆಗೆ ಗುರಿಪಡಿಸಲಾಗಿದೆ. ಭಾರತೀಯ ಸಮಾಜದಲ್ಲಿ ಪುರುಷರಂತೆ ಸ್ತ್ರೀಯರೂ ಸ್ವತಂತ್ರರಾಗಿರಬೇಕೆಂಬ ಲೇಖಕಿ ಮಾರ್ಗರೆಟ್ (Indian womanhood today-೧೯೪೧) ಅವರ ಅಭಿಪ್ರಾಯವಾಗಿದೆ. ಇದನ್ನು ಕೆಲವರು ಸಮರ್ಥಿಸಿದರೆ ಇನ್ನು ಕೆಲವರು ವಿರೋಧಿಸಿದ್ದನ್ನು ಮುಖ್ಯವಾಗಿಟ್ಟುಕೊಂಡು ಮೊದಲ ಕಾದಂಬರಿಕಾರರು ಕಾದಂಬರಿಗಳನ್ನು ರಚಿಸಿರಬಹುದು ಎಂಬುದನ್ನು ಗುರುತಿಸಿದ್ದಾರೆ. ಸ್ತ್ರೀ ಶಿಕ್ಷಣ, ಬಾಲ್ಯವಿವಾಹ, ವಿಧವಾ ವಿವಾಹಗಳ ವಿಚಾರದಲ್ಲಿ ರಾಷ್ಟ್ರಮಟ್ಟದ ಸುಧಾರಕರ ವಿಚಾರಗಳು, ಪ್ರಾದೇಶಿಕವಾಗಿ ನಡೆದ ಮಹಿಳೋದ್ಧಾರದ ಚಟುವಟಿಕೆಗಳು, ಅವುಗಳಿಗೆ ಪ್ರತಿಕ್ರಿಯೆಗಳು, ಪರ-ವಿರೋಧ ಅಭಿಪ್ರಾಯಗಳನ್ನು ಕನ್ನಡ ಓದುಗರಿಗೆ ತಲುಪಿಸುವ ಕೆಲಸವನ್ನು ಹಾಗೂ ಮೊದಲ ಕಾದಂಬರಿಗಳ ಓದುಗರನ್ನು ರೂಪಿಸುವ ಕೆಲಸವನ್ನು ಆರಂಭದ ಪತ್ರಿಕೆಗಳು ಮಾಡಿವೆ ಎಂಬ ಅಂಶವನ್ನು ಪ್ರಬಂಧಕಾರರು ಸ್ವದೇಶಾಭಿಮಾನಿ, ಸುವಾಸಿನಿ, ಸದ್ಬೋಧ ಚಂದ್ರಿಕೆ ಪತ್ರಿಕೆಗಳಲ್ಲಿಯ ಲೇಖನಗಳ ಉದಾಹರಣೆಯೊಂದಿಗೆ ತಮ್ಮ ಪ್ರಬಂಧದಲ್ಲಿ ವಿಶ್ಲೇಷಿಸಿದ್ದಾರೆ.

ಸಂಶೋಧಕರು ಸ್ತ್ರೀ ಸಂಬಂಧ ಸಮಸ್ಯೆಗಳನ್ನಿಟ್ಟುಕೊಂಡು ಕೃತಿಗಳನ್ನು ರಚಿಸಿದ ಗುಲ್ವಾಡಿ ವೆಂಕಟರಾಯರು, ಬೋಳಾರ ಬಾಬುರಾಯರು, ಕೆರೂರು ವಾಸುದೇವಾಚಾರ್ಯರು ಭಾರತೀಯ ಹಿಂದೂ ಸಮಾಜದ ಚೌಕಟ್ಟನ್ನು ಮೀರದೆ ಮಾನವೀಯ ನೆಲೆಯಲ್ಲಿ ಹೆಣ್ಣಿಗೆ ಉಚಿತವಾದ ಸ್ಥಾನವನ್ನು ದೊರಕಿಸಿಕೊಡುವ ಪ್ರಯತ್ನದಲ್ಲಿದ್ದರು. ಹೀಗೆ ಈ ಆರಂಭದ ಲೇಖಕರು ಸಮನ್ವಯದ ಹಾದಿ ಹಿಡಿದುದು ಅವರ ಕಾದಂಬರಿಗಳ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನಡೆಯುತ್ತಿದ್ದ ಮಹಿಳೋದ್ಧಾರದ ಚಟುವಟಿಕೆಗಳು ರಾಷ್ಟ್ರೀಯ ಮಟ್ಟದ ಸಮಾಜ ಸುಧಾರಕರಿಂದ ಪ್ರೇರಿತಗೊಂಡಿದ್ದವು. ಸತಿಸಹಗಮನ ಪದ್ಧತಿಯನ್ನು ನಿರ್ಮೂಲನೆ ಮಾಡುವ ಪಣತೊಟ್ಟ ರಾಜಾರಾಮ್ ಮೋಹನರಾಯ್, ವಿಧವಾ ವಿವಾಹ ಹಾಗೂ ಸ್ತ್ರೀ ಶಿಕ್ಷಣಕ್ಕಾಗಿ ಹೋರಾಡಿದ ಈಶ್ವರ ಚಂದ್ರ ವಿದ್ಯಾಸಾಗರ ಇವರ ಪ್ರೇರಣೆಯಿಂದ ಕನ್ನಡದ ಕಾದಂಬರಿಕಾರರು ತಮ್ಮ ಕೃತಿಗಳಲ್ಲಿ ಇವೇ ಸಮಸ್ಯೆಗಳನ್ನು ಮುಖ್ಯವಾಗಿಟ್ಟುಕೊಂಡಿದ್ದರು. ಅವನ್ನು ಸಮಾಜದಿಂದ ತೊಲಗಿಸುವ ಪ್ರಯತ್ನ ನಡೆಸಿದರು ಎಂಬ ಅಂಶವನ್ನು ಪ್ರಬಂಧಕಾರರು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ.

ಸಮಾಜ ಸುಧಾರಣೆಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟ ತೆಲುಗು ಭಾಷೆಯ ಮೊದಲ ಸಾಮಾಜಿಕ ಕಾದಂಬರಿಕಾರರಾದ ವೀರೇಶಲಿಂಗಂ ಪಂತುಲು, ಹಾಗೂ ಮಹಾರಾಷ್ಟ್ರದ ದೊಂಡೋ ಕೇಶವ ಕರ್ವೆ, ಜ್ಯೋತಿಬಾಫುಲೆ, ಕರ್ನಾಟಕದ ಕುಂದ್ಮುಲ್ ರಂಗರಾಯರು, ರೊದ್ದ ಶ್ರೀನಿವಾಸರಾಯರು ಹಾಗೂ ಭಾರತೀಯ ಸಮಾಜದ ಮೇಲೆ ಪ್ರಭಾವ ಬೀರಿದ ಮಹಿಳೆ ಪಂಡಿತ ರಮಾಬಾಯಿ ಸರಸ್ವತಿ ಇವರು ನಡೆಸಿದ ಕಾರ್ಯಗಳನ್ನು ವಿಶಿಷ್ಟವಾಗಿ ಗಮನಿಸಿದ್ದಾರೆ.

ಯು. ಮಹೇಶ್ವರಿ ಅವರು ಕಾದಂಬರಿಗಳನ್ನು ಅನುವಾದ ಮತ್ತು ಸ್ವತಂತ್ರ ಕಾದಂಬರಿಗಳೆಂಬ ವಿಂಗಡಣೆಯೊಂದಿಗೆ ಅಧ್ಯಯನ ಮಾಡಿದ್ದಾರೆ. ಸ್ತ್ರೀವಾದಿ ದೃಷ್ಟಿಗೆ ಪ್ರಮುಖವೆಂದು ಕಂಡ ಬಂಗಾಳಿ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ ಬಿ. ವೆಂಕಟಾಚಾರ್ಯರ ದುರ್ಗೇಶ ನಂದಿನಿ, ದೇವಿ ಚೌಧುರಾಣಿ, ರಜನಿ, ಇಂದಿರಾ ಮುಂತಾದ ಸ್ತ್ರೀ ಪ್ರಧಾನವಾದ ಕಾದಂಬರಿಗಳನ್ನು ತಮ್ಮ ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ. ಮರಾಠಿಯಿಂದ ಕನ್ನಡಕ್ಕೆ ಕಾದಂಬರಿಗಳನ್ನು ಅನುವಾದಿಸಿದ ಗಳಗನಾಥರು, ಸ್ತ್ರೀಯರಿಗೆ ಪುರುಷರಂತೆ ಶಿಕ್ಷಣವನ್ನು ನೀಡಿದರೆ ಅನರ್ಥಗಳಾಗುವವು ಎಂಬ ಅಭಿಪ್ರಾಯವನ್ನು ಹೊಂದಿದ್ದರು ಎಂಬ ಅಂಶವನ್ನು ಅವರ ಕಾದಂಬರಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಸ್ತ್ರೀ ಪರವಾದ ಆಶಯಗಳನ್ನಿಟ್ಟುಕೊಂಡು ಕಾದಂಬರಿಗಳನ್ನು ರಚಿಸಿದ ತೆಲುಗು ಭಾಷೆಯ ವೀರೇಶಲಿಂಗಂ ಪಂತುಲು ಅವರು ತಮ್ಮ ಕಾದಂಬರಿಗಳಲ್ಲಿ ಸ್ತ್ರೀ ಶಿಕ್ಷಣದ ಮಹತ್ವವನ್ನು ಪ್ರೋತ್ಸಾಹಿಸುತ್ತಾ

ಸಾಮಾಜಿಕ ರಾಜಕೀಯ ಸನ್ನಿವೇಶಗಳನ್ನು ವಿಡಂಬಿಸಿರುವ ಹಿನ್ನೆಲೆಯಲ್ಲಿ ಮಲಯಾಳದ ಚಂದು ಮೆನನ್ ಅವರ ಇಂದುಲೇಖ ಕಾದಂಬರಿಯನ್ನು ಪ್ರತ್ಯೇಕವಾಗಿ ಗುರುತಿಸಿದ್ದಾರೆ. ಸಚಿತ್ರ ಸಾವಿತ್ರಿ ಸತ್ಯವಾನ್, ಅಹಲ್ಯೋದ್ಧಾರ, ಸಚಿತ್ರ ದಾಕ್ಷಾಯಿಣಿ, ಸಚಿತ್ರ ಪದ್ಮಿನಿ, ಮಹಾರಾಣಿ ಲಕ್ಷ್ಮೀಬಾಯಿ ಕಾದಂಬರಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕಾದಂಬರಿ ಪುರಾಣ ಎಂಬ ಅಧ್ಯಯನವನ್ನು ಹಾಗೂ ಇವು ಪುರಾಣ ಇತಿಹಾಸಗಳಲ್ಲಿಯ ಪಾತ್ರಗಳ ಮೂಲಕ ನೀತಿ ಬೋಧೆ ಮಾಡುವ ಉದ್ದೇಶವನ್ನು ಹೊಂದಿದ್ದವು ಎಂಬುದನ್ನು ಸಂಶೋಧಕರು ಸಮರ್ಪಕವಾಗಿ ನಿರೂಪಿಸಿದ್ದಾರೆ.

ಗಂಡಿನ ಗುಣಗಳೆಂದು ಭಾವಿಸಲಾದ ಧೈರ್ಯ, ಶೌರ್ಯ, ಸಾಹಸಗಳನ್ನು ಹೆಣ್ಣು ಹೊಂದಿದ್ದರೂ ಆಕೆಗೆ ತನ್ನ ದೇಹ ಧರ್ಮವನ್ನು ಮೀರುವುದು ಸಾಧ್ಯವಿಲ್ಲ. ಪರಾಕ್ರಮವನ್ನು ಸ್ತ್ರೀ ಭಾಷೆಯಲ್ಲಿ ಹೇಳುವ ಸಾಧ್ಯತೆ ಪರಂಪರಾಗತ ಭಾಷೆಯಲ್ಲಿ ಇಲ್ಲದಿರಬಹುದು. ಏಕೆಂದರೆ ಭಾಷೆಯೂ ಸಮಾಜದ ಪುರುಷ ಸೃಷ್ಟಿ ಎಂಬ ನಿಲುವನ್ನು ಸಂಶೋಧಕರು ಚರ್ಚಿಸಿದ್ದಾರೆ. ಹೆಣ್ಣು ಎಷ್ಟೇ ಪರಾಕ್ರಮಿಯಾಗಿದ್ದರೂ ಪ್ರಕೃತಿದತ್ತವಾದ ಪ್ರವೃತ್ತಿಗಳಿಂದ ಹೆಣ್ಣು ಪುರುಷನಂತೆ ಸದಾಕಾಲ ಅದನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ಲೇಖಕಿಯದು.

ವಸ್ತು ವಿಚಾರಗಳ ದೃಷ್ಟಿಯಿಂದ ಹೊಸ ಯುಗದ ಹುಟ್ಟನ್ನು ಸಾರುವ ಕಾದಂಬರಿಗಳು ಸಾಹಿತ್ಯ ಚರಿತ್ರೆಯಲ್ಲಿ ಅತ್ಯಂತ ಮುಖ್ಯವಾದ ಸ್ಥಾನವನ್ನು ಪಡೆಯುತ್ತವೆ. ಇವುಗಳಲ್ಲಿ ಸುಧಾರಣಾ ಚಟುವಟಿಕೆಯ ಬಗ್ಗೆ ಭಿನ್ನ ಪ್ರತಿಕ್ರಿಯೆಗಳನ್ನು ಕೇವಲ ಸಾಂದರ್ಭಿಕವಾಗಿ ದಾಖಲಿಸುವ ಕಾದಂಬರಿಗಳಾದ ಸೂರ್ಯಕಾಂತ, ಚಂದ್ರಪ್ರಭಾ, ವಾಗ್ದೇವಿ ಕಾದಂಬರಿಗಳ ಕುರಿತು ಪ್ರಬಂಧಕಾರರು ವಿಶ್ಲೇಷಿಸಿದ್ದಾರೆ. ಗುಲ್ವಾಡಿಯವರ ಇಂದಿರಾಬಾಯಿ ಕಾದಂಬರಿಯಲ್ಲಿ ಸ್ತ್ರೀ ಸುಧಾರಣೆಯ ಹಂಬಲ ಸ್ಫುಟವಾಗಿ ಕಾಣುತ್ತದೆ. ಹಾಗೂ ಕೆರೂರು ವಾಸುದೇವಾಚಾರ್ಯರ ಇಂದಿರಾ, ಚೆನ್ನಬಸಪ್ಪ ಸ್ವಾಮಿಯವರ ಸುಧಾರಣಾಬಾಯಿ ಇವು ಸುಧಾರಣೆಯ ವಿರುದ್ಧ ನಿಲುವುಳ್ಳ ಅಥವಾ ಆ ಬಗ್ಗೆ ಆತಂಕದ ಪ್ರತಿಕ್ರಿಯೆಯನ್ನು ತೋರುವ ಕಾದಂಬರಿಗಳಾಗಿವೆ ಎಂಬುದನ್ನು ಮೂರು ವಿಭಿನ್ನ ನೆಲೆಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡಿದ್ದಾರೆ.

ತಿರುಮಲಾಂಬ ಅವರು ಹೆಣ್ಣಿಗೆ ಶೀಲವು ಅತ್ಯಂತ ಮುಖ್ಯ ಸತ್ವವಾಗಿದೆ, ಒಂದು ತೇಜಸ್ಸಾಗಿ ಶೋಭಿಸುತ್ತದೆ, ಅದು ಆರ್ಯಮಹಿಳೆಯ ಮೂಲಭೂತ ಲಕ್ಷಣ ಎಂಬ ಅಂಶಗಳನ್ನು ಆದರ್ಶವೆಂದು ತಿಳಿದಿದ್ದರು. ಅವರ ಈ ನಿಲುವು ವಿಧವಾ ವಿವಾಹವನ್ನು ಸಮರ್ಥಿಸುವುದಿಲ್ಲ. ತಾನು ಸ್ವತಃ ವಿಧವೆಯಾಗಿದ್ದು, ವಿಧವಾ ವಿವಾಹದ ಪರವಾಗಿ ಮಾತನಾಡಿದರೆ ಅದು ಸ್ವಾರ್ಥ ಪ್ರೇರಿತವಾಗಿ ಕೆಲವರಿಗೆ ತೋರಬಹುದು ಎಂಬ ಅಳುಕು ಲೇಖಕಿಗೆ ಇದ್ದಿರಬಹುದು ಎಂಬ ಅಂಶವನ್ನು ಮಹೇಶ್ವರಿ ಅವರು ಗುರುತಿಸಿದ್ದಾರೆ. ತಿರುಮಲಾಂಬಾ ಅವರು ಹೆಣ್ಣು ಅಸೂಯೆ, ಮತ್ಸರ, ಸ್ವಾರ್ಥ,

ಹಟಮಾರಿತನ ಮುಂತಾದ ದುರ್ಗುಣಗಳನ್ನು ತ್ಯಜಿಸಬೇಕು. ಸುಶೀಲೆಯಾಗಿ, ಸಾಧ್ವಿಯಾಗಿ ಮೆರೆಯಬೇಕು ಎಂಬ ಆದರ್ಶವನ್ನು ಹೊಂದಿದ್ದ ಅಂಶವನ್ನು ಪ್ರಬಂಧದಲ್ಲಿ ಗುರುತಿಸಿದ್ದಾರೆ. ಬಾಲ್ಯವಿವಾಹ, ಬಾಲ್ಯ ವೈಧವ್ಯಗಳೆರಡನ್ನೂ ಅನುಭವಿಸಿದ ಲೇಖಕಿ ಕಲ್ಯಾಣಮ್ಮನವರು ಸ್ತ್ರೀ ಸಮರ್ಥನೆಯ ದಿಟ್ಟ ನಿಲುವನ್ನು ಕೈಗೊಂಡಿದ್ದರು. ಮಹಿಳೆಯ ದುಡಿಮೆಗೆ ಗೌರವ ಸಿಗಬೇಕು, ಅವಳು ಆರ್ಥಿಕವಾಗಿ ಸ್ವಾವಲಂಬಿಯಾಗಿರಬೇಕು ಎಂಬ ವಿಚಾರಗಳನ್ನು ಪ್ರತಿಪಾದಿಸಿದ್ದರು. ಲೇಖಕಿಯ ವೈಯಕ್ತಿಕ ಅನುಭವಕ್ಕೆ ಹತ್ತಿರವಾದ ಬಾಲ್ಯವಿವಾಹದ ದುರಂತ ಪರಿಣಾಮಗಳನ್ನೂ ವೈಧವ್ಯದ ಕಷ್ಟಗಳನ್ನೂ ಅವರ ಪ್ರಿಯಂವದಾ, ನಿರ್ಭಾಗ್ಯವನಿತೆ ಕಾದಂಬರಿಗಳ ಹಿನ್ನೆಲೆಯಲ್ಲಿ ಪ್ರಬಂಧಕಾರರು ವಿವೇಚಿಸಿದ್ದಾರೆ.

ಸ್ತ್ರೀಪರವಾದ ಸಂವೇದನೆಯನ್ನು ಒಳಗೊಂಡ ಕಾದಂಬರಿಗಳನ್ನು ರಚಿಸಿದ ಮಹಿಳಾ ಲೇಖಕಿಯರಾದ ರಾಜಮ್ಮ, ಸ್ವರ್ಣಕುಮಾರಿ ದೇವಿ, ಸೀತಾದೇವಿ, ಶಾಂತದೇವಿ ನೀಲಗಾರ ಅವರ ಸ್ತ್ರೀ ಸುಧಾರಣೆಯ ಯತ್ನವನ್ನು ಅವರ ಕಾದಂಬರಿಗಳ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ.

ಈ ಕಾಲಘಟ್ಟದ ಎಚ್ಚೆತ್ತ ಸ್ತ್ರೀ ಪ್ರಜ್ಞೆಯನ್ನು ಶಿವರಾಮ ಕಾರಂತರ ಸರಸಮ್ಮನ ಸಮಾಧಿ ಕಾದಂಬರಿಯಲ್ಲಿ ಕಾಣಬಹುದು. ವಿಷಮ ದಾಂಪತ್ಯದ ಸಮಸ್ಯೆಯನ್ನು ಸ್ತ್ರೀ ಪರವಾದ ಕಳಕಳಿಯಿಂದ ಲೇಖಕರು ಇಲ್ಲಿ ವಿವೇಚಿಸಿದ್ದಾರೆ. ತೀರ ವಿರಳವಿರುವ ಮಾನವೀಯ ಗುಣ ಹೊಂದಿರುವ ಪುರುಷರ ನಡತೆಯನ್ನು ನಿರೂಪಿಸುವ ಈ ಕಾದಂಬರಿಯನ್ನು ವಿಶ್ಲೇಷಿಸಿ ಪ್ರಬಂಧಕಾರರು ತಮ್ಮ ಅಧ್ಯಯನಕ್ಕೆ ಒಂದು ನಿರ್ದಿಷ್ಟತೆಯನ್ನು ತಂದಿದ್ದಾರೆ. ಇದಕ್ಕೆ ಪೂರಕವಾಗಿ ಕುವೆಂಪು ಅವರ ಕಾನೂರು ಹೆಗ್ಗಡತಿ, ಹಾಗೂ ಮಾಸ್ತಿ ಅವರ ಸುಬ್ಬಣ ಕಾದಂಬರಿಗಳನ್ನು ಸಹ ಬಳಸಿಕೊಂಡಿದ್ದಾರೆ.

ಹೀಗೆ ಲೇಖಕಿ ತಮ್ಮ ಅಧ್ಯಯನದಲ್ಲಿ ಕನ್ನಡದ ಮೊದಲ ಘಟ್ಟದ ಕಾದಂಬರಿಕಾರರು ಹೇಗೆ ಸ್ತ್ರೀ ವಸ್ತು ವಿಷಯ ಚಿಂತನೆಗೆ ಕಾದಂಬರಿ ಮಾಧ್ಯಮವನ್ನು ಬಳಸಿಕೊಂಡಿದ್ದಾರೆ ಎಂಬುದನ್ನು ವಿವರಿಸಿದ್ದಾರೆ. ಅವರ ಸಾಮಾಜಿಕ ಹಿನ್ನೆಲೆ, ವಿಭಿನ್ನ ಭಾಷೆಗಳ ಕಾದಂಬರಿಗಳಲ್ಲಿ ಹೆಣ್ಣಿನ ಸ್ಥಾನ-ಮಾನದ ಕುರಿತು ನಿದರ್ಶನಗಳ ಮೂಲಕ ಸ್ಪಷ್ಟವಾಗಿ ವಿಶ್ಲೇಷಿಸಿದ್ದಾರೆ. ಇಪ್ಪತ್ತನೇ ಶತಮಾನದ ಕೊನೆಯಲ್ಲಿ ಅಧ್ಯಯನಕ್ಕೊಳಗಾದ ಈ ಪ್ರಬಂಧ ಆರಂಭಕಾಲದ ಸ್ತ್ರೀ ಪರವಾದ ಚಟುವಟಿಕೆಗಳನ್ನು ಗಮನಿಸಿ ಅದನ್ನು ದಾಖಲಿಸಿದ್ದು ಕುತೂಹಲಕಾರಿ ಹಾಗೂ ಫಲಪ್ರದವಾದ ಅಧ್ಯಯನವಾಗಿದೆ.

ಕಾದಂಬರಿ ಪ್ರಕಾರ ಕನ್ನಡದಲ್ಲಿ ತಲೆಯೆತ್ತಿ ಬೇರು ತಳೆದ ಬಗೆಯನ್ನು ಹಾಗೂ ಅದರ ತಾತ್ವಿಕತೆಯನ್ನು ವಿಶ್ಲೇಷಿಸುವ ಮಹಾಪ್ರಬಂಧ ಶಿವರಾಮ ಪಡಿಕ್ಕಲ್ ಅವರ 'ನಾಡು ನುಡಿಯ ರೂಪಕ'.

ಶಿವರಾಮ ಪಡಿಕ್ಕಲ್ ಅವರು ಪಾಶ್ಚಿಮಾತ್ಯ ಕಾದಂಬರಿಯ ಹುಟ್ಟು, ರಚನೆ ಮತ್ತು ಬೆಳವಣಿಗೆಗಳ ಕುರಿತು ಈವರೆಗೆ ನಡೆದಿರುವ ಚರ್ಚೆಗಳನ್ನು ವಿಸ್ತಾರವಾಗಿ ಮಂಡಿಸಿದ್ದಾರೆ. ಪಾಶ್ಚಾತ್ಯ

ಮತ್ತು ದೇಶೀ ವಿಮರ್ಶಕರು ಇದರ ಕುರಿತು ನಡೆಸಿರುವ ಚರ್ಚೆಗಳನ್ನೂ ಪರಿಶೀಲಿಸಿದ್ದಾರೆ. ಆ ಮೂಲಕ ನಾವೆಲ್ ಎಂಬ ಸಾಹಿತ್ಯ ಪ್ರಕಾರ ಸರಳ ಮತ್ತು ಒಂದೇ ರೀತಿಯ ಸ್ವರೂಪವನ್ನು ಹೊಂದಿಲ್ಲ ಎನ್ನುವ ವೈಚಾರಿಕ ನೆಲೆಯನ್ನು ಜಾರ್ಜ್ ಲುಕಾಚ್ಸ್, ಲೂಸಿಯನ್ ಗೋಲ್ಡ್‌ಮನ್, ಹೆನ್ರಿ ಸ್ಮಿತ್ ಮುಂತಾದವರ ಸಿದ್ಧಾಂತಗಳ ಹಿನ್ನೆಲೆಯಲ್ಲಿ ರೂಪಿಸಿದ್ದಾರೆ. ಅವರ ಪ್ರಬಂಧ ನಾವಲ್‌ನ ರಚನೆಯೇ ಸಮಸ್ಯಾತ್ಮಕವಾದುದು ಎಂಬ ಚರ್ಚೆಯೊಂದಿಗೆ ಆರಂಭವಾಗುತ್ತದೆ. ಈ ಚರ್ಚೆ ಅಧ್ಯಯನದ ಉದ್ದಕ್ಕೂ ಬೇರೆ ಬೇರೆ ಉದಾಹರಣೆಗಳ ವಿಶ್ಲೇಷಣೆಯೊಂದಿಗೆ ಪ್ರಶ್ನೆಗಳನ್ನು ಸಮಸ್ಯೆಗಳನ್ನು ಮುಖಾಮುಖಿಯಾಗಿಸಿದೆ.

ಕಾದಂಬರಿಯ ಹುಟ್ಟನ್ನು ತಿಳಿಯಲು ಅದರ ಚಾರಿತ್ರಿಕ ಸನ್ನಿವೇಶವನ್ನಷ್ಟೇ ಅಲ್ಲದೆ ಅದು ಸಮಾಜದ ಯಾವ ವರ್ಗಕ್ಕೆ ಸೇರಿದೆ ಹಾಗೂ ಆ ವರ್ಗದ ನಿರ್ದಿಷ್ಟತೆಗಳೇನು ಎಂಬುದನ್ನು ಗುರುತಿಸಿಕೊಂಡು, ಆ ನಿರ್ದಿಷ್ಟತೆಯಲ್ಲಿ ಕಾದಂಬರಿಯ ಪಾತ್ರಗಳನ್ನು ಕ್ರಿಯಾತ್ಮಕವಾಗಿ ಚಿತ್ರಿಸಬೇಕು. ಆದರೆ ಎಲ್ಲ ಕಾಲಗಳಲ್ಲಿಯೂ ಎಲ್ಲ ಸಾಮಾಜಿಕ ಗುಂಪುಗಳಿಂದ ರಚಿತವಾದ ರಚನೆಗಳಿಗೆ ಸಂಸ್ಕೃತಿ ಎಂಬ ಮನ್ನಣೆ ದೊರೆಯುವುದಿಲ್ಲ. ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ಅನುಕೂಲವುಳ್ಳ ಸಮಾಜದ ಅಭಿವ್ಯಕ್ತಿಗಳಿಗೆ ಮಾತ್ರ ಅಂತಹ ಗೌರವ ಪ್ರಾಪ್ತವಾಗುತ್ತದೆ ಎಂಬ ಅಂಶಗಳನ್ನು ಕುರಿತು ಲೇಖಕರು ವಿವೇಚಿಸಿದ್ದಾರೆ. ಕಾದಂಬರಿ ಹುಟ್ಟಿದುದು ಆಧುನಿಕ ವಿದ್ಯಾವಂತ ವರ್ಗದ ತಾತ್ವಿಕತೆಯಿಂದ ಅಥವಾ ದೇಸೀ ವಿದ್ಯಾವಂತರ ಜೀವನದರ್ಶನದಿಂದ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ವಸಾಹತುಶಾಹಿ ಭಾರತ ಮತ್ತು ಅದರ ಭಾಗವಾಗಿರುವ ಕರ್ನಾಟಕ ಚರಿತ್ರೆ ಮತ್ತು ಕನ್ನಡದ ಮೊದಲ ಕಾದಂಬರಿಗಳ ನಿರ್ಮಾಣದ ಸಂಬಂಧವನ್ನು ಪಡಿಕ್ಕಲ್ ಅವರು ತಮ್ಮ ಅಧ್ಯಯನದಲ್ಲಿ ವಿಮರ್ಶೆಗೆ ಒಳಪಡಿಸಿದ್ದಾರೆ. ಕರ್ನಾಟಕದ ಮೂರು ಸಾಂಸ್ಕೃತಿಕ ಪ್ರದೇಶಗಳಾದ ಕರಾವಳಿ, ಮೈಸೂರು, ಮತ್ತು ಉತ್ತರ ಕರ್ನಾಟಕಗಳು ವಸಾಹತುಶಾಹಿ ಆಡಳಿತಕ್ಕೆ ತೋರಿಸಿದ ಭಿನ್ನ ಪ್ರತಿಕ್ರಿಯೆಗಳು ಭಿನ್ನ ಮಾದರಿಯ ಕಾದಂಬರಿಗಳನ್ನು ಯಾಕೆ ಮತ್ತು ಹೇಗೆ ನಿರ್ಮಿಸಿದವು ಎಂಬುದನ್ನು ವಿಶ್ಲೇಷಿಸಿದ್ದಾರೆ. ಕರ್ನಾಟಕದಲ್ಲಿಯೇ ಭಿನ್ನ ಪ್ರದೇಶಗಳು, ಭಿನ್ನ ಸಮುದಾಯಗಳು, ಭಿನ್ನ ವಿನ್ಯಾಸಗಳ ಕಾದಂಬರಿಗಳನ್ನು ನಿರ್ಮಿಸಿದ ಸಾಂಸ್ಕೃತಿಕ ಕಾರಣಗಳನ್ನು ಇಲ್ಲಿ ವಿಶ್ಲೇಷಿಸಿದ್ದಾರೆ.

ಕರಾವಳಿಯಲ್ಲಿ ಸಾಹಿತ್ಯಿಕ ಚಟುವಟಿಕೆಯಲ್ಲಿ ಇಲ್ಲಿಯ ಬ್ರಾಹ್ಮಣ ಸಮುದಾಯದವರು ಮುಂದಾದರು. ಗುಲ್ವಾಡಿ ವೆಂಕಟರಾಯರು ಮೊದಲ ಸಾಮಾಜಿಕ ಕಾದಂಬರಿ ಇಂದಿರಾಬಾಯಿಯನ್ನು ರಚಿಸಿದರು. ಇವರ ಕಾದಂಬರಿಗಳಲ್ಲಿ ಸಮಾಜದ ಮುಖ್ಯ ಸಮಸ್ಯೆಗಳಾದ ಬಾಲ್ಯವಿವಾಹ, ಸ್ತ್ರೀ ಜೀವನ ಮುಂತಾದವುಗಳ ಜೊತೆಗೆ ಆಧುನಿಕ ಶಿಕ್ಷಣದ ಪರಿಣಾಮಗಳು ಮಹತ್ವದ ಸ್ಥಾನ ಪಡೆದಿವೆ.

ಮೈಸೂರಿನಿಂದ ಪ್ರಕಟವಾದ ಮುಖ್ಯವಾಗಿ ಎಂ.ಎಸ್. ಪುಟ್ಟಣ್ಣನವರ ಕಾದಂಬರಿಗಳಲ್ಲಿ ಮಹಾರಾಜರ ಆಡಳಿತ, ಅವರ ಬಗೆಗಿನ ಗೌರವ, ಸಂಪ್ರದಾಯ ನಿಷ್ಠೆ ಇವು ವಿಶಿಷ್ಟ ಪಾತ್ರ ವಹಿಸುತ್ತವೆ. ಇನ್ನು ಉತ್ತರ ಕರ್ನಾಟಕದವರಾದ ಕೆರೂರು ವಾಸುದೇವಾಚಾರ್ಯ ಮತ್ತು ಗಳಗನಾಥರು ಐತಿಹಾಸಿಕ ಮತ್ತು ರಮ್ಯ ಕಥನಗಳಿಗೆ ಮಹತ್ವ ಕೊಟ್ಟಿದ್ದಾರೆ ಎಂಬ ವಿಭಿನ್ನ ನಿಲುವನ್ನು ಪ್ರಬಂಧಕಾರರು ಬಹಳ ಸಮರ್ಪಕವಾಗಿ ತಮ್ಮ ಅಧ್ಯಯನದಲ್ಲಿ ವಿವೇಚಿಸಿದ್ದಾರೆ.

ಹಾಗೆಯೇ ಹೈದ್ರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯ ದೊರೆಯುವ ಕಾಲದವರೆಗೂ ನಿಜಾಮರ ಆಳ್ವಿಕೆ ಇದ್ದುದರಿಂದ ಹಾಗೂ ಕನ್ನಡಕ್ಕಿಂತ ಉರ್ದು ಭಾಷೆಗೆ ಹೆಚ್ಚಿನ ಪ್ರಾಮುಖ್ಯ ದೊರೆತಿದ್ದರಿಂದ ಇಲ್ಲಿಯ ಪ್ರದೇಶಗಳಿಂದ ಯಾವುದೇ ಪ್ರಮುಖ ಕಾದಂಬರಿ ಪ್ರಕಟವಾದ ವಿವರಗಳು ಸಿಗುವುದಿಲ್ಲ ಎಂಬ ಅಂಶವನ್ನು ಗುರುತಿಸಿದ್ದಾರೆ.

ಕನ್ನಡ ಲೇಖಕರು ಪಾಶ್ಚಿಮಾತ್ಯ ನಾವೆಲ್ ಪ್ರಕಾರದ ಪ್ರಭಾವದಿಂದ ಕಾದಂಬರಿಗಳನ್ನು ರಚಿಸಿದ್ದರೂ, ಈ ತನಕದ ಸಂಪ್ರದಾಯಗಳನ್ನು ಬಿಟ್ಟು ಹೊಸದನ್ನು ಬರೆಯುವುದು ಕಷ್ಟವೆನಿಸಿದ್ದರಿಂದ ಪಾಶ್ಚಿಮಾತ್ಯ ನಾವೆಲ್ ಹಾಗೂ ಸಾಂಪ್ರದಾಯಿಕ ಕಥನಗಳ ಸಮನ್ವಯವನ್ನು ತಮ್ಮ ಕಾದಂಬರಿಗಳಲ್ಲಿ ರೂಪಿಸಿದ್ದಾರೆ ಎಂಬ ಅಂಶವನ್ನು ಪಡಿಕ್ಕಲ್ ಅವರು ಗುಬ್ಬಿ ಮುರಿಗಾರಾಧ್ಯರ 'ಶೃಂಗಾರ ಚಾತುರ್ಯೋಲ್ಲಾಸಿನಿ'ಯ ಪೀಠಿಕೆಯಲ್ಲಿ ಹೇಳಿದ ಮಾತುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಮೊದಲ ಘಟ್ಟದ ಕಾದಂಬರಿಗಳನ್ನು ಈ ತನಕ ವಿಮರ್ಶಿಸಿದ ಬಹುತೇಕ ವಿಮರ್ಶಕರು ಅನುಸರಿಸಿದ ಪಠ್ಯಕೇಂದ್ರಿತ ಅರ್ಥ ಶೋಧನೆಯ ಕ್ರಮವನ್ನು ಬಿಟ್ಟು ಪಡಿಕ್ಕಲ್ ಅವರು ಈ ಅಧ್ಯಯನದಲ್ಲಿ ಕಾದಂಬರಿಗಳ ಸಾಹಿತ್ಯದ ಶೈಲಿ, ಆಕೃತಿಗಳೊಂದಿಗೆ ಅವುಗಳ ವಿಶ್ಲೇಷಣೆಯ ಮೂಲಕ ಕಲಾಕೃತಿಯ ಅಂತಿಮ ಮತ್ತು ನಿಜವಾದ ಒಂದು ಅರ್ಥವನ್ನು ಸ್ಥಾಪಿಸುವುದು ಸಾಧ್ಯವಿಲ್ಲ ಎನ್ನುವದರ ಕಡೆಗೆ ಗಮನ ಸೆಳೆಯಲು ಪ್ರಯತ್ನಿಸಿದ್ದಾರೆ.

ಕನ್ನಡದ ಮೊದಲ ಕಾದಂಬರಿಗಳನ್ನು ಮತ್ತು ಅವುಗಳ ಲೇಖಕರನ್ನು ವಿವರಿಸುತ್ತಾ ತಮ್ಮ ಸಂಶೋಧನ ಗ್ರಂಥದ ತಾತ್ವಿಕ ಚೌಕಟ್ಟನ್ನು ಮತ್ತಷ್ಟು ಖಚಿತಗೊಳಿಸಿದ್ದಾರೆ. ಸಾಕ್ಷಾತ್ಕಾರಗೊಳ್ಳುವ ಆದರ್ಶದ ಪರಿಕಲ್ಪನೆ ಮತ್ತು ಸಮಾಜ ಸುಧಾರಣಾವಾದಿ ಕಾದಂಬರಿಗಳ ಕುರಿತು ವಿಶ್ಲೇಷಿಸುತ್ತಾ ಆರಂಭದ ಕನ್ನಡ ಕಾದಂಬರಿಗಳಲ್ಲಿ ವಿವಿಧ ಪಾತ್ರಗಳ ತಾಕಲಾಟಗಳು ಪರಿಸ್ಥಿತಿಯ ವಿರುದ್ಧ ಅವು ನಡೆಸುವ ಹೋರಾಟಗಳು ಕಂಡುಬರುತ್ತವೆ. ಕಾದಂಬರಿಗಳ ಕೊನೆಯಲ್ಲಿ ಈ ಪಾತ್ರಗಳು ಬೆಳವಣಿಗೆಯನ್ನು ಪಡೆದು ಪಾತ್ರ, ಘಟನೆ, ಕ್ರಿಯೆಗಳು ಒಂದು ನಿಲುಗಡೆಗೆ ತಲುಪುತ್ತವೆ. ಈ ಪ್ರಕ್ರಿಯೆಯಲ್ಲಿ ಕಾದಂಬರಿಗಳು ವಾಸ್ತವವನ್ನು ಕುರಿತ ಚಿಂತನೆಯನ್ನು ಮಂಡಿಸುತ್ತಾ ಒಂದು ಪ್ರಬುದ್ಧತೆಯ ಅರಿವನ್ನು ಮೂಡಿಸುತ್ತವೆ ಎಂಬ ಅಂಶವನ್ನು ಇಂದಿರಾಬಾಯಿ, ವಾಗ್ದೇವಿ ಕಾದಂಬರಿಗಳ

ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಆದರ್ಶದ ವೈಭವೀಕರಣ ಮತ್ತು ಪುನರುತ್ಥಾನವಾದಿ ಕಾದಂಬರಿಗಳಲ್ಲಿ ಪದ್ಮನಯನಾ ಹಾಗೂ ಇಂದಿರೆಯನ್ನು ಕೇಂದ್ರವಾಗಿಟ್ಟುಕೊಂಡು ಈ ಕಾದಂಬರಿಗಳಲ್ಲಿ ಆದರ್ಶ ದಟ್ಟವಾಗಿವೆ. ಆದರ್ಶದ ಸಾಕ್ಷಾತ್ಕಾರ ಅಥವಾ ವಿನಾಶಕ್ಕೆ ವೈಯಕ್ತಿಕವಾಗಿ ವ್ಯಕ್ತಿಯ ಗುಣದೋಷಗಳು ಕಾರಣ ಎನ್ನುವುದನ್ನು ಸೂಚಿಸುವ ಮೂಲಕ ಕುಲೀನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಆದರ್ಶ ಪಾತ್ರಗಳನ್ನು ವೈಭವೀಕರಿಸಿದ್ದಾರೆ ಎಂಬ ವಿಷಯವನ್ನು ಇನಾಂದಾರರ ವ್ಯಾಖ್ಯಾನದಿಂದ ವಿಶ್ಲೇಷಿಸಿದ್ದಾರೆ. ನಾಶವಾಗುತ್ತಿರುವ ಆದರ್ಶ ಮತ್ತು ಸಂಪ್ರದಾಯವಾದಿ ಕಾದಂಬರಿಗಳಲ್ಲಿ ಎಂ.ಎಸ್. ಪುಟ್ಟಣ್ಣನವರ ಕಾದಂಬರಿ ಪ್ರಮುಖವಾಗಿದೆ. ಪುಟ್ಟಣ್ಣ ತಮ್ಮ ಜೀವನದಲ್ಲಿ ನಡೆಯುತ್ತಿರುವ ಪಲ್ಲಟವನ್ನು ಮತ್ತು ಅದರ ಅನಿವಾರ್ಯತೆಯನ್ನು ಅತ್ಯಂತ ವಿಷಾದವಾಗಿ ದಾಖಲಿಸುತ್ತಾರೆ. ಅವರ ಆದರ್ಶ ಭಾರತದ ಸಾಂಪ್ರದಾಯಿಕ ಜೀವನ ಕ್ರಮದ ನೈತಿಕತೆಯಲ್ಲಿದ್ದು, ತಾವು ನಂಬಿರುವ ಜೀವನ ಕ್ರಮ ಉಳಿಯುವುದಿಲ್ಲ ಎಂಬ ಅರಿವು ಅವರಿಗಿದೆ. ತಮ್ಮ ನಂಬಿಕೆ ಮತ್ತು ಚಾರಿತ್ರಿಕ ಅನಿವಾರ್ಯತೆಯ ಅರಿವು ಮತ್ತು ಇವರೆಡರ ಅಂತರ್ ಸಂಬಂಧದಲ್ಲಿ ಪುಟ್ಟಣ್ಣನವರ ಕಾದಂಬರಿಗಳ ಅಸ್ತಿತ್ವವಿದೆ ಎಂಬ ಅಂಶವನ್ನು ಅವರ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ.

ಶಿವರಾಮ ಪಡಿಕ್ಕಲ್ ಅವರು ಆಧುನಿಕತೆ ಮತ್ತು ಪಾಶ್ಚಾತ್ಯ ಸಂಸ್ಕೃತಿಯನ್ನು ತಮ್ಮ ಸಂಸ್ಕೃತಿಯ ಜೊತೆಗೆ ಪರ–ವಿರೋಧದ ನೆಲೆಯಲ್ಲಿ ಪರಿಭಾವಿಸುವ ಕನ್ನಡ ಕಾದಂಬರಿಕಾರರ ಭಿನ್ನ ನಿಲುವುಗಳನ್ನು ಸಮರ್ಪಕವಾಗಿ ಮಂಡಿಸಿದ್ದಾರೆ.

ತಿರುಮಲಾಂಬಾ ಅವರ ನಭಾ, ವಿದ್ಯುಲ್ಲತಾ ಕಾದಂಬರಿಗಳನ್ನು ವಿಶ್ಲೇಷಿಸುತ್ತಾ "ತಿರುಮಲಾಂಬಾ ಅವರು ತಮ್ಮೆಲ್ಲಾ ಕಾದಂಬರಿಗಳಲ್ಲಿ ಗತ ಭಾರತದ ಆದರ್ಶ ಆರ್ಯ ಕುಲಾಂಗನೆಯ ಪ್ರತಿಮೆಯನ್ನು ಮೂಡಿಸಿದ್ದಾರೆ. ಸ್ತ್ರೀ ತನ್ನ ತಾಳ್ಮೆ ಸೌಶೀಲ್ಯ, ಸುಸಂಸ್ಕೃತತೆ, ವಿದ್ಯಾಭ್ಯಾಸ ಮತ್ತು ಮನೋಬಲದಿಂದ ತನಗೊದಗುವ ಕಷ್ಟ ಪರಂಪರೆಗಳನ್ನು ನಿವಾರಿಸಿ, ಸ್ತ್ರೀತ್ವದ ಘನತೆಯನ್ನು ಸಾರಬೇಕು ಎಂಬ ನಿಲುವು ತಳೆದಿದ್ದಾರೆ" (೨೦೦೧:೧೩೨) ಎಂದು ಗುರುತಿಸಿದ್ದಾರೆ.

ತಿರುಮಲಾಂಬಾ ಅವರಂತೆ ಕಲ್ಯಾಣಮ್ಮನವರು ತಮ್ಮ ಕಾದಂಬರಿಗಳಲ್ಲಿ ಸ್ತ್ರೀ ಸಮಸ್ಯೆಗಳನ್ನು ಕೇಂದ್ರವಾಗಿರಿಸಿಕೊಂಡಿದ್ದಾರೆ. ಅವರ ಕಾದಂಬರಿಗಳಲ್ಲಿನ ಸ್ತ್ರೀ ಪಾತ್ರಗಳು ಸಮಾಜದಲ್ಲಿ ಒದಗುವ ಕಷ್ಟಗಳನ್ನು ಜಾಣ್ಮೆಯಿಂದ ಎದುರಿಸುವಂತಹವು. ಭಾವಾವೇಶವಿಲ್ಲದ ಸರಳ ಸಂಸಾರದ ಚಿತ್ರಗಳಾಗಿ ಅವರ ಕೃತಿಗಳು ಕಾಣಿಸುತ್ತವೆ. ಸ್ತ್ರೀ ಕಷ್ಟದಲ್ಲಿರುವುದು ಮತ್ತು ಆ ಕಷ್ಟಕ್ಕೆ ಆಕೆ ಬಾಳುವ ಸಮಾಜವೇ ಕಾರಣವಾಗಿರುವುದು ಅವರ ಕಾದಂಬರಿಗಳ ಕೇಂದ್ರ ಆಸಕ್ತಿಯಾಗಿದೆ. ಅವರ ಪ್ರಿಯಂವದಾ, ನಿರ್ಭಾಗ್ಯವನಿತೆ, ಸುಖಲತಾ ಕಾದಂಬರಿಗಳಲ್ಲಿ ಈ ಅಂಶಗಳನ್ನು ಕಾಣಬಹುದು ಎಂದು ವಿವರಿಸಲಾಗಿದೆ.

ಭಿ.ಫ. ಕಾಳೆಯವರ 'ಕಂಕಣಚೋರ' ಕಾದಂಬರಿಯನ್ನು ಗತ ವೈಭವ ಸಾರುವ ಕೃತಿ ಎಂದು ಹೆಸರಿಸಿದ್ದಾರೆ. ಇದರಲ್ಲಿ ಐತಿಹಾಸಿಕ ವಾತಾವರಣದೊಂದಿಗೆ ಆದರ್ಶದ ವೈಭವ ಎದ್ದು ಕಾಣುತ್ತದೆ. ಪತ್ತೇದಾರಿ ಕಾದಂಬರಿಗಳಲ್ಲಿ ಕಾಳೆಯವರ 'ವಿಚಿತ್ರ ಚಟ' ಮತ್ತು ಎಂ.ಎಸ್. ರಾಮಸ್ವಾಮಿಯವರ 'ಮಧುಸೂದನ' ಕಾದಂಬರಿಗಳನ್ನು ಚರ್ಚೆಗೆ ಒಳಪಡಿಸಿದ್ದಾರೆ.

ಅನುವಾದ ರೂಪಾಂತರಗಳ ಕುರಿತ ವಿವೇಚನೆ; ಮೊದಲ ಅನುವಾದಕರ ಆಯ್ಕೆಯ ವಿನ್ಯಾಸ; ಕನ್ನಡದಲ್ಲಿ ಅವು ಪಡೆದ ಆಕೃತಿ; ಅನುವಾದಕರ ಆಲೋಚನಾ ವಿನ್ಯಾಸ; ಅವು ಕರ್ನಾಟಕ ಸಂಸ್ಕೃತಿಯನ್ನು ರೂಪಿಸಿದ ಬಗೆ ಇವನ್ನು ಕುರಿತು ಪಡಿಕ್ಕಲ್ ಅವರು ಮಹತ್ವದ ಒಳನೋಟ ನೀಡಿದ್ದಾರೆ. ಸಂಪ್ರದಾಯದ ಮರುಬರವಣಿಗೆ ಆಧುನಿಕತೆಯ ರೂಪಾಂತರ ಎನ್ನುವ ವೈಚಾರಿಕ ನೆಲೆ ಇಲ್ಲಿ ಮುಖ್ಯವಾಗಿವೆ. ಅಪೂರ್ವವಾದ ಮತ್ತು ಬಹಳ ಗಮನ ಸೆಳೆಯದ ಕಾದಂಬರಿಗಳ ನಿದರ್ಶನಗಳನ್ನು ಕೊಡುವ ಮೂಲಕ ಪ್ರಭುತ್ವಾತ್ಮಕವಲ್ಲದ ಕಾದಂಬರಿಗಳು ಕಟ್ಟಿಕೊಡುವ ಪ್ರಭುತ್ವಾತ್ಮಕ ತಾತ್ವಿಕ ನೆಲೆಯನ್ನು ಶೋಧಿಸಿದ್ದಾರೆ.

ಕೆಲವು ಕಾದಂಬರಿಗಳ ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಸೈದ್ಧಾಂತಿಕ ತಳಹದಿಯ ಮೇಲೆ ಮೊದಲ ಕಾದಂಬರಿಗಳು ಆಧುನಿಕ ರಾಷ್ಟ್ರ, ಅದರ ರಾಷ್ಟ್ರೀಯತೆ, ಆಧುನಿಕತೆ ಮತ್ತು ಆ ಆಧುನಿಕತೆಯಲ್ಲಿ ರೂಪುಗೊಳ್ಳುವ ಆಧುನಿಕ ವ್ಯಕ್ತಿತ್ವಗಳನ್ನು ನಿರೂಪಿಸುವ ಕಥನಗಳು ಎಂಬ ಮಾತನ್ನು ಕಾದಂಬರಿಗಳ ವಿಶ್ಲೇಷಣೆಯ ಮೂಲಕ ಪುಷ್ಟೀಕರಿಸಿದ್ದಾರೆ. ಇಂದಿರಾಬಾಯಿ, ಮಾಡಿದ್ದುಣ್ಣೋ ಮಾಹಾರಾಯ, ಮಾಧವ ಕರುಣಾ ವಿಲಾಸ, ದುರ್ಗೇಶ ನಂದಿನಿ ಮತ್ತು ಚೋರ ಗ್ರಹಣ ತಂತ್ರ ಈ ಐದು ಕಾದಂಬರಿಗಳು ಈ ಸಂಶೋಧನ ಗ್ರಂಥದ ಫಲಿತಗಳನ್ನು ಸಾಕ್ಷಾತ್ಕಾರಗೊಳಿಸುತ್ತವೆ. ಕಾದಂಬರಿಯ ವಸ್ತು, ನಿರ್ವಹಣೆ ಮತ್ತು ಅವು ನಾಡು ನುಡಿಯ ರೂಪಕವನ್ನು ಕಟ್ಟಿದ ಭಿನ್ನ ವಿನ್ಯಾಸಗಳು ಸೂಕ್ಷ್ಮ ಅವಲೋಕನದೊಂದಿಗೆ ಕಾಣಿಸಿದೆ.

ಸಾಮಾಜಿಕ ಉತ್ಪಾದನೆಯ ಭಾಗವಾಗಿ ಗ್ರಂಥಗಳನ್ನು ಪರಿಭಾವಿಸುವುದು. ಗ್ರಂಥೋದ್ಯಮವನ್ನು ಸಾಮಾಜಿಕ ನೆಲೆಯಲ್ಲಿ ಪರಿಶೀಲಿಸುವುದು ಮತ್ತು ಓದುಗರು ಪತ್ರಿಕೆಗಳು ಮತ್ತು ಕಾದಂಬರಿಗಳು ಹೊಂದಿದ್ದ ಅಂತರ್ ಸಂಬಂಧವನ್ನು ಮರು ವಿಮರ್ಶೆ ಮಾಡುವುದು ಇವೆಲ್ಲವನ್ನು ಪಡಿಕ್ಕಲ್ ಅವರು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. "ಕನ್ನಡ ಕಾದಂಬರಿಯ ಪ್ರಸಾರವು ಮುಖ್ಯವಾಗಿ ಕರ್ನಾಟಕ ವಿದ್ಯಾವರ್ಧಕ ಸಂಘ, ವಾಗ್ಭೂಷಣ, ಜೆ.ಟಿ.ಎ. ಪ್ರೆಸ್, ಕರ್ನಾಟಕ ಗ್ರಂಥಮಾಲೆ, ಆನಂದವನ, ಸದ್ಬೋಧ ಚಂದ್ರಿಕೆ ಕಾದಂಬರಿ ಮತ್ತು ಸಂಗ್ರಹ ಮೊದಲಾದವುಗಳೊಂದಿಗೆ ಮತ್ತು ಇತರ ಅನೇಕ ಪತ್ರಿಕೆಗಳೊಂದಿಗೆ ಸಂಬಂಧವನ್ನು ಹೊಂದಿದ್ದವು. ಕರ್ನಾಟಕದಲ್ಲಿ ಇಂಗ್ಲಿಷ್ ಭಾಷೆಗಿಂತಲೂ ಕನ್ನಡವು ವೃದ್ಧಿಯನ್ನು ಹೊಂದದಿರುವುದು ವಿಷಾದದ ವಿಷಯವಾಗಿದೆ" (೨೦೦೧:೧೮೩) ಎಂಬ ಬಿ.ವೆಂಕಟಾಚಾರ್ಯರ ಅಭಿಪ್ರಾಯವನ್ನು ಉಲ್ಲೇಖಿಸಿದ್ದಾರೆ.

ಓದು ಸಾರ್ವಜನಿಕ ವಲಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿತು ಎಂಬ ಅಂಶವನ್ನು ಮಂಗಳೂರು ಸಮಾಚಾರ ಪತ್ರಿಕೆ, ಶ್ರೀನಿವಾಸ ಹಾವನೂರ ಹಾಗೂ ರೇಮಂಡ್ ವಿಲಿಯಮ್ಸ್ ಅವರ ಹೇಳಿಕೆಗಳಿಂದ ಸ್ಪಷ್ಟಪಡಿಸಿದ್ದಾರೆ. ಓದು ಆಂತರಿಕ ಅನುಭವದ ಸ್ವರೂಪವನ್ನು ಪಡೆದುದು ಇನ್ನೊಂದು ಬೆಳವಣಿಗೆ. ಒಟ್ಟಾಗಿ ಮೊದಲ ಓದುಗ ವರ್ಗ ಗಣ್ಯ ವರ್ಗವಾದರೂ ವಿದ್ಯಾಭ್ಯಾಸದ ಮುನ್ನಡೆ ಸಾಮಾಜಿಕ ಬದಲಾವಣೆ ಮತ್ತು ಕಾದಂಬರಿಯ ಜನಪ್ರಿಯತೆ ಇವನ್ನು ನಿಧಾನವಾಗಿ ವಿಕೇಂದ್ರೀಕರಿಸಿತು ಎಂಬ ಹೊಸ ಸಂಗತಿಯನ್ನು ಅನಾವರಣ ಮಾಡಿದ್ದಾರೆ.

ಶಿವರಾಮ ಪಡಿಕ್ಕಲ್ ಅವರ ಈ ಅಧ್ಯಯನ ಹೊರನೋಟಕ್ಕೆ ಸಮಾಜಶಾಸ್ತ್ರೀಯ ಅಧ್ಯಯನದಂತೆ ಕಾಣಿಸಿದರೂ ಅಂತರಂಗದಲ್ಲಿ ಮಾರ್ಕ್ಸ್‌ವಾದಿ, ಸ್ತ್ರೀವಾದಿ, ಆಧುನಿಕೋತ್ತರ, ವಸಾಹತೋತ್ತರ ವಾಚಕ ಕೇಂದ್ರಿತ ಚಿಂತನೆಗಳನ್ನು ಒಂದುಗೂಡಿಸುತ್ತದೆ. ಕನ್ನಡದ ಮೊದಲ ಕಾದಂಬರಿಗಳು ಕೇವಲ ಸಾಮಗ್ರಿಗಳಾಗಿ ಮಾತ್ರವಲ್ಲದೆ ಬೇರೆ ಬೇರೆ ವರ್ಗ, ಕಾಲ, ಲಿಂಗ ಮನೋಭಾವಗಳ ಸಾಹಿತ್ಯಕ ರೂಪಕಗಳಾಗಿ ನಮ್ಮೊಂದಿಗೆ ಸಂವಾದ ಮಾಡುವ ಅಂಶವನ್ನು ಸಮರ್ಪಕವಾಗಿ ವಿಶ್ಲೇಷಿಸಿದ್ದಾರೆ.

ಆರಂಭದ ಕನ್ನಡ ಕಾದಂಬರಿಗಳನ್ನು ಅನುಲಕ್ಷಿಸಿ ಬರೆದ ಇನ್ನೊಂದು ಲೇಖನ ಸಿ.ಎನ್. ರಾಮಚಂದ್ರನ್ ಅವರ ಕನ್ನಡ ಕಾದಂಬರಿಯ ಮೊದಲ ಘಟ್ಟಗಳು. ಈ ಲೇಖನದಲ್ಲಿ ಕಾದಂಬರಿ ಪ್ರಭೇದದ ಸ್ವರೂಪ ಮತ್ತು ಅದರ ಹಿಂದಿನ ಸಾಂಸ್ಕೃತಿಕ ಪ್ರೇರಣೆ, ಪ್ರಭಾವಗಳ ಚರ್ಚೆ ಒಂದು ಭಾಗದಲ್ಲಿದ್ದರೆ ಮತ್ತೊಂದು ಭಾಗದಲ್ಲಿ ಕನ್ನಡದ ಕೆಲವು ಕಾದಂಬರಿಗಳ ಸ್ವರೂಪದ ಅಧ್ಯಯನವಿದೆ.

ಕನ್ನಡ ಕಾದಂಬರಿಗಳ ಉಗಮಕ್ಕೆ ಮುಖ್ಯವಾದ ಎರಡು ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರಣಗಳಿವೆ. ಒಂದು–ಪರಕೀಯ ಯಜಮಾನ ಸಂಸ್ಕೃತಿ ಮತ್ತು ದೇಸಿ ಸಂಸ್ಕೃತಿಗಳ ನಡುವಿನ ಮುಖಾಮುಖಿ. ಎರಡು–ದೇಸಿ ಮಧ್ಯಮ ವರ್ಗ ರೂಪುಗೊಂಡು ತನಗೊಂದು ಆಧುನಿಕ ಸಾಂಸ್ಕೃತಿಕ ವ್ಯಕ್ತಿತ್ವ ನಿರ್ಮಾಣ ಮಾಡಿಕೊಳ್ಳುವಾಗ ಉಂಟಾಗುವ ದ್ವಂದ್ವ, ಈ ಬಗ್ಗೆ ಚರ್ಚಿಸುವ ರಾಮಚಂದ್ರನ್ ಕನಿಷ್ಠ ಪಕ್ಷ ಭಾರತೀಯ ಸಂದರ್ಭದಲ್ಲಿ ಕಾದಂಬರಿಗೂ ಮದ್ಯಮ ವರ್ಗಕ್ಕೂ ಸಂಬಂಧ ಕಲ್ಪಿಸುವುದನ್ನು ಇನ್ನಾದರೂ ಬಿಡುವುದು ಒಳ್ಳೆಯದೆಂದು ಸೂಚಿಸುತ್ತಾರೆ. ಹಾಗೆಯೇ ಕನ್ನಡದ ಪ್ರಥಮ ಘಟ್ಟದ ಕಾದಂಬರಿಗಳಿಗೆ ಹದಿನೆಂಟನೆ ಶತಮಾನದ ಇಂಗ್ಲಿಷ್ ಕಾದಂಬರಿಗಳು ಮಾದರಿಗಳಾಗಿದ್ದವು ಎಂಬುದನ್ನು ಅವರು ಒಪ್ಪುವುದಿಲ್ಲ.

ಬ್ರಿಟಿಷರ ಆಳ್ವಿಕೆಯಲ್ಲಿ ಜಾರಿಗೆ ಬಂದ ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ಬದಲಾವಣೆಗೆ ಒಳಗಾದ ಆಧುನಿಕ ಹಿಂದೂ ಸಮಾಜದಲ್ಲಿ ಸಾಹಿತಿಗಳು ಓದುಗರಿಗಾಗಿ ಸರಳ, ದೇಶೀಯ ಭಾಷೆಯನ್ನು ಬಳಸಿ, ಸಂಪ್ರದಾಯದ ಪರಿಮಿತಿಯಲ್ಲಿ ಸಾಮಾನ್ಯ ಜನರಿಗೂ ಅರ್ಥವಾಗುವ ರೀತಿಯಲ್ಲಿ ಕಾದಂಬರಿಗಳನ್ನು ರಚಿಸಿರಬೇಕು ಎಂದು ವಿವರಿಸಿದ್ದಾರೆ.

ಇದೇ ರೀತಿ ಆರಂಭದ ತೆಲುಗು ಸಾಮಾಜಿಕ ಕಾದಂಬರಿಗಳನ್ನು ಪೂರಕವಾಗಿಟ್ಟುಕೊಂಡು ಅನೇಕ ಸಂಶೋಧನೆಗಳು ನಡೆದಿವೆ.

ಕೆ. ಮೃಣಾಳಿನಿ ಅವರು "ತೆಲುಗು ಸಾಂಘಿಕ ನವಲಲ್ಲೊ ಕಥಾ ಕಥನ ಶಿಲ್ಪಂ" (ತೆಲುಗು ಸಾಮಾಜಿಕ ಕಾದಂಬರಿಗಳಲ್ಲಿ ಕಥೆಯ ನಿರೂಪಣಾ ಶೈಲಿ) ಎಂಬ ಪ್ರಬಂಧವನ್ನು ಆರಂಭದ ತೆಲುಗು ಕಾದಂಬರಿಗಳನ್ನು ಅನುಲಕ್ಷಿಸಿ ಬರೆದಿದ್ದಾರೆ. ಇದರಲ್ಲಿ ಆರಂಭದ ತೆಲುಗು ಕಾದಂಬರಿಗಳಲ್ಲಿ ಕಥೆಯ ನಿರೂಪಣಾ ಶೈಲಿಯ ಅಧ್ಯಯನವಿದೆ. ಕಾದಂಬರಿ ಸಮಕಾಲೀನ ಸಮಾಜವನ್ನು ಪ್ರತಿಬಿಂಬಿಸುವ ಕನ್ನಡಿಯಿದ್ದಂತೆ. ಅದು ಕೇವಲ ಬಾಹ್ಯ ಅಷ್ಟೇ ಅಲ್ಲ, ಅಂತರಂಗವನ್ನು ಪ್ರತಿಫಲಿಸುತ್ತದೆ ಎಂಬ ಅಂಶವನ್ನು ಸತ್ಯವತೀ ಚರಿತ್ರೆ, ರಾಜಶೇಖರ ಚರಿತ್ರೆ ಕಾದಂಬರಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ವ್ಯಕ್ತಿಯಲ್ಲಿರುವ ಗುಣದೋಷಗಳನ್ನು ಕಾದಂಬರಿ ಆಯ್ದು ತೆಗೆಯುತ್ತದೆ. ಮನುಷ್ಯರ ಪರಸ್ಪರ ಸಂಬಂಧವನ್ನು ವಿಶ್ಲೇಷಿಸುತ್ತದೆ. ವ್ಯಕ್ತಿಯ ಮೇಲೆ ಸಮಾಜ, ಸಮಾಜದ ಮೇಲೆ ವ್ಯಕ್ತಿಗಿರುವ ಅರ್ಥವನ್ನು ಹೇಳುತ್ತದೆ. ಕಾಲಕ್ಕನುಗುಣವಾಗಿ ಬದಲಾಗುತ್ತಿರುವ ಜೀವನ ಮೌಲ್ಯಗಳನ್ನು ಪರಾಮರ್ಶಿಸುತ್ತದೆ ಎಂಬುದನ್ನು ನಿದರ್ಶನಗಳ ಮೂಲಕ ವಿವರಿಸಿದ್ದಾರೆ.

ವಿಭಿನ್ನ ಪಾತ್ರಗಳ ದೃಷ್ಟಿಕೋನಗಳು ಎಂಬ ಅಧ್ಯಾಯದಲ್ಲಿ ಪಾತ್ರಗಳ ಪ್ರಾಮುಖ್ಯತೆಯನ್ನು ಹಿಡಿದು ಆಯಾ ಸಂದರ್ಭದಲ್ಲಿ ಆಯಾ ಪಾತ್ರಗಳಲ್ಲಿ ಕಾದಂಬರಿಕಾರ ಸ್ವತಃ ಪ್ರವೇಶಿಸಿ ಕಥೆಯನ್ನು ಹೇಗೆ ಮುಂದೆ ಸಾಗಿಸುತ್ತಾನೆ ಎಂದು ಕಾಣಿಸಿದ್ದಾರೆ. ಇದರಿಂದ ವ್ಯಕ್ತಿಯ ಸ್ವಭಾವ, ಕಥೆಯ ಪರಿಣಾಮ, ವ್ಯಕ್ತಿ ಸಂಬಂಧಗಳು, ಕಥೆಯ ಪ್ರಾರಂಭದಿಂದ ಕೊನೆಯವರೆಗೂ ಕಾದಂಬರಿಕಾರರ ಸೂಚನಾ ಪ್ರಕಾರವಾಗಿ ಪ್ರಕಟಗೊಳ್ಳುತ್ತಿರುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಾದಂಬರಿಯಲ್ಲಿ ಬರುವ ಪ್ರಕರಣಗಳನ್ನು ಅದರ ಶೀರ್ಷಿಕೆಯಲ್ಲಿ ಸೂಚಿಸುವುದು ತೆಲುಗು ಕಾದಂಬರಿಕಾರರ ವಿಶೇಷತೆ. ಕಾದಂಬರಿಯ ಪರಿಣಾಮ ಕಾದಂಬರಿಕಾರನಿಗೆ ಮುಂಚಿತವಾಗಿಯೇ ತಿಳಿದಿರುತ್ತದೆ. ಆದರೆ ಸಂದರ್ಭಕ್ಕೆ ತಕ್ಕಂತೆ ಪ್ರಕಟಿಸುವುದು ಅವನ ಹಕ್ಕು ಎಂಬ ಅಂಶವನ್ನು ರಾಜಶೇಖರ ಚರಿತ್ರೆಯ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ.

ತೆಲುಗು ಕಾದಂಬರಿಗಳು ಪ್ರಥಮ ಪುರುಷ ನಿರೂಪಣೆಯಲ್ಲಿದ್ದು ಇದನ್ನು ಆಧರಿಸಿ ಪಾತ್ರಗಳ ವರ್ಣನೆ, ತೀರ್ಮಾನಗಳು, ನೀತಿ-ಉಪದೇಶಗಳು ಮಾತ್ರವಲ್ಲದೆ ಕಾದಂಬರಿಕಾರರ ವೈವಿಧ್ಯತೆ ಸಹ ಆಧಾರವಾಗಿರುತ್ತದೆ ಎಂಬ ಅಂಶವನ್ನು ಕಾದಂಬರಿಗಳ ಉದಾಹರಣೆಗಳೊಂದಿಗೆ ವಿಶ್ಲೇಷಿಸಿದ್ದಾರೆ. ಕೆಲವು ಸನ್ನಿವೇಶಗಳಲ್ಲಿ ಕಾದಂಬರಿಕಾರರು ತಮ್ಮ ಉದ್ದೇಶ ನಿರೂಪಿಸುವ ವಿಧಾನ ಕುರಿತೂ ಚರ್ಚಿಸಿದ್ದಾರೆ.

ಪ್ರಸ್ತುತ ಅಧ್ಯಯನದಲ್ಲಿ ದೀರ್ಘ ಕಾಲದಿಂದಲೂ ಪ್ರಸಿದ್ಧವಾಗಿರುವ ಸತ್ಯವತೀ ಚರಿತ್ರೆ, ಧರ್ಮವಿಲಾಸಂ, ಮಂಜುವಾಣಿ ವಿಜಯಂ ಕಾದಂಬರಿಗಳ ವಿಮರ್ಶೆಯ ಪ್ರಯತ್ನವಿದೆ. ಕಾದಂಬರಿ ಸಾಹಿತ್ಯ ಪ್ರಕಾರ ಮೊದಲಿಗೆ ಪಾಶ್ಚಾತ್ಯರಲ್ಲಿ ರೂಪ ತಳೆದಿದ್ದರಿಂದ ವಿಶ್ವ ಸಾಹಿತ್ಯದಲ್ಲಿ ಕಾದಂಬರಿಯ ಹುಟ್ಟು, ಪೂರ್ವೋತ್ತರಗಳನ್ನು ಕಂಡುಹಿಡಿದಿದ್ದಾರೆ. ಸಾಮಾಜಿಕ ಕಾದಂಬರಿಗಳೆನಿಸಿಕೊಂಡ ಸತ್ಯವತೀ ಚರಿತ್ರೆ, ರಾಜಶೇಖರ ಚರಿತ್ರೆ, ರಾಮಚಂದ್ರ ವಿಜಯಂ, ಅಹಲ್ಯಾಬಾಯಿ ಮುಂತಾದ ಕಾದಂಬರಿಗಳನ್ನು ಪರಿಶೀಲಿಸಿದ್ದಾರೆ. ಪಾಶ್ಚಾತ್ಯರಲ್ಲಿ ಸಾಮಾಜಿಕ ಕಾದಂಬರಿ ಪರಿಕಲ್ಪನೆ ಇಲ್ಲದಿರುವುದು ಹಾಗೂ ಆ ಪರಿಕಲ್ಪನೆ ಹೇಗೆ ಭಾರತೀಯರದ್ದಾಗಿದೆ ಎಂಬ ಅಂಶವನ್ನು ವಿವೇಚಿಸಿದ್ದಾರೆ. ಈ ಪ್ರಬಂಧದಲ್ಲಿ ಆರಂಭದ ತೆಲುಗು ಸಾಮಾಜಿಕ ಕಾದಂಬರಿಕಾರರ ಆಶಯಗಳು ಮತ್ತು ಅವರ ಸಾಮಾಜಿಕ ಮಿತಿಗಳನ್ನು ಕುರಿತು ಲೇಖಕರು ಸಮರ್ಪಕವಾಗಿ ವಿವರಿಸಿದ್ದಾರೆ.

ಕೆ. ಸ್ನೇಹ ಪ್ರಭಾ ಅವರ 'ಆಧುನಿಕ ತೆಲುಗು ನವಲಲು–ವಿಭಿನ್ನ ಧೋರಣಾಲು' ಎಂಬ ಅಧ್ಯಯನ ತೆಲುಗು ಭಾಷೆಯ ಆಧುನಿಕ ಕಾದಂಬರಿಗಳಲ್ಲಿ ಸ್ತ್ರೀವಾದವನ್ನು ಮುಖ್ಯವಾಗಿಟ್ಟುಕೊಂಡ ಕೃತಿಯಾಗಿದೆ. ಸ್ತ್ರೀವಾದ ನವಲಲು ಎಂಬ ಅಧ್ಯಾಯದಲ್ಲಿ ಭಾರತದ ಹಿಂದೂ ಸಮಾಜದಲ್ಲಿರುವ ಅಜ್ಞಾನ, ಮೂಢನಂಬಿಕೆ, ಕಟ್ಟಳೆಗಳು, ಸಂಪ್ರದಾಯಗಳನ್ನು ಹೋಗಲಾಡಿಸಲು ಅನೇಕ ಸುಧಾರಕರು ಹೋರಾಡಿದ ಬಗ್ಗೆ ವಿವರವಿದೆ. ಅದರಲ್ಲೂ ವೀರೇಶ ಲಿಂಗಂ ಪಂತುಲು ಅವರು ಸ್ವತಃ ತಮ್ಮ ಸಮಾಜದಲ್ಲಿ ಸ್ತ್ರೀಯರ ಮೇಲಾಗುತ್ತಿರುವ ಶೋಷಣೆಗಳ ವಿರುದ್ಧ ಹೋರಾಟ ಮಾಡಿದ ಬಗೆಗೆ ಚರ್ಚೆ ಮಾಡಲಾಗಿದೆ. ಅವರು ಸತ್ಯವತಿ ಚರಿತ್ರೆ ಕೃತಿಯನ್ನು ಸ್ತ್ರೀ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಗಂಡಿನಂತೆ ಸಮಾನವಾದ ಸ್ಥಾನ ಪಡೆದಿದ್ದಾಳೆ ಎಂಬುದನ್ನು ಗುರುತಿಸುವುದಕ್ಕಾಗಿ ರಚಿಸಿದರು ಎಂಬ ಅಂಶವನ್ನು ಮಂಡಿಸಿದ್ದಾರೆ.

ಸತ್ಯವತೀ ಚರಿತ್ರೆಯಲ್ಲಿ ಪಂತುಲು ಅವರು ನಾಲ್ಕು ತರಹದ ದಂಪತಿಗಳ ಪಾತ್ರ ಚಿತ್ರಣ ಮಾಡಿದ್ದಾರೆ. ದಂಪತಿಗಳಿಬ್ಬರು ಶಿಕ್ಷಿತರು, ಇಬ್ಬರೂ ಅಶಿಕ್ಷಿತರು, ಹೆಂಡತಿ ಶಿಕ್ಷಿತೆ ಗಂಡ ಅಶಿಕ್ಷಿತ, ಗಂಡ ಶಿಕ್ಷಿತ, ಹೆಂಡತಿ ಅಶಿಕ್ಷತೆ ಹೀಗೆ ನಾಲ್ಕು ದಂಪತಿಗಳ ಮೂಲಕ ಸಂಸಾರದಲ್ಲಾಗುವ ಆಗು ಹೋಗುಗಳನ್ನು ವಿವರಿಸುತ್ತಾರೆ. ಮಹಿಳೆ ವಿದ್ಯಾವಂತಳಾದರೆ ಮಾತ್ರ ಕುಟುಂಬಕ್ಕೆ ಸುಖ ಶಾಂತಿ ನೆಮ್ಮದಿ ಲಭಿಸುವುದೆಂಬ ಅಂಶವನ್ನು ಸಮರ್ಥಿಸಿದ್ದಾರೆ. ಅವಿಭಕ್ತ ಕುಟುಂಬದಲ್ಲಿರುವ ಪ್ರವೃತ್ತಿಗಳು, ಅಜ್ಞಾನ, ಈರ್ಷೆ, ನೈತಿಕತೆಯ ಕುರಿತು ಪ್ರಬಂಧಕಾರರು ವಿವರವಾಗಿ ಉಲ್ಲೇಖಿಸಿದ್ದಾರೆ.

ಪಂತುಲು ಅವರ 'ಸತ್ಯರಾಜನ ಪೂರ್ವ ದೇಶ ಯಾತ್ರೆಗಳು' ಎಂಬ ಕಾದಂಬರಿ ಸಮಾಜದಲ್ಲಿ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಪುರುಷರು ಎದುರಿಸಿದಾಗ ಯಾವ ರೀತಿಯ ಚಮತ್ಕಾರವಾಗಬಹುದು ಎನ್ನುವುದನ್ನು ವಿಡಂಬನೆ ಮಾಡಿದ್ದಾರೆ. ಪುರುಷರ ದುರಹಂಕಾರವನ್ನು,

ಅಧಿಕಾರ ಮನೋಭಾವನೆಯನ್ನು ವಿಡಂಬಿಸಿದ ಅಂಶವನ್ನು ಉದಾಹರಣೆಗಳೊಂದಿಗೆ ಓದುಗರ ಮುಂದಿಡುತ್ತಾರೆ.

ಆಂಗ್ಲ ವಿದ್ಯಾಭ್ಯಾಸದ ಪರಿಣಾಮದಿಂದಾಗಿ ಯುವಕರಲ್ಲಿ ಬದಲಾಗುವ ಸಾಮಾಜಿಕ ಗುಣಗಳನ್ನು ಸೂರ್ಯ ನಾರಾಯಣ ಅವರ 'ಸಂಜೀವರಾಯ ಚರಿತ್ರೆ'ಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ವೆಂಕಟಶಾಸ್ತ್ರೀ ಅವರ 'ಅಗ್ರಹಾರಂ' ಕಾದಂಬರಿ ಬ್ರಾಹ್ಮಣರ ಆರ್ಥಿಕ ದುಸ್ಥಿತಿ, ವರದಕ್ಷಿಣೆ ಸಮಸ್ಯೆ, ಆಂಗ್ಲ ಶಿಕ್ಷಣದ ದುಷ್ಪರಿಣಾಮಗಳನ್ನು ವಿವರಿಸುತ್ತದೆ. ತೆಲುಗು ಸಮಾಜದಲ್ಲೂ ಉನ್ನತ ವರ್ಗದ ಸ್ತ್ರೀಯರಿಗೆ ಅನೇಕ ಕಟ್ಟಳೆಗಳಿದ್ದವು ಎಂಬ ಅಂಶವನ್ನು ಈ ಕಾದಂಬರಿಯ ವಿಶ್ಲೇಷಣೆ ಮಾಡುತ್ತಾ ಪ್ರಬಂಧಕಾರರು ಸ್ಪಷ್ಟ ಪಡಿಸುತ್ತಾರೆ.

ಅಧ್ಯಯನದ ಮಹತ್ವ

ಆರಂಭದ ಕನ್ನಡ-ತೆಲುಗು ಸಾಮಾಜಿಕ ಕಾದಂಬರಿಗಳನ್ನು ಪೂರಕವಾಗಿಟ್ಟು ಅನೇಕ ರೀತಿಯ ಸಂಶೋಧನೆಗಳು ಪ್ರಕಟಗೊಂಡಿವೆ. ಆದರೆ ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಮುಖಿಯ ಸ್ವರೂಪವನ್ನು ಯಾವ ಪ್ರಬಂಧಗಳೂ ಚರ್ಚಿಸಿಲ್ಲ. ಈ ಮುಖಾಮುಖಿಯ ವಿವರಣೆಗಳು ಆರಂಭದ ಕನ್ನಡ-ತೆಲುಗು ಕಾದಂಬರಿಗಳ ಸಂದರ್ಭದಲ್ಲಿ ದಟ್ಟವಾಗಿದೆ. ಪ್ರಸ್ತುತ ಅಧ್ಯಯನ ಈ ಅಂಶವನ್ನು ಕೇಂದ್ರೀಕರಿಸಿದೆ.

ಸ್ತ್ರೀ ಸಮಸ್ಯೆಗಳು ನಿರಂತರವಾಗಿ ಸುಧಾರಣೆಗೆ ಒಳಗಾಗಿದ್ದರೂ ಅವು ಇನ್ನೂ ಸಂಪೂರ್ಣವಾಗಿ ಪರಿಹಾರ ಕಂಡಿಲ್ಲ. ಇದಕ್ಕೆ ಕಾರಣವನ್ನು ಕನ್ನಡ-ತೆಲುಗು ಭಾಷೆಗಳ ಆರಂಭಿಕ ಕಾಲಘಟ್ಟದ ಸಾಮಾಜಿಕ ಕಾದಂಬರಿಗಳಲ್ಲಿ ಹುಡುಕುವ ಪ್ರಯತ್ನ ಮಾಡಲಾಗುವುದು. ಇದು ಪ್ರಸ್ತುತ ಅಧ್ಯಯನದ ಮಹತ್ವವನ್ನು ಮನಗಾಣಿಸುತ್ತದೆ.

ಅಧ್ಯಯನದ ರೂಪುರೇಷೆ

ಪ್ರಸ್ತುತ ಅಧ್ಯಯನವನ್ನು ಐದು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಮಾಡಲಾಗುವುದು. ಪ್ರತಿಯೊಂದು ಅಧ್ಯಾಯದ ಶೀರ್ಷಿಕೆ ಮತ್ತು ಆ ಅಧ್ಯಾಯ ಒಳಗೊಳ್ಳಬಹುದಾದ ಅಂಶಗಳನ್ನು ಈ ಕೆಳಗಿನಂತೆ ಇರುತ್ತವೆ..

ಅಧ್ಯಾಯ ೧ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವ

ಅಧ್ಯಯನದ ಪ್ರಾಥಮಿಕ ಅಂಶಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಸ್ಪಷ್ಟ ಮಾಡಿಕೊಳ್ಳಲಾಗಿದೆ.

ಅಧ್ಯಾಯ ೨ ಕನ್ನಡ-ತೆಲುಗು ಆರಂಭಿಕ ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆ ಸ್ವರೂಪ -ಒಂದು ಪೂರ್ವ ಪೀಠಿಕೆ

ಅಧ್ಯಯನದ ಪರಿಕಲ್ಪನೆಗಳನ್ನು ಚಾರಿತ್ರಿಕ, ಸಾಮಾಜಿಕ, ಮತ್ತು ಸಾಹಿತ್ಯಿಕ ದೃಷ್ಟಿಕೋನದಿಂದ ವಿವರಿಸಲಾಗುವುದು. ಜೊತೆಗೆ ಈ ಪರಿಕಲ್ಪನೆಗಳನ್ನು ಪ್ರಸ್ತುತ ಅಧ್ಯಯನದ ಅಗತ್ಯಕ್ಕನುಗುಣವಾಗಿ ವ್ಯಾಖ್ಯಾನಿಸಿಕೊಂಡ ಕ್ರಮವನ್ನು ವಿವರಿಸಲಾಗುವುದು.

ಅಧ್ಯಾಯ ೩ ಕನ್ನಡ-ತೆಲುಗು ಆರಂಭಿಕ ಕಾದಂಬರಿಗಳು ಮತ್ತು ಸಮಕಾಲೀನ ಸ್ಥಿತಿಗತಿಗಳು

ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡ ಕನ್ನಡ-ತೆಲುಗು ಭಾಷೆಗಳ ಹತ್ತು ಕಾದಂಬರಿಗಳನ್ನು ಸ್ಥೂಲವಾಗಿ ಅವುಗಳ ಕತೆ, ವಸ್ತು, ನಿರೂಪಣಾ ಶೈಲಿಯೊಂದಿಗೆ ಆಯಾ ನಾಡಿನಲ್ಲಿದ್ದ ಸಮಕಾಲೀನ ಸ್ಥಿತಿಗತಿಗಳನ್ನು ಕಟ್ಟಿಕೊಡಲಾಗುವುದು.

ಅಧ್ಯಾಯ ೪ ಕನ್ನಡ-ತೆಲುಗು ಆರಂಭಿಕ ಕಾದಂಬರಿಗಳಲ್ಲಿ ಚಿತ್ರಿತ ಸ್ತ್ರೀಯರ ಸಮಸ್ಯೆಗಳು

ಪ್ರಸ್ತುತ ಅಧ್ಯಾಯ ಮುಖ್ಯವಾಗಿ ಸ್ತ್ರೀಯರು ಸಾಂಪ್ರದಾಯಿಕ ಸಮಾಜದಲ್ಲಿ ಎದುರಿಸಿದ ಸಾಮಾಜಿಕ ಸಮಸ್ಯೆಗಳಾದ ಬಾಲ್ಯ ವಿವಾಹ, ಸ್ತ್ರೀಯರ ಶಿಕ್ಷಣ, ವರದಕ್ಷಿಣೆ, ಸತಿ ಪದ್ಧತಿ, ಮತ್ತು ವಿಧವಾ ವಿವಾಹ ಚಿತ್ರಣ ಕುರಿತು ಅಧ್ಯಯನಕ್ಕೆ ಬಳಸಿಕೊಂಡ ಹತ್ತು ಕಾದಂಬರಿಗಳಲ್ಲಿ ಕಂಡುಬರುವ ಬಗೆಯನ್ನು ಪರಿಶೀಲಿಸಲಾಗುವುದು.

ಅಧ್ಯಾಯ ೫ ಕನ್ನಡ-ತೆಲುಗು ಆರಂಭಿಕ ಕಾದಂಬರಿಗಳಲ್ಲಿ ಸಂಘರ್ಷ ಮತ್ತು ಅನುಸಂಧಾನ ನೆಲೆಗಳು

ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಟ್ಟ ಹತ್ತು ಕಾದಂಬರಿಗಳು ಸಂಪ್ರದಾಯ ಮತ್ತು ಆಧುನಿಕ ಚಿಂತನೆಗಳನ್ನು ಯಾವ ನೆಲೆಯಲ್ಲಿ ಸಂಘರ್ಷಾತ್ಮಕವಾಗಿ ಕಂಡರಸಿವೆ ಮತ್ತು ಯಾವ ನೆಲೆಯಲ್ಲಿ ಅನುಸಂಧಾನ ಪ್ರಕ್ರಿಯೆಯಾಗಿ ಒಳಗೊಂಡಿವೆ ಎಂಬುದನ್ನು ಅಧ್ಯಯನ ಮಾಡಲಾಗುವುದು.

ಅಧ್ಯಾಯ ೬ ಸಮಾರೋಪ

ಪ್ರಸ್ತುತ ಕೊನೆಯ ಅಧ್ಯಾಯದಲ್ಲಿ ಮೊದಲ ಅಧ್ಯಾಯದಲ್ಲಿ ಕಂಡುಕೊಂಡ ಅಧ್ಯಯನದ ಉದ್ದೇಶಕ್ಕೆ ಅನುಗುಣವಾಗಿ ನಾಲ್ಕು ಮತ್ತು ಐದನೆಯ ಅಧ್ಯಾಯಗಳಲ್ಲಿ ನಡೆಸಲಿರುವ ಅಧ್ಯಯನದ ಫಲಿತಗಳನ್ನು ಸಾರಾಂಶ ರೂಪದಲ್ಲಿ ತಾತ್ವಿಕವಾಗಿ ಮಂಡಿಸಲಾಗುವುದು.

ಅಧ್ಯಾಯ ೨

ಕನ್ನಡ–ತೆಲುಗು ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಸ್ವರೂಪ – ಒಂದು ಪೂರ್ವ ಪೀಠಿಕೆ

ಸಂಪ್ರದಾಯ

ಆಧುನಿಕತೆ

ಸಂಪ್ರದಾಯ ಮತ್ತು ಆಧುನಿಕತೆಯ ಸಂಬಂಧ

ಕಾದಂಬರಿ ಹಾಗೂ ಮಾನುಷ ಸಂಬಂಧ

ಪ್ರಸ್ತುತ ಅಧ್ಯಯನದ ಸಾಂಪ್ರದಾಯಿಕ ಮತ್ತು ಆಧುನಿಕ ಪರಿಕಲ್ಪನೆಗಳು

ಅಧ್ಯಾಯ ೨

ಕನ್ನಡ–ತೆಲುಗು ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಸ್ವರೂಪ – ಒಂದು ಪೂರ್ವ ಪೀಠಿಕೆ

ಸಂಪ್ರದಾಯ ಮತ್ತು ಆಧುನಿಕ ಕಲ್ಪನೆಗಳ ಸಾಮಾನ್ಯ ಪರಿಚಯವನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗುವುದು. ಜೊತೆಗೆ ಕಾದಂಬರಿ ಪ್ರಕಾರದ ಸಾಮಾಜಿಕ ಸಂಬಂಧಗಳು ಮತ್ತು ಅದರ ವಾಸ್ತವ ಶೈಲಿ ಕುರಿತು ಚರ್ಚಿಸಲಾಗುವುದು. ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳುವ ಸಾಂಪ್ರದಾಯಿಕತೆ ಮತ್ತು ಆಧುನಿಕತೆ ಪರಿಕಲ್ಪನೆಗಳ ಕ್ರಮವನ್ನು ಕಟ್ಟಿಕೊಡಲಾಗುವುದು. ಹಾಗಾಗಿ ಈ ಅಧ್ಯಾಯವನ್ನು ಪ್ರಸ್ತುತ ಅಧ್ಯಯನದ ಪೂರ್ವ ಪೀಠಿಕೆ ಎಂದು ಹೇಳಬಹುದು.

ಸಂಪ್ರದಾಯ

ಸಂಪ್ರದಾಯ ಕುರಿತು ಹಲವು ಚಿಂತನೆಗಳನ್ನು ಕಾಣಬಹುದು. ಸಂಪ್ರದಾಯ ತಲೆ–ತಲಾಂತರಗಳಿಂದ ನಡೆದುಕೊಂಡು ಬಂದ ಆಚಾರ–ವಿಚಾರವಾಗಿದೆ. ಇದು ತನ್ನದೇ ಆದ ವಿಶಾಲವಾದ ಚೌಕಟ್ಟನ್ನು ಹೊಂದಿದೆ. ಇದಕ್ಕೆ ನಿರ್ದಿಷ್ಟ ಮಿತಿ ಇಲ್ಲ. ಪೂರ್ವ ಕಾಲದಿಂದಲೂ ನಡೆದುಕೊಂಡು ಬಂದಂತಹ ಆಚಾರಗಳು ಸಂಪ್ರದಾಯವಾಗುತ್ತವೆ. ಸಂಪ್ರದಾಯ ಸ್ವತಃ ಒಂದು ಸಮಾಜದ ವ್ಯವಸ್ಥೆಯಲ್ಲ, ಅದು ಒಂದು ವ್ಯವಸ್ಥೆಯ ನಂಬಿಕೆ ಮಾತ್ರವಾಗಿದೆ. ಆದರೆ ಸಂಪ್ರದಾಯದ ಹೆಸರಿನಲ್ಲಿ ಎಲ್ಲವನ್ನು ಅನುಸರಿಸುವುದು ಮೌಢ್ಯವಾಗಿದೆ. ಪ್ರತಿಭಾವಂತನಾದ ಒಬ್ಬ ವ್ಯಕ್ತಿ ತನ್ನ ಪೂರ್ವಿಕರು ನಡೆದು ಬಂದ ದಾರಿಯನ್ನು ಬಿಟ್ಟು ಹೊಸ ದಾರಿ ಆರಿಸಿಕೊಳ್ಳುತ್ತಾನೆ. ತಾನು ನಡೆದ ದಾರಿಯಲ್ಲಿ ತನಗಿಂತ ಕಡಿಮೆ ಪ್ರತಿಭೆಯುಳ್ಳವರು ನಡೆಯಲಾರಂಭಿಸುತ್ತಾರೆ. ನಡೆದುಕೊಳ್ಳುವವರ ಸಂಖ್ಯೆ ಅಧಿಕವಾದಷ್ಟು ಅದರ ಪ್ರಭಾವ ಹೆಚ್ಚುತ್ತದೆ. ನಂತರ ಅದೇ ಸುಲಭವಾಗಿ ನಂಬಿಕೆಯ ಭಾಗವಾಗಲಾರಂಭಿಸುತ್ತದೆ, ಸಂಪ್ರದಾಯವಾಗಿ ಬದಲಾಗುತ್ತದೆ. ಹಾಗಾಗಿ ಪ್ರತಿಯೊಂದು ಹೊಸ ಮಾರ್ಗ ಕೆಲಕಾಲದ ಅಂತರದಲ್ಲಿ ಸಂಪ್ರದಾಯವೆನಿಸುತ್ತದೆ. ಈ ಅರ್ಥದಲ್ಲಿ ತೆಲುಗು ಲೇಖಕ ಕೆ.ಸಿ.ರೆಡ್ಡಿ "ಸಂಪ್ರದಾಯ ಆಧುನಿಕತೆಯ ಕೂಸು"(೧೯೮೯:೩೬) ಎಂದು ಅಭಿಪ್ರಾಯ ಪಡುತ್ತಾರೆ. ಸಂಪ್ರದಾಯಗಳು ಮಾನವನಿಂದ ಮಾನವನಿಗಾಗಿ ನಿರ್ಮಿತಗೊಂಡಿವೆ. ಮನುಷ್ಯನು ತಾನು ಜೀವಿಸುವ

ಪರಿಸರದಲ್ಲಿ ತನ್ನ ಅನುಕೂಲಕ್ಕಾಗಿ ಕೆಲವೊಂದು ಹವ್ಯಾಸಗಳನ್ನು ಬೆಳೆಸಿಕೊಳ್ಳುತ್ತಾನೆ. ನಂತರದಲ್ಲಿ ಅವನ ಮುಂದಿನ ಪೀಳಿಗೆ ಅದನ್ನೇ ಪಾಲಿಸುತ್ತಾ ಹೋಗುತ್ತದೆ. ಹಿಂದಿನವರು ಏಕೆ ಅವನ್ನು ಪಾಲಿಸುತ್ತಿದ್ದರು ಎಂಬ ವಿಚಾರವನ್ನು ಮಾಡುವುದಿಲ್ಲ. ಅವನ್ನು ಅನುಸರಿಸದಿದ್ದರೆ ತಮಗೆ ಅನಾಹುತ ಆಗುತ್ತದೆ ಎಂಬ ಭಯದಿಂದ ಚಾಚೂ ತಪ್ಪದೆ ಅನುಸರಿಸುತ್ತಾರೆ.

ಸಂಪ್ರದಾಯ ಒಂದು ಕಾಲದಲ್ಲಿ ಹೊಸ ವಿಚಾರವೇ ಆಗಿರುತ್ತದೆ. ಅದನ್ನು ಕೆಲವರು ಸ್ವೀಕರಿಸಿದ್ದರೆ ಇನ್ನೂ ಕೆಲವರು ತಿರಸ್ಕರಿಸಿರುತ್ತಾರೆ. ಆದರೆ ಆ ಹೊಸ ವಿಚಾರಕ್ಕೆ ಅರ್ಥವಂತಿಕೆ ಇದ್ದಾಗ ಮಾತ್ರ ಅದು ಸಮಾಜದಲ್ಲಿ ತನ್ನ ಸ್ಥಾನ ಉಳಿಸಿಕೊಳ್ಳುತ್ತದೆ. ಅದೂ ಒಂದು ಸಂಪ್ರದಾಯವಾಗುತ್ತಾ ಹೋಗುತ್ತದೆ. ಉದಾಹರಣೆಗೆ ಬಾಲ್ಯವಿವಾಹ ಭಾರತೀಯ ಹಿಂದೂ ಸಂಸ್ಕೃತಿಯಲ್ಲಿ ಪೂರ್ವದಲ್ಲಿರಲಿಲ್ಲ. ಆದರೆ ಕೆಲವೊಂದು ಕಾರಣಗಳಿಂದಾಗಿ ಬಾಲ್ಯವಿವಾಹ ಆಚರಣೆಯಲ್ಲಿ ಬಂದಿತು. ಅನ್ಯಪುರುಷರ ಆಕ್ರಮಣದಿಂದ ತಮ್ಮ ಹೆಣ್ಣು ಮಕ್ಕಳನ್ನು ಕಾಪಾಡಿಕೊಳ್ಳುವ ಸಲುವಾಗಿ ಅವರಿಗೆ ಬಾಲ್ಯದಲ್ಲಿಯೇ ವಿವಾಹಮಾಡುವ ಸಂಪ್ರದಾಯ ಬೆಳೆಯಿತು. ಮುಸ್ಲಿಂರ ಆಳ್ವಿಕೆಯಲ್ಲಿ ದೊರೆಗಳು ಹಾಗೂ ಅವರ ಅಧಿಕಾರ ವರ್ಗದವರ ಕೆಟ್ಟದೃಷ್ಟಿ ಹೆಣ್ಣುಮಕ್ಕಳ ಮೇಲೆ ಬೀಳುತ್ತಿತ್ತು. ಅವರಿಂದಾಗುತ್ತಿದ್ದ ಬಲತ್ಕಾರಗಳು ಸಹ ಬಾಲ್ಯ ವಿವಾಹದ ಕಾರಣಗಳಲ್ಲಿ ಒಂದಾಗಿದೆ.

ವರದಕ್ಷಿಣೆ ಆರಂಭದಲ್ಲಿ ವಧುದಕ್ಷಿಣೆಯಾಗಿತ್ತು. ಗಂಡಿನ ಕಡೆಯವರು ಹೆಣ್ಣಿನ ಮನೆಯವರಿಗೆ ದುಡ್ಡು ಕೊಟ್ಟು ಹೆಣ್ಣನ್ನು ಮದುವೆ ಮಾಡಿಕೊಳ್ಳುತ್ತಿದ್ದರು. ನಂತರ ಹೆಣ್ಣಿನ ಕಡೆಯವರು ತಮ್ಮ ಹೆಣ್ಣು ಸುಖವಾಗಿರಲು ಜೀವನಾವಶ್ಯಕ ವಸ್ತುಗಳನ್ನು ಗಂಡಿನ ಮನೆಗೆ ಕಳುಹಿಸುತ್ತಿದ್ದರು. ನಂತರ ಅದೇ ಪದ್ಧತಿ ವರದಕ್ಷಿಣೆಯಾಗಿ ಬದಲಾಯಿತು. ಗಂಡಿನ ಕಡೆಯವರು ತಮಗೆ ಬೇಕಾದಷ್ಟು ಹಣ-ಚಿನ್ನದ ಬೇಡಿಕೆಯನ್ನಿಟ್ಟು ಹೆಣ್ಣಿನ ಕಡೆಯವರಿಂದ ವಸೂಲಿ ಮಾಡತೊಡಗಿದರು. ಬರಬರುತ್ತಾ ಅದೇ ವರದಕ್ಷಿಣೆ ಹೆಣ್ಣು ಮಕ್ಕಳಿಗೆ ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. (ಭೈರಪ್ಪ, ೧೯೯೬:೮೨)

ವಿಧವೆಯರ ಕಟ್ಟುಪಾಡುಗಳಲ್ಲಿ ಒಂದಾದ ಕೇಶ ಮುಂಡನ ಸಹ ಭಾರತದ ಹಿಂದೂ ಸಂಪ್ರದಾಯದಲ್ಲಿರಲಿಲ್ಲ. ವೇದಗಳ ಕಾಲದಲ್ಲಿ ಏಳನೇ ಶತಮಾನದವರೆಗೂ ಮುಂಡನ ಪದ್ಧತಿ ಇರಲಿಲ್ಲ ಎಂಬುದು ಬಾಣನ ಹರ್ಷಚರಿತ್ರೆಯಿಂದ ತಿಳಿದುಬರುತ್ತದೆ. ಬಾಣನು ಏಕವೇಣಿ ಬಂಧನ ವಿಧವೆಯ ಚಿಹ್ನೆಯೆಂದು ಹರ್ಷಚರಿತ್ರೆಯಲ್ಲಿ ಉಲ್ಲೇಖಿಸಿದ್ದಾನೆ. (ಶ್ರೀಕಂಠಶಾಸ್ತ್ರೀ, ೨೦೦೬:೧೭೧) ಕೆಲವು ಸಂದರ್ಭಗಳಲ್ಲಿ ಪುನರ್ವಿವಾಹವಾಗಬಹುದೆಂದು ಅಗ್ನಿಪುರಾಣದಲ್ಲಿ ಹೇಳಲಾಗಿದೆ. ಗುಪ್ತ ಸಾಮ್ರಾಟನಾದ ಇಮ್ಮಡಿ ಚಂದ್ರಗುಪ್ತನು ತನ್ನಣ್ಣನಾದ ರಾಮಗುಪ್ತನನ್ನು ಕೊಂದು ತನ್ನ ಅಣ್ಣನ ಹೆಂಡತಿಯಾದ ಧ್ರುವಾದೇವಿಯನ್ನು ಮದುವೆಯಾದನೆಂದು ವಿಶಾಖದತ್ತನ ದೇವೀಚಂದ್ರಗುಪ್ತ

ನಾಟಕದಲ್ಲಿದೆ. ಆರನೇ ಶತಮಾನದವರೆಗೆ ವಿಧವಾ ವಿವಾಹ ಪದ್ಧತಿ ಇದ್ದುದು ಕಂಡುಬರುತ್ತದೆ. (ಶ್ರೀಕಂಠಶಾಸ್ತ್ರೀ, ೨೦೦೬:೧೭೦)

ಭಾರತೀಯ ಹಿಂದೂ ಸಮಾಜದಲ್ಲಿ ಆಚರಣೆಯಲ್ಲಿದ್ದ ಸಹಗಮನ ಪದ್ಧತಿಯೂ ಪುರಾತನ ಕಾಲದ್ದಾಗಿರಲಿಲ್ಲ. ಪಾಂಡುವಿನ ಮರಣಾನಂತರ ಮಾದ್ರಿ ಹಾಗೂ ಕುಂತಿ ಇಬ್ಬರೂ ಸಹಗಮನ ಮಾಡಬೇಕಾಗಿತ್ತು. ಆದರೆ ಮಾದ್ರಿ ಕುಂತಿಯನ್ನು ಮಕ್ಕಳ ಪಾಲನೆಗೆಂದು ನೇಮಿಸಿ ತಾನು ಸಹಗಮನಕ್ಕೆ ಒಪ್ಪಿಕೊಳ್ಳುವ ಉದಾಹರಣೆಯಿದೆ. ಆದರೆ ಕೌರವರ ಹೆಂಡತಿಯರಾಗಲಿ, ದಶರಥನ ಹೆಂಡತಿಯರಾದ ಕೌಸಲ್ಯೆ, ಕೈಕೇಯಿ, ಸುಮಿತ್ರ ಇವರ್‍ಯಾರೂ ಸಹಗಮನ ಮಾಡಿರುವ ಉಲ್ಲೇಖ ರಾಮಾಯಣದಲ್ಲೆಲ್ಲಿಯೂ ಕಂಡುಬರುವುದಿಲ್ಲ. ರಾಮಾಯಣದ ಉತ್ತರಕಾಂಡದಲ್ಲಿ ಬ್ರಾಹ್ಮಣ ಸ್ತ್ರೀಯರು ಸಹಗಮನ ಮಾಡಕೂಡದೆಂದು ಸ್ಪಷ್ಟವಾಗಿ ಹೇಳಿದೆ. ಇದಕ್ಕೆ ವಿರುದ್ಧವಾಗಿ ಸಹಗಮನದಿಂದ ಪತಿ ಪಾಪ ವಿಮುಕ್ತನಾಗಿ ಸ್ವರ್ಗ ಸೇರುವನೆಂಬುದು ಮದನ ಪಾರಿಜಾತದಲ್ಲಿ ಹೇಳಲಾಗಿದೆ. (ಶ್ರೀಕಂಠಶಾಸ್ತ್ರೀ, ೨೦೦೬:೧೭೨)

ಆದರೆ ಪತಿಯ ಮರಣದ ನಂತರ ಅವನ ಆಸ್ತಿಗೆ ಆತನ ಹೆಂಡತಿಯೆ ವಾರಸುದಾರಳಾಗುತ್ತಿದ್ದಳು. ಈ ಅಂಶ ಕೂಡ ಸಹಗಮನ ಪದ್ಧತಿಯ ಆಚರಣೆಗೆ ಕಾರಣವಾಗಿದೆ. ಪತಿಯ ವಿಯೋಗದ ನಂತರ ಪತ್ನಿ ಅನುಭವಿಸಬೇಕಿದ್ದ ಸಮಸ್ಯೆಗಳಿಂದ ಪಾರಾಗಲು ಕೆಲವರು ಸಹಗಮನದ ಮೊರೆ ಹೋಗುತ್ತಿದ್ದರೆ, ಸ್ತ್ರೀಯರಿಗಿದ್ದ ಆಸ್ತಿಯ ಮೇಲಿನ ಹಕ್ಕು ಕಸಿಯಲು ಅವರು ಸಹಗಮನ ಮಾಡಲು ಒತ್ತಾಯ ಹೇರುತ್ತಿತ್ತು. ಹಾಗೆಯೇ ಸಹಗಮನ ಮಾಡುವುದರಿಂದ ಪತಿಯರು ಸ್ವರ್ಗ ಸೇರುವರೆಂಬ ನಂಬಿಕೆಯನ್ನೂ ಹುಟ್ಟುಹಾಕಲಾಗಿತ್ತು.

ಹೀಗೆ ಭಾರತೀಯ ಸಮಾಜದಲ್ಲಿರುವ ಅನೇಕ ಪದ್ಧತಿಗಳು ಸಂಪ್ರದಾಯದಿಂದ ಬಂದವಲ್ಲ. ಜನರು ತಮ್ಮ ಅನುಕೂಲಕ್ಕಾಗಿ ಮಾಡಿಕೊಂಡ ವಿಚಾರಗಳೇ ಸಂಪ್ರದಾಯಗಳಾಗಿ ಮಾರ್ಪಾಡಾಗಿವೆ. ಪ್ರತಿ ವಿಚಾರವೂ ಒಂದು ಕಾಲದ ಆಧುನಿಕ ವಿಚಾರವೇ ಆಗಿರುತ್ತದೆ ಎಂಬುದು ಗಮನಾರ್ಹ. ನಟರಾಜ ಹುಳಿಯಾರ "ಒಂದು ಘಟ್ಟದ ಆಧುನಿಕತೆ ಇನ್ನೊಂದು ಘಟ್ಟದಲ್ಲಿ ಪರಂಪರೆಯಾಗುತ್ತದೆ ಅಥವಾ ಜಡ ಸಂಪ್ರದಾಯವಾಗುತ್ತದೆ" (೨೦೦೪:೩೦೫) ಎಂದು ಹೇಳುತ್ತಾರೆ. ಪ್ರತಿಯೊಂದು ಸಂಪ್ರದಾಯ ಆರಂಭದಲ್ಲಿ ಒಂದು ಹೊಸ ವಿಚಾರವಾಗಿಯೇ ಹುಟ್ಟು ಪಡೆಯುತ್ತದೆ. ನಂತರ ಜನರ ನಂಬಿಕೆಯನ್ನು ಗಳಿಸಿ ಒಂದು ಸಂಪ್ರದಾಯವೆನಿಸುತ್ತದೆ ಎಂಬ ವಿಚಾರ ಸ್ಪಷ್ಟವಾಗುತ್ತದೆ.

ಆಧುನಿಕತೆ

ಭಾರತೀಯ ಸಮಾಜದಲ್ಲಿರುವ ಆಚಾರ-ವಿಚಾರಗಳು, ಕುಟುಂಬ ವ್ಯವಸ್ಥೆ, ಜಾತಿಪದ್ಧತಿ, ಸಮಾಜ, ಇಡೀ ಸಂಸ್ಕೃತಿಯೇ ಋಷಿ ಮುನಿಗಳು ಕಾಡಿನಲ್ಲಿ ವಾಸ ಮಾಡುವುದರಿಂದ ಹಿಡಿದು

ಇಂದಿನ ನಗರ ಜೀವನದವರೆಗೆ ಬದಲಾಗುತ್ತಾ ಬಂದಿದೆ. ಹೀಗೆ ಬದಲಾದ ಕಾಲಮಾನದ ಅಗತ್ಯಗಳಿಗೆ ಅನುಗುಣವಾಗಿ ರೂಪುಗೊಂಡ ಜೀವನ ಕ್ರಮವೇ ಆಧುನಿಕತೆ ಆಗಿದೆ.

ಇಂಗ್ಲೀಷಿನ 'Modern' ಎಂಬ ಪದ ೧೫ನೇ ಶತಮಾನದಲ್ಲಿ ಲ್ಯಾಟಿನ್ ಭಾಷೆಯ Modernus ಎಂಬ ಪದದಿಂದ ರೂಪುಗೊಂಡಿದೆ. ಲ್ಯಾಟಿನ್‌ನಲ್ಲಿ ಮಾಡರ್ನ್ಸ್ ಎಂಬ ಪದವನ್ನು ೧೫ನೇ ಶತಮಾನದಲ್ಲಿ ಕ್ರಿಶ್ಚಿಯನ್ ಘಟ್ಟವನ್ನು ರೋಮನ್ನರ ಕ್ಷುದ್ರ ಧರ್ಮಗಳ ಭೂತಕಾಲದಿಂದ ಪ್ರತ್ಯೇಕಿಸಲು ಬಳಸಲಾಯಿತು. ಮಧ್ಯಯುಗದಲ್ಲಿ 'ಮಾಡರ್ನ್' ಎಂಬ ಪದವನ್ನು 'ಪ್ರಾಚೀನ' ಎಂಬ ಹಂತದಿಂದ ಸಮಕಾಲೀನ ಘಟ್ಟವನ್ನು ಪ್ರತ್ಯೇಕಿಸಲು ಬಳಸಲಾಯಿತು. ಕ್ರಮೇಣ 'ಮಾಡರ್ನಿಟಿ' ಎಂಬ ಪದ ಹದಿನಾರನೆಯ ಶತಮಾನದ ಹೊತ್ತಿಗೆ ಯೂರೋಪಿನಲ್ಲಿ ಹುಟ್ಟಿದ ಸಾಮಾಜಿಕ ಸಂಸ್ಥೆಗಳನ್ನು ವಿವರಿಸಿಕೊಳ್ಳಲು ಹೆಚ್ಚು ಬಳಕೆಗೆ ಬಂದಿತು. ಯುರೋಪು ಭೂಮಂಡಲವನ್ನು ಹೊಸದಾಗಿ ಶೋಧಿಸುವ ಹಾಗೂ ವಸಾಹತೀಕರಿಸುವ ಕೆಲಸದಲ್ಲಿ ತೊಡಗಿದಾಗ ಅಲ್ಲಿನ ಸಾಮಾಜಿಕ ಸಂಸ್ಥೆಗಳು 'ಮಾಡರ್ನಿಟಿ'ಯನ್ನು ಎಲ್ಲೆಡೆ ಹಬ್ಬಿಸತೊಡಗಿದವು. ಧರ್ಮ ಹಾಗೂ ಆಧ್ಯಾತ್ಮಗಳಿಗೆ ಪರ್ಯಾಯವಾದ ಜ್ಞಾನವಾಗಿ ವಿಜ್ಞಾನ ಸ್ಥಾಪಿತಗೊಳ್ಳತೊಡಗಿದ ಘಟ್ಟ ಇದು. ವಿಜ್ಞಾನ ಕೇಂದ್ರ ರಂಗಕ್ಕೆ ಬಂದ ನಂತರ ರೂಪುಗೊಂಡ ದೃಷ್ಟಿಕೋನವೇ ಆಧುನಿಕತೆಯಾಗಿದೆ. ಆದರೆ ನಂತರದಲ್ಲಿ ಆಧುನಿಕತೆ ಒಂದು ಬಹುದೊಡ್ಡ ಆಳುವ ಭಾಷೆಯಾಗಿ, ವಿಚಾರಧಾರೆಯಾಗಿ, ವ್ಯವಸ್ಥೆಯಾಗಿ, ಧೋರಣೆಯಾಗಿ, ನಿರ್ದೇಶಿಸುವ ಹಾಗೂ ನಿಯಂತ್ರಿಸುವ ಸಾಧನವಾಗಿ ಮಾನವನ ಪ್ರಜ್ಞೆ ಹಾಗೂ ಸಂವೇದನೆಗಳನ್ನು ನಿರ್ಣಾಯಕವಾಗಿ ಬದಲಿಸುವ ದೃಷ್ಟಿಕೋನವಾಗಿ ಪುನರುಜ್ಜೀವನದಿಂದೀಚೆಗೆ ಬೆಳೆದು ಬಂದ ಪ್ರಕ್ರಿಯೆಯಾಗಿದೆ. ಇದು ಇಪ್ಪತ್ತನೆಯ ಶತಮಾನದ ಮುಖ ಚಹರೆಯನ್ನೆ ಬದಲಿಸಿದ ಕ್ರಮವಾಗಿದೆ (ನಟರಾಜ ಹುಳಿಯಾರ್, ೨೦೦೪:೧೩೨).

ಪಾಶ್ಚಾತ್ಯರ ಶಿಕ್ಷಣದಿಂದ ಹೊಸ ಆಚಾರ-ವಿಚಾರಗಳು, ಹೊಸ ಜೀವನ ಕ್ರಮ, ಹೊಸ ಮಾದರಿಯ ಉಡುಪುಗಳು, ನವೀನ ಆಹಾರ ಪದ್ಧತಿ ಮೊದಲಾದವು ದೇಶೀಯ ಸಂಸ್ಕೃತಿಯೊಳಗೆ ಹೊಕ್ಕು ನವೀನತೆ ಕೊಡಲು ಪ್ರಯತ್ನಿಸುವಂಥ ಆಧುನಿಕತೆ ಸಮಾಜದಲ್ಲಿರುವ ಕುರುಡು-ಕಟ್ಟಳೆಗಳಿಗೆ ನಿರ್ದಿಷ್ಟವಾದ ಅರ್ಥವನ್ನು ನೀಡುತ್ತದೆ.

ಆಧುನಿಕತೆ ಸಂಪ್ರದಾಯಗಳಿಗೆ ಸೃಜನಶೀಲ ರೂಪವನ್ನು ನೀಡುತ್ತದೆ. ಯಜ್ಞ, ಯಾಗಗಳು, ಸಂಸ್ಕಾರ, ವಿಧಿ ಆಚರಣೆಗಳು, ಬಾಲ್ಯವಿವಾಹ, ವರದಕ್ಷಿಣೆ, ಸಹಗಮನ ಪದ್ಧತಿ, ಸ್ತ್ರೀಯರ ಶಿಕ್ಷಣ, ವಿಧವಾ ಸಮಸ್ಯೆ ಮುಂತಾದ ಸಾಮಾಜಿಕ ಆಚರಣೆಗಳಿಗೆ ಆಧುನಿಕತೆ ಹೊಸ ಅರ್ಥ ಕಟ್ಟಿಕೊಡುತ್ತದೆ, ಹೊಸ ದೃಷ್ಟಿಕೋನ ಹುಟ್ಟುಹಾಕುತ್ತದೆ. ಸಾಮಾಜಿಕ ಸಂಬಂಧಗಳಲ್ಲಿ ಕಂಡುಬರುವ ಪ್ರವೃತ್ತಿ ಮತ್ತು ಮೌಲ್ಯಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಆಧುನಿಕತೆಯ ಪರಿಕಲ್ಪನೆಯಲ್ಲಿ ಅಳವಡಿಸಬಹುದು.

(ವಿ. ಸೀತರಾಮಯ್ಯ, ೧೯೬೩, ೬೪) ಆಧುನಿಕತೆ ಒಂದು ರಾಷ್ಟ್ರದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಮಾರ್ಪಾಡುಗಳನ್ನು ತರುತ್ತದೆ.

ಆಧುನಿಕತೆ ಭಾರತದಲ್ಲಿ ಪಾಶ್ಚಿಮಾತ್ಯರ ಸಂಪರ್ಕದಿಂದ ತಲೆದೋರಿತು. ಸಾಹಿತ್ಯ, ಸಮಾಜ, ಆರ್ಥಿಕತೆ ಹಾಗೂ ರಾಜಕೀಯ ವ್ಯವಸ್ಥೆಯ ಮೇಲೆ ಅನೇಕ ಬದಲಾವಣೆಗಳನ್ನು ತಂದಿತು. ಆಧುನಿಕತೆಯಿಂದಾಗಿ ಕೈಗಾರಿಕಾ ಬೆಳವಣಿಗೆ ಹಾಗೂ ಸಾಮಾಜಿಕ ಸುಧಾರಣೆಗಳಾದವು. ಆಧುನಿಕತೆ ತಲೆದೋರುವ ಪೂರ್ವದಲ್ಲಿ ಭಾರತದಲ್ಲಿ ಬೃಹತ್ ಕೈಗಾರಿಕೆಗಳಿರಲಿಲ್ಲ, ಯಂತ್ರೋಪಕರಣಗಳ ಬದಲಾಗಿ ಮನುಷ್ಯರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಸಣ್ಣ ಕೈಗಾರಿಕೆಗಳು, ವ್ಯವಸಾಯ, ಕುರಿ ಸಾಕಾಣಿಕೆ ಮುಂತಾದ ವೃತ್ತಿಗಳನ್ನು ಪಾಲಿಸಲಾಗುತ್ತಿತ್ತು. ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತಿರಲಿಲ್ಲ. ಸಮಾಜದ ಉನ್ನತ ವರ್ಗದವರಿಗೆ ಮಾತ್ರ ಶಿಕ್ಷಣ ಸೀಮಿತವಾಗಿತ್ತು. ಪಾಶ್ಚಾತ್ಯರ ಸಂಪರ್ಕ ಹಾಗೂ ಅವರ ಆಳ್ವಿಕೆಯಿಂದಾಗಿ ಭಾರತೀಯರ ಜನಜೀವನ ಸಂಪೂರ್ಣವಾಗಿ ಬದಲಾಯಿತು. ಶಿಕ್ಷಣ ಎಲ್ಲರಿಗೂ ಲಭಿಸುವಂತಾಯಿತು. ಇಂಗ್ಲಿಷ್ ಶಿಕ್ಷಣ ಪಡೆದ ಭಾರತೀಯರಿಗೆ ಬ್ರಿಟಿಷರ ಆಡಳಿತದಲ್ಲಿ ಕೆಲಸಗಳು ಲಭಿಸತೊಡಗಿದವು. ಇದರಿಂದ ಭಾರತೀಯರ ಆರ್ಥಿಕ ಮಟ್ಟ ಸುಧಾರಣೆಗೊಳ್ಳತೊಡಗಿತು. ಜೀವನ ವಿಧಾನ, ಉಡುಗೆ ತೊಡುಗೆ, ಆಹಾರ ಪದ್ಧತಿಗಳಲ್ಲಿ ಮಾರ್ಪಾಡು ಕಂಡುಬಂದಿತು. ಸಾಮಾಜಿಕ ಕಟ್ಟಳೆಗಳು, ಮಹಿಳೆಯರ ಮಾರಾಟ, ಹೆಣ್ಣು ಶಿಶು ಹತ್ಯೆಗಳನ್ನು ನಿರ್ಬಂಧಿಸಲಾಯಿತು.

ಉನ್ನತ ವ್ಯಾಸಂಗಕ್ಕಾಗಿ ನಗರ ಪ್ರದೇಶಗಳಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪಿತವಾದವು. ಶಿಕ್ಷಣ ಮತ್ತು ಹೊಸ ವಿಚಾರಗಳು ಪ್ರವೇಶ ಪಡೆದ ಫಲವಾಗಿ ಹೊಸ ಹೊಸ ಬದಲಾವಣೆ ಗೋಚರವಾಗತೊಡಗಿದವು. ಹೊಸ ಹೊಸ ಕೈಗಾರಿಕೆಗಳು ಪ್ರಾರಂಭಗೊಂಡವು. ಯಂತ್ರಮುಖೀ ನಾಗರಿಕತೆ ಅಧಿಕವಾಗಿ ಉತ್ಪನ್ನಗಳ ಮೌಲ್ಯ ಹಾಗೂ ವ್ಯವಹಾರಗಳ ರೀತಿ ಬದಲಾಯಿತು. ಮಾನವ ಸಂಪನ್ಮೂಲಗಳಿಗಿಂತ ಹೆಚ್ಚಾಗಿ ಯಂತ್ರೋಪಕರಣಗಳು ಬಳಕೆಯಾಗತೊಡಗಿದವು. ಇದರಿಂದಾಗಿ ಜನರ ಜೀವನ ವಿಧಾನ ಬದಲಾಯಿತು. ಕೇವಲ ನಾಲ್ಕು ಗೋಡೆಗಳಿಗೆ ಬಂಧಿತಳಾದ ಹೆಣ್ಣು ಶಿಕ್ಷಣ ಪಡೆಯುವಂತಾದಳು. ಪುರುಷನಿಗೆ ಸಮಾನವಾಗಿ ಪ್ರತಿ ರಂಗದಲ್ಲಿಯೂ ದುಡಿಯಲು ಅರ್ಹಳಾದಳು. ಒಂದು ರಾಷ್ಟ್ರವನ್ನು ಆಳುವ, ಬಾಹ್ಯಲೋಕಕ್ಕೆ ಹೋಗಿ ಬರುವ ಸಾಹಸವನ್ನು ಮೆರೆಯತೊಡಗಿದಳು. ಪುರುಷ ಸಮಾನ ಅವಕಾಶಗಳನ್ನು ಪಡೆಯುವಲ್ಲಿ ಸಫಲಳಾದಳು.

ಆಧುನಿಕತೆಯ ಪ್ರವೇಶದ ಪೂರ್ವದಲ್ಲಿ ಅವಿಭಕ್ತ ಕುಟುಂಬದಲ್ಲಿ ಒಬ್ಬ ಯಜಮಾನನ ಕೈ ಕೆಳಗೆ, ಅವನ ಆದೇಶಗಳನ್ನು ಗೌರವಿಸುತ್ತಾ ಅವುಗಳನ್ನು ಪಾಲಿಸುತ್ತಾ ಜೀವಿಸಲಾಗುತ್ತಿತ್ತು. ಹೊಸ ವಿಚಾರಗಳಿಂದಾಗಿ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಪರಿಣಮಿಸತೊಡಗಿದವು. ವ್ಯಕ್ತಿ ಸ್ವತಂತ್ರನಾಗಿ ಜೀವಿಸಲು ಬಯಸತೊಡಗಿದನು. ತನ್ನ ಬೇಕು ಬೇಡಗಳನ್ನು ತಾನೇ ಸ್ವತಃ

ಆಲೋಚಿಸತೊಡಗಿದನು. ಪರಂಪರಾಗತವಾಗಿ ಆಚರಿಸುತ್ತಾ ಬಂದ ಹಬ್ಬ ಹರಿದಿನಗಳೂ ಬದಲಾಗತೊಡಗಿದವು. ಹತ್ತು–ಹದಿನೈದು ದಿನಗಳವರೆಗೆ ನಡೆಯುತ್ತಿದ್ದ ಮದುವೆ ಸಮಾರಂಭಗಳು – ಜಾತ್ರೆಗಳು ಕಣ್ಮರೆಯಾಗತೊಡಗಿದವು. ಸಾಂಪ್ರದಾಯಿಕ ವಿವಾಹಗಳು ತಕ್ಕಮಟ್ಟಿಗೆ ಕಡಿಮೆಯಾಗಿ, ಅಂತರ್ಜಾತಿಯ ವಿವಾಹಗಳು, ಪ್ರೇಮ ವಿವಾಹಗಳು ಕಾಣಿಸಿಕೊಳ್ಳತೊಡಗಿದವು.

ಬ್ರಿಟಿಷರ ಆಳ್ವಿಕೆಯಿಂದ ಭಾರತದ ಜನ ಸಾಮಾನ್ಯರಿಗೆ ಆಂಗ್ಲ ಮಾದರಿಯ ಶಿಕ್ಷಣ ಲಭಿಸತೊಡಗಿತು. ಉನ್ನತ ವ್ಯಾಸಂಗಕ್ಕಾಗಿ ಹಾಗೂ ಉನ್ನತ ಹುದ್ದೆಗಳಿಗಾಗಿ ಭಾರತೀಯರು ವಿದೇಶ ಪ್ರಯಾಣ ಬೆಳೆಸತೊಡಗಿದರು. ವಿದೇಶಿ ವ್ಯವಹಾರಗಳು ಬೆಳೆದವು. ಆಮದು ರಫ್ತುಗಳ ವಹಿವಾಟು ಪ್ರಾರಂಭವಾಯಿತು. ವಸಾಹತು ಪ್ರಜಾಪ್ರಭುತ್ವಕ್ಕೆ ಪ್ರೇರಣೆ ನೀಡಿತು. ಸಾಂಪ್ರದಾಯಿಕ ಜೀವನ ವ್ಯವಸ್ಥೆ ಬದಲಾವಣೆಗೆ ಒಳಪಟ್ಟಿತು.

ಸಮಾಜದಲ್ಲಿ ಜಾತಿ ಬೇಧಗಳು ತಮ್ಮ ಪ್ರಾಮುಖ್ಯತೆ ಕಳೆದುಕೊಂಡವು. ದಲಿತರು ಜಾತಿರಹಿತ ಸಮಾಜ ಕಟ್ಟುವ ಚಳವಳಿ ಪ್ರಾರಂಭಿಸಿದರು. ಆಧುನಿಕತೆ ತನ್ನ ಜಾತ್ಯತೀತ ಸ್ವಭಾವದಿಂದಲೆ ಎಲ್ಲರ ಗಮನ ಸೆಳೆದುಕೊಂಡಿತು. ಶತಮಾನಗಳಿಂದ ನಡೆದುಬರುತ್ತಿದ್ದ ಯಜಮಾನ ಸಂಸ್ಕೃತಿ ಅಂತ್ಯಗೊಳ್ಳತೊಡಗಿತು. ಇದರಿಂದಾಗಿ ಸಮಾಜದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಆಧುನಿಕತೆ ಕಾಣಿಸಿಕೊಳ್ಳಲಾರಂಭಿಸಿತು. ಶತಮಾನಗಳಿಂದ ಯಾಜಮಾನ್ಯವನ್ನು ಸ್ಥಾಪಿಸಿದ್ದ ಜಾತಿಗಳಿಗೆ ತಮ್ಮ ಉಳಿವಿಗಾಗಿ ಆಧುನಿಕತೆಯನ್ನು ಸ್ವೀಕರಿಸಿ ಅದನ್ನು ತಮ್ಮದಾಗಿಸಿಕೊಳ್ಳುವುದು ಅನಿವಾರ್ಯವಾಯಿತು. ಶಿಕ್ಷಣ ಸರ್ವರಿಗೂ ಲಭಿಸುವಂತಾಯಿತು. ಶೂದ್ರನೂ ಸಾಹಿತ್ಯ ರಚಿಸುವಂತಾಯಿತು. "ಇಂಗ್ಲಿಷ್‌ನವರು ಇಂಡಿಯಾಕ್ಕೆ ಬರದಿದ್ದರೆ ನಾನು ಕುಪ್ಪಳಿಯಲ್ಲಿ ಸಗಣಿ ತಟ್ಟಿಕೊಂಡು, ಬ್ರಾಹ್ಮಣರ ಗದ್ದೆ ಉತ್ತುಕೊಂಡಿರುತ್ತಿದ್ದೆ. ವೈದಿಕ ಮತ ಮೌಢ್ಯದ ಕೆಸರು ಸಂದಿಯಲ್ಲಿ ಒದ್ದಾಡುವ ಶೂದ್ರ ಹಂದಿಯಾಗಿರುತ್ತಿದ್ದೆ" (೧೯೭೭: ೧೦೬) ಎಂದು ಕುವೆಂಪು ಹೇಳಿಕೊಂಡಿದ್ದಾರೆ. ಆಧುನಿಕತೆ ಭಾರತಕ್ಕೆ ಪ್ರವೇಶಿಸಿದ್ದರಿಂದ ಸಮಾಜದಲ್ಲಿ ಸಮಾನ ಶಿಕ್ಷಣ ದೊರೆತುದು ಇದರಿಂದ ಸ್ಪಷ್ಟವಾಗುತ್ತದೆ. ಸಾಂಪ್ರದಾಯಿಕ ಸಮಾಜದಲ್ಲಿ ಬೆಳೆದಿದ್ದ ಕುವೆಂಪು ಪಾಶ್ಚಾತ್ಯರ ಶಿಕ್ಷಣದಿಂದ ಆಧುನಿಕ ಸ್ಪರ್ಶ ಅನುಭವಿಸುವಂತಾಯಿತು.

ಕುವೆಂಪು ಸಮಾಜದ ಕೆಳವರ್ಗದವರಾಗಿದ್ದರಿಂದ ಸ್ವತಃ ಅನೇಕ ಶೋಷಣೆಗಳನ್ನು ಅನುಭವಿಸಿದ್ದರು. ಅವರ ಕಾದಂಬರಿಗಳಲ್ಲಿ ಸಾಮಾಜಿಕ ಅಸಮಾನತೆ, ವರ್ಣ ವ್ಯವಸ್ಥೆ, ಸಾಮಾಜಿಕ ದೃಷ್ಟಿಯ ಚಿಂತನೆ, ಮೌಢ್ಯತೆಯ ಬಗ್ಗೆ ಖಂಡನೆ, ವರ್ಗ ಸಂಘರ್ಷಗಳು, ವೈಚಾರಿಕತೆ ಇವನ್ನು ಹೆಚ್ಚಾಗಿ ಕಾಣಬಹುದು.

ಕುವೆಂಪು ಸಂಪ್ರದಾಯದ ಸಾರವನ್ನು ಹೀರಿಕೊಂಡೇ ಆಧುನಿಕತೆ ಬೆಳೆಯಬೇಕು ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಭೂತಕಾಲದ ನೆಲೆಗಟ್ಟಿನ ಮೇಲೆ ವರ್ತಮಾನ ನಿಂತಿದೆ; ಸಂಪ್ರದಾಯ ಮತ್ತು ಆಧುನಿಕತೆ ಒಂದನ್ನೊಂದು ಸಂಪೂರ್ಣ ತ್ಯಜಿಸಲಾರದು ಎಂದು ನಂಬಿದ್ದರು. "ಪ್ರಾಚೀನತೆಯ ಸತ್ಯದ ಮೇಲೆ ನಿಂತು ಅರ್ವಾಚೀನವನ್ನು ಸೃಜಿಸುತ್ತಾ ಭವಿಷ್ಯತ್ತಿನ ನೂತನ ಆಗಮಿಕದತ್ತ ಮುಂದುವರಿಯಬೇಕು ಎಂಬುದು ನನ್ನ ಆದರ್ಶ" (೧೯೮೭:೨೧) ಎಂದು ಕುವೆಂಪು ಹೇಳುತ್ತಾರೆ. ಹೀಗೆ ಆಧುನಿಕತೆ ಪಾಶ್ಚಾತ್ಯರಿಂದ ಭಾರತಕ್ಕೆ ಪರಿಚಿತವಾಗಿದ್ದರೂ ಸಾರ್ವಜನಿಕವಾಗಿ ಹಾಗೂ ಸಾಮಾಜಿಕವಾಗಿ ತನ್ನದೇ ಆದ ಸ್ಥಾನವನ್ನು ಕಟ್ಟಿಕೊಳ್ಳತೊಡಗಿತು.

ಸಂಪ್ರದಾಯ ಮತ್ತು ಆಧುನಿಕತೆ ಸಂಬಂಧ

ಸಂಪ್ರದಾಯ ಮತ್ತು ಆಧುನಿಕತೆ ಎಂಬ ಪರಿಕಲ್ಪನೆಗಳ ವ್ಯಾಪ್ತಿ ತುಂಬಾ ವಿಸ್ತೃತವಾದದು ಆಗಿದೆ. 'ಸಮಾಜದಲ್ಲಿ ಇವೆರಡು ಅನಿವಾರ್ಯಗಳಾಗಿವೆ. ಮಾನವನಲ್ಲಿ ವಿಕಾಸವಿರುವವರೆಗೂ ಸಂಪ್ರದಾಯ ಜೀವಂತವಾಗಿರುತ್ತದೆ. ಅದು ಹೊಸ ಹೊಸ ಬದಲಾವಣೆಯೊಂದಿಗೆ ಚಿಗುರುತ್ತಿರುತ್ತದೆ. ಸಂಪ್ರದಾಯ ಜೀವಂತವಾಗಿರಲು ಆಧುನಿಕತೆಯೇ ಕಾರಣ' ಎಂದು ಹೇಳುವ ಕೆ.ಸಿ. ರೆಡ್ಡಿಯವರು ಇವೆರಡರಿಂದ ಒಬ್ಬ ವ್ಯಕ್ತಿ, ಸಂಸ್ಕೃತಿ, ಹಾಗೂ ಸಮಾಜದ ವರ್ತನೆಗಳನ್ನು ವಿವರಿಸಲು ಸಾಧ್ಯ ಎಂದು ಅಭಿಪ್ರಾಯ ಪಡುತ್ತಾರೆ.

ಸಂಪ್ರದಾಯ ಹಾಗೂ ಆಧುನಿಕತೆ ಬೇರೆ ಬೇರೆಯಾಗಿ ಕಂಡರೂ ಅವೆರಡೂ ಅವಿನಾ ಸಂಬಂಧ ಹೊಂದಿವೆ. ಕಟ್ಟುನಿಟ್ಟಿನ ಸಂಪ್ರದಾಯವೂ ಆಧುನಿಕವಾಗುತ್ತದೆ. ಅತ್ಯಾಧುನಿಕವಾದ ಪ್ರತಿಯೊಂದೂ ಸಂಗತಿಗೂ ಸಂಪ್ರದಾಯದ ಕೊಂಡಿ ಇರುತ್ತದೆ. "ವಾಲ್ಮೀಕಿಯನ್ನು ಆದಿಕವಿ ಎಂದ ಮಾತ್ರಕ್ಕೆ ಅವನು ರಚಿಸಿದ ಕಾವ್ಯ ಆಕಸ್ಮಿಕವಾಗಿ ರಚಿಸಲ್ಪಟ್ಟಿಲ್ಲ. ಅವನ ಹೃದಯಾಂತರಾಳದಲ್ಲಿ ಎಷ್ಟೋ ವರ್ಷಗಳಿಂದ ಹುದುಗಿದ್ದ ವೈದಿಕ ಗ್ರಂಥಗಳ ಆಧಾರದಿಂದ ಅವನು ಮಹಾಗ್ರಂಥ ರಚಿಸಿದ." (ನಾರಾಯಣರೆಡ್ಡಿ ಸಿ: ೧೯೮೯: ೩೭) ಹಿಂದಿನವರು ಹಾಕಿದ ಹೆಜ್ಜೆಗುರುತಿನಲ್ಲಿ ನಡೆದಾಗ ಮಾತ್ರ ರಾಜಮಾರ್ಗ ಉಂಟಾಗುತ್ತದೆ. ಹಿಂದಿನದಕ್ಕೂ ಇಂದಿನದಕ್ಕೂ ಕೊಂಡಿ ಬಿದ್ದಿರುವುದನ್ನು ಗಮನಿಸಿದಾಗ ಆಧುನಿಕತೆ ಸಂಪ್ರದಾಯದ ಮುಂದುವರಿಕೆಯಾಗಿರುವುದು ತಿಳುವಳಿಕೆಗೆ ಬರುತ್ತದೆ.

ಆಧುನಿಕತೆ ಸಂಪ್ರದಾಯದೊಂದಿಗೆ ಕೂಡಿಕೊಂಡಾಗ ಹೊಸ ಚೈತನ್ಯ ಪಡೆಯುತ್ತದೆ. ಸಂಪ್ರದಾಯಗಳನ್ನು ಅರ್ಥವಿಲ್ಲದೆ ಪಾಲಿಸುವ ಸಮಾಜಕ್ಕೆ ಆಧುನಿಕತೆ ವೈಜ್ಞಾನಿಕ ನಿಲುವನ್ನು ನೀಡುತ್ತದೆ. ಕ್ಷೀಣಿಸುತ್ತಿರುವ ಸಂಪ್ರದಾಯವನ್ನು ಪುನರುದ್ಧರಿಸುವ ಪ್ರತಿಯೊಂದು ಆಧುನಿಕ ವಿಚಾರವೂ ಸ್ವಾಗತಾರ್ಹವಾಗಿ ಸಂಪ್ರದಾಯ ಹಾಗೂ ಆಧುನಿಕತೆ ಸಮನ್ವಯ ಸಾಧಿಸುತ್ತದೆ. ಆಧುನಿಕತೆಯಿಂದಾಗಿ

ಸಂಪ್ರದಾಯ ನಶಿಸುವುದಿಲ್ಲ. ಆದರೆ ಅದರ ಬೆಂಬಲದಿಂದ ಸಂಪ್ರದಾಯಕ್ಕೆ ಹೊಸ ಅರ್ಥ ಹುಟ್ಟುತ್ತದೆ.

ನಿರ್ದಿಷ್ಟ ಸಂಕಥನ, ಪರಿಭಾಷೆ, ಧರ್ಮ, ಸಂಸ್ಕೃತಿ, ಶಿಕ್ಷಣ ಇವೆಲ್ಲದರಿಂದ ರೂಪುಗೊಂಡ ವ್ಯವಸ್ಥೆಯೊಂದು ಹೊಸ ಪ್ರಗತಿ ತತ್ವಗಳಿಂದ ಆಧುನಿಕ ನೆಲೆಗಳಲ್ಲಿ ನಿಂತು ದೇಶೀಯ ಸಾಂಪ್ರದಾಯಿಕ ಸಮಾಜವನ್ನು ಮುಖಾಮುಖಿಯಾಗಿಸುತ್ತದೆ ಎಂಬ ಆಶೀಸ್ ನಂದಿಯವರ ಅಭಿಪ್ರಾಯವನ್ನು ನಟರಾಜ ಹುಳಿಯಾರರು ಉಲ್ಲೇಖಿಸುತ್ತಾರೆ(೨೦೦೪:೧೦). ಆಧುನಿಕತೆಯನ್ನು ಕೇವಲ ದಬ್ಬಾಳಿಕೆಯ ಮಾದರಿಯೆಂದು ಪರಿಗಣಿಸಬಾರದು. ಇದು ಸಾಂಪ್ರದಾಯಿಕ ಸಮಾಜದಲ್ಲಿ ಹಿಂಸೆಗೊಳಗಾದ ಅನೇಕರಿಗೆ ಬಿಡುಗಡೆಯ ಮಾರ್ಗ ತೆರೆದಿಡುತ್ತದೆ. ಆದರೂ ಇದನ್ನು ದೇಶೀ ಸಂಸ್ಕೃತಿ ಸಂಪೂರ್ಣವಾಗಿ ಒಪ್ಪಿಕೊಳ್ಳುವುದಿಲ್ಲ. ಅದು ತನ್ನ ಮಾದರಿಗಳಿಗೆ ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಸಮರ್ಥನೆಗಳನ್ನು ಸೃಷ್ಟಿಸುತ್ತದೆ. ತನ್ನ ಸ್ಪಷ್ಟ ತಾತ್ವಿಕ ನೆಲೆಗಟ್ಟು ಹಾಗೂ ಪ್ರತಿಹಿಂಸೆ ತಡೆಯಬಲ್ಲ, ನಿಯಂತ್ರಿಸಬಲ್ಲ ಶಕ್ತಿಯಿಂದಾಗಿ ಅದು ದೇಶೀಯ ಸಮಾಜದಲ್ಲಿ ಪರಿಣಾಮಕಾರಿಯಾಗಿ ಬೇರೂರಿದೆ. ಆದರೂ ಹೊಸ ಸಂಸ್ಕೃತಿಗೆ ದೇಶೀ ಸಂಸ್ಕೃತಿ ಹಲವು ಬಗೆಯಲ್ಲಿ ಪ್ರತಿಕ್ರಿಯೆ ತೋರಿಸಿದೆ. ಅವನ್ನು ನೇರ ಸ್ವೀಕಾರ, ವಿಮರ್ಶಾತ್ಮಕ ಸ್ವೀಕಾರ, ಸಂಘರ್ಷ, ಸ್ವ ಪ್ರತಿಪಾದನೆ, ಅನುಕರಣೆ, ಶರಣಾಗತಿ, ಉಪೇಕ್ಷೆ ಎಂದು ಗುರುತಿಸಬಹುದು.

ಭಾರತಕ್ಕೆ ಬಂದ ಅನ್ಯದೇಶೀಯರು ತಮ್ಮದೇ ಸಂಸ್ಕೃತಿ, ನಡೆ-ನುಡಿ, ಆಚಾರ ವಿಚಾರ, ಉಡುಗೆ ತೊಡುಗೆ ಮುಂತಾದವನ್ನು ಭಾರತೀಯ ಸಮಾಜದಲ್ಲಿ ಉಳಿಸಿಹೋಗಿದ್ದಾರೆ. ಭಾರತಕ್ಕೆ ಮೊದಲು ಆಗಮಿಸಿದ ಅರೇಬಿಯನ್ನರು ಇಂದಿಗೂ ಪ್ರಚಲಿತವಿರುವ ಪರದಾ ಪದ್ಧತಿಯನ್ನು ಕೊಡುಗೆಯಾಗಿ ನೀಡಿದ್ದಾರೆ. ಅವರಂತೆಯೇ ಡಚ್ಚರು, ಪೋರ್ಚುಗೀಸರು, ಫ್ರೆಂಚರು, ಇಂಗ್ಲಿಷರು ತಮ್ಮ ಹಲವಾರು ಆಚಾರ ವಿಚಾರಗಳನ್ನು ನಮಗೆ ಕಲಿಸಿ ಭಾರತದ ಪದ್ಧತಿಗಳನ್ನು ತಾವು ಅನುಸರಿಸಿದ್ದಾರೆ.

ಕಾದಂಬರಿ ಹಾಗೂ ಮಾನುಷ ಸಂಬಂಧ

ಪೂರ್ವಕಾಲದಿಂದಲೂ ಜನರಿಗೆ ಕಥೆ ಎಂದರೆ ಅಚ್ಚು ಮೆಚ್ಚು. ಕಿರಿಯರಿಂದ ಹಿರಿಯರ ವರೆಗೂ ಎಲ್ಲರೂ ಕಥೆಗಳನ್ನು ಇಷ್ಟ ಪಡುತ್ತಾರೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಕಥೆಗಳು ಹಿಡಿಸಬಹುದು. ಕೆಲವರಿಗೆ ಐತಿಹಾಸಿಕ ಕಥೆಗಳು ಇಷ್ಟವಾದರೆ, ಕೆಲವರಿಗೆ ದೆವ್ವಗಳ ಕಥೆಗಳು ಅಥವಾ ಸಾಮಾಜಿಕ ಕಥೆಗಳು ಪ್ರಿಯವಾಗುತ್ತವೆ. ಹಾಗೆಯೇ ಅವರವರ ವಯಸ್ಸಿಗನುಗುಣವಾಗಿ ಒಂದೊಂದು ಬಗೆಯ ಕಥೆಗಳು ಹಿಡಿಸಬಹುದು. ಹಿಂದಿನ ಪುರಾಣ ಕತೆಗಳಾದ ರಾಮಾಯಣ, ಮಹಾಭಾರತ, ಪಂಚತಂತ್ರ ಕಥೆಗಳು ಇಂದಿಗೂ ಪ್ರಚಲಿತವಾಗಿವೆ. ಅವುಗಳಲ್ಲಿ ಸಾಮಾನ್ಯವಾಗಿರುವುದು

ಕಥೆಯೇ ಆಗಿದೆ. ಕಥೆಗಳಂತೆ ಇರುವ ಆದರೆ ವಿಸ್ತಾರ ರೂಪವನ್ನು ಪಡೆದ ಕಥನ ಸಾಹಿತ್ಯವೆ ಕಾದಂಬರಿ. "ಕಾದಂಬರಿ ಕೃತಿಕಾರನ ಜೀವನ ದರ್ಶನ ಹಿಡಿದು ತೋರುವ ಕನ್ನಡಿ. ಅದು ಒಂದು ಹೊಸ ಜಗತ್ತಿನ ನಿರೂಪಣೆ. ಅದೊಂದು ಕಲಾಕೃತಿ" ಎಂಬುದು ಎಲ್.ಎಸ್. ಶೇಷಗಿರಿರಾವ್ ಅವರ ಅಭಿಪ್ರಾಯ (೧೯೫೭:೨). ಓದುಗರು ಕಾದಂಬರಿಯನ್ನು ಓದುವಾಗ ತಮ್ಮ ಜೀವನದ ಪ್ರತಿ ಸಮಸ್ಯೆಯನ್ನು ಗಮನಿಸುತ್ತಲೆ ಅದರಲ್ಲಿ ತಲ್ಲೀನರಾಗುತ್ತಾರೆ. ಸಂಸಾರದ ಕಷ್ಟಗಳಿಂದ ಸಾಮಾನ್ಯ ಮನುಷ್ಯನನ್ನು ಕಾದಂಬರಿಕಾರ ಸ್ವಲ್ಪ ಕಾಲವಾದರೂ ದೂರ ಕೊಂಡೊಯ್ಯಬಲ್ಲನು ಎಂದರೆ ಉಪೇಕ್ಷಿಸಲಾಗುವುದಿಲ್ಲ.

ಕಾದಂಬರಿಕಾರನು ಸೃಷ್ಟಿಸುವ ಜಗತ್ತು ತನ್ನ ಸುತ್ತಮುತ್ತ ಕಾಣುವ ಜಗತ್ತನ್ನು ಸಹಜವಾಗಿ ಅವಲಂಬಿಸಿರುತ್ತದೆ. ಸಾಮಾನ್ಯ ಮನುಷ್ಯ ಕಾದಂಬರಿಕಾರನ ದೃಷ್ಟಿಯಲ್ಲಿ ವಿಶಿಷ್ಟವಾಗಿ ಕಾಣುತ್ತಾನೆ. ಪ್ರತಿನಿತ್ಯ ಜೀವನದಲ್ಲಿ ವ್ಯಕ್ತಿಗಳು ತಮ್ಮ ಆಸೆ–ನಿರಾಸೆ, ದುಃಖ ಭರವಸೆ, ಹೊಯ್ದಾಟ ಹೋರಾಟಗಳಿಗೆ ಅರ್ಥ ಕೊಡಲು ಪ್ರಯತ್ನಿಸುತ್ತಾನೆ. ಕಾದಂಬರಿಕಾರ ತಾನು ಕಂಡಿದ್ದನ್ನು ಅನುಭವಿಸಿದ್ದನ್ನು ಇತರರಿಗೆ ತನ್ನ ಕಾದಂಬರಿಯ ಮೂಲಕ ತೋರಿಸಲು ಯತ್ನಿಸುತ್ತಾನೆ.

ಕಾದಂಬರಿಕಾರ ತನ್ನದೇ ರೀತಿಯಲ್ಲಿ ಪರಿಸರ, ವಸ್ತು, ಪಾತ್ರಗಳನ್ನು ನಿರ್ಮಿಸುತ್ತಾನೆ. ಆ ಪ್ರಪಂಚ ಓದುಗನ ಮೇಲೆ ಯಾವ ರೀತಿಯ ಪರಿಣಾಮ ಬೀರಬೇಕು ಎಂದು ಬಯಸುತ್ತಾನೆಯೋ, ಆ ಪರಿಣಾಮವನ್ನು ಉಂಟುಮಾಡಲು ವಿವರ ಪಡೆದುಕೊಳ್ಳುತ್ತಾನೆ. ತಾನು ಸೃಷ್ಟಿಸುತ್ತಿರುವ ಕೃತಿಯ ಪರಿಣಾಮಕ್ಕೆ ವಿರೋಧವಾಗುವ ಯಾವ ವಿವರಣೆಯನ್ನೂ ಕೈಗೆತ್ತಿಕೊಳ್ಳದೆ ಎಚ್ಚರ ವಹಿಸಬೇಕಾಗುತ್ತದೆ.

ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ಭಾರತೀಯ ಮಧ್ಯಮ ವರ್ಗದವರ ಅವಶ್ಯಕತೆಗಳಿಗೆ ಅನುಗುಣವಾಗಿ ಕಾದಂಬರಿ ಪ್ರಕಾರ ಹುಟ್ಟಿಕೊಂಡಿತು. ಗಮನ ಸೆಳೆಯದ ಸ್ತ್ರೀಯರ ಜೀವನವೂ ಅನೇಕ ಬದಲಾವಣೆಗಳಿಗೆ ಒಳಗಾಯಿತು. ಪುರುಷರಂತೆ ಸ್ವಾತಂತ್ರ್ಯ ಪಡೆಯದ ಹೆಣ್ಣು ಮನೆಗೆ ಬಂಧಿತಳಾಗಿ ವಿರಾಮಕಾಲದಲ್ಲಿ ಓದಲು ಆರಂಭಿಸಿದಳು. ಸ್ತ್ರೀಯರ ಈ ಅಗತ್ಯವನ್ನು ಕಾದಂಬರಿ ಪ್ರಕಾರ ಪೂರೈಸಿತು. ಅಲ್ಲದೆ ಸ್ತ್ರೀ ಕೇಂದ್ರಿತವೂ ಆಗಿ ಸಮಾಜದ ಸ್ತ್ರೀಯರ ಸ್ಥಾನಮಾನ, ಬದುಕಿನ ಅನುಭವ, ಸಂಬಂಧಗಳನ್ನು ವೈಭವೀಕರಿಸಿತು.

ಆ ಕಾಲದಲ್ಲಿ ಚರ್ಚೆಗೊಳಗಾಗಿದ್ದ ಸ್ತ್ರೀಯರ ವಿಷಯಕ್ಕೆ ಸಂಬಂಧಿಸಿದಂತೆ ಸ್ತ್ರೀ ಧರ್ಮನೀತಿ ಬೋಧಿಸುವ ಕೈಪಿಡಿಗಳೂ ಕಾದಂಬರಿಗಳೂ ಒಂದಕ್ಕೊಂದು ಪೂರಕವಾಗಿ ಹುಟ್ಟಿಕೊಂಡವು. ಅದ್ಭುತ ರಮ್ಯ ಕಥಾನಕಗಳಿಂದ ಕೌಟುಂಬಿಕ ಮತ್ತು ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಕಾದಂಬರಿಗಳು ಹುಟ್ಟಿಕೊಂಡು ಸ್ತ್ರೀಯರ ಅವಶ್ಯಕತೆಗೆ ಅನುಗುಣವಾಗಿ ಪರಿವರ್ತನೆಗೊಳ್ಳ ತೊಡಗಿದವು.

ಭಾರತೀಯ ಕಾದಂಬರಿಗಳು ಅದುವರೆಗೂ ಭಕ್ತಿ ಮತ್ತು ಅದ್ಭುತ ರಮ್ಯ ಕಥಾನಕಗಳನ್ನು ವಿವರಿಸುತ್ತಿದ್ದು ಇಂಗ್ಲಿಷ್ ನಾವೆಲ್‌ನ ಪ್ರಭಾವದಿಂದ ಹೊಸ ರೂಪ ಪಡೆದವು. ಸಮಾಜದಲ್ಲಿರುವ ವಾಸ್ತವಿಕತೆಯನ್ನು ಕಾದಂಬರಿಗಳಲ್ಲಿ ಚಿತ್ರಿಸಲು ಪ್ರಯತ್ನಿಸಿದರು. ಆರಂಭದಲ್ಲಿ ಪಾಶ್ಚಾತ್ಯರ ನಾವೆಲ್‌ನಿಂದ ಪ್ರೇರಿತಗೊಂಡು ಅನೇಕ ಸಾಮಾಜಿಕ ಕಾದಂಬರಿಗಳು ಕನ್ನಡ-ತೆಲುಗಿನಲ್ಲಿ ಪ್ರಕಟಗೊಂಡವು. ವಾಗ್ದೇವಿ, ಅಹಲ್ಯಾಬಾಯಿ, ರಾಜಶೇಖರ ಚರಿತ್ರೆ ಮೊದಲಾದ ಕಾದಂಬರಿಗಳಲ್ಲಿ ವರ್ಣನೆಗೊಂಡ ಸ್ತ್ರೀಯ ಜೀವನ ವಿಧಾನ ಭಾರತೀಯ ಮಹಿಳೆಯರ ವಾಸ್ತವ ಸ್ಥಿತಿಗತಿಗಳನ್ನು ಕಟ್ಟಿಕೊಟ್ಟವು.

"ಮನುಷ್ಯನ ಜೀವನ ವಿಧಾನ ಬದಲಾವಣೆ ಆದಂತೆಲ್ಲ ಅವನಿಗರಿವಿಲ್ಲದ ಹಾಗೆ ಆಧುನಿಕತೆ ಅವನ ಜೀವನದಲ್ಲಿ ಪ್ರವೇಶಿಸುವಂತಾಗುತ್ತದೆ. ಇದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಬದಲಾವಣೆಗೆ ಒಳಗಾಗುವುದರ ಮೂಲಕ ಆಧುನಿಕತೆಯನ್ನು ಅನುಭವಿಸಿರುತ್ತಾನೆ. ಸಾಹಿತಿ ಅದನ್ನು ತನ್ನ ಬರವಣಿಗೆಯಲ್ಲಿ ಹಿಡಿದಿಡುವ ಪ್ರಯತ್ನ ಮಾಡುತ್ತಾನೆ. ಹೊಸ ಆಲೋಚನಾ ವಿಧಾನ, ಸಮಾಜ ಸುಧಾರಣಾ ಸಂಗತಿಗಳು, ಚಿಂತನಧಾರೆಗಳು ಬದುಕನ್ನು ಸ್ಥಿತ್ಯಂತರಗೊಳಿಸುತ್ತಿರುತ್ತವೆ. ಈ ನಿಟ್ಟಿನಲ್ಲಿ ವ್ಯಕ್ತಿಯು ಬೇಡವಾದದ್ದನ್ನು ನಿರಾಕರಿಸುತ್ತಾ, ಬೇಕಾದುದ್ದನ್ನು ಸ್ವೀಕರಿಸುತ್ತಾ ಜೀವಿಸುತ್ತಾನೆ" ಎಂದು ಜಿ.ಆರ್. ತಿಪ್ಪೇಸ್ವಾಮಿ ಹೇಳುತ್ತಾರೆ(೨೦೧೦:೫).

ಹೊಸ ವಿಚಾರಗಳಿಂದ ಪ್ರೇರಿತನಾದ ಲೇಖಕ ಜನತೆಯ ಪ್ರತಿನಿಧಿಯಾಗಿರುತ್ತಾನೆ. ಅವನಿಂದ ಸೃಷ್ಟಿಯಾದ ಸಾಹಿತ್ಯವೂ ಜನಜೀವನದ ಪ್ರತಿನಿಧಿಸುವುದಲ್ಲದೆ ಭವಿಷ್ಯತ್ತಿನ ಮಾರ್ಗದರ್ಶಿಯೂ ಆಗುತ್ತದೆ. ಸಾಹಿತ್ಯಕ್ಕೆ ಜನ ಜೀವನ ಪ್ರೇರಕ ಶಕ್ತಿಯಾಗುವಂತೆ ಜನ ಜೀವನಕ್ಕೆ ಸಾಹಿತ್ಯ ಪ್ರಚೋದಕ ಶಕ್ತಿಯಾಗುತ್ತದೆ ಎಂಬ ಕುವೆಂಪು ಅಭಿಪ್ರಾಯವನ್ನು ರಹಮತ್ ತರೀಕೆರೆ ಉಲ್ಲೇಖಿಸಿರುವುದು ಪ್ರಸ್ತುತವಿದೆ(೨೦೦೧:೪೯).

ಪ್ರಸ್ತುತ ಅಧ್ಯಯನದ ಸಾಂಪ್ರದಾಯಿಕ ಮತ್ತು ಆಧುನಿಕ ಪರಿಕಲ್ಪನೆಗಳು

ಸಾಮಾಜಿಕ ನಿಯಮಗಳು ಮತ್ತು ಪ್ರಾಕೃತಿಕ ನಿಯಮಗಳು ಇವು ಮೇಲುನೋಟಕ್ಕೆ ಒಂದೇ ಎಂಬಂತೆ ಕಂಡುಬರುತ್ತದೆ. ಆದರೆ ಇವೆರಡು ಬೇರೆ ಬೇರೆ ಎಂಬುದು ಸೂಕ್ಷ್ಮವಾಗಿ ಗಮನಿಸಿದಾಗ ಕಂಡುಬರುವ ಅಂಶವಾಗಿದೆ. ಸಾಮಾಜಿಕ ನಿಯಮಗಳು ಮಾನವ ಸಂಘಜೀವಿಯಾಗಿ ಕಾಲದಿಂದ ಕಾಲಕ್ಕೆ ರೂಪಿಸಿಕೊಂಡ ಜೀವನ ಮೌಲ್ಯಗಳನ್ನು ಒಳಗೊಂಡಿವೆ. ಇವು ಕಾಲದಂತೆ ಬದಲಾಗುತ್ತ ಬಂದಿವೆ. ಈ ಸಾಮಾಜಿಕ ಮೌಲ್ಯಗಳು ಪ್ರಾಕೃತಿಕ ನಿಯಮಗಳಿಗೆ ಹೊರತಾದುದಲ್ಲ. ಮಾನವ ಮೀರಲಾಗದ ಪ್ರಾಕೃತಿಕ ನಿಯಮಗಳನ್ನು ಸಾಮಾಜಿಕ ನಿಯಮಗಳನ್ನಾಗಿ ಮಾರ್ಪಾಡು ಮಾಡಿಕೊಳ್ಳುವಾಗ ತನಗೆ ಅನುಕೂಲವಾಗುವಂತೆ ಕೆಲವನ್ನು ಉಳಿಸಿಕೊಂಡು, ಕೆಲವನ್ನು ಮಾರ್ಪಡಿಸಿಕೊಂಡಿರುವುದನ್ನೂ ಕಾಣಬಹುದು. ಹಾಗಾಗಿ ಪ್ರಾಕೃತಿಕ ನಿಯಮಗಳನ್ನು ಆಧರಿಸಿದ

ಮತ್ತು ಸೂಕ್ತವಾಗಿ ಒಳಗೊಂಡ ಸಾಮಾಜಿಕ ನಿಯಮಗಳು ಜೀವನ ಮೌಲ್ಯಗಳಾಗಿ ಒಪ್ಪಿತವಾಗುತ್ತವೆ. ಉದಾಹರಣೆಗೆ- ಸ್ತ್ರೀ-ಪುರುಷ ಪರಸ್ಪರಾವಲಂಬಿ ಎಂಬ ಪ್ರಾಕೃತಿಕ ನಿಯಮವನ್ನನುಸರಿಸಿ ವಿವಾಹ ಪದ್ಧತಿ, ಕುಟುಂಬ, ಸಾವಿನ ಆಚರಣೆಗಳು, ಮುಟ್ಟಿನ ಆಚರಣೆಗಳು ಮುಂತಾದ ಸಾಮಾಜಿಕ ಸಂಸ್ಥೆಗಳನ್ನು ರೂಪಿಸಿ ಆಚರಿಸಿಕೊಂಡು ಬಂದಿದ್ದನ್ನು ಕಾಣಬಹುದು. ಇದನ್ನೆ ಸಮಾಜಶಾಸ್ತ್ರ ಎಲ್ಲಾ ಜನಾಂಗಗಳ, ಪ್ರದೇಶಗಳ ಸಮಾಜಗಳನ್ನು ಅಧ್ಯಯನ ಮಾಡುವ ಮೂಲಕ ಗುರುತಿಸಿದೆ. ಇಂತಹ ಪ್ರತಿಯೊಂದು ಸಾಮಾಜಿಕ ಸಂಸ್ಥೆಯ ರಚನೆಯೊಂದಿಗೆ ಕೆಲವು ಕಟ್ಟುಪಾಡುಗಳನ್ನು ವಿಧಿಸುವ ಮೂಲಕ ಪ್ರತಿಯೊಂದು ಸಮಾಜ ತನ್ನದೇ ನೈತಿಕತೆಯನ್ನೂ ಮೌಲ್ಯವನ್ನೂ ಕಟ್ಟಿಕೊಂಡು ಬಂದಿದೆ. ಕಾಲಾನುಗತಿಯಲ್ಲಿ ಬದಲಾಗುವ ಈ ಕ್ರಮದೊಳಗೆ ಸಾಮಾಜಿಕ ಜೀವನ ಮೌಲ್ಯಗಳ ಉದ್ದೇಶ, ವಿಧಾನ ಮತ್ತು ರಾಜಕೀಯ ಅಂಶಗಳೂ ಸೇರಿಕೊಂಡಿರುತ್ತವೆ. ಉದಾಹರಣೆಗೆ ಸಮಾಜದ ಆರಂಭದ ಕಾಲಘಟ್ಟದಲ್ಲಿ ರೂಪುಗೊಂಡಿದ್ದ ಬಹುಪತ್ನಿತ್ವ ಮತ್ತು ಬಹುಪತಿತ್ವ ವಿವಾಹ ಪದ್ಧತಿಗಳು ಕಾಲಾಂತರದಲ್ಲಿ ಏಕಪತಿ, ಏಕಪತ್ನಿ ವಿವಾಹ ಪದ್ಧತಿಯಾಗಿ ರೂಪುಗೊಂಡಿದ್ದನ್ನು ಕಾಣಬಹುದು. ಆರಂಭ ಕಾಲದ ಬಹುಪತ್ನಿತ್ವ-ಬಹುಪತಿತ್ವ ಪದ್ಧತಿ ಪ್ರಾಕೃತಿಕ ನಿಯಮದ ನಿಕಟವರ್ತಿಯಾಗಿದ್ದ ಆ ಕಾಲದ ಸಂಕೇತವಾಗಿ ಇದ್ದರೆ, ನಂತರದ ವಿವಾಹ ಪದ್ಧತಿ ಕ್ರಮ ಸ್ತ್ರೀ-ಪುರುಷರು ಪರಸ್ಪರ ಒಬ್ಬರ ಮೇಲೆ ಒಬ್ಬರು ಮೇಲುಗೈ ಸಾಧಿಸುವ ರಾಜಕೀಯ ಉಪಾಯವಾಗಿ ಮೈತಳೆದಂತೆ ಇದೆ. ಇದು ನಂತರದ ಕಾಲಕ್ರಮದಲ್ಲಿ ಪುರುಷ ಪ್ರಧಾನತೆಯೂ ಸ್ತ್ರೀಯ ಅಧೀನತೆಯೂ ಸಾಮಾಜಿಕ ಜೀವನ ಮೌಲ್ಯವಾಗಿ ರೂಪುಗೊಂಡಂತೆ ಕಾಣುತ್ತದೆ. ಆ ನಂತರದ ಸಾಮಾಜಿಕ ಬೆಳವಣಿಗೆಗಳಲ್ಲಿ ರೂಪುತಳೆದ ಕಟ್ಟುಪಾಡುಗಳೆಲ್ಲ ಪುರುಷರಿಗೆ ಅನುಕೂಲಕರವಾಗಿಯೂ ಸ್ತ್ರೀಯರಿಗೆ ವಿಧಿ-ನಿಷೇಧಗಳಾಗಿಯೂ ಮಾರ್ಪಟ್ಟಿರುವಂತೆ ತೋರುತ್ತದೆ.

ಇದು ಸಾಮಾಜಿಕ ಜೀವನದ ಮೇಲೆ ಮೇಲುಗೈ ಸಾಧಿಸುವ ಕ್ರಮವೂ ಇಂತಹ ಕಾರ್ಯಸ್ವರೂಪದಲ್ಲಿ ತೊಡಗಿಸಿಕೊಳ್ಳುವ ಪುರುಷಪರ ಮನೋವೃತ್ತಿಯೂ ಆಗಿದೆ. ಹಾಗಾಗಿದು ಸಾಮಾಜಿಕ ಜೀವನ ಮೌಲ್ಯಗಳ ಒಳಚಲನೆಯ ಭಾಗವಾಗುತ್ತದೆ, ಅಲ್ಲದೆ ನಿಷೇಧಗಳಿಂದ ಸುತ್ತುವರೆಯಲು ಕಾರಣವಾಗುತ್ತದೆ. ತನ್ನನ್ನು ತಾನೇ ಕಾಪಾಡಿಕೊಳ್ಳುವ ಧೋರಣೆಯನ್ನಿದು ಅನುಸರಿಸಿಕೊಂಡು ಬಂದ ಫಲವಾಗಿ ಜಡ ಸ್ವರೂಪವನ್ನೂ ಪಡೆದುಕೊಂಡಿದೆ. ಅದಕ್ಕಾಗಿ ವಿವೇಕದ ಬದಲು ತಾರತಮ್ಯ ನೀತಿಯನ್ನು ಜಾಣಮರೆವಿನ ರೀತಿಯಲ್ಲಿ ಮೆರೆದಿದೆ. ಇದಕ್ಕೆ ಪೂರಕವಾಗಿ ಜೀವನದ ಕೆಲವು ನಂಬಿಕೆಗಳನ್ನು ಪ್ರಶ್ನೆ ಮಾಡಲಾಗದಂತಹ ಮತ್ತು ಬದಲಾಗದಂತಹ ಮೂಢನಂಬಿಕೆಗಳಾಗಿ ಬೆಳೆಸಿದನ್ನು ನೋಡಬಹುದು. ಮಾನವನ ಹಿತಾಹಿತ ಕಾಪಾಡುವ ದೃಷ್ಟಿಯಿಂದ ರಚನೆಗೊಂಡ ಸಾಮಾಜಿಕ ಸಂಸ್ಥೆಗಳು ಕ್ರಮೇಣ ಕುರುಡಾಗಿ ಸ್ವಹಿತಾಸಕ್ತಿಯನ್ನು ಮುಂದುಮಾಡಿಕೊಂಡುಬಿಟ್ಟಿವೆ. ಇದರಿಂದ ನೊಂದವರು ಕರ್ಮ ಸಿದ್ಧಾಂತದ ಅಡಿಯಲ್ಲಿ ಅಂಚಿಗೆ

ತಳ್ಳುವಂತಾದರು. ಸಂಪ್ರದಾಯಗಳು, ಪದ್ಧತಿಗಳು, ರೂಢಿಗತ ಆಚರಣೆಗಳು, ಕಟ್ಟುಪಾಡುಗಳು, ವಿಧಿನಿಷೇಧಗಳು, ವೈಭವೀಕರಣಕ್ಕೆ ಒಳಗಾಗುತ್ತಾ ಸಾಗಿದಂತೆ ಅದರ ಅಮಾನವೀಯ ಕ್ರೌರ್ಯರೂಪವನ್ನು ಸಮರ್ಥಿಸುವ ಕಾರ್ಯವೂ ಜೊತೆಯಲ್ಲೇ ನಡೆಯಿತು. ಈ ಬಗೆಯ ಸಾಮಾಜಿಕ ಜೀವನ ಮೌಲ್ಯಗಳು ಸುಧಾರಣಾ ವಿರೋಧಿ ಪರಿವರ್ತನಾ ವಿರೋಧಿ ನಿಲುವನ್ನು ತನ್ನ ಅಂತರಂಗದಲ್ಲೇ ಇರಿಸಿಕೊಂಡವು. ಈ ಮೂಲಕವೇ ತನ್ನ ಸಂಸ್ಕೃತಿಯ ವಿಶಿಷ್ಟತೆಯನ್ನು, ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರತಿಪಾದನಾ ನಿಲುವು ತಳೆಯಿತು. ಇದರಿಂದ ಕಪಟತನ, ಸ್ವಹಿತಾಸಕ್ತಿ, ಲಿಂಗಭೇಧ, ಜಾತಿಭೇದ ಪದ್ಧತಿಗಳೂ ಅವುಗಳ ಕಟ್ಟುಗ್ರ ಆಚರಣೆಯೂ ಯಜಮಾನ ಸಂಸ್ಕೃತಿಯ ಹಿತಾಸಕ್ತಿಯನ್ನೆ ಸಾಮಾಜಿಕ ಜೀವನ ಮೌಲ್ಯದ ಗುಣಸ್ವರೂಪವನ್ನಾಗಿ ಮಾಡಿದೆ. ಈ ಅಂಶ ಭಾರತದ ಹಿಂದೂ ಸಮಾಜದ ಜೀವನ ಮೌಲ್ಯಗಳಿಗೂ ಅನ್ವಯವಾಗುತ್ತವೆ. ಮಾತ್ರವಲ್ಲದೆ ಇದರ ಪರಿಣಾಮವಾಗಿ ಸುಧಾರಣಾ ಚಳವಳಿ ಭಾರತದ ಹಿಂದೂ ಸಮಾಜದಲ್ಲಿ ಬೇರೂರಿದ್ದನ್ನು ಕಾಣಬಹುದು.

ಇಂತಹ ಸಾಮಾಜಿಕ ಜೀವನ ಮೌಲ್ಯಗಳು ಬೇರೂರಿದ್ದ ಕನ್ನಡ-ತೆಲುಗು ಭಾಷಾ ಸಂಸ್ಕೃತಿಯನ್ನೊಳಗೊಂಡ ಇಡೀ ಭಾರತೀಯ ಸಮಾಜ ಪುರುಷಪ್ರಧಾನ ಸಮಾಜವಾಗಿ ಸನಾತನ ಕಾಲದಿಂದಲೂ ಬೆಳೆದುಬಂದಿತ್ತು. ಇದರ ಅಂಗವಾಗಿ ಪುರುಷ ಪ್ರಧಾನ ಲಿಂಗವಾಗಿಯೂ ಸ್ತ್ರೀ ಅಧೀನ ಲಿಂಗವಾಗಿಯೂ ರೂಪ ತಳೆದಿದ್ದವು. ಪುರುಷಪ್ರಧಾನ ಸಮಾಜದ ಜೀವನ ಮೌಲ್ಯಗಳು, ಸಾಮಾಜಿಕ ಜೀವನ ಪದ್ಧತಿಗಳು, ಸಂಪ್ರದಾಯಗಳು, ಆಚಾರ-ವಿಚಾರ ನಿಷೇಧ ಮುಂತಾದ ಅಂಶಗಳು ಪುರುಷ ಪರವಾಗಿದ್ದವು. ಇದರಿಂದಾಗಿ ಇವೆಲ್ಲವೂ ಕಾಲಾನುಕ್ರಮದಲ್ಲಿ ಹೆಣ್ಣಿನ ಹುಟ್ಟಿನಿಂದ ಬಂದ ಜೀವಿತದ ಹಕ್ಕನ್ನು ಕಸಿದುಕೊಳ್ಳುವ ಸ್ವರೂಪ ಪಡೆದುಕೊಂಡು ಅವಳ ಮೇಲೆ ಹೇರಲಾಯಿತು. ಇದು ಪರಂಪರೆಯ ಚೌಕಟ್ಟಿನಲ್ಲಿ ತನ್ನ ನಿಲುವನ್ನು ಪ್ರತಿಪಾದಿಸುವ ಸ್ವರೂಪ ಪಡೆದುಕೊಂಡು ಪ್ರಶ್ನೆ ಮಾಡಲು ಸಾಧ್ಯವಿಲ್ಲದ ಸ್ಥಿತಿ ಏರ್ಪಟ್ಟಿತ್ತು. ಈ ಪಾರಂಪರಿಕ ನಿಲುವನ್ನು ಪ್ರಸ್ತುತ ಅಧ್ಯಯನದಲ್ಲಿ ಸಂಪ್ರದಾಯ ಎಂಬ ನಿರ್ದಿಷ್ಟ ಪರಿಕಲ್ಪನೆಯಾಗಿ ಕಟ್ಟಿಕೊಳ್ಳಲಾಗಿದೆ. ಇದು ಸಾಮಾಜಿಕ ಜೀವನ ಮೌಲ್ಯಗಳು ರೂಪ ತಳೆದ ಒಂದು ಬಗೆಯಾಗಿದೆ.

ಪ್ರಾಕೃತಿಕ ನಿಯಮಗಳನ್ನು ದಮನ ಮಾಡುವ ಅಥವಾ ನಿರಾಕರಣೆ ಮಾಡುವ ಸಾಮಾಜಿಕ ನಿಯಮಗಳು ಹಲವು ಬಗೆಯ ಸಮಸ್ಯೆಗಳನ್ನು ಹುಟ್ಟುಹಾಕುತ್ತವೆ. ಅವನ್ನು ಸಾಮಾಜಿಕ ಪಿಡುಗು ಅಥವಾ ಸಮಸ್ಯೆಗಳಾಗಿ ಗುರುತಿಸಲಾಗುತ್ತದೆ. ಅವನ್ನು ಪರಿವರ್ತನೆಗೆ ಒಳಪಡಿಸಲು ಅಗತ್ಯವಾದ ಒತ್ತಡವೂ ಉಂಟಾಗುತ್ತದೆ. ಮಾನವನ ಹಿತಾಹಿತವನ್ನು ಲಕ್ಷಿಸಿ ಕೆಲವು ಸಾಮಾಜಿಕ ಜೀವನ ಮೌಲ್ಯಗಳು ಇದರಿಂದ ಪರಿವರ್ತನೆಗೆ ಒಳಗಾಗುತ್ತವೆ. ಇವು ಹೊರಜಲನೆಯ ರೂಪದಲ್ಲಿ ಇರುತ್ತವೆ. ಮಾನವನ ಪ್ರಾಕೃತಿಕ ನಿಯಮಗಳಿಗೆ ಅನುಗುಣವಾಗಿ ಇಂತಹ ಮೌಲ್ಯಗಳು ಹೊಸ ರೂಪ

ಪಡೆಯಲು ಸದಾ ಮುಕ್ತ ಸ್ಥಿತಿಯಲ್ಲಿರುತ್ತವೆ. ಸಾಮಾಜಿಕ ವಿವೇಕವನ್ನು ತನ್ನ ಪ್ರಜ್ಞೆಯ ಕೇಂದ್ರ ಬಿಂದುವನ್ನಾಗಿ ಹೊಂದಿರುತ್ತವೆ. ಸದಾ ಕ್ರಿಯಾಶೀಲವಾಗಿ, ಸಮಾಜದ ಎಲ್ಲ ಆಗು–ಹೋಗುಗಳನ್ನು ಗಮನಿಸುತ್ತಿರುತ್ತವೆ. ಅದಕ್ಕೆ ಅನುಗುಣವಾಗಿ ತನ್ನ ನೀತಿ–ನಿರೂಪಣೆ, ಆಚಾರ–ವಿಚಾರ, ಕಟ್ಟು–ಕಟ್ಟಳೆಗಳನ್ನು ಎಲ್ಲ ಕಾಲಕ್ಕೂ ಸುಧಾರಿಸಿಕೊಳ್ಳುತ್ತಲೇ ಇರುತ್ತವೆ. ಸಾಮಾಜಿಕ ನಿಯಮಗಳೆಲ್ಲ ಮಾನವನಿಂದ, ಮಾನವನಿಗಾಗಿ, ಮಾನವನಿಗೋಸ್ಕರ ರಚಿತವಾದವು ಎಂಬ ದೃಷ್ಟಿಯನ್ನು ಇಟ್ಟುಕೊಂಡು ಮಾನವ ವಿರೋಧಿ ಅಥವಾ ಜೀವ ವಿರೋಧಿ ನಿಯಮಗಳನ್ನು ಸದಾ ತಿದ್ದುಪಡಿಗೆ ಒಳಪಡಿಸಲು ಸಿದ್ಧವಾಗಿರುತ್ತವೆ. ಆತ್ಮ ನಿರೀಕ್ಷಣೆ ಮತ್ತು ಮುಕ್ತ ಸ್ವರೂಪವನ್ನು ಪಡೆದುಕೊಂಡ ಇಂತಹ ಸಾಮಾಜಿಕ ಮೌಲ್ಯಗಳು ಸಮಾಜದಲ್ಲಿ ವೈಜ್ಞಾನಿಕ ದೃಷ್ಟಿಕೋನ, ವೈಚಾರಿಕ ನಿಲುವು, ತರ್ಕ ಶುದ್ಧತೆ, ಮಾನವೀಯ ನೆಲೆಗಟ್ಟು, ತಾರತಮ್ಯರಹಿತ ದೃಷ್ಟಿಕೋನ ಮೊದಲಾದ ಅಂಶಗಳನ್ನು ಬೆಳೆಸಲು ಪ್ರೇರಣೆ ನೀಡುತ್ತವೆ. ಮಾನವನಿಗೆ ಆಜನ್ಮವಾಗಿ ಸಿದ್ಧಸ್ಥಿತಿಯಲ್ಲಿ ಒದಗಿಬಂದ ತನ್ನ ಹಕ್ಕು, ಸ್ವಾತಂತ್ರ್ಯ, ಘನತೆ, ಗೌರವಗಳನ್ನು ಕಾಪಾಡುವಲ್ಲಿ ಸದಾ ತುಡಿಯುತ್ತಿರುತ್ತವೆ. ಈ ಕಾರ್ಯ ಸ್ವರೂಪದಲ್ಲಿ ಲಿಂಗಭೇದ, ಜಾತಿಭೇದ, ವರ್ಗಭೇಧ, ಜನಾಂಗಭೇದ, ಸಮುದಾಯ ಭೇದ, ಧರ್ಮಭೇದ ಮುಂತಾದ ಎಲ್ಲ ಭೇದಗಳಾಚೆಗೆ ತುಡಿಯುತ್ತ ಮಾನವ ಕೇಂದ್ರಿತ ಆಸಕ್ತಿಯನ್ನು ಸ್ಥಾಪಿಸುತ್ತವೆ. ಇದನ್ನು ಸಾಧಿಸಲು ಜಗತ್ತಿನ ಯಾವುದೇ ಮೂಲೆಯಿಂದ ವೈಚಾರಿಕ, ನೈತಿಕ, ರಾಜಕೀಯಾತ್ಮಕ, ತಾತ್ವಿಕ ಪ್ರೇರಣೆ ಪಡೆಯಲು ಮತ್ತು ಸಮಕಾಲೀನ ಸಮಾಜದ ಸಮಸ್ಯೆಗಳನ್ನು ತೊಡೆಯಲು ಜಾಗರೂಕವಾಗಿರುತ್ತವೆ. ಒಟ್ಟಿನಲ್ಲಿ ಮಾನವ ಒಳಿತನ್ನು ಸಾಧಿಸುವ ಗುರಿಯನ್ನು ಹೊಂದಿದ ಇಂತಹ ಸಾಮಾಜಿಕ ಜೀವನ ಮೌಲ್ಯಗಳು ಇದುವರೆಗೂ ಪಾಲಿಸಿಕೊಂಡು ಬಂದ ಕಟ್ಟುಪಾಡುಗಳ ಬಗ್ಗೆ ವಿರೋಧವಾಗಲಿ, ಒಲುಮೆಯಾಗಲಿ ತಾಳದೆ ಅವುಗಳ ಇತಿ–ಮಿತಿಯನ್ನು ಗುರುತಿಸುವಲ್ಲಿ ಶಕ್ತವಾಗಿರುತ್ತವೆ.

ಇಂತಹ ಮನೋವೃತ್ತಿ ಯುರೋಪಿನಲ್ಲಿ ನಡೆದ ಪುನರುಜ್ಜೀವನ, ವೈಜ್ಞಾನಿಕ ಬೆಳವಣಿಗೆ, ಮಾನವಾಸಕ್ತಿ ಕೇಂದ್ರಿತ ಚಿಂತನೆ, ಮತ್ತು ಸೆಕ್ಯೂಲರ್ ಮನೋಭಾವನೆ ದಟ್ಟವಾಗಿ ಬೆಳೆಯಲು ಕಾರಣವಾಯಿತು. ಭಾರತವನ್ನು ತಮ್ಮ ವಸಾಹತುವನ್ನಾಗಿ ಮಾಡಿಕೊಂಡ ಯುರೋಪಿಯನ್ನರು, ಪುನರುಜ್ಜೀವನ ಫಲಿತಗಳನ್ನು ಹೊತ್ತು ಬಂದಿದ್ದರು. ಯೂರೋಪಿನ್ನರಿಗೆ ತಮ್ಮ ಜೀವನ ವಿಧಾನ ಭಾರತದ ಜೀವನ ವಿಧಾನಕ್ಕಿಂತ ಹೆಚ್ಚು ನಾಗರಿಕವೂ ಸುಸಂಸ್ಕೃತವೂ ಆಗಿ ಕಂಡುಬಂದಿತ್ತು. ಈ ಅಂಶವನ್ನು ಭಾರತದಲ್ಲಿ ತಮ್ಮ ಆಳ್ವಿಕೆ ಭದ್ರಪಡಿಸಿಕೊಳ್ಳುವ ರಾಜಕೀಯ ಉಪಾಯವಾಗಿಯೂ ಬಳಸಿಕೊಂಡರು. ಇದಕ್ಕೆ ಪೂರಕವಾಗಿ ಭಾರತದಲ್ಲಿ ಅಂದು ಪರದಾ ಪದ್ಧತಿ, ಸಹಗಮನ ಪದ್ಧತಿ, ಬಾಲ್ಯ ವಿವಾಹ ಪದ್ಧತಿ, ವಿಧವೆಯರ ಸಮಸ್ಯೆ, ವರದಕ್ಷಿಣೆ ಪದ್ಧತಿ, ಸ್ತ್ರೀಯರ ನಿರಕ್ಷರತೆ ಮುಂತಾದ ಹಲವಾರು ಸಮಸ್ಯೆಗಳು ಬೇರುಬಿಟ್ಟಿದ್ದವು. ಭಾರತೀಯರನ್ನು ಹೆಚ್ಚು ನಾಗರಿಕರನ್ನಾಗಿ ಮಾಡುವ ಪ್ರಯತ್ನದಲ್ಲಿ ಬ್ರಿಟಿಷರು ಭಾರತೀಯ ಹೆಣ್ಣು ಎದುರಿಸುತ್ತಿದ್ದ ಸಮಸ್ಯೆಗಳಿಗೆ ಪರಿಹಾರಾರ್ಥವಾಗಿ

ಹೊಸ ಕಾನೂನುಗಳನ್ನು ಜಾರಿಗೆ ತಂದರು. ಅವನ್ನು ನಿಜವಾದ ಅರ್ಥದಲ್ಲಿ ಜಾರಿಗೆ ತರಲು ಮತ್ತು ದೇಶೀಯ ಜನತೆ ತಮ್ಮ ಆಡಳಿತವನ್ನು ಮಾನ್ಯತೆ ಮಾಡುವಂತೆ ಮಾಡಲು ಸಮಾಜ ಸುಧಾರಕ ಚಿಂತಕರನ್ನು ಪ್ರೋತ್ಸಾಹಿಸಿ ಬೆಂಬಲಿಸಿದರು. ಇದರ ಪರಿಣಾಮವಾಗಿ ಭಾರತದಲ್ಲಿ ಸಮಾಜ ಸುಧಾರಣೆಯ ಹೊಸ ಗಾಳಿ ಬೀಸತೊಡಗಿತು. ಭಾರತೀಯ ಸಮಾಜ ಹೆಣ್ಣಿನ ಸ್ಥಿತಿಗತಿಗಳ ಕುರಿತು ಆಲೋಚಿಸುವಂತೆ ಮಾಡಿತು ಮತ್ತು ಉನ್ನತ ಸ್ಥಿತಿಗೆ ತರುವ ನಿಲುವನ್ನು ಬೆಂಬಲಿಸುವಂತೆ ಮಾಡಿತು. ಭಾರತೀಯ ಹೆಣ್ಣಿನ ಸ್ಥಿತಿ-ಗತಿ ಮತ್ತು ಭಾರತೀಯ ನಾಗರಿಕತೆಯ ಉನ್ನತಿ ಪರಸ್ಪರ ತಳುಕು ಹಾಕಿಕೊಂಡ ಪರಿಣಾಮವಾಗಿ ಹೆಣ್ಣು ಸಮಾಜ ಸುಧಾರಣೆಯ ಕೇಂದ್ರ ಬಿಂದುವಾದಳು. ಅಧೀನ ಲಿಂಗವಾದ ಹೆಣ್ಣಿನ ಜೀವಿತದ ಹಕ್ಕನ್ನು ಪ್ರತಿಪಾದಿಸುವ ಇಂಥ ಅಂಶಗಳು ಆಧುನಿಕತೆಯ ರೂಪ ಪಡೆದುಕೊಂಡವು. ಇವನ್ನೆ ಆಧುನಿಕ ಪರಿಕಲ್ಪನೆಯಾಗಿ ಕಟ್ಟಿಕೊಳ್ಳಲಾಗಿದೆ.

ಇದರ ಪರಿಣಾಮವಾಗಿ ತೆಲುಗು ಮತ್ತು ಕನ್ನಡ ಸಾಹಿತ್ಯದ ಆರಂಭಿಕ ಕಾದಂಬರಿಗಳಲ್ಲೂ ಸ್ತ್ರೀಯರ ಸಮಸ್ಯೆ ಮುಖ್ಯ ವಸ್ತುವಾಗಿರುವುದನ್ನು ಕಾಣಬಹುದು. ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ಈ ಎರಡೂ ಭಾಷೆಗಳ ಆರಂಭಿಕ ಕಾಲದ ಹತ್ತು ಸಾಮಾಜಿಕ ಕಾದಂಬರಿಗಳನ್ನು ಈ ಮೇಲಿನ ಕಲ್ಪನೆಗಳಿಂದ ಅಧ್ಯಯನ ಮಾಡಲಾಗುವುದು. ಈ ಹಿನ್ನೆಲೆಯಲ್ಲಿ ಈ ಎರಡೂ ಕಲ್ಪನೆಗಳು ಎದುರು-ಬದುರಾದ ಸ್ಥಿತಿಯಲ್ಲಿನ ಸಂಘರ್ಷ, ಅನುಸಂಧಾನ ಮೊದಲಾದ ಸಂಧಿ ಕಾಲದ ಸ್ಥಿತ್ಯಂತರಗಳನ್ನು ಚರ್ಚೆ ಮಾಡಲಾಗುವುದು. ಹಾಗೆಯೇ ಸ್ತ್ರೀಯ ಸ್ಥಾನಮಾನಗಳಲ್ಲಿ ಉಂಟಾದ ಬದಲಾವಣೆಯ ಸ್ವರೂಪವನ್ನೂ ಪ್ರಮಾಣವನ್ನೂ ಮತ್ತು ಇತಿಮಿತಿಗಳನ್ನು ಅಧ್ಯಯನಕ್ಕೆ ಆರಿಸಿಕೊಂಡ ಕೃತಿಗಳ ವ್ಯಾಪ್ತಿಯಲ್ಲಿಯೇ ಗಮನಹರಿಸಲಾಗುವುದು.

ಅಧ್ಯಾಯ ೩

ಕನ್ನಡ ತೆಲುಗು ಆರಂಭಿಕ ಕಾದಂಬರಿಗಳು ಮತ್ತು ಸಮಕಾಲೀನ ಸ್ಥಿತಿಗತಿಗಳು

ಸಮಕಾಲೀನ ಸಾಮಾಜಿಕ ಸ್ಥಿತಿಗತಿಗಳು

ಸಾಂಸ್ಕೃತಿಕ ಸ್ಥಿತಿಗತಿಗಳು

ಕನ್ನಡದ ಸಂದರ್ಭ

ತೆಲುಗು ಸಂದರ್ಭ

ಕನ್ನಡ ಕೃತಿಗಳು

ತೆಲುಗು ಕೃತಿಗಳು

ಅಧ್ಯಾಯ ೩

ಕನ್ನಡ ತೆಲುಗು ಆರಂಭಿಕ ಕಾದಂಬರಿಗಳು ಮತ್ತು ಸಮಕಾಲೀನ ಸ್ಥಿತಿಗತಿಗಳು

ಯಾವುದೇ ಕಲಾ ಪ್ರಕಾರ ಶೂನ್ಯಸ್ಥಿತಿಯಲ್ಲಿ ರಚಿತವಾಗುವುದಿಲ್ಲ ಎಂಬುದು ಎಲ್ಲರೂ ಒಪ್ಪತಕ್ಕ ವಿಚಾರ. ಕಲಾಪ್ರಕಾರಗಳಲ್ಲಿ ತನ್ನದೇ ಮಾದರಿಯನ್ನು ಹೊಂದಿರುವ ಕಾದಂಬರಿ ಕೂಡ ಇದರಿಂದ ಹೊರತಾಗಿರಲು ಸಾಧ್ಯವಿಲ್ಲ. ಕಾದಂಬರಿ ಪ್ರಕಾರ ಭಾವಸ್ಥಿತಿಯೊಂದರ ಚೌಕಟ್ಟನ್ನು ನಿರ್ಮಾಣ ಮಾಡಿಕೊಡುವುದರ ಮೂಲಕವೇ ಓದುಗನನ್ನು ವಿಚಾರಶೀಲನನ್ನಾಗಿ ಮಾಡುವಲ್ಲಿ ಪ್ರೇರಕವೂ ಆಗಿರುತ್ತದೆ. ಹಾಗಾಗಿ ಅದು ತನ್ನ ಆಶಯವನ್ನು ವಾಸ್ತವವಾದಿ ನೆಲೆಯಲ್ಲಿ ಮಂಡಿಸುತ್ತ ಓದುಗನನ್ನು ವಿಶ್ವಾಸಕ್ಕೆ ತಂದುಕೊಳ್ಳುತ್ತದೆ. ಈ ವಾಸ್ತವವಾದಿ ನೆಲೆಗಟ್ಟು ಕಾದಂಬರಿಯ ಸಹಜ ಶೈಲಿಯ ರೂಪ ಪಡೆದು ಸಾಮಾಜಿಕ ಆಯಾಮವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಹೀಗೆ ಕಾದಂಬರಿ ಪ್ರಕಾರ ತನ್ನ ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ತನ್ನ ಕಥಾವಸ್ತುವಿನ ಭಾಗವಾಗಿ ಒಳಗೊಂಡಿರುತ್ತದೆ. ಯಾವುದೇ ಕೃತಿ ಕೈಗೆತ್ತಿಕೊಳ್ಳುವ ಸಾಮಾಜಿಕ ಸಮಸ್ಯೆ ಆ ಸಮಾಜದ ಸಂಸ್ಕೃತಿ ಎದುರಿಸುತ್ತಿರುವ ಬಿಕ್ಕಟ್ಟಿನ ಭಾಗವಾಗಿಯೂ ಇರುತ್ತದೆ ಎಂದು ಹೇಳಬಹುದು. ಆದ್ದರಿಂದ ಕೃತಿಯೊಂದು ಒಳಗೊಂಡಿರುವ ಸಾಮಾಜಿಕ ಸಮಸ್ಯೆಗೂ ಆ ಕೃತಿಯ ಸಮಕಾಲೀನ ಸಾಂಸ್ಕೃತಿಕ ಬಿಕ್ಕಟ್ಟುಗಳಿಗೂ ಸಂಬಂಧ ಏರ್ಪಡುತ್ತದೆ. ಆ ಸಮಸ್ಯೆಯನ್ನು ತನ್ನದೇ ನೆಲೆಯಲ್ಲಿ ಪರಿಹರಿಸುವ ಆಶಯವನ್ನೂ ಕೃತಿ ಪ್ರಕಟಿಸುತ್ತದೆ. ಹೀಗೆ ಯಾವುದೇ ಕಾದಂಬರಿ ಕೃತಿಗೂ ಅದರ ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳಿಗೂ ನಿಕಟ ಸಂಪರ್ಕ ಏರ್ಪಡುವುದನ್ನು ಗಮನಿಸಬಹುದು.

ಈ ಹಿನ್ನೆಲೆಯಲ್ಲಿ ಕನ್ನಡ–ತೆಲುಗು ಆರಂಭ ಕಾಲದ ಕಾದಂಬರಿಗಳನ್ನು ಪರಿಶೀಲಿಸಬಹುದು. ಈ ಕಾದಂಬರಿಗಳ ಕಥಾವಸ್ತು ಮತ್ತು ಆಶಯಗಳಲ್ಲಿ ಅಥವಾ ಸಾಮಾಜಿಕ ಸಮಸ್ಯೆಗಳಲ್ಲಿ ಸಾಮ್ಯತೆ ಎದ್ದು ಕಾಣುತ್ತದೆ. ಭಿನ್ನ ಭಾಷೆಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳಲ್ಲಿ ಏಕತೆ ಇರಬಹುದೆಂದು ಇದು ಸೂಚಿಸುತ್ತದೆ. ಆದರೂ ಈ ಎರಡೂ ಭಾಷೆಗಳ ಆರಂಭಿಕ ಕಾದಂಬರಿಗಳು

ಸ್ತ್ರೀ ಸಮಸ್ಯೆಯನ್ನೇ ಕೇಂದ್ರೀಕರಿಸಿರುವುದು ಕಾಕತಾಳೀಯವಲ್ಲ. ಕನ್ನಡ-ತೆಲುಗು ಸಮಾಜಗಳು ಎದುರಿಸಿದ ಸ್ತ್ರೀಯರ ಕುರಿತ ಸಾಮಾಜಿಕ ಸಮಸ್ಯೆಗಳು ಆ ಕಾಲದಲ್ಲಿ ಏಕೆ ಮತ್ತು ಹೇಗೆ ಏಕಪ್ರಕಾರವಾಗಿದ್ದವು ಅಥವಾ ಭಿನ್ನತೆ ಇರಬಹುದಾದಲ್ಲಿ ಅದು ಯಾವ ಬಗೆಯದು ಎಂಬುದು ಪರಿಶೀಲಿಸಬೇಕಾದ ಅಂಶವಾಗಿದೆ. ಈ ಕುರಿತು ಅಧ್ಯಯನ ಮಾಡಲು ಪ್ರಸ್ತುತ ಅಧ್ಯಾಯ ಕಾದಂಬರಿಗಳ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಪರಿಶೀಲನೆ ಮಾಡಬಯಸುತ್ತದೆ. ಹಾಗೆಯೇ ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕಾದಂಬರಿಗಳನ್ನೂ ಸ್ಥೂಲವಾಗಿ ಪರಿಚಯಿಸುತ್ತದೆ.

ಸಮಕಾಲೀನ ಸಾಮಾಜಿಕ ಸ್ಥಿತಿಗತಿಗಳು

ಸಂಘ ಜೀವಿ, ಸಮಾಜ ಜೀವಿಯಾದ ಮಾನವ ತನ್ನ ಬುದ್ಧಿ ಭಾವಗಳನ್ನು ಇತರರೊಡನೆ ಹಂಚಿಕೊಂಡು ಬದುಕುವುದನ್ನು ಕಲಿತಿದ್ದಾನೆ. ಮಾನವನ ಚಿಂತನೆ ಹಾಗೂ ವ್ಯಕ್ತಿತ್ವದ ವಿಕಾಸ ಸಮಾಜದ ಬೆಳವಣಿಗೆಯೊಂದಿಗೆ ಕಾಲಗತಿಯಲ್ಲಿ ಸಾಗುತ್ತಾ ಬಂದಿದೆ. ಸಮಾಜದಲ್ಲಿ ಜೀವಿಸುವ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ವಿಶಿಷ್ಟವಾದ ನಿಲುವು-ವ್ಯಕ್ತಿತ್ವ ಇರುತ್ತದೆ. ಅದಕ್ಕೆ ತಕ್ಕಂತೆ ಆ ವ್ಯಕ್ತಿ ಜೀವಿಸಲು ಬಯಸುತ್ತಾನೆ. ಅವನ ಜೀವನ ವಿಧಾನ ಸಮಾಜಕ್ಕೆ ಪರವಾಗಿಯೂ ಅಥವಾ ವಿರೋಧವಾಗಿಯೂ ಇರಬಹುದು. ಆದರೆ ವ್ಯಕ್ತಿ ಸಮಾಜವನ್ನು ಬಿಟ್ಟು ಜೀವಿಸಲು ಸಾಧ್ಯವಿಲ್ಲ. ಆದ್ದರಿಂದ ಕೆಲವೊಮ್ಮೆ ವ್ಯಕ್ತಿ ಸಮಾಜಕ್ಕೆ ಹೊಂದಿಕೊಂಡು ಹೋಗಬೇಕಾಗುತ್ತದೆ.

ಭಾರತೀಯ ಸಮಾಜದಲ್ಲಿ ಪುರಾತನ ಕಾಲದಿಂದಲೂ ನಡೆದು ಬಂದ ಸಂಪ್ರದಾಯಗಳು ಧರ್ಮವನ್ನು ಆಧರಿಸಿವೆ. ಭಾರತೀಯ ಹಿಂದೂ ಸಮಾಜ ತನ್ನ ವರ್ಣಾಶ್ರಮ ಧರ್ಮದಲ್ಲಿ ಕಸುಬುಗಳನ್ನು ಆಧರಿಸಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಗಗಳನ್ನು ವಿಭಜಿಸಿತು. ಅವು ಜಾತಿಗಳಾಗಿ ರೂಪುಗೊಂಡು ಹಲವಾರು ಉಪಜಾತಿಗಳು ಹುಟ್ಟಿಕೊಳ್ಳಲು ಕಾರಣವಾದವು. ಇದು ಅನುಸರಿಸಿದ ತಾರತಮ್ಯ ನೀತಿ ಮತ್ತು ಅಸಮಾನತೆಯ ಭಾವನೆ ಸ್ತ್ರೀಯರಿಗೂ ಅನ್ವಯಿಸಿತು. ಕಾಲಕ್ರಮದಲ್ಲಿ ಇದು ಧಾರ್ಮಿಕ ಕಟ್ಟುಪಾಡುಗಳಾಗಿ, ಸಾಮಾಜಿಕ ಅಂಧಾನುಸರಣೆಯಾಗಿ ವ್ಯಾಪಕವಾಗಿ ಬೆಳೆಯಿತು.

ಬ್ರಿಟಿಷರ ಆಗಮನದ ಮುಂಚೆ ಭಾರತದ ಸಮಾಜದಲ್ಲಿ ಬಹುಪತ್ನಿತ್ವ, ದೇವದಾಸಿ, ಸತಿಸಹಗಮನ, ಬಾಲ್ಯವಿವಾಹ ಪದ್ಧತಿಗಳು ಬೇರೂರಿದ್ದವು. ವಿಧವೆಯರ ಸ್ಥಿತಿ ಪ್ರಧಾನವಾಗಿ ಮೇಲು ಜಾತಿಯಲ್ಲಿ ದಾರುಣವಾಗಿತ್ತು. ಅನ್ಯ ಜಾತಿ ಮತ್ತು ಲಿಂಗಗಳ ನಡುವೆ ಆರ್ಥಿಕ ಅಸಮಾನತೆ ತೀವ್ರತರದಲ್ಲಿ ಹೆಚ್ಚಿತ್ತು

ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಯಲ್ಲಿ ಭಾರತ ಪಾಶ್ಚಾತ್ಯ ಸಂಸ್ಕೃತಿಯ ಸಂಪರ್ಕಕ್ಕೆ ಒಳಗಾಯಿತು, ಪ್ರಭಾವಕ್ಕೂ ಒಳಗಾಯಿತು. ಭಾರತೀಯ ಸಮಾಜದಲ್ಲಿ ಹೊಸ ವಿಚಾರಗಳು ತಲೆಯೆತ್ತಿದವು. ಇದು ಬಹುಶಃ ಮತಾಂತರ ಪ್ರಕ್ರಿಯೆಗೆ ಅನುಕೂಲಕರವೆಂದು ಭಾವಿಸಿದ ಮಿಷನರಿಗಳು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ವಹಿಸಿದವು. ಅದರ ಪರಿಣಾಮವಾಗಿ ಭಾರತೀಯ ಸಮಾಜದಲ್ಲಿ ಪ್ರಕಟವಾದ ಪ್ರತಿಕ್ರಿಯೆ ಭಿನ್ನ ಸ್ವರೂಪದ್ದಾಗಿತ್ತು. ಅವು ತೀವ್ರ ವಿರೋಧ, ನಿರ್ಲಿಪ್ತ ಹೊಂದಾಣಿಕೆ ಮತ್ತು ಸದ್ಯದ ಒಪ್ಪಿಗೆಯಂಥ ವಿಭಿನ್ನ ರೂಪ ಪಡೆದುಕೊಂಡವು. ಈ ಸಂದರ್ಭದಲ್ಲಿ ಸಾಮಾಜಿಕ ಪದ್ಧತಿಗಳಾದ ಸತಿ ಪದ್ಧತಿ, ಹೆಣ್ಣು ಶಿಶು ಹತ್ಯೆ, ಬಾಲ್ಯವಿವಾಹಗಳನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಲಾಯಿತು.

ಪಾಶ್ಚಾತ್ಯ ಶಿಕ್ಷಣದ ಪ್ರಭಾವಕ್ಕೊಳಗಾದ ಭಾರತೀಯರು ಪಾಶ್ಚಾತ್ಯ ವಿಚಾರಗಳ ಆಳದಲ್ಲಿದ್ದ ವೈಜ್ಞಾನಿಕ ಮನೋಭಾವ ಮತ್ತು ತರ್ಕಶುದ್ಧತೆಯಿಂದ ಬಹಳವಾಗಿ ಆಕರ್ಷಿತರಾದರು. ಇದರಿಂದ ಭಾರತೀಯ ಸಂಪ್ರದಾಯದ ಆಚಾರ-ವಿಚಾರಗಳನ್ನು ಪಾಶ್ಚಾತ್ಯ ಆಧುನಿಕ ವಿಚಾರಗಳ ದೃಷ್ಟಿಕೋನದಿಂದ ನೋಡಲು ಪ್ರಾರಂಭವಾಯಿತು. ಪಾಶ್ಚಾತ್ಯರು ಭಾರತೀಯರ ಸಂಪ್ರದಾಯಗಳು, ಕಟ್ಟುಪಾಡುಗಳು, ಆಚರಣೆಗಳನ್ನು ವ್ಯಾಪಕವಾಗಿ ಟೀಕಿಸಿದರು ಮತ್ತು ಅವುಗಳ ವಿರುದ್ಧ ಪ್ರಬಲವಾಗಿ ಹೋರಾಡಲು ಉತ್ತೇಜನ ನೀಡಿದರು. ಸತಿ ಪದ್ಧತಿಯ ನಿರ್ಮೂಲನೆ, ವಿಧವಾ ವಿವಾಹ, ಬಾಲ್ಯವಿವಾಹ ನಿಷೇಧಗಳಿಗೆ ಸಂಬಂಧಿಸಿದಂತೆ ಹಲವಾರು ಸುಧಾರಣಾ ಕಾಯಿದೆಗಳನ್ನು ಜಾರಿಗೊಳಿಸಲಾಯಿತು. ಕ್ರೈಸ್ತ ಮತ ಪ್ರಚಾರಕರು ಬಡ ಹಾಗೂ ಕೆಳವರ್ಗಗಳ ಸಾಮಾಜಿಕ ಅಗತ್ಯವನ್ನು ಪೂರೈಸಿ ಅವರನ್ನು ಮತಾಂತರಗೊಳಿಸಲಾರಂಭಿಸಿದರು. ಶಿಕ್ಷಣವನ್ನು ಎಲ್ಲ ಜಾತಿ-ಉಪಜಾತಿಗಳ ಜನರಿಗೆ ಮುಕ್ತವಾಗಿ ಸಿಗುವಂತೆ ಮಾಡಲು ಅನೇಕ ಪ್ರಯತ್ನಗಳು ನಡೆದವು. ಇದರ ಪರಿಣಾಮವಾಗಿ ಜಾತೀಯತೆ, ಅಂಧಶ್ರದ್ಧೆ, ಕಟ್ಟುಪಾಡುಗಳು ವ್ಯಾಪಕವಾಗಿ ಶಿಥಿಲವಾಗಲು ಕಾರಣವಾಯಿತು. ಹಿಂದುಳಿದ ಜಾತಿಗಳನ್ನು ಸರ್ವತೋಮುಖವಾಗಿ ಮೇಲೆತ್ತುವ ಪ್ರಯತ್ನ ನಡೆಯತೊಡಗಿತು.

ಭಾರತೀಯರ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಮನೆ ಮಾಡಿಕೊಂಡಿದ್ದ ಜಾತಿ-ಮತ, ಮಡಿ-ಮೈಲಿಗೆ ಪದ್ಧತಿಗಳನ್ನು ಭೇದಿಸಿ ನೋಡುವ ಪ್ರಜ್ಞೆ ಜನಸಾಮಾನ್ಯರಲ್ಲಿ ಪಾಶ್ಚಾತ್ಯ ಸಂಸ್ಕೃತಿಯಿಂದಾಗಿ ಮೂಡತೊಡಗಿತು. ಈ ಬದಲಾವಣೆ ಸಮಾಜದಲ್ಲಿ ಕೆಲವು ಪರಿವರ್ತನೆಗೆ ಕಾರಣವಾಯಿತು. ಇದರಿಂದ ಭಾರತೀಯರು ಬದುಕನ್ನು ನೋಡುವ ಕ್ರಮವೂ ಬದಲಾಯಿತು.

ಭಾರತದ ನವವಿದ್ಯಾವಂತ ವರ್ಗ ಪಾಶ್ಚಾತ್ಯ ಪ್ರಗತಿ ಕಲ್ಪನೆಯನ್ನು ನಿರಾಕರಿಸದೆಯೂ ಅದಕ್ಕೆ ಸಂಪೂರ್ಣ ಶರಣಾಗದೆಯೂ ಉಳಿದರು. ಪಶ್ಚಿಮದ ಪ್ರಗತಿಯೊಂದಿಗೆ ಭಾರತದ ಹಿರಿಮೆ ಸಾರುವುದರಲ್ಲಿ ನಿಜವಾದ ಪ್ರಗತಿ, ಆಧುನಿಕತೆ ಅಡಗಿದೆ ಎಂದು ತಿಳಿದರು. ಸಾಹಿತ್ಯವನ್ನು ಈ

ಉದ್ದೇಶ ಸಾಧನೆಗಾಗಿ ಬಳಸಿದರು. ಸಾಂಪ್ರದಾಯಿಕ ವಿಚಾರಗಳು ಮತ್ತು ಹೊಸ ವಿಚಾರಗಳನ್ನು ತುಲನೆ ಮಾಡಿದರು. ಕೆಲವರು ಹೊಸ ವಿಚಾರಗಳಿಗೆ ಮಹತ್ವ ನೀಡಿದರೆ ಉಳಿದವರು ಸಾಂಪ್ರದಾಯಿಕ ವಿಚಾರಗಳಿಗೆ ಹೆಚ್ಚು ಒತ್ತು ನೀಡಿದರು.

ವಸಾಹತುಶಾಹಿ ಶಿಕ್ಷಣ ಹುಟ್ಟುಹಾಕಿದ ವಿವೇಚನಾ ಪ್ರಜ್ಞೆ ಮತ್ತು ಜೀವನಕ್ರಮ ಪಾರಂಪರಿಕ ಜೀವನ ಮೌಲ್ಯಗಳಿಗಿಂತ ಭಿನ್ನವಾಗಿತ್ತು. ಇದರಿಂದ ಓದುಗ ವರ್ಗವೊಂದು ಸೃಷ್ಟಿಯಾಯಿತು. ಈ ವರ್ಗದ ಓದುಗಾರಿಕೆಯನ್ನು ಪೂರೈಸಬಲ್ಲ, ಆದರೆ ಸಮಾಜದ ನೈತಿಕಮಟ್ಟ, ಅಭಿರುಚಿ ಮತ್ತು ಮನರಂಜನಾ ಸ್ತರ ಸಂಸ್ಕರಿಸುವ ಉದ್ದೇಶದಿಂದ ಸಾಮಾಜಿಕ ಆಶಯಗಳ ವಾಸ್ತವ ಶೈಲಿ ಕಾದಂಬರಿಗಳು ಬರತೊಡಗಿದವು. ಕಾದಂಬರಿ ಪ್ರಕಾರ ತನ್ನ ನಿರ್ದಿಷ್ಟ ಸೈದ್ಧಾಂತಿಕ ಚೌಕಟ್ಟಿಗೆ ಒಳಪಟ್ಟರೂ ಅದು ತನ್ನನ್ನು ಮೀರುವ ಶಕ್ತಿಯನ್ನೂ ಪಡೆದುಕೊಂಡಿತು. ಆರಂಭದಲ್ಲಿ ದೇಶೀ ಮೂಲಗಳಿಂದ ಹುಟ್ಟಿದ ಪುರಾಣಗಳಂತೆ ಸಂಸ್ಕೃತಿಯ ಆಳಕ್ಕೆ ಇಳಿಯುವ ಶಕ್ತಿಯನ್ನು ಪಡೆಯಲಿಲ್ಲ. ಆದರೂ ಕಾಲದಿಂದ ಕಾಲಕ್ಕೆ ಆದ ಸಾಮಾಜಿಕ ಬದಲಾವಣೆಗೆ ಒಡ್ಡಿಕೊಳ್ಳುತ್ತ, ಅಭಿವ್ಯಕ್ತಿಸುತ್ತ ಬಂದಿದೆ. ಈ ಪ್ರತಿಯೊಂದು ಹಂತವನ್ನು ಕಾದಂಬರಿ ತನ್ನ ಸೃಜನಶೀಲ ಪ್ರಕ್ರಿಯೆಯ ಭಾಗವಾಗಿಸಿಕೊಂಡಿದೆ.

ಇಂಗ್ಲಿಷ್ ಶಿಕ್ಷಣದ ನೇರ ಪ್ರಭಾವವಿದ್ದರೂ ಕನ್ನಡ ಮತ್ತು ತೆಲುಗು ಸಾಹಿತ್ಯ ಪ್ರಕಾರಗಳು ಬಂಗಾಳಿ ಹಾಗೂ ಮರಾಠಿ ಕಾದಂಬರಿಗಳಿಂದ ಪ್ರಭಾವಿತವಾದವು. ಭಾರತೀಯ ಭಾಷೆಗಳಲ್ಲಿ ಕಾದಂಬರಿ ಪ್ರಕಾರ ಮೊದಲು ಕಾಣಿಸಿಕೊಂಡಿದ್ದು ಬಂಗಾಳಿ ಭಾಷೆಯಲ್ಲಿ ಎನ್ನುವುದು ಗಮನಾರ್ಹ. ಭಾರತದಲ್ಲಿ ಹೊಸ ವಿಚಾರಗಳ ಪ್ರತಿಪಾದನೆ ಸೇರಿದಂತೆ ಸಾಮಾಜಿಕ ಜಾಗೃತಿಗೆ ಮೂಲ ಪ್ರೇರಣೆ ಬಂಗಾಳದಿಂದ ದೊರಕಿತ್ತು. ಈಶ್ವರಚಂದ್ರ ವಿದ್ಯಾಸಾಗರರ ಭ್ರಾಂತಿವಿಲಾಸ ಒಳಗೊಂಡು ದುರ್ಗೇಶನಂದಿನಿ, ದೇವಿ ಚೌಧುರಾಣಿ, ರಜನಿ, ಇಂದಿರಾ ಮೊದಲಾದವು ಬಂಗಾಳಿ ಭಾಷೆಯಲ್ಲಿ ಪ್ರಕಟವಾದವು. ಇವನ್ನು ವೆಂಕಟಾಚಾರ್ಯರು ಕನ್ನಡಕ್ಕೆ ನೇರ ಅನುವಾದಿಸಿದರು. ಬಂಕಿಮ ಚಂದ್ರರು ಸಂಪ್ರದಾಯಗಳ ಪ್ರತಿಪಾದಕರು; ಸುಧಾರಣೆಯ ಪರವಲ್ಲ ಎಂಬುದು ಅವರ ಕಾದಂಬರಿಗಳಿಂದ ತಿಳಿಯುತ್ತದೆ.

ಬಂಗಾಳಿ ಭಾಷೆಯಲ್ಲಿ ಪ್ರಕಟವಾದ ಕಾದಂಬರಿಗಳು ಅನುವಾದದ ಮೂಲಕ ಮರಾಠಿ, ತೆಲುಗು, ಕನ್ನಡ ಭಾಷೆಗಳಲ್ಲೂ ಪ್ರಕಟವಾದವು. ಬಂಗಾಳಿ ಕಾದಂಬರಿಗಳಲ್ಲಿ ಮಂಡನೆಯಾದ ಹೊಸ ವಿಚಾರಗಳ ಚಿಂತನೆ ಒಂದು ಬಗೆಯದಾಗಿತ್ತು. ಅದು ಮರಾಠಿಯಲ್ಲಿ ಇನ್ನೊಂದು ಬಗೆಯಲ್ಲಿ ಕಾಣಿಸಿಕೊಂಡಿತು. ತೆಲುಗು ಭಾಷೆಯಲ್ಲಿ ಬೇರೆಯೇ ಸ್ವರೂಪವನ್ನು ತಾಳಿತು. ಕನ್ನಡದಲ್ಲಿ ಮತ್ತೊಂದು ಬಗೆಯಲ್ಲಿ ಕಾಣಿಸಿಕೊಂಡಿತು. ಇಷ್ಟಾದರೂ ಸಾಮಾಜಿಕ ವಸ್ತು ವಿಚಾರಗಳನ್ನು ಮತ್ತು ಎಲ್ಲ ಬಗೆಯ ವೈಚಾರಿಕ ಆಕೃತಿಗಳನ್ನು ಕನ್ನಡ ಮತ್ತು ತೆಲುಗು ಕಾದಂಬರಿಗಳು ಒಳಗೊಂಡಿದ್ದವು.

ಈ ಎರಡೂ ಭಾಷೆಯ ಆರಂಭದ ಲೇಖಕರು ತಮ್ಮ ಸಂಸ್ಕೃತಿಯಲ್ಲಿ ಆಳವಾಗಿ ಬೇರುಬಿಟ್ಟವರಾಗಿದ್ದರು. ಸಾಂಪ್ರದಾಯಿಕ ಮೌಲ್ಯಗಳನ್ನು ನಂಬಿದವರಾಗಿದ್ದರು. ಪಾಶ್ಚಾತ್ಯ ಸಂಸ್ಕೃತಿಯ ಅನುಭವ ಅವರಿಗಿದ್ದರೂ ಅದಕ್ಕೆ ಪ್ರತಿಕ್ರಿಯಿಸುವ ರೀತಿ ಮಾತ್ರ ವಿಭಿನ್ನವಾಗಿತ್ತು. ಇಂಗ್ಲಿಷ್ ಶಿಕ್ಷಣವನ್ನು ಪಡೆದ ಲೇಖಕರಲ್ಲಿ ಕೆಲವರು ಸ್ವಂತ ಸಂಸ್ಕೃತಿಯ ಸಮರ್ಥನೆಯನ್ನು ಮಾಡಿದರು. ಮತ್ತೆ ಕೆಲವರು ಅದನ್ನು ವಿಡಂಬನೆ ಮಾಡಲು ಮುಂದಾದರು. ಕನ್ನಡದ ಕಾದಂಬರಿಕಾರರಾದ ಗುಲ್ವಾಡಿ ವೆಂಕಟರಾಯ, ಬೋಳಾರ ಬಾಬುರಾಯ, ತೆಲುಗಿನ ವೀರೇಶಲಿಂಗಂ ಪಂತುಲು, ಚಿಲಕಮರ್ತಿ ಲಕ್ಷ್ಮೀನರಸಿಂಹ ಇವರು ತಮ್ಮ ಕಾದಂಬರಿಗಳಲ್ಲಿ ಸಂಪ್ರದಾಯವನ್ನು ಹೆಚ್ಚಾಗಿ ಮೆರೆದರೂ ಅವರ ಲಕ್ಷ್ಯ ಸಮಾಜದ ಅನಿಷ್ಟಗಳನ್ನು ವಿಡಂಬನೆ ಮಾಡುವುದರ ಕಡೆಗಿತ್ತು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಇವರ ಮೇಲೆ ದಟ್ಟವಾಗಿ ಬೀರಿದ್ದರಿಂದ ಅವರು ತಮ್ಮ ಸಮಕಾಲೀನ ಸಾಂಪ್ರದಾಯಿಕ ಜೀವನವನ್ನು ಅದರ ಹೊರಗಿನಿಂದ ನೋಡಲು ಶಕ್ತರಾದರು. ಇವರು ಸಾರ್ವಜನಿಕ ಜೀವನದಲ್ಲಿ ದುಡಿದವರಾದ್ದರಿಂದ ಅವರಲ್ಲಿ ವಾಸ್ತವ ಜೀವನದ ಅರಿವು ಹಾಗೂ ಪ್ರಗತಿಯ ಆಕಾಂಕ್ಷೆ ಬಲವಾಗಿದ್ದವು. ಹಾಗಾಗಿ ಸಾಂಪ್ರದಾಯಿಕ ಆಚಾರ ವಿಚಾರಗಳನ್ನು ಅವರು ಪಾಶ್ಚಾತ್ಯ ಮೌಲ್ಯಗಳೊಂದಿಗೆ ಹೋಲಿಸಿದರು ಮತ್ತು ತಮ್ಮ ಸಂಸ್ಕೃತಿಯನ್ನು ಟೀಕೆ ಮಾಡುತ್ತಲೆ ಪಾಶ್ಚಾತ್ಯ ವಿಚಾರವನ್ನು ಸಮರ್ಥಿಸಿದಂತೆ ಕಾಣುತ್ತದೆ.

ಮೊದಲ ಘಟ್ಟದ ಕಾದಂಬರಿಗಳು ಜಡವಾಗಿರುವ ಹಳೆಯ ಜೀವನ ಪದ್ಧತಿಯನ್ನು ಸುಧಾರಿಸುವ ಕಾರಣಕ್ಕಾಗಿ ಸ್ತ್ರೀ ಸಮಾನತೆಯಂಥ ಸಮಸ್ಯೆಯನ್ನು ಕೈಗೆತ್ತಿಕೊಳ್ಳಲು ಹಂಬಲಿಸುತ್ತಿದ್ದವು. ಆದ್ದರಿಂದ ಕನ್ನಡದಲ್ಲಿ ಇಂದಿರಾಬಾಯಿ, ವಾಗ್ದೇವಿ, ಇಂದಿರಾ, ರೋಹಿಣಿ, ಸೀಮಂತಿನಿ, ಭಾಗೀರಥಿ ತೆಲುಗಿನಲ್ಲಿ ಸತ್ಯವತೀ ಚರಿತ್ರೆ, ಅಹಲ್ಯಾಬಾಯಿ, ರಾಜರತ್ನ ಹಾಗೆಯೇ ಇತರ ಭಾಷೆಗಳ ಮೊದಲ ಘಟ್ಟದ ಕಾದಂಬರಿಗಳಲ್ಲೂ ಹೆಂಗಸರ ಹೆಸರುಗಳೇ ಶೀರ್ಷಿಕೆಗಳಾಗಿವೆ. ಇವು ಪ್ರಗತಿಪಂಥದ ಮುಂಚೂಣಿಯಲ್ಲಿದ್ದ ಸಾರಸ್ವತ ಸಮಾಜದಲ್ಲಿನ ಸಾಂಸ್ಕೃತಿಕ ಸಂಘರ್ಷದ ಸ್ಥಿತಿ ವ್ಯಕ್ತವಾದ ಬಗೆಯನ್ನು ನಿರೂಪಿಸುತ್ತವೆ. ಅದರೊಳಗಿನ ಆಂತರಿಕ ಬಂಡಾಯದ ಸಂಕೇತವಾಗಿದ್ದರೂ ಇಡೀ ಭಾರತದಲ್ಲಾಗುತ್ತಿದ್ದ ಬದಲಾವಣೆಗಳನ್ನು ಸೂಕ್ಷ್ಮವಾಗಿ ಪ್ರಕಟಿಸಿವೆ.

ಚಲನಶೀಲವಾದ ಸಮಾಜದ ಮುಖಗಳನ್ನು ಸೆರೆಹಿಡಿಯುವ ಪ್ರಯತ್ನವನ್ನು ಕನ್ನಡ ಮತ್ತು ತೆಲುಗಿನ ಆರಂಭದ ಕಾದಂಬರಿಗಳು ತಮ್ಮ ಮಿತಿಯೊಳಗೆ ಮಾಡಿದಂತಿವೆ. ಬಂಗಾಳಿ ಹಾಗೂ ಮರಾಠಿ ಭಾಷೆಗಳ ಅನುವಾದಿತ ಕಾದಂಬರಿಗಳನ್ನು ತೆಲುಗು ಹಾಗೂ ಕನ್ನಡ ಸ್ವೀಕರಿಸಿತು. ಅನುವಾದಗಳು ಓದುಗರಲ್ಲಿ ಭಿನ್ನ ಅಭಿರುಚಿ, ಆಸಕ್ತಿ ಹುಟ್ಟಿಸಿದ್ದು ಮಾತ್ರವಲ್ಲದೆ ಸ್ವತಂತ್ರ ಕಾದಂಬರಿಗಳ ರಚನೆಗೆ ಪ್ರೇರಣೆ ನೀಡಿತು. ಹಳೆಯ ಹಾಗೂ ಹೊಸ ವಿಚಾರಗಳ ಸಂಘರ್ಷದ ಸಂದರ್ಭದಲ್ಲಿ

ಯಾವುದನ್ನು ಸ್ವೀಕರಿಸಬೇಕು ಯಾವುದನ್ನು ತಿರಸ್ಕರಿಸಬೇಕು ಎಂಬ ಬಗ್ಗೆ ಗೊಂದಲವಿತ್ತು. ಕೆಲವು ಕಾದಂಬರಿಗಳು ಸುಧಾರಣೆಯ ಮನೋಭಾವನೆಯನ್ನು ಪ್ರತಿಪಾದಿಸಿದರೆ ಮತ್ತೆ ಕೆಲವು ಅದನ್ನು ಸಂಶಯದ ದೃಷ್ಟಿಯಿಂದ ಕಂಡವು.

ಕನ್ನಡದಲ್ಲಿ ಸ್ತ್ರೀ ಸುಧಾರಣೆಯ ಹಂಬಲ ಹೆಚ್ಚಾಗಿ ಕಾಣಿಸುವ ಕಾದಂಬರಿಗಳ ಸಂಪ್ರದಾಯ ಇಂದಿರಾಬಾಯಿ (೧೮೯೯) ಮೂಲಕ ಆರಂಭವಾಯಿತು. ಸಾರಸ್ವತ ಸಮಾಜದ ಗುಲ್ವಾಡಿ ವೆಂಕಟರಾಯರು ಸಮಾಜ ಸುಧಾರಣೆಗಾಗಿ ತಮ್ಮನ್ನು ಮೀಸಲಾಗಿಟ್ಟವರು. ಇವರು ಸ್ತ್ರೀ ಸಮಸ್ಯೆಗಳನ್ನು ಪ್ರಧಾನವಾಗಿಟ್ಟುಕೊಂಡು ಕಾದಂಬರಿಗಳನ್ನು ರಚಿಸಿದರು. ಇವರು ತೆಲುಗಿನ ವೀರೇಶಲಿಂಗಂ ಪಂತುಲು ಕಾದಂಬರಿಗಳಿಂದ ಪ್ರೇರಿತರಾಗಿರಬಹುದಾದ ಸಾಧ್ಯತೆಯನ್ನು ಇಂದಿರಾಬಾಯಿ ಕಾದಂಬರಿಯಿಂದಲೆ ಊಹಿಸಬಹುದು. ಸ್ತ್ರೀಯರ ಸಮಸ್ಯೆಯನ್ನು ಎತ್ತಿಕೊಂಡು ಸಾಮಾಜಿಕ ಕಟ್ಟಳೆಗಳು, ವ್ರತಾಚರಣೆಗಳು, ಮೂಢನಂಬಿಕೆಗಳನ್ನು ತಮ್ಮ ಕೃತಿಗಳಲ್ಲಿ ವಿಡಂಬನೆ ಮಾಡಿದ ಪಂತುಲು ಕಾದಂಬರಿಗಳಲ್ಲಿ ಕೆಲವು ಅದಾಗಲೇ ಕನ್ನಡಕ್ಕೆ ಅನುವಾದಗೊಂಡಿದ್ದವು. ಸುಧಾರಕ ಪಂಥವಾದ ಬ್ರಹ್ಮಸಮಾಜದ ಕೇಂದ್ರ ಮಂಗಳೂರಿನಿಂದ ಮದ್ರಾಸಿಗೆ ವರ್ಗವಾಗಿತ್ತು. ಮದ್ರಾಸ್‌ನಲ್ಲಿ ಪಂತುಲು ಸರ್ಕಾರಿ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಹೀಗಾಗಿ ಮದ್ರಾಸ್ ಇಲಾಖೆಗೆ ಸೇರಿದ ಮಂಗಳೂರಿನ ಸುಧಾರಕರಿಗೆ ಪಂತುಲು ಕಾದಂಬರಿಗಳ ಕುರಿತು ಆಸಕ್ತಿ ಬೆಳೆಯಿತು. ಈ ಆಸಕ್ತಿಯೇ ಕನ್ನಡದ ಸಾಮಾಜಿಕ ಕಾದಂಬರಿಗಳ ಹುಟ್ಟಿಗೆ ಕಾರಣವಾಗಿರಬಹುದು. ವೆಂಕಟರಾಯರ ಇಂದಿರಾಬಾಯಿ ಕಾದಂಬರಿಯಲ್ಲಿ ನಾಯಕಿ ಓದುವ ಪುಸ್ತಕಗಳಲ್ಲಿ ಸತ್ಯವತೀ ಚರಿತ್ರೆ ಕಾದಂಬರಿಯೂ ಉಲ್ಲೇಖಿತವಾಗಿರುವುದು ಪ್ರೇರಿತ ಅಂಶವನ್ನು ಸೂಚಿಸುತ್ತದೆ.

ಕನ್ನಡ ಹಾಗೂ ತೆಲುಗು ಕಾದಂಬರಿ ಪ್ರಕಾರ ಆಧುನಿಕ ಸಮಾಜದ ಭೂತ ವರ್ತಮಾನಗಳನ್ನು ಶೋಧಿಸುತ್ತ ಬಂದಿದೆ. ಕನ್ನಡ ಕಾದಂಬರಿ ಸಂದರ್ಭದಲ್ಲಿ ಗುಲ್ವಾಡಿಯವರ ಕೃತಿ ವಾಸ್ತವತಾವಾದಿ ಚೌಕಟ್ಟಿನ ಮೂಲಕ ಸಾಂಪ್ರದಾಯಿಕ ಸಮಾಜದ ಘನತೆ, ಹಿಂಸೆಗಳ ನಡುವೆ ಆಧುನಿಕತೆಯನ್ನು ಸ್ವೀಕರಿಸಿತು. ಕೆರೂರರ ಕೃತಿ ಆಧುನಿಕತೆಯ ಸ್ಥಿತ್ಯಂತರಗಳನ್ನು ನಿರೂಪಿಸಿತು. ಬೋಳಾರರ ಕಾದಂಬರಿ ಭ್ರಷ್ಟ ಸಮಾಜದಲ್ಲಿ ಸ್ತ್ರೀಯ ವಾಸ್ತವ ಸ್ಥಿತಿಯನ್ನು ಕಟ್ಟಿಕೊಟ್ಟಿತು. ತಿರುಮಲಾಂಬ ಕೃತಿ ಸ್ತ್ರೀಯರ ಪಾರಂಪರಿಕ ಧರ್ಮ ನೀತಿಯನ್ನು ಸಾರಿತು, ಹಾಗೂ ಪುಟ್ಟಣ್ಣ ಸಾಂಪ್ರದಾಯಕ ಸಮಾಜದಲ್ಲಿ ಸ್ತ್ರೀಯರ ಸ್ಥಿತಿಗತಿಗಳನ್ನು ಹುಡುಕಾಡಿದಂತೆ ಕಾಣುತ್ತದೆ.

ಹಾಗೆಯೇ ತೆಲುಗಿನ ಆರಂಭ ಕಾಲದ ಸಾಮಾಜಿಕ ಕಾದಂಬರಿಗಳಲ್ಲಿ ಕೂಡ ಸಂಪ್ರದಾಯಗಳ ಹಿರಿಮೆ ಹಾಗೂ ಅವುಗಳ ಸಾಮಾಜಿಕ ಕಟ್ಟುಪಾಡುಗಳು, ಅಧಃಪತನ ಹಾಗೂ ಇಂಗ್ಲಿಷ್ ಶಿಕ್ಷಣದ ಪ್ರಾಮುಖ್ಯತೆ ಕುರಿತು ಅನೇಕ ರೂಪಕಗಳನ್ನು ಕಾಣಬಹುದು.

ಸಾಂಸ್ಕೃತಿಕ ಸ್ಥಿತಿಗತಿಗಳು

ಕನ್ನಡದ ಸಂದರ್ಭ

ಆರಂಭ ಕಾಲದ ಕನ್ನಡ ಕಾದಂಬರಿಗಳು ವೈವಿಧ್ಯವಾಗಿ ರೂಪುಗೊಳ್ಳುವಲ್ಲಿ ದಕ್ಷಿಣ ಕನ್ನಡದ ಸಾರಸ್ವತರು ಆರಂಭದ ಮಹತ್ವದ ಸಾಮಾಜಿಕ ಕಾದಂಬರಿಗಳನ್ನು ರಚಿಸಿದರು. ಹಾಗೆಯೇ "ಮೈಸೂರು ಪ್ರಾಂತದಿಂದ ಪುಟ್ಟಣ್ಣನವರು ಮಹಾರಾಜರ ಆಡಳಿತದ ಕುರಿತು ಕಾದಂಬರಿ ರಚಿಸಿದರು. ಉತ್ತರ ಕರ್ನಾಟಕದವರಾದ ಕೆರೂರು ವಾಸುದೇವಾಚಾರ್ಯ ಹಾಗೂ ಗಳಗನಾಥರು ಐತಿಹಾಸಿಕ ಹಾಗೂ ರಮ್ಯ ಕೃತಿಗಳನ್ನು ರಚಿಸಿದರು. ನಿಜಾಮ ಕರ್ನಾಟಕದಿಂದ ಒಂದಾದರೂ ಕಾದಂಬರಿ ಪ್ರಕಟವಾಗಿಲ್ಲ." (ಶಿವರಾಮ ಪಡಿಕ್ಕಲ್, ೨೦೦೧:೪೮)

ಈ ರೀತಿಯ ವ್ಯತ್ಯಾಸಗಳಿಗೆ ಕರ್ನಾಟಕದ ಸಾಂಸ್ಕೃತಿಕ ಸನ್ನಿವೇಶವೇ ಕಾರಣವಾಗಿದೆ. ಟಿಪ್ಪುವಿನ ಆಳ್ವಿಕೆಯ ನಂತರ ೧೭೯೯ರಲ್ಲಿ ಕರ್ನಾಟಕದಲ್ಲಿ ಬ್ರಿಟಿಷರ ಆಳ್ವಿಕೆಗೆ ಒಳಗಾದ ಪ್ರದೇಶ ದಕ್ಷಿಣಕನ್ನಡ. ಕ್ರಿಶ್ಚಿಯನ್ ಮಿಶನರಿಗಳು ತಮ್ಮ ಚಟುವಟಿಕೆಗಳನ್ನು ಈ ಜಿಲ್ಲೆಯಲ್ಲಿ ಆಗಲೇ ಪ್ರಾರಂಭಿಸಿದ್ದವು. ಕೈಗಾರೀಕರಣ ಹಾಗೂ ಸಾಹಿತ್ಯಕ ಕೆಲಸಗಳಲ್ಲಿ ಪ್ರಸಿದ್ಧಿ ಪಡೆದ ಬಾಸೆಲ್ ಮಿಷನ್ ಮಂಗಳೂರಿನಲ್ಲಿ ತನ್ನ ಕೇಂದ್ರವನ್ನು ಸ್ಥಾಪಿಸಿತ್ತು. ಈ ಸಂಸ್ಥೆ ಶಾಲೆ ಹಾಗೂ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿತು. ಶಾಲೆಯಲ್ಲಿ ಎಲ್ಲರಿಗೂ ಮುಕ್ತ ಪ್ರವೇಶವಿದ್ದರೂ ಹೆಚ್ಚಾಗಿ ಸಾರಸ್ವತ ಜನರೇ ತುಂಬಿಕೊಂಡಿದ್ದರು.

ಸಾರಸ್ವತರು ಇಂಗ್ಲಿಷ್ ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿ ಉನ್ನತ ಹುದ್ದೆಗಳಲ್ಲಿ ಸೇರಿಕೊಂಡರು. ಇಂಗ್ಲಿಷ್ ಶಿಕ್ಷಣ ಕ್ರಮ ಸಾರಸ್ವತರ ಧಾರ್ಮಿಕ ನಂಬಿಕೆಗಳನ್ನು ಅನುಮಾನದಿಂದ ಕಂಡಿತು. ವಿದ್ಯಾವಂತರು ಸಾಂಪ್ರದಾಯಿಕ ಕಟ್ಟಳೆಗಳನ್ನು ವಿರೋಧಿಸತೊಡಗಿದರು. ಆದರೆ ಧರ್ಮ ವಿರೋಧಿಗಳಾಗದೆ ಸುಧಾರಣಾವಾದಿ ಕ್ರಿಯೆಗಳಲ್ಲಿ ಭಾಗವಹಿಸತೊಡಗಿದರು. ಇದರಿಂದ ಇಂಗ್ಲಿಷ್ ಶಿಕ್ಷಣ ಪಡೆದವರು ಹಾಗೂ ಸಂಪ್ರದಾಯಸ್ಥರ ನಡುವೆ ಸಂಘರ್ಷಗಳಿಗೆ ಅವಕಾಶವಾಯಿತು.

ಸಹಜವಾಗಿ ಸಾಹಿತ್ಯಕ್ಷೇತ್ರದಲ್ಲಿಯೂ ಮುಂದಿದ್ದ ಸಾರಸ್ವತರು ವಸಾಹತುಶಾಹಿ ಆಡಳಿತದ ಪರಿಣಾಮಗಳನ್ನು ಮೊದಲು ಅನುಭವಿಸಿದವರಾಗಿದ್ದರು. ಗುಲ್ವಾಡಿ ವೆಂಕಟರಾಯ ಜಾತಿಪದ್ಧತಿಯ ವಿರೋಧ, ಸ್ತ್ರೀ ಶಿಕ್ಷಣ, ಸಮಾನತೆ, ವಿಧವಾ ವಿವಾಹಗಳ ಪರವಾಗಿ ಸಮಾಜದ ಸದಸ್ಯರೊಂದಿಗೆ ವಾಗ್ವಾದಗಳನ್ನು ನಡೆಸಿದರು.

ಆಧುನಿಕತೆ ಮೈಸೂರು ರಾಜ್ಯದಲ್ಲಿ ಮಹಾರಾಜರ ಆಡಳಿತದ ಮೂಲಕ ಜನ ಸಾಮಾನ್ಯರ ಅನುಭವಕ್ಕೆ ಬಂದಿತು. ವಿಜಯನಗರ ಪತನ ನಂತರ ಸಾಹಿತ್ಯ ಕಲೆಗಳಿಗೆ ಮುಮ್ಮಡಿ ಕೃಷ್ಣರಾಜರೇ

ಆಶ್ರಯ ನೀಡಿದರು. ಬ್ರಿಟಿಷ್ ಆಳ್ವಿಕೆಯ ಇಂಗ್ಲಿಷ್ ಶಿಕ್ಷಣ ನೀತಿಯ ಲಾಭವನ್ನು ಸಮಾಜದ ಮೇಲ್ವರ್ಗಗಳು ಮೊಟ್ಟ ಮೊದಲು ಪಡೆದುಕೊಂಡವು. ಅಲ್ಲದೆ ಸಾಂಪ್ರದಾಯಿಕ ಸಮಾಜಕ್ಕೆ ಹೊಂದಿಕೊಂಡು ಹೊಸ ಕಾಲಗತಿಗೆ ತಕ್ಕಂತೆ ನಡೆಯುವ ಪ್ರವೃತ್ತಿಯನ್ನೂ ಬೆಳೆಸಿಕೊಂಡವು.

ಉತ್ತರ ಕರ್ನಾಟಕ ವಿಜಯನಗರ ಪತನದ ನಂತರ ವಿವಿಧ ಆಳ್ವಿಕೆಯಡಿ ಮತ್ತು ಪ್ರದೇಶಗಳಲ್ಲಿ ಹಂಚಿಹೋಗಿತ್ತು. ಈ ಭಾಗದ ಕನ್ನಡಿಗರು ತಮ್ಮ ಸ್ವಂತಿಕೆ ಉಳಿಸಿಕೊಳ್ಳಲು ಜೀವಕೊಟ್ಟು ಹೋರಾಡಿದರು. ಮರಾಠಿಯ ಪ್ರಭಾವ ಈ ಭಾಗದ ವಿದ್ಯಾವಂತರನ್ನು ಆಕರ್ಷಿಸಿತು.

ನಿಜಾಮರು ಆಳ್ವಿಕೆ ನಡೆಸುತ್ತಿದ್ದ ಹೈದ್ರಾಬಾದ್ ಕರ್ನಾಟಕದ ಪ್ರದೇಶಗಳಿಂದ ಯಾವುದೇ ಪ್ರಮುಖ ಕಾದಂಬರಿ ಪ್ರಕಟವಾಗದಿರಲು ಕಾರಣ ಸ್ವಾತಂತ್ರ್ಯ ದೊರೆಯುವರೆಗೂ ಇಲ್ಲಿ ನಿಜಾಮರ ಆಳ್ವಿಕೆ ಮುಂದುವರೆದುದೇ ಆಗಿದೆ. ಇಂಗ್ಲಿಷ್ ಶಿಕ್ಷಣದ ವೈಚಾರಿಕ ಕ್ರಮ ಮೊಳೆಯಲು ಅವಕಾಶವಿಲ್ಲದಂತಾಯಿತು. ಕನ್ನಡಕ್ಕಿಂತ ಉರ್ದು ಭಾಷೆಗೆ ಇಲ್ಲಿ ಪ್ರಾಮುಖ್ಯತೆ ಇತ್ತು.

ನಿಜಾಮರ ಆಳ್ವಿಕೆಯಲ್ಲಿ ಮಹಮ್ಮದೀಯರ ಆಚಾರ-ವಿಚಾರಗಳು ಹೆಚ್ಚು ವಾಡಿಕೆಯಲ್ಲಿದ್ದವು. ನಿಜಾಮರ ಕೆಳಗಿದ್ದ ಸುಬಾನುಗಳು ಜನಸಾಮಾನ್ಯರ ಬಳಿ ತೆರಳಿ ತೆರಿಗೆ ವಸೂಲಿ ಮಾಡುತ್ತಿದ್ದರು. ಪರಧರ್ಮದ ಸ್ತ್ರೀಯರನ್ನು ಒತ್ತಾಯ ಪೂರ್ವಕವಾಗಿ ನಿಖಾ ಮಾಡಿಕೊಂಡು ತಮ್ಮ ಧರ್ಮಕ್ಕೆ ಮತಾಂತರ ಮಾಡಿಕೊಳ್ಳುತ್ತಿದ್ದರು. ಸಮಾಜದ ಕೆಲವು ವರ್ಗದ ಸ್ತ್ರೀಯರು ಮನೆಯ ಹೊಸ್ತಿಲಿನಿಂದ ಹೊರಗೆ ಬರುತ್ತಿರಲಿಲ್ಲ. ಹೆಂಗಸರ ಮೇಲೆ ಅತ್ಯಾಚಾರಗಳು, ಬಲತ್ಕಾರಗಳು ನಡೆಯುತ್ತಿದ್ದು ಎಂದಿನಂತೆ ಸ್ತ್ರೀಯರು ಅಭದ್ರ ಸ್ಥಿತಿಯಲ್ಲಿದ್ದರು. ಹೀಗಾಗಿ ಸಮಾಜದಲ್ಲಿದ್ದ ಆತಂಕದ ವಾತಾವರಣ ಮಹಿಳೆಯರ ಸ್ವಾತಂತ್ರ್ಯ ಕಸಿದುಕೊಂಡ ಸ್ಥಿತಿ ಏರ್ಪಟ್ಟಿತ್ತು.

ಇಸ್ಲಾಂ ಧರ್ಮದ ಸಾಹಿತಿಗಳಿಗೆ ಅನ್ಯ ಸಾಹಿತಿಗಳಿಗಿಂತ ಹೆಚ್ಚಿನ ಗೌರವ ಸಿಗುತ್ತಿತ್ತು. ಪಾರ್ಶಿ ಭಾಷೆಗೆ ಹೆಚ್ಚಿನ ಮಹತ್ವವಿತ್ತು. ಭಾರತದ ಅನ್ಯ ಪ್ರದೇಶಗಳಲ್ಲಿ ಪಾಶ್ಚಾತ್ಯರ ಶಿಕ್ಷಣದ ಪ್ರಭಾವದಿಂದಾಗಿ ಆಧುನಿಕತೆಯ ಪ್ರವೇಶವಾಗಿದ್ದರೂ ನಿಜಾಮರ ಆಳ್ವಿಕೆಗೆ ಒಳಪಟ್ಟ ಹೈದ್ರಾಬಾದ್-ಕರ್ನಾಟಕ ಪ್ರದೇಶಗಳು ಇದರಿಂದ ಹೊರತಾಗಿತ್ತು, ಬ್ರಿಟಿಷರು ತಮಗೆ ಅನುಕೂಲಕರ ಪ್ರದೇಶಗಳಾದ ಮಂಗಳೂರು, ಮದ್ರಾಸ್, ಮುಂಬೈ ಮುಂತಾದ ಕಡೆಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ತೆರೆದಿದ್ದರು. ಆದರೆ ಉತ್ತರ ಕರ್ನಾಟಕದಲ್ಲಿ ಬ್ರಿಟಿಷರ ಯಾವುದೇ ಕೇಂದ್ರ ಇರಲಿಲ್ಲ. ಆ ಭಾಗಗಳು ಮದ್ರಾಸ್ ಮತ್ತು ಮುಂಬೈಗಳ ವಿವಿಧ ಆಡಳಿತದಡಿ ಹಂಚಿಹೋಗಿತ್ತು. ಹಾಗಾಗಿ ಹೈದ್ರಾಬಾದ್ ಕರ್ನಾಟಕಕ್ಕೂ ಪಾಶ್ಚಾತ್ಯರಿಗೂ ನೇರ ಸಂಪರ್ಕ ಉಂಟಾಗಲಿಲ್ಲ. ಆಧುನಿಕ ಶಿಕ್ಷಣ ಪರಿಚಯ ಪಡೆಯದ ಈ ಭಾಗದ ಕನ್ನಡ ಹಾಗೂ ತೆಲುಗು ಪ್ರದೇಶಗಳಿಂದ ಆರಂಭದಲ್ಲಿ ಯಾವುದೇ ಸಾಹಿತ್ಯ ಪ್ರಕಟವಾಗಲಿಲ್ಲ.

ಈ ಎಲ್ಲ ಕಾರಣಗಳಿಂದ ಸಮಕಾಲೀನ ಲೇಖಕರ ಕಾದಂಬರಿಗಳಲ್ಲಿ ಭಿನ್ನ ಬಗೆಯ ರಚನಾ ಕೌಶಲಗಳನ್ನು ಕಾಣಬಹುದು. ಉದಾಹರಣೆಗೆ ದಕ್ಷಿಣ ಕನ್ನಡದ ಬರಹಗಾರರಾದ ಗುಲ್ವಾಡಿಯವರ ಕಾದಂಬರಿಯಲ್ಲಿ ವಿಧವಾ ಸಮಸ್ಯೆಯನ್ನು ಭಾರತೀಯ ಸಮಾಜದ ಪ್ರಮುಖ ಸಮಸ್ಯೆಯಾಗಿ ಗುರುತಿಸಲಾಗಿದೆ. ಅಂದಿನ ಸಮಾಜದಲ್ಲಿ ಬಡತನ ಬರಗಾಲಗಳಂತಹ ಅನ್ನದ ಸಮಸ್ಯೆ ಸಮಾಜವನ್ನು ಪೀಡಿಸುತ್ತಿದ್ದರೂ ವಿಧವಾ ಸಮಸ್ಯೆ, ಬಾಲ್ಯ ವಿವಾಹಗಳು ಅಷ್ಟೇ ಪ್ರಮುಖ ಸಾಮಾಜಿಕ ಸಮಸ್ಯೆಗಳಾಗಿದ್ದವು. ವಿಧವಾ ಸಮಸ್ಯೆ ಕೇವಲ ಮೇಲ್ಜಾತಿಯ ಸಮಸ್ಯೆಯಂತೆ ಕಂಡರೂ ಗುಲ್ವಾಡಿಯವರು ಇಂದಿರಾಬಾಯಿಯಲ್ಲಿ ಸ್ತ್ರೀಯರು ಎದುರಿಸುತ್ತಿದ್ದ ಪ್ರಮುಖ ಸಾಮಾಜಿಕ ಸಮಸ್ಯೆಯಾಗಿ ಚಿತ್ರಿಸಿದರು.

ತೆಲುಗು ಸಂದರ್ಭ

ತೆಲುಗು ನಾಡಿನಲ್ಲಿ ಇಂಗ್ಲಿಷ್ ಶಿಕ್ಷಣದ ಪ್ರಭಾವ ದಕ್ಷಿಣಾಂಧ್ರದಿಂದ ಪ್ರಾರಂಭವಾಯಿತು. ನಾಡನ್ನು ಆಳಲು ತೆರೆಯಲಾಗಿದ್ದ ವಸಾಹತುಶಾಹಿ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸಲು ಮಾತ್ರ ಇಂಗ್ಲಿಷ್ ಕಲಿಸಲಾಗುತ್ತಿತ್ತು. ಆದರೆ ಇಂಗ್ಲಿಷ್ ಜನರ ನಡುವೆ ವ್ಯವಹರಿಸುವ ತೆಲುಗು ಯುವಕರು ಅವರ ಸಂಸ್ಕೃತಿಯನ್ನು ಅರಿಯಲೆತ್ನಿಸಿದರು. ಆಚಾರ-ವಿಚಾರ ಸಾಹಿತ್ಯಗಳನ್ನು ತಿಳಿದುಕೊಂಡು ಅವರಂತೆಯೇ ತಮ್ಮ ಸಂಪ್ರದಾಯಗಳಲ್ಲಿ ಅವನ್ನು ಪಾಲಿಸಬೇಕೆಂದು ಹಂಬಲಿಸಿದರು.

ಆರಂಭದ ತೆಲುಗು ಕಾದಂಬರಿಕಾರರು ಮೇಲ್ವರ್ಗಕ್ಕೆ ಸೇರಿದವರಾಗಿದ್ದರು ಹಾಗೂ ಇಂಗ್ಲಿಷ್ ಶಿಕ್ಷಣ ಪಡೆದವರಾಗಿದ್ದರು. ಯೂರೋಪಿನ ವೈಚಾರಿಕತೆಯ ನಿಟ್ಟಿನಿಂದ ತಮ್ಮ ಸಮಾಜದಲ್ಲಿ ಅತಿ ಹೆಚ್ಚು ಹಿಂಸೆಗೊಳಗಾಗುತ್ತಿದ್ದ ಹೆಣ್ಣನ್ನು ತಮ್ಮ ಸಾಹಿತ್ಯದ ಕೇಂದ್ರ ವಸ್ತುವಾಗಿ ಮಾಡಿಕೊಂಡರು. ಅವಳ ಮೇಲಾಗುತ್ತಿದ್ದ ಹಿಂಸೆಯನ್ನು ಕಾದಂಬರಿಗಳ ಮೂಲಕ ವಿವರಿಸುತ್ತಾ ಅವುಗಳಿಗೆ ಪರಿಹಾರ ಮಾರ್ಗ ಸೂಚಿಸತೊಡಗಿದರು. ತೆಲುಗಿನ ಆರಂಭದ ಕಾದಂಬರಿಗಳ ಮುಖ್ಯ ಆಶಯ ಸ್ತ್ರೀಯರ ಶಿಕ್ಷಣವೇ ಆಗಿತ್ತು. ಕೆಲವು ಲೇಖಕರು ಸ್ತ್ರೀಯರ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯ ನೀಡಿ ಕಾದಂಬರಿಗಳನ್ನು ರಚಿಸಿದರು. ಅವರಲ್ಲಿ ಮುಖ್ಯವಾಗಿ ಪಂತುಲು ಅವರ ಕಾದಂಬರಿಗಳನ್ನು ಹಾಗೂ ಪನಪ್ಪಾಕಮು ಅನಂತಾಚಾರ್ಯುಲು ಅವರ ಮಂಜುವಾಣಿ ವಿಜಯಮು ಮತ್ತು ಧರ್ಮವತಿ ವಿಲಾಸಮು ಕಾದಂಬರಿಗಳನ್ನು ಹೆಸರಿಸಬಹುದು.

ನರಹರಿ ಗೋಪಾಲಕೃಷ್ಣ ಶೆಟ್ಟಿ ಅವರ ಶ್ರೀರಂಗರಾಜು ಚರಿತ್ರೆ ಹಾಗೂ ನಂಬೂರುತಿರು ನಾರಾಯಣಸ್ವಾಮಿ ಅವರ ಪ್ರಣಯಮಹಿಮ ಕಾದಂಬರಿಗಳು ವೇಶ್ಯೆಯರ ಸಂಗದಿಂದ ಉಂಟಾಗುವ ಅನಾಹುತಗಳ ಚಿತ್ರಣವನ್ನು ನೀಡುತ್ತವೆ. ಮಧ್ಯವರ್ತಿಗಳ ಮೋಸ ವಂಚನೆಗಳನ್ನು ವಿವರಿಸುವ ಆಶಯ ಕೆಲವು ಕಾದಂಬರಿಕಾರರದು. ಇನ್ನೂ ಕೆಲವರು ಮಹಾ ಪತಿಭಕ್ತಿಯುಳ್ಳ ಸ್ತ್ರೀಯರ

ಕುರಿತು ತಿಳಿಸುವ ಆಶಯವನ್ನು ಹೊಂದಿದ್ದರು. ಮತ್ತೆ ಕೆಲವರು ಇಂಗ್ಲಿಷ್ ಶಿಕ್ಷಣದ ಮಹತ್ವವನ್ನು ತಿಳಿಸಿದರೆ, ಕೆಲವು ಕಾದಂಬರಿಗಳು ಅದರಿಂದಾಗುತ್ತಿದ್ದ ನಷ್ಟಗಳನ್ನು ವಿವರಿಸುವಂತಿವೆ. ಜಾತಿ ಸಮಸ್ಯೆಗಳ ಕುರಿತು ಉನ್ನವ ಲಕ್ಷ್ಮೀನಾರಾಯಣ ಅವರ ಮಾಲಪಲ್ಲಿ ಕಾದಂಬರಿಯಲ್ಲಿ ದೀರ್ಘವಾದ ಚಿತ್ರಣ ಕಾಣಬಹುದು.

ಪ್ರತಿಯೊಬ್ಬ ಕಾದಂಬರಿಕಾರರೂ ತಮ್ಮ ಸಮಾಜದಲ್ಲಾಗುತ್ತಿದ್ದ ಸಮಸ್ಯೆಯನ್ನು ತಮ್ಮ ಕಾದಂಬರಿಗಳಲ್ಲಿ ಪ್ರತಿನಿಧಿಸಿದ್ದಾರೆ. ಹಾಗಾಗಿ ಒಬ್ಬೊಬ್ಬರದು ಒಂದೊಂದು ಸಮಸ್ಯೆಯನ್ನು ಪ್ರತಿಬಿಂಬಿಸುವ ಕಾದಂಬರಿಯಾಗಿ ಮೂಡಿಬಂದಿದೆ. ಸ್ತ್ರೀ ಸಮಸ್ಯೆ ಕುರಿತು ಕೆಲವರು ತಮ್ಮ ಕೃತಿಗಳಲ್ಲಿ ಪ್ರತಿಭಟನೆಯ ನಿಲುವು ತಳದಿದ್ದಾರೆ. ಮತ್ತೆ ಕೆಲವು ಲೇಖಕರು ಮೌನವಾಗಿ ಪ್ರತಿಕ್ರಿಯಿಸಿ ದಾಖಲಿಸಿದ್ದಾರೆ. ಆರಂಭದ ತೆಲುಗು ಕಾದಂಬರಿಕಾರರು ಸಮಾಜದಲ್ಲಿ ಪ್ರಚಲಿತವಾಗಿದ್ದ ಬಾಲ್ಯ ವಿವಾಹ, ವರದಕ್ಷಿಣೆ, ಸಹಗಮನ, ವಿಧವಾ ಸಮಸ್ಯೆ ಮುಂತಾದ ಸಮಸ್ಯೆಗಳ ಕುರಿತು ಕಾದಂಬರಿಗಳನ್ನು ರಚಿಸತೊಡಗಿದರು.

ಕನ್ನಡ ಕಾದಂಬರಿಗಳು ಹುಟ್ಟಿಕೊಳ್ಳುವ ಸಂದರ್ಭದಲ್ಲಿದ್ದ ಸಾಂಸ್ಕೃತಿಕ ಸ್ಥಿತಿಗತಿಗಳು ತೆಲುಗು ಕಾದಂಬರಿಗಳ ಸಂದರ್ಭದಲ್ಲೂ ಕಂಡುಬರುತ್ತವೆ. ಆದ್ದರಿಂದ ತೆಲುಗು ಕಾದಂಬರಿಗಳನ್ನು ಪರಿಚಯಿಸುವುದಕ್ಕಿಂತ ಪೂರ್ವದಲ್ಲಿ ಸಮಕಾಲೀನ ತೆಲುಗು ರಾಜ್ಯದ ಸಾಂಸ್ಕೃತಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬಹುದು.

ಟಿಪ್ಪುಸುಲ್ತಾನ ಮತ್ತು ಬ್ರಿಟಿಷರ ನಡುವೆ ನಡೆದ ಅಂತಿಮ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪುಸುಲ್ತಾನನು ಶ್ರೀರಂಗಪಟ್ಟಣದಲ್ಲೂ ಅಂದು ತನ್ನ ವಶದಲ್ಲಿದ್ದ ತೆಲುಗು ಭಾಷಿಕ ಪ್ರದೇಶಗಳಲ್ಲೂ ಬ್ರಿಟಿಷರಿಗೆ ಸೋತ ಪರಿಣಾಮವಾಗಿ ಅಂದಿನ ತೆಲುಗು ಪ್ರದೇಶಗಳೆಲ್ಲ ಬ್ರಿಟಿಷರ ಪಾಲಾದವು. ನಿಜಾಮರ ಆಳ್ವಿಕೆಯಲ್ಲಿದ್ದ ಕರ್ನೂಲು, ಕಡಪ ಮೊದಲಾದ ಪ್ರದೇಶಗಳನ್ನು ಸ್ವಾಧೀನಮಾಡಿಕೊಂಡ ಬ್ರಿಟಿಷರು ಒಟ್ಟು ಆಂಧ್ರ ಪ್ರದೇಶದ ಸಮುದ್ರ ತೀರಪ್ರದೇಶಗಳನ್ನು ಈಸ್ಟ್ ಇಂಡಿಯಾ ಕಂಪನಿಗೆ ಸೇರಿಸಿಕೊಂಡರು.

ಇದಕ್ಕಿಂತ ಮುಂಚೆ ಆಂಧ್ರಪ್ರದೇಶ ನಿಜಾಮರ ಆಳ್ವಿಕೆಯಲ್ಲಿತ್ತು. ನಿಜಾಮರು ದೆಹಲಿ ಚಕ್ರವರ್ತಿಯ ಸಾಮಂತರಾಗಿದ್ದರು. ಗೋಲ್ಕೊಂಡದ ಸುಬಾನುಗಳ ಕೈಯಲ್ಲಿ ಸರ್ವಾಧಿಕಾರವಿತ್ತು. ಇಂತಹ ಪರಿಸ್ಥಿತಿಯಲ್ಲಿ ಸಾಮಾಜಿಕವಾಗಿ ಮಹಮ್ಮದಿಯರ ಆಚಾರ ವಿಚಾರಗಳು ಹೆಚ್ಚು ಆಚರಣೆಯಲ್ಲಿದ್ದವು. ಪಾರ್ಸಿ ಭಾಷೆ ವ್ಯವಹಾರದಲ್ಲಿತ್ತು. ಪ್ರಾಥಮಿಕ ಶಾಲೆಗಳಲ್ಲಿ ಪಾರ್ಸಿ ಭಾಷೆಯನ್ನು ಕಲಿಸಲಾಗುತ್ತಿತ್ತು. ಜನತೆ ಮಹಮ್ಮದಿಯರ ವೇಷಭೂಷಣಗಳನ್ನು ಅನುಸರಿಸುತ್ತಿದ್ದರು. ಬ್ರಿಟಿಷರ ಆಕ್ರಮಣದ ನಂತರವೂ ಕೆಲಕಾಲದವರೆಗೆ ಪಾರ್ಸಿ ಭಾಷೆಯೆ ಅಲ್ಲಿನ ಆಡಳಿತ ಭಾಷೆಯಾಗಿತ್ತು. ಮಹಮ್ಮದಿಯರ ಆಡಳಿತದಲ್ಲಿ ಇತರ ಭಾಷೆಯ ಕವಿಗಳಿಗೆ, ಪಂಡಿತರಿಗೆ ಪ್ರಾಧಾನ್ಯವಿತ್ತು. ಅವರಿಗೆ

ಜಹಗೀರುಗಳನ್ನು, ಇನಾಮುಗಳನ್ನು ಕೊಟ್ಟು ಸತ್ಕರಿಸಲಾಗುತ್ತಿತ್ತು. ಭೂಕಂಪ–ಬರಗಾಲಗಳ ಸಮಸ್ಯೆಗಳನ್ನು ಹೊರತುಪಡಿಸಿ ಪ್ರಜೆಗಳು ಶಾಂತಿ–ನೆಮ್ಮದಿಯಿಂದ ಜೀವಿಸುತ್ತಿದ್ದರು.

ತೆಲುಗು ನಾಡಿನಲ್ಲಿ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ನಂತರ ಆರ್ಥಿಕ ಸ್ಥಿತಿ ಬದಲಾವಣೆಯಾಯಿತು. ರಾಜ್ಯವನ್ನು ಮಂಡಲಗಳಾಗಿ ವಿಭಾಗಿಸಿ ಅವುಗಳಿಗೆ ಕಲೆಕ್ಟರ್‌ಗಳನ್ನು ನೇಮಿಸಲಾಯಿತು. ಪಂಚಾಯಿತಿ ಪದ್ಧತಿಯಿಂದ ನ್ಯಾಯ ನೀಡುವ ವ್ಯವಸ್ಥೆ ಉಂಟಾಯಿತು. ಬ್ರಿಟಿಷರ ಜೀವನ ವಿಧಾನ, ಅವರ ಆಚಾರ ವಿಚಾರಗಳು ಜನ ಸಾಮಾನ್ಯರಿಗೆ ಆಕರ್ಷಿತವಾದವು. ದೇಶೀಯ ಕಸಬುಗಳು ಕ್ಷೀಣಿಸತೊಡಗಿದವು. ಜನರು ಪಟ್ಟಣದ ಕಡೆಗೆ ವಲಸೆ ಹೋಗತೊಡಗಿದರು. ಇಂಗ್ಲಿಷ್ ಶಿಕ್ಷಣ ಜಾರಿಗೆ ಬಂದಿತು. ಇಂಗ್ಲಿಷ್ ಶಿಕ್ಷಣ ಪಡೆದವರಿಗೆ ಬ್ರಿಟಿಷ್ ಆಡಳಿತ ವರ್ಗದಲ್ಲಿ ಕೆಲಸ ನೀಡಲಾಗುತ್ತಿತ್ತು. ಚೆನ್ನೈ (ಅಂದಿನ ಚೆನ್ನಪಟ್ಟಣ)ದಲ್ಲಿ ಮೊದಲ ಇಂಗ್ಲಿಷ್ ಶಾಲೆ ಆರಂಭಗೊಂಡಿತು. ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ದೇಶೀಯ ಆಚಾರಗಳು ಬದಲಾಗತೊಡಗಿದವು.

ಬ್ರಿಟಿಷರು ತಮ್ಮ ವ್ಯಾಪಾರಕ್ಕೆ ಅನುಕೂಲವಾಗುವಂತೆ ಕೊಲ್ಕಾತ್ತಾ, ಚೆನ್ನೈ ಮುಂಬೈ, ರಾಜಮಂಡ್ರಿಯಲ್ಲಿ ಮಿಷನರಿಗಳನ್ನು ಸ್ಥಾಪಿಸಿದರು. ಕ್ರೈಸ್ತ ಮಿಷನರಿಗಳು ಇಂಗ್ಲಿಷ್ ಶಿಕ್ಷಣದೊಂದಿಗೆ ಮತ ಪ್ರಚಾರ ಕೂಡ ಮಾಡತೊಡಗಿದವು. ರಾಜಾರಾಮ್ ಮೋಹನರಾಯರ ಬ್ರಹ್ಮ ಸಮಾಜವೂ ಅನೇಕ ಸುಧಾರಣೆಗಳನ್ನು ಮಾಡತೊಡಗಿತ್ತು. ಸತಿ ಸಹಗಮನ, ಬಾಲ್ಯವಿವಾಹ, ಮೂಢನಂಬಿಕೆಗಳನ್ನು ಹೋಗಲಾಡಿಸಲು ಅವರು ಹೋರಾಟ ನಡೆಸಿದ್ದರು. ಅವರಂತೆ ತೆಲುಗು ನಾಡಿನಲ್ಲಿ ಕೊಮರೇಶ್ವರವು ಶ್ರೀನಿವಾಸಪಿಳ್ಳೈ, ಗಾಜುಲ ಲಕ್ಷ್ಮಿನರಸು ಶೆಟ್ಟಿ, ವೆಂಬಾಕು ರಾಘವಾಚಾರ್ಯುಲು ಮೊದಲಾದವರು ಸಮಾಜ ಸುಧಾರಣಾ ಕೆಲಸಗಳಿಗೆ ಪ್ರೋತ್ಸಾಹ ನೀಡಿದರು. ಇವರೆಲ್ಲರೂ ಬ್ರಿಟಿಷ್ ಆಡಳಿತಕ್ಕೆ ಒಳಪಡುವ ಚೆನ್ನೈನಲ್ಲಿ ಸರಕಾರಿ ಹುದ್ದೆಗಳಲ್ಲಿದ್ದರು.

ಇವರೆಲ್ಲ ಕೂಡಿ ಹಿಂದೂ ಲಿಟರರಿ ಸೊಸೈಟಿಯನ್ನು ಸ್ಥಾಪಿಸಿ ಸಮಾಜ ಸುಧಾರಣೆಯನ್ನು ಚರ್ಚಿಸತೊಡಗಿದರು. ಈ ಕಾಲದಲ್ಲಿ ಚೆನ್ನಪಟ್ಟಣ ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಉತ್ತಮಗೊಂಡಿತು. ಇದರ ಫಲವಾಗಿ ತೆಲುಗು ಜನರಲ್ಲಿ ತಮ್ಮ ನಾಡುನುಡಿ ಕುರಿತು ಸುಧಾರಿಸಬೇಕೆಂಬ ಹಂಬಲ ಬೆಳೆಯ ತೊಡಗಿತು. ರಾಜಮಂಡ್ರಿ ಮತ್ತು ಚೆನ್ನಪಟ್ಟಣದಲ್ಲಿ ಅನೇಕ ಪತ್ರಿಕೆಗಳು ಪ್ರಕಟವಾದವು, ವಿಶ್ವವಿದ್ಯಾಲಯಗಳು ಪ್ರಾರಂಭವಾದವು.

ಪತ್ರಿಕೆಗಳಿಂದಾಗಿ ಜನರು ಜಾಗೃತಗೊಳ್ಳತೊಡಗಿದರು. ತಮ್ಮ ಸಮಾಜವನ್ನು ಸುಧಾರಿಸಬೇಕೆಂಬ ಭಾವನೆ ಬೆಳೆಯತೊಡಗಿತು. ವಿಧವಾ ವಿವಾಹಗಳನ್ನು ಪ್ರೋತ್ಸಾಹಿಸಲಾಯಿತು. ಈ ಕುರಿತಾಗಿ ರಾಮಗೋಪಾಲ ಘೋಷ್ ಅವರು ತೆಲುಗು ಭಾಷೆಯಲ್ಲಿ 'ದರ್ಶನಮು' ಹಾಗೂ 'ಜ್ಞಾನಾನ್ನಮು' ಎಂಬ ಪತ್ರಿಕೆಗಳನ್ನು ಪ್ರಕಟಿಸಿದರು. ಇದರ ಪರಿಣಾಮವಾಗಿ ದೇಶೀಯ ಜನರಲ್ಲಿ ಸಾಮಾಜಿಕ,

ರಾಜಕೀಯ, ಶೈಕ್ಷಣಿಕ ಹಾಗೂ ವೈಜ್ಞಾನಿಕ ವಿಷಯಗಳಲ್ಲಿ ಆಸಕ್ತಿ ಹುಟ್ಟಿಕೊಂಡಿತು. ಇದೇ ಕಾಲದಲ್ಲಿ ಬಂಗಾಳದಲ್ಲಿ ರವೀಂದ್ರನಾಥ ಠಾಗೂರ್, ಈಶ್ವರಚಂದ್ರ ವಿದ್ಯಾಸಾಗರ, ಬೊಂಬಾಯಿಯಲ್ಲಿ ದಾದಾಬಾಯಿ ನವರೋಜಿ, ಚೆನ್ನಪಟ್ಟಣದಲ್ಲಿ ಗಾಜುಲ ಲಕ್ಷ್ಮಿ ನರಸುಶೆಟ್ಟಿ ಮುಂತಾದವರು ಪತ್ರಿಕೆಗಳನ್ನು ಪ್ರಕಟಿಸುವುದೇ ಅಲ್ಲದೆ ಸಮಾಜ ಸುಧಾರಣಾ ಸಂಘಗಳನ್ನು ಸ್ಥಾಪಿಸಿ ತಮ್ಮ ತಮ್ಮ ಪ್ರದೇಶಗಳಲ್ಲಿ ನಾಯಕತ್ವ ವಹಿಸಿಕೊಂಡು ಸಮಾಜದ ಜನರನ್ನು ಬದಲಾವಣೆಯತ್ತ ಕೊಂಡೊಯ್ಯುವ ಪ್ರಯತ್ನ ಮಾಡುತ್ತಿದ್ದರು.

ಬ್ರಿಟಿಷ್ ದೊರೆಗಳು ಇಂಗ್ಲಿಷ್ ಶಿಕ್ಷಣ ಪಡೆದವರಿಗೆಲ್ಲ ಬ್ರಿಟಿಷ್ ಆಡಳಿತದಲ್ಲಿ ಕೆಲಸ ಕೊಡುವುದಾಗಿ ಸಾರಿದರು. ಇದರಿಂದ ದೇಶೀಯರಲ್ಲಿ ಇಂಗ್ಲಿಷ್ ಶಿಕ್ಷಣದ ಕುರಿತು ವ್ಯಾಮೋಹ ಹೆಚ್ಚಿತು. ಜನರಿಗೆ ತಮ್ಮ ಹಕ್ಕುಗಳ ಕುರಿತು ತಿಳುವಳಿಕೆ ಉಂಟಾಗತೊಡಗಿತು. ಇಂಗ್ಲಿಷ್ ಶಿಕ್ಷಣ ದೇಶದೆಲ್ಲೆಡೆ ವ್ಯಾಪಿಸಿತು. ಗೋದಾವರಿ ಆಣೆಕಟ್ಟು, ಕೃಷ್ಣ ಆಣೆಕಟ್ಟುಗಳು ನಿರ್ಮಾಣಗೊಂಡವು. ಸಾರಿಗೆ ಸೌಕರ್ಯಗಳು, ರಸ್ತೆಗಳು, ಅಂಚೆ ಮತ್ತು ತಂತಿಗಳ ಸೌಲಭ್ಯ ವಿಸ್ತರಣೆಗೊಂಡವು.

ಈ ಮೂಲಕ ಆಧುನಿಕತೆ ಪ್ರವೇಶ ಪಡೆದರೂ ಸಮಾಜದಲ್ಲಿರುವ ಬಾಲ್ಯವಿವಾಹ, ಸ್ತ್ರೀ ಅಸಮಾನತೆ, ವಿಧವಾ ಸಮಸ್ಯೆಗಳು, ವರದಕ್ಷಿಣೆ, ಮೂಢನಂಬಿಕೆಗಳಂತಹ ದುರಾಚಾರಗಳು ಕ್ಷೀಣಿಸಿರಲಿಲ್ಲ. ಸಮಾಜದಲ್ಲಿ ಹಿಂಸೆಗೆ ಒಳಗಾಗುವ ಹೆಣ್ಣನ್ನು ಸ್ವತಃ ತಮ್ಮ ಮುಂದೆಯೇ ಕಾಣುತ್ತಿದ್ದ ಸುಧಾರಕರು ತಮ್ಮ ಸಮಾಜದ ವಿಮರ್ಶೆ ಮಾಡತೊಡಗಿದರು. ಹಿಂಸೆಯಿಂದ ಹೆಣ್ಣನ್ನು ಮುಕ್ತಳಾಗಿಸುವ ಪ್ರಯತ್ನ ಮಾಡಿದರು. ಸಮಾಜದ ಮೇಲುವರ್ಗಕ್ಕೆ ಸೇರಿದ ಆರಂಭದ ತೆಲುಗು ಕಾದಂಬರಿಕಾರರು ತಮ್ಮ ಸಮಾಜವನ್ನು ಸುಧಾರಿಸುವ ಪ್ರಯತ್ನವಾಗಿ ಹೆಣ್ಣಿನ ಸಮಸ್ಯೆಗಳನ್ನೇ ಮುಖ್ಯ ವಸ್ತುವಾಗಿಟ್ಟುಕೊಂಡು ಕೃತಿಗಳನ್ನು ರಚಿಸತೊಡಗಿದರು.

ವೀರೇಶಲಿಂಗಂ ಪಂತುಲು, ಚಿಲಕಮರ್ತಿ ಲಕ್ಷ್ಮೀನರಸಿಂಹ, ಕೇತವರಪು ವೆಂಕಟಶಾಸ್ತ್ರೀ ಮುಂತಾದ ಕಾದಂಬರಿಕಾರರು ತಮ್ಮ ಪರಿಮಿತಿಯಲ್ಲಿದ್ದುಕೊಂಡೇ ಕಾದಂಬರಿಗಳನ್ನು ರಚಿಸತೊಡಗಿದರು. ಕಾದಂಬರಿಕಾರರು ತಮ್ಮ ಕಲ್ಪನಾ ಲೋಕವೊಂದನ್ನು ನಿರ್ಮಿಸಿ ಅದರೊಳಗೆ ವಾಸ್ತವ ಸಮಾಜದ ಸಮಸ್ಯೆಯನ್ನು ಹಲವು ಪಾತ್ರ ಹಾಗೂ ಸನ್ನಿವೇಶಗಳ ಮೂಲಕ ಓದುಗನ ಮನಮುಟ್ಟುವಂತೆ ನಿರೂಪಿಸಿದರು. ನಾಳಿನ ಸಮಾಜದ ಬೇಕು ಬೇಡಗಳನ್ನು ಕಾದಂಬರಿಯಲ್ಲಿ ಚಿತ್ರಿಸತೊಡಗಿದರು. ಈ ರೀತಿಯಲ್ಲಿ ವಾಸ್ತವಿಕ ಸಮಸ್ಯೆ ಆಧಾರಿತ ಕನಸಿನ ಲೋಕ ಕಟ್ಟಿಕೊಟ್ಟ ಕಾದಂಬರಿಗಳು ಜನಪ್ರಿಯಗೊಂಡವು.

ಆರಂಭದಲ್ಲಿ ಕನ್ನಡ-ತೆಲುಗು ಕಾದಂಬರಿಗಳನ್ನು ರಚಿಸಿದವರಲ್ಲಿ ಕಾದಂಬರಿಕಾರ್ತಿಯರು ಅಷ್ಟಾಗಿ ಕಂಡುಬರುವುದಿಲ್ಲ. ಎ.ಪಿ. ವಿರಾಟಮ ತೆಲುಗು ಭಾಷೆಯ ಮೊದಲ ಕಾದಂಬರಿಕಾರ್ತಿ.

ಅವರು 'ಶೋಭಾವತಿ' ಎಂಬ ಸಾಮಾಜಿಕ ಕಾದಂಬರಿಯನ್ನು ಆರಂಭ ಘಟ್ಟದಲ್ಲಿ ಬರೆದರು. ಇವರ ಕಾದಂಬರಿಗಳು ೧೯೨೦ರ ನಂತರದಲ್ಲಿ ಬೆಳಕಿಗೆ ಬಂದವು. ಈ ಮೊದಲೇ ಕನ್ನಡದಲ್ಲಿ ಮಹಿಳಾ ಕಾದಂಬರಿಗಳು ಪ್ರಕಟಗೊಂಡಿರುವುದು ಗಮನಾರ್ಹ. ತೆಲುಗಿನ ಜಯಂತಿ ಸೂರಮ್ಮ, ಮಲ್ಲವರಪು ಸುಬ್ಬಮ್ಮ, ಕನುಪರ್ತಿ ವರಲಕ್ಷ್ಮಮ್ಮ ಇವರು ಆರಂಭ ಘಟ್ಟಕ್ಕೆ ಸೇರುತ್ತಾರೆ. (ದ್ವಾನಾ. ಶಾಸ್ತ್ರಿ). ಕನ್ನಡದಲ್ಲಿ ನಂಜನಗೂಡು ತಿರುಮಲಾಂಬಾ ಅವರು ಮೊದಲ ಕಾದಂಬರಿಕಾರ್ತಿಯಾಗಿ ನಭಾ, ವಿರಾಗಿಣಿ, ಸುಶೀಲೆ, ಮುಂತಾದ ಕಾದಂಬರಿಗಳನ್ನು ಬರೆದರು. ಶಾಂತಾಬಾಯಿ ನೀಲಗಾರ ಅವರು ಸದ್ಗುಣಿ ಕೃಷ್ಣಾಬಾಯಿ ಕಾದಂಬರಿಯನ್ನು ೧೯೦೫ರಲ್ಲಿ ಬರೆದರು. ೧೯೨೦ರ ನಂತರ ಕಲ್ಯಾಣಮ್ಮನವರು ಪ್ರಿಯಂವದಾ, ನಿರ್ಭಾಗ್ಯವನಿತೆ ಮೊದಲಾದ ಕಾದಂಬರಿಗಳನ್ನು ರಚಿಸಿದರು.

ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ಆಯ್ದುಕೊಂಡ ಆರಂಭದ ಕನ್ನಡ ಮತ್ತು ತೆಲುಗು ಕಾದಂಬರಿಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಳ್ಳಬಹುದು.

ಕನ್ನಡ ಕೃತಿಗಳು

ಇಂದಿರಾಬಾಯಿ:(೧೮೯೯)

ಇದು ಕನ್ನಡದ ಮೊಟ್ಟ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ. ಇದಲ್ಲದೆ ಭಾಗೀರಥಿ, ಸೀಮಂತಿನಿ, ಲಾಡು ಪ್ರಿಯಾಚಾರ್ಯ ಎಂಬ ಇನ್ನು ಮೂರು ಕಾದಂಬರಿಗಳನ್ನು ಈ ಕಾದಂಬರಿಯ ಲೇಖಕರಾದ ಗುಲ್ವಾಡಿ ವೆಂಕಟರಾಯರು ಬರೆದಿದ್ದಾರೆ.

ಸಾರಸ್ವತ ಸಮಾಜಕ್ಕೆ ಸೇರಿದ ಲೇಖಕರು ಪೋಲಿಸ್ ಇನ್ಸ್‌ಪೆಕ್ಟರ್ ಆಗಿದ್ದರು. ಶಿಕ್ಷಣದ ಮೂಲಕ ಮಾತ್ರ ಸಾರಸ್ವತ ಸಮಾಜದ ಸುಧಾರಣೆ ಸಾಧ್ಯ ಎಂಬ ಅವರ ನಿಲುವಿಗೆ ಸಹಜವಾಗಿ ಸಂಪ್ರದಾಯವಾದಿಗಳಿಂದ ವಿರೋಧ ವ್ಯಕ್ತವಾಗಿತ್ತು. ವಿಧವಾ ವಿವಾಹ, ಸಮುದ್ರ ಪ್ರಯಾಣ ಮಾಡಿದವರನ್ನು ಅಸ್ಪೃಶ್ಯರಂತೆ ಕಾಣಲಾಗುತ್ತಿತ್ತು. ಅಂತಹವರನ್ನು ಮಠಮಾನ್ಯಗಳು ಜಾತಿಭ್ರಷ್ಟರನ್ನಾಗಿ ಕಾಣುತ್ತಿದ್ದವು. ಸಮಾಜದ ಇತರರೊಂದಿಗೆ ಸಹಪಂಕ್ತಿಯಲ್ಲಿ ಊಟ ಮಾಡುವುದು ಹಾಗೂ ಇನ್ನಿತರೆ ವ್ಯವಹಾರ ನಡೆಸುವುದನ್ನು ನಿಷೇಧಿಸಿತ್ತು. ಈ ಹಿನ್ನೆಲೆಯಲ್ಲಿ ಸಮಾಜದ ವಾಸ್ತವಿಕ ಚಿತ್ರಣವನ್ನು ಓದುಗರ ಮುಂದಿಟ್ಟ ಗುಲ್ವಾಡಿಯವರ ಇಂದಿರಾಬಾಯಿ ಕಾದಂಬರಿಗೆ ಮಹತ್ವದ ಸ್ಥಾನವಿದೆ ಎಂದು ಇಂದಿರಾಬಾಯಿಯ ಮುನ್ನುಡಿಯಲ್ಲಿ ಶಿವರಾಮ ಕಾರಂತರು ಹೇಳಿದ್ದಾರೆ.(೧೮೯೯:೬)

ನಂತರದ ಕಾಲದಲ್ಲಿ ಈ ಕಾದಂಬರಿಗೆ ಮುನ್ನುಡಿಯ ಮಾತು ಬರೆದ ಗೋವಿಂದ ಪೈ ಅವರ ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸಬಹುದು. "ಇದು ರಚಿತವಾಗಿ ಇಂದಿಗೆ ೬೨

ವರ್ಷವಾಯಿತು. ಆ ಕಾಲವೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸಾರಸ್ವತ ಬ್ರಾಹ್ಮಣ ಸಮಾಜವು ಆಗ್ಗೆ ಮುಗಿಯುತ್ತ ಬರುತ್ತಲಿದ್ದ ಅಂದಿನ ಪೂರ್ವಾಚಾರದ ಯುಗದಿಂದ ಇಂದಿನ ಆಂಗ್ಲ ಸಂಸ್ಕೃತಿಯ ಹೊಸ ಯುಗದಲ್ಲಿ ಪ್ರವೇಶಿಸಲಿಕ್ಕೆ ಕಾಲಿಡುತ್ತಿದ್ದ ಆಂದೋಲನದ ಕಾಲ. ಅದರ ಫಲವಾಗಿ ಆಗಣ ಸಮಾಜ ವ್ಯವಸ್ಥೆಯಲ್ಲಿ ಯದೃಚ್ಛೆಯಾ ಆಗುತ್ತಲಿದ್ದ ಪರಿವರ್ತನೆಗಳ ವಿವಿಧ ದೃಶ್ಯಗಳನ್ನು ಒಂದರ ಹಿಂದೆ ಒಂದರಂತೆ ಇದರ ಲೇಖಕರು ತಮ್ಮ ದೃಷ್ಟಿ ವಿಶೇಷಕ್ಕೆ ತೋರಿಬಂದಂತೆ ಇದರಲ್ಲಿ ನಿರೂಪಿಸುತ್ತಾರೆ. ಅದನ್ನು ಓದಿಯೇ ತಿಳಿಯಬೇಕು."(೧೯೫೧:೭)

ಬಾಲವಿಧವೆಯೊಬ್ಬಳ ವೈಧವ್ಯದ ಬವಣೆಗಳನ್ನು, ಆಕೆಯ ಮರುವಿವಾಹವನ್ನು ಚಿತ್ರಿಸುವ ಇಂದಿರಾಬಾಯಿಯಲ್ಲಿ ಸಂಪ್ರದಾಯ ಕಟ್ಟಳೆಗಳಲ್ಲಿ ಮುಳುಗಿಹೋದ ಜನರ ಅಜ್ಞಾನ, ಮೌಢ್ಯಗಳನ್ನು ಬಂಡವಾಳವಾಗಿಟ್ಟುಕೊಂಡು ಮಠಗಳು, ಸನ್ಯಾಸಿಗಳು, ಧಾರ್ಮಿಕ ಮುಖಂಡರ ಡಾಂಭಿಕತೆ ಅನಾಚಾರಗಳನ್ನು ಪ್ರಧಾನವಾಗಿ ಚಿತ್ರಿತವಾಗಿದೆ.

ಈ ಕಾದಂಬರಿಯ ಆರಂಭದಲ್ಲಿ ಎಳೆಯ ವಯಸ್ಸಿನ ಬಾಲಕಿಗೆ ಪ್ರೌಢ ಯುವಕನ ಜೊತೆ ಮದುವೆಯಾಗುತ್ತದೆ. ಆತ ವೇಶ್ಯೆಯರ ಸಂಗದಿಂದ ರೋಗಿಷ್ಟನಾಗಿ ಮೃತನಾಗುತ್ತಾನೆ. ತಂದೆತಾಯಿಯರೇ ತಮ್ಮ ವಿಧವೆಯಾದ ಮಗಳ ಮೇಲೆ ಪರಂಪರಾಗತ ಮನೋಭಾವದಿಂದ ನಿರ್ಬಂಧಗಳನ್ನು ಹೇರುತ್ತಾರೆ. ಬಣ್ಣದ ಬಟ್ಟೆಗಳನ್ನುಟ್ಟರೆ, ಎಣ್ಣೆ ಹಾಕಿ ತಲೆ ಬಾಚಿದರೆ, ಮುದ್ರಿತ ಗ್ರಂಥಗಳನ್ನು ಓದತೊಡಗಿದರೆ ಹಿಂದೂ ಸಮಾಜದ ಜಾತಿ ಸಂಪ್ರದಾಯಗಳು ನಾಶವಾಗುತ್ತವೆ ಎಂದು ಹೆದರಿ ಎಲ್ಲದಕ್ಕೂ ವಿರೋಧ ವ್ಯಕ್ತಪಡಿಸುತ್ತಾರೆ. ವಿಧವೆಯದ ತಮ್ಮ ಮಗಳಲ್ಲಿ ವೈರಾಗ್ಯ ಮೂಡಿಸಲೆಂದು ಮನೆಗೆ ಭಜನ ಮಂಡಳಿಯ ಸಂತರನ್ನು ಕರೆಯಿಸುತ್ತಾರೆ. ಅವರ ಬೋಧನೆಗೂ ಆಚರಣೆಗೂ ಇರುವ ಅಂತರದಿಂದಾಗಿ ಇಂದಿರೆ ಅವರೊಂದಿಗೆ ಬೆರೆಯಲು ಹಿಂಜರಿಯುತ್ತಾಳೆ. ಆ ಭಜನಾ ಮಂಡಳಿಯ ಅಧ್ಯಕ್ಷನು ಬಲವಂತದಿಂದ ಅವಳ ಮನಸ್ಸು ತಿರುಗಿಸಲು ಪ್ರಯತ್ನಿಸಿದಾಗ ಅವನಿಂದ ತಪ್ಪಿಸಿಕೊಂಡು ಮನೆಬಿಟ್ಟು ಹೊರಡುತ್ತಾಳೆ.

ಸಮಾಜ ಸುಧಾರಕನಾದ ಅಮೃತರಾಯ ಮತ್ತು ಅವನ ಹೆಂಡತಿ ಜಲಜಾಕ್ಷಿಯರಲ್ಲಿ ಇಂದಿರೆ ಆಶ್ರಯ ಪಡೆಯುತ್ತಾಳೆ. ಅವರ ಬೆಂಬಲದಿಂದ ಅರ್ಧಕ್ಕೆ ನಿಂತಿದ್ದ ತನ್ನ ಶಿಕ್ಷಣವನ್ನು ಪೂರೈಸುತ್ತಾಳೆ. ನಂತರದಲ್ಲಿ ತನ್ನ ಹಾಗೆಯೆ ಅಮೃತರಾಯನ ನೆರವಿನಿಂದ ವಿದೇಶದಲ್ಲಿ ವಿದ್ಯಾಭ್ಯಾಸ ಮುಗಿಸಿ ಅಧಿಕಾರಿಯಾಗಿ ಮರಳಿದ ಭಾಸ್ಕರನೊಂದಿಗೆ ಮದುವೆಯಾಗುತ್ತಾಳೆ. ಸಮುದ್ರಯಾನ ಮಾಡಿದ್ದಕ್ಕಾಗಿ ಹಾಗೂ ವಿಧವೆಯಾದ ಇಂದಿರೆಯನ್ನು ಮರುವಿವಾಹ ಮಾಡಿಕೊಂಡಿದ್ದಕ್ಕಾಗಿ ಭಾಸ್ಕರನಿಗೆ ಬಹಿಷ್ಕಾರ ಹಾಕಿಸಲು ಇಂದಿರೆಯ ತಂದೆಯೆ ಮಠಾಧೀಶರಿಗೆ ಪತ್ರ ಬರೆಯುತ್ತಾನೆ. ಪ್ರಗತಿಪರ ಕಾರ್ಯಗಳನ್ನು ಪಾಪಕೃತ್ಯಗಳೆಂದು ಪರಿಗಣಿಸಿದ ಮಠಾಧೀಶರು ಭಾಸ್ಕರ ದಂಪತಿಗಳಿಗೆ

ಬಹಿಷ್ಕಾರ ಹಾಕುವಂತೆ ಆಜ್ಞೆ ಮಾಡುತ್ತಾರೆ. ಆದರೆ ಅವರ ಅಣತಿಯನ್ನು ಸಾಮಾಜಿಕವಾಗಿ ಕಾರ್ಯಗತಗೊಳಿಸಲು ಸಾಧ್ಯವಾಗದೆ ಹೋಗುತ್ತದೆ. ಇದರಿಂದ ಇಂದಿರೆಯ ಹೆತ್ತವರಾದ ಭೀಮರಾಯ ಹಾಗೂ ಅಂಬಾಬಾಯಿ ಅದು ಎಲ್ಲಿ ತಮ್ಮ ವಿರುದ್ಧ ತಿರುಗುವುದೋ ಎಂದು ಹೆದರಿ ತಮ್ಮ ಮಗಳ ಬಳಿ ಕ್ಷಮೆಯಾಚಿಸಿ ಒಂದಾಗುತ್ತಾರೆ.

ಈ ಕೃತಿಯಲ್ಲಿ ಸಮಾಜ ಸುಧಾರಣೆಯ ಕಳಕಳಿಯೇ ಮುಖ್ಯವಾಗಿರುವಂತೆ ತೋರುತ್ತದೆ. ಹೆಣ್ಣಿಗಾದ ಅನ್ಯಾಯವನ್ನು ನೀಗಿಸಿ ಆಕೆಯ ಜೀವಿತದ ಹಕ್ಕುಗಳನ್ನು ಮರಳಿ ತಂದುಕೊಡುವ ಮೌಲ್ಯಗಳು ಆದರ್ಶವೆನಿಸುವಂತೆ ಚಿತ್ರಿತವಾಗಿವೆ. ಸಮಾಜದ ರೀತಿ–ನೀತಿಗಳು ಜಡಗೊಂಡ ಸ್ಥಿತಿ ಕಾಣಿಸುವ ಧೋರಣೆ ಇದೆ. ಲೇಖಕರಿಗೆ ಮೆಚ್ಚುಗೆಯಾಗದಿರುವ ಸಂಗತಿಗಳ ವಿಡಂಬನೆ ಮತ್ತು ಅವರಿಗೆ ಮೆಚ್ಚಿಗೆಯಾಗುವ ವಿಷಯಗಳ (ವಿಧವಾ ವಿವಾಹ, ಸ್ತ್ರೀ ಶಿಕ್ಷಣ) ಬಗ್ಗೆ ಸಹಾನುಭೂತಿ ಇದೆ. ಹೀಗಿಲ್ಲಿ ಲೇಖಕರ ವಿಚಾರಗಳು ಸ್ಪಷ್ಟ ನಿಲುವು ತಳೆದಂತೆ ಕಾಣುತ್ತದೆ. ಧಾರ್ಮಿಕ ವಿಧಿ, ಸಂಪ್ರದಾಯ, ಕಂದಾಚಾರದ ಕಟ್ಟುನಿಟ್ಟುಗಳನ್ನು ಕಡೆಗಣಿಸಿ ಸುಧಾರಣೆಯತ್ತ ಸಾಗುವ ಸಮಾಜದ ಸ್ಥಿತ್ಯಂತರವನ್ನು ಈ ಕಾದಂಬರಿ ಚಿತ್ರಿಸುತ್ತದೆ.

ಸುಧಾರಣೆ ಬಯಸುವ ಯುವಪೀಳಿಗೆ ಮತ್ತು ಸಮಾಜದ ಕಟ್ಟುಪಾಡು ವಿರೋಧಿಸುವವರಿಗೆ ಬಹಿಷ್ಕಾರ ಹಾಕುವ ಮಠಮಾನ್ಯಗಳ ಚಿತ್ರಣದ ಮೂಲಕ ಕಥೆಯ ಗತಿ ಧಾರ್ಮಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಒರೆಗೆ ಹಚ್ಚುವ ಹಾಗಿದೆ.

ವಾಗ್ದೇವಿ (೧೯೦೫)

ಆರಂಭಕಾಲದ ಮಹತ್ವದ ಕೃತಿಗಳಲ್ಲಿ ಒಂದು ಎಂದು ಈಗಾಗಲೇ ಗುರುತಿಸಲಾದ **ವಾಗ್ದೇವಿ** ಬೋಳಾರ ಬಾಬುರಾಯರ ಮೊದಲ ಸ್ವತಂತ್ರ ಕಾದಂಬರಿ. ಇವರು ರೆವೆನ್ಯೂ ಇಲಾಖೆಯಲ್ಲಿ ಮ್ಯಾಜಿಸ್ಟ್ರೇಟರಾಗಿದ್ದರು. ಮಧ್ವಮತ ಬ್ರಾಹ್ಮಣ ಸಮಾಜದ ಅನಾಚಾರಗಳನ್ನು ಕಾದಂಬರಿಯಲ್ಲಿ ಪ್ರಸ್ತುತ ಪಡಿಸಲಾಗಿದೆ.

ಈ ಕಾದಂಬರಿಯಲ್ಲಿ ವಾಗ್ದೇವಿಯ ಪಾತ್ರವನ್ನು ಸ್ವತಂತ್ರ ಪಾತ್ರವನ್ನಾಗಿ ರೂಪಿಸಲಾಗಿದೆ. ಸ್ತ್ರೀಯರ ಶಿಕ್ಷಣ ಅಥವಾ ಸ್ತ್ರೀಯರಿಗೆ ಪುರುಷರಂತೆ ಸಮಾನತೆ ಅಥವಾ ಸ್ವಾತಂತ್ರ್ಯವನ್ನು ನೀಡಬಾರದು ಎಂಬಂತೆ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ವಾಗ್ದೇವಿಯಲ್ಲಿ ಪುರುಷಪರ ದೃಷ್ಟಿಕೋನ ಪ್ರಮುಖವಾಗಿದೆ. ಸುಧಾರಣೆಗೊಂಡ ಸಮಾಜದಲ್ಲಿಯೂ ಪುರುಷಪರ ಮೌಲ್ಯಗಳು ಮೇಲುಗೈ ಸಾಧಿಸುವ ಕ್ರಮವನ್ನು ಮುಂಚೂಣಿಗೆ ತರಲಾಗಿದೆ.

ಪಂಚಮಠಗಳಲ್ಲಿ ಒಂದಾದ ಕುಮುದಪುರ ಮಠದ ಸ್ವಾಮಿ ಚಂಚಲನೇತ್ರ ಸನ್ಯಾಸವನ್ನು ಸ್ವೀಕರಿಸಿ ಹದಿನೈದು ವರ್ಷಗಳ ನಂತರ ಒಮ್ಮೆ ತಮ್ಮ ಪೂರ್ವಾಶ್ರಮದ ದೂರದ ಸಂಬಂಧಿ

ವಾಗ್ದೇವಿ ಎಂಬ ವಿವಾಹಿತ ಸ್ತ್ರೀಯನ್ನು ನೋಡಿ ಅವಳಲ್ಲಿ ಮೋಹಿತನಾಗುತ್ತಾನೆ. ಅವರಿಬ್ಬರ ನಡುವೆ ಮಠದ ಪಾರುಪತ್ತೆಗಾರ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತಾನೆ. ಈ ಸಂಬಂಧದಲ್ಲಿ ತನಗೆ ಮಗನು ಜನಿಸಿದರೆ ಅವನನ್ನೇ ಮುಂದಿನ ಮಠಾಧಿಪತಿಯನ್ನಾಗಿ ಮಾಡಬೇಕೆಂಬ ಕರಾರನ್ನು ವಾಗ್ದೇವಿ ಅವನ ಮುಂದಿಡುತ್ತಾಳೆ. ಈ ಕರಾರಿಗೆ ಚಂಚಲನೇತ್ರ ಒಪ್ಪಿದ ನಂತರ ವಾಗ್ದೇವಿ ತನ್ನ ಪತಿ ಆಚಾರ್ಯ ಮತ್ತು ತಾಯಿಯೊಂದಿಗೆ ಮಠದಲ್ಲಿಯೇ ವಾಸಿಸಲು ಪ್ರಾರಂಭಿಸುತ್ತಾಳೆ. ಅದೇ ಮಠದಲ್ಲಿ ಪಾರಂಪರಿಕ ಮೌಲ್ಯಗಳ ಕೇಂದ್ರ ಪ್ರಜ್ಞೆಯಂತಿದ್ದ, ಪುರಾಣ ಪ್ರವಚನ ಮಾಡುತ್ತಿದ್ದ ವೇದವ್ಯಾಸ ಉಪಾಧ್ಯ ಎಂಬುವನು ಸ್ವಾಮಿಯ ಕಾಮಕ್ರೋಧಕ್ಕೆ ಬೇಸತ್ತು ತನ್ನ ಕಾರ್ಯವನ್ನು ಕೈಬಿಟ್ಟು ಮಠವನ್ನು ಹಾಗೂ ಮಠಾಧಿಪತಿಯನ್ನು ಟೀಕಿಸಲು ಪ್ರಾರಂಭಿಸುತ್ತಾನೆ. ಚಂಚಲನೇತ್ರನ ಕಪಟ ಜೀವನವನ್ನು ಬಹಿರಂಗಗೊಳಿಸಲು ಮತ್ತು ಮಠವನ್ನು ಸುಧಾರಿಸಲು ವೇದವ್ಯಾಸನು ಮಾಡುವ ಅನೇಕ ಪ್ರಯತ್ನಗಳು ಮತ್ತು ತಂತ್ರಗಳು ನಿಷ್ಫಲವಾಗುತ್ತವೆ.

ಸ್ವಲ್ಪ ಕಾಲದ ನಂತರ ವಾಗ್ದೇವಿಗೆ ಸೂರ್ಯನಾರಾಯಣನೆಂಬ ಮಗ ಜನಿಸುತ್ತಾನೆ. ಚಂಚಲನೇತ್ರ ಅಕಾಲ ಮರಣಕ್ಕೆ ತುತ್ತಾಗುವ ಮೊದಲು ವಾಗ್ದೇವಿಗೆ ಮಾತು ಕೊಟ್ಟಂತೆ ಸೂರ್ಯನಾರಾಯಣನನ್ನೇ ಮಠದ ಸ್ವಾಮಿಯನ್ನಾಗಿ ಮಾಡುತ್ತಾನೆ. ಆದರೆ ಇದು ಸಂಪ್ರದಾಯ ವಿರುದ್ಧವೆಂದು ಇತರ ಮಠಾಧಿಪತಿಗಳು ಕೋರ್ಟಿಗೆ ಹೋದ ಪರಿಣಾಮ ಚಂಚಲನೇತ್ರನ ನಿರ್ಧಾರದ ವಿರುದ್ಧ ನ್ಯಾಯಾಲಯ ತೀರ್ಪು ನೀಡುತ್ತದೆ. ಇವೆಲ್ಲಾ ಘಟನೆಗಳಿಂದ ರೋಸಿಹೋಗಿ ಮಠಬಿಟ್ಟು ಓಡಿಹೋದ ಸೂರ್ಯನಾರಾಯಣ ತಾನು ಆಶ್ರಯ ಪಡೆದಿದ್ದ ಮನೆಯ ಹುಡುಗಿಯನ್ನು ಪ್ರೀತಿಸಿ ದೂರದ ದೇಶಕ್ಕೆ ಹೋಗಿ ಮದುವೆಯಾಗಿ ನೆಲೆಸುತ್ತಾನೆ. ಮಠದಿಂದ ಹೊರಹಾಕಿದ ವಾಗ್ದೇವಿ ಕಷ್ಟಪಡುತ್ತ ಮಗನ ನೆನೆಪಿನಲ್ಲಿ ಜೀವನ ಸಾಗಿಸುತ್ತಾಳೆ. ಆತ್ಮಹತ್ಯೆಗೆ ಪ್ರಯತ್ನಿಸುವ ಸಂದರ್ಭದಲ್ಲಿ ಮಗ ಸೂರ್ಯನಾರಾಯಣ ಆಕೆಯನ್ನು ಕಂಡು ಅನಾಹುತ ತಪ್ಪಿಸುತ್ತಾನೆ ಮತ್ತು ತನ್ನ ಜೊತೆಗೆ ಕರೆದುಕೊಂಡು ಹೋಗುತ್ತಾನೆ.

ಸ್ತ್ರೀ ಸ್ವತಂತ್ರಳಾದರೆ ಅದರಿಂದಾಗುವ ಅನಾಹುತಗಳು ಎಂತಹವು ಎಂಬಂತೆ ಪುರುಷಪರ ದೃಷ್ಟಿಕೋನದಿಂದ ವಾಗ್ದೇವಿಯ ಪಾತ್ರವನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಪುರುಷಪರ ದೌರ್ಬಲ್ಯಗಳನ್ನರಿತ ಸ್ತ್ರೀಯೊಬ್ಬಳು ಮಠದ ಸನ್ಯಾಸಿಯನ್ನು ತನ್ನ ಗುಲಾಮನನ್ನಾಗಿ ಮಾಡಿಕೊಳ್ಳುವ ಚಿತ್ರಣ ಈ ಕಾದಂಬರಿಯ ಇನ್ನೊಂದು ನೆಲೆಯಾಗಿದೆ.

ಮಧ್ವ ಮತದ ಮಠವೊಂದರಲ್ಲಿ ಅಧಿಕಾರ ಹಾಗೂ ಮಠದ ಸ್ವತ್ತುಗಳಿಗಾಗಿ ನಡೆಯುವ ಒಳಜಗಳ, ರಾಜಕೀಯ ಬೆಳವಣಿಗೆ ಮೊದಲಾದ ಅನೇಕ ಸಂಗತಿಗಳು ಈ ಕಾದಂಬರಿಗೆ ವಸ್ತುವಾಗಿದೆ. ಮಠದ ಭ್ರಷ್ಟ ವ್ಯವಸ್ಥೆ ಹಾಗೂ ಅದರ ಭೀಕರ ಮುಖಗಳನ್ನು ಕೃತಿಕಾರರು

ಚಿತ್ರಿಸುತ್ತಾರೆ. ವಾಗ್ದೇವಿ ಪಾತ್ರದ ಮೂಲಕ ಸಮಾಜದಲ್ಲಿ ಭ್ರಷ್ಟತೆಗೆ ಕಾರಣವಾಗಿರುವ ಮನುಷ್ಯ ದೌರ್ಬಲ್ಯಗಳನ್ನು ಬಯಲಿಗೆಳೆಯುತ್ತಾರೆ.

"ವಾಗ್ದೇವಿಯಲ್ಲಿ ಕಾದಂಬರಿಕಾರರು ವಿಭಿನ್ನವಾದ ಸ್ತ್ರೀ ಪಾತ್ರವನ್ನು ಚಿತ್ರಿಸಿದ್ದಾರೆ. ಕಾದಂಬರಿಕಾರರಿಗೆ ಒಂದು ಭ್ರಷ್ಟ ಸಮಾಜದ ಚಿತ್ರವನ್ನು ನೀಡುವ ಕಾಳಜಿ ಇದೆ. ಅದನ್ನು ನಿಷ್ಠುರವಾಗಿ ಅವರು ನಿರ್ವಹಿಸಿದ್ದಾರೆ." (ಮಹೇಶ್ವರಿ, ೨೦೦೧:೮೩) ಕಾದಂಬರಿಯ ಕೇಂದ್ರ ಪಾತ್ರವಾದ ವಾಗ್ದೇವಿಯನ್ನು ಪುರುಷ ದೃಷ್ಟಿಕೋನದಿಂದ ಚಿತ್ರಿಸಿದೆ. ಇತರ ಕಾದಂಬರಿಗಳ ನಾಯಕಿಯ ಪಾತ್ರಗಳಂತೆ ವಾಗ್ದೇವಿಯದು ಆದರ್ಶ ಪಾತ್ರವಾಗಿರದೆ, ಕೆಡುಕಿನ ಪ್ರತೀಕವಾಗಿ ಚಿತ್ರಿತವಾಗಿದೆ. ಆದರೆ ಆಕೆ ಪುರುಷರ ದೌರ್ಬಲ್ಯಗಳನ್ನು ಅರಿತ ಸ್ತ್ರೀಯಂತೆ ಭಾಸವಾಗುತ್ತಾಳೆ.

ಇಂದಿರಾ (೧೯೦೮)

ಸ್ತ್ರೀ ಶಿಕ್ಷಣ, ವಿಧವಾ ವಿವಾಹ ಸಮಸ್ಯೆಗಳನ್ನಾಧರಿಸಿದ ಕಾದಂಬರಿ ಇದು. ಕೆರೂರು ವಾಸುದೇವಾಚಾರ್ಯ ಶಾಸ್ತ್ರವಿದ್ಯಾ ಸಂಪನ್ನವಾದ ವೈದಿಕ ಮನೆತನದವರು. ಇವರು ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪಡೆದು ವಕೀಲಿವೃತ್ತಿಯನ್ನು ಪ್ರಾರಂಭಿಸಿದರು. ಹೊಸ ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳ ಕ್ಷೋಭೆ ಅವರ ಆಸಕ್ತಿಯನ್ನು ಸೆಳೆದವು. ಹಾಗಾಗಿ ಅವರು ಬರವಣಿಗೆಯತ್ತ ಹೊರಳಿ ಅದರ ಕಲೆಯನ್ನು ರೂಢಿಸಿಕೊಂಡರು. ವಕೀಲಿ ವೃತ್ತಿಯನ್ನು ಬಿಟ್ಟು ಬರವಣಿಗೆಯನ್ನೇ ತಮ್ಮ ವ್ಯವಸಾಯವನ್ನಾಗಿಸಿಕೊಂಡ ಅವರ ಸಾಧನೆಯನ್ನು ಒಂದು ಸಾಹಸವೆಂದು ಹೇಳಲಾಗಿದೆ. ವಾಸುದೇವಾಚಾರ್ಯ ಬರವಣಿಗೆಯನ್ನು ಪ್ರಾರಂಭಿಸಿದಾಗ ಭಾರತದಲ್ಲಿ ಸ್ವದೇಶಾಭಿಮಾನ ಜಾಗೃತವಾಗಿ ರಾಜಕೀಯ ಚಳವಳಿ ಚುರುಕುಗೊಳ್ಳುತ್ತಿತ್ತು. ಪಾಶ್ಚಾತ್ಯ ವಿಚಾರಗಳ ಪರಿಣಾಮವಾಗಿ ಸಾಮಾಜಿಕ ಜೀವನದಲ್ಲಿಯೂ ಸುಧಾರಣೆಯ ಧೋರಣೆಗಳು ಕಾಣಿಸಿಕೊಳ್ಳತೊಡಗಿದ್ದವು. ಲೋಕಮಾನ್ಯ ತಿಲಕರ ಸೆರೆಮನೆವಾಸ, ಬಂಗಾಳದ ವಿಭಜನೆ, ಮೊದಲನೆಯ ಜಾಗತಿಕ ಯುದ್ಧ, ಗಾಂಧೀಜಿಯವರ ಚಂಪಾರಣ್ಯ ಸತ್ಯಾಗ್ರಹದ ಮೂಲಕ ರಾಜಕೀಯದಲ್ಲಿ ಅಸಹಕಾರದಂತಹ ಹೊಸ ನಿಲುವುಗಳು ಅವತರಿಸಿದವು. ಇದಕ್ಕೆ ಸರಿಸಮನಾಗಿ ಸಾಮಾಜಿಕ ಕ್ಷೇತ್ರದಲ್ಲಿ ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಸಾಂಪ್ರದಾಯಿಕ ಅಂಧಶ್ರದ್ಧೆಗಳಲ್ಲಿ ಅಸಹನೆ, ಸರ್ವೋದಯ ಚಿಂತನೆಗಳು ತಮ್ಮ ಪ್ರಭಾವವನ್ನು ಬೀರಿದ್ದವು.

ವಾಸುದೇವಾಚಾರ್ಯ ರಾಜಕೀಯದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಲಿಲ್ಲವಾದರೂ ಸಮಕಾಲೀನ ರಾಜಕೀಯ ವಿದ್ಯಮಾನಗಳಲ್ಲಿ ಒಂದಂಶವನ್ನೂ ಬಿಡದೆ ಸ್ವತಂತ್ರವಾಗಿ ಯೋಚನೆ ಮಾಡಿ ಜನರಿಗೆ ತಿಳುವಳಿಕೆಯನ್ನು ತಂದುಕೊಡುವ ದೃಷ್ಟಿಯಿಂದ ಸಾಹಿತ್ಯ ಕೃತಿಗಳನ್ನು ಬರೆಯುತ್ತಿದ್ದರು.

ಸಾಮಾಜಿಕ ವಿಚಾರಗಳಲ್ಲಿ ಅವರ ದೃಷ್ಟಿ ಪ್ರಗತಿಪರವಾಗಿದ್ದರೂ ಭಾರತೀಯ ಸಂಸ್ಕೃತಿಯ ನೆಲೆಗಟ್ಟಿನ ಮೇಲೆಯೇ ಹೊಸ ಬಾಳು ರೂಪುಗೊಳ್ಳಬೇಕೆಂದು ವಾದಿಸುತ್ತಿದ್ದರು. ಹೊಸ ವಿಚಾರಗಳನ್ನು ಡಂಭಾಚಾರದ ನೆಲೆಯಲ್ಲಿ ಇಂದಿರಾ ಕಾದಂಬರಿ ವ್ಯಂಗ್ಯಕ್ಕೆ ಗುರಿ ಮಾಡಿರುವುದನ್ನು ಕಾಣಬಹುದು. ಕೆರೂರರ ಪುರೋಗಾಮಿ ದೃಷ್ಟಿಯ ಗೊತ್ತುಗುರಿಗಳು ಎಂಥವಾಗಿದ್ದವು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಸಂಪ್ರದಾಯಗಳು ಸಂಕೋಲೆಗಳಿಂದ ಬಿಡಿಸಿಕೊಂಡು ಹೊಸದಾಗಿ ರೂಪುಗೊಳ್ಳಬೇಕೆಂಬ ಚಿತ್ರವನ್ನು ಇಂದಿರಾ ಕಾದಂಬರಿ ಒದಗಿಸುತ್ತದೆ. ಸ್ವದೇಶಾಭಿಮಾನದ ಅಂಗವಾಗಿ ಸ್ವತಂತ್ರಾಭಿಮಾನ, ಅದಕ್ಕೆ ಪೋಷಕವಾಗಿ ಸ್ವಭಾಷಾಭಿಮಾನ, ಸಂಪ್ರದಾಯಕ್ಕೆ ಚ್ಯುತಿಬಾರದ ರೀತಿಯಲ್ಲಿ ಹೊಸ ಬದುಕನ್ನು ರೂಪಿಸಬಲ್ಲ ಸಮಾಜ ಸುಧಾರಣೆಯ ವಿಚಾರಗಳ ಪ್ರತಿಪಾದನೆ ಅವರ ಬರವಣಿಗೆಯ ಹಿಂದಿನ ಪ್ರೇರಣೆಗಳಾಗಿದ್ದುವೆಂದು ಸ್ಥೂಲವಾಗಿ ಗ್ರಹಿಸಬಹುದು. ಈ ಕಾದಂಬರಿ ಇಂತಹ ಸಾಮಾಜಿಕ ವಿಚಾರಗಳನ್ನು ಪ್ರತಿಬಿಂಬಿಸುತ್ತದೆ.

ಈ ಕಾದಂಬರಿ ಪ್ರಣಯ ಕಥೆಯಂತೆ ಆರಂಭವಾಗಿ ಕೊನೆಕಂಡರೂ ಅದು ಸಮಾಜದಲ್ಲಿರುವ ಅನೇಕ ಸಮಸ್ಯೆಗಳನ್ನು ಚಿತ್ರಿಸುವ ಕಾದಂಬರಿಯಾಗಿದೆ. ಕಾಲೇಜು ದಿನಗಳಿಂದಲೇ ಸ್ನೇಹಿತರಾಗಿದ್ದ ಜಯರಾಯ ಮತ್ತು ಕಮಲಾಕಾಂತ ಇಬ್ಬರೂ ದೇವಯಾನಿ ಎಂಬ ವಿಧವೆಯನ್ನು ಪ್ರೀತಿಸುತ್ತಿದ್ದರು. ದೇವಯಾನಿ ಕಮಲಾಕಾಂತನನ್ನು ಇಷ್ಟ ಪಡುತ್ತಿರುವ ಸಂಗತಿಯನ್ನು ತಿಳಿದ ಜಯರಾಯ, ಕಮಲಾಕಾಂತ ಬೇರೆಯವಳೊಂದಿಗೆ ಮದುವೆಯಾಗಿದ್ದಾನೆ ಎಂದು ಸುಳ್ಳು ಸುದ್ದಿ ಹಬ್ಬಿಸಿ ಅವರಿಬ್ಬರ ಸಂಬಂಧ ಕೆಡಿಸುತ್ತಾನೆ. ಇದರಿಂದ ವಿದ್ಯಾವಂತೆಯೂ ವಿಧವೆಯೂ ಆದ ದೇವಯಾನಿ ತಾನು ಇಷ್ಟಪಟ್ಟ ಕಮಲಾಕಾಂತನನ್ನು ಪಡೆಯಲಾಗದೆ ಅವಿವಾಹಿತಳಾಗಿಯೇ ಉಳಿಯುತ್ತಾಳೆ.

ಕಮಲಾಕಾಂತನ ಮಗ ರಮಾಕಾಂತ ಹಾಗೂ ಜಯರಾಯನ ಮಗಳು ಇಂದಿರೆ ಒಬ್ಬರಿಗೊಬ್ಬರು ಇಷ್ಟಪಡುತ್ತಾರೆ. ಆದರೆ ಜಯರಾಯನಿಗೆ ದೇವಯಾನಿಯ ವಿಚಾರದಲ್ಲಿ ತನ್ನಿಷ್ಟ ಪೂರೈಸಿಕೊಳ್ಳಲು ಕಮಲಾಕಾಂತ ಅಡ್ಡಿಯಾಗಿದ್ದುದರಿಂದ ತನ್ನ ಮಗಳು ಇಂದಿರೆ ಅವನ ಮಗ ರಮಾಕಾಂತನನ್ನು ವರಿಸುವುದು ಇಷ್ಟ ಪಡುವುದಿಲ್ಲ. ಮಧ್ಯದಲ್ಲಿ ರಾಧಾಬಾಯಿ ಮತ್ತು ಪಂಡಿತೆ ಕಮಲ ಎಂಬ ವಿಧವೆಯರ ಪಾತ್ರಗಳು ಬರುತ್ತವೆ. ಇವರು ಸಮಾಜ ಸುಧಾರಕ ಪಾತ್ರಗಳು. ಇವು ಕಾದಂಬರಿಯಲ್ಲಿ ವಿಡಂಬನೆಗೆ ಗುರಿಯಾಗಿವೆ. ಸಮಾಜ ಸುಧಾರಕಿ ಕಮಲಾ ರಮಾಕಾಂತನೊಂದಿಗೆ ಮದುವೆಯಾಗುವ ಕನಸು ಕಾಣುತ್ತಾಳೆ. ಆದರೆ ಇಂದಿರೆ ಕಾದಂಬರಿಯ ಕೊನೆಯಲ್ಲಿ ಶ್ರೀಮಂತನಾದ ಶ್ರೀಕಂಠನಿಗೆ ತನ್ನನ್ನು ಕೊಡಬೇಕೆಂದಿದ್ದ ತಂದೆಯ ಅಪೇಕ್ಷೆಯನ್ನು ನೇರವಾಗಿ ತಿರಸ್ಕರಿಸಿ ರಮಾಕಾಂತನನ್ನು ವರಿಸುತ್ತಾಳೆ. ವಿಧವೆ ಕಮಲೆ ಭಾಷ್ಕಳ ಪಂತನನ್ನು ಮದುವೆ ಮಾಡಿಕೊಳ್ಳುವಲ್ಲಿ ಕಾದಂಬರಿ ಅಂತ್ಯವಾಗುತ್ತದೆ.

ಕಾದಂಬರಿಯ ಬೆಳವಣಿಗೆ ದೃಷ್ಟಿಯಿಂದ ಮಾತ್ರವಲ್ಲದೆ ಅದು ಅಭಿವ್ಯಕ್ತಿಸಬೇಕೆಂದುಕೊಂಡ ಸಮಾಜ ಜೀವನವನ್ನು ಚಿತ್ರಿಸುವಲ್ಲಿ ಮಹತ್ವದ್ದಾಗಿದೆ. ಲೇಖಕರಿಗೆ ಆ ಕಾಲದಲ್ಲಿದ್ದ ದ್ವಂದ್ವ ವಿಚಾರಗಳ ತಿಕ್ಕಾಟವನ್ನೇ ಇಡಿಯಾಗಿ ತಮ್ಮ ಕತೆಗೆ ಹಿನ್ನೆಲೆಯಾಗಿಸಿಕೊಳ್ಳುವುದು ಮುಖ್ಯವಾಗಿದೆ. ಕತೆಯ ಬೆಳವಣಿಗೆಯ ಮೂಲಕ ಹಾಗೂ ಅದಕ್ಕಾಗಿ ಯೋಜಿಸಿಕೊಂಡ ಪಾತ್ರಗಳ ಸ್ವಭಾವ ದರ್ಶನದ ಮೂಲಕ ಕಾದಂಬರಿಕಾರರ ನಿಲುವು ಸೂಚಿತವಾಗಿದೆ. ಹೀಗಾಗಿ ಇಂದಿರಾ ಪ್ರಣಯ ಕತೆಯಾಗಿದ್ದರೂ ಅಂದಿನ ಸಮಾಜವನ್ನು ಬಾಧಿಸುತ್ತಿದ್ದ ವಿಚಾರಗಳ ತಾಕಲಾಟದ ಕತೆಯೂ ಆಗಿದೆ. ಪೋಷಕ ಪಾತ್ರಗಳ ಚಿತ್ರಣದಲ್ಲಿ ಈ ತಾಕಲಾಟದ ಪ್ರತಿಧ್ವನಿ ಕಂಡುಬರುತ್ತದೆ. ಆದರೂ ಮುಖ್ಯ ಪಾತ್ರಗಳನ್ನು ಚಿತ್ರಿಸುವಲ್ಲಿ ಅದಕ್ಕೆ ಸಮರ್ಪಕವಾದ ಉತ್ತರ ಕಂಡುಕೊಂಡಂತಿದೆ.

ಕಾದಂಬರಿಯೊಳಗೆ ಚರ್ಚಿತವಾಗಿರುವ ವಿಷಯಗಳಲ್ಲಿ ಸ್ತ್ರೀಯರ ಶಿಕ್ಷಣ ಹಾಗೂ ಸ್ತ್ರೀಯರ ನಡವಳಿಕೆ ಹೇಗಿರಬೇಕೆಂಬ ವಿಚಾರ ಪ್ರಮುಖವಾಗಿದೆ. ಲೇಖಕರ ಉದ್ದೇಶಕ್ಕನುಗುಣವಾಗಿ ಕೆಲವು ಪ್ರಾತಿನಿಧಿಕ ಪಾತ್ರಗಳನ್ನಾಯ್ದು ಅವುಗಳ ಮೂಲಕ ಸುಧಾರಣಾ ವಿರೋಧಿ ನಿಲುವು ವ್ಯಕ್ತವಾಗಿದೆ. ಸ್ತ್ರೀ ಸುಧಾರಣಾ ಚಟುವಟಿಕೆಗಳು ನಡೆಯುತ್ತಿದ್ದ ಬಗೆ ಹಾಗೂ ಅವು ಸಮಾಜದ ಮೇಲೆ ಬೀರುತ್ತಿರುವ ಪರಿಣಾಮಗಳನ್ನು ಗಮನಿಸಿದ ಲೇಖಕರಿಗೆ ಸುಧಾರಣಾ ವಿರೋಧಿ ನಿಲುವು ಪ್ರತಿಪಾದಿಸಲು ಸ್ತ್ರೀ ಪ್ರಧಾನ ಕಾದಂಬರಿ ಬರೆದ ಸಂದರ್ಭ ಒದಗಿದಂತಿದೆ. ಇದರ ಫಲಿತವನ್ನು ದೇವಯಾನಿ ಹಾಗೂ ಇಂದಿರೆಯ ಪಾತ್ರ ಚಿತ್ರಣದಲ್ಲಿ ಕಾಣಬಹುದು.

ನಭಾ (೧೯೧೪)

ನಂಜನಗೂಡು ತಿರುಮಲಾಂಬ ಅವರ ಈ ಕಾದಂಬರಿಯ ಕೇಂದ್ರ ವಸ್ತು ವೈಧವ್ಯ ಎನ್ನಬಹುದು. ಆದರೆ ವೈಧವ್ಯವನ್ನು ನೋಡುವ ತಿರುಮಲಾಂಬಾ ಅವರ ದೃಷ್ಟಿಕೋನ ಇತರ ಬರಹಗಾರರಿಗಿಂತ ಭಿನ್ನವಾಗಿದೆ.

ತಿರುಮಲಾಂಬಾ ಅವರು ಲೇಖಕಿ, ಪ್ರಕಾಶಕಿ, ಪತ್ರಿಕಾ ಸಂಪಾದಕಿಯಾಗಿದ್ದರು. ಅವರು ಹನ್ನೆರಡಕ್ಕೂ ಮಿಕ್ಕಿದ ಕಾದಂಬರಿಗಳನ್ನು ರಚಿಸಿದ್ದಾರೆ. ಸ್ತ್ರೀಯರ ಅಭಿವೃದ್ಧಿಗಾಗಿ ಬೇಕಾಗಿರುವ ಪುರುಷ ವಿರೋಧವಲ್ಲದ ರೀತಿನೀತಿಗಳನ್ನು ತಿಳಿಸುವುದು ಲೇಖಕಿಯ ಬರವಣಿಗೆಯ ಉದ್ದೇಶವಾಗಿರುವಂತೆ ಕಾಣುತ್ತದೆ. ಭಾರತೀಯ ಮಹಿಳೆಗೆ ಶೀಲವೇ ಅತ್ಯಂತ ಮುಖ್ಯವಾದ ಗುಣವಾಗಿ ಶೋಭಿಸಬೇಕು ಎಂಬ ಆದರ್ಶವುಳ್ಳ ತಿರುಮಲಾಂಬಾ ಅವರಿಗೆ ವಿಧವಾ ವಿವಾಹ ಒಂದು ಸಮರ್ಥನೀಯ ವಿಷಯವಾಗಿ ಕಾಣುವುದಿಲ್ಲ. ಆದರೂ ತಮ್ಮ ಕಾದಂಬರಿಗಳಲ್ಲಿ ವಿಧವೆಯರ ಕೇಶಮುಂಡನ, ಸಾಮಾಜಿಕವಾಗಿ ಅವರು ಅನುಭವಿಸುವ ನೋವು ಮುಂತಾದ ಸ್ತ್ರೀಯರ ಸಮಸ್ಯೆಗಳನ್ನು ಸಾಮಾನ್ಯವಾಗಿ ಚಿತ್ರಿಸಿರುವುದನ್ನು ನೋಡಬಹುದು. ಲೇಖಕಿ ಸ್ವತಃ ವಿಧವೆಯಾಗಿದ್ದು, ವಿಧವಾ

ವಿವಾಹದ ಪರವಾಗಿ ಮಾತನಾಡದ ಅವರ ನಿಲುವು ಸ್ತ್ರೀ ಸಮಸ್ಯೆಗಳಿಗೆ ಅವರು ಸ್ಪಂದಿಸಿದ ರೀತಿಯನ್ನು ಕಾಣಿಸುತ್ತದೆ.

ನಭಾ ಕಾದಂಬರಿಯ ನಿವೇದನೆಯಲ್ಲಿ "ಸ್ತ್ರೀಯರ ಉನ್ನತ ಅವನತಿಗಳ ಪ್ರತಿಯೊಂದು ವಿಚಾರದಲ್ಲಿಯೂ ಪುರುಷ ಲೇಖಕರಲ್ಲಿ ಭಿನ್ನಮತವು ಕಂಡುಬರುತ್ತಲಿರುವುದು. ಇದಕ್ಕೆ ಸ್ತ್ರೀಯರ ಬುದ್ಧಿ, ಮನಸ್ಸು, ಅಂತಃಕರಣಗಳ ಪ್ರಾಕೃತಿಕ ರಚನೆ ಸ್ವಭಾವಗಳ ವಿಷಯವಾಗಿ ಸಾವಿರಾರು ವರ್ಷಗಳಿಂದ ಅನುವಂಶಿಕವಾಗಿ ಅವರ ಮನಸ್ಸಿನ ಮೇಲೆ ಉಂಟಾಗಿರುವ ಸಂಸ್ಕಾರ ವಿಷಯಕವಾಗಿಯೂ ಪುರುಷರಿಗಿರುವ ಅಪೂರ್ಣವಾದ ಪರಿಚಯವೇ ಕಾರಣವಾಗಿರುವುದೆಂದು ನಮ್ಮ ಮತವಾಗಿರುವುದು" ಎಂದು ಕಾದಂಬರಿಕಾರ್ತಿ ಅಭಿಪ್ರಾಯ ಪಟ್ಟಿದ್ದಾರೆ.

ನಭಾ ಕಾದಂಬರಿಯ ನಾಯಕಿ ತನ್ನ ಹದಿನೆಂಟನೆಯ ವಯಸ್ಸಿನಲ್ಲಿಯೇ ವಿಧವೆಯಾಗುತ್ತಾಳೆ. ಸದ್ಗ್ರಂಥಗಳ ಅಭ್ಯಾಸದಲ್ಲಿ ತೊಡಗುತ್ತಾಳೆ. ವಿಧವೆಯಾದ ನಭಾ ತನ್ನ ಶೀಲತ್ವವನ್ನು ಉಳಿಸಿಕೊಂಡ ಕತೆ ಈ ಕಾದಂಬರಿಯಲ್ಲಿದೆ. ತಂದೆಯಿಲ್ಲದ ನಭಾ ತಾಯಿಯನ್ನೂ ಪತಿಯನ್ನೂ ಏಕಕಾಲಕ್ಕೆ ಕಳೆದುಕೊಂಡು ಅನಾಥಳಾಗುತ್ತಾಳೆ. ಅವಳ ಚಿಕ್ಕಪ್ಪ-ಚಿಕ್ಕಮ್ಮ ಅವಳಿಗೆ ಸಹಾಯ ಮಾಡುವರಂತೆ ಬಂದು, ಅವಳ ಹೆಸರಲ್ಲಿದ್ದ ಆಸ್ತಿಯನ್ನು ನುಂಗಿ ಅವಳನ್ನು ಸಂಕಷ್ಟದಲ್ಲಿ ಸಿಲುಕಿಸುತ್ತಾರೆ. ಇದರಿಂದ ಅವಳು ಸಾಕಷ್ಟು ಸಾಮಾಜಿಕವಾಗಿ ಅಪಮಾನಕ್ಕೆ ಗುರಿಯಾಗುತ್ತಾಳೆ. ಮತ್ತೊಬ್ಬ ಚಿಕ್ಕಪ್ಪನಾದ ಚಿದಾನಂದ ಬಂದು ಆಕೆಯನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಅವಳಿಗೆ ಮರುವಿವಾಹವಾಗುವಂತೆ ಒತ್ತಾಯಿಸಿದಾಗ ನಭಾ ಅದನ್ನು ತಿರಸ್ಕರಿಸುತ್ತಾಳೆ. ನಂತರ ಅವಳು ಸಾಧ್ವಿ, ಪತಿಗೆ ತಕ್ಕ ಪತ್ನಿ ಎಂಬಿತ್ಯಾದಿಯಾಗಿ ಪ್ರಖ್ಯಾತಿ ಪಡೆಯುತ್ತಾಳೆ. ಆದರೆ ರಾಜಶೇಖರನೆಂಬ ಅವಿವಾಹಿತ ತರುಣ ನಭಾಳಲ್ಲಿ ಅನುರಕ್ತನಾಗುತ್ತಾನೆ. ಅವನ ಬೇಡಿಕೆಯನ್ನು ಒಪ್ಪಿಕೊಳ್ಳದೆ ಅಲ್ಲಿಂದ ಯಾರಿಗೂ ಹೇಳದೆ ಹೊರಟು ಹೋಗುತ್ತಾಳೆ. ಇಲ್ಲಿಗೆ ನಭಾ ಕಾದಂಬರಿಯ ಕತೆ ಮುಗಿಯುತ್ತದೆ. ಆದರೆ ಅವಳ ನಂತರದ ಕತೆ ವಿರಾಗಿಣಿ ಕಾದಂಬರಿಯಲ್ಲಿ ಮುಂದುವರಿದಿದೆ.

ಚಿಕ್ಕಮ್ಮನ ಮನೆಬಿಟ್ಟು ಹೊರಟ ವಿಧವೆ ನಭಾ ತನ್ನ ಸಂಬಂಧಿಕರಲ್ಲಿ ಆಶ್ರಯ ಪಡೆಯುತ್ತಾಳೆ. ಅಲ್ಲಿ ಅವಳು ತನ್ನ ಸುತ್ತಮುತ್ತಲಿನ ಜನರಿಂದ ಅನೇಕ ಬಗೆಯ ಸಂಕಟಗಳಿಗೆ ಈಡಾಗುತ್ತಾಳೆ. ಆದರೆ ಇದಾವುದರಿಂದಲೂ ವಿಚಲಿತಳಾಗದೆ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಾಳೆ. ಅಧ್ಯಾಪನವನ್ನು ಮಾಡುತ್ತಾಳೆ. ತನ್ನ ಪರಿಸರದಲ್ಲಿದ್ದ ದುಷ್ಟರ ದೌರ್ಜನ್ಯವನ್ನು ಹಾಗೂ ಸಂಕುಚಿತ ಮನೋಭಾವವನ್ನು ಹೋಗಲಾಡಿಸಿ ಅವರ ಜೀವನವನ್ನು ಸುಖಕರವಾಗಿ ಮಾಡುತ್ತಾಳೆ. ವಿರಾಗಿಣಿ ಬದುಕಿದ ರೀತಿಯನ್ನು ಅವಳ ಮಾವನಾದ ಹರೀಶ್ವರ ಕಾದಂಬರಿಯ ಕೊನೆಯಲ್ಲಿ ಮೆಚ್ಚುತ್ತಾನೆ. ವಿರಾಗಿಣಿ ಬಾಲಿಕೆಯರ ಶಿಕ್ಷಣಕ್ಕೆ ಮೀಸಲಾದ ಆನಂದ ಮಂದಿರಕ್ಕೆ ಮುಖ್ಯೋಪಾಧ್ಯಾಯಳಾಗಿ ಆಯ್ಕೆಯಾಗುವಲ್ಲಿ ಕಾದಂಬರಿ ಕೊನೆಗೊಳ್ಳುತ್ತದೆ.

ನಭಾ ಕಾದಂಬರಿಯಲ್ಲಿ ನಭಾಳ ವೈಧವ್ಯ ಆಕೆಯ ಜೀವನದ ದುರಂತವೇ ಆಗಿದೆ. ಆದರೆ ಇದನ್ನು ಈ ಜನ್ಮದಲ್ಲಿ ಪರಿಹರಿಸಿಕೊಳ್ಳಬೇಕೆಂಬ ಬಯಕೆ ಅವಳಲ್ಲಿಲ್ಲ. ಬದಲಾಗಿ ಈ ಸಮಸ್ಯೆಗೆ ಯಾವುದೇ ಪರಿಹಾರ ಇಲ್ಲವೆಂದು ತಿಳಿದು ವೈಧವ್ಯವನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂಬಂತೆ ಸಮರ್ಥಿಸಲಾಗಿದೆ. ಲೇಖಕಿಯ ಯೋಚನಾಕ್ರಮ ಸಾಂಪ್ರದಾಯಿಕ ನೆಲೆಗಿಂತ ಭಿನ್ನವಾಗಿರದೆ, ವೈಧವ್ಯ ಪೂರ್ವಕರ್ಮದ ಫಲ ಎಂಬ ನಿಲುವು ತಳೆಯಲಾಗಿದೆ. ಅವರು ವಿಧವಾ ಸಮಸ್ಯೆಯನ್ನು ಸಾಮಾಜಿಕ ಸಮಸ್ಯೆಯೆಂದು ಪರಿಗಣಿಸುವುದಿಲ್ಲ. ವೈಧವ್ಯಕ್ಕೆ ಕಾರಣ ಹೇಗೆ ಪೂರ್ವಕರ್ಮಗಳಲ್ಲಿ ಅಡಗಿದೆಯೋ ಹಾಗೆಯೇ ಅದರಿಂದ ಪಾರಾಗುವಿಕೆ ಕೂಡ ಹೆಣ್ಣಿನ ವ್ಯಕ್ತಿತ್ವದಲ್ಲಿ ಅಡಗಿದೆ ಎಂದು ಲೇಖಕಿ ಅಭಿವ್ಯಕ್ತಪಡಿಸುತ್ತಾರೆ.

ವಿಧವಾ ಸಮಸ್ಯೆ ಆರಂಭಕಾಲದ ಕಾದಂಬರಿಗಳಲ್ಲಿ ಬಹುಮುಖ್ಯ ಸಮಸ್ಯೆಯಾಗಿ ಪರಿಗಣಿತವಾಗಿದೆ. ಈ ಸಮಸ್ಯೆಗೆ ಉತ್ತರವಾಗಿ ವಿಧವಾವಿವಾಹವನ್ನು ಅಂದಿನ ಬರಹಗಾರರು ಬಹಳವಾಗಿ ಸಮರ್ಥಿಸಿದರು. ಆದರೆ ಆನಂತರದ ಕಾಲದವರಾದ ತಿರುಮಲಾಂಬಾ ಸ್ವತಃ ಹೆಣ್ಣಾಗಿ, ವಿಧವೆಯಾಗಿ ಅದನ್ನು ಸಮರ್ಥಿಸದಿರುವುದು ಗಮನಾರ್ಹ ವಿಷಯ. ವಿಧವೆಯಾದವಳು ಸ್ವತಃ ಕಷ್ಟಗಳನ್ನು ಅನುಭವಿಸಿದ್ದರೂ ತನ್ನ ಸುತ್ತಲಿನ ಸಾಂಪ್ರದಾಯಿಕ ಪರಿಸರಕ್ಕಿಂತ ಭಿನ್ನವಾಗಿ ವೈಯಕ್ತಿಕ ಜೀವನದಲ್ಲಿ ಈ ವಿಚಾರಗಳನ್ನು ಹೊಂದಿರುವುದಾಗಲೀ ಪ್ರಕಟಿಸುವುದಾಗಲೀ ಆ ಕಾಲದಲ್ಲಿ ಸಾಕಷ್ಟು ಜಟಿಲವಾದ ಸಮಸ್ಯೆಯಾಗಿತ್ತು ಎಂಬುದರ ಕಡೆಗೆ ಗಮನ ಸೆಳೆಯಲಾಗಿದೆ. ವಿಧವೆಯರಿಗೆ ಮರುವಿವಾಹವೊಂದೇ ಉಳಿದಿರುವ ಮಾರ್ಗವಲ್ಲ. ಇನ್ನಿತರ ಸುಧಾರಣಪರ ಚಟುವಟಿಕೆಗಳಿಂದ ಅವಳನ್ನು ಉದ್ಧರಿಸಬಹುದು ಎಂಬ ನಂಬಿಕೆಯನ್ನು ಉಳಿಸಿಕೊಂಡಿದೆ. ಹಾಗಾಗಿ ಲೇಖಕಿ ಸ್ತ್ರೀ ಶಿಕ್ಷಣ ಮತ್ತು ಇನ್ನಿತರ ಮಹಿಳೋದ್ಧಾರದ ಕಾರ್ಯಗಳನ್ನು ಪ್ರೋತ್ಸಾಹಿಸಿದುದು ಕಂಡುಬರುತ್ತದೆ. ಲೇಖಕಿ ತಮ್ಮ ಕೃತಿಯಲ್ಲಿ ಮಂಡಿಸಿರುವ ಈ ವಿಚಾರಗಳು ಸ್ತ್ರೀಯರ ಸಮಸ್ಯೆಯನ್ನು ಬಗೆಹರಿಸುವ ದಿಕ್ಕನ್ನು ಸೂಚಿಸುವ ಬದಲು ಹೆಚ್ಚಿಸುವ ಕ್ರಮವಾಗಿರುವಂತೆ ತೋರುತ್ತದೆ. ಹಿಂದೂ ಸಮಾಜದ ಪುರುಷಪರ ಜೀವನ ಮೌಲ್ಯಗಳ ಎದುರು ಹೆಣ್ಣಿನ ಜೀವಿತಕ್ಕೆ ಒದಗಿದ ಅನ್ಯಾಯನ್ನು ಎತ್ತಿ ಹಿಡಿದು ಆಕೆಯ ಆಜನ್ಮ ಹಕ್ಕನ್ನು ಪ್ರತಿಪಾದಿಸದಿರುವುದು ಸ್ತ್ರೀ ಸಮುದಾಯದ ದುರಂತವೂ ಪುರುಷ ಸಮುದಾಯದ ವಿಜಯವೂ ಆಗಿರುವಂತೆ ಕಾಣುತ್ತದೆ.

ಮಾಡಿದ್ದುಣ್ಣೋ ಮಹಾರಾಯ (೧೯೧೫)

ಬಾಲ್ಯವಿವಾಹ ಹಾಗೂ ಸತಿಸಹಗಮನ ಸಮಸ್ಯೆಯನ್ನು ಕೈಗೆತ್ತಿಕೊಂಡು ಸಾಂಪ್ರದಾಯಿಕ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನದ ಸ್ವರೂಪ ಕಟ್ಟಿಕೊಡುವ ಕಾದಂಬರಿ ಎಂ.ಎಸ್ ಪುಟ್ಟಣ್ಣನವರ **ಮಾಡಿದ್ದುಣ್ಣೋ ಮಹಾರಾಯ.**

ಸದಾಶಿವದೀಕ್ಷಿತ ರಾಜಾಶ್ರಯದಲ್ಲಿರುವ ಸಾಂಬಶಾಸ್ತ್ರಿಗಳ ಸೋದರಳಿಯ. ಆತನ ಮೊದಲ ಹೆಂಡತಿ ತೀರಿಕೊಂಡಾಗ ಸಂಜವಾಡಿಯ ನೀಲಕಂಠ ಜೋಯಿಸರ ಎಂಟು ವರ್ಷದ ತಿಮ್ಮಮ್ಮ ಎಂಬ ಮಗಳೊಂದಿಗೆ ಮರುಮದುವೆ ಮಾಡಿಕೊಳ್ಳುತ್ತಾನೆ. ಜೋಯಿಸರ ಮಗನಿಗೆ ಬುದ್ಧಿಮಟ್ಟ ಕಡಿಮೆ ಇದ್ದುದರಿಂದ ಅವರ ಮನೆತನದ ಉಸ್ತುವಾರಿಯನ್ನು ನೋಡಿಕೊಳ್ಳಲು ಅಲ್ಲಿಯೇ ನೆಲೆಸುತ್ತಾನೆ. ಆ ಊರಿನಲ್ಲಿ ನಾರಪ್ಪಯ್ಯ ಶಿಕ್ಷಣ ನೀಡುವ ನೆಪದಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ಹಿಂಸೆ ನೀಡುತ್ತಿರುತ್ತಾನೆ. ಆ ಶಿಕ್ಷಕನಿಗೆ ವಿದ್ಯಾರ್ಥಿಗಳೆಲ್ಲ ಕೂಡಿ ಪಾಠ ಕಲಿಸಲು ಅವನು ಕೂಡುವ ಕುರ್ಚಿಯ ಬಳಿ ಮುಳ್ಳಿನ ಹಾಸಿಗೆ ರಚಿಸಿ ಅದರ ಮೇಲೆ ಕೂರುವಂತೆ ಮಾಡುತ್ತಾರೆ. ಅದರಲ್ಲಿ ಬಿದ್ದು ನೋವಿನಿಂದ ಬಳಲುತ್ತಿದ್ದ ನಾರಪ್ಪಯ್ಯನನ್ನು ಸದಾಶಿವ ದೀಕ್ಷಿತ ಮನೆಗೆ ಕರೆ ತಂದು ವೈದ್ಯೋಪಚಾರ ಮಾಡುತ್ತಾನೆ. ಮುಳ್ಳಿನ ಹಾಸಿಗೆಯಿಂದ ಪಾರು ಮಾಡಿದ ಸದಾಶಿವನಿಗೆ ಕೃತಜ್ಞನಾಗಿರದ ನಾರಪ್ಪಯ್ಯ ಸಿದ್ದನ ಜೊತೆ ಸೇರಿ ಕೇಡು ಬಯಸುತ್ತಾನೆ. ದೇವಾಲಯದ ಪೂಜಾರಿಯಾಗಿದ್ದ ಸಿದ್ದ ಮಾಟ–ಮಂತ್ರ ಮಾಡಬಲ್ಲವನೆಂದು ತೋರಿಸಿಕೊಳ್ಳುತ್ತ, ಕಳ್ಳತನದಲ್ಲಿ ಗುಪ್ತವಾಗಿ ತೊಡಗಿರುತ್ತಾನೆ. ಸಿದ್ದಪ್ಪನ ಜೊತೆ ಸೇರಿಕೊಂಡ ನಾರಪ್ಪಯ್ಯ ಸದಾಶಿವನ ಸೊಸೆ ಸೀತೆಯ ಮೇಲೆ ಸಿದ್ದನ ಗಮನ ಹರಿಯುವಂತೆ ಮಾಡುತ್ತಾನೆ. ಅವನನ್ನು ಉತ್ತೇಜಿಸಿ ಪ್ರಚೋದಿಸುತ್ತಾನೆ.

ಸಿದ್ದನ ಅಪೇಕ್ಷೆಯನ್ನು ತಿರಸ್ಕರಿಸಿದ ಸೀತೆಗೆ ನಾರಪ್ಪಯ್ಯ ಸಿದ್ದನ ಸಹಾಯದಿಂದಲೆ ಮಾಟ ಮಂತ್ರ ಮಾಡಿಸಿ ನಿಸ್ತೇಜಳನ್ನಾಗಿ ಮಾಡುತ್ತಾನೆ. ಆಕೆ ಜೀವಂತ ಶವದ ಸ್ಥಿತಿ ತಲುಪುತ್ತಾಳೆ. ಆಕೆಯ ಮನೆಯವರು ಸೀತೆ ಮೃತಳೆಂದು ಭಾವಿಸಿ ಶವಸಂಸ್ಕಾರಕ್ಕಾಗಿ ಚಿತೆಯ ಮೇಲಿಟ್ಟು, ಅದು ಸಂಪೂರ್ಣ ಉರಿಯುವ ಮೊದಲೇ ಹಿಂದಿರುಗುತ್ತಾರೆ. ಅದೇ ದಾರಿಯಲ್ಲಿ ಬರುತ್ತಿದ್ದ ಮತ್ತೊಬ್ಬ ಮಂತ್ರವಾದಿ ಚಿತೆಯ ಮೇಲಿದ್ದ ಶವ ಜೀವಂತವಾಗಿರುವುದನ್ನು ಗಮನಿಸಿ ಆಕೆಯನ್ನು ಉಳಿಸುತ್ತಾನೆ. ಇದರ ಹಿಂದೆ ನಾರಪ್ಪಯ್ಯ ಮತ್ತು ಸಿದ್ದಪ್ಪನ ಕೈವಾಡ ಇದ್ದುದು ಬಯಲಾಗುತ್ತದೆ. ಪೋಲಿಸರು ಕಳುವಿನ ಪತ್ತೆ ಮಾಡಿ ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗುವಂತೆ ಕಥೆ ಸಾಗುತ್ತದೆ. ಈ ಕಾದಂಬರಿಯ ಶೀರ್ಷಿಕೆಗೆ ಅನುಗುಣವಾಗಿ ಕತೆಯನ್ನು ಪರಿಶೀಲನೆ ಮಾಡಿದಾಗ ತಿಮ್ಮಮ್ಮಳ ಬಾಲ್ಯವಿವಾಹದ ಅಪರಾಧಕ್ಕೆ, ಸೀತೆಯ ಗಂಡನ ಮನೆಯಲ್ಲಿ ಅತ್ತೆಯ ಕಾಟ ತಾಳಲಾರದೆ ಅನುಭವಿಸುವ ಮೂಕ ಸಂಕಟಕ್ಕೆ ಮತ್ತು ಸೀತೆಯನ್ನು ಕಾಮದ ಗೊಂಬೆಯಂತೆ ಬಳಸಿಕೊಳ್ಳಲು ಯತ್ನಿಸುವ ಹಿಂದೂ ಸಮಾಜದ ಪುರುಷರಿಗೆ ಯಾವ ಬಗೆಯ ಶಿಕ್ಷೆಯಿಂದ ಪಶ್ಚತ್ತಾಪವಾಯಿತು ಎಂಬುದರ ಬಗ್ಗೆ ಕತೆಯ ಹಂದರದೊಳಗೆ ವಿವರಗಳು ಸಿಗುವುದಿಲ್ಲ. ಈ ಅಪರಾಧಗಳಿಗೆ ಮೂಲ ಕಾರಣವಾದ ಪುರುಷಪರ ಜೀವನ ಮೌಲ್ಯಗಳನ್ನು ಬಿಂಬಿಸುವ ಪುರುಷ ಪಾತ್ರಗಳೆಲ್ಲ ಸೌಜನ್ಯದ ಸೋಗಿನಲ್ಲಿ ಉಳಿದುಬಿಟ್ಟಿವೆ. ಅಲ್ಲದೆ ರಾಜಾಶ್ರಯದ ಅಧಿಕಾರ ಬಲ ಪೋಷಣೆಯಲ್ಲಿ ಪ್ರಶ್ನಾರ್ಹವಾಗದೆ ಉಳಿದಿವೆ.

ಹಾಗಾಗಿ **ಮಾಡಿದ್ದುಣ್ಣೋ ಮಹಾರಾಯ** ಕಾದಂಬರಿಯಲ್ಲಿ ಸ್ತ್ರೀ ಸಮಸ್ಯೆಗಳ ಕುರಿತಾಗಲೀ ಸುಧಾರಣಾ ಪರ ಆಶಯವಾಗಲೀ ಸುಳಿಯುವುದಿಲ್ಲವೆಂದೇ ಹೇಳಬಹುದು. ಬಾಲ್ಯವಿವಾಹ ಹಾಗೂ ಸತಿಸಹಗಮನ ಸಂಗತಿಗಳು ವೈಭವೀಕರಿಸಲೆಂದೆ ನಿರೂಪಿತವಾಗಿವೆ.

ಈ ಕಾದಂಬರಿಯಲ್ಲಿ ಭಾರತೀಯ ಹಿಂದೂ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಪಾಲಿಸುವ ಸೀತೆ ಅದರಿಂದಲೇ ನರಳುವ ಚಿತ್ರಣವಿದೆ. ಈ ಕಾದಂಬರಿಯ ಕಾಲಕ್ಕಾಗಲೇ ಕಾನೂನಿನ ಮೂಲಕ ಸಹಗಮನ ಪದ್ಧತಿಯನ್ನು ನಿಲ್ಲಿಸಲಾಗಿತ್ತು. ಆದರೂ ಕಾದಂಬರಿಯಲ್ಲಿ ಅರುಂದಮ್ಮ ಆಚರಿಸುವ ಸತಿಸಹಗಮನದ ವರ್ಣನೆ ಮಾಡಲಾಗಿದೆ. ಅದು ಸೀತೆಗೆ ಆದರ್ಶವಾದಂತೆ ಚಿತ್ರಿಸಿ ವೈಭವೀಕರಿಸಿರುವುದು ಕಾದಂಬರಿಯ ಸಂಪ್ರದಾಯನಿಷ್ಠ ಆಶಯವನ್ನು ಸೂಚಿಸುತ್ತದೆ.

ತೆಲುಗು ಕೃತಿಗಳು

ತೆಲುಗಿನಲ್ಲಿ ಕಾದಂಬರಿಯನ್ನು ನವಲ ಎಂದು ಕರೆಯುತ್ತಾರೆ. ಪ್ರಾರಂಭದಲ್ಲಿ ಇದನ್ನು 'ವಚನ ಪ್ರಬಂಧ' ಎಂದು ಹೇಳುತ್ತಿದ್ದರು. ನರಹರಿ ಗೋಪಾಲಕೃಷ್ಣಯ್ಯ ಶೆಟ್ಟಿ ಎಂಬುವರು ೧೮೭೨ರಲ್ಲಿ 'ಶ್ರೀರಂಗ ರಾಜ ಚರಿತ್ರೆ' ಎಂಬ ವಚನ ಪ್ರಬಂಧವನ್ನು ಬರೆದರು. ಇದು ತೆಲುಗಿನ ಮೊಟ್ಟಮೊದಲ ಕಾದಂಬರಿ ಎಂದು ಮೊದಲಿ ನಾಗಭೂಷಣ ಶರ್ಮ (ಆಂಧ್ರ ನವಲಾ ಪರಿಣಾಮಂ:೧೪೪) ಬೊಡ್ಡಪಾಟಿ ವೆಂಕಟಕುಟುಂಬರಾವ್ (ತೆಲುಗು ನವಲಾ ವಿಕಾಸಮು:೩೨–೩೯) ಅವರು ಅಭಿಪ್ರಾಯಪಡುತ್ತಾರೆ. ಆದರೆ ರಂಗರಾಜ ಚರಿತ್ರೆ ಕಲ್ಪಿತ ಕಥೆಯನ್ನೊಳಗೊಂಡಿದ್ದರಿಂದ ಇದನ್ನು ಮೊದಲ ಸಾಮಾಜಿಕ ಕಾದಂಬರಿಯಾಗಿ ಪರಿಗಣಿಸಲಿಲ್ಲ. ಇದು ಕೇವಲ ಪ್ರಯತ್ನ ಎಂದು ಅಕ್ಕಿರಾಜ ರಮಾಪತಿರಾವ್ ಹೇಳುತ್ತಾರೆ (ವೀರೇಶ ಪಂತುಲು ಸಮಗ್ರ ಪರಿಶೀಲನೆ; ೧೩೮). ೧೮೮೩ರಲ್ಲಿ ಪ್ರಕಟಗೊಂಡು ತೆಲುಗಿನ ಮೊದಲ ಸಾಮಾಜಿಕ ಕಾದಂಬರಿಯಾಗಿ ಪ್ರಸಿದ್ಧಿ ಪಡೆದ ವೀರೇಶಲಿಂಗಂ ಪಂತುಲು ಅವರ ಸತ್ಯವತೀ ಚರಿತ್ರೆ ಸಾಮಾಜಿಕ ವಾಸ್ತವವನ್ನೊಳಗೊಂಡ ಕಾದಂಬರಿಯಾಗಿದೆ. ಆದರೆ ೧೮೭೮ರಲ್ಲಿ ಪ್ರಕಟವಾದ ವೀರೇಶಲಿಂಗಂ ಅವರ ರಾಜಶೇಖರ ಚರಿತ್ರೆಯೇ ಮೊದಲ ಸಾಮಾಜಿಕ ಕಾದಂಬರಿ ಎಂದು ಮಲ್ಲಾ ಬೋಟ್ಲ ವೆಂಕಟೇಶ್ವರುಲು (ತೆಲುಗು ನವಲ ಸಾಹಿತ್ಯ ವಿಕಾಸಮು ೭೮–೮೧) ಮತ್ತು ಆರ್.ಎಸ್. ಸುದರ್ಶನಂ (ಸಮಾಜಮು ಸಾಹಿತ್ಯಮು : ೯೩) ಅವರು ಅಭಿಪ್ರಾಯ ಪಡುತ್ತಾರೆ. ಆದರೆ ರಾಜಶೇಖರ ಚರಿತ್ರೆ ಇಂಗ್ಲೀಷ್‌ನಲ್ಲಿ ಆಲಿವರ್ ಗೋಲ್ಡ್‌ಸ್ಮಿತ್ ಬರೆದ 'ವಿಕಾರ್ ಆಫ್ ವೇಕ್‌ಫೀಲ್ಡ್' ಕಾದಂಬರಿಯ ಕಥೆಯನ್ನು ಅನುಸರಿಸಿದೆ. ಇದರಿಂದಾಗಿ ಸತ್ಯವತೀ ಚರಿತ್ರೆಯನ್ನೇ ಮೊದಲ ಸಾಮಾಜಿಕ ಕಾದಂಬರಿಯಾಗಿ ಸ್ವೀಕರಿಸಬಹುದು ಎಂದು ಇತ್ತೀಚಿನ ಸಂಶೋಧನೆಗಳಲ್ಲಿ ಕಂಡುಕೊಳ್ಳಲಾಗಿದೆ. (ಆನಂದರಾಮಂ ಸಿ., ೧೯೭೬:೮೨)

ಸತ್ಯವತೀ ಚರಿತ್ರೆ : (೧೮೮೩)

ತೆಲುಗಿನ ಈಶ್ವರಚಂದ್ರ ವಿದ್ಯಾಸಾಗರರೆಂದು ಖ್ಯಾತರಾದ ವೀರೇಶಲಿಂಗಂ ಪಂತುಲು ಅವರು ಸಮಾಜ ಸುಧಾರಕರು. ಅವರು ತಮ್ಮ ಜೀವಿತದ ಅವಧಿಯಲ್ಲಿ ಸುಮಾರು ನಲ್ವತ್ತು ವಿಧವಾ ವಿವಾಹಗಳನ್ನು ಮಾಡಿಸಿದ್ದಾರೆ. ಅವರ ಸಾಕಷ್ಟು ಕಾದಂಬರಿಗಳಲ್ಲಿ ಸುಧಾರಣಪರ ಕಾಳಜಿ ಎದ್ದು ಕಾಣುತ್ತದೆ. ಕಾದಂಬರಿಯ ವಸ್ತು ಏನೇ ಆಗಿದ್ದರೂ ಅದರಲ್ಲಿ ಸ್ತ್ರೀ ಶಿಕ್ಷಣ ಹಾಗೂ ಸ್ತ್ರೀಯರ ಏಳಿಗೆಯ ಸಂಗತಿಗಳನ್ನು ಕೈಗೆತ್ತಿಕೊಂಡ ಪಂತುಲು ಸ್ತ್ರೀಪರ ಕಳಕಳಿ ಹೊಂದಿದವರಾಗಿದ್ದುದು ಕಾಣುತ್ತದೆ. ಇದಕ್ಕೆ ಉದಾಹರಣೆಯಾಗಿ ಸತ್ಯವತೀ ಚರಿತ್ರೆ, ರಾಜಶೇಖರ ಚರಿತ್ರೆ, ಸತ್ಯರಾಜನ ಪೂರ್ವ ದೇಶಯಾತ್ರೆ ಕಾದಂಬರಿಗಳನ್ನು ನೋಡಬಹುದು. ಇವರು ಶ್ರೀಹರ್ಷ ದೇವನ ರತ್ನಾವಳಿಯನ್ನು ತೆಲುಗಿಗೆ ತಂದರು. ಸಂಸ್ಕೃತ ನಾಟಕ 'ಕಾಳಿದಾಸನ ಮಾಳವಿಕಾಗ್ನಿ ಮಿತ್ರ'ವನ್ನು ತೆಲುಗಿನಲ್ಲಿ ಅನುವಾದಿಸಿದರು. ವಿವೇಕ ದೀಪಿಕ, ಪ್ರಹ್ಲಾದ, ರಾಗಮಂಜರಿ ನಾಟಕಗಳನ್ನು ರಚಿಸಿದರು. ೧೮೮೯ರಲ್ಲಿ 'ತಿರ್ಯ್‌ಗ್ವಿದ್ವನ್ಮಹಾಸಭ' ಮತ್ತು 'ಮಹಾರಣ್ಯ ಪುರಾಧಿ ಪತ್ಯಮು' ಎಂಬ ಎರಡು ಕೃತಿಗಳನ್ನು ಬರೆದರು. ೧೮೦೪ರಲ್ಲಿ 'ಸತಿಹಿತ ಬೋಧಿನಿ' ಎಂಬ ಮಾಸಪತ್ರಿಕೆ ಹೊರತಂದರು. ೧೮೮೪ರಲ್ಲಿ 'ಚಂದ್ರಮತಿ ಚರಿತ್ರಮು' ಹಾಗೂ ೧೮೮೭ರಲ್ಲಿ 'ಸತ್ಯ ಸಂಜೀವಿನಿ' ಎಂಬ ಸ್ತ್ರೀಯರ ನೀತಿ ಬೋಧಕ ಗ್ರಂಥಗಳನ್ನು ಪ್ರಕಟಿಸಿದರು.

ಪಂತುಲು ಸ್ವತಃ ಬಾಲ್ಯ ವಿವಾಹ ವ್ಯವಸ್ಥೆಗೆ ಬಲಿಪಶುವಾಗಿದ್ದರೂ ಸಮಾಜದಲ್ಲಿ ಬೇರು ಬಿಟ್ಟಿದ್ದ ಬಾಲ್ಯವಿವಾಹವನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದರು. ಅವರ ಕಾದಂಬರಿಗಳಲ್ಲಿ ಬಾಲ್ಯವಿವಾಹ ಸಮಸ್ಯೆ ಕುರಿತು ಸಾಕಷ್ಟು ವಿವರಗಳಿವೆ. ಒಂದು ಮಿತಿಯೊಳಗೆ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನವೂ ಇದೆ. ಬಾಲ್ಯವಿವಾಹ ಹಾಗೂ ವಿಧವಾ ಸಮಸ್ಯೆಗಳು ಪುರುಷ ಹಿತದೃಷ್ಟಿ ಸಾಧಿಸುವಲ್ಲಿ ಪರಸ್ಪರ ಪೂರಕವೂ ಅವಲಂಬಿತವೂ ಆಗಿವೆ.

ಸತ್ಯವತೀ ಚರಿತ್ರೆ ಸ್ತ್ರೀ ಶಿಕ್ಷಣಕ್ಕೆ ಮಹತ್ವ ನೀಡುತ್ತದೆ. ಅಕ್ಷರ ಬಲ್ಲ ಹೆಣ್ಣು ಕುಟುಂಬದ ಎಲ್ಲ ವ್ಯವಹಾರಗಳನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲಳು. ಜೀವನದಲ್ಲಿ ಎದುರಾಗುವ ಏರುಪೇರುಗಳನ್ನು ಧೈರ್ಯದಿಂದ ಎದುರಿಸುವ ವಿವೇಕ ಗುಣ ಹೆಣ್ಣಿಗಿರುವುದನ್ನು ಕಾದಂಬರಿ ಚಿತ್ರಿಸಿದೆ. ಇದನ್ನು ೧೮೯೭ರಲ್ಲಿ ನಂಜನಗೂಡು ಅನಂತನಾರಾಯಣಶಾಸ್ತ್ರೀ ಕನ್ನಡಕ್ಕೆ ಅನುವಾದಿಸಿದ್ದಾರೆ.

ವಿದ್ಯಾವಂತ ಮನೆತನದಿಂದ ಬಂದ ಸತ್ಯವತಿ ಈ ಕಾದಂಬರಿಯ ನಾಯಕಿ. ಬಾಲ್ಯವಿವಾಹಕ್ಕೆ ಒಳಗಾಗುವ ಈಕೆ ಮೈನೆರೆದ ಮೇಲೆ ಗಂಡನ ಮನೆ ಸೇರುತ್ತಾಳೆ. ಆದರೆ ಅನಕ್ಷರಕುಕ್ಷಿಯಾದ ಅತ್ತೆ ಅವಳಲ್ಲಿ ಅನೇಕ ತಪ್ಪುಗಳನ್ನು ಕಂಡು ಹಿಡಿಯುತ್ತಾಳೆ. ಆಕೆಯ ಪ್ರಕಾರ ನಡುಹಗಲಲ್ಲಿ ಗಂಡನೊಂದಿಗೆ ಮಾತಾಡಿದ್ದು ಸತ್ಯವತಿಯ ಮೊಟ್ಟಮೊದಲ ದೊಡ್ಡ ತಪ್ಪಾಗಿದೆ. ಓದುವುದು

ಎರಡನೆಯ ತಪ್ಪಾಗಿದೆ. ಅವಳ ಹೆತ್ತವರು ವಿದ್ಯಾವಂತರಾಗಿದ್ದ ಕಾರಣ ಅವಳನ್ನು ಶಾಲೆಗೆ ಕಳುಹಿಸಿದ್ದರು. ಇದಲ್ಲದೆ ಕಥೆಗಳ ಮೂಲಕ ಅವಳ ನೈತಿಕತೆಯನ್ನು ಹೆಚ್ಚಿಸಿದ್ದರು. ಮದುವೆಯ ನಂತರವೂ ಗಂಡ ಅವಳನ್ನು ಪ್ರೋತ್ಸಾಹಿಸಿ ಓದಿಸುತ್ತಿದ್ದನು. ಇದನ್ನು ಕಂಡ ಅತ್ತೆ 'ಹೆಂಗಸು ಓದಿ ಕೆಟ್ಟಳು, ಗಂಡಸು ಓದದೆ ಕೆಟ್ಟನು' ಎಂದು ಹೀಯಾಳಿಸುತ್ತಿದ್ದಳು. ವಿದ್ಯೆ ಪುರುಷರ ಹಕ್ಕೆಂದು, ಸ್ತ್ರೀಯರ ಹಕ್ಕು ಅಲ್ಲವೆಂದು ಸೂಚಿಸುತ್ತ ಪರಂಪರಾಗತ ಪುರುಷ ಮೌಲ್ಯವನ್ನು ಪ್ರತಿಪಾದಿಸುತ್ತಿದ್ದಳು. ಅದಲ್ಲದೆ ಕೈಗೆ ಸಿಕ್ಕಿದ ಪುಸ್ತಕಗಳನ್ನೆಲ್ಲ ಹರಿದು ಹಾಕಿ ತನ್ನ ಕೈಲಾಗುವ ಮಟ್ಟಿಗೆ ಸತ್ಯವತಿಯ ವಿದ್ಯಾಭ್ಯಾಸಕ್ಕೆ ಅಡ್ಡಿ ಮಾಡುತ್ತಿದ್ದಳು.

ಶುಚಿಯಾಗಿರುವುದು ಸತ್ಯವತಿಯ ಮೂರನೆಯ ತಪ್ಪಾಗಿತ್ತು. ಆಕೆ ಆರೋಗ್ಯದ ಹಿತದೃಷ್ಟಿಯಿಂದ ತನ್ನ ಮಲಗುವ ಮನೆಯನ್ನು ಶುಚಿಯಾಗಿಟ್ಟುಕೊಂಡಿದ್ದಳು. ಗೋಡೆಗಳಿಗೆ ಸುಣ್ಣ ಬಣ್ಣ ಮಾಡಿಸಿ, ಸುತ್ತಲಿನ ಹೊಲಸು ತೆಗೆಯಿಸಿ ತನ್ನ ರೂಮಿನಲ್ಲಿ ಸ್ವಚ್ಛ ಗಾಳಿ ಆಡುವಂತೆ ಮಾಡಿಕೊಂಡಿದ್ದಳು. ತಾನು ಬಳಸುವ ಬಟ್ಟೆಬರೆಗಳನ್ನು ಮಾಸುವುದಕ್ಕಿಂತ ಮುಂಚೆಯೆ ಶುಭ್ರಗೊಳಿಸುತ್ತಿದ್ದಳು. ಶುದ್ಧ ನೀರನ್ನೇ ಕುಡಿಯುತ್ತಿದ್ದಳು. ಸಾಮಾನು ಪಾತ್ರೆಗಳನ್ನು ಪ್ರತಿ ದಿನವೂ ತೊಳೆದು ಬಳಸುತ್ತಿದ್ದಳು, ಆದಕಾರಣ ಮನೆಯಲ್ಲಿ ಸೊಳ್ಳೆಗಳು, ಇರುವೆಗಳು, ತಗಣಿಗಳು ಯಾವುದೂ ಇಲ್ಲದಂತಾಗಿದ್ದುದರಿಂದ ಮನೆಯಲ್ಲಿರುವುದಕ್ಕೆ ಹಿತವಾಗುತ್ತಿತ್ತು. ಸತ್ಯವತಿಯ ಇಂಥ ವಿವೇಕಯುತ ನಡವಳಿಕೆ ಮತ್ತು ಆಧುನಿಕ ಜೀವನ ಕ್ರಮ ಕಂಡು ಅತ್ತೆ ದೊರೆಸಾನಿ, ಸೀಮೆರಾಣಿ ಎಂದು ಅವಳನ್ನು ಪರಿಹಾಸ ಮಾಡುತ್ತಿದ್ದಳು.

ಸತ್ಯವತಿ ಉಪವಾಸ ಮುಂತಾದ ವ್ರತಾಚರಣೆಗಳನ್ನು ಪಾಲಿಸುತ್ತಿರಲಿಲ್ಲ. ಆದರೆ ಸರಳವಾಗಿ ಧ್ಯಾನಮಾಡಿ ದೇವರ ಪ್ರಾರ್ಥನೆ ಮಾಡುತ್ತಿದ್ದುದು ಅವಳ ನಾಲ್ಕನೆಯ ತಪ್ಪಾಗಿತ್ತು. ಅವಳು ಉಪವಾಸ, ಜಾಗರಣೆ ಮಾಡಿ ದೇಹದ ಆರೋಗ್ಯ ಕೆಡಿಸಿಕೊಳ್ಳುತ್ತಿರಲಿಲ್ಲ; ಒದ್ದೆ ಬಟ್ಟೆ ಉಡುತ್ತಿರಲಿಲ್ಲ; ಬಿಸಿನೀರಿನಲ್ಲಿ ಸ್ನಾನ ಮಾಡುತ್ತಿದ್ದಳೇ ಹೊರತು ನದಿಗೆ ಹೋಗುತ್ತಿರಲಿಲ್ಲ. ಇದನ್ನು ಕಂಡ ಅತ್ತೆ ತನ್ನ ಸೊಸೆ ಆಚಾರವಿಲ್ಲದವಳೆಂದು ಎಲ್ಲರಲ್ಲಿ ಹೇಳಿಕೊಳ್ಳುತ್ತಿದ್ದಳು.

ಸತ್ಯವತಿಯ ತಂದೆ ಶ್ರೀಮಂತರಾಗಿದ್ದರು. ಅದು ಅತ್ತೆ ಯಶೋದಮ್ಮ ತನ್ನ ಸೊಸೆಯ ಮೇಲೆ ಹೊರಿಸಿದ ಐದನೆಯ ತಪ್ಪಾಗಿತ್ತು. ಅವಳ ತಂದೆ ಪ್ರತಿ ತಿಂಗಳೂ ಅವಳಿಗೆ ಹತ್ತು ರೂಪಾಯಿಗಳನ್ನು ಕಳುಹಿಸುತ್ತಿದ್ದರು. ಆ ಹಣವನ್ನು ಆಕೆ ಮನೆಯ ವೆಚ್ಚಗಳಿಗೆ ತೊಂದರೆ ಉಂಟಾದಾಗ ಬಳಸಿಕೊಳ್ಳುತ್ತಿದ್ದಳು. ಅದಲ್ಲದೆ ಕುಂಟರು, ಕುರುಡರು, ರೋಗಿಗಳು ಮುಂತಾದ ಬಡವರಿಗೆ ಸಹಾಯ ಮಾಡುತ್ತಿದ್ದಳೇ ಹೊರತು ತನ್ನ ಸ್ವಂತ ಖರ್ಚಿಗೆ ಬಳಸುತ್ತಿರಲಿಲ್ಲ. ಇದನ್ನು ಕಂಡು ಯಶೋದಮ್ಮ ತನ್ನ ಸೊಸೆ ನವಾಬನ ಮಗಳೆಂತಲೂ ಅವಳಿಗೆ ಹಣದ ಕೊಬ್ಬೆಂತಲೂ

ಸತ್ಯವತಿಯನ್ನೂ ಅವಳ ಹೆತ್ತವರ ಶ್ರೀಮಂತಿಕೆಯನ್ನೂ ಶಪಿಸುತ್ತಿದ್ದಳು. ಸತ್ಯವತಿ ಅತ್ತೆಯ ಈ ಎಲ್ಲ ಅಸಹನೆಯನ್ನು ಮೌನವಾಗಿ ಸಹಿಸಿಕೊಂಡು ಹೋಗುತ್ತಿದ್ದಳು.

ಓರಗಿತ್ತಿ ಸುಂದರಮ್ಮನ ಹೆರಿಗೆ ಸಮಯದಲ್ಲಿ ಅವಳನ್ನು ಆರೈಕೆ ಮಾಡಿದ ಕೋಣೆಯಲ್ಲ ಗಾಳಿ ಕೂಡ ಸುಳಿದಾಡದಂತೆ ಎಲ್ಲ ಕಿಟಕಿಗಳನ್ನು ಮುಚ್ಚಲಾಗಿತ್ತು. ಇದಲ್ಲದೆ ಬೆಳ್ಳುಳ್ಳಿ ವಾಸನೆ ಧೂಪದ ಹೊಗೆ ಸೇರಿ ಆ ರೂಮಿನಲ್ಲಿ ಉಸಿರುಗಟ್ಟುವಂತೆ ಇರುತ್ತಿತ್ತು. ಬಾಣಂತಿ ದಾಹದಿಂದ ಹಸಿವಿನಿಂದ ಕೂಗಿಕೊಂಡರೂ ನಾಲ್ಕು ದಿನಗಳವರೆಗೆ ಅದರ ಹೆಸರನ್ನೆ ಎತ್ತಕೂಡದು ಎಂದು ಯಶೋದಮ್ಮ ಬಿಗಿ ಕಟ್ಟುಪಾಡು ಮಾಡಿದ್ದಳು. ತನ್ನ ನೋವು ಸಹಿಸಿಕೊಳ್ಳದ ಸುಂದರಮ್ಮ ಸತ್ಯವತಿಯ ಬಳಿ ತನ್ನ ಸಂಕಟ ಹೇಳಿಕೊಳ್ಳುತ್ತಿದ್ದಳು. ಸತ್ಯವತಿ ಯಾರಿಗೂ ತಿಳಿಯದಂತೆ ಎಲ್ಲ ಕದಗಳನ್ನು ತೆರೆದು, ಧೂಪ ಹೊರಗಿಟ್ಟು ಹೆರಿಗೆ ಮನೆಗೆ ಗಾಳಿಯಾಡುವಂತೆ ಮಾಡಿ ಗುಟ್ಟಾಗಿ ಕುಡಿಯಲು ತಣ್ಣೀರು ತಂದುಕೊಡುತ್ತಿದ್ದಳು. ಇದರಿಂದ ಬಾಣಂತಿಯ ದೇಹದಲ್ಲಿ ಸ್ವಾಸ್ಥ್ಯ ಕಾಣಿಸಿಕೊಂಡಿತು. ಆದರೂ ಕೆಲವು ದಿನಗಳ ನಂತರದಲ್ಲಿ ಅನಾರೋಗ್ಯದಿಂದ ಮಗು ತೀರಿಕೊಂಡಿತು. ಮಗು ತೀರಿಕೊಳ್ಳಲು ಸತ್ಯವತಿಯೇ ಕಾರಣವೆಂದು ಅವಿದ್ಯಾವಂತ ಓರಗಿತ್ತಿ ದುಃಖಿಸಿದಳು.

ಅನಕ್ಷರಸ್ಥರಾಗಿದ್ದ ಅತ್ತೆ ಯಶೋದಮ್ಮ ಹಾಗೂ ಓರಗಿತ್ತಿ ಸುಂದರಮ್ಮ ಪದೇ ಪದೇ ಜಗಳ ಮಾಡಿಕೊಳ್ಳುತ್ತಿದ್ದರು. ಸತ್ಯವತಿ ಅವರಿಬ್ಬರನ್ನೂ ಸಮಾಧಾನ ಪಡಿಸುತ್ತಿದ್ದಳು. ಆದರೆ ಅವಳ ತಾಳ್ಮೆ ಮತ್ತು ವಿವೇಕದ ಗುಣವನ್ನು ಕಂಡು ಮತ್ಸರಪಟ್ಟ ಅತ್ತೆ ಯಶೋದಮ್ಮ ಅವಳಿಗೆ ಭಯಭಕ್ತಿ ಏನೂ ಇಲ್ಲವೆಂದೂ ತನ್ನ ಮಗ ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿದಕ್ಕೆ ಇಂತಹ ದಿಕ್ಕುಕೆಟ್ಟ ಸಂಬಂಧ ಸಿಕ್ಕಿತು ಎಂದೂ ಅವಳನ್ನೇ ಹೀಯಾಳಿಸುತ್ತಿದ್ದಳು. ವಿಧವೆಯಾಗಿದ್ದ ಸತ್ಯವತಿಯ ನಾದಿನಿ ಸಾವಿತ್ರಿ ತವರು ಮನೆ ಸೇರಿದ್ದಳು. ಅವಳು ತಾಯಿಯೊಂದಿಗೆ ಸೇರಿ ಸತ್ಯವತಿಗೆ ಹೆಚ್ಚು ಕಾಟಕೊಡುತ್ತಿದ್ದಳು. ಆದರೂ ಸತ್ಯವತಿ ಅವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ತನ್ನ ಕಿರಿಯ ನಾದಿನಿ ಸೀತೆಗೆ ಓದುವಂತೆ ಪ್ರೋತ್ಸಾಹಿಸುತ್ತಿದ್ದಳು. ತನ್ನ ಇಬ್ಬರು ಮೈದುನರಿಗೆ ಒಳ್ಳೆಯ ನೀತಿಗಳನ್ನು ಅನುಸರಿಸುವಂತೆ ಮಾರ್ಗದರ್ಶನ ನೀಡುತ್ತಿದ್ದಳು. ಹೀಗಿದ್ದರೂ ಅವಳ ಮೈದುನರಿಗೂ ನಾದಿನಿಯರಿಗೂ ಅವರ ಬಾಲ್ಯದಲ್ಲೆ ಮದುವೆ ನಡಯಿತು. ಸತ್ಯವತಿ ತನ್ನ ಮೈದುನ ಮತ್ತು ನಾದಿನಿಯರ ಕುಟುಂಬಗಳಿಗೆ ಒಳ್ಳೆಯ ನಡವಳಿಕೆಗಳನ್ನು ಕಲಿಸಿದಳು.

ಸತ್ಯವತಿ ತಾನು ಹೆರಿಗೆಗೆಂದು ತವರಿಗೆ ಹೋಗಿದ್ದಾಗ ಅಲ್ಲಿ ಚಂದ್ರಗ್ರಹಣ ನೋಡಿದಳು. ಊರ ಜನರೆಲ್ಲ ಆಕೆಗೆ ಅಂಗವಿಕಲ ಮಗು ಹುಟ್ಟುತ್ತದೆ ಎಂದು ಭಾವಿಸಿದರು. ಸತ್ಯವತಿ ಆರೋಗ್ಯ ಪೂರ್ಣವಾದ ಮಗುವಿಗೆ ಜನ್ಮ ನೀಡುತ್ತಾಳೆ. ಅವಳ ಹೆರಿಗೆಯಾದ ಕೆಲವೇ ದಿನಗಳಲ್ಲಿ ನಾದಿನಿಯಾದ ಸೀತೆ ವಿಧವೆಯಾದಳು. ಸುಂದರಮ್ಮ ಅತ್ತೆಯೊಂದಿಗೆ ಜಗಳಮಾಡಿಕೊಂಡು ಬೇರೆಯಾದಳು. ಈ

ಸಂಗತಿಗಳನ್ನು ಕೇಳಿದ ಸತ್ಯವತಿ ತಕ್ಷಣ ಗಂಡನ ಮನೆಗೆ ಬಂದು ಸೀತೆಯನ್ನು ತನ್ನ ಮಗಳಂತೆ ಸಾಂತ್ವನ ಮಾಡಿದಳು. ಇಷ್ಟೆಲ್ಲದರ ನಡುವೆಯೂ ಆಕೆ ಅತ್ತೆಯ ಸೇವೆಯನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಾಳೆ ಹಾಗೂ ಆರ್ಥಿಕವಾಗಿ ಗಂಡನಿಗೆ ಸಹಾಯ ಮಾಡುತ್ತಾಳೆ. ಅತ್ತೆಯ ಮರಣದ ನಂತರ ಇಡೀ ಮನೆಯ ಜವಾಬ್ದಾರಿ ಹೊರುತ್ತಾಳೆ. ಗಂಡನನ್ನು ಗೌರವಿಸುವುದು, ಮನೆಯವರೆಲ್ಲರೊಂದಿಗೆ ಸ್ನೇಹದಿಂದ ಇರುವುದು, ಸಂದರ್ಭವೊದಗಿದಾಗ ದಾರಿ ತಪ್ಪಿದವರಿಗೆ ಬುದ್ಧಿ ಮಾತು ಹೇಳುವುದು, ಅಲ್ಲದೆ ಸೀತೆಗೆ ಮರುವಿವಾಹ ಮಾಡುವ ಯೋಚನೆ ಮಾಡುವುದು– ಇವು ಸೀತೆಯ ವ್ಯಕ್ತಿತ್ವವನ್ನು ನಿರೂಪಿಸುತ್ತದೆ.

ಒಮ್ಮೆ ಗಂಡ ಅಸ್ವಸ್ಥನಾಗಿ ಹಾಸಿಗೆ ಹಿಡಿಯುತ್ತಾನೆ. ಮನೆಯ ಆರ್ಥಿಕ ಪರಿಸ್ಥಿತಿ ಹದಗೆಡುತ್ತದೆ. ಯಜಮಾನಿ ಸತ್ಯವತಿಗೆ ಮನೆಯವರೆಲ್ಲರೂ ಒಂದೊಂದು ರೀತಿಯಲ್ಲಿ ಸಹಾಯ ಮಾಡುತ್ತಾರೆ. ಸತ್ಯವತಿ ಧೈರ್ಯದಿಂದ ಪರಿಸ್ಥಿತಿಯನ್ನು ನಿಭಾಯಿಸಿಕೊಂಡು ಹೋಗುತ್ತಾಳೆ. ಸಹನೆಯಿಂದ ಗಂಡನ ಉಪಚಾರ ಮಾಡಿ ಆರೋಗ್ಯ ಸುಧಾರಿಸುವಂತೆ ಮಾಡುತ್ತಾಳೆ. ಒಂದೆರೆಡು ತಿಂಗಳ ಬಳಿಕ ಆತ ಮತ್ತೆ ಕೆಲಸ ಮಾಡತೊಡಗಿ ಹಣ ಸಂಪಾದಿಸುತ್ತಾನೆ. ದುಶ್ಚಟಗಳಿಗೆ ಗುಲಾಮನಾಗಿದ್ದ ಮೈದುನ ರಾಮಸ್ವಾಮಿಗೆ ಹಾಗೂ ಅವಳ ಹೆಂಡತಿಗೆ ಬುದ್ಧಿಮಾತು ಹೇಳುತ್ತಾಳೆ. ಅಣ್ಣನ ಮಾತನ್ನು ತಿರಸ್ಕಾರ ಬುದ್ಧಿಯಿಂದ ನೋಡುತ್ತಿದ್ದ ರಾಮಸ್ವಾಮಿ ನಂತರದಲ್ಲಿ ತನ್ನ ಅಣ್ಣ ಮತ್ತು ಅತ್ತಿಗೆಯನ್ನು ಗೌರವಿಸತೊಡಗುತ್ತಾನೆ.

ಮತ್ತೊಬ್ಬ ಮೈದುನ ಸುಬ್ರಮಣ್ಯನ ಹೆಂಡತಿ ಸೂರಮ್ಮ ಕೂಡ ಮನೆಯವರ ನೆಮ್ಮದಿ ಹಾಳು ಮಾಡುತ್ತಿದ್ದಳು. ಹಳ್ಳಿಯಿಂದ ಬಂದ ಸೂರಮ್ಮಳಿಗೆ ಸತ್ಯವತಿ ಮತ್ತು ಇತರರ ಗುಣಗಳು ಹಿಡಿಸುತ್ತಿರಲಿಲ್ಲ. ಆಕೆ ಪ್ರತಿ ದಿನ ಅಂಗಳದಲ್ಲಿ ಮುದ್ದೆ ಬೀಳುವಂತೆ ಸಗಣಿ ಚಿಮುಕಿಸುತ್ತಿದ್ದಳು. ದಿನಕ್ಕೆ ಐದಾರು ಬಾರಿ ಸ್ನಾನ ಮಾಡಿ ಒದ್ದೆ ಬಟ್ಟೆಗಳನ್ನು ಉಟ್ಟುಕೊಂಡು ತಲೆ ನೋವಿನಿಂದಲೂ ನೆಗಡಿಯಿಂದಲೂ ನರಳುತ್ತಿದ್ದಳು. ಔಷಧ ತೆಗೆದುಕೊಳ್ಳುವ ಬದಲು ಕಣಿ ಕೇಳುವುದು, ದೆವ್ವದ ಕಾಟವೆಂದು ನಂಬಿ ಅದನ್ನು ಬಿಡಿಸಲು ಸಾಕಷ್ಟು ಹಣ ವ್ಯಯ ಮಾಡುತ್ತಿದ್ದಳು. ತನಗೆ ಒಡವೆ ಮಾಡಿಸಿಕೊಡೆಂದು ತನ್ನ ಗಂಡನಿಗೆ ಒತ್ತಾಯ ಮಾಡುತ್ತಿದ್ದಳು. ಮನೆಯಲ್ಲಿದ್ದ ವಸ್ತುಗಳನ್ನು ಕಳ್ಳತನದಲ್ಲಿ ಬ್ರಾಹ್ಮಣರಿಗೆ ಕೊಡುತ್ತಿದ್ದಳು. ಕ್ಷುಲ್ಲಕ ಕಾರಣಗಳಿಗೆ ನೆರೆಹೊರೆಯವರೊಂದಿಗೆ ಜಗಳವಾಡುತ್ತ ಅವರಿವರ ಮೇಲೆ ದೋಷಾರೋಪಣೆ ಮಾಡುತ್ತಾ ಇದ್ದಳು. ದೆವ್ವದ ಹೆಸರಲ್ಲಿ ಬಟ್ಟೆಗಳನ್ನು ಸುಡುವುದು, ಗಾಜಿನ ಬಟ್ಟಲು ಮುಂತಾದ ಸಾಮಾನುಗಳನ್ನು ಒಡೆದು ಹಾಕುತ್ತಿದ್ದಳು. ಇದರಿಂದ ಬೇಸತ್ತ ಅವಳ ಗಂಡ ಮನೆ ಬಿಟ್ಟು ದೇಶಾಂತರ ಹೋಗಲು, ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುತ್ತಿದ್ದನು. ಇಂಥ ಪ್ರಯತ್ನಗಳನ್ನು ಸತ್ಯವತಿ ಹಾಗೂ ಅವಳ ಗಂಡ ವಿಫಲಗೊಳಿಸುತ್ತಿದ್ದರು.

ವೈಧವ್ಯದಿಂದ ದುರವಸ್ಥೆ ಕಂಡ ಸೀತೆಗೆ ಸತ್ಯವತಿ ಹಾಗೂ ಅವಳ ಗಂಡ ಪುನರ್ವಿವಾಹ ಮಾಡಿ ಅವಳ ಸ್ಥಿತಿ ಸುಧಾರಿಸಲು ನಿಶ್ಚಯಿಸಿದರು. ಆದರೂ ಪುನರ್ವಿವಾಹ ಯಾರಿಗೂ ಆಗುವುದಿಲ್ಲ.

ಸುಶಿಕ್ಷಿತಳಾದ ಸತ್ಯವತಿಯಲ್ಲಿ ಉತ್ತಮ ರೀತಿಯ ವಿವೇಚನಾ ಶಕ್ತಿ ಇತ್ತೆಂದು ಕಾಣಿಸುತ್ತದೆ. ಆದರೆ ಕಾದಂಬರಿಯಲ್ಲಿ ಬರುವ ಇನ್ನಿತರ ಪಾತ್ರಗಳೆಲ್ಲ ಅನಕ್ಷರರಾಗಿದ್ದು ಅಂಧಶ್ರದ್ಧೆಯಲ್ಲಿ ಸಾಗುತ್ತವೆ. ಸತ್ಯವತಿಯ ತ್ಯಾಗ, ಸಹನೆ, ನಡತೆ, ಪರೋಪಕಾರ, ಬುದ್ಧಿ, ವಿವೇಕ, ಕುಟುಂಬ ವಾತ್ಸಲ್ಯ ಇವೆಲ್ಲವೂ ಅವಳು ಶಿಕ್ಷಣ ಪಡೆದುದರಿಂದ ಬಂದುದೆಂದು ಓದುಗರಿಗೆ ಮನವರಿಕೆ ಮಾಡುತ್ತದೆ. ಬಾಲವಿಧವೆಯಾದ ನಾದಿನಿ ಸೀತೆಯ ಮರುಮದುವೆ ಮಾಡಲು ಬಯಸುವ ಸತ್ಯವತಿ ಹೆಣ್ಣಿನ ಹಕ್ಕು, ಸ್ವಾತಂತ್ರ್ಯ, ಗೌರವ ಕಾಪಾಡುವ ಪ್ರಗತಿ ಪರ ಸಮಾಜದ ಸೂಚಕವಾಗಿ ಗೋಚರಿಸುತ್ತಾಳೆ.

ಕಾದಂಬರಿ ಸಾಂಪ್ರದಾಯಿಕ ಚೌಕಟ್ಟಿನೊಳಗೆ ನವೀನ ವಿಚಾರಗಳನ್ನು ಬೆಸೆಯುವ ಪ್ರಯತ್ನ ಮಾಡಿದೆ. ಅದು ಕೇವಲ ಕಾದಂಬರಿಯ ಕೌಶಲಪೂರ್ಣವಾದ ಅಂಶವಾಗಿರದೆ ಮೂಲಭೂತ ಕಾಳಜಿಯಿಂದ ಪ್ರೇರಿತವಾದದ್ದು ಎಂದು ಹೇಳಬಹುದು. ಕಾದಂಬರಿಯ ಬೇರೆ ಬೇರೆ ಸನ್ನಿವೇಶಗಳಲ್ಲಿ ಪುನರಾವರ್ತನೆಗೊಳ್ಳುವ ಸ್ತ್ರೀಪರ ಆಶಯಗಳು ಇದನ್ನು ಪುಷ್ಟೀಕರಿಸುತ್ತವೆ. ಪಾರಂಪರಿಕ ಸಮಾಜದ ಅಂಧಶ್ರದ್ಧೆ ಹಾಗೂ ನವನಾಗರಿಕ ಸಮಾಜದ ವಿವೇಚನಾ ದೃಷ್ಟಿಯನ್ನು ಚಿತ್ರಿಸುವ ಕ್ರಮವಾಗಿ ಈ ಕೃತಿ ಮೂಡಿದೆ.

ರಾಜಶೇಖರ ಚರಿತ್ರೆ (೧೯೭೮)

ಸ್ತ್ರೀಯರ ದುಃಸ್ಥಿತಿ, ಅವರಿಗೆ ನಿರ್ಬಂಧಿತವಾದ ವೈಧವ್ಯ, ಬಾಲ್ಯವಿವಾಹ, ಅನಕ್ಷರತೆ, ವರದಕ್ಷಿಣೆ, ಮೂಢನಂಬಿಕೆಗಳಂತಹ ಅನಾಚಾರಗಳನ್ನು ವೀರೇಶಲಿಂಗಂ ಪಂತುಲು ಅವರ ಈ ಮತ್ತೊಂದು ಕಾದಂಬರಿ ಪ್ರತಿಬಿಂಬಿಸುತ್ತದೆ.

ರಾಜಶೇಖರ ಒಬ್ಬ ಧನಿಕ. ಆಶ್ರಯ ಬೇಡಿ ಬಂದವರಿಗೆ ಸಹಾಯ ನೀಡುತ್ತಿದ್ದನು. ಆದರೆ ಅನೇಕರು ಅತನ ಈ ಗುಣವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಸುಳ್ಳು ನೆಪ ಮಾಡಿ ಅವನಿಂದ ಸಹಾಯ ರೂಪದಲ್ಲಿ ಹಣ ದೋಚುತ್ತಿದ್ದರು. ಜನರ ಇಂತಹ ಕಪಟ ನಾಟಕಗಳು ರಾಜಶೇಖರನಿಗೆ ಗೊತ್ತಾಗುತ್ತಿರಲಿಲ್ಲ. ದಿನಕಳೆದಂತೆ ಮೋಸ ಮಾಡುವವರ ಸಂಖ್ಯೆ ಹೆಚ್ಚಾಯಿತು. ಕಪಟ ಸನ್ಯಾಸಿಗಳು ಅವನ ಬಳಿಗೆ ಬಂದು– 'ಊರಿಗೆ ಹಿತವಾಗುತ್ತದೆ, ವಿಹಿತವಾಗುತ್ತದೆ. ಅದನ್ನು ಹೋಗಲಾಡಿಸುವೆವು' ಎಂದು ಸುಳ್ಳು ಹೇಳಿ ಮೋಸ ಮಾಡುತ್ತಿದ್ದವರು ಕೂಡ ಅವನಿಂದ ಹಣ ದೋಚುತ್ತಿದ್ದರು. ಕೆಲವರು ಅವನ ಮನೆಯಲ್ಲಿಯೇ ಉಳಿದು ವಾಸ ಮಾಡಲು ಪ್ರಾರಂಭಿಸಿದ್ದರು. ಊರಿನ ಜನರೆಲ್ಲರೂ ಅಂತಹ ಕಪಟ ಸನ್ಯಾಸಿಗಳ ಸಲಹೆ ಪಡೆದು ಪ್ರತಿಯೊಂದೂ ಕೆಲಸ ಮಾಡುತ್ತಿದ್ದರು. ಆ ಊರಿನಲ್ಲಿ ಪುರೋಹಿತರಾರೂ ಇರದಿದ್ದರಿಂದ ಜನರು ಸನ್ಯಾಸಿಯ ಮನೆಗೆ

ಹೋಗುತ್ತಿದ್ದರು. ಪ್ರಯಾಣದ ಮಹೂರ್ತ ಕೇಳಲು, ಹೊಸ ಬಟ್ಟೆ ಧರಿಸುವ ಸಮಯ ವಿಚಾರಿಸಲು, ಮನೆ ಕಟ್ಟುವ ದಿನ-ತಿಥಿ ತಿಳಿಯಲು, ಕ್ಷೌರ ಮಾಡಿಸಿಕೊಳ್ಳುವ ದಿನ ತಿಳಿಯಲು, ವಿವಾಹಕ್ಕೆ ಮಹೂರ್ತವಿರಿಸಲು, ಋತುಮತಿ ಕಾಲದ ನಕ್ಷತ್ರ ನೋಡಲು – ಹೀಗೆ ಪ್ರತಿಯೊಂದು ವಿಷಯಕ್ಕೂ ಸನ್ಯಾಸಿಯನ್ನು ಅವಲಂಬಿಸಿದ್ದರು. ಅದಕ್ಕೆ ಸನ್ಯಾಸಿ ಆಕಾಶದತ್ತ ನೋಡಿ ವಿಚಾರ ಮಾಡುತ್ತ ಕವಡೆಗಳಿಂದ ಏನೇನೋ ಲೆಕ್ಕಹಾಕಿ ಸಲಹೆ ಕೊಟ್ಟು ಕಳುಹಿಸುತ್ತಿದ್ದನು. ಕೆಲವು ಸಂದರ್ಭಗಳಲ್ಲಿ ಅವನು ಹೇಳಿದ್ದು ನಿಜವಾಗುತ್ತಿತ್ತು. ಇದನ್ನು ಕಂಡ ಜನ ಇನ್ನಷ್ಟು ಹೆಚ್ಚಾಗಿ ಅವನನ್ನು ನಂಬಲು ಪ್ರಾರಂಭಿಸಿದರು. ಸನ್ಯಾಸಿಯ ನಡವಳಿಕೆ ಮತ್ತು ಅವನು ಗಳಿಸಿದ ಜನರ ನಂಬಿಕೆ ಕಂಡು ವಿದ್ಯಾವಂತನಾದ ರಾಜಶೇಖರನೂ ಮೋಸ ಹೋದನು. ಅವನೂ ಸನ್ಯಾಸಿಯ ಗುಲಾಮನಾದನು. ಹೀಗೆ ಪೂರ್ವಾಚಾರದ ರೀತಿ-ನೀತಿಗಳ ಪ್ರತಿನಿಧಿಯಾದ ಸನ್ಯಾಸಿ ಸ್ವಹಿತಾಸಕ್ತಿಯ ಪ್ರತಿರೂಪವಾಗಿ ಚಿತ್ರಿತನಾಗಿದ್ದಾನೆ.

ರಾಜಶೇಖರನಿಗೆ ರುಕ್ಮಿಣಿ ಎಂಬ ಮಗಳಿರುತ್ತಾಳೆ. ಆತ ಅವಳನ್ನು ಬಾಲ್ಯದಲ್ಲಿಯೇ ಮದುವೆ ಮಾಡಿರುತ್ತಾನೆ. ಆಕೆಯ ಗಂಡ ಕೆಲಸದ ನಿಮಿತ್ತ ಹೊರ ದೇಶಕ್ಕೆ ಹೋದುದರಿಂದ ಅವಳು ತವರಿನಲ್ಲಿಯೇ ಉಳಿದಿರುತ್ತಾಳೆ. ರಾಜಶೇಖರ ರುಕ್ಮಿಣಿಗೆ ತಾನೇ ಮನೆಯಲ್ಲಿ ಓದು ಬರಹ ಕಲಿಸುತ್ತಾನೆ. ಸ್ತ್ರೀಯರ ಶಿಕ್ಷಣ ಕುರಿತು ಊರಿನವರು ಎತ್ತಿದ ಆಕ್ಷೇಪಗಳಿಗೆ ರಾಜಶೇಖರ "ಸ್ತ್ರೀ ಶಿಕ್ಷಣ ಯಾವ ಪುರಾಣದಲ್ಲಿ ನಿಷೇಧಿಸಲಾಗಿದೆ. ಪೂರ್ವಕಾಲದಲ್ಲಿ ಪತಿವ್ರತೆಯರೆಲ್ಲ ವಿದ್ಯಾವಂತರಾಗಿದ್ದರು" ಎಂದು ಸಮರ್ಥಿಸುತ್ತಿದ್ದನು. ಹಿರಿಯರ ಮಾತನ್ನು ಕಡೆಗಣಿಸಿ ಸ್ತ್ರೀಯರಿಗೆ ಅನುಕೂಲವಾಗುವಂತೆ ಅವರಿಗೆ ವಿದ್ಯಾಭ್ಯಾಸ ನೀಡಿರೆಂದು ಊರಿನ ಸಭೆ ಸಮಾರಂಭಗಳಲ್ಲಿ ಎಲ್ಲರಿಗೂ ತಿಳಿಸುತ್ತಿದ್ದನು. ಸಭೆಯಲ್ಲಿದ್ದವರು ಸ್ತ್ರೀ ಶಿಕ್ಷಣ ಅನಾವಶ್ಯಕ ಎಂದು ನಂಬಿದ್ದರೂ ಧನಿಕ ರಾಜಶೇಖರನ ಮುಂದೆ ಅನಗತ್ಯ ಚರ್ಚೆ ಮಾಡಿ ಅವನಿಂದ ದೊರಕುವ ಸ್ನೇಹ ಸಹಾಯ ಕಳೆದುಕೊಳ್ಳಬಾರದೆಂದು ಅವನ ಮಾತಿಗೆ ಒಪ್ಪಿಗೆ ಸೂಚಿಸುತ್ತಿದ್ದರು. ರುಕ್ಮಿಣಿಗೆ ಶಿಕ್ಷಣ ನೀಡಿದ್ದಕ್ಕಾಗಿ ಆತನನ್ನು ಹೊಗಳುತ್ತಿದ್ದರು.

ಪ್ರತಿನಿತ್ಯ ಜನರು ರಾಜಶೇಖರನ ಮನೆಗೆ ಬಂದು ಅವನ ಪ್ರತಿಯೊಂದು ಮಾತುಗಳಿಗೆ ಹೂಂಗುಟ್ಟುತ್ತಾ ಅವನ ಬಳಿ ಧನ-ಕನಕಾದಿಗಳನ್ನು ಪಡೆದು ಹೋಗುತ್ತಿದ್ದರು. ಗುಡಿಗೋಪುರಗಳ ಕಾರ್ಯ, ಪೂಜಾರಿಯ ಹಣ, ಪೂಜೆ ಪುನಸ್ಕಾರ, ದಾನ ಧರ್ಮ ಜಾತ್ರೆ ಹೀಗೆ ಅನೇಕ ನೆಪಗಳಿಂದ ಅವನ ಬಳಿ ಹಣ ದೋಚುತ್ತಿದ್ದರು. ಆದರೆ ರಾಜಶೇಖರ ಪ್ರತಿಯೊಂದನ್ನು ನಂಬಿ ಅವರು ಕೇಳಿದಷ್ಟು ಹಣ ಕೊಡುತ್ತಿದ್ದನು ಹಾಗೂ ಬಂದವರೆಲ್ಲರಿಗೂ ಊಟ ಮಾಡಿಸಿ ಕಳುಹಿಸುತ್ತಿದ್ದನು.

ಅಪಾರ ಸಂಪತ್ತು ಹೊಂದಿದ್ದ ರಾಜಶೇಖರನ ಬಳಿ ಆಶ್ರಯ ಕೇಳಿ ಬರುತ್ತಿದ್ದರು. ಗ್ರಾಮ ದೇವಾಲಯದ ನಿರ್ಮಾಣಕ್ಕಾಗಿ ನಾಲ್ಕು ವರ್ಷದಿಂದ ಅವನ ಬಳಿ ಹಣ ವಸೂಲಿ ಮಾಡುತ್ತಿದ್ದರು.

ದೇವಸ್ಥಾನ ಪೂರ್ಣವಾಗಿ ನಿರ್ಮಾಣಗೊಳ್ಳದಿದ್ದರೂ ಅಲ್ಲಿಯ ಕಾರ್ಮಿಕರು ಮಾತ್ರ ತಮ್ಮ ಸ್ಥಿತಿ ಸುಧಾರಿಸಿಕೊಂಡಿದ್ದರು. ರಾಜಶೇಖರ ರುಕ್ಮಿಣಿಯ ವಿವಾಹಕ್ಕಾಗಿ ಮಾಡಿದ ಸಾಲ ತೀರಿಸಲಾಗದೆ ಬಡ್ಡಿ ಬೆಳೆಯುತ್ತಾ ಹೋಯಿತು.

ಒಮ್ಮೆ ಕಣಿ ಹೇಳುವ ಹೆಂಗಸು ರುಕ್ಮಿಣಿಯನ್ನು ಕಂಡು ಅವಳ ಮುಖದಲ್ಲಿ ಏನೋ ದುಃಖ ಕಾಣುತ್ತಿದೆ ಎಂದು ಸೂಚಿಸಿದಳು. ಬೇಳೆಕಾಳು ದಾನವಾಗಿ ನೀಡಿದರೆ ಆ ದುಃಖ ಹಾಗೂ ಅದರ ಪರಿಣಾಮ ತಿಳಿಸುವೆನೆಂದು ಅವಳು ಹೇಳುತ್ತಾಳೆ. ರುಕ್ಮಿಣಿ ಮೊರದ ತುಂಬ ಅಕ್ಕಿಯನ್ನು ತಂದು ಅವಳಿಗೆ ನೀಡುತ್ತಾಳೆ. ಆಗ ಅವಳು ರುಕ್ಮಿಣಿಗೆ ಗಂಡನ ಚಿಂತೆಯಾಗಿದೆಯೆಂದೂ ಅವನು ದೇಶಾಂತರಕ್ಕೆ ಹೋಗಿದ್ದಾನೆಯೆಂದೂ ಅವನು ಬರುವುದನ್ನೆ ಎದುರು ನೋಡುತ್ತಿರುವಳೆಂದೂ ಹೇಳುತ್ತಾಳೆ. 'ನಿನ್ನ ರೊಟ್ಟಿ ತುಪ್ಪದಲ್ಲಿ ಬೀಳುವ ಸಮಯ ಬಂದಿದೆ. ನಿನ್ನ ಗಂಡ ನಿನ್ನ ಬಳಿ ಬಂದು ಸೇರುತ್ತಾನೆ' (೧೯೭೮:೫೯) ಎಂದು ಹೇಳಿ ಗಂಡ ಬಂದನಂತರ ಹೊಸ ಸೀರೆ ಕೊಡಬೇಕೆಂದು ಬೇಡಿಕೆ ಇಡುತ್ತಾಳೆ. ಆದರೆ ಕೆಲವು ದಿನಗಳಲ್ಲಿಯೇ ರುಕ್ಮಿಣಿ ತನ್ನ ಆಭರಣಗಳನ್ನು ಕಳೆದುಕೊಳ್ಳುತ್ತಾಳೆ ಹಾಗೂ ಗಂಡ ಸತ್ತು ಹೋದ ಸುದ್ದಿ ಬರುತ್ತದೆ. ಅದೇ ಚಿಂತೆಯಲ್ಲಿ ರುಕ್ಮಿಣಿ ಹಾಸಿಗೆ ಹಿಡಿಯುತ್ತಾಳೆ. ಅವಳನ್ನು ನೋಡಲು ಬಂದ ನಕಲಿ ವೈದ್ಯ ರಾಜಶೇಖರನ ಬಳಿ ಸಾಕಷ್ಟು ಹಣ ವಸೂಲಿ ಮಾಡುತ್ತಾನೆ. ರುಕ್ಮಿಣಿಯ ಆರೋಗ್ಯ ಸ್ವಲ್ಪವೂ ಸುಧಾರಿಸುವುದಿಲ್ಲ. ನಂಬಿಸುವ ಮತ್ತು ವಂಚಿಸುವ ಸ್ವಭಾವ ಜನರಲ್ಲಿ ಕಾಲಾನುಕಾಲದಿಂದ ನೆಲೆಸಿದ್ದನ್ನು ಇದು ಸೂಚಿಸುತ್ತದೆ.

ರುಕ್ಮಿಣಿಯ ಕೇಶ ಮುಂಡನ ಮಾಡಬೇಕೆಂದು ಊರಜನರು ಮಾಡುವ ಒತ್ತಾಯಕ್ಕೆ ರಾಜಶೇಖರ ಮಣಿಯುವುದಿಲ್ಲ. ಅವನು ಶ್ರೀಮಂತನಾಗಿದ್ದರಿಂದ ಜನರು ಅವನಿಗೆ ಬಲವಂತ ಮಾಡುವುದಿಲ್ಲ. ರುಕ್ಮಿಣಿ ತನ್ನ ಗಂಡನ ಮರಣವಾರ್ತೆಯಿಂದ ಬಳಲುತ್ತಿದ್ದರೆ, ಅದನ್ನು ಭೂತದ ಕಾಟ ಎಂದು ನಂಬುತ್ತಾರೆ. ಅವಳನ್ನು ಒಬ್ಬ ಸ್ವಾಮಿಜಿ ಬಳಿ ಕರೆದುಕೊಂಡು ಹೋಗಿ ದೆವ್ವ ಓಡಿಸಲು ಸಾಕಷ್ಟು ಹಿಂಸೆ ನೀಡುತ್ತಾರೆ. ನಂತರ ಅವಳ ಮೈಮೇಲೆ ನರಸಿಂಹಸ್ವಾಮಿ ದೇವರು ಬಂದಿರುವನೆಂದು ನಂಬಿ ಕೈಮುಗಿಯುತ್ತಾರೆ. ಅವಳ ಮೈ ಮೇಲೆ ಬಂದ ಶಕ್ತಿ ಹೊರಟು ಹೋಗಲು ಸಾಕಷ್ಟು ಹಣ ಖರ್ಚು ಮಾಡಿ ಪೂಜೆ ಮಾಡಬೇಕಾಗುತ್ತದೆ ಎಂದು ರಾಜಶೇಖರನ ಬಳಿ ಅಧಿಕ ಹಣ ದೋಚುತ್ತಾರೆ. ಪೂಜಾರಿ ಪೂಜೆ ಮುಗಿಸಿ ಅವಳಿಗೆ ಒಂದು ಬೀಜಾಕ್ಷರಗಳ ತಾಯತ ಕಟ್ಟಿ ಮನೆಗೆ ಕಳಿಸುತ್ತಾನೆ.

ರಾಜಶೇಖರನು ತನ್ನ ಆಸ್ತಿ ಹಣವನ್ನು ವಿವೇಚನೆಯಿಲ್ಲದೆ ದುಂದುವೆಚ್ಚ ಮಾಡಿ ಕಳೆದುಕೊಳ್ಳುತ್ತಾನೆ. ಅವನನ್ನು ಹೊಗಳಿ ತಮ್ಮ ಕೆಲಸ ಮಾಡಿಕೊಳ್ಳುತ್ತಿದ್ದ ಸ್ನೇಹಿತರು ಯಾರೂ

ಅವನ ಬಡತನ ಕಂಡು ಹತ್ತಿರ ಸುಳಿಯದಂತಾಗುತ್ತಾರೆ. ರಾಜಶೇಖರನ ಪರಿಸ್ಥಿತಿ ತೀರ ಹದಗೆಡುತ್ತದೆ. ಅವನು ಶ್ರೀಮಂತನಾಗಿದ್ದಾಗ ಅವನ ಪ್ರತಿಯೊಂದು ಕೆಲಸವನ್ನು ಸಮರ್ಥಿಸಿದ್ದವರು ಅವನು ಬಡವನಾದ ಕೂಡಲೇ ವಿಧವೆ ರುಕ್ಮಿಣಿಯ ಕೇಶ ಮುಂಡನ ಮಾಡದಿರುವ ಕಾರಣ ಮುಂದಿಟ್ಟುಕೊಂಡು ಅವನಿಗೆ ಸಾಮಾಜಿಕ ಬಹಿಷ್ಕಾರ ಹಾಕುತ್ತಾರೆ. ಘನತೆ ಗೌರವದಿಂದ ಬಾಳಿ ಬದುಕಿದ ರಾಜಶೇಖರ ಅವಮಾನಕ್ಕೆ ಗುರಿಯಾಗುತ್ತಾನೆ. ಇದನ್ನು ಸಹಿಸಲಾರದೆ ಕುಟುಂಬ ಸಮೇತನಾಗಿ ಅವನು ಊರುಬಿಟ್ಟು ಕಾಶೀಯಾತ್ರೆಗೆ ಹೊರಡುತ್ತಾನೆ.

ಕಾಶೀಯಾತ್ರೆಯ ನಡುಹಾದಿಯಲ್ಲಿ ಸಮಾಜದಲ್ಲಿ ಬೇರುಬಿಟ್ಟ ಅಸ್ಪೃಶ್ಯತೆ, ಜಾತಿಭೇದ, ವಿಧವೆಯರ ಕುರಿತ ಅಮಾನವೀಯ ಧೋರಣೆಗಳು ಕಂಡುಬರುತ್ತವೆ. ದಾರಿಯಲ್ಲಿ ಒಬ್ಬ ಬ್ರಾಹ್ಮಣ ಮೂರ್ಛೆ ಹೋಗಿ ನೀರಿಗಾಗಿ ಪರಿತಪಿಸುತ್ತಿದ್ದರೂ ಸುತ್ತಮುತ್ತಲಿನ ಜನ ತಾವು ಅಸ್ಪೃಶ್ಯರು ಎಂದು ಅವನ ಬಳಿ ಸುಳಿಯುವುದಿಲ್ಲ. ಅಲ್ಲಿಗೆ ಬಂದ ರಾಜಶೇಖರ ನೀರು ಕುಡಿಸಿ ಅವರಿಗೆ ತಿಳಿಸಿ ಹೇಳುತ್ತಾನೆ. ಆದರೂ ಅಲ್ಲಿಯ ಜನರು ಆತನ ಮಾತಿಗೆ ಒಪ್ಪದೇ ಅಲ್ಲಿಂದ ಹೊರಟು ಹೋಗುತ್ತಾರೆ. ಪರಂಪರೆಯ ಅವಗುಣವನ್ನು ದಮನಿತರ ಮೂಲಕ ಕಾದಂಬರಿ ಚಿತ್ರಿಸಿದೆ. ಪರಂಪರೆಯ ಅಮಾನವೀಯ ನೆಲೆಗೆ ಮೂಲ ಕಾರಣವಾದ ಸಮಾಜದಲ್ಲಿ ಯಜಮಾನಿಕೆ ಸ್ಥಾಪಿಸಿದ್ದ ಮೇಲ್ಜಾತಿಯನ್ನು ಅತ್ಯಂತ ಜಾಣತನದಿಂದ ಮರೆಮಾಚಿರುವುದು ಗಮನಾರ್ಹವಾಗಿದೆ.

ಹಾದಿಯಲ್ಲಿ ಭೇಟಿಯಾಗುವ ಮಠಾಧಿಪತಿಯ ವಂಚನೆಯಿಂದ ರಾಜಶೇಖರನಿಗೆ ಅವರ ಬಗ್ಗೆ ಇದ್ದ ಗೌರವ ಬರಿದಾಗುತ್ತದೆ. ಯಾತ್ರೆ ಮಧ್ಯದಲ್ಲಿಯೆ ದರೋಡೆಕೋರರಿಂದ ರುಕ್ಮಿಣಿ ಕಳೆದುಹೋಗುತ್ತಾಳೆ. ರುಕ್ಮಿಣಿ ಪುರುಷವೇಷದಲ್ಲಿ ಕಷ್ಟಗಳನ್ನು ಎದುರಿಸುತ್ತಾಳೆ. ಕೊನೆಯಲ್ಲಿ ಅವಳು ತಂದೆಯನ್ನು ಸೇರುತ್ತಾಳೆ. ಸತ್ತು ಹೋದನೆಂದು ತಿಳಿದ ಅವಳ ಗಂಡನೂ ಅವಳೊಂದಿಗೆ ಕೂಡಿಕೊಳ್ಳುತ್ತಾನೆ. ರಾಜಶೇಖರ ಸಮಾಜದ ಆಚಾರಗಳನ್ನು ಬದಲಿಸುವ ಪ್ರಯತ್ನಮಾಡಿ ವಿಫಲನಾಗುತ್ತಾನೆ. ಅದೇ ಕೊರಗಿನಲ್ಲಿ ಅಸು ನೀಗುತ್ತಾನೆ. ರುಕ್ಮಿಣಿ ತನ್ನ ಗಂಡನೊಂದಿಗೆ ತಂದೆಯಿಲ್ಲದ ಕೊರಗಿನಿಂದ ಬಾಳುವೆ ನಡೆಸುತ್ತಾಳೆ. ಇದು ಸುಮಾರು ಎರಡು ಶತಮಾನಗಳ ಹಿಂದೆ ನಡೆದ ಕತೆಯಂತೆ ಕಂಡರೂ ಸಮಕಾಲೀನ ಸಮಾಜದ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆಯಲಾಗಿದೆ. ಸಾಂಪ್ರದಾಯಿಕ ಜೀವನದಲ್ಲಿ ಬೇರುಬಿಟ್ಟಿರುವ ಕಪಟತನದ ಚಿತ್ರಣವನ್ನು ಇದು ಕಟ್ಟಿಕೊಡುತ್ತದೆ.

ರಾಜಶೇಖರ ಚರಿತ್ರೆಯ ಕುರಿತು ಪಿ. ಸಂಜೀವಮ್ಮ ಅವರ ಅಭಿಪ್ರಾಯವನ್ನು ಉಲ್ಲೇಖಿಸಿದ ಶಾಸ್ತ್ರೀಯವರು –ಕಾದಂಬರಿಯಲ್ಲಿ ಸನ್ನಿವೇಶಗಳಿಗೆ ತಕ್ಕಂತೆ ಬಹಳಷ್ಟು ನಂಬಿಕೆಗಳನ್ನು ವಿವರಿಸಿ ವಿಮರ್ಶಿಸಲಾಗಿದೆ. ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಖಂಡಿಸಲಾಗಿದೆ. ಜಾತಿ–ಮತಗಳ ಹೆಸರಿನಲ್ಲಿ

ಆಚರಿಸುವ ಅರ್ಥವಿಲ್ಲದ ದುರಾಚಾರಗಳನ್ನು, ಮೂಢನಂಬಿಕೆಗಳನ್ನು, ಭಕ್ತಿಯ ಡಾಂಭಿಕತೆಯನ್ನು, ವಿಗ್ರಹಾರಾಧನೆಯನ್ನು ವಿಮರ್ಶಿಸುತ್ತದೆ. ಹಳ್ಳಿ ಹಾಗೂ ನಗರದ ಜನರಲ್ಲಿಯ ಮನಸ್ಥಿತಿಯಲ್ಲಿರುವ ವ್ಯತ್ಯಾಸವನ್ನು, ಹಣದ ಪ್ರಾಧಾನ್ಯತೆಯನ್ನು ವ್ಯಾಖ್ಯಾನಿಸಿದೆ. ಸ್ತ್ರೀಯರ ಅವಿದ್ಯೆ, ಅಜ್ಞಾನದಿಂದ ಸಂಭವಿಸುವ ಸಂಕಷ್ಟಗಳನ್ನು, ಸ್ತ್ರೀಯರು ಶಿಕ್ಷಣದಿಂದ ಪಡೆಯುವ ಪ್ರಯೋಜನಗಳನ್ನು ಉದಾಹರಣೆ ಸಹಿತ ವಿವರಿಸಿದೆ (ದ್ವಾನಾ. ಶಾಸ್ತ್ರಿ :೬೪೦).

ರಾಜರತ್ನಮು

ಚಿಲಕಮರ್ತಿಯವರ ರಾಜರತ್ನಮು ಕಾದಂಬರಿ ವರದಕ್ಷಿಣೆಯ ಸಮಸ್ಯೆಯನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿದೆ. ಚಿಲಕಮರ್ತಿಯವರು ಕಾದಂಬರಿಕಾರರಾಗಿ ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಅತ್ಯುನ್ನತವಾದ ಸ್ಥಾನವನ್ನು ಸಂಪಾದಿಸಿಕೊಂಡಿದ್ದಾರೆ. ಅತ್ಯಧಿಕ ಸಂಖೆಯಲ್ಲಿ ಕಾದಂಬರಿಗಳನ್ನು ರಚಿಸಿ 'ಆಂಧ್ರ ಸ್ಕಾಟ್' ಎಂಬ ಬಿರುದು ಪಡೆದಿದ್ದಾರೆ. ವೀರೇಶಲಿಂಗಂ ಅವರ ರಾಜಶೇಖರ ಚರಿತ್ರೆಯ ಸ್ಫೂರ್ತಿಯಿಂದಲೆ ಚಿಲಕಮರ್ತಿಯವರು ಕಾದಂಬರಿ ರಚಿಸಲು ಪ್ರಾರಂಭಿಸಿದರು.

ಚಿಲಕಮರ್ತಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಅಂಶಗಳು ಸ್ತ್ರೀ ಪ್ರಧಾನ ಕಾಳಜಿಯ ಹಿನ್ನೆಲೆಯಲ್ಲಿ ಕಾಣುತ್ತವೆ. ಚಿಲಕಮರ್ತಿಯವರು ಪಾಶ್ಚಾತ್ಯ ಸಾಹಿತ್ಯದಿಂದ ಹೆಚ್ಚು ಪ್ರಭಾವಿತರಾಗಿದ್ದರು. ಅವರು ತಮ್ಮ ತೆಲುಗು ನಾಡಿನ ಸ್ಥಿತಿಗತಿಗಳಿಗೆ ಅನುಕೂಲವಾಗುವಂತೆ ಕಾದಂಬರಿಗಳನ್ನು ರಚಿಸುತ್ತಿದ್ದರು. ಚಿಲಕಮರ್ತಿಯವರ ಕಾದಂಬರಿಗಳಲ್ಲಿ ಗ್ರಾಮೀಣ ಶಾಲೆಗಳ ಸ್ಥಿತಿಗತಿಗಳ ಬಗೆಗಿನ ಚಿತ್ರಣಗಳಿವೆ. ಆದರೆ ಅವರ ಲಕ್ಷ್ಯ ಮಾತ್ರ ಅಂದಿನ ಶಿಕ್ಷಣ ವ್ಯವಸ್ಥೆಯನ್ನು ಕೇಂದ್ರೀಕರಿಸಿದಂತಿದೆ.

ಚಿಲಕಮರ್ತಿಯವರ ಅನೇಕ ಕಾದಂಬರಿಗಳಲ್ಲಿ ಸ್ತ್ರೀ ಶಿಕ್ಷಣ, ಬಾಲ್ಯ ವಿವಾಹ, ಅದರ ಫಲಿತವಾದ ವಿಧವಾ ಸಮಸ್ಯೆ, ಅವರ ಕಷ್ಟಕರವಾದ ಜೀವನ, ಪತಿಯರು ವೇಶ್ಯೆಯರ ಸಂಗದಲ್ಲಿ ಪತ್ನಿಯರನ್ನು ನಿರಾಕರಿಸುವುದು-ಹೀಗೆ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸಿದ್ದಾರೆ. ಇವರು ರಚಿಸಿದ ಮುಖ್ಯ ಕಾದಂಬರಿಗಳಲ್ಲಿ ರಾಮಚಂದ್ರ ವಿಜಯಮು ಅತ್ಯಂತ ಮಹತ್ವಪೂರ್ಣವಾದುದು. ಹಾಗೆಯೇ ಹೇಮಲತ, ರಾಜರತ್ನಮು, ಗಣಪತಿ, ಅಹಲ್ಯಾಬಾಯಿ, ಕಾದಂಬರಿಗಳೂ ಅಷ್ಟೇ ಪ್ರಮುಖವಾಗಿವೆ.

ಸಂಪ್ರದಾಯಗಳ ಜಡತ್ವದಿಂದ ಹೊರಬರುವ ಪ್ರಯತ್ನದಲ್ಲಿ ಜನರು ಸ್ವಾತಂತ್ರ್ಯ, ಸಮಾನತೆ, ಸೋದರತೆ ಎಂಬ ಆಧುನಿಕ ಚಿಂತನೆಗಳನ್ನು ಬೆಳೆಸಿಕೊಂಡು ಹೊಸ ಆಚಾರ ವಿಚಾರಗಳನ್ನು ತಮ್ಮದಾಗಿಸಿಕೊಂಡರು. ಇಂಗ್ಲಿಷ್ ಶಿಕ್ಷಣ ಪಡೆಯಲು ವಿದೇಶ ಪ್ರಯಾಣ ಬೆಳೆಸತೊಡಗಿದರು. ನಂತರದಲ್ಲಿ ಬ್ರಿಟಿಷ್ ಆಡಳಿತದಲ್ಲಿ ಉನ್ನತ ಪದವಿಗಳನ್ನು ಪಡೆಯತೊಡಗಿದರು. ಇದನ್ನು ಸಾಧಿಸಲು ಹಣದ ಅವಶ್ಯಕತೆಯಿತ್ತು. ಈ ಅಗತ್ಯವನ್ನು ವರದಕ್ಷಿಣೆ ಮೂಲಕ ಪೂರೈಸಿಕೊಳ್ಳುವ

ಪ್ರಯತ್ನಗಳ ಹಿನ್ನೆಲೆಯಲ್ಲಿ ವರದಕ್ಷಿಣೆ ಸಮಸ್ಯೆ ಪ್ರಾರಂಭವಾಯಿತು. ಇಂಗ್ಲಿಷ್ ಶಿಕ್ಷಣದ ಮಹತ್ವದೊಂದಿಗೆ ವರದಕ್ಷಿಣೆಯ ಸಮಸ್ಯೆ ಬೆಳೆಯತೊಡಗಿದುದನ್ನು ಚಿಲಕಮರ್ತಿಯವರ ರಾಜರತ್ನಮು ಕಾದಂಬರಿ ಚಿತ್ರಿಸುತ್ತದೆ.

ರಾಜರತ್ನಂ ಗುಣವಂತೆ ಹಾಗೂ ಶಿಕ್ಷಿತ ಹುಡುಗಿ. ರಾಮಲಿಂಗಸ್ವಾಮಿ ಎಂಬ ಗುಮಾಸ್ತನ ಮಗಳು. ಅವಳ ಅಣ್ಣ ಕೇಶವರಾಜು ಉನ್ನತ ವ್ಯಾಸಂಗಕ್ಕಾಗಿ ರಾಜಮಹೇಂದ್ರಕ್ಕೆ ಹೋಗಿರುತ್ತಾನೆ. ರಾಜರತ್ನಳಿಗೆ ಒಂಬತ್ತು ವರ್ಷ ತುಂಬುತ್ತಲೆ ಅವಳ ತಂದೆ ತನ್ನ ಮಗಳಿಗೆ ಬಾಲ್ಯ ವಿವಾಹ ಮಾಡಲು ಇಂಗ್ಲಿಷ್ ಶಿಕ್ಷಣ ಪಡೆದ ವರನಿಗಾಗಿ ಹುಡುಕಾಟ ಆರಂಭಿಸುತ್ತಾನೆ. ಕೇಶವರಾಜುವಿನೊಂದಿಗೆ ಆಗಾಗ ಮನೆಗೆ ಬಂದು ಹೋಗುತ್ತಿದ್ದ ಅವನ ಗೆಳೆಯ ಜಗನ್ನಾಥರಾವು ರಾಜರತ್ನಂಳ ಗುಣಗಳಿಗೆ ಮಾರುಹೋಗಿ ಅವಳೊಂದಿಗೆ ವಿವಾಹವಾಗುವ ಬಯಕೆ ವ್ಯಕ್ತಪಡಿಸುತ್ತಾನೆ. ಅವನು ಇಂಗ್ಲಿಷ್ ಶಿಕ್ಷಣ ಪಡೆಯುತ್ತಿದ್ದುದರಿಂದ ರಾಜರತ್ನಂಳ ತಂದೆಗೆ ಅಭ್ಯಂತರವಿರಲಿಲ್ಲ. ಆದರೆ ಜಗನ್ನಾಥರಾವ್‌ನ ತಂದೆ ಸಾಕಷ್ಟು ವರದಕ್ಷಿಣೆ ಕೇಳುತ್ತಾನೆ. ರಾಜರತ್ನಂಳ ತಂದೆಗೆ ಅಷ್ಟು ವರದಕ್ಷಿಣೆ ಕೊಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಜಗನ್ನಾಥರಾವ್‌ನ ತಂದೆ ಸಂಬಂಧ ತಿರಸ್ಕರಿಸಲು ಮಗನಿಗೆ ಹೇಳುತ್ತಾನೆ. ಆದರೆ ಅವನು "ವರದಕ್ಷಿಣೆಗಿಂತ ಸಂಪ್ರದಾಯ ಮುಖ್ಯವಾದುದು. ಹುಡುಗಿ ಸರ್ವಗುಣ ಸಂಪನ್ನಳಾಗಿದ್ದಾಳೆ, ನನಗೆ ಆ ಸಂಬಂಧವೇ ಬೇಕು" ಎಂದು ಹಠ ಹಿಡಿಯುತ್ತಾನೆ. ಸಾಕಷ್ಟು ವರದಕ್ಷಿಣೆ ಕೊಡಲು ಮುಂದೆ ಬಂದ ಸರಕಾರದ ಉನ್ನತ ಅಧಿಕಾರಿಗಳ ಸಂಬಂಧವನ್ನು ತಿರಸ್ಕರಿಸಿದ ಜಗನ್ನಾಥರಾಯ ರಾಜರತ್ನಂಳಿಗಾಗಿ ತನ್ನ ತಂದೆಯಿಂದ ದೂರವಾಗುತ್ತಾನೆ.

ರಾಜರತ್ನಂಳ ತಂದೆ ವರದಕ್ಷಿಣೆ ಕೊಟ್ಟರೆ ತನ್ನ ತಂದೆ ತಮ್ಮ ಮದುವೆಗೆ ಒಪ್ಪಿಗೆ ನೀಡುವನೆಂದು ಜಗನ್ನಾಥ ಅರಿತುಕೊಳ್ಳುತ್ತಾನೆ. ತಾನೇ ರಾಜರತ್ನಂಳ ತಂದೆಗೆ ನಿಗದಿತ ಅವಧಿಯ ಮೇಲೆ ಸಾಲ ಕೊಡಿಸಿ ಅವಳನ್ನು ಮದುವೆಯಾಗುತ್ತಾನೆ. ಆದರೆ ಕೆಲವೇ ದಿನಗಳಲ್ಲಿ ಸಾಲ ಕೊಟ್ಟವನು ಮರಣಹೊಂದುತ್ತಾನೆ. ಅವನ ಬಂಧುಗಳು ಸಾಲ ಪಡೆದವರ ವಿಚಾರಣೆ ಮಾಡಲು ಜಗನ್ನಾಥನ ಮನೆಗೂ ಬಂದು ಸಾಲ ವಸೂಲಿ ಮಾಡತೊಡಗುತ್ತಾರೆ. ಮಧ್ಯವರ್ತಿಯಾಗಿ ನಿಂತು ಮದುವೆಗಾಗಿ ಸಾಲ ಕೊಡಿಸಿದ್ದಲ್ಲದೆ ಮತ್ತೆ ತನ್ನ ಮಗನೇ ಆ ಸಾಲವನ್ನು ಮರಳಿ ಕಟ್ಟಬೇಕಾದ ವಿಷಯ ತಿಳಿದ ತಂದೆ ರಾಜರತ್ನಂಳನ್ನು ತವರಿಗೆ ಕಳುಹಿಸಿ ಜಗನ್ನಾಥನಿಗೆ ಬೇರೆ ವಿವಾಹ ಮಾಡಲು ಮುಂದಾಗುತ್ತಾನೆ. ರಾಜರತ್ನಂಳಿಗೆ ಮಾಟ ಮಂತ್ರ ಮಾಡಿಸಿ ಅವಳನ್ನು ಸಾಯಿಸಲು ಅನೇಕ ಬಾರಿ ವಿಫಲ ಪ್ರಯತ್ನ ಮಾಡುತ್ತಾನೆ; ಕೊನೆಗೆ ತಾಯಿಯ ಮೇಲೆ ಆಣೆ ಮಾಡಿಸಿ ಎರಡನೆಯ ಮದುವೆಗೆ ಜಗನ್ನಾಥನನ್ನು ಒಪ್ಪಿಸುತ್ತಾನೆ. ಸಾಕಷ್ಟು ವರದಕ್ಷಿಣೆ ಕೊಡುವ ಸಂಬಂಧವನ್ನು ಬೆಳೆಸುವಂತೆ ಮಧ್ಯವರ್ತಿಗಳಿಗೆ ಹೇಳುತ್ತಾನೆ. ಮಧ್ಯವರ್ತಿಗಳು ಮೋಸದಿಂದ ನಿಜಾಂಶವನ್ನು

ಬಚ್ಚಿಟ್ಟು ಶ್ರೀಮಂತ ಸಂಬಂಧವನ್ನು ಹುಡುಕುತ್ತಾರೆ. ಹಣದಾಸೆಗಾಗಿ ಸ್ತ್ರೀಯರ ಬಾಳನ್ನು ಹಾಳು ಮಾಡುವ ಮಧ್ಯವರ್ತಿಗಳು ಈ ಕಾದಂಬರಿಯಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಾರೆ. ಕೊನೆಗೆ ವಾಸ್ತವ ಸಂಗತಿ ತಿಳಿದ ರಾಜರತ್ನಂ ಗಂಡನ ಮನೆಗೆ ಬರುತ್ತಾಳೆ. ಇದರಿಂದ ಕುಪಿತಗೊಂಡ ಮಾವ ಅವಳಿಗೆ ಸಾಕಷ್ಟು ಹಿಂಸೆ ನೀಡುತ್ತಾನೆ. ನವನಾಗರಿಕಳಾದ ರಾಜರತ್ನಂ ಅವೆಲ್ಲವನ್ನು ಸಹಿಸಿಕೊಳ್ಳುತ್ತಾಳೆ. ಕೊನೆಗೆ ಅವಳನ್ನು ಸಾಯಿಸಲು ಸಿದ್ಧಪಡಿಸಿದ ವಿಷ ಬೆರೆಸಿದ ಮಜ್ಜಿಗೆಯನ್ನು ಮಧ್ಯವರ್ತಿಗಳು ಕುಡಿದು ಸಾವನ್ನಪ್ಪುತ್ತಾರೆ.

ಜಗನ್ನಾಥನ ತಂದೆಗೆ ತನ್ನ ತಪ್ಪಿನ ಅರಿವಾಗುತ್ತದೆ. ರಾಜರತ್ನಂಳ ಒಳ್ಳೆಯ ನಡತೆ, ಗುಣ ಅವನ ಮನಸ್ಸನ್ನು ಬದಲಾಯಿಸುತ್ತವೆ. ತಾನು ಮಾಡಿದ ಹೀನಕೃತ್ಯಗಳಿಗಾಗಿ ಅಸಹ್ಯ ಪಟ್ಟುಕೊಳ್ಳುತ್ತಾನೆ, ಪಶ್ಚಾತ್ತಾಪ ಪಡುತ್ತಾನೆ, ಮಗ ಸೊಸೆಯನ್ನು ಸ್ವೀಕರಿಸುತ್ತಾನೆ.

ಕಥಾ ಹಂದರದಲ್ಲಿ ಬಾಲ್ಯ ವಿವಾಹ ಪ್ರಶ್ನಿತವಾಗದೆ ವರದಕ್ಷಿಣೆ ಸಮಸ್ಯೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಹಾಗೆಯೇ ಸಮಾಜದಲ್ಲಿನ ವಿವಾಹ ಸಂಬಂಧ ಬೆಳೆಸುವ ಮಧ್ಯವರ್ತಿಗಳು ತಮ್ಮ ವಂಚನೆಯ ಸ್ವಭಾವದಿಂದಾಗಿ ವರದಕ್ಷಿಣೆಯ ಉದ್ದೇಶಕ್ಕೆ ಎಂತಹ ಹೀನಕೃತ್ಯಗಳನ್ನೂ ಮಾಡಲು ಹೇಸದ ಚಿತ್ರಣ ನೀಡುತ್ತದೆ. ಈ ಮೂಲಕ ವರದಕ್ಷಿಣೆ ಸಮಸ್ಯೆಗೂ ಪುರುಷಪರ ಸಮಾಜಕ್ಕೂ ಇರುವ ಮೂಲನಂಟನ್ನು ಮರೆಮಾಚುತ್ತದೆ.

ಬ್ರಿಟಿಷರ ಆಳ್ವಿಕೆಯಲ್ಲಿ ಇಂಗ್ಲಿಷ್ ಶಿಕ್ಷಣಕ್ಕೆ ಉನ್ನತ ಸ್ಥಾನವಿತ್ತು. ಇಂಗ್ಲಿಷ್ ಶಿಕ್ಷಣ ಪಡೆದ ಭಾರತೀಯರಿಗೆ ಉನ್ನತ ಅಧಿಕಾರ ಸ್ಥಾನಗಳಲ್ಲಿ ನೇಮಿಸಿಕೊಳ್ಳುವ ಅವಕಾಶ ನೀಡಿದ್ದರು. ಅದಕ್ಕಾಗಿ ಅನೇಕರು ತಮ್ಮ ಹೆಣ್ಣು ಮಕ್ಕಳನ್ನು ಇಂಗ್ಲಿಷ್ ಶಿಕ್ಷಣಪಡೆದವರಿಗೆ ಕೊಡಲು ಬಯಸುತ್ತಿದ್ದರು ಎಂಬ ಅಂಶಕ್ಕೂ ಸಾಕಷ್ಟು ಮಹತ್ವ ನೀಡಿದೆ.

ಚಿಲಕಮರ್ತಿಯವರ ರಾಜರತ್ನಂ ಬಾಲ್ಯ ವಿವಾಹ, ವರದಕ್ಷಿಣೆಯ ಸಮಸ್ಯೆಗಳಿಗೆ ಮಹತ್ವ ಕೊಡುವ ಕಾದಂಬರಿಯಾಗಿದ್ದರೂ ಇಂಗ್ಲಿಷ್ ಶಿಕ್ಷಣ ಭಾರತೀಯ ಸ್ತ್ರೀಯರ ಸಮಸ್ಯೆ ಹೆಚ್ಚುವಲ್ಲಿ ವಹಿಸಿದ ಮಹತ್ವದ ಪಾತ್ರವನ್ನು ಸಾರುವ ಕಾದಂಬರಿಯೂ ಆಗಿದೆ.

ಯುವಕರು ಮನೆಯವರ ಬಲವಂತಕ್ಕೆ ಮದುವೆಗೆ ಒಪ್ಪಿಕೊಳ್ಳದೆ ವರದಕ್ಷಿಣೆಯ ಸಮಸ್ಯೆಯಿಂದ ಮಹಿಳೆಯರನ್ನು ಹೊರತರಬೇಕು. ತಂದೆ ತಾಯಿಗಳ ಮನವೊಲಿಸಿ ಹೆಣ್ಣು ಮಕ್ಕಳನ್ನು ಮದುವೆಯಾಗಲು ಮುಂದೆ ಬರಬೇಕು. ಮೂಢ ನಂಬಿಕೆ, ಆಚಾರ ವಿಚಾರಗಳನ್ನು ಬದಿಗೊತ್ತಿ ದೇಶದ ಅಭಿವೃದ್ಧಿಗಾಗಿ ಮುಂದುವರಿಯಬೇಕು ಎಂದು ಚಿಲಕಮರ್ತಿಯವರು ಕಾದಂಬರಿಯ ಕೊನೆಯಲ್ಲಿ ಯುವಕರಿಗೆ ನೀತಿಬೋಧೆ ಮಾಡಿದ್ದಾರೆ. ತಮ್ಮ ಮೊಟ್ಟ ಮೊದಲ ಕಾದಂಬರಿ **ರಾಮಚಂದ್ರ ವಿಜಯಮು**ನಲ್ಲಿಯೂ

ಅವರು ಶಿಕ್ಷಣದ ಮಹತ್ವವನ್ನು ತಿಳಿಸುತ್ತಲೇ ಮಧ್ಯವರ್ತಿಗಳ ವಂಚನೆಯನ್ನು ಬಯಲಿಗೆಳೆಯುವುದನ್ನು ಕಾಣಬಹುದು.

ಅಹಲ್ಯಾಬಾಯಿ (೧೮೯೭)

ಚಿಲಕಮರ್ತಿಯವರ ಚಾರಿತ್ರಿಕ ಕಾದಂಬರಿ ಅಹಲ್ಯಾಬಾಯಿಯನ್ನು ಮೆಡೋಸ್ ಟೆಯಿಲರ್‌ನ 'ಸುಲ್ತಾನ್‌ತಾರ ಚಾಂದ್‌ಬೀಬಿ' ಇಂಗ್ಲಿಷ್ ಕಾದಂಬರಿಯ ಪ್ರೇರಣೆಯಿಂದ ಬರೆಯಲಾಗಿದೆ. ಅಹಲ್ಯಾಬಾಯಿ ಕಾದಂಬರಿ ಮುಖ್ಯವಾಗಿ ಔರಂಗಾಜೇಬನ ಆಡಳಿತದ ಚಾರಿತ್ರಿಕ ಹಿನ್ನೆಲೆಯಲ್ಲಿ ನಡೆದ ಒಂದು ಕಾಲ್ಪನಿಕ ಕತೆಯಾದರೂ ವಾಸ್ತವಕ್ಕೆ ಹತ್ತಿರವಿದ್ದಂತಿದೆ.

ಅಹಲ್ಯಾಬಾಯಿಯ ಬಾಲ್ಯ ವಿವಾಹ ನಡೆದ ಕೆಲವೇ ದಿನಗಳಲ್ಲಿ ಮುದಿರಾಜನನ್ನು ಕಳೆದುಕೊಂಡು ವಿಧವೆಯಾಗಿ ರಾಜ್ಯದ ಜವಾಬ್ದಾರಿಯನ್ನು ನಿರ್ವಹಿಸುವ ಕತೆ ಇಲ್ಲಿದೆ. ವಿಧವೆಯ ಆಡಳಿತವನ್ನು ಕೆಲವರು ಪ್ರೋತ್ಸಾಹಿಸಿದರೆ, ಮತ್ತೆ ಕೆಲವರು ತಿರಸ್ಕರಿಸುತ್ತಾರೆ. ಅಹಲ್ಯಾಬಾಯಿಯ ಸೈನಿಕರಾದ ಶ್ಯಾಮಸುಂದರದತ್ತ ಹಾಗೂ ರಾಧಾಕಾಂತಾರಾವು ಅವಳ ಆಡಳಿತ ಕ್ರಮವನ್ನು ಪ್ರೋತ್ಸಾಹಿಸುವ ಮೂಲಕ ಅವಳಲ್ಲಿ ಧೈರ್ಯ, ಸಾಹಸ, ಉತ್ಸಾಹಗಳನ್ನು ತುಂಬಿ ಅವಳೊಂದಿಗೆ ಸಹಕರಿಸುತ್ತಾರೆ. ಸೇನಾಧಿಪತಿಗಳಾದ ಜಸ್ವಂತ್‌ಸಿಂಗ್ ಹಾಗೂ ದೌಲತ್‌ರಾವ್ ಅಹಲ್ಯಾಬಾಯಿಯ ರಾಜ್ಯಾಡಳಿತ ಕ್ರಮವನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಾರೆ. ಒಬ್ಬ ಹೆಣ್ಣಿನ ಕೈ ಕೆಳಗೆ ಗುಲಾಮರಾಗಿ ಬಾಳುವ ಆಸೆ ತಮಗಿಲ್ಲವೆಂದು ಆಲೋಚಿಸಿ ಪುರುಷ ಅಹಂಕಾರವನ್ನು ಮೆರೆಯುತ್ತಾರೆ. ರಾಣಿಯಾದ ಅಹಲ್ಯಾಬಾಯಿಯನ್ನು ಕೇವಲ ಒಂದು ಹೆಣ್ಣೆಂದು ಕೀಳಾಗಿ ಕಂಡು ಹೆಣ್ಣಿನ ಅಧಿಕಾರವನ್ನು ಧಿಕ್ಕರಿಸುತ್ತಾರೆ. ಅಲ್ಲದೆ ಅವಳನ್ನು ಹೇಗಾದರೂ ಮಾಡಿ ಸಿಂಹಾಸನದಿಂದ ಕೆಳಗಿಳಿಸಿ ರಾಜ್ಯ ಕಸಿದುಕೊಳ್ಳಲು ಹೊಂಚು ಹಾಕುತ್ತಾರೆ.

ಅಹಲ್ಯಾಬಾಯಿಯ ಆಡಳಿತದಲ್ಲಿ ರಾಜ್ಯದ ಜನ ಸುಖ ಶಾಂತಿ ನೆಮ್ಮದಿಯಿಂದ ಬಾಳುತ್ತಿರುತ್ತಾರೆ. ಇದಕ್ಕೆ ಶ್ಯಾಮಸುಂದರದತ್ತನ ನೆರವು ಇರುತ್ತದೆ. ಆದರೆ ಒಮ್ಮೆ ಜಸ್ವಂತ್‌ಸಿಂಗ್ ಹಾಗೂ ದೌಲತ್‌ರಾವ್ ಇಬ್ಬರೂ ಶ್ಯಾಮಸುಂದರ ದತ್ತನನ್ನು ರಾಣಿಯ ದೃಷ್ಟಿಯಲ್ಲಿ ದುಷ್ಟನನ್ನಾಗಿ ಮಾಡಬೇಕೆಂಬ ಉಪಾಯ ಹೂಡುತ್ತಾರೆ. ಶತ್ರು ರಾಜರನ್ನು ತಮ್ಮ ರಾಜ್ಯದ ಮೇಲೆ ದಾಳಿ ಮಾಡುವಂತೆ ಎತ್ತಿಕಟ್ಟಿ, ಅದಕ್ಕೆ ಶ್ಯಾಮಸುಂದರ ದತ್ತನೇ ಕಾರಣ ಎಂದು ರಾಣಿಯ ಬಳಿ ದೂರುತ್ತಾರೆ. ಅತ್ಯಂತ ನಂಬಿಕಸ್ಥನಾದ ಶ್ಯಾಮಸುಂದರ ದತ್ತನನ್ನು ರಾಣಿ ಅವರಿಬ್ಬರ ಸುಳ್ಳು ಆರೋಪಗಳಿಂದಾಗಿ ಸೆರೆಮನೆಗೆ ಹಾಕಿಸುತ್ತಾಳೆ. ಸೆರೆಮನೆಯಲ್ಲಿರುವ ಶ್ಯಾಮಸುಂದರ ದತ್ತನಿಗೆ ಆಸೆ ಆಮಿಷಗಳನ್ನು ಒಡ್ಡುವ ದೌಲತ್‌ರಾವ್ ಅವನನ್ನು ರಾಣಿಯ ವಿರುದ್ಧ ದಂಗೆ ಏಳುವಂತೆ ಪ್ರೇರೇಪಿಸುತ್ತಾನೆ. ಆದರೆ ಯಾವುದೇ ಆಸೆಗಳಿಗೆ ಬಲಿಯಾಗದ ಶ್ಯಾಮಸುಂದರ ದತ್ತ ರಾಣಿಯ ಬೆನ್ನುಗಾವಲಾಗಿ ನಿಲ್ಲುತ್ತಾನೆ.

ಕಾದಂಬರಿಯ ಕೊನೆಯಲ್ಲಿ ರಾಣಿಗೆ ದೌಲತ್‌ರಾವ್ ಹಾಗೂ ಜಸ್ವಂತ್‌ಸಿಂಗ್ ಅವರ ವಂಚನೆ ಗೊತ್ತಾಗುತ್ತದೆ. ನಿರಪರಾಧಿಯಾದ ಶ್ಯಾಮಸುಂದರ ದತ್ತನ ಕ್ಷಮೆಯಾಚಿಸಿ ಅವನನ್ನು ರಾಣಿ ಬಿಡುಗಡೆ ಮಾಡುತ್ತಾಳೆ ಹಾಗೂ ತನ್ನ ಮಗಳ ಗೆಳತಿಯಾದ ಕಮಲಳೊಂದಿಗೆ ಅವನ ಮದುವೆ ಮಾಡಿಸುತ್ತಾಳೆ.

ಕಮಲಾ ಕತೆಯ ಆರಂಭದಲ್ಲಿಯೇ ಬಾಲ್ಯವಿವಾಹವಾಗಿ, ನಂತರ ವಿಧವೆಯಾದ ಚಿತ್ರಣವಿದೆ. ಆದರೆ ಕೊನೆಯಲ್ಲಿ ಆಕೆ ಬಾಲ್ಯವಿವಾಹವೂ ಆಗಿರದ ವಿಧವೆಯೂ ಆಗಿರದ ರಹಸ್ಯ ಬಯಲಾಗುತ್ತದೆ. ಸಮಾಜದ ಅನ್ಯ ಪುರುಷರ ಕಾಮುಕ ದೃಷ್ಟಿಯನ್ನು ತಪ್ಪಿಸಿಕೊಳ್ಳಲು ಕಮಲಾ ವಿವಾಹಿತಳಂತೆ, ವಿಧವೆಯಂತೆ ನಾಟಕವಾಡಿರುತ್ತಾಳೆ.

ಕಮಲಾ ತನ್ನ ಚಿಕ್ಕ ವಯಸ್ಸಿನಲ್ಲೆ ರಾಜನೊಬ್ಬನ ವಶವಾಗಿರುತ್ತಾಳೆ. ಅದಾದ ಕೆಲವೇ ದಿನಗಳಲ್ಲಿ ಅವನು ಮರಣ ಹೊಂದುತ್ತಾನೆ. ನಂತರವೂ ಬಹಳ ಜನ ಅವಳಿಗೆ ಮನಸೋಲುತ್ತಾರೆ. ಅಹಲ್ಯಾಬಾಯಿಯ ಮೈದುನನಾದ ದೌಲತ್‌ರಾವ್ ಆಕೆ ವಿಧವೆಯೆಂದು ತಿಳಿದಿದ್ದರೂ ಕನ್ಯೆಯೆಂದು ಹೇಳಿಕೊಂಡು ಅವಳನ್ನೆ ಮದುವೆ ಮಾಡಿಕೊಳ್ಳಲು ಉಪಾಯ ಮಾಡುತ್ತಾನೆ. ವಿಧವಾ ವಿವಾಹ ವಿರೋಧಿಸುವ ರಾಣಿ ಅಹಲ್ಯಾಬಾಯಿ ಎದುರು ತನ್ನ ಅಣ್ಣ ಕಮಲೆಯನ್ನು ವಿವಾಹ ಮಾಡಿಕೊಳ್ಳಲಿಲ್ಲವೆಂದು ಹೇಳುತ್ತಾನೆ. ಅವನ ಮಾತನ್ನು ನಂಬದ ಅಹಲ್ಯಾಬಾಯಿ ಒಬ್ಬ ವಿಧವೆಯೊಂದಿಗೆ ವಿವಾಹವಾಗಲು ತಾನು ಒಪ್ಪುವುದಿಲ್ಲವೆಂದು ಹೇಳುತ್ತಾಳೆ. ಇದರಿಂದ ಕೋಪಗೊಂಡ ದೌಲತ್‌ರಾವ್ ಅಹಲ್ಯಾಬಾಯಿಯನ್ನು ಕೊಲ್ಲಲು ಉಪಾಯಮಾಡುತ್ತಾನೆ.

ದೌಲತ್‌ರಾವ್‌ನ ಸೆರೆಯಾಳಾದ ಕಮಲೆ ಪುರುಷ ವೇಷಧರಿಸಿ ಅವನಿಂದ ಪಾರಾಗಲು ಅವನ ಸೈನ್ಯ ಸೇರಿಕೊಳ್ಳುತ್ತಾಳೆ. ನಂತರ ಆ ರಾಜ್ಯವನ್ನು ಬಿಟ್ಟು ಕಾಡು ಸೇರಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾಳೆ. ಸ್ತ್ರೀಯರ ಪ್ರಾಕೃತಿಕ ಸಮಸ್ಯೆಗಳಿಂದಾಗಿ ಅವಳ ಪುರುಷವೇಷ ಬಯಲಾಗುತ್ತದೆ. ನಂತರ ರಾಣಿ ಅಹಲ್ಯಾಬಾಯಿಯ ಮಗಳ ಸಹಚಾರಿಯಾಗಿ ಕೆಲಸ ಮಾಡುತ್ತಾಳೆ.

ಕಮಲೆ ಸತ್ತಿರುವುದಾಗಿ ದೌಲತ್‌ರಾವ್ ತಿಳಿದಿರುತ್ತಾನೆ. ಕಮಲೆಯ ಗತ ಜೀವನ ಅರಿತ ರಾಣಿ ಆಕೆಯ ಧೈರ್ಯ ಸಾಹಸವನ್ನು ಮೆಚ್ಚುತ್ತಾಳೆ. ದೌಲತ್‌ರಾವ್‌ಗೆ ಕಠಿಣ ಶಿಕ್ಷೆ ವಿಧಿಸಿ, ಕಮಲೆಯ ವಿವಾಹವನ್ನು ಏರ್ಪಡಿಸುತ್ತಾಳೆ. ಶತ್ರು ಸೈನ್ಯವನ್ನು ಸೋಲಿಸಿ ಅಹಲ್ಯಾಬಾಯಿ ತನ್ನ ಮಕ್ಕಳು ಹಾಗೂ ಪ್ರಜೆಗಳೊಂದಿಗೆ ನೆಮ್ಮದಿಯಿಂದ ರಾಜ್ಯಾಭಾರ ಮಾಡತೊಡಗುತ್ತಾಳೆ.

ಈ ಕಾದಂಬರಿಯಲ್ಲಿ ಹೆಣ್ಣು ವಿಧವೆಯಾಗಿದ್ದರೂ ಅಬಲೆಯಲ್ಲವೆಂದು ನಿರೂಪಿಸಿದೆ. ಹೆಣ್ಣಿನಲ್ಲಿರುವ ಚಾಕಚಕ್ಯತೆ, ಚಾಣಾಕ್ಷತನ, ಪುರುಷನ ಸಮಾನವಾಗಿ ನಿಂತು ಹೋರಾಡುವ ಧೈರ್ಯ ಸಾಹಸವನ್ನು ಚಿತ್ರಿಸಲಾಗಿದೆ. ಜೊತೆಗೆ ಹೆಣ್ಣನ್ನು ಅಬಲೆಯೆಂದು ತಿಳಿದು ಅವರನ್ನು

ವಂಚಿಸುವ ಸಮಾಜ ಘಾತುಕರು ತಮ್ಮ ಗುಲಾಮರಂತೆ ಕಾಣುತ್ತಾರೆ ಹಾಗೂ ಪುರುಷಾಧಿಕಾರದ ಅಹಂಕಾರದಲ್ಲಿ ಹೆಣ್ಣಿನ ರಾಜ್ಯಾಭಾರವನ್ನು ತಿರಸ್ಕರಿಸುವ ಹುಂಬರು ಆಗಿರುತ್ತಾರೆಂಬ ಚಿತ್ರಣವೂ ಈ ಕಾದಂಬರಿಯಲ್ಲಿದೆ. ಈ ಎಲ್ಲ ಅಂಶಗಳಿಂದಾಗಿಯೇ ಅಹಲ್ಯಾಬಾಯಿ ಕಾದಂಬರಿ ಐತಿಹಾಸಿಕ ಅಂಶಗಳಿಂದ ಕೂಡಿದ ಮಹತ್ವದ ಸಾಮಾಜಿಕ ಕೃತಿಯಾಗಿದೆ.

ಲಕ್ಷ್ಮೀಪ್ರಸಾದಂ (೧೯೨೩)

ವರದಕ್ಷಿಣೆ ಸಮಸ್ಯೆ ಹಾಗೂ ಇಂಗ್ಲಿಷ್ ಶಿಕ್ಷಣದ ಮಹತ್ವ ಸಾರುವ ಕಾದಂಬರಿ ಕೇತವರಪು ವೆಂಕಟಶಾಸ್ತ್ರೀ ಅವರ ಲಕ್ಷ್ಮೀಪ್ರಸಾದಂ. ಪಂಡಿತರಾಗಿದ್ದ ಕಾದಂಬರಿಕಾರರು ಸಾಮಾಜಿಕ ಕಾದಂಬರಿಗಳನ್ನು ಬರೆದುದು ವಿಶೇಷ. ಪಂಡಿತರಾದವರು ಹೆಚ್ಚಾಗಿ ದೇಶಭಾಷೆಗಳ ಮೇಲೆ ಆಸಕ್ತಿ ತೋರುವುದಿಲ್ಲ. ಒಂದು ವೇಳೆ ಆಸಕ್ತಿ ತೋರಿದರೂ ಪದ್ಯಗಳಲ್ಲಿ, ಕವನಗಳಲ್ಲಿ ಲಕ್ಷ್ಯಕೊಡುವರೇ ಹೊರತು ಗದ್ಯಕ್ಕಲ್ಲ. ಒಂದು ವೇಳೆ ಗದ್ಯಕ್ಕೆ ಲಕ್ಷ್ಯ ಕೊಟ್ಟರೂ ಸಂಸ್ಕೃತ ಗದ್ಯಗಳನ್ನೂ ವಚನಗಳನ್ನೂ ರಚಿಸುವಲ್ಲಿ ಆಸಕ್ತಿ ಹೊಂದಿರುವವರು ಹೆಚ್ಚು. ವಾಸ್ತವ ಸಮಾಜ ಕುರಿತು ವಿಡಂಬನೆ, ವಿರೋಧಗಳನ್ನು ರಚಿಸಲು ಪಂಡಿತರು ಹಿಂಜರಿಯುತ್ತಾರೆ. ಇಂತಹ ಸಂದರ್ಭದಲ್ಲಿ ವಾಸ್ತವಿಕತೆ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಸ್ವತಂತ್ರ ಕಾದಂಬರಿಗಳನ್ನು ರಚಿಸಿದ ಪಂಡಿತರಲ್ಲಿ ವೆಂಕಟಶಾಸ್ತ್ರಿ ಮೊದಲಿಗರೆನಿಸಿದ್ದಾರೆ.

ವೆಂಕಟಶಾಸ್ತ್ರೀಯವರ ಲಕ್ಷ್ಮೀಪ್ರಸಾದಂ ಕಾದಂಬರಿ ತೆಲುಗು ದೇಶದ ಆಚಾರ-ವಿಚಾರಗಳನ್ನು ಸಮಾಜ ಸುಧಾರಣೆಯ ದೃಷ್ಟಿಯಿಂದ ವಿಮರ್ಶಿಸಿದೆ. ಸಮಾಜದ ಅನಿಷ್ಟ ಪದ್ಧತಿಗಳಲ್ಲಿ ಒಂದಾದ ವರದಕ್ಷಿಣೆ ಸಮಸ್ಯೆಯನ್ನು ಚಿತ್ರಿಸುತ್ತಲೆ ಅದರಿಂದಾಗುವ ಅನಾಹುತಗಳನ್ನು ಪಾತ್ರಗಳ ಮೂಲಕ ಕಟ್ಟಿಕೊಟ್ಟಿದೆ. ವರದಕ್ಷಿಣೆಯನ್ನು ಸಮಾಜದ ಪಿಡುಗಾಗಿ ಕಂಡಿದೆ. ವಿದೇಶಕ್ಕೆ ಮಾರು ಹೋಗುವ ಹೊಸಪೀಳಿಗೆಯ ಯುವಕರು ಹಾಗೂ ಇಂಗ್ಲಿಷ್ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ದೊರಕಿಸಿಕೊಡಬೇಕೆಂಬ ಆಸೆ ಪಡುವ ಪಾಲಕರನ್ನು ತಿರಸ್ಕಾರ ದೃಷ್ಟಿಯಿಂದ ನೋಡಿರುವುದಕ್ಕೆ ಈ ಕಾದಂಬರಿ ಉದಾಹರಣೆಯಾಗಿದೆ.

ಬ್ರಾಹ್ಮಣರ ಆರ್ಥಿಕ ದುಸ್ಥಿತಿ, ವರದಕ್ಷಿಣೆಗಳನ್ನು ಕೊಡಲಾಗದೆ ಮುರಿದು ಹೋಗುವ ಮದುವೆಗಳು, ವಿದೇಶಿ ಶಿಕ್ಷಣವನ್ನು ಪಡೆಯಲು ದೇಶ ಬಿಟ್ಟು ಹೋಗಿ ತಪ್ಪುದಾರಿ ಹಿಡಿಯುವುದು, ಅವರ ಕುಟುಂಬದವರು ಪಡುವ ಕಷ್ಟ, ಸ್ತ್ರೀ ಶಿಕ್ಷಣದ ಮಹತ್ವ ಮುಂತಾದ ಸಾಮಾಜಿಕ ವಿಷಯಗಳನ್ನು ಚಿತ್ರಿಸಿದೆ. ಈ ಮೂಲಕ ಆಧುನಿಕತೆಯ ಕೆಡುಕಿನ ಬಗ್ಗೆ ಗಮನ ಸೆಳೆದಿದೆ.

ಕಾದಂಬರಿಕಾರರು ತಮ್ಮ ಮುನ್ನುಡಿಯಲ್ಲಿ "ಈ ಕಾದಂಬರಿಯನ್ನು ಬರೆಯುವ ಮುಖ್ಯ ಉದ್ದೇಶ ವರದಕ್ಷಿಣೆ ಕೊಡುವುದರಿಂದ ಆ ಸಂಸಾರಗಳಿಗೆ ಒದಗುವ ಕಷ್ಟಗಳು, ಆಂಗ್ಲ ಶಿಕ್ಷಣ

ಪಡೆಯಲು ಮಕ್ಕಳನ್ನು ವಿದೇಶಗಳಿಗೆ ಕಳುಹಿಸಿ ಮನೆಯವರು ಎದುರಿಸುವ ಕಷ್ಟಗಳು ಬಾಧೆಗಳು, ಆಂಗ್ಲ ಶಿಕ್ಷಣ ಪಡೆದವರಿಗಿಂತ, ಕೊಂಚಮಟ್ಟಿಗೆ ಕೃಷಿ ಬಲ್ಲವನೆ ಪ್ರಪಂಚದಲ್ಲಿ ಸುಖವಾಗಿ ಬದುಕಬಲ್ಲನು" (೧೯೨೩:೨) ಎಂಬ ಮೂರು ಕಾರಣಗಳನ್ನು ನೀಡಿದ್ದಾರೆ. ಸಾಮಾಜಿಕ ಕಾದಂಬರಿಯೆಂದರೆ ಪ್ರತಿದಿನ ಕಣ್ಣು ಮುಂದೆ ವರ್ತಿಸುವ ಸ್ತ್ರೀ ಪುರುಷರು, ಅವರ ಗುಣ-ಸ್ವಭಾವಗಳು ಎಂಬುದು ಅವರ ಅಭಿಪ್ರಾಯ.

ಲಕ್ಷ್ಮಿ ಹಾಗೂ ಪ್ರಸಾದ ಕಾದಂಬರಿಯ ಮುಖ್ಯಪಾತ್ರಗಳು. ಇವರಿಬ್ಬರಿಗೂ ಬಾಲ್ಯವಿವಾಹ ನಡೆದಿದ್ದು ಇದು ಸಮಾಜದ ಸಾಮಾನ್ಯ ಪಿಡುಗಾಗಿತ್ತೆಂದು ಕಾಣಿಸುತ್ತದೆ. ಲಕ್ಷ್ಮಿಯ ಸೋದರತ್ತೆಯ ಮಗನಾದ ಪ್ರಸಾದ ದೊಡ್ಡವನಾದ ಮೇಲೆ ಉನ್ನತ ಶಿಕ್ಷಣಕ್ಕಾಗಿ ವಿದೇಶ ಪ್ರಯಾಣ ಮಾಡುತ್ತಾನೆ.

ಪ್ರಸಾದನ ತಾಯಿ ಹಣದ ವ್ಯಾಮೋಹವುಳ್ಳವಳು; ಅಲಂಕಾರ ಪ್ರಿಯಳು. ಅಕ್ಕಪಕ್ಕದ ಮನೆಗಳಿಗೆ ಹೋಗಿ ವಿದೇಶದಲ್ಲಿ ಓದುತ್ತಿರುವ ತನ್ನ ಮಗನ ಕುರಿತು ಜಂಬ ಪಡುವುದು ಅವಳ ಹವ್ಯಾಸ. ಬ್ರಿಟಿಷ್ ಆಡಳಿತದಲ್ಲಿ ಕೆಲಸ ಮಾಡುವ ಅಧಿಕಾರಿಗಳ ಮನೆಗಳನ್ನೂ ಅವರ ಜೀವನ ಶೈಲಿಯನ್ನೂ ಆಕೆ ಗಮನಿಸಿದ್ದಾಳೆ. ಶ್ರೀಮಂತರಾಗಿದ್ದ ಅಂತಹವರ ಮನೆಯ ಅಲಂಕಾರ ಸುಂದರವಾಗಿದ್ದು ಅದರಿಂದ ಪ್ರಭಾವಿತಳಾದ ಪ್ರಸಾದನ ತಾಯಿ ಹೇಗಾದರೂ ಮಾಡಿ ತನ್ನ ಮಗನನ್ನು ವಿದೇಶಕ್ಕೆ ಕಳುಹಿಸಿ ಇಂಗ್ಲಿಷ್ ಶಿಕ್ಷಣ ಕೊಡಿಸಿ ಅವನನ್ನು ಅಧಿಕಾರಿಯಾಗಿ ಮಾಡಲು ಹಂಬಲಿಸುತ್ತಾಳೆ. ಸರ್ಕಾರಿ ಸೇವಕನಾಗಿದ್ದ ಅವಳ ಗಂಡನಿಗೆ ತಿಂಗಳ ಸಂಬಳ ಹೊರತುಪಡಿಸಿ ನಿತ್ಯ ಲಂಚರೂಪದಲ್ಲಿ ಸಾಕಷ್ಟು ಹಣ ದೊರಕುತ್ತಿತ್ತು. ಮಗನೂ ಸರ್ಕಾರದಲ್ಲಿ ಉನ್ನತ ಅಧಿಕಾರಿಯಾಗಬೇಕೆಂದು ಬಯಸಿ ಅವನನ್ನು ವಿದೇಶಕ್ಕೆ ಕಳುಹಿಸುತ್ತಾಳೆ.

ಮಗನ ವಿದೇಶ ವ್ಯಾಸಂಗದ ಸಲುವಾಗಿ ತನ್ನೆಲ್ಲ ಆಸ್ತಿ ಮಾರುವ ರಾಜೇಶ್ವರಮ್ಮ ತನಗೆ ಅದರ ಅಗತ್ಯದ ವಿರುದ್ಧ ಬುದ್ಧಿ ಹೇಳಿದ ಸಹೋದರನನ್ನು ಅವಮಾನ ಮಾಡಿ ಕಳುಹಿಸುತ್ತಾಳೆ. ಸೊಸೆ ಲಕ್ಷ್ಮಿ ಯೌವ್ವನಕ್ಕೆ ಬಂದು ಗಂಡನ ಮನೆ ಸೇರಬೇಕಾದ ಸಂದರ್ಭದಲ್ಲಿ ವರದಕ್ಷಿಣೆಯ ಬೇಡಿಕೆ ಮುಂದಿಡುತ್ತಾಳೆ. ವರದಕ್ಷಿಣೆ ಮೂಲಕ ಮಗನ ವಿದೇಶ ಶಿಕ್ಷಣದ ಖರ್ಚು ವಸೂಲಿ ಮಾಡಲು ಮುಂದಾಗುತ್ತಾಳೆ. ವರದಕ್ಷಿಣೆ ಇಲ್ಲದೆ ಮನೆಗೆ ಬಂದ ಸೊಸೆಗೆ ಸಾಕಷ್ಟು ಹಿಂಸೆ ಕೊಡುತ್ತಾಳೆ. ಸೊಸೆಯನ್ನು ಸಾಯಿಸಿ ಮಗನಿಗೆ ಮತ್ತೊಂದು ಮದುವೆ ಮಾಡಲು ಉಪಾಯ ಮಾಡುತ್ತಾಳೆ. ಈ ನಡುವೆ ತನ್ನ ಮಗಳು ಸಾವಿಗೀಡಾಗುತ್ತಾಳೆ. ತನ್ನ ಮಗಳ ಸಾವಿಗೆ ಸೊಸೆಯೆ ಕಾರಣವೆಂದು ಆರೋಪಿಸಿ, ಹೆಣ್ಣಿಗೆ ಹೆಣ್ಣೆ ಶತ್ರುವೆಂಬಂತೆ ಸೊಸೆಯನ್ನು ಮನೆಯಿಂದ ಹೊರ ಹಾಕುತ್ತಾಳೆ.

ವಿದೇಶದಿಂದ ಶಿಕ್ಷಣವನ್ನು ಪೂರ್ಣಗೊಳಿಸದೆ ಮರಳಿದ ಮಗ ತನ್ನ ಹೆಂಡತಿಗಾಗಿ ಹಂಬಲಿಸುತ್ತಾನೆ. ಸೊಸೆಯ ಕುರಿತು ಸಲ್ಲದ ಆರೋಪ ಹೊರಿಸಿ ಮಗನಿಗಾಗಿ ಇನ್ನೊಂದು

ಹುಡುಗಿಯನ್ನು ಹುಡುಕುತ್ತಾಳೆ. ವರದಕ್ಷಿಣೆಯ ಆಸೆಗೆ ಬಿದ್ದು ಸರ್ಕಾರದ ಉದ್ಯೋಗದಲ್ಲಿ ಇರುವವರ ಮಗಳನ್ನು ಸೊಸೆಯಾಗಿ ತರಲು ಬಯಸುತ್ತಾಳೆ. ಕೊನೆಗೆ ಮಗನ ಹಿತವಚನ ಹಾಗೂ ಸೊಸೆಯ ಒಳ್ಳೆಯ ನಡತೆ ಅವಳ ಮನಸ್ಸನ್ನು ಬದಲಿಸುತ್ತದೆ. ವರದಕ್ಷಿಣೆ ಸಮಸ್ಯೆಗೆ ಹೆಣ್ಣಿನ ದುರಾಸೆಯೂ ಕಾರಣವೆಂದು ಚಿತ್ರಿಸಲಾಗಿದೆ. ವರದಕ್ಷಿಣೆಯ ಪುರುಷಪರ ಮೌಲ್ಯಗಳನ್ನು ಗೌಣಮಾಡಿ ಕಂಡಿದೆ.

ಈ ಕಾದಂಬರಿಯಲ್ಲಿ ಇಂಗ್ಲಿಷ್ ಶಿಕ್ಷಣ ತಂದುಕೊಡುವ ಉತ್ತಮ ಮಟ್ಟದ ಜೀವನ ಚಿತ್ರಿಸಿ ಅದರ ಪರ ಸಹಾನುಭೂತಿ ರೂಪಿಸಿದರೂ ಶಿಕ್ಷಣಕ್ಕಾಗಿ ಮಕ್ಕಳನ್ನು ವಿದೇಶಕ್ಕೆ ಕಳುಹಿಸುವ ತಂದೆ ತಾಯಿಯರ ಕಷ್ಟಗಳನ್ನು ವಿವರಿಸುವ ಮೂಲಕ ಅದರ ವಿರುದ್ಧ ದನಿ ಎತ್ತಲಾಗಿದೆ. ವರದಕ್ಷಿಣೆಯ ಸಮಸ್ಯೆಯನ್ನು ಮುಖ್ಯವಾಗಿಟ್ಟುಕೊಂಡು ಅದರ ಅನಾಹುತಗಳನ್ನು ನಿರೂಪಿಸಲಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಕನ್ನಡ ತೆಲುಗು ಆರಂಭ ಕಾಲದ ಕಾದಂಬರಿಗಳ ಕಾಲದಲ್ಲಿ ಕನ್ನಡ ಮತ್ತು ತೆಲುಗು ಸಮಾಜಗಳು ತಮ್ಮ ಪಾರಂಪರಿಕ ಜೀವನ ಮೌಲ್ಯಗಳಲ್ಲಿದ್ದು ವಸಾಹತುಶಾಹಿ ರೂಪಿಸತೊಡಗಿದ್ದ ಹೊಸ ಜೀವನಮೌಲ್ಯಗಳಿಗೆ ತೆರೆದುಕೊಳ್ಳುತ್ತಿದ್ದ ಸಂಧಿಕಾಲವಾಗಿತ್ತೆಂದು ತಿಳಿದುಬರುತ್ತದೆ.

ಈ ಕಾಲಘಟ್ಟದಲ್ಲಿ ಪ್ರಕಟವಾದ ಸಾಮಾಜಿಕ ಕಾದಂಬರಿಗಳೆಂಬ ಹೊಸ ಪ್ರಕಾರದ ಬರಹಗಳು ಆಯಾ ಕಾದಂಬರಿಕಾರನ ದೃಷ್ಟಿ ವಿಶೇಷಗಳಿಗೆ ಕಂಡುಬಂದ ನಿಲುವುಗಳನ್ನು ಕೃತಿಯ ವಸ್ತು, ವಿಷಯ, ನಿರೂಪಣೆಗಳಲ್ಲಿ ಪ್ರಕಟಿಸಿರುವುದು ಆಯಾ ಕೃತಿಗಳಿಗೂ ಅವುಗಳ ಸಮಕಾಲೀನ ಸ್ಥಿತಿಗಳಿಗೂ ಇರುವ ನಿಕಟ ಸಂಬಂಧವನ್ನು ಕಾಣಿಸುತ್ತದೆ.

ಕನ್ನಡ ಕಾದಂಬರಿಗಳು ಪರಿವರ್ತನಶೀಲ ಸಮಾಜದ ಚಲನೆಯನ್ನು ಪಾರಂಪರಿಕ ದೃಷ್ಟಿಕೋನಗಳ ಚೌಕಟ್ಟಿನಲ್ಲಿ ನಿರೂಪಿಸಿವೆ. ಆದರೆ ತೆಲುಗು ಕಾದಂಬರಿಗಳು ಪರಿವರ್ತಿತ ಸಮಾಜ ನಿರ್ಮಾಣಕಾರ್ಯವನ್ನು ಒಪ್ಪಿತ ನೆಲೆಯಲ್ಲಿ ಅತ್ಯುತ್ಸಾಹದಿಂದ ಚಿತ್ರಿಸಿದರೂ ಅದರ ಇತರ ಆಯಾಮಗಳನ್ನು ಕಾಣಿಸುತ್ತವೆ. ಸ್ತ್ರೀಯರ ಸಮಸ್ಯೆಗಳಿಗೆ ಕಾರಣವಾದ ಮೂಲವನ್ನು ಮುಟ್ಟದೆ ಹಾಗೆ ಬಿಟ್ಟಿರುವ ಹಾಗೆ ಕಾಣುತ್ತದೆ.

ಅಧ್ಯಾಯ ೪

ಕನ್ನಡ ತೆಲುಗು ಕಾದಂಬರಿಗಳಲ್ಲಿ ಚಿತ್ರಿತ ಸ್ತ್ರೀ ಸಮಸ್ಯೆಗಳ ಸ್ವರೂಪ

ಬಾಲ್ಯ ವಿವಾಹ

ಸ್ತ್ರೀ ಶಿಕ್ಷಣ

ವರದಕ್ಷಿಣೆ

ಸತಿ ಸಹಗಮನ

ವಿಧವಾ ವಿವಾಹ

ಅಧ್ಯಾಯ ೪

ಕನ್ನಡ ತೆಲುಗು ಕಾದಂಬರಿಗಳಲ್ಲಿ ಚಿತ್ರಿತ ಸ್ತ್ರೀ ಸಮಸ್ಯೆಗಳ ಸ್ವರೂಪ

ಸಾಮಾಜಿಕ ಕಾದಂಬರಿಗಳು ಸಾಮಾನ್ಯವಾಗಿ ವಾಸ್ತವ ಶೈಲಿಯಲ್ಲಿ ನಿರೂಪಿತವಾಗಿರುತ್ತವೆ. ಕಾದಂಬರಿ ತಾನು ಕೈಗೆತ್ತಿಕೊಂಡ ಸಾಮಾಜಿಕ ಸಮಸ್ಯೆಯ ಅಧಿಕೃತತೆ ಮತ್ತು ಪ್ರಾಮಾಣಿಕತೆಯನ್ನು ಓದುಗರಿಗೆ ಇನ್ನಿಲ್ಲದಂತೆ ಒಪ್ಪಿಸಲು ಮತ್ತು ಕೃತಿಗೂ ಸಾಮಾಜಿಕ ಸಮಸ್ಯೆಗೂ ಅವಿನಾಭಾವ ಸಂಬಂಧ ಕಲ್ಪಿಸಲು ವಾಸ್ತವ ಶೈಲಿಯನ್ನು ಅನುಸರಿಸುತ್ತದೆ ಎಂದು ಹೇಳಬಹುದು. ಈ ಮೂಲಕ ಸಾಮಾಜಿಕ ಕಾದಂಬರಿ ವಾಸ್ತವ ಜೀವನದ ಯಥಾವತ್ತಾದ ನಿರೂಪಣೆ ಎಂಬ ಭಾವನೆಯನ್ನು ಮೂಡಿಸಿ ಓದುಗರ ಮನಸ್ಸನ್ನು ಗೆಲ್ಲುವ ಪ್ರಯತ್ನ ಮಾಡುತ್ತದೆ. ಆದರೆ ಕೃತಿಯೊಂದು ಸಮಾಜದಲ್ಲಿ ಬೇರುಬಿಟ್ಟ ಸಮಸ್ಯೆಯನ್ನು ತನ್ನ ನಿರೂಪಣೆಗಾಗಿ ಕೈಗೆತ್ತಿಕೊಂಡ ಮಾತ್ರಕ್ಕೆ ಅದು ಬಿಂಬಿಸಲು ಪ್ರಯತ್ನಿಸಲ್ಪಟ್ಟ ಸಮಸ್ಯೆಯ ಸ್ವರೂಪ ಮತ್ತು ಆಶಯಕ್ಕೂ ವಾಸ್ತವ ಸಮಾಜದಲ್ಲಿರುವ ಅದೇ ಸಮಸ್ಯೆಯ ಸ್ವರೂಪಕ್ಕೂ ಅನ್ಯೋನ್ಯ ಸಂಬಂಧವಿದೆಯೆಂದು ಭಾವಿಸಲಾಗದು. ಒಂದು ಕೃತಿಯ ನಿರೂಪಣಾ ಶೈಲಿ ಆ ಕೃತಿಯ ಅಭಿವ್ಯಕ್ತಿ ಕ್ರಮ ಮಾತ್ರ ಆಗಿರುತ್ತದೆ ಎಂದು ಹೇಳಬಹುದು. ಅದು ಕೃತಿಕಾರನ ಆಶಯ ಒಳಗೊಂಡಿರುವ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಮೂಡಿರುತ್ತದೆ. ಆದ್ದರಿಂದ ಯಾವುದೇ ಕೃತಿ ನಿರೂಪಿಸಿದ ಸಾಮಾಜಿಕ ಸಮಸ್ಯೆಯ ಸ್ವರೂಪವನ್ನು ತಿಳಿದುಕೊಳ್ಳಬೇಕಾದರೆ ಓದುಗ ಆ ಸಮಸ್ಯೆಯ ಸಮಕಾಲೀನ ಸಾಮಾಜಿಕ ವಾಸ್ತವ ಸ್ವರೂಪವನ್ನು ಕೂಡ ಪೂರ್ವಹಿನ್ನೆಲೆಯಾಗಿ ತಿಳಿದುಕೊಳ್ಳುವುದು ಅಗತ್ಯವಾಗಿ ಪರಿಣಮಿಸುತ್ತದೆ. ಆಗ ಮಾತ್ರ ಸಾಮಾಜಿಕ ಸಮಸ್ಯೆಯೊಂದು ಕಲಾಕೃತಿಯಲ್ಲಿ ರೂಪ ಪಡೆದ ರೀತಿ ಮತ್ತು ಅದನ್ನು ಮಂಡಿಸುವ ಕ್ರಮದಲ್ಲಿ ಕೃತಿಕಾರನ ಆಶಯ, ಆತನ ಜೀವನ ನೋಡುವ ಕ್ರಮ ಎಲ್ಲವೂ ಒಳಗೊಂಡಿರುವುದನ್ನು ಪ್ರತ್ಯೇಕಿಸಿ ನೋಡಲು ಸಾಧ್ಯವಾಗಬಹುದು.

ಒಂದು ಕಲಾಕೃತಿಯ ನಿರೂಪಣಾ ಶೈಲಿಗೂ ಅದು ನಿರೂಪಿಸುವ ವಸ್ತು ಆಶಯಗಳಿಗೂ ಸಂಬಂಧವಿರಬಹುದಾಗಿದೆ. ಉದಾಹರಣೆಗೆ ಸಾಮಾಜಿಕ ಕಾದಂಬರಿಗಳು ಸಾಮಾಜಿಕ ಸಮಸ್ಯೆಯನ್ನು ನಿರೂಪಿಸುತ್ತವೆ. ಚಾರಿತ್ರಿಕ ಕಾದಂಬರಿಗಳು ಐತಿಹಾಸಿಕ ಹಿನ್ನೆಲೆಯನ್ನು ಪಡೆದುಕೊಂಡಿರುತ್ತವೆ.

ಅದ್ಭುತ ರಮ್ಯದಂಥ ಫ್ಯಾಂಟಸಿ ಶೈಲಿಯ ಕಾದಂಬರಿಗಳಿಗೂ ಮುಗ್ಧ ಕನಸುಗಾರಿಕೆಗೂ ಸಂಬಂಧವಿರುತ್ತದೆ. ಆದರೆ ಅದರಲ್ಲಿ ಕೃತಿಕಾರನ ಕೃತಿ ರಚನೆಯ ಕಾರಣಗಳು, ಉದ್ದೇಶಗಳು ಸೇರಿಕೊಂಡಿರುತ್ತವೆ. ಇವನ್ನೆಲ್ಲ ಒಂದೇ ಆಗಿ ನೋಡಲು ಸಾಧ್ಯವಿಲ್ಲ. ಇವು ಕೃತಿ ಕಟ್ಟುವ ಕ್ರಮದಲ್ಲಿ ಬೇರೆ ಬೇರೆ ಮೂಲ ಅಂಶಗಳನ್ನು ತನ್ನದೇ ಕಾರಣಕ್ಕಾಗಿ ಒಂದಾಗಿಸಿಕೊಂಡ ವಿಧಾನವಾಗಿದೆ. ಮಾನವ ತನ್ನ ಪ್ರಕೃತಿ ನಿಯಮವನ್ನು ಪಾಲಿಸುವಲ್ಲಿ ಸಾಮಾಜಿಕ ಜೀವನದ ಮಿತಿಯೊಳಗೆ ನಿರ್ದಿಷ್ಟ ಚೌಕಟ್ಟನ್ನು ಕಟ್ಟುಪಾಡುಗಳು ಅಥವಾ ನಿಯಮಗಳ ಮೂಲಕ ಅಳವಡಿಸಿಕೊಳ್ಳುವ ರೀತಿಯಂತಿದೆ. ಇಂತಹ ಸಾಮಾಜಿಕ ನಿಯಮಗಳು ಪ್ರಕೃತಿ ನಿಯಮವನ್ನು ಆಧರಿಸಿಯೆ ಅನುಸರಿಸಿರುತ್ತದೆ. ಹೀಗಿದ್ದರೂ ಇವೆರೆಡೂ ಬೇರೆ ಬೇರೆ ಆಗಿರುತ್ತವೆ. ಹಾಗೆಯೆ ಕೃತಿಯೊಂದರ ಅಭಿವ್ಯಕ್ತ ಕ್ರಮಕ್ಕೂ ವಸ್ತು ಆಶಯಗಳಿಗೂ ವ್ಯತ್ಯಾಸವಿರುವುದನ್ನು ಮನಗಾಣಬಹುದು.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡಿರುವ ಸಾಮಾಜಿಕ ಕಾದಂಬರಿಗಳಲ್ಲಿ ಚಿತ್ರಿತವಾದ ಸ್ತ್ರೀ ಸಮಸ್ಯೆಯ ಸ್ವರೂಪವನ್ನು ತಿಳಿಯಬೇಕಾದರೆ ಆ ಸಮಸ್ಯೆಗಳು ವಾಸ್ತವ ಸಮಾಜದಲ್ಲಿ ನೆಲೆಸಿದ್ದ ರೀತಿ ಯಾವ ಬಗೆಯದೆಂದು ಅರಿತುಕೊಳ್ಳುವುದು ಅಗತ್ಯವಿದೆ. ಇಲ್ಲದಿದ್ದಲ್ಲಿ ಈ ಕಾದಂಬರಿಗಳು ಚಿತ್ರಿಸಿರುವ ಸ್ತ್ರೀ ಸಮಸ್ಯೆಗಳ ಭಿನ್ನ ಕ್ರಮ, ನೋಟ, ಆಶಯಗಳ ಹಿನ್ನೆಲೆಯಲ್ಲಿ ಕೃತಿಕಾರನ ಅನುಭವ, ಚಿಂತನಾಕ್ರಮ, ಪರಿಹಾರ ಕಲ್ಪನೆಯ ಕ್ರಮಗಳಲ್ಲಿರುವ ವ್ಯತ್ಯಾಸ ಹಾಗೂ ವಾಸ್ತವ ಮೂಲ ಸಮಸ್ಯೆಗೂ ಕಲಾಕೃತಿ ಚಿತ್ರಿಸುವ ಸಮಸ್ಯೆಯ ಸ್ವರೂಪಗಳಿಗೂ ಇರುವ ವ್ಯತ್ಯಾಸವನ್ನು ಅರಿಯಲು ಸಾಧ್ಯವಾಗುವುದಿಲ್ಲ. ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡ ಕಾದಂಬರಿಗಳು ನಿರೂಪಿಸಿರುವ ಸ್ತ್ರೀ ಸಮಸ್ಯೆಗಳು ವಾಸ್ತವ ಸಮಾಜದಲ್ಲಿ ನೆಲೆಸಿದ್ದ ಅದರ ಮೂಲ ರೂಪವನ್ನು ಕೂಡ ಅರಿಯಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಶೃಂಗೇರಿ ಧರ್ಮಸಂಸ್ಥಾನದ ಮಠದಲ್ಲಿ ಲಭ್ಯವಿದ್ದ ಐತಿಹಾಸಿಕ ಆಕರಗಳನ್ನು ಆಧರಿಸಿ ರಚಿತವಾದ ಎ.ಕೆ.ಶಾಸ್ತ್ರಿ ಅವರು ೧೯೮೩ರಲ್ಲಿ ಪ್ರಕಟಿಸಿದ ಶೃಂಗೇರಿ ಧರ್ಮಸಂಸ್ಥಾನ ಎಂಬ ಚಾರಿತ್ರಿಕ ಕೃತಿ ಪ್ರಸ್ತುತ ಅಧ್ಯಯನಕ್ಕೆ ನೆರವಿಗೆ ಬರುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿದ್ದ ದಕ್ಷಿಣ ಭಾರತದ ಹಿಂದೂ ಸ್ತ್ರೀಯರ ವಾಸ್ತವ ಸ್ಥಿತಿಗತಿಗಳ ಕುರಿತು ಈ ಕೃತಿ ಅಧಿಕೃತ ಆಕರಗಳನ್ನು ದಾಖಲೆಗಳ ರೂಪದಲ್ಲಿ ಒದಗಿಸಿದೆ. ಇದು ಪ್ರಸ್ತುತ ಅಧ್ಯಯನದಲ್ಲಿ ತುಂಬಾ ಮುಖ್ಯವಾದ ಆಕರಗಳಾಗಿವೆ. ಇದರಲ್ಲಿ ನಿರೂಪಿತವಾಗಿರುವ ಸ್ತ್ರೀ ಸಮಸ್ಯೆಯ ಚಾರಿತ್ರಿಕ ಸಾಮಾಜಿಕ ನೆಲೆಯನ್ನು ಪ್ರಾಕೃತಿಕ ನಿಯಮ ಮತ್ತು ಸಾಮಾಜಿಕ ನಿಯಮಗಳ ದೃಷ್ಟಿಯಿಂದ ಪರಿಶೀಲಿಸಬಹುದು. ಸ್ತ್ರೀಯರ ಸ್ಥಿತಿಗತಿ ನಿರೂಪಿಸಿರುವ ಸಂಗತಿಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಎಲ್ಲ ಜಾತಿ ವರ್ಗಗಳ ನಿರ್ಗತಿಕ ಬಡ ಹೆಂಗಸರು ಶ್ರೀ(ಶೃಂಗೇರಿ)ಮಠದ ಚಾವಡಿ(ನ್ಯಾಯ ಪೀಠ)ಗೆ ಬಂದು ತಮಗೆ ಒದಗಿಬಂದ ಆಪತ್ತನ್ನು ಹೇಳಿಕೊಂಡಾಗ ಅಂತಹ ಹೆಣ್ಣುಗಳ ವಿಚಾರಣೆ

ಚಾವಡಿಯಲ್ಲಾಗುತ್ತಿತ್ತು. ಅನಾಥ ಮತ್ತು ಕೆಟ್ಟ ಹೆಣ್ಣುಗಳನ್ನು ಮಠದಲ್ಲಿ ದಾಸ್ಯವೃತ್ತಿಗೆ ನೇಮಿಸಿಕೊಳ್ಳಲಾಗುತ್ತಿತ್ತು. ಕೆಲವು ಸಂಧರ್ಭಗಳಲ್ಲಿ ಸಮಾಜದಿಂದ ತಿರಸ್ಕರಿಸಲ್ಪಟ್ಟ ಕೆಟ್ಟ ಹೆಣ್ಣುಗಳನ್ನು ಭೂಮಿಯ ಮಾಲೀಕರು ಮಠದ ಚಾವಡಿಯಿಂದ ಖರೀದಿಸಿ ತಮ್ಮ ಮನೆಯ ಹೊರಗೆಲಸಕ್ಕೆ ಇಟ್ಟುಕೊಳ್ಳುತ್ತಿದ್ದರು(ಪು.೧೮೭).

೨. ಶ್ರೀಮತು ಅರಮನೆ ಸೀಮೆಗಡಿಗಳ ಆಮೀಲ ಮತ್ತು ಕಿಲ್ಲೇದಾರರಿಗೆ ಸಹ ಬರೆದು ಕಳುಹಿದ ನಿರೂಪ, ಅದಾಗಿ:- ಶೃಂಗೇರಿಮಠಕ್ಕೆ ಪೂರ್ವಾರಭ್ಯ ಸೇರಿದಂಥಾ ಶಿಷ್ಯರ ಕಡೆ ಹೆಣ್ಣುಗಳು ಕೊಟ್ಟದ್ದನ್ನು ಸರ್ಕಾರದ ವಿಶೇಷ ಚರಾದಾಯಕ್ಕೆ ದಾಖಲಾಗುವುದರಿಂದ ಆ ಬಗ್ಗೆ ಕೆಟ್ಟಂಥಾ ಹೆಣ್ಣುಗಳು ಶೃಂಗೇರಿ ಮಠಕ್ಕೆ ದಾಖಲಾಗತಕ್ಕದ್ದೆಂಬುದಾಗಿ ಈ ಮಠದ ಪಾರುಪತ್ಯಗಾರರು ಹುಜೂರರಲ್ಲಿ ಅರಕೆ ಮಾಡಿಕೊಂಡ ಕಾರಣ ಕಟ್ಲೆ ಮಾಡಿಸಿ ಇದ್ದಿತು. ಈ ಮಠಕ್ಕೆ ಪೂರ್ವಾರಭ್ಯದಿಂದಲೂ ಸೇರಿದ ಶಿಷ್ಯ ಜನರಲ್ಲಿ ಕೆಟ್ಟ ಹೆಣ್ಣುಗಳನ್ನು ಶೃಂಗೇರಿ ಮಠದವರ ಹವಾಲಿ(ವಶಕ್ಕೆ)ಗೆ ಕೊಟ್ಟು ರಸೀದಿ ತೆಗೆದುಕೊಳ್ಳುತ್ತಾ ಬರುವುದು. ೧೮೨೬ ಸೆಪ್ಟೆಂಬರ್ ೯ರಂದು ಮೈಸೂರು ಸರ್ಕಾರ ಹೊರಡಿಸಿದ ನಿರೂಪ (ಪು.೧೮೫).

೩. ಜಾತಿ ಕಾಯಿದೆಗೆ ವಿರೋಧವಾಗಿ ನಡೆದಂತಹ ಹೆಂಗಸರನ್ನು ಪಹರೆಯಲ್ಲಿ ಹಾಕಿಡಬೇಕೆಂಬ ಕಮಿಷ್‌ನರ್ ಬ್ರಿಗ್ ಸಾಹೇಬರ ಆಜ್ಞೆಯನ್ನು ಕಾರ್ಯಗತಗೊಳಿಸುವಂತೆ ನಗರದ ಫೌಜುದಾರ ತಿಮ್ಮಪ್ಪಯ್ಯ ೧೮೩೪ ಫೆಬ್ರವರಿ ೬ ರಂದು ಆಮೀಲ ಮತ್ತು ಕಿಲ್ಲೇದಾರರಿಗೆ ಹೊರಡಿಸಿದ ನಿರೂಪ. ಅವರವರ ಜಾತಿ ಧರ್ಮದ ಮೇರೆಗೆ ಮಠದ ಶಿಷ್ಯರಲ್ಲಿಯ ಕೆಟ್ಟ ಹೆಣ್ಣುಗಳ ವಿಚಾರಣೆಯನ್ನು ಮಠದವರೇ ಮಾಡುವಂತಾಯಿತು. ಆದರೆ ಸರ್ಕಾರದ ಪೂರ್ವ ಪರವಾನಿಗೆ ಇಲ್ಲದೆ ಮಠದವರಾಗಲಿ ಇಲ್ಲವೆ ಸರ್ಕಾರದ ಅಧಿಕಾರಿಗಳಾಗಲಿ ಕೆಟ್ಟ ಹೆಣ್ಣುಗಳ ಕ್ರಯ ವಿಕ್ರಯ ಮಾಡಕೂಡದೆಂದು ಕಟ್ಟಪ್ಪಣೆಯಾಗಿತ್ತು (ಪು.೧೮೫).

೪. ಪಾರುಪತ್ಯಗಾರ ವೆಂಕಟಾಚಲಶಾಸ್ತ್ರಿ ಕಳೆಕುರದ ಅಹೋಬಲ ಸೋಮಯಾಜಿಗೆ ಬರಸಿ ಕೊಟ್ಟ ಹೆಣ್ಣಿನ ಕ್ರಯಚೀಟದ ಕ್ರಮವೆಂತೆಂದರೆ ಕೊಪ್ಪದ ಶಿಮೆ ಶಿಸಲೆ ಮಂಜನ ಹೆಂಡತಿ ಪಣಿ ಎಂಬ ವಿಧವೆಯು ಪ್ರಾಕು ಇರುಳು ತಪ್ಪಿ ಬಂದಲ್ಲಿ ಈ ಹೆಣ್ಣನ್ನು ಕ್ರಯಕ್ಕೆ ಕೊಟ್ಟ ಸಂಬಂಧ ಮೂರು ವರಹವನ್ನು ಚಾವಡಿ ಹಸ್ತಾಂತರಕ್ಕೆ ಬಂತೆಂದು ೧೮೧೮ರಲ್ಲಿ ಬರೆಸಿಕೊಟ್ಟ ಕ್ರಯಚೀಟಿ (ಪು.೧೮೨-೧೮೩).

೫. ಶೃಂಗೇರಿ ಪಾರುಪತ್ಯಗಾರ ನಾರಸಿಭಟ್ಟರು ಚಿಂತಾಮಣಿಭಟ್ಟಗೆ ಬರಸಿ ಕೊಟ್ಟ ಹೆಣ್ಣಿನ ಕ್ರಯಚೀಟದ ಕ್ರಮವೆಂತೆಂದರೆ ನಿನ್ನ ತಂಗಿ ಗೋದಿ ಎಂಬ ವಿಧವೆಯು ಇರುಳು ತಪ್ಪಿ ಶ್ರೀಮಠಕ್ಕೆ ಹರಕೇರಿ ಚಾವಡಿಗೆ ಬಂದಲ್ಲಿ ಈ ಹೆಣ್ಣನ್ನು ಕ್ರಯಕ್ಕೆ ಕೊಡಬೇಕೆಂಬ ರಿತ್ಯ ನೀನು ಹೇಳಿ ಕೊಂಡ

ಸಂಬಂಧ ಈ ಹೆಣ್ಣಿಗೆ ಸಲ್ಲುವ ಕ್ರಯ ಹನ್ನೆರೆಡು ವರಹವನ್ನು ಹಸ್ತಾಂತರಕ್ಕೆ ತೆಗೆದುಕೊಂಡು ಬರೆಸಿಕೊಟ್ಟ ಹೆಣ್ಣಿನ ಕ್ರಯಚೀಟಿ (ಪು.೧೮೩-೧೮೪).

೬. ಶ್ರೀಮಠದ ಭಂಡಾರಕ್ಕೆ ಸಖರೆಪಟ್ಟಣದ ಶಿವಭಕ್ತರ ಚೆನ್ನಿ ಎಂಬುವಳು ಬರೆಸಿದ್ದು ತನ್ನ ಗಂಡ ಹೋದ ಮೇಲೆ ತುದಿ ಪೇಟೆಯಲ್ಲೂ ಅಯ್ಯನಹಳ್ಳಿ ಸಿದ್ದಪ್ಪನ ಮನೆಯಲ್ಲೂ ಚಾವಣಿಗೆ ಸ್ಥಳದ ಹಿರೆಮಗಳೂರು ಹೊನ್ನ ತಾನು ಸಹ ಆರು ವರ್ಷದಾರಭ್ಯ ಕೂಡ ನಡಕೊತ್ತಿದಲ್ಲಿ ಹೊನ್ನ ತಾನು ಅವನು ಒಂದು ಹಾಸಿಗೆ ಮೇಲೆ ಮಲಗಿದಾಗ ತಳವಾರು ಕಂಡು ಕಟ್ಟಿಗೆ ಹಿಡತಂದು ವಿಚಾರ ಮಾಡಿದಲ್ಲಿ ಇವನೂ ತಾನೂ ಆರು ವರ್ಷದಾರಭ್ಯ ತಪ್ಪಿ ನಡಕೊಂಡು ಇದ್ದದ್ದು ಸರಿಯೆಂದು ಬರೆಸಿದ್ದು (ಪು.೧೮೩-೧೮೪).

೭. ಪಾನಿ ವೆಂಕಟೇಶ ಭಟ್ಟರ ಹೆಂಡತಿ ಲಕ್ಷ್ಮಿ ಎಂಬುವಳು ಇರುಳು ತಪ್ಪಿ ಬಂದಂದಿನಿಂದ ತನಗೆ ತಪ್ಪಿದವರ ಬರೆಸಿದ್ದು. ಎಡೆಹಳ್ಳಿ ಸುಬ್ಬಯ್ಯ ಜನವೊಂದು ತಾನೂ ಆ ಪ್ರಾಂತಕ್ಕೆ ಹೋಗಿ ಎರಡು ವರ್ಷದಾರಭ್ಯ ಇರುತ್ತಾ ಇದ್ದಲ್ಲಿ ಆಮೇಲೆ ಅಲ್ಲಿಯೇ ಬಸುರಾಗಿ ಎರಡು ತಿಂಗಳು ಆದ ಮೇಲೆ ಇಲ್ಲಿಗೆ ಬಂದು ಇರುತ್ತ ಇದ್ದೆ. ಎಡೆಹಳ್ಳಿ ಗ್ರಾಮದಲ್ಲೂ ಇದ್ದ ಕುರುಬರ ಬರಮೀ ಎಂಬುವಳು ಔಷಧಿ ಕೊಟ್ಟಳು. ಇಷ್ಟು ಹೊರತಾಗಿ ಮತ್ತೆ ತಪ್ಪಿದವರು ಇಲ್ಲ ಎಂದು ಬರೆಸಿದ್ದು (ಪು.೧೮೪-೧೮೫).

೮. ಬೆಳಂದೂರು ಕಿರಕೊಡ ಕೃಷ್ಣಯ್ಯನಿಗೆ ಅನೆಗುಂದದ ದುರ್ಗಾಭಟ್ಟರು ಬರೆಸಿಕೊಟ್ಟ ಮೆರ್‍ರೆ ಹೊಲೆ ಅಳಿನ ಕ್ರಯಚೀಟಿನ ಕ್ರಮವೆಂತೆಂದರೆ, ನಮಗೆ ಪಿತ್ರಾರ್ಜಿತವಾಗಿ ಬಂದ ಚೆನ್ನನ ಹೊಲತಿ ಕೆಟ್ಟು ಆ ಹೊಲತಿ ತಪ್ಪಿದ ಬಗ್ಗೆ, ನಾವು ನಮ್ಮ ಸುಬ್ಬಣ್ಣಯ್ಯ ಸಹ ಕೊಟ್ಟು ಬಿಡಿಸಿಕೊಂಡು ನಮ್ಮ ಸುಬ್ಬಯ್ಯನ ಆಳು ಮಲ್ಲುಗೆ ಇಟ್ಟುಕೊಟ್ಟು ಇದ್ದಲ್ಲಿ ಆ ಹೊಲತಿಗೆ ಹುಟ್ಟಿದ ಕುರ್‍ರುಡೆಗಳ ಒಳಗೆ ನನ್ನ ಪಾಲಿಗೆ ಬಂದ ಹಿರಿಕುರ್‍ರುಡೆ ಚೆನ್ನ ಎಂಬ ಕುರ್‍ರುಡೆಯನ್ನು ನಿನಗೆ ಕ್ರಯಕ್ಕೆ ಕೊಟ್ಟೆನಾಗಿ ಈ ಆಳಿಗೆ ಸಲ್ಲುವ ಕ್ರಯ ತತ್ಕಾಲೋಚಿತವಾಗಿ ಕ್ರಯ ನಿರ್ಣಯ ಮಾಡಿದ್ದು ಆರು ವರಹವನ್ನು ಸದ್ಯ ತೆಗೆದುಕೊಂಡು ಈ ಆಳಿನ ಗುಡಿ ಸರಕು ಸಹವಾಗಿ ನೀವು ನಿಮ್ಮ ಸಂತಾನ ಪಾರಂಪರ್ಯವಾಗಿ ಇರಿಸಿಕೊಳ್ಳಬಹುದೆಂದು ಬರೆಸಿಕೊಟ್ಟ ಹೊಲೆ ಆಳು ಕ್ರಯಚೀಟಿ (ಪು.೧೮೭-೧೮೮).

೯. ಆಮ್ಲೆ ಲಕ್ಷ್ಮಿಪತಿಭಟ್ಟ ಎಂಬುವವನು ತನ್ನ ಕುಲವಂಚಿಸಿ ಅನ್ಯಕುಲದಲ್ಲಿ ವಿವಾಹ ಮಾಡಿಕೊಂಡ ಕೋಟದ ತಿಗಳೆ ನರಸಿಂಹ ಭಟ್ಟನಿಗೆ ಆಶ್ರಯ ನೀಡಿದ್ದಕ್ಕೆ ಪ್ರತಿಯೊಬ್ಬನಿಂದ ೨೪ ವರಹ ಅಪರಾಧ ಮೊತ್ತವಾಗಿ ಪಡೆದ ಕಡತ(ಪು.೧೯೪).

ಈ ಮೇಲಿನ ಉಲ್ಲೇಖದಲ್ಲಿ ಶೃಂಗೇರಿ ಮಠದ ಪಾರುಪತ್ಯಗಾರರು ಸಮಾಜದ ಸ್ತ್ರೀಯರ ನ್ಯಾಯ ವಿಚಾರಣೆ ಮಾಡುವ ಅಧಿಕಾರ ಕುರಿತು ಮೈಸೂರು ಸರ್ಕಾರವನ್ನು ೧೮೨೬ರಲ್ಲೂ

ಬ್ರಿಟಿಷ್ ಆಡಳಿತದ ಪ್ರತಿನಿಧಿಯನ್ನು ಗಲಿಷಿಳರಲ್ಲೂ ಕಂಡು ಮಾತಾಡಿದೆ. ಹಿಂದೂ ಸಮಾಜದ ಮಹಿಳೆಯರು ಸಾಮಾಜಿಕ ನಿಯಮ ಮೀರದೆ ಶೃಂಗೇರಿ ಮಠಕ್ಕೆ ಅಧೀನರಾಗಿ ನಡೆದುಕೊಳ್ಳುವ ಕಟ್ಟಳೆಯನ್ನು ನಡೆಸಿಕೊಂಡು ಬರುತ್ತಿದ್ದರೂ ಈ ಮೂಲಕ ಅದನ್ನು ಮತ್ತಷ್ಟು ಬಲವಾಗಿ ವಿಧಿಸಿದೆ. ಅಂತಹ ಸ್ತ್ರೀಯರ ಕುರಿತು ವಿಚಾರಣೆ ನಡೆಸುವ ಮತ್ತು ಮಾರಾಟ ಮಾಡುವ ಹಕ್ಕು-ಅಧಿಕಾರವನ್ನು ಕೂಡ ಬೇಡಿ ಪಡೆದುಕೊಂಡಿರುವುದು ಹಿಂದೂ ಸಮಾಜದ ಸಾಮಾಜಿಕ ನಿಯಮವನ್ನು ಪಾಲನೆ ಮಾಡುವ ಅಧಿಕಾರವನ್ನು ಶಾರದಾಂಬೆಯ ಶೃಂಗೇರಿ ಮಠ ತನ್ನಲ್ಲಿ ಉಳಿಸಿಕೊಂಡು ಬಂದ ಪ್ರಬಲ ಕ್ರಮವಾಗಿದೆ. ಈ ಮೂಲಕ ಅದು ಸಮಾಜದಲ್ಲಿ ಸ್ತ್ರೀಯರು ಮತ್ತು ಕೆಳಜಾತಿಗಳ ಮೇಲಿನ ತನ್ನ ಯಜಮಾನಿಕೆಗೆ ಕುಂದುಂಟಾಗದ ಹಾಗೆ ದಬ್ಬಾಳಿಕೆ ನಡೆಸಿದೆ.

ಅಂದಿನ ಕಾಲದ ಪ್ರಾಂತೀಯ ಸರ್ಕಾರವಾಗಲಿ ಬ್ರಿಟಿಷ್ ಸರ್ಕಾರವಾಗಲಿ ಶೃಂಗೇರಿ ಮಠಕ್ಕೆ ಅಥವಾ ಅವರವರ ಜಾತಿ ಮಠಕ್ಕೆ ಸ್ತ್ರೀಯರ ಕುರಿತು ನೀಡಿದ ಅಧಿಕಾರ ಅನಾಗರಿಕವೇ ಆಗಿದೆ. ಹೀಗಿದ್ದರೂ ಬ್ರಿಟಿಷ್ ಸರ್ಕಾರ ಹಿಂದೂ ಸಮಾಜದ ನಿಯಮಗಳನ್ನು ಮೀರಿದ ಸ್ತ್ರೀಯರನ್ನು ಪೂರ್ವಪರವಾನಿಗಿ ಇಲ್ಲದೆ ಮಾರಾಟ ಮಾಡಕೂಡದೆಂದು ಕಟ್ಟಪ್ಪಣೆ ವಿಧಿಸಿದೆ. ಈ ನಿರ್ಬಂಧ ಮಾನವನ ಪ್ರಾಕೃತಿಕ ನಿಯಮ ಮೀರಲಾಗದೆ ಸಾಮಾಜಿಕ ನಿಯಮ ಮುರಿದವರ ಜೀವಿತದ ಹಕ್ಕನ್ನು ಎತ್ತಿ ಹಿಡಿದ ಪ್ರಯತ್ನವಾಗಿದೆ.

ದಕ್ಷಿಣ ಭಾರತದಲ್ಲಿ ಅಧಿಕಾರಸ್ಥಾನಗಳು ಹಿಂದೂ ಸಮಾಜದ ಮಠಗಳ ಜೊತೆಗೆ ಸಂಧಾನ ಮಾಡಿಕೊಂಡ ಈ ಹೊತ್ತಿಗೆ ಬ್ರಿಟಿಷ್ ಆಡಳಿತ ಬಂಗಾಳ ಮತ್ತು ಮತ್ತಿತರ ಪ್ರಾಂತ್ಯಗಳಲ್ಲಿ ಸ್ತ್ರೀಯರ ಸ್ಥಾನಮಾನ ಸುಧಾರಿಸಲು ಪ್ರಗತಿಪರ ವಿಚಾರವುಳ್ಳವರಿಗೆ ಉತ್ತೇಜನ ನೀಡುತ್ತಿತ್ತು ಮತ್ತು ಅಂತಹ ಸುಧಾರಣ ಕಾನೂನು ನಿಯಮಗಳನ್ನು ರೂಪಿಸುತ್ತಿತ್ತು ಎಂಬ ಅಂಶ ಗಮನಾರ್ಹ. ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಹಿಂದೂ ಸಮಾಜದ ಬಿಗಿಹಿಡಿತ ಸಮಾಜದ ವಿವಿಧ ಸಮುದಾಯಗಳ ಮೇಲಷ್ಟೇ ಅಲ್ಲದೇ ರಾಜಕೀಯ ಅಧಿಕಾರ ಕೇಂದ್ರಸ್ಥಾನಗಳ ಮೇಲೂ ಪ್ರಬಲವಾಗಿತ್ತೆಂದು ಇದರಿಂದ ತಿಳಿಯಬಹುದು.

ಶೃಂಗೇರಿಮಠದ ನ್ಯಾಯಕಟ್ಟೆಗೆ ತಮಗೊದಗಿದ ಅನ್ಯಾಯ, ಆಪತ್ತುಗಳನ್ನು ಹೇಳಿಕೊಳ್ಳಲು ಬಂದ ಮಹಿಳೆಯರಲ್ಲಿ ನಿರ್ಗತಿಕರು, ಬಡವರು ಮತ್ತು ಸಾಮಾಜಿಕ ನೀತಿ ನಿಯಮ ಮೀರಿದ್ದವರೂ ಸೇರಿದ್ದರು. ಮಹಿಳೆಯರು ತಮಗೆ ಒದಗಿಬಂದ ಕಷ್ಟ ಪರಂಪರೆಯನ್ನು ನ್ಯಾಯಕಟ್ಟೆಯ ಮುಂದಿಟ್ಟದ್ದೆ ಅಪರಾಧವಾಗಿ ಕಾಣಲಾಗಿದೆ. ಹಾಗಾಗಿ ಅವರಿಗೊದಗಿದ ಆಪತ್ತು, ಅನ್ಯಾಯಗಳನ್ನು ಪರಿಶೀಲಿಸದೆ, ವಿಚಾರಣೆ ಮಾಡದೆ ಅವರನ್ನು ಶಿಕ್ಷಾರ್ಹರನ್ನಾಗಿ ನಡೆಸಿಕೊಂಡಿದೆ. ಹೆಣ್ಣುಮಕ್ಕಳು ಯಾವ ಕಾರಣಕ್ಕೂ ಮನೆ ಬಿಟ್ಟು ಹೊರಗೆ ಬರಬಾರದೆಂದು ಈ ಮೂಲಕ ಸಾರಿದಂತಿದೆ. ಹಾಗಾಗಿ ನ್ಯಾಯ ಕೇಳಿ

ಬಂದ ಸ್ತ್ರೀಯರಿಗೆ ಅವರ ಜೀವನದಲ್ಲಿ ಮತ್ತಷ್ಟು ಹೆಚ್ಚು ದಮನಿತ ಸ್ಥಿತಿಯನ್ನು ಉಂಟು ಮಾಡುವಂಥ ಕ್ರೂರ ಶಿಕ್ಷೆ ವಿಧಿಸಿದ್ದು ಕಂಡುಬರುತ್ತದೆ. ಈ ಪ್ರಕಾರವಾಗಿ ಅಂತಹ ಮಹಿಳೆಯರು ತಮ್ಮ ಗಂಡಂದಿರ ಮನೆಯಲ್ಲಿಯೆ ತಮ್ಮ ಸ್ಥಿತಿ ಉತ್ತಮವಾಗಿತ್ತು ಎಂದು ಭಾವಿಸುವಂತೆ ಮಠದ ದಾಸ್ಯ ವೃತ್ತಿಯಲ್ಲಿ ಇಲ್ಲವೆ ಭೂಮಾಲೀಕರ ಗುಲಾಮಳಾಗಿ ಅವರಿಂದ ಎದುರಾಗುವ ಎಲ್ಲ ಬಗೆಯ ದೌರ್ಜನ್ಯಗಳಿಗೆ ತುತ್ತಾಗಲು ಅವಕಾಶ ಮಾಡಿಕೊಟ್ಟಿದೆ. ಇದು ಮಾನವನ ಸ್ವಾಭಿಮಾನ, ಗೌರವ ಮುಂತಾದ ಸ್ವಾವಲಂಬಿ ಮತ್ತು ಸ್ವಾತಂತ್ರ್ಯದ ಗುಣಗಳನ್ನು ಚಿಗುರಲು ಅವಕಾಶವಿಲ್ಲದಂತೆ ತುಳಿಯುವ ಕ್ರಮವಲ್ಲದೆ ನ್ಯಾಯ ಒದಗಿಸುವ ರೀತಿಯಾಗಿ ಕಾಣುವುದಿಲ್ಲ.

ಈ ಮೇಲಿನ ದಾಖಲೆಗಳಲ್ಲಿ ಉಲ್ಲೇಖಿತರಾದ ಪಣಿ, ಗೋದಿ ಮತ್ತು ಚೆನ್ನಿ ಎಂಬ ವಿಧವೆಯರಲ್ಲಿ ಮೊದಲಿನ ಇಬ್ಬರು ಮನೆ ಬಿಟ್ಟು ನ್ಯಾಯಕಟ್ಟೆಯಲ್ಲಿ ತನ್ನ ವಿಷಯ ಮಂಡನೆ ಮಾಡಿದ ಅಪರಾಧಕ್ಕೆ ಗುಲಾಮರಂತೆ ಮಾರಾಟವಾದ ಮಹಿಳೆಯರೆ ಆಗಿದ್ದಾರೆ. ಚೆನ್ನಿ ಎಂಬ ವಿಧವೆ ಮತ್ತೊಬ್ಬ ಗಂಡಸಿನೊಂದಿಗೆ ಆರು ವರ್ಷ ಸಂಸಾರ ಮಾಡಿದ ಧೀರೆಯಾಗಿದ್ದಾಳೆ. ಲಕ್ಷ್ಮಿ ಎಂಬ ಪತ್ನಿ ತನ್ನ ಗಂಡನನ್ನು ಬಿಟ್ಟು ತಾನು ಇಷ್ಟಪಟ್ಟ ಮತ್ತೊಬ್ಬ ಪುರುಷನೊಂದಿಗೆ ಎರಡು ವರ್ಷ ಬಾಳಿ ಬಸುರಾಗಿ ಅದನ್ನು ತೆಗೆಸಿ ಹಾಕುವಷ್ಟು ಧೈರ್ಯವಂತೆಯಾಗಿದ್ದಾಳೆ.

ಈ ಪ್ರಕರಣಗಳು ಹಿಂದೂ ಧರ್ಮದ ಮೇಲುವರ್ಗದ ಮಹಿಳೆಯರ ಸ್ಥಿತಿಗತಿಗಳಾದರೆ ಜೀವಮಾನವೆಲ್ಲ ಜೀತದಾಳಾಗಿದ್ದ ಕೆಳವರ್ಗದ ಮಹಿಳೆಯರ ಸ್ಥಿತಿ ಅದಕ್ಕಿಂತಲೂ ಹೀನಾಯವಾಗಿದ್ದುದಾಗಿ ಕಾಣುತ್ತದೆ. ಚೆನ್ನನ ಹೆಂಡತಿಗೆ ಕರೆಯಲು ಹೆಸರು ಕೂಡ ಇಲ್ಲ. ಆಕೆ ಮತ್ತೊಬ್ಬನಲ್ಲಿ ಆಸಕ್ತಳಾಗಿದ್ದಾಳೆಂದು ಆಕೆಯ ಒಡೆಯರೆನಿಸಿಕೊಂಡ ಮೇಲುವರ್ಗದ ಪುರುಷರು ಆರೋಪಿಸಿದ್ದಾರೆ. ಅವರು ಅದನ್ನು ಕಂಡು ಆಕೆಯನ್ನು ಬಿಡಿಸಿ ತಂದು ತಮ್ಮ ಮನೆಯ ಆಳಿನ ಜೊತೆ ಅವಳ ಇಷ್ಟಾನಿಷ್ಟಗಳನ್ನು ಗಮನಿಸದೆ ಕೂಡಿ ಜೀವಿಸುವಂತೆ ಮಾಡಿದ್ದಾರೆ. ಈ ಸಂಬಂಧದಲ್ಲಿ ಅವಳಿಗೆ ಹುಟ್ಟಿದ ಮಕ್ಕಳನ್ನು ವಂಶ ಪಾರಂಪರ್ಯದಿಂದ ಬಂದ ಆಸ್ತಿಯಂತೆ ಅವರು ಹಂಚಿಕೊಂಡಿದ್ದಾರೆ. ಇದು ಹಿಂದೂ ಸಮಾಜದಲ್ಲಿ ಮೇಲ್ಜಾತಿ ಹಿತಾಸಕ್ತಿಗೆ ಅನುಗುಣವಾಗಿ ಅವರ ಮೂಗಿನ ನೇರಕ್ಕೆ ಎಲ್ಲವೂ ಎಲ್ಲರೂ ಇರಬೇಕು ಎಂಬ ಸರ್ವಾಧಿಕಾರದ ಮನೋಧಾರ್ಷ್ಟ್ಯದಿಂದ ಹುಟ್ಟಿದ ನಿಲುವಾಗಿದೆ. ಮನುಷ್ಯ ಸಮಾಜ ಮಾನವನನ್ನು ನಡೆಸಿಕೊಂಡ ಬರ್ಬರ ಸಾಮಾಜಿಕ ನಿಯಮಗಳಿಗೆ ಇದು ನಿದರ್ಶನವಾಗಿದೆ.

ಕೊನೆಯದಾಗಿ ಅನ್ಯ ಕುಲದಲ್ಲಿ ಮದುವೆಯಾದ ತಿಗಳ ನರಸಿಂಹ ಭಟ್ಟನಿಗೆ ಮತ್ತು ಅವನಿಗೆ ಆಶ್ರಯ ನೀಡಿದ ಲಕ್ಷ್ಮೀಪತಿ ಭಟ್ಟನಿಗೆ ಮಠದ ನ್ಯಾಯಕಟ್ಟೆ ಜಾತಿ ಕಟ್ಟಳೆ ಮೀರಿದ್ದಕ್ಕಾಗಿ ಅಪರಾಧ ದಂಡದ ಮೂಲಕ ಶಿಕ್ಷೆ ವಿಧಿಸಿದೆ. ಯಾವುದೇ ವ್ಯಕ್ತಿ ತನಗಾದ ಅನ್ಯಾಯವನ್ನು ಮತ್ತೊಬ್ಬನಲ್ಲಿ ಹೇಳಿಕೊಂಡಾಗ ಅವನೆಸಗಿದ ಕಾರ್ಯದಲ್ಲಿದ್ದಿರಬಹುದಾದ ನ್ಯಾಯಾನ್ಯಾಯಗಳ ಮಿತಿಯಲ್ಲಿ

ಅವನ ಸ್ವಾಭಿಮಾನ, ಗೌರವ, ಸ್ವಾತಂತ್ರ್ಯಗಳಿಗೆ ಚ್ಯುತಿ ಬಾರದಂತೆ, ತೃಪ್ತಿಕರವಲ್ಲದಿದ್ದರೂ ಸಮಾಧಾನಕರವಾದ ಮಟ್ಟಿಗಾದರೂ ನ್ಯಾಯುದ ತಕ್ಕಡಿಯುಲ್ಲಿ ಅನ್ಯಾಯುವಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಆದರೆ ಶೃಂಗೇರಿ ಮಠದ ನ್ಯಾಯಕಟ್ಟೆಯಲ್ಲಿ ಮಾನವ ಜೀವಿಯ ಜೀವಿತದ ಹಕ್ಕುಗಳಿಗಿಂತ ಅದು ತನ್ನ ಮೇಲೆ ಹೇರಿಕೊಂಡ ಸಾಮಾಜಿಕ ನಿಯಮಗಳ ಪಾಲನೆಯಲ್ಲಿಯೆ ತನ್ನ ಅಸ್ತಿತ್ವವನ್ನು ಮುಖ್ಯವಾಗಿ ಕಂಡುಕೊಂಡಿದೆ. ಹಾಗಾಗಿ ಇಲ್ಲಿ ಜೀವ ವಿರೋಧಿ ನಿಯಮಗಳನ್ನೆ ನ್ಯಾಯದ ಹೆಸರಲ್ಲಿ ಎತ್ತಿ ಹಿಡಿಯಲಾಗಿದೆ. ಸಾಮಾಜಿಕ ನಿಯಮಗಳನ್ನು ಮೀರಿದ ಸ್ತ್ರೀಯರ ದಮನಿತ ಸ್ಥಿತಿ ಅವರು ತಮ್ಮ ಪ್ರಾಕೃತಿಕ ನಿಯಮ ಪೂರೈಸಿಕೊಳ್ಳಲಾರದ ಅಸಹಾಯ ಸ್ಥಿತಿಯಲ್ಲಿ ರೂಪು ಪಡೆದಿದ್ದೆಂದು ಹೇಳಲು ಅವಕಾಶ ಒದಗಿಸಿದೆ.

ಹಿಂದೂ ಸಮಾಜ ಸ್ತ್ರೀಯರ ಕುರಿತು ರೂಪಿಸಿದ ಸಾಮಾಜಿಕ ನಿಯಮಗಳು ಸಮಾಜದ ಎಲ್ಲ ಜಾತಿಗಳಿಂದ ಮೇಲಿಂದ ಮೇಲೆ ಮೀರಲಾಗುತ್ತಿತ್ತು ಎಂಬುದು ಮೇಲಿನ ಸ್ತ್ರೀಯರ ಕುರಿತ ಸಂದರ್ಭಗಳು ಮನದಟ್ಟು ಮಾಡಿಕೊಡುತ್ತವೆ. ಇಲ್ಲಿಯ ಪ್ರತಿಯೊಂದೂ ಸಂದರ್ಭ ಹೆಣ್ಣಿನ ಮೇಲೆ ಮತ್ತಷ್ಟು ಪ್ರತಿಬಂಧ ಹೇರಿದ ಕ್ರಮವಾಗಿ ಮೂಡಿದೆ. ಮಾರಾಟ ಮಾಡುವುದು, ದಾಸಿಯನ್ನಾಗಿ ಮಾಡುವುದು, ದಂಡ ವಿಧಿಸುವುದು ಮುಂತಾದವು ಹೆಣ್ಣಿನ ಜೀವಿತದ ಹಕ್ಕನ್ನು ಇನ್ನಿಲ್ಲದಂತೆ ಹತ್ತಿಕ್ಕುವುದೇ ಆಗಿವೆ. ಹಾಗೆಯೇ ಮನೆ ಬಿಟ್ಟು ಬಂದು ತನಗಾದ ಅನ್ಯಾಯದ ವಿರುದ್ಧ ಮಠದ ನ್ಯಾಯಕಟ್ಟೆಯಲ್ಲಿ ದೂರು ನೀಡುವುದು, ತಮಗೆ ಸರಿ ಕಂಡವರ ಜೊತೆ ಸಂಬಂಧ ಇರಿಸಿಕೊಳ್ಳುವುದು ಮತ್ತು ಬಸುರಾಗುವುದು ಮುಂತಾದವು ಶಿಕ್ಷಾರ್ಹವೆಂದು ಪರಿಗಣಿಸಿದೆ. ಸ್ತ್ರೀಯರ ಕುರಿತ ಇಂತಹ ಧೋರಣೆ ಹಿಂದೂ ಸಮಾಜದ ಸಾಮಾಜಿಕ ನಿಯಮಗಳ ಇತಿಮಿತಿಗಳನ್ನು ಸೂಚಿಸುವುದಲ್ಲದೆ, ಮಾನವನ ಪ್ರಾಕೃತಿಕ ನಿಯಮಗಳು ಸಾಮಾಜಿಕ ನಿಯಮ ಮೀರಿದ ಹೆಣ್ಣಿನ ಹಕ್ಕುಗಳೊಂದಿಗೆ ತಳಕು ಹಾಕಿಕೊಂಡಿರುವುದನ್ನೂ ಕಾಣಿಸುತ್ತದೆ.

ಸಾಮಾಜಿಕ ನಿಯಮಗಳ ಪಾಲನೆ ಮಾಡುವಲ್ಲಿ ಮಠ ದಬ್ಬಾಳಿಕೆ ಮತ್ತು ಹೇರಿಕೆಯ ಪ್ರವೃತ್ತಿಯನ್ನು ಅನುಸರಿಸಿರುವುದು ಗೋಚರಿಸುತ್ತದೆ. ಇದಕ್ಕೆ ಮಠದ ಇಂಥ ನಿಲುವು ಪುರುಷ ಪರವಾಗಿದ್ದುದೇ ಕಾರಣವಾಗಿತ್ತು. ಸಾಮಾಜಿಕ ನಿಯಮಗಳೂ ಪುರುಷಪರ ಜೀವನಮೌಲ್ಯಗಳೂ ಪರಸ್ಪರ ಒಂದರಲ್ಲೊಂದು ಗುರುತಿಸಿಕೊಂಡು ಪ್ರತಿಬಿಂಬಿತವಾಗಿದ್ದವು. ಆದ್ದರಿಂದ ಅದು ಸ್ತ್ರೀಯರ ಜೀವಿತದ ಹಕ್ಕುಗಳನ್ನು ಇನ್ನಿಲ್ಲದಂತೆ ಪ್ರತಿಬಂಧಿಸಿದೆ ಹಾಗೂ ಅವರ ವಿರುದ್ಧ ಅತಿ ಕಠಿಣವಾಗಿ, ಅತಿ ಕ್ರೂರವಾಗಿ, ಅಮಾನವೀಯವಾಗಿ ಮತ್ತು ಅನಾಗರಿಕವಾಗಿ ನಡೆದುಕೊಂಡಿದೆ.

೧೯ನೆಯ ಶತಮಾನದಲ್ಲಿ ನೆಲೆಸಿದ್ದ ಉಸಿರು ಬಿಗಿ ಹಿಡಿದ ಸ್ತ್ರೀಯರ ಸಾಮಾಜಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಅಂದಿನ ಆಕೆ ಎದುರಿಸಿದ ಇತರ ಪ್ರಮುಖ ಸಮಸ್ಯೆಗಳನ್ನು ಕಾದಂಬರಿಗಳು

ಚಿತ್ರಿಸಿರುವ ಬಗೆ ಯಾವುದೆಂದು ಪರಿಶೀಲಿಸಬಹುದು. ಒಟ್ಟಾರೆಯಾಗಿ ಆರಂಭದ ಕನ್ನಡ-ತೆಲುಗು ಕಾದಂಬರಿಗಳಲ್ಲಿ ವಿವರಿಸಲಾದ ಬಾಲ್ಯ ವಿವಾಹ, ಸ್ತ್ರೀ ಶಿಕ್ಷಣ, ವರದಕ್ಷಿಣೆ, ಸತಿ ಪದ್ಧತಿ, ವಿಧವಾ ವಿವಾಹ ಎಂಬ ಬಹು ಚರ್ಚಿತ ವಿಷಯಗಳನ್ನು ವರ್ಗೀಕರಿಸಿ ಉಪಶೀರ್ಷಿಕೆಗಳಡಿ ವಿಶ್ಲೇಷಿಸಬಹುದು.

ಬಾಲ್ಯ ವಿವಾಹ

ಸಂಘಜೀವಿಯಾದ ಮಾನವನ ಲೈಂಗಿಕ ಜೀವನ ಮತ್ತು ಮಾನವನ ಸಾಮಾಜಿಕ ಸಂಬಂಧವನ್ನು ನಿರ್ದಿಷ್ಟ ಪಡಿಸುವ ಉದ್ದೇಶದಿಂದಲೆ ವಿವಾಹ ಸಂಸ್ಥೆ ಹುಟ್ಟಿಕೊಂಡಿದೆ. ವ್ಯಕ್ತಿಯೊಬ್ಬ ಪ್ರಾಪ್ತ ವಯಸ್ಕನಾಗದೆ ಲೈಂಗಿಕ ಜೀವನ ನಡೆಸಲು ಸಾಧ್ಯವಿಲ್ಲದ ಕಾರಣ ಮದುವೆಗೂ ಮದುವೆಯಾಗುವ ವಯಸ್ಸಿಗೂ ಸಂಬಂಧ ಬೆಸೆಯಲಾಗಿದೆ. ಹಾಗಾಗಿ ಪ್ರಾಪ್ತ ವಯಸ್ಕರಿಗೆ ಮಾತ್ರ ವಿವಾಹವಾಗುವ ಅವಕಾಶ ಒದಗಿಸಿದೆ. ಆದರೂ ಲೈಂಗಿಕ ಜೀವನ ನಡೆಸುವ ಸಾಮರ್ಥ್ಯ ಮತ್ತು ಆಸಕ್ತಿ ಪ್ರಾಪ್ತ ವಯಸ್ಕನಾಗುವ ಮೊದಲೆ ಬೆಳವಣಿಗೆಯಾಗುತ್ತದೆ. ಇದೊಂದೆ ಮದುವೆಗೆ ಪ್ರಾಪ್ತ ವಯಸ್ಕರಾಗಲು ಅರ್ಹತೆಯನ್ನು ತಂದುಕೊಡುವುದಿಲ್ಲ. ಗರ್ಭ ಧರಿಸಲು ಮತ್ತು ಗರ್ಭಸ್ಥ ಮಗು ತಾಯಿಯಿಂದ ಸಂಪೂರ್ಣ ಪೋಷಣೆಯಡಿ ಬೆಳವಣಿಗೆ ಪಡೆಯಲು ತಾಯಿಯ ಆರೋಗ್ಯ ಸದೃಢತೆಯಿಂದ ಕೂಡಿರಬೇಕಾದುದು ಅಗತ್ಯ. ಹಾಗಾಗಿ ಮಾನವ ದೇಹ ಹುಟ್ಟಿನಿಂದ ಸಂಪೂರ್ಣ ಬೆಳವಣಿಗೆ ಹೊಂದುವ ವಯಸ್ಸಿನವರೆಗೆ ಮದುವೆಗೆ ಅಪ್ರಾಪ್ತನಾಗಿರುತ್ತಾಳೆ/ನೆ.

ಅಪ್ರಾಪ್ತ ವಯಸ್ಸಿನಲ್ಲಿ ಗರ್ಭ ಧರಿಸುವುದರಿಂದ ತಾಯಿ ಮತ್ತು ಹುಟ್ಟುವ ಮಗುವಿನ ಪೋಷಣೆ, ದೈಹಿಕ ಬೆಳವಣಿಗೆ, ಆರೋಗ್ಯ ಮತ್ತು ಜೀವಿತದ ಅವಧಿಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇದರಿಂದ ಮಹಿಳೆಯರ ಮತ್ತು ಮುಂದಿನ ಜನಾಂಗದ ಮಾನಸಿಕ ಮತ್ತು ದೈಹಿಕ ಆರೋಗ್ಯ ಹದಗೆಟ್ಟು ಅನಾರೋಗ್ಯ ಪೀಡಿತ ಸಮಾಜದ ಹುಟ್ಟಿಗೆ ಕಾರಣವಾಗಲಿರುವುದರಿಂದ ಬಾಲ್ಯ ವಿವಾಹ ಸಾಮಾಜಿಕ ಸಮಸ್ಯೆಯಾಗಿದೆ.

ಬುಡಕಟ್ಟು ಸಮಾಜದಲ್ಲಿ ವಯಸ್ಸಿಗೆ ಬಂದ ಹುಡುಗ ಹುಡುಗಿ ಮನೆಯಿಂದ ಓಡಿಹೋಗಿ ಕಾಡಿನಲ್ಲಿ ಒಂದು ಅಥವಾ ಎರಡು ರಾತ್ರಿ ಕಳೆದು ಮರಳಿ ತಮ್ಮ ವಾಸಸ್ಥಾನಕ್ಕೆ ಬಂದಲ್ಲಿ ಅವರು ಪರಸ್ಪರ ಇಷ್ಟಪಟ್ಟಿರುವ ಸೂಚಕವಾಗಿ ಮದುವೆ ನಡೆಯುತ್ತದೆ. ಮಾನವ ಸಮಾಜದ ಆರಂಭಿಕ ಹಂತದಿಂದಲೂ ವಯಸ್ಕ ಮದುವೆಗೆ ಆದ್ಯತೆಯಿದ್ದುದಕ್ಕೆ ಇದು ಉದಾಹರಣೆಯಾಗಿದೆ. ಭಾರತದ ಶಿಷ್ಟ ಸಮಾಜ ಮಾತೃಮೂಲ/ಪ್ರಧಾನ ಸಮಾಜದಿಂದ ಪುರುಷ ಪ್ರಧಾನ ಸಮಾಜವಾಗಿ ಬದಲಾಯಿತು. ಆ ಹಂತದಲ್ಲಿ ಕ್ಷೇತ್ರ (ಹೊಲ, ಹೆಣ್ಣು) ಕಲ್ಪನೆಯನ್ನು ಕೀಳುಗಳೆದು ಕ್ಷೇತ್ರಜ್ಞ (ಬೀಜ, ಪುರುಷ) ಕಲ್ಪನೆಯ ಮಹತ್ವವನ್ನು ಸ್ಥಾಪಿಸಲಾಯಿತು. ಸಂತಾನೋತ್ಪತ್ತಿಯಲ್ಲಿ ಹೆಣ್ಣಿನ ಪಾತ್ರ ಮತ್ತು ಸ್ಥಾನವನ್ನು ಅಪಮೌಲ್ಯಕ್ಕೆ ಒಳಪಡಿಸಿತು. ಇದರಿಂದ ಸಮಾಜ ಮುನ್ನಡೆಯುವ ಕಲ್ಪನೆಯಲ್ಲಿ ಮಹಿಳೆಯರ

ಪಾತ್ರವನ್ನು ಗೌಣಗೊಳಿಸಿ ಕಾಣಲಾರಂಭವಾಯಿತು. ಹೆಣ್ಣಿನ ಲೈಂಗಿಕ ಜೀವನವನ್ನು ಪುರುಷ ವಂಶ ಪಾವಿತ್ರ್ಯದ ಹಿಡಿತಕ್ಕೆ ಒಳಪಡಿಸಿತು, ಮಾತ್ರವಲ್ಲ ಮಹಿಳೆಯರ ಅಸ್ತಿತ್ವವನ್ನು ಲೈಂಗಿಕತೆಗೆ ಸೀಮಿತಗೊಳಿಸಿತು. ಅಲ್ಲದೆ ಹಿಂದೂ ಸಮಾಜದ ಪುರುಷ ಹಿತಾಸಕ್ತಿಗೆ ಅನುಗುಣವಾಗಿ ಸ್ತ್ರೀಯರು ಇರಬೇಕೆಂದು ಬಯಸಿತು. ಅದಕ್ಕೆ ಪೂರಕವಾದ ಜೀವನಮೌಲ್ಯಗಳನ್ನು ರೂಪಿಸಿ ಮಹಿಳೆಯರ ಮೇಲೆ ಹೇರುವ ಕ್ರಮದಲ್ಲೆ ವಿಧಿಸಿತು. ಅದರ ಪರಿಣಾಮವಾಗಿ ಆಚರಣೆಗೆ ಬಂದ ಕಟ್ಟುಪಾಡುಗಳಲ್ಲಿ ಬಾಲ್ಯ ವಿವಾಹವೂ ಒಂದಾಗಿದೆ. ಮಹಿಳೆ ಪುರುಷ ಅಧೀನ ಕಲ್ಪನೆಯಲ್ಲಿ ಸಾಮಾಜಿಕ ತಾರತಮ್ಯ ನೀತಿಗೆ ಒಳಗಾಗಿ ಪ್ರಾಕೃತಿಕವಾದ ಲಿಂಗ ಅನುಪಾತದ ಮೇಲೆ ಪ್ರಭಾವ ಬೀರಿದೆ. ಹೀಗಾಗಿದು ಸಾಮಾಜಿಕ ಸಮಸ್ಯೆಯ ಸ್ವರೂಪವನ್ನು ದ್ವಿಗುಣಗೊಳಿಸಿದೆ. ಈ ಹಿನ್ನೆಲೆಯಲ್ಲಿ ಬಾಲ್ಯ ವಿವಾಹ ಚಿತ್ರಿತವಾದ ಕ್ರಮವನ್ನು ಪರಿಶೀಲಿಸಬಹುದು.

ವೀರೇಶಲಿಂಗಂ ಪಂತುಲು ಅವರ ರಾಜಶೇಖರ ಚರಿತ್ರಮು ಕಾದಂಬರಿಯಲ್ಲಿ ಶ್ರೀಮಂತನಾದ ರಾಜಶೇಖರ ಆಪತ್ತಿಗೆ ಸಿಲುಕಿದ ತನ್ನ ಮಗಳಿಗೆ ಶಿಕ್ಷಣ ದೊರಕುವಂತೆ ಮಾಡುವುದು, ಸಮಾಜದಲ್ಲಿ ತಮ್ಮ ಕಷ್ಟ ಹೇಳಿಕೊಂಡು ಬಂದ ಎಲ್ಲರಿಗೂ- ಅವರು ನೆರವು ಪಡೆಯಲು ಪಾತ್ರರೋ ಅಪಾತ್ರರೋ ಎಂದು ವಿವೇಚಿಸದೆ – ಸಹಾಯ ಮಾಡುವುದು ಇಂಥ ಅವನ ಉದಾರ ಚರಿತೆ ಈ ಕಾದಂಬರಿಯಲ್ಲಿದೆ. ಮೇಲುನೋಟಕ್ಕೆ ರಾಜಶೇಖರ ಪ್ರಗತಿಪರ ವಿಚಾರಗಳನ್ನು ಪ್ರತಿಪಾದಿಸುವಂತೆ ಕಾಣುತ್ತಾನೆ. ಆದರೆ ಸ್ವತಃ ತನ್ನ ಮಗಳಾದ ರುಕ್ಮಿಣಿಗೆ ಅಪ್ರಾಪ್ತ ವಯಸ್ಸಿನಲ್ಲಿ ಮದುವೆ ಮಾಡಿರುತ್ತಾನೆ. ಅಲ್ಲದೆ ತನ್ನ ಅಕ್ಕ ಸತ್ತು ಹೋಗಿ ವಿದುರನಾದ ಭಾವನಿಗೆ ಒಂಬತ್ತನೆಯ ವರ್ಷದ ಅಪ್ರಾಪ್ತ ಬಾಲಕಿಯನ್ನು ತಂದು ಎರಡನೆಯ ಮದುವೆ ಮಾಡಿಸುತ್ತಾನೆ. ಇದು ಆತನ ಪ್ರಗತಿಪರ ವಿಚಾರಗಳಿಗೂ ನಡವಳಿಕೆಗಳಿಗೂ ಅಂತರವನ್ನು ಉಂಟು ಮಾಡಿದೆ.

ರಾಜಶೇಖರನ ಮಗಳಾದ ರುಕ್ಮಿಣಿ ಹದಿಮೂರನೇ ವಯಸ್ಸಿನಲ್ಲಿರುವಾಗಲೇ ಅವಳ ಗಂಡ ಊರು ಬಿಟ್ಟು ದೇಶಾಂತರಕ್ಕೆ ಹೊರಟು ಹೋಗಿರುತ್ತಾನೆ. ಆ ಹೊತ್ತಿಗೆ ಅವಳ ಮದುವೆಯಾಗಿ ಏನಿಲ್ಲದಿದ್ದರೂ ಒಂದೆರಡು ವರ್ಷವಾಗಿರಬಹುದೆಂದು ಊಹಿಸಬಹುದು. ಈ ಬಗ್ಗೆ ಕಾದಂಬರಿ ಮೌನ ವಹಿಸಿದೆ. ಇದು ಎರಡು ಬಗೆಯ ಅರ್ಥವನ್ನು ಓದುಗನಿಗೆ ಬಿಟ್ಟು ಕೊಡಬಲ್ಲುದು. ಮೊದಲನೆಯದಾಗಿ ಆ ಕಾಲದಲ್ಲಿ ಬಾಲ್ಯ ವಿವಾಹ ಸಹಜವೂ ವ್ಯಾಪಕವೂ ಆಗಿತ್ತು ಎಂಬುದು. ಎರಡನೆಯದು ಬಾಲ್ಯ ವಿವಾಹ ಒಂದು ಸಾಮಾಜಿಕ ಸಮಸ್ಯೆ ಎಂಬ ಅರಿವು ಕಾದಂಬರಿಯ ನಿರೂಪಣಾ ಪ್ರಜ್ಞೆಯಲ್ಲಿ ನೆಲೆಸಿರದ ಕಾರಣ ಆ ವಿಚಾರವನ್ನು ಕಡೆಗಣಿಸಿದೆ ಎಂಬುದು. ಈ ಕೃತಿಯ ಲೇಖಕರು ಸ್ವತಃ ಪ್ರಗತಿಪರ ವಿಚಾರಧಾರೆವುಳ್ಳವರಾಗಿ ಸಮಾಜವನ್ನು ಸುಧಾರಿಸುವಲ್ಲಿ ಸಾಕಷ್ಟು ಕಾರ್ಯಗಳನ್ನು ಮಾಡಿರುವುದು ಅವರ ಆತ್ಮ ಚರಿತ್ರೆಯಿಂದ ತಿಳಿದುಬರುತ್ತದೆ. ವಿಶೇಷವಾಗಿ

ಸ್ತ್ರೀಯರ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ಅವರು ನಡೆಸಿದ ಹೋರಾಟ ವಿಖ್ಯಾತವಾದುದು. ಹಾಗಾಗಿ ಎರಡನೆಯ ಅಂಶವಿಲ್ಲಿ ಅನ್ವಯವಾಗುವುದಿಲ್ಲವೆಂದು ಹೇಳಬಹುದು. ಸಾಮಾಜಿಕ ಕಟ್ಟುಕಟ್ಟಳೆಗಳ ವಿರುದ್ಧ ಒಬ್ಬ ವ್ಯಕ್ತಿಯ ವೈಚಾರಿಕ ನೆಲೆಗಟ್ಟು ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಸಾಮೂಹಿಕ ಆಚರಣೆಗಳು ಒಂದೇ ಆಗಿರುವುದಿಲ್ಲ ಎಂಬುದು ಲೇಖಕರ ಮತ್ತು ಈ ಕಾದಂಬರಿಯ ರಾಜಶೇಖರನ ನಿದರ್ಶನದಿಂದಲೂ ತಿಳಿಯುತ್ತದೆ.

ಒಮ್ಮೆ ರುಕ್ಮಿಣಿ ತನ್ನ ನೆರೆಮನೆಯ ಸೋಮದೇವಮ್ಮನ ಜೊತೆ ಮಾತನಾಡುತ್ತ ಇದ್ದಾಗ ಬಾಲ್ಯ ವಿವಾಹ ಸಮಸ್ಯೆ ಕುರಿತು ಪ್ರಸ್ತಾಪವಾದ ಸಂದರ್ಭವೊಂದು ನಿರೂಪಣೆಯಾಗಿದೆ. ರುಕ್ಮಿಣಿ ಸೋಮದೇವಮ್ಮನಿಗೆ ಹೀಗೆ ಕೇಳುತ್ತಾಳೆ. "ನಿಮ್ಮ ಮನೆಯವರು ಜ್ಯೋತಿಷ್ಯ ಬಲ್ಲವರು, ಸಿದ್ಧಾಂತಿಗಳು. ಎಲ್ಲವನ್ನು ತಿಳಿದಿದ್ದು ಅಷ್ಟು ಚಿಕ್ಕ ವಯಸ್ಸಿನ ನಿಮ್ಮ ಮಗಳಿಗೆ ವಯಸ್ಸಾದ ಮುದುಕನೊಂದಿಗೆ ಮದುವೆ ಮಾಡಿದಿರಲ್ಲ". ಅದಕ್ಕೆ ಸೋಮದೇವಮ್ಮ "ಅವರವರ ಕರ್ಮಕ್ಕೆ ಅವರವರೇ ಕಾರಣಕರ್ತರು. ಅವಳು ಮುಂಡೆಯಾಗುವುದು ಅವಳ ಹಣೆಯಲ್ಲಿ ಬರೆದಿದ್ದರೆ ಅದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ಯಾರೇ ಆಗಲಿ ಜಾತಕ ನೋಡಿ ಮದುವೆ ಮಾಡಬಲ್ಲರೇ ವಿನಃ ವರನಿಗೆ ಇರಲಾರದ ಆಯಸ್ಸನ್ನು ತರಬಲ್ಲರೇ?" ಎಂದು ಉತ್ತರಿಸುತ್ತಾಳೆ.

ರುಕ್ಮಿಣಿ ಸ್ವತಃ ಅಪ್ರಾಪ್ತ ವಯಸ್ಸಿನಲ್ಲಿ ಮದುವೆಯಾಗಿದ್ದರೂ ತನಗೂ ತನ್ನ ಗಂಡನಿಗೂ ಹೆಚ್ಚು ವಯಸ್ಸಿನ ಅಂತರ ಇಲ್ಲದ್ದನ್ನು ಆಕೆ ಗಮನಿಸಿದ್ದಿರಬೇಕು. ಆದರೆ ನೆರೆಮನೆಯ ಚಿಕ್ಕ ಹುಡುಗಿಗೆ ಮುದುಕನೊಂದಿಗೆ ಮಾಡಿದ ಮದುವೆ ಅಸಹಜವೆಂದು ಅವಳಿಗೆ ಅನ್ನಿಸಿದೆ. ಹಾಗಾಗಿ ಈ ಕುರಿತು ಪ್ರಶ್ನೆ ಮಾಡಿದ್ದಾಳೆ. ಸೋಮದೇವಮ್ಮ ತನ್ನ ಮಗಳ ಜೀವನ ಕುರಿತು ನೀಡಿದ ಉತ್ತರ ಪಾರಂಪರಿಕ ಮೌಲ್ಯವನ್ನು ಪ್ರತಿಬಿಂಬಿಸುವ ಚಿಂತನೆಗಳಂತಿವೆ. ಮಾನವ ಪ್ರಯತ್ನಕ್ಕಿಂತ ವಿಧಿ ಬರಹ ಮತ್ತು ಕರ್ಮಸಿದ್ಧಾಂತ ಪ್ರಬಲವಾದುದು ಎಂಬ ಅವಳ ನಂಬಿಕೆ ಸಮಾಜದಲ್ಲಿ ಬೇರುಬಿಟ್ಟ ಸಂಪ್ರದಾಯನಿಷ್ಠತೆಯನ್ನು ಪರಿಚಯಿಸುತ್ತದೆ.

ಇದೇ ಲೇಖಕರ **ಸತ್ಯವತೀ ಚರಿತ್ರೆ**ಯಲ್ಲಿ ಸತ್ಯವತಿಯ ಮದುವೆ ಹನ್ನೆರಡನೆಯ ವಯಸ್ಸಿನಲ್ಲಿ, ಮಹಾಲಕ್ಷ್ಮಿಯ ಮದುವೆ ಹನ್ನೊಂದನೆಯ ವಯಸ್ಸಿನಲ್ಲಿ, ಸೂರಮ್ಮಳ ಮದುವೆ ಹತ್ತನೆಯ ವಯಸ್ಸಿನಲ್ಲಿ ಜರುಗುತ್ತವೆ, ಅಲ್ಲದೆ ಸಾವಿತ್ರಿ ಮತ್ತು ಸೀತೆ ತಮ್ಮ ಅಪ್ರಾಪ್ತ ವಯಸ್ಸಿನಲ್ಲಿಯೆ ವಿವಾಹವಾಗುವ ವಿವರಗಳೂ ಇವೆ. ಇವನ್ನು ಸಮಕಾಲೀನ ಸಮಾಜದಲ್ಲಿ ನೆಲೆಗೊಂಡಿದ್ದ ವಿವಾಹ ಕುರಿತ ರೀತಿ-ನೀತಿಯನ್ನು ಸೂಚಿಸುವ ಕ್ರಮವಾಗಿ ನೋಡಬಹುದು. ಇವುಗಳಲ್ಲಿ ಬಾಲ್ಯ ವಿವಾಹ ಒಂದು ಸಾಮಾಜಿಕ ಸಮಸ್ಯೆ ಎಂದು ಅರಿಯದೆ ನಡೆದ ವಿವಾಹಗಳು ಸಾಂಪ್ರದಾಯಿಕ ಅಂಧಶ್ರದ್ಧೆಯ ನೆರಳಲ್ಲಿ ನಡೆದಿವೆ. ಆದರೆ ಬಾಲ್ಯ ವಿವಾಹ ಹೆಣ್ಣಿನ ಜೀವನವನ್ನು ಸಮಸ್ಯೆಯ ಸುಳಿಗೆ ಸಿಲುಕಿಸುತ್ತದೆ

ಎಂಬ ಅರಿವಿದ್ದೂ ಬಾಲ್ಯ ವಿವಾಹಗಳು ನಡೆಯುತ್ತಿದ್ದವೆಂದು ಕಾಣಿಸಲಾಗಿದೆ. ಇದಕ್ಕೆ ನಿದರ್ಶನವಾಗಿ ಸಾವಿತ್ರಿಯ ಮದುವೆಯ ವಿವರವನ್ನು ನೋಡಬಹುದು.

ಯಶೋದಮ್ಮಳ ಹಿರಿಯ ಮಗ ವೆಂಕಟೇಶನ ಮದುವೆಗೆ ಒಡವೆಗಳು ಬೇಕಾಗಿತ್ತು. ಅದಕ್ಕಾಗಿ ತನ್ನ ಹಿರಿಯ ಮಗಳು ಸಾವಿತ್ರಿಯನ್ನು ಆಕೆ ಎಪ್ಪತ್ತು ವರ್ಷ ವಯಸ್ಸಿನ ಮೂರನೆಯ ಮದುವೆಯ ವರನಿಗೆ ಕೊಟ್ಟು ಅಪ್ರಾಪ್ತ ವಯಸ್ಸಿನಲ್ಲಿಯೆ ಮದುವೆ ಮಾಡಿಕೊಟ್ಟ ವಿವರಗಳಿವೆ. ಆಕೆಗೆ ಮಗನ ಮದುವೆಗೆ ಅಗತ್ಯವಾದ ಒಡವೆಗಳನ್ನು ಕೊಳ್ಳುವುದು ಮುಖ್ಯವಾಗಿತ್ತು. ಅದಕ್ಕಾಗಿ ಅವಳು ತನ್ನ ಅಪ್ರಾಪ್ತ ಮಗಳನ್ನು ಮದುವೆ ಮಾರುಕಟ್ಟೆಯಲ್ಲಿ ಐದು ಸಾವಿರ ರೂಪಾಯಿಗಳಿಗೆ ಮಾರಲು ಸಿದ್ಧ. ಅವಳಿಗೆ ಮಗಳ ಜೀವನಕ್ಕಿಂತ ಮಗನ ಜೀವನವೇ ಪ್ರಧಾನವಾದ ಸಂಗತಿಯನ್ನು ಇಲ್ಲಿ ಕಾಣಬಹುದು. ಮನೆಯ ಮಗ ಮನೆಯ ಜವಾಬ್ದಾರಿ ಹೊರುವ ಯಜಮಾನನಾಗುವುದರಿಂದ ಅವನ ಬೇಡಿಕೆಗಳಿಗೆ ಮೊದಲ ಆದ್ಯತೆ ಮತ್ತು ಮಗಳು ಅನ್ಯ ಮನೆಯ ಸೊಸೆಯಾಗುವುದರಿಂದ ಆಕೆಯ ಬಗ್ಗೆ ತಾತ್ಸಾರ ಮನೋಭಾವ ಬೇರುಬಿಟ್ಟಿರುವುದನ್ನು ಹಿಂದೂ ಸಮಾಜದ ಪರಂಪರೆಯಲ್ಲಿ ಗುರುತಿಸಬಹುದು. ಮಗನಾಗಲೀ ಮಗಳಾಗಲೀ ಇಬ್ಬರ ಜೀವನವೂ ಜೀವವೂ ಸಮಾನ ಪ್ರಾಮುಖ್ಯತೆ ಪಡೆದಿರುವ ಅಂಶವಾಗಿದೆ. ಆದರಿದನ್ನು ಸಾಂಪ್ರದಾಯಿಕ ಸಮಾಜ ಕಡೆಗಣಿಸುವುದರ ಹಿಂದೆ ಪುರುಷಪರ ಮೌಲ್ಯಗಳು ಸಕ್ರಿಯವಾಗಿರುವುದನ್ನು ಗುರುತಿಸಬಹುದು.

ಇಂಥ ಸಂದರ್ಭದಲ್ಲಿ ಹೆಣ್ಣು ಕೇವಲ ಪುರುಷರ ಅಗತ್ಯಗಳನ್ನು ಪೂರೈಸುವ ಒಂದು ಉಪಕರಣ ಮಾತ್ರವಾಗಿದ್ದಳು. ಬಾಲ ವಿಧವೆಯಾದ ಬಹುಪಾಲು ಬಾಲಕಿಯರು ವಿಧವೆಯರಾಗಿ ಸತಿಸಹಗಮನ ಮಾಡಿ ಜೀವ ಕಳೆದುಕೊಳ್ಳುತ್ತಿದ್ದರು, ಇಲ್ಲವೆ ವಿಧವೆಯರಾಗಿ ಅಡ್ಡ ಹಾದಿಯಲ್ಲಿ ಪುರುಷರ ಕಾಮನೆಗಳಿಗೆ ತುತ್ತಾಗಿ ಬದುಕನ್ನು ನರಕಮಯವನ್ನಾಗಿಸಿಕೊಳ್ಳುತ್ತಿದ್ದರು. ಸಾಂಪ್ರದಾಯಿಕ ಜೀವನ ಮೌಲ್ಯದಡಿ ಹೆಣ್ಣು ಕೇವಲ ತೊತ್ತಾಗಿ ಉಳಿದಿದ್ದಳು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

"ಜೀವನಪೂರ್ತಿ ಸುಖ ದುಃಖಗಳಿಗೆ ಭಾಗಿಗಳಾಗಬೇಕಾದ ಇಷ್ಟಾನುಸಾರ ಮದುವೆಯಾಗುವ ಕಾಲ ಹೋಗಿ ಮಾತನಾಡುವುದಕ್ಕೂ ಚೆನ್ನಾಗಿ ತಿಳಿಯದ ಹಸುಳೆಗಳಿಗೆ ತಮ್ಮ ವಿನೋದಾರ್ಥವಾಗಿ ಮದುವೆ ಮಾಡಿ, ಅವರನ್ನು ಪಲ್ಲಕ್ಕಿಗಳಲ್ಲಿ ಕುಳ್ಳಿರಿಸಿ, ಮೆರವಣಿಗೆ ಮಾಡಿಸಿ, ಅಮರಣಾಂತವಾಗಿ ದುಃಖವೆಂಬ ಸೆರೆಗೆ ಸಿಕ್ಕಿಸುವ ಕಾಲ ಬಂದಿತು" (ಸತ್ಯವತಿ ಚರಿತ್ರೆ, ೧೮೮೩:೨) ಎಂದು ನಿರೂಪಕ ಕಥೆಯ ಆರಂಭದಲ್ಲಿ ತನ್ನ ಅಭಿಪ್ರಾಯ ಮಂಡಿಸುತ್ತಾನಾದರೂ ಇದಕ್ಕೆ ವಿರುದ್ಧವಾಗಿ ಕಾದಂಬರಿಯಲ್ಲಿ ಬಾಲ್ಯವಿವಾಹಗಳು ಜರುಗುವುದು ಕಾಣುತ್ತದೆ.

ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಕಾದಂಬರಿಯಲ್ಲಿ ಎರಡು ಬಗೆಯ ಮದುವೆಗಳು ಕುರಿತು ಬಣ್ಣನೆಯಿದೆ. ೧. ಬಾಲ್ಯ ವಿವಾಹ ೨. ವಯಸ್ಕ ವಿವಾಹ. ಈ ಎರಡೂ ಮದುವೆಗಳು

ಕಾದಂಬರಿಯ ನಾಯಕಿ ಇಂದಿರಾಬಾಯಿಯ ಮದುವೆಯೇ ಆಗಿವೆ. ಬಾಲ್ಯ ವಿವಾಹ ಆಕೆಯ ಹೆತ್ತವರಾದ ಅಂಬಾಬಾಯಿ ಮತ್ತು ಭೀಮರಾಯರ ಇಚ್ಛೆಯ ಮೇರೆಗೆ ನಡೆಯುತ್ತದೆ. "ಇಂದಿರೆಗೆ ಏಳು ವರುಷಗಳು ತುಂಬಿ ಎಂಟನೆಯದು ನಡೆಯುತ್ತಿದೆ. ಅವಳ ಕಲ್ಯಾಣದ ವಿಷಯವೇನಾದರೂ ಆಲೋಚಿಸಿದ್ದಿರಾ?" ಎಂದು ಅವಳ ತಾಯಿ ಅಂಬಾಬಾಯಿ ತನ್ನ ಗಂಡ ಭೀಮರಾಯನಿಗೆ ಮಗಳ ಮದುವೆಯ ಪ್ರಸ್ತಾಪ ಮಾಡುತ್ತಾಳೆ. ಅಂಬಾಬಾಯಿ ಒಬ್ಬ ಹೆಣ್ಣಾಗಿ ಹೆಣ್ಣಿನ ಮದುವೆಯ ವಯಸ್ಸು ಏಳು ಅಥವಾ ಎಂಟನೆಯ ವರ್ಷ ಎಂದು ನಂಬಿದ್ದಾಳೆ. ಸನಾತನವಾಗಿ ನಡೆದುಬಂದ ಎಲ್ಲ ಆಚಾರ-ವಿಚಾರಗಳನ್ನು ಆಕೆ ಚಾಚೂ ತಪ್ಪದೆ ಪಾಲಿಸುವವಳೂ ಅವನ್ನು ಸಮರ್ಥಿಸುವ ಮನೋಭಾವದವಳೂ ಆಗಿದ್ದಾಳೆ. ಆದ್ದರಿಂದ ಆಕೆಯ ವ್ಯಕ್ತಿತ್ವದಲ್ಲಿ ರೂಢಿಗತ ಆಚಾರಗಳನ್ನು ಪ್ರಶ್ನಿಸುವ ಪ್ರವೃತ್ತಿಯಾಗಲೀ ಅದರಲ್ಲಿರಬಹುದಾದ ಲೋಪದೋಷಗಳ ಕುರಿತು ವಿವೇಚನೆ ಮಾಡುವ ಶಕ್ತಿಯಾಗಲೀ ಸರಿಪಡಿಸುವ ನೋಟವಾಗಲೀ ಕಾಣುವುದಿಲ್ಲ. ಇಂಥ ಅಂಬಾಬಾಯಿ ತನ್ನ ಮಗಳಿಗೆ ಏಳೆಂಟು ವರ್ಷ ತುಂಬಿದ ಕಾಲದಲ್ಲಿ ಮದುವೆ ಮಾಡಲು ಮುಂದಾಗುವುದು ಸ್ತ್ರೀಯರೇ ಸಂಪ್ರದಾಯವನ್ನು ಸಮರ್ಥಿಸುವವರೂ ಪರಿಪಾಲಿಸುವವರೂ ಆಗಿರುತ್ತಾರೆಂದು ಸೂಚಿಸುವುದು ಲೇಖಕರ ಉದ್ದೇಶದಂತಿದೆ. ಇಡೀ ಕಾದಂಬರಿಯ ನಿರೂಪಣೆಯ ಧಾಟಿ-ಧೋರಣೆಗಳು ಸಂಪ್ರದಾಯ ವಿರುದ್ಧವಾಗಿ ಕಾಣುತ್ತವೆ. ಆದರೆ ಅಂಬಾಬಾಯಿಯ ಈ ನಿಲುವು ಮೌಢ್ಯತೆಯಿಂದ ಕೂಡಿದೆ. ಸ್ತ್ರೀಯೆ ಹೆಣ್ಣಿನ ಸಂಕಷ್ಟಗಳಿಗೆ ಸ್ಪಂದಿಸದೆ ಸ್ತ್ರೀ ವಿರೋಧಿಯಾಗಿ ನಡೆದುಕೊಳ್ಳುವ ಚಿತ್ರಣವಿದೆ. ಆಕೆ ಒಬ್ಬ ಸಾಮಾನ್ಯ ಸಂಪ್ರಾದಾಯನಿಷ್ಠೆ ಮಹಿಳೆ ಎಂದು ಚಿತ್ರಿಸುವುದು ಇಲ್ಲಿ ಮುಖ್ಯವಾದಂತಿದೆ.

ಹಾಗೆಂದು ಅಂಬಾಬಾಯಿ ಬುದ್ಧಿಹೀನ ಹೆಣ್ಣುಮಗಳಲ್ಲ. ಆಕೆ ತನ್ನ ಗಂಡನನ್ನೇ ತನ್ನ ಅಭಿಪ್ರಾಯಕ್ಕೆ ತಕ್ಕಂತೆ ರೂಪಿಸಬಲ್ಲವಳು. ತನ್ನ ಸುತ್ತಲಿನ ಪ್ರತಿಯೊಂದೂ ವ್ಯವಹಾರವನ್ನು ತನಗೆ ಅನುಕೂಲವಾಗುವಂತೆ ದಾಳ ಹಾಕಬಲ್ಲ ಚತುರೆಯೂ ಆಗಿರುವಳು. ಅಂಥ ಅಂಬಾಬಾಯಿ ಧರ್ಮದ ಹಿರಿಮೆಯನ್ನು ಎತ್ತಿ ಹಿಡಿಯುವವಳೂ ಜಾತಿಯ ಕಟ್ಟು ಕಟ್ಟಳೆಯ ಮರ್ಯಾದೆಯನ್ನು ಮೀರದವಳೂ ಅದನ್ನು ಪ್ರತಿಪಾದಿಸುವವಳೂ ಆಗಿದ್ದಾಳೆ. ಅವಳಿಂದ ಪ್ರಸ್ತಾಪವಾದ ಮಗಳ ಬಾಲ್ಯವಿವಾಹ ಅವಳ ವ್ಯಕ್ತಿತ್ವಕ್ಕೆ ತಕ್ಕಂತೆ ಇದೆ.

ತಂದೆಯಾದ ಭೀಮರಾಯ ಹೆಂಡತಿ ಅಂಬಾಬಾಯಿ ಹಾಕಿದ ಗೆರೆಯನ್ನು ದಾಟಲಾಗದವನು. ಆದರೂ ಆತ ಹುಡುಗನ ಮನೆಯವರೊಂದಿಗೆ ಮದುವೆಯ ಪ್ರಸ್ತಾಪ ಮಾಡುತ್ತ ಆಡುವ ಮಾತು ಗಮನಾರ್ಹವಾದುದು. ವಧುವರರ ಜಾತಕ ಕೂಡಿ ಬರುವ ಬಗ್ಗೆ ಮಾತನಾಡುತ್ತ "ಸರ್ವಕೂಟಗಳಲ್ಲಿ ಮನೋಕೂಟವೇ ಮುಖ್ಯ"(ಪು.೭೯) ಎಂದು ಹೇಳುತ್ತಾನೆ. ಇದು ಲೋಕಾಭಿರಾಮದ ಮಾತೇ ಹೊರತು ಭೀಮರಾಯನ ವಿವೇಚನೆಯಿಂದ ಹೊಮ್ಮಿದ್ದಲ್ಲ. ಹಾಗಾಗಿ ಭೀಮರಾಯ ತನ್ನ ಮಗಳ

ಅಪ್ರಾಪ್ತ ವಯಸ್ಸಿನ ಬಗ್ಗೆಯಾಗಲೀ ಮದುವೆಯಲ್ಲಿ ವಧುವರರ ಅಭಿಪ್ರಾಯಕ್ಕೆ ಮನ್ನಣೆ ನೀಡುವ ನಿಲುವಾಗಲೀ ಕೊನೆಯ ಪಕ್ಷ ವಯಸ್ಕ ಮದುವೆ ಮಾಡಬೇಕೆನ್ನುವ ಅಭಿಪ್ರಾಯವಾಗಲೀ ಅವನಲ್ಲಿ ಒಂದೂ ಕಾಣುವುದಿಲ್ಲ.

ತಮಗೆ ನಿಷ್ಠರಾದ ಸುಂದರರಾಯನನ್ನು ಅನಗತ್ಯವಾಗಿ ಅನುಮಾನಿಸಿ ಆತನ ಹತ್ಯೆ ಮಾಡಿದುದಷ್ಟೇ ಅಲ್ಲದೆ ಆತನ ಮಗ ಭಾಸ್ಕರನ ಶೈಕ್ಷಣಿಕ ಏಳಿಗೆಯನ್ನು ಸಹಿಸದೆ ಹಗೆ ಸಾಧಿಸುವ ಮನಸ್ಥಿತಿಯಲ್ಲಿ ಇದ್ದಾಗ ಅಂಬಾಬಾಯಿ ಭೀಮರಾಯರು ತಮ್ಮ ಹೆಗ್ಗಳಿಕೆಯ ಪ್ರತಿರೂಪವಾಗಿ ಮಗಳ ಮದುವೆಯ ಆಲೋಚನೆ ಮಾಡುತ್ತಾರೆ. ಇದು ಅವರ ವ್ಯಕ್ತಿತ್ವದ ಅಭಿವ್ಯಕ್ತಿಯಾಗಿದೆ. ಭಾಸ್ಕರ ಇಂಗ್ಲಿಷ್ ಶಿಕ್ಷಣ ಪಡೆಯುತ್ತ ಆಧುನಿಕನಾಗುವ ನೆಪದಲ್ಲಿ ಜಾತಿ ನಿಯಮಗಳನ್ನು ಮೀರುತ್ತಿರುವುದರ ವಿರುದ್ಧ ಜಾತಿಮತದ ಗುರುಗಳಿಗೆ ಮೂಗರ್ಜಿ ಬರೆಯುವ ಸಂದರ್ಭದಲ್ಲಿ ತಮ್ಮ ಸಂಪ್ರದಾಯ ನಿಷ್ಠತೆ ಮೆರೆಯುವ ಸಲುವಾಗಿ ಇಂದಿರೆಯ ವಿವಾಹ ಪ್ರಸ್ತಾಪ ಮಾಡಲಾಗಿದೆ.

ಇಂದಿರೆಗೆ ಮನೆಯ ವಾತಾವರಣದಲ್ಲಿ ಸಂಪ್ರದಾಯ ನಿಷ್ಠತೆಯನ್ನು ಬೆಳೆಸುವ ಶಿಕ್ಷಣ ನೀಡಿದ ಬಗ್ಗೆ, ಅವಳಿಗೆ ಎಂಥ ಬಗೆಯ ಗಂಡ ಸೂಕ್ತ ಎಂಬುದರ ಬಗ್ಗೆ ಅಂಬಾಬಾಯಿ ಹೇಳುವ ಈ ಮಾತುಗಳು ಗಮನ ಸೆಳೆಯುತ್ತದೆ. "ಉದಯರಾಗದ ಪಠಣೆ, ಒಲೇಬಾಯಿಯ ಹತ್ತಿರದ ಪಠಣೆ, ಕಡೆಯುವ ಕಲ್ಲಿನ ಮೇಲಿನ ಪಠಣೆ, ದೀಪ ಹಚ್ಚುವಾಗಿನ ಪಠಣೆ, ಗಜೇಂದ್ರ ಮೋಕ್ಷ, ಮಂಗಳಗೌರಿಯ ಕಥೆ, ಬೀಗರ ಹಾಡು, ಜೋಗಿ ಹಾಡು, ಕವುಲೆ ಹಾಡು ಇವೇ ಮುಂತಾದ ಬಗೆ ಬಗೆಯ ಹಾಡುಗಳನ್ನು ತಕ್ಕ ಮಟ್ಟಿಗೆ ಅಡಿಗೆಯ ಕೆಲಸಗಳನ್ನು ಕಲಿಸಿದ್ದೇನೆ. ಹಾಡುಗಳನ್ನು ಓದಿ-ಬರೆದು ಪಾಠ ಮಾಡುವುದಕ್ಕೆ ಅವಶ್ಯವಿದ್ದಷ್ಟು ಬರಹ ಸಹ ಕಲಿಸಿದ್ದೇನೆ. ನಮ್ಮ ಪುಣ್ಯದಿಂದ ಅಂಗೈಯಲ್ಲಿ ಆಡಿಸುವುದಕ್ಕೂ, ಸೀರೆಯ ಸೆರಗಿನಿಂದ ಮುಖ ಉಜ್ಜುವುದಕ್ಕೂ ಯೋಗ್ಯನೆಂಬಷ್ಟು ಚಿಕ್ಕ ಪ್ರಾಯದ ಅಳಿಯನು ದೊರಕಿದರೆ, ನಮ್ಮ ಜನ್ಮವು ಸಾರ್ಥಕವಾಯಿತು. ಇಂಗ್ರೇಜಿ ಕಲಿತ ಪೋಕರಿ ಹುಡುಗರು ನಮಗೆ ಬೇಡ" (ಪು.೭೬).

ಅಂಬಾಬಾಯಿಯ ಪ್ರಕಾರ ಇಂದಿರೆ ತನ್ನ ಏಳೆಂಟನೆಯ ವಯಸ್ಸಿನಲ್ಲಿ ಜಾತಿ ನಿಯಮ ಮುರಿಯದ, ಧರ್ಮನಿಷ್ಠೆ ಮೀರದ, ಸಂಪ್ರದಾಯ ಪಾಲನೆ ಮಾಡುವಲ್ಲಿ ಮೂಗು ಮುರಿಯದ, ವಿಧೇಯ ಮನಸ್ಸಿನವಳು ಎಂಬುದಾಗಿದೆ. ಇದಕ್ಕನುಗುಣವಾಗಿ ತನ್ನ ಮಗಳನ್ನು ತಿದ್ದಿ ತೀಡಿ ಕಲಿಸಬೇಕಾದ ಎಲ್ಲ ಕಲಿಕೆಯನ್ನು ಅವಳಿಗೆ ನೀಡಿದ್ದೇನೆಂದು ನಂಬಿದ್ದಾಳೆ. ಅಂಥ ತನ್ನ ಮಗಳಿಗೆ ಸ್ವಂತ ವಿವೇಚನೆಯಿಲ್ಲದ ಅಮ್ಮಾವ್ರ ಗಂಡ ಆಗಬಲ್ಲ ಚಿಕ್ಕ ಪ್ರಾಯದ ಹುಡುಗ ಅನುಕೂಲಕರ ಗಂಡನಾಗಬಲ್ಲನೆಂದು ಭಾವಿಸಲಾಗಿದೆ. ಇಂಗ್ಲಿಷ್ ಶಿಕ್ಷಣ ಜಾತಿ ಮರ್ಯಾದೆಯನ್ನು ಕೆಡಿಸುತ್ತದೆ ಎಂಬುದು ಅವಳ ಗಟ್ಟಿ ನಂಬಿಕೆ. ಹಾಗಾಗಿ ಅವಳು ಪರಿವರ್ತನೆ ತರಬಲ್ಲ ಇಂಗ್ಲಿಷ್ ಶಿಕ್ಷಣವನ್ನೂ

ಇಂಗ್ಲಿಷ್ ಶಿಕ್ಷಣ ಪಡೆದು ಸುಧಾರಣೆ ತರಬಲ್ಲ ಹುಡುಗರನ್ನೂ ಪೋಕರಿಗಳೆಂದು ಹೆಸರಿಸುತ್ತ ಅಪಮೌಲ್ಯೀಕರಣಕ್ಕೆ ಒಳಪಡಿಸಿದ್ದಾಳೆ. ಈ ಅಂಶ ಕೂಡ ಸಾಂಪ್ರದಾಯಿಕತೆಯ ಲಕ್ಷಣವೇ ಆಗಿದೆ.

ಹಲಸೂರು ತ್ರಿಯಂಬಕರಾಯನ ಮಗ ವಿಠಲರಾಯನೇ ಇಂದಿರಾಬಾಯಿಗೆ ತಕ್ಕ ವರವೆಂದು ನಿಶ್ಚಯಿಸಲಾಗಿದೆ. ಅದಕ್ಕೆ ಎರಡೂ ಕುಟುಂಬಗಳು ಶ್ರೀಮಂತಿಕೆಯಲ್ಲಿ ಸಮಾನವಾಗಿರುವುದು ಕಾರಣ. ಒಣಪ್ರತಿಷ್ಠೆಯ ಮನಸ್ಸು ತನ್ನ ತೋರಿಕೆಯ ಘನತೆ, ಗೌರವವನ್ನು ಕಾಪಾಡಿಕೊಳ್ಳಲು ಸ್ಥಾನಮಾನ, ಅಂತಸ್ತು, ಶ್ರೀಮಂತಿಕೆ ಮೊದಲಾದ ವಿಷಯಗಳಲ್ಲಿ ಸಮಾನ ಸ್ತರದಲ್ಲಿ ತನ್ನನ್ನು ಗುರುತಿಸಿಕೊಳ್ಳುವುದನ್ನು ಕಾಣಬಹುದು. ಈ ಸಂಗತಿಯೂ ಸಂಪ್ರದಾಯದ ಚೌಕಟ್ಟಿನಲ್ಲಿಯೇ ಕಾರ್ಯಪ್ರವೃತ್ತವಾಗಿದೆ.

ಇಂದಿರಾಬಾಯಿಯ ವಿವಾಹ ಸಂಪ್ರದಾಯಬದ್ಧವಾಗಿ ಕಾಶೀಯಾತ್ರೆಯ ಆರಂಭದಿಂದ ಹಿಡಿದು ಬ್ರಾಹ್ಮಣನ ವಾದ್ಯಘೋಷ, ಉದ್ದಿನ ಮುಹೂರ್ತ, ಪಾಲಿನ ಭಕ್ಷ್ಯ, ವರ ನಾರೀಕೇಳ ಹಿಡಿದು ವಧುವಿನ ಚಪ್ಪರ ಪ್ರವೇಶಿಸುವುದು, ವಧುವಿನ ಸೋದರಮಾವ ವಧುವನ್ನು ಸೊಂಟದಲ್ಲೆತ್ತುಕೊಂಡು ಲಗ್ನ ಮಂಟಪದಲ್ಲಿ ತಂದು ನಿಲ್ಲಿಸುವುದು, ವಧು-ವರರ ಮಧ್ಯೆ ಹಳದಿ ಬಣ್ಣದ ಪರದೆ ಹಿಡಿಯುವುದು, ಪರಸ್ಪರ ಮಾಲೆಗಳನ್ನು ಹಾಕುವುದು ಮತ್ತು ವಿನಿಮಯ ಮಾಡಿಕೊಳ್ಳುವುದು, ಬೆಳ್ಳಿಯ ಕಳಶದಲ್ಲಿ ನೀರು ಸುರಿದು ಕನ್ಯೆಯನ್ನು ವರನಿಗೆ ಧಾರೆ ಎರೆದು ಕೊಡುವುದು, ನೆರೆದ ಹೆಂಗಸರು ಕಲ್ಯಾಣ ಗೀತೆಗಳನ್ನು ಹಾಡುವುದು, ನರ್ತನ ಸ್ತ್ರೀಯರು ನರ್ತನ ಮಾಡುವುದು, ಬ್ರಾಹ್ಮಣ ಕುಲದವರಿಗೆ ಅವರವರ ತಾರತಮ್ಯಾನುಸಾರ ಒಂದು ಸಾವಿರ ರೂಪಾಯಿಗೆ ಕಡಿಮೆಯಿಲ್ಲದ ಹಾಗೆ ದಕ್ಷಿಣೆ ನೀಡುವುದು, ಚತುರ್ಥಿ, ನಾಗೋಲೆ ಮುಂತಾದ ಕ್ರಮಗಳೆಲ್ಲ ಆಯಾ ದಿನಗಳಲ್ಲಿ ಸಾಂಗವಾಗಿ ಸಾಗಿ ಎಂಟು ದಿವಸಗಳಲ್ಲಿ ಮದುವೆ ನಡೆಯುತ್ತದೆ. ಮಗಳ ಮದುವೆಗೆ ಭೀಮರಾಯ ಆಗಿನ ಕಾಲಕ್ಕೆ ಹದಿನೈದು ಸಾವಿರ ರೂಪಾಯಿ ವೆಚ್ಚ ಮಾಡಿ ವೈಭವಯುತವಾಗಿ, ವಿಜೃಂಭಣೆಯಿಂದ, ಆಡಂಬರದ ಮದುವೆ ಮಾಡುತ್ತಾನೆ.

ಇಂದಿರೆಯ ಈ ಬಾಲ್ಯವಿವಾಹದ ಸಾರ್ಥಕತೆಯ ನಿರರ್ಥಕತೆ ಕಥೆಯ ಮುಂದಿನ ಭಾಗದಲಿ ಮೈತಳೆಯುತ್ತದೆ. ಅಂಧಶ್ರದ್ಧೆ, ವಿವೇಚನಾರಹಿತತೆ, ಸ್ವಹಿತಾಸಕ್ತಿ, ಹಗೆತನ ಮತ್ತು ಸ್ತ್ರೀ ನಗಣ್ಯತೆ ಮುಂತಾದ ಆಶಯಗಳು ಈ ವಿವಾಹಕ್ರಮದಲ್ಲಿ ಮುಂಚೂಣಿಯಲ್ಲಿ ಕಾರ್ಯಪ್ರವೃತ್ತವಾಗಿರುವುದಲ್ಲದೆ ಸಾಂಪ್ರದಾಯಕ ಜೀವನ ಕ್ರಮದ ಪ್ರಮುಖ ಗುಣಲಕ್ಷಣವೂ ಆಗಿದೆ ಎಂಬುದನ್ನು ಮನದಟ್ಟು ಮಾಡಿಕೊಡುತ್ತದೆ.

ಕೆರೂರು ವಾಸುದೇವಾಚಾರ್ಯರ ಇಂದಿರಾ ಕಥೆ ಆರಂಭವಾಗುವ ಕಾಲಕ್ಕೆ ಸಮಾಜದಲ್ಲಿ ಬಾಲ್ಯ ವಿವಾಹ ವಯಸ್ಕರ ವಿವಾಹವಾಗಿ ಬದಲಾಗುತ್ತಿತ್ತು. ವಿಧವೆಯರು ಮರುವಿವಾಹಕ್ಕೆ

ಅರ್ಹರಾಗಿದ್ದು, ಅವರ ಕೇಶಮುಂಡನ ಮಾಡುವ ಆಚರಣೆ ಬಹುಪಾಲು ನಿಂತುಹೋಗಿತ್ತು ಎಂದು ಕಾದಂಬರಿಯ ಮುನ್ನುಡಿಯಲ್ಲಿ ಸೂಚಿತವಾಗಿದೆ. ಇದಕ್ಕನುಗುಣವಾಗಿ ಕಾದಂಬರಿಯ ನಾಯಕ-ನಾಯಕಿಯರ ತಂದೆಯರು ದೇವಯಾನಿಯೆಂಬ ವಿಧವೆಯೊಬ್ಬಳಲ್ಲಿ ಪ್ರೇಮ ವ್ಯವಹಾರ ನಡೆಸಿದ್ದ ಪೂರ್ವಕಥೆಯೊಂದು ಬಿಚ್ಚಿಕೊಳ್ಳುತ್ತದೆ. ಕಾದಂಬರಿಯ ನಿರೂಪಣೆ "ದೇವಯಾನಿಯು ಹದಿನಾಲ್ಕು ವರುಷದವಳಿದ್ದಾಗಲೆ ವಿಧವೆಯಾಗಿದ್ದಳು"(ಪು.೬೬) ಎಂದು ಆ ಪಾತ್ರದ ಪರಿಚಯ ಮಾಡಿಕೊಡುತ್ತದೆ. ಹದಿನಾಲ್ಕು ವರುಷಕ್ಕೆ ಆಕೆ ವಿಧವೆಯಾಗಿದ್ದಲ್ಲಿ ಅವಳ ಮದುವೆ ಅದಕ್ಕೂ ಪೂರ್ವದಲ್ಲಿ, ಆಕೆ ಎಳೆಯ ಬಾಲಕಿ ಇದ್ದಾಗಲೆ ನಡೆದಿದ್ದಿರಬೇಕು. ಆದರೆ ಕಾದಂಬರಿಯ ನಿರೂಪಣೆ ಆಕೆಯ ಪೂರ್ವ ಚರಿತೆಯ ಇತರ ವಿವರಗಳನ್ನು ನೀಡುವುದಿಲ್ಲ.

ಸಾಮಾನ್ಯವಾಗಿ ಬಾಲ್ಯ ವಿವಾಹಕ್ಕೆ ಒಳಗಾಗುವ ಹೆಣ್ಣು ಒಂದೆರೆಡು ವರ್ಷ ಅಂತರವಿರುವ ಸಮಾನ ವಯಸ್ಕ ಹುಡುಗನೊಂದಿಗೆ ಮದುವೆಯಾಗುವುದು ಅಪರೂಪವಾಗಿತ್ತು ಎಂದೆ ಹೇಳಬೇಕು. ಬಹುತೇಕ ಮಹಿಳೆಯರ ಬಾಲ್ಯ ವಿವಾಹಗಳು ಹೆಚ್ಚಾಗಿ ಎರಡನೆಯ ಅಥವಾ ಆ ನಂತರದ ಮದುವೆಗಳಾಗಿರುತ್ತಿದ್ದವು. ಮಾತ್ರವಲ್ಲದೆ ಮೂವತ್ತರಿಂದ ಅರವತ್ತು ವಯಸ್ಸಿನ ಅಂತರವಿರುತ್ತಿದ್ದ ವಯಸ್ಕ ಪುರುಷನೊಂದಿಗೆ ನಡೆಯುತ್ತಿತ್ತು. ಬಾಲ್ಯದಲ್ಲೇ ವಿವಾಹವಾದರೂ ಪ್ರೌಢಾವಸ್ಥೆ ತಲುಪುವ ವೇಳೆಗೆ ವಯಸ್ಸಾದ ಗಂಡನನ್ನು ಕಳೆದುಕೊಳ್ಳುತ್ತಿದ್ದುದು ಸಾಮಾನ್ಯವಾಗಿತ್ತು. ಹಾಗಾಗಿ ಬಾಲ್ಯ ವಿವಾಹವಾದ ಬಹುಪಾಲು ಮಹಿಳೆಯರು ತಮ್ಮ ಯೌವ್ವನದ ವಯಸ್ಸಿನಲ್ಲಿಯೆ ವಿಧವೆಯರಾಗಿರುತ್ತಿದ್ದರು. ದೇವಯಾನಿ ಹೀಗೆ ಹದಿನಾಲ್ಕನೇ ವಯಸ್ಸಿನಲ್ಲಿ ವಿಧವೆಯಾದವಳು. ಬಾಲ್ಯ ವಿವಾಹ ಮತ್ತು ವಿಧವಾ ಪಟ್ಟ - ಇವು ಬಾಲ್ಯ ವಿವಾಹದ ಮೂಲಕ ಮಹಿಳೆಯರು ಕೌಟುಂಬಿಕ ಸುಖ ಪಡೆಯದೆ ಗಳಿಸುವ ಸ್ಥಾನಮಾನಗಳಾಗಿದ್ದವು. ಈ ಮಾತು ದೇವಯಾನಿಯ ಪಾತ್ರಕ್ಕೂ ಒಪ್ಪುತ್ತದೆ.

ಇದೇ ಕಾದಂಬರಿಯ ಕಮಲಾ ಎಂಬ ವಿಧವೆಯ ಪಾತ್ರ ಕೂಡ ಇದೇ ಬಗೆಯ ವರ್ಗೀಕರಣಕ್ಕೆ ಸೇರುತ್ತದೆ.

ಎಂ. ಎಸ್. ಪುಟ್ಟಣ್ಣ ಅವರ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯಲ್ಲಿ ತಿಮ್ಮಮ್ಮ ನೀಲಕಂಠ ಜೋಯಿಸನ ಒಬ್ಬಳೇ ಮಗಳು. ಜಾತಕ ಭಾಗದಲ್ಲೂ ಪ್ರಶ್ನಾ ಭಾಗದಲ್ಲೂ ನಾಲ್ಕು ಗ್ರಾಮದ ಸುತ್ತ ಈ ಜೋಯಿಸನನ್ನು ಮೀರಿಸಿದವರು ಯಾರೂ ಇರಲಿಲ್ಲವೆಂದೂ ಮೈಸೂರು ಕೃಷ್ಣರಾಜ ಒಡೆಯರು ಕೂಡ ಸಂಜವಾಡಿಯ ಈ ಜೋಯಿಸನ ಬಳಿಯೇ ಜಾತಕ ತೋರಿಸುತ್ತಿದ್ದರೆಂದೂ ನೀಲಕಂಠ ಜೋಯಿಸನ ಘನವಾದ ಪರಿಚಯವಿದೆ. ಇಂಥ ಒಬ್ಬ ವ್ಯಕ್ತಿ ತನ್ನ ಮಗಳು ಎಂಟು ವರ್ಷ ತಲುಪುತ್ತಲೇ ಅವಳ ಮದುವೆಯ ವಯಸ್ಸು ಮೀರಿ ಹೋಗುತ್ತಿದೆಯೆಂದು ಚಿಂತಿಸುತ್ತಾನೆ. ಇದು ಅವನ ಮಗಳ ಶ್ರೇಯಸ್ಸಿಗಿಂತ ಸ್ವಜಾತಿ ಕಟ್ಟಳೆ ಮೀರಲಾರದ ಸಾಂಪ್ರದಾಯಿಕ ನಿಷ್ಠೆಯನ್ನು

ತೋರಿಸುತ್ತದೆ. ಆತ ಭವಿಷ್ಯಶಾಸ್ತ್ರದಲ್ಲಿ ಪ್ರಸಿದ್ಧ ಪಂಡಿತನಾಗಿದ್ದರೂ ಆತನೊಬ್ಬ ವಿವೇಚನಾ ಶಕ್ತಿ ರಹಿತ ಮರಳು ಪಂಡಿತನಂತೆ ಕಂಡುಬರುತ್ತಾನೆ. ಏಕೆಂದರೆ "ಯೋಗ್ಯರಾಗಿದ್ದರೆ ಎರಡನೇ ವರವಾದಾಗ್ಯೂ ಚಿಂತೆಯಿಲ್ಲ, ತೊಳೆದ ಕಾಲನ್ನು ಮತ್ತೆ ತೊಳೆಯುವುದಿಲ್ಲವೆಂಬ ಮೂಳ ಪ್ರತಿಷ್ಠೆಯನ್ನು ಬಿಟ್ಟು ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆ"(ಪು.೮) ಎಂದು ಈ ಪಂಡಿತ ತನ್ನ ಮಗಳ ಮದುವೆ ಬಗ್ಗೆ ನಿಶ್ಚಯಿಸಿಕೊಂಡಿರುತ್ತಾನೆ. ಈತ ಜಾತಕ ನೋಡುವ ವೃತ್ತಿಯಲ್ಲಿ ಕೃಷ್ಣರಾಜ ಒಡೆಯರನ್ನು ಮರಳು ಮಾಡುವಂಥ ಚಾಣಾಕ್ಷನಾಗಿದ್ದರೂ ಜೀವನದ ಸೂಕ್ಷ್ಮಗಳನ್ನು ಅರಿಯುವ ಸೂಕ್ಷ್ಮಜ್ಞತೆ ಅವನಲ್ಲಿ ಇರಲಿಲ್ಲ. ಅಥವ ಆ ಕುರಿತು ತನ್ನ ವಿವೇಕ ಪ್ರಜ್ಞೆಯನ್ನು ಕೊರಡಿನಂತೆ ಕ್ರಿಯಾಹೀನಗೊಳಿಸಿದ್ದನೆಂದು ತೋರುತ್ತದೆ. ನೀಲಕಂಠ ಜೋಯಿಸನ ಇಂಥ ಮನಸ್ಥಿತಿಯಲ್ಲಿ ಮೈಸೂರಿನಲ್ಲಿ ವಾಸವಾಗಿದ್ದ ಸದಾಶಿವ ದೀಕ್ಷಿತನೆಂಬ ಬ್ರಾಹ್ಮಣ ತನ್ನ ಮೂವತ್ತನೆಯ ವಯಸ್ಸಿನಲ್ಲಿ ಗಂಡು ಮಗು ಹೆತ್ತ ಹೆಂಡತಿಯನ್ನು ಕಳೆದುಕೊಂಡು ವಿದುರನಾಗಿದ್ದನು. ಅರಮನೆ ವಿದ್ವಾಂಸನಾಗಿದ್ದ ಆತನ ಸೋದರಮಾವ ಪಶುಪತಿ ಸಾಂಬಶಾಸ್ತ್ರಿ ತನ್ನ ಸೋದರಳಿಯನ ಕುಟುಂಬವನ್ನು ಸರಿಪಡಿಸುವ ಹೊಣೆಹೊತ್ತು ಅವನನ್ನು ಎರಡನೆಯ ಮದುವೆಗೆ ಒಪ್ಪಿಸುತ್ತಾನೆ. ಪಶುಪತಿ ಸಾಂಬಶಾಸ್ತ್ರಿ ಹೆಣ್ಣನ್ನು ಹುಡುಕಿಕೊಂಡು ಬಂದು ಸಂಜವಾಡಿಯ ನೀಲಕಂಠ ಜೋಯಿಸನ ಎಂಟು ವರ್ಷದ ಮಗಳು ತಿಮ್ಮಮ್ಮನನ್ನು ಗೊತ್ತು ಮಾಡುತ್ತಾನೆ.

ತಿಮ್ಮಮ್ಮನ ಬಾಲ್ಯವಿವಾಹ ಮತ್ತು ಸದಾಶಿವದೀಕ್ಷಿತನ ಎರಡನೆಯ ಮದುವೆಗೆ ಮೈಸೂರು ಅರಮನೆಯ ಸರ್ಕಾರ ೨೦೦ ಸೇರು ಅಕ್ಕಿ, ಪೀತಾಂಬರದ ಪಟ್ಟೆ ಸೀರೆ, ಬಣ್ಣದ ಸೀರೆ, ಎರಡು ಜೊತೆ ಧೋತ್ರ, ನಗದು ೧೦೦ ರೂಪಾಯಿ ನೀಡಲು ಅಪ್ಪಣೆ ಮಾಡುತ್ತದೆ. ಅರಮನೆಯ ಆಸ್ಥಾನದಲ್ಲಿ ಇದ್ದವರೆಲ್ಲ ಬ್ರಾಹ್ಮಣ ಪಂಡಿತರೇ ಅಗಿದ್ದು, ಅವರೆಲ್ಲ ಸ್ತ್ರೀಯರ ಅಸ್ತಿತ್ವ ಇರುವುದೇ ಪುರುಷರ ಅನುಕೂಲಕ್ಕಾಗಿ ಎಂಬ ಪರಂಪರಾಗತ ನಿಲುವನ್ನು ಪ್ರತಿಪಾದಿಸುವರು ಮತ್ತು ಅದನ್ನು ಮತ್ತೊಬ್ಬರು ಅನುಸರಿಸುವಂತೆ ಮಾಡಬಲ್ಲ ನಿಪುಣರು ಎನಿಸಿದ್ದವರು. ಹಾಗಾಗಿ ಬ್ರಾಹ್ಮಣ ಪುರುಷಪರ ಚಿಂತನೆಯನ್ನು ಮೀರಿದ ವಿಚಾರ ಲಹರಿ ನಾಡಿನ ದೊರೆಗಳ ಮೆದುಳಲ್ಲಿ ಸುಳಿದಾಡಲು ಸಾಧ್ಯವೇ ಇರಲಿಲ್ಲ. ವಯಸ್ಕನೊಬ್ಬನ ಎರಡನೆಯ ಮದುವೆಯ ಹೆಣ್ಣು ಅಪ್ರಾಪ್ತ ವಯಸ್ಸಿನ ಬಾಲಕಿಯಾಗಿದ್ದರೂ ಅದು ಅಕ್ಷೇಪಾರ್ಹವಾದ ಸಂಗತಿಯಾಗಿರಲಿಲ್ಲ. ಕಾದಂಬರಿಯ ನಿರೂಪಣೆ ಕೂಡ ಸಾಂಪ್ರದಾಯಿಕ ಜೀವನ ಮೌಲ್ಯಗಳ ಒಪ್ಪಿತ ನೆಲೆಯಲ್ಲಿಯೆ ಈ ಬಾಲ್ಯ ವಿವಾಹದ ಪ್ರಸ್ತಾಪ, ಕಾರ್ಯ ಸಾಧನೆ, ವಿವಾಹ ಕ್ರಮ ಎಲ್ಲವನ್ನು ದಾಟಿಸಿಬಿಡುತ್ತದೆ. ಸಂಪ್ರದಾಯನಿಷ್ಠತೆ ಹೀಗೆ ಈ ಕಾದಂಬರಿಯ ನಿರೂಪಣಾ ಧಾಟಿಯಲ್ಲೇ ನೆಲೆಸಿದೆ.

ಈ ಕಾದಂಬರಿಯಲ್ಲಿ ವಿವರಿಸಲಾದ ಸೀತೆಯ ಮದುವೆಯೂ ಬಾಲ್ಯ ವಿವಾಹವೇ ಆಗಿದೆ. ಕಾದಂಬರಿ ಇದೊಂದು ವಯಸ್ಕ ಮದುವೆ ಎಂಬ ಸಹಜತೆಯಲ್ಲಿ ಮದುವೆಯ ಎಲ್ಲ ಹಂತಗಳನ್ನು

ವಿವರಿಸಿಕೊಂಡು ಹೋಗುತ್ತದೆ. ಆದರೆ ಆ ಅಧ್ಯಾಯದ ಕೊನೆಯಲ್ಲಿ "ಕೆಲವು ದಿವಸಗಳಲ್ಲಿ ಈ ಹುಡುಗಿ ಮೈನೆರೆದಳು. ಋತುಶಾಂತಿ ಪ್ರಸ್ಥವೂ ಜರುಗಿತು. ಹುಡುಗಿಯನ್ನು ಅತ್ತೆ ಮನೆಗೆ ಕರೆದು ತಂದು ಬಿಟ್ಟು"(ಪು.೬೪) ಬರುವ ವಿವರಣೆಯಿದೆ. ಸೀತೆ ತನ್ನ ವಿವಾಹ ಕಾಲದಲ್ಲಿ ಮೈನೆರೆಯದ ಪುಟ್ಟ ಬಾಲಕಿಯಾಗಿದ್ದಳು ಎಂದು ಇದರಿಂದ ವಿದಿತವಾಗುತ್ತದೆ. ಇದು ಬಾಲ್ಯ ವಿವಾಹವೆಂಬ ಪ್ರಜ್ಞಾವಂತಿಕೆಯನ್ನು ಕಾದಂಬರಿಯ ನಿರೂಪಣೆ ಮರೆಮಾಚಿ ಸಹಜವೆಂಬಂತೆ ನಿರ್ವಹಿಸಿರುವುದು ಸಾಮಾಜಿಕ ಸಮಸ್ಯೆಗಳ ಕುರಿತು ಅದರ ಪ್ರಜ್ಞಾರಹಿತ ಸ್ಥಿತಿಯನ್ನು ಸೂಚಿಸುತ್ತದೆ.

ಸದಾಶಿವದೀಕ್ಷಿತನ ಮಗನಾದ ಮಹಾದೇವನ ವಿದ್ಯಾಭ್ಯಾಸ ಒಂದು ಹಂತಕ್ಕೆ ತಲುಪುತ್ತಿದ್ದಂತೆ ಅವನೊಬ್ಬ ವಿದ್ವಾಂಸನಂತೆ ಕಂಗೊಳಿಸುತ್ತಿದ್ದನೆಂದು ಪುರುಷ ಸಾಧನೆ ವೈಭವೀಕರಿಸುವ ನೆಲೆಯಲ್ಲಿ "ಅವನ ರೂಪ, ಯೋಗ್ಯತೆ, ತಂದೆಯ ಆಸ್ತಿ ನೋಡಿ ಅವನಿಗೆ ಹೆಣ್ಣು ಕೊಡಲು ನಾ ಮುಂದು ತಾ ಮುಂದು ಎಂದು ಜನ ಮೇಲೆ ಬೀಳುತ್ತಿದ್ದರು"(ಪು.೬೨) ಎಂಬ ನಿರೂಪಣೆ ಇದೆ. ಇದು ನಿಜವೇ ಆಗಿದ್ದಲ್ಲಿ ಎಳೆಯ ಬಾಲಕಿಯಾದ ಸೀತೆಯನ್ನು ಮದುವೆಗೆ ಆಯ್ಕೆ ಮಾಡಬೇಕಾದ ಅವಶ್ಯಕತೆ ಬಹುಶಃ ಇರುತ್ತಿರಲಿಲ್ಲವೇನೋ. ಸೀತೆ ಮತ್ತು ಮಹಾದೇವನ ಮದುವೆಯನ್ನು ಸಾಂಬಶಾಸ್ತ್ರಿ ಮತ್ತು ಸದಾಶಿವದೀಕ್ಷಿತ ತಮ್ಮ ತಮ್ಮ ಮನೆಯ ಯಜಮಾನರಾಗಿ ತಮ್ಮಲ್ಲಿಯೆ ನಿಶ್ಚಯಿಸಿಕೊಂಡುಬಿಡುವ ಮದುವೆಯಾಗಿದೆ. ತಮ್ಮ ಜೀವನ ಪರ್ಯಂತ ಜೊತೆಯಾಗಿ ಇರಬೇಕಾದ ಮದುಮಕ್ಕಳ ಅಪೇಕ್ಷೆ, ಮನೆಯ ಹೆಣ್ಣುಮಕ್ಕಳ ಅಭಿಪ್ರಾಯಗಳನ್ನು ಕೇಳುವ ವ್ಯವಧಾನ ಮತ್ತು ಧೋರಣೆ ಸಂಪ್ರದಾಯನಿಷ್ಠೆ ಜನರಲ್ಲಿ ಇಲ್ಲದಿದ್ದುದು ಇಲ್ಲಿಯೂ ಕಾಣುತ್ತದೆ.

ಅರಮನೆಯ ವಿದ್ವಾಂಸನಾದ ಪಶುಪತಿ ಸಾಂಬಶಾಸ್ತ್ರಿ ಈ ಹಿಂದೆ ತನ್ನ ಸೋದರಳಿಯನ ಎರಡನೆಯ ಮದುವೆಗೆ ಅರಮನೆಯ ನೆರವು ಪಡೆದಿದ್ದ ಹಾಗೆಯೇ ತನ್ನ ಮಗನ ಮಗಳಾದ ಸೀತೆಯ ಬಾಲ್ಯ ವಿವಾಹಕ್ಕೂ ಬೇಕಾದ ಎಲ್ಲ ನೆರವನ್ನು ಅರಮನೆಯಿಂದ ಪಡೆದುಕೊಳ್ಳುತ್ತಾನೆ. ಇದು ಶಾಸ್ತ್ರಿಯ ಸಾಮಾಜಿಕ ಉನ್ನತ ಸ್ಥಾನಮಾನ ಮತ್ತು ಘನತೆ, ಗೌರವಗಳ ಪ್ರತೀಕವಾಗಿ ಜರುಗುತ್ತದೆ. ಮದುವೆ ವೈಭವಯುತವಾಗಿ, ವಿಜೃಂಭಣೆಯಿಂದ, ಸಕಲ ಆಡಂಬರದೊಂದಿಗೆ ನಡೆಯಲು ಅರಮನೆಯಿಂದ ಎಲ್ಲ ನೆರವು ಪಡೆಯಲಾಗುತ್ತದೆ. "ಆನೆ, ಅಂಬಾರಿ, ಮುವ್ವತ್ತು ಬೆಳ್ಳಿ ಕಟ್ಟಿಗೆ, ಕೊಂಬು, ತಮಟೆ, ತಾಸಾ, ಮರಫ, ಖಾಸಾ ಓಲಗದವರು, ಒಂದು ಜೋಡಿ ತಾಫೆದವರು, ಇಲಾಲುಗಳು, ಫರಮೀನುಗಳು, ಅದಕ್ಕೆ ಬತ್ತಿ ಎಣ್ಣೆ ಸಹಾ, ಇಬ್ಬರು ಅವಸರದ ಹೋಬಳಿ ಕಟ್ಟಿಗೆಯವರು, ಇದೆಲ್ಲವನ್ನೂ ಮದುವೆಯ ಕೊನೇ ಮೆರವಣಿಗೆ ದಿವಸದವರೆಗೂ ಕಳುಹಿಸಬೇಕೆಂದು ಅಪ್ಪಣೆಯಾಯಿತು. ಅರಮನೆಯ ಅಹಲೇಕಾರರು, ಕಚೇರಿಯ ಉದ್ಯೋಗಸ್ಥರು, ಸಮ್ಮುಖದ ವಿದ್ವಾಂಸರು ಮೊದಲಾದವರಿಗೆಲ್ಲ ಔತಣ ಹೇಳಿದ್ದರು. ಪ್ರಸ್ತದಲ್ಲೆಲ್ಲ ಒಂದೊಂದು ದಿವಸ ಒಂದೊಂದು

ಬಗೆ ರವೆ ಭಕ್ಷ್ಯವನ್ನು ಮಾಡುತ್ತಿದ್ದರು. ಪ್ರತಿ ದಿನವೂ ಆರತಿ ಅಕ್ಷತೇ ಕಾಲದಲ್ಲಿ ಸೂಳೆಯರ ಮೇಳ, ಸಂಗೀತಗಾರರ ಗಾನ, ಮಧ್ಯೆ ಮಧ್ಯೆ ನಕಲೀ ನಾರಾಣಪ್ಪನ ಹಾಸ್ಯ, ಇದೆಲ್ಲವನ್ನೂ ಮೀರಿಸುವ ಹಾಗೆ ನಡೆಯುತ್ತಿದ್ದ ವೇದ ಘೋಷ, ಶಾಸ್ತ್ರಾರ್ಥವಿಚಾರ, ಇವುಗಳೆಲ್ಲ ಜರುಗಿದವು"(ಪು.೫೫). ಅಲ್ಲದೆ ಸ್ವತಃ ಮೈಸೂರು ರಾಜ್ಯದ ಕೃಷ್ಣರಾಜ ಪ್ರಭುಗಳು ಮದುವೆ ಮನೆಗೆ ಹಾಜರಾಗಿ ಮದುಮಕ್ಕಳನ್ನು ಹರಿಸಿದರು. ಆ ಸಂದರ್ಭದಲ್ಲಿ ವಧು ಕುರಿತು ದೊರೆಗಳಾಡುವ ಮಾತು ಗಮನಾರ್ಹ. "ಪಾತಿವ್ರತ್ಯಕ್ಕೆ ಬೇಕಾದ ಸಮಸ್ತ ಲಕ್ಷಣಗಳೂ (ಮದುವೇ ಹೆಣ್ಣನ್ನು ತೋರಿಸುತ್ತಾ) ಈ ಹೆಣ್ಣುಮಗಳಲ್ಲಿರುವ ಕಾರಣ ಈಕೆಗೆ ಸೀತಮ್ಮನೆಂದು ನೀವು ನಾಮಕರಣ ಮಾಡಿದ್ದು ಸಾರ್ಥಕವಾಯಿತು"(ಪು.೬೧). ದೊರೆಗಳ ಕಣ್ಣಲ್ಲಿ ಮೈನೆರೆಯದ ಬಾಲಕಿಯಾದ ಸೀತೆ ಪಾತಿವ್ರತ್ಯದ ಸಕಲ ಗುಣಗಳ ಪ್ರತೀಕಳಾಗಿ ಕಂಡಿದ್ದಾಳೆ. ಇಡೀ ವ್ಯವಸ್ಥೆಯಲ್ಲಿ ಸ್ತ್ರೀಯರ ಕುರಿತ ಜೀವನಮೌಲ್ಯಗಳು ಹೇಗೆ ಅವಿಚಾರದ ನೆಲೆಯಲ್ಲಿ ಭದ್ರಗೊಳಿಸಲಾಗಿತ್ತು ಎಂಬುದನ್ನು ಇದು ಕಾಣಿಸುತ್ತದೆ. ಹೆಣ್ಣು ಮತ್ತೊಬ್ಬನ ಹೆಂಡತಿಯಾಗಲೆಂದೇ ಹುಟ್ಟಿದವಳು, ಅವಳು ತನ್ನ ಗಂಡನಿಗೆ ಅವಳ ಹಿತಾಹಿತವನ್ನು ಮೀರಿ ನಿಷ್ಠಳಾಗಿರುವವಳು. ಈ ಗುಣ ಅವಳಿಗೆ ಹುಟ್ಟಿನಿಂದಲೆ ಬಂದಿರಬೇಕಾದುದು ಅವಶ್ಯ ಎಂಬ ಅಪೇಕ್ಷೆಯಿದೆ. ಇವು ಸ್ತ್ರೀಯರ ಸಾರ್ವಕಾಲಿಕ ಗುಣವೆಂಬಂತೆ ಪರಿಭಾವಿಸಲಾಗಿದ್ದನ್ನು ಪಾತಿವ್ರತ್ಯ ಪದದ ಮೇಲಿನ ಒತ್ತು ಕಾಣಿಸುತ್ತದೆ. ಇಂಥ ಪುರುಷಪರ ದೃಷ್ಟಿಕೋನ ಬಾಲ್ಯವಿವಾಹದ ಚೌಕಟ್ಟಿನಲ್ಲೂ ಕಾರ್ಯಪ್ರವೃತ್ತವಾಗಿದೆ.

ಹೀಗಿದು ಸಮಾಜದ ಕಣ್ಣಲ್ಲಿ ಶ್ರೀಮಂತರ ಅದ್ದೂರಿ ಮದುವೆಯಾಗಿ, ದೊರೆಗಳು ಭಾಗವಹಿಸಿದ ಘನತೆವೆತ್ತವರ ಮದುವೆಯಾಗಿ, ಸಮಾಜದ ಉನ್ನತ ಸ್ಥಾನಮಾನದಲ್ಲಿದ್ದವರ ಮದುವೆಯಾಗಿ, ಮೇಲ್ಜಾತಿಯವರ ಹೆಗ್ಗಳಿಕೆಯ ಮದುವೆಯಾಗಿ ಜರುಗುತ್ತದೆ. ಮದುವೆಯಲ್ಲಿ ವಧು-ವರರು ಕೇವಲ ಆಟದ ಗೊಂಬೆಗಳಾಗಿ ಪಾಲುಗೊಂಡಿರುವುದನ್ನು ಕಾಣಬಹುದು. ಇದರ ಪರಿಣಾಮ ಕಥೆಯ ಮುಂದಿನ ಭಾಗದಲ್ಲಿ ಸೀತೆ ಅನುಭವಿಸುವ ಅಪಾರ ಹಿಂಸೆಯಲ್ಲಿ ವ್ಯಕ್ತವಾಗುತ್ತದೆ. ಸಮಾಜದ ಉನ್ನತ ಮೇಲ್ಜಾತಿ ಮತ್ತು ಸ್ಥಾನಮಾನಗಳಲ್ಲಿರುವರ ಮದುವೆಯ ಸ್ವರೂಪವಾಗಿದು ಮೈ ತಳೆದಿದೆ.

ಪ್ರಸ್ತುತ ಕಾದಂಬರಿಯಲ್ಲಿ ಸತೀಪದ್ಧತಿಯನ್ನು ವೈಭವೀಕರಿಸಲೆಂದೇ ನಿರೂಪಿತವಾದಂತಿರುವ ಅರುಂದಮ್ಮನ ಪ್ರಸಂಗದಲ್ಲಿ ಬಾಲ್ಯವಿವಾಹದ ಪ್ರಸ್ತಾಪವಿದೆ. ಅರುಂದಮ್ಮಳ ಪಾತ್ರ ಚಿತ್ರಣ ಮಾಡುತ್ತ "ಏಳು ವರುಷದ ಹುಡುಗಿಯಿಂದಲೂ ತನಗೆ ಒಳ್ಳೇ ಗಂಡ ಬರಲಿ ಎಂದು ನಿತ್ಯವೂ ಭಕ್ತಿಯಿಂದ ಗೌರಿ ಪೂಜೆಯನ್ನು ಮಾಡುತ್ತಿದ್ದಳಂತೆ, ಅದಕ್ಕೆ ಸರಿಯಾಗಿಯೆ ಒಳ್ಳೇ ಗಂಡ ಸಿಕ್ಕಿದ"(ಪು.೯೨) ಎಂದು ಹೇಳಲಾಗಿದೆ. ಅರುಂದಮ್ಮನ ಮದುವೆ ಯಾವ ವಯಸ್ಸಿನಲ್ಲಾಯಿತು ಎಂಬ ವಿವರವಿಲ್ಲದಿದ್ದರೂ ಆಕೆ ಏಳು ವರುಷದ ಹುಡುಗಿಯಿದ್ದಾಗಲೇ ತನಗೆಂಥ ಗಂಡ ಬೇಕೆಂದು ಬಯಸಿದ್ದಳು ಮತ್ತು

ಅದಕ್ಕಾಗಿ ವ್ರತ ಮಾಡುತ್ತಿದ್ದಳು ಎಂದು ಹೇಳಲಾಗಿದೆ. ಏಳು ಎಂಟನೆಯ ವಯಸ್ಸಿನಲ್ಲಿ ಸಾಮಾನ್ಯವಾಗಿ ಬಾಲ್ಯವಿವಾಹ ನಡೆಯುತ್ತಿದ್ದಿತ್ತಾದರೂ ಆ ವಯಸ್ಸಿನ ಮಕ್ಕಳಿಗೆ ತಾನು ಮದುವೆಯ ಹೆಣ್ಣು ಎಂಬ ಪ್ರಜ್ಞೆಯಿರಲು ಸಾಧ್ಯವಿಲ್ಲ. ಜಗತ್ತಿನ ಕೌತುಕಗಳಿಗೆ ಆಗತಾನೆ ಕಣ್ತೆರೆಯುವ ಆ ಮುಗ್ಧ ಜೀವಗಳು ಅಚ್ಚರಿಯಲ್ಲಿ, ಬೆರಗಿನಲ್ಲಿ, ಕೌತುಕದಲ್ಲಿ, ಸಂಭ್ರಮದಲ್ಲಿ, ನಲಿವಿನಲ್ಲಿ ತಮ್ಮನ್ನು ಮರೆಯುತ್ತ ಕುತೂಹಲ ಬೆರೆತ ಪ್ರಶ್ನೆಗಳಲ್ಲಿ ಸಿಕ್ಕಿ ಹಾಕಿಕೊಳ್ಳುವ ವಯಸ್ಸಾಗಿರುತ್ತದೆ ಅದು. ಅಂಥ ಆ ಮಕ್ಕಳಿಗೆ ತಾನು ಹೆಣ್ಣು ಎಂದಾಗಲಿ, ಮದುವೆ ಎಂದರೇನು ಎಂದಾಗಲಿ, ಗಂಡ–ಹೆಂಡತಿಯ ಸಂಬಂಧದ ಬಗ್ಗೆಯಾಗಲಿ ಅರಿಯದ ಕಾಲವಾಗಿರುತ್ತದೆ. ಅಂಥ ಕಾಲದಲ್ಲಿ ಒಳ್ಳೆಯ ಗಂಡನಿಗಾಗಿ ಅರುಂದಮ್ಮ ವ್ರತ ಹಿಡಿದಿದ್ದಳು ಎಂಬ ನಿರೂಪಣೆ ಪ್ರಾಕೃತಿಕ ಸತ್ಯವನ್ನು ಮೀರಿದ ಕ್ರಮವಾಗಿ ಕಾಣುತ್ತದೆ.

ಇತರ ಕಾದಂಬರಿಗಳು– ನಭಾ ಕಾದಂಬರಿಯಲ್ಲಿ ನಭಾಳ ವಿವಾಹ, ಅಹಲ್ಯಾಬಾಯಿ ಕಾದಂಬರಿಯಲ್ಲಿ ಅಹಲ್ಯಾಬಾಯಿಯ ಮದುವೆ, ರಾಜಾರತ್ನಂ ಕಾದಂಬರಿಯಲ್ಲಿ ರಾಜಾರತ್ನಂಳ ಮದುವೆ ಮತ್ತು ಲಕ್ಷ್ಮೀಪ್ರಸಾದಂನಲ್ಲಿ ಬರುವ ಲಕ್ಷ್ಮಿ ಹಾಗೂ ಪ್ರಸಾದನ ಮದುವೆಗಳು– ಆಯಾ ಪಾತ್ರಗಳು ಅಪ್ರಾಪ್ತ ವಯಸ್ಸಿನಲ್ಲಿದ್ದಾಗಲೇ ನಡೆಯುತ್ತವೆ. ಈ ಕಾದಂಬರಿಗಳು ಚಿತ್ರಿಸುವ ಬಾಲ್ಯ ವಿವಾಹ ಕ್ರಮ ಅಂದಿನ ಸಮಾಜದಲ್ಲಿದ್ದ ವಿವಾಹ ಕ್ರಮದ ಭಾಗವಾಗಿ ಮೂಡಿ ಬಂದಿವೆ. ಇದು ಸಂಪ್ರದಾಯನಿಷ್ಠ ಸಮಾಜದ ಭಾಗವಾಗಿ ಜರಗುವ ವಿವಾಹ ಕ್ರಮದ ರೂಪದಲ್ಲಿವೆ. ಬಾಲ್ಯ ವಿವಾಹವನ್ನು ನಿರೂಪಿಸಿರುವ ಕ್ರಮ ಪರಿಶೀಲನೆಯಲ್ಲಿ ಬಹುಪಾಲು ಎಲ್ಲ ಕೃತಿಗಳು ಸಾಂಪ್ರದಾಯಿಕ ಮನೋಭಾವವನ್ನೇ ಬಿಂಬಿಸಿದ್ದು ಸ್ತ್ರೀಪರ ಸಹಾನುಭೂತಿ ಕಾಣದಿರುವುದು ಅಂದಿನ ಕಾಲದ ಕಾದಂಬರಿಕಾರರ ಮನೋಗತಿಯ ಪ್ರತೀಕವಾಗಿದೆ. ಇದು ಯಾವುದೇ ಕಲಾಕೃತಿ ಜೀವಪರ ನಿಲುವನ್ನು ತಳೆಯಬೇಕೆನ್ನುವ ಧೋರಣೆಗೆ ಅನುಗುಣವಾಗಿ ಇರುವಂತೆ ಕಾಣುವುದಿಲ್ಲ.

ಸ್ತ್ರೀ ಶಿಕ್ಷಣ

ಭೂಮಿಯ ಮೇಲಿನ ಪ್ರತಿಯೊಂದು ಜೀವಿಯೂ ತನ್ನ ಹುಟ್ಟಿನಿಂದಲೇ ದಿನ ದಿನವೂ ಒಂದಲ್ಲ ಒಂದು ಸಂಗತಿಯನ್ನು ಕಲಿಯುತ್ತಿರುತ್ತದೆ. ಉದಾಹರಣೆಗೆ ಮರಿ ಹಕ್ಕಿ ತನ್ನ ತಾಯಿ ಹಕ್ಕಿ ತನ್ನ ಬಾಯಿಯಲ್ಲಿಟ್ಟ ಉಣಿಸನ್ನು ತಿನ್ನುವುದು ಹೇಗೆ, ಹೊಟ್ಟೆ ತುಂಬಿಸಿಕೊಳ್ಳುವುದು ಹೇಗೆ, ನಂತರ ಅದಕ್ಕಾಗಿ ಬಾಯಿ ತೆರೆಯುವುದು, ಹಸಿವಾದಾಗ ಚಿಲಿಪಿಲಿಗುಟ್ಟುವುದು, ಬಲಿಯುತ್ತಿದ್ದಂತೆ ನೆಲದ ಮೇಲೆ ನೆಗೆದಾಡುವುದು, ರೆಕ್ಕೆ ಬಲಿತಂತೆ ಹಾರಾಡುವುದು, ಮತ್ತೊಂದು ಹಕ್ಕಿಯ ಜೊತೆ ಕೂಡಿ ಗೆಳೆತನ ಮಾಡುವುದು, ಸಂಗಾತಿಯನ್ನು ಆರಿಸುವುದು – ಹೀಗೆ ಕಲಿಯುವಿಕೆ ನಿರಂತರವಾಗಿ ಸಾಗುತ್ತಿರುತ್ತದೆ.

ಮಾನವ ಕೂಡ ತನ್ನ ಜೀವನ ರೂಪಿಸಿಕೊಳ್ಳುವ ಬಗೆಗಳಲ್ಲಿ, ತನ್ನ ಸುತ್ತ ಮುತ್ತಲಿನ ಜನರನ್ನು ಅರಿಯುವಲ್ಲಿ, ತನ್ನ ಪರಿಸರದ ನಿಗೂಢತೆಯನ್ನು ಬಗೆಯುವಲ್ಲಿ, ತನ್ನನ್ನು ತಾನು ತಿಳಿಯುವಲ್ಲಿ, ಸೂರ್ಯ, ಚಂದ್ರ, ಮೋಡ, ಮಳೆ, ಆಕಾಶಕಾಯ, ಬ್ರಹ್ಮಾಂಡ ಈ ಮೊದಲಾದ ಎಲ್ಲ ವಿಷಯಗಳ ಬಗ್ಗೆ ಕುತೂಹಲ ತಾಳುತ್ತ ಜಿಜ್ಞಾಸುವಾಗಿ ಪ್ರಶ್ನೆ ಮಾಡುತ್ತ, ತನ್ನದೇ ಉತ್ತರಗಳನ್ನು ಕಂಡುಕೊಳ್ಳುತ್ತ ಸದಾ ಕಲಿಕೆಯ ಹಾದಿಯಲ್ಲಿರುತ್ತಾನೆ.

ಕಲಿಕೆ ಎಂಬುದು ಪ್ರತಿಯೊಂದು ವ್ಯಕ್ತಿಯ ಅಥವ ಜೀವಿಯ ಹುಟ್ಟಿನಿಂದ ಬರುವ ಗುಣವಾಗಿದೆ. ಅಕ್ಷರ ಕಲಿಕೆಯೊಂದೇ ಕಲಿಕೆಯಲ್ಲವಾಗಿದ್ದರೂ ಹಿರಿಯರು ತಾವು ಪಡೆದ ಜ್ಞಾನ ಅಕ್ಷರದ ಸಂಕೇತಗಳಲ್ಲಿ ದಾಖಲೆ ಮಾಡಿದ್ದನ್ನು ಮೊದಲು ಕಲಿತುಕೊಳ್ಳಬೇಕಾಗುತ್ತದೆ. ಕಲಿಕೆಗೆ ಆರಂಭ ಮಾಡಿದ ಮಗು ಪ್ರತಿಯೊಂದು ವಿಷಯದಲ್ಲಿ ತಾನೇ ಮೊದಲಿಗನಾಗಿ ಕಲಿಯುವ ಬದಲು ಹಿರಿಯರಿಂದ ದಾಖಲಿತ ಜ್ಞಾನ ಪಠ್ಯಗಳನ್ನು ತಿಳಿಯಲು ಅಕ್ಷರ ಕಲಿಯುವುದು ಅಗತ್ಯವಾಗುತ್ತದೆ. ಇದುವರೆಗೂ ಹಿರಿಯರು ಶೋಧಿಸಿದ, ಅರಿತ ಜ್ಞಾನವೆಲ್ಲವನ್ನು ತನ್ನದನ್ನಾಗಿಸಿಕೊಂಡು ಹೊಸ ಅರಿವನ್ನು ಹುಡುಕುವ ಕಡೆಗೆ ಸಾಗಬೇಕಾಗುತ್ತದೆ. ಇದಕ್ಕೆ ಕಲಿಕೆಯಲ್ಲಿ ವ್ಯಕ್ತಿ ತೋರುವ ಆಸಕ್ತಿ, ಕುತೂಹಲಗಳ ಜೊತೆಗೆ ಆತನ ಸಮಾಜ ಕೂಡ ಈ ದಿಕ್ಕಿನಲ್ಲಿ ತನ್ನ ಸಂಪಾದಿತ ಜ್ಞಾನವನ್ನು ಒದಗಿಸಿಕೊಡಬೇಕಾದ ಅಪೇಕ್ಷೆ ಹೊಂದಿರಬೇಕಾದುದು ಅಗತ್ಯ. –ಹೀಗೆ ಎಲ್ಲವೂ ಕೈ ಗೂಡಬೇಕಾಗುತ್ತದೆ.

ಜಗತ್ತಿನ ಪ್ರತಿಯೊಂದು ಸಮಾಜದಲ್ಲಿ ಹಿರಿಯರಿಂದ ಕಿರಿಯರಿಗೆ ಅರಿವನ್ನು ದಾಟಿಸುವ ಕ್ರಮಗಳು ಇವೆ. ಭಾರತದ ಹಿಂದೂ ಸಮಾಜದಲ್ಲಿ ಮೇಲ್ಜಾತಿಯ ಪುರುಷರಿಗೆ ಮಾತ್ರ ಈ ವ್ಯವಸ್ಥೆ ಮೀಸಲಾಗಿರಿಸಿತ್ತು. ಎಲ್ಲ ಜಾತಿಯ ಸ್ತ್ರೀಯರಿಂದ ಮತ್ತು ಅಬ್ರಾಹ್ಮಣ ಪುರುಷರಿಂದ ವಿದ್ಯೆ ಕಲಿಯುವ ಹಕ್ಕನ್ನು ಕಸಿದುಕೊಳ್ಳಲಾಗಿತ್ತು. ಈ ನಿಯಮವನ್ನು ಮೀರಿ ಸ್ತ್ರೀಯರಾಗಲಿ, ಅನ್ಯ ಜಾತಿಯವರಾಗಲಿ ಅಕ್ಷರ ಕಲಿತದ್ದೇ ಆದರೆ ಅವರ ನಾಲಿಗೆಯನ್ನು ಸೀಳಲಾಗುತ್ತಿತ್ತು ಮತ್ತು ಅವರ ಕಿವಿಗೆ ಸೀಸದ ಎರಕ ಹೊಯ್ಯಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಭಾರತದ ಹಿಂದೂ ಸಮಾಜದಲ್ಲಿ ಇಡೀ ಸ್ತ್ರೀ ಸಮುದಾಯ ಶಿಕ್ಷಣದಿಂದ ವಂಚಿತವಾಯಿತು. ಸಮಾಜದ ಬಹುಪಾಲು ಜನರನ್ನು ಮೌಢ್ಯತೆಯ ಕೂಪಕ್ಕೆ ತಳ್ಳಿತ್ತು. ಅಲ್ಲದೆ ಕಲಿಕೆಯ ಹಕ್ಕನ್ನು ಕಸಿದುಕೊಂಡ ಸಮಾಜ ವಿದ್ಯೆ ನೀಡದಿರುವುದೆ ಹೇಗೆ ಒಂದು ಸಾಮಾಜಿಕ ಸಮಸ್ಯೆಯಾಗಿ ಸಮಾಜದ ಬೆಳವಣಿಗೆಯಲ್ಲಿ ತೊಡಕಾಗಿ ಪರಿಣಮಿಸಿದೆ ಎಂಬ ತಿಳುವಳಿಕೆಯನ್ನೂ ಪಡೆಯದೆ ಹೋಯಿತು. ಹಾಗಾಗಿ ವಸಾಹತುಶಾಹಿ ಆಡಳಿತ ಭಾರತೀಯರಿಗೆ ಪಾಶ್ಚಾತ್ಯ ಶಿಕ್ಷಣವನ್ನು ನೀಡಲು ನಿರ್ಧರಿಸುವವರೆಗೂ ಇಡೀ ಸಮಾಜ ಅಜ್ಞಾನದ ಅಂಧಕಾರದಲ್ಲಿ ಬೇಯುವ ಸ್ಥಿತಿ ಇತ್ತು.

ಲಿಂಗಭೇದ ಹೊರತು ಪಡಿಸಿ ಮಾನವ ಜೀವಿ ಏಕ ಪ್ರಕಾರದ ದೇಹ ರಚನೆಯನ್ನು ಹೊಂದಿರುವ ಜೀವಿ. ಸ್ತ್ರೀ ಪುರುಷರಿಬ್ಬರಿಗೂ ಏಕಪ್ರಕಾರವಾಗಿ ಆಲೋಚಿಸುವ, ಭಾವಿಸುವ ಶಕ್ತಿಯನ್ನು ಹುಟ್ಟಿನಿಂದಲೇ ಪ್ರಕೃತಿ ಒದಗಿಸಿದೆ. ಬುದ್ಧಿ ಬಲದಲ್ಲಿ ಜ್ಞಾನ ಗಳಿಸುವಲ್ಲಿ ಇಬ್ಬರೂ ಸಮಬಲರೆ ಆಗಿದ್ದಾರೆ. ಆದರೆ ಲಿಂಗ ಬೇಧವನ್ನನುಸರಿಸಿ ಪುರುಷರಿಗೆ ಕಲಿಕೆಯ ಸರ್ವಹಕ್ಕನ್ನು ನೀಡಿ ಮಹಿಳೆಯರಿಗೆ ಅಜ್ಞಾನದ ಕತ್ತಲ ಕೂಪದಲ್ಲಿ ಮುಚ್ಚಿಟ್ಟಿತು. ಸ್ತ್ರೀಯರು ಎದುರಿಸಿದ ಸಮಸ್ಯೆಗಳಲ್ಲಿ ಶಿಕ್ಷಣ ಪಡೆಯುವುದು ಕೂಡ ಮುಖ್ಯ ಸಮಸ್ಯೆಯಾಯಿತು. ಇಡೀ ಸಮಾಜದಲ್ಲಿ ಸಮ ಅರ್ಧ ಭಾಗ ಆವರಿಸಿಕೊಂಡಿರುವ ಸ್ತ್ರೀಯರೆಲ್ಲ ಅಶಿಕ್ಷಿತರಾಗಿ ಸಾಮಾಜಿಕ ಸಮಸ್ಯೆಗೆ ಮೂಲ ಕಾರಣವಾಯಿತು.

ವೀರೇಶಲಿಂಗಂ ಪಂತುಲು ಅವರ ರಾಜಶೇಖರ ಚರಿತ್ರೆ ಕಾದಂಬರಿಯಲ್ಲಿ ಅದರ ಮುಖ್ಯ ಪಾತ್ರವಾದ ರಾಜಶೇಖರ ವಿದ್ಯಾವಂತನಾಗಿದ್ದಾನೆ. ಆತನಿಗೆ ಸ್ತ್ರೀಯರ ಶಿಕ್ಷಣ ಆಚರಣೆಯಲ್ಲಿ ಇಲ್ಲವೆಂದು ತಿಳಿದಿದೆ. ಅದನ್ನು ಮುರಿಯಲೆಂದೇ ಆತ ತನ್ನ ಹೆಂಡತಿ ಮತ್ತು ಮಗಳಿಗೆ ಅಕ್ಷರವಿದ್ಯೆಯನ್ನು ನೀಡುತ್ತಾನೆ. ಹೆಂಡತಿಗೆ ಪಾಕಶಾಸ್ತ್ರ ಗ್ರಂಥ ಓದತಕ್ಕ ಸಾಮರ್ಥ್ಯ ಬರುವಂತೆ ಕಲಿಸಿರುತ್ತಾನೆ. ಮಗಳು ರುಕ್ಮಿಣಿ ಬೇರೆಯವರ ಸಹಾಯವಿಲ್ಲದೆ ಸ್ವಂತ ಶಕ್ತಿಯಿಂದ ಸದ್ಗ್ರಂಥಗಳನ್ನು ಓದಬಲ್ಲ ಮತ್ತು ಅರ್ಥ ಮಾಡಿಕೊಳ್ಳಬಲ್ಲ ಮಟ್ಟಿಗೆ ಶಿಕ್ಷಣ ನೀಡಿರುತ್ತಾನೆ. ಇದರಿಂದಾಗಿ ರುಕ್ಮಿಣಿ ತನ್ನ ಚಿಕ್ಕ ವಯಸ್ಸಿನಲ್ಲೇ ವಿವೇಕಿಯಾಗಿ ಬೆಳೆಯುತ್ತಾಳೆ. ಅವಳು ತನ್ನ ಜೀವನದಲ್ಲಿ ಎದುರಾಗುವ ಕಷ್ಟಗಳನ್ನು ಸಹನೆಯಿಂದ, ಬುದ್ಧಿಚಾತುರ್ಯದಿಂದ ನಿಭಾಯಿಸಬಲ್ಲ ಶಕ್ತಿ ಪಡೆದುಕೊಳ್ಳುತಾಳೆ. ಆಕೆ ಧೈರ್ಯಶಾಲಿಯಾಗಿಯೂ ಸಂದರ್ಭವನ್ನು ನಿರ್ವಹಿಸುವ ಜಾಣೆಯಾಗಿಯೂ ಬೆಳೆಯುತ್ತಾಳೆ.

ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವಂಥ ಸಂಪ್ರದಾಯ ವಿರೋಧಿ ಚಟುವಟಿಕೆಯಲ್ಲಿ ನಿರತನಾದ ರಾಜಶೇಖರನ ಕುರಿತು ಆತನ ನೆರೆಹೊರೆಯಲ್ಲಿ ಅಸಮಾಧಾನ ಇರುತ್ತದೆ. ಅದನ್ನವರು ರಾಜಶೇಖರನ ಮುಂದೆ ಅವಕಾಶ ಸಿಕ್ಕಿದಾಗೊಮ್ಮೆ ಆಡಿಯೂ ತೋರಿಸುತ್ತಾರೆ. ಸಾಂಪ್ರದಾಯಿಕ ಕಟ್ಟಳೆಗಳಿಗೆ ಜಗ್ಗದ ಮತ್ತು ಅವುಗಳ ಪೊಳ್ಳುತನಗಳನ್ನರಿತ ರಾಜಶೇಖರ "ಸ್ತ್ರೀಯರಿಗೆ ಶಿಕ್ಷಣ ನೀಡಬಾರದೆಂದು ಹೇಳಿ ಯಾವ ಶಾಸ್ತ್ರದಲ್ಲಿ ನಿಷೇಧಿಸಲಾಗಿದೆ" ಎಂದು ಮರು ಪ್ರಶ್ನೆ ಹಾಕುತ್ತಾನೆ. ಸ್ವಂತ ತಿಳುವಳಿಕೆ ಮತ್ತು ವಿವೇಚನ ಶಕ್ತಿ ಇಲ್ಲದೆ ಕೇವಲ ಅಂಧಶ್ರದ್ಧೆಯಿಂದ ತಮಗೆ ಉಪದೇಶಿಸಿದ್ದನ್ನು ಪಾಲಿಸುತ್ತಿದ್ದ ಸಂಪ್ರದಾಯ ಶರಣರಿಗೆ ಅವನ ಪ್ರಶ್ನೆಗೆ ಏನು ಉತ್ತರಿಸಬೇಕೆಂದು ತಿಳಿಯದೆ ಮೌನ ತಾಳುತ್ತಾರೆ. ಆದರೆ ಸ್ತ್ರೀಯರಿಗೆ ಶಿಕ್ಷಣ ಕೂಡದು ಎಂಬ ಅವರ ನಿಲುವಿನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೀಗಿದ್ದರೂ ಶ್ರೀಮಂತ ರಾಜಶೇಖರನ ಹಗೆ ಕಟ್ಟಿಕೊಳ್ಳಲು ಸಿದ್ಧರಾಗದೆ ಅವರು ಮೌನ ವಹಿಸುವುದು ಕಂಡುಬರುತ್ತದೆ.

ಸೂರ್ಯಗ್ರಹಣ, ಚಂದ್ರಗ್ರಹಣ, ಅಮಾವಾಸ್ಯೆ, ಹುಣ್ಣಿಮೆ ಮೊದಲಾದ ಪ್ರಾಕೃತಿಕ ಚಟುವಟಿಕೆಗಳ ಕುರಿತು ಸಮಾಜದಲ್ಲಿ ನೆಲೆಯೂರಿದ್ದ ಮೂಢನಂಬಿಕೆಗಳನ್ನು ರಾಜಶೇಖರ ಹೋಗಲಾಡಿಸಲು

ಪ್ರಯತ್ನಿಸುತ್ತಾನೆ. ಸೂರ್ಯಗ್ರಹಣ, ಚಂದ್ರಗ್ರಹಣ ಎಂದರೆ ಸೂರ್ಯ ಮತ್ತು ಚಂದ್ರನನ್ನು ಹಾವು ಹಿಡಿದು ನುಂಗುವುದು ಎಂಬ ಜನಸಾಮಾನ್ಯರ ಮೂಢನಂಬಿಕೆಯನ್ನು ಅಲ್ಲಗಳೆದು ಅವರಿಗೆ ವೈಜ್ಞಾನಿಕ ತಿಳುವಳಿಕೆ ಮೂಡಿಸಲು ಪ್ರಯತ್ನಿಸುತ್ತಾನೆ. ಆದರೆ ಸಾಂಪ್ರದಾಯಿಕ ಮನಸ್ಸುಗಳ ಮುಂದೆ ರಾಜಶೇಖರನ ಪ್ರಯತ್ನ ಅಪಹಾಸ್ಯವಾಗಿ ಮಾರ್ಪಡುತ್ತದೆ.

ಈ ಕಾದಂಬರಿಯಲ್ಲಿ ಕಥಾನಾಯಕ ಆಧುನಿಕ ಮನೋಭಾವವನ್ನು ವ್ಯಕ್ತಪಡಿಸುವಂತೆ ತೋರುತ್ತದೆ. ಆದರೆ ಸಾಂಪ್ರದಾಯಿಕ ಮನಸ್ಸುಗಳ ಮೂಲವನ್ನು ಶೋಧ ಮಾಡದೆ ಕೇವಲ ಅದರ ಅನುಸರಣೆ ಮಾಡುವವರನ್ನು ಗುರಿಯಾಗಿರಿಸಿಕೊಂಡಂತೆ ಇದೆ ಹೊರತು ಸಮಸ್ಯೆಯ ಮೂಲವನ್ನು ಗುರುತಿಸಿ ಸುಧಾರಿಸುವ ಕ್ರಮ ಕಂಡುಬರುವುದಿಲ್ಲ. ಮಗಳಿಗೆ ಎಲ್ಲ ವಿರೋಧಗಳ ನಡುವೆಯೂ ಅಕ್ಷರ ಕಲಿಕೆಯ ಅವಕಾಶ ನೀಡುವ ರಾಜಶೇಖರ ಆಕೆಗೆ ಬಾಲ್ಯ ವಿವಾಹವೇಕೆ ಮಾಡುತ್ತಾನೆಂಬುದು ಅರ್ಥವಾಗದೆ ಉಳಿಯುತ್ತದೆ.

ಇದೇ ಕಾದಂಬರಿಕಾರರ ಸತ್ಯವತೀ ಚರಿತ್ರೆ ಹಿಂದೂ ಸಮಾಜದ ವಿದ್ಯಾವಂತ ಹೆಣ್ಣು ಮಗಳೊಬ್ಬಳು ಸಾಂಪ್ರದಾಯಿಕ ಸಮಾಜದೊಂದಿಗೆ ಹೋರಾಡುವ ಕತೆಯನ್ನು ಚಿತ್ರಿಸುತ್ತದೆ. ಸತ್ಯವತಿ ಸ್ವತಃ ವಿದ್ಯಾವಂತೆಯಾಗಿದ್ದರೂ ತಂದೆ-ತಾಯಿಯರು ಮಾಡುವ ತನ್ನ ಬಾಲ್ಯವಿವಾಹವನ್ನು ವಿರೋಧಿಸುವ ಸ್ವತಂತ್ರ ವಿಚಾರ ಶಕ್ತಿಯನ್ನು ಪಡೆದುಕೊಂಡಂತೆ ಕಾಣುವುದಿಲ್ಲ. ಸಾಂಪ್ರದಾಯಿಕ ಸಮಾಜದಲ್ಲಿ ಸ್ತ್ರೀಯರ ಬಾಳಿನ ಉದ್ದೇಶ ಮದುವೆ ಮಾಡಿಕೊಳ್ಳುವುದು ಮತ್ತು ಪತಿ ಸೇವೆಯಲ್ಲಿ ತನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುವುದು ಎಂಬ ಸಾಂಪ್ರದಾಯಿಕ ಧೋರಣೆಗಿಂತ ಭಿನ್ನಳಾಗಿ ಚಿತ್ರಿತವಾಗಿಲ್ಲ. ಸತ್ಯವತಿ ತನ್ನ ಗಂಡನನ್ನು ನಡುಹಗಲಿನಲ್ಲಿ ಮಾತನಾಡಿಸುವುದು, ತನ್ನನ್ನು ಮತ್ತು ತನ್ನ ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳುವುದು, ಹಣ ವ್ಯವವಹಾರ ಮಾಡುವುದು, ಉಪವಾಸ ವ್ರತ ಪಾಲಿಸದಿರುವುದು, ಪುಸ್ತಕಗಳನ್ನು ಓದುವುದು ಮುಂತಾದ ಆಕೆಯ ಆಧುನಿಕ ಕಾಲದ ವ್ಯವಹಾರಗಳು, ಪ್ರವೃತ್ತಿಗಳು ಅತ್ತೆ ಯಶೋದಮ್ಮಳ ಕಣ್ಣಿನಲ್ಲಿ ಮಹಾಪರಾಧವಾಗಿ ಆಕ್ಷೇಪಣೆಗೆ ಒಳಗಾಗುತ್ತದೆ. ಇದರಿಂದ ಅಕೆ ವಿದ್ಯಾವಂತ ನವತರುಣಿಯ ಹಾಗೆ ಕನಸು ಕಾಣಲು ಮತ್ತು ಹೊಸ ಬಗೆಯ ಜೀವನ ನಡೆಸಲು ಸಾಧ್ಯವಾಗದೇ ಹೋಗುತ್ತದೆ.

ಸತ್ಯವತಿ ಒಬ್ಬ ವಿದ್ಯಾವಂತೆಯಾಗಿ ಗಾಳಿ ಬೆಳಕು ಆಡದ ಕತ್ತಲು ಕೂಪದ ಕಿರುಮನೆಯಲ್ಲಿ ತನ್ನ ಓರಗಿತ್ತಿಯ ಬಾಣಂತನವನ್ನು ಮಾಡಲು ಅವಕಾಶ ನೀಡುವುದಿಲ್ಲ. ಅವಳಿಗೆ ಅಕ್ಷರವಿದ್ಯೆ ನೀಡಿದ ವಿವೇಕದ ಮಾರ್ಗ ಹಿಡಿದು ಬಾಣಂತಿಯ ಕೊಠಡಿಯಲ್ಲಿ ಚೆನ್ನಾಗಿ ಗಾಳಿ ಬೆಳಕು ಆಡುವ ವ್ಯವಸ್ಥೆಯನ್ನು ಮಾಡುತ್ತಾಳೆ. ಅಲ್ಲದೆ ಅವಳಿಗೆ ಬಾಯಾರಿಕೆಯಾದಾಗ ನೀರನ್ನು, ಹಸಿವೆಯಾದಾಗ ಅನ್ನವನ್ನು ನೀಡದ ಹಿಂದಿನ ಕಾಲದವರ ನೀತಿಯನ್ನು ಮುರಿದು ಕಾಲಕಾಲಕ್ಕೆ ಅನ್ನ ನೀರು

ಒದಗಿಸಿ ಓರಗಿತ್ತಿ ಸುಂದರಮ್ಮಳನ್ನು ಬಾಣಂತಿತನದ ಹಿಂಸೆಯಿಂದ ಪಾರು ಮಾಡುತ್ತಾಳೆ. ಅವಳಿಗೆ ಕೊಟ್ಟ ಔಷಧಕ್ಕಿಂತ ಸತ್ಯವತಿ ಮಾಡಿದ ಉಪಚಾರವೇ ಬಾಣಂತಿಯ ದೇಹಕ್ಕೆ ಆರೋಗ್ಯವನ್ನುಂಟು ಮಾಡುತ್ತದೆ. ಅಷ್ಟರ ಮಟ್ಟಿಗೆ ಆಕೆ ಬಾಣಂತಿಯ ಆರೈಕೆ ಮಾಡುವಲ್ಲಿ ಕಾಳಜಿವಹಿಸುತ್ತಾಳೆ, ಸ್ವಚ್ಛತೆ, ಆರೋಗ್ಯ, ಪೌಷ್ಠಿಕ ಆಹಾರ ನೀಡುವ ಮೂಲಕ ತಾನು ಕಲಿತ ವಿದ್ಯೆಯನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತಾಳೆ. ಆದರೆ ಅನ್ಯ ಕಾರಣಗಳಿಂದ ಮಗು ತೀರಿ ಹೋಗಿ ಆಕೆಯ ಆಧುನಿಕ ಮತ್ತು ವೈಜ್ಞಾನಿಕ ರೀತಿಯ ಉಪಚಾರ ಕ್ರಮವೇ ಮಗುವಿನ ಸಾವಿಗೆ ಕಾರಣವೆಂಬ ಆರೋಪಕ್ಕೆ ಒಳಗಾಗಿ ಎಲ್ಲವೂ ನಿರರ್ಥಕವಾಗುತ್ತದೆ. ಸತ್ಯವತಿ ಇಂಗ್ಲಿಷ್ ವಿದ್ಯೆ ಕಲಿತ ಪರಿಣಾಮವಾಗಿ ಆಕೆ ತನ್ನ ಗಂಡನ ಮನೆಯಲ್ಲಿ ಅತ್ತೆಯ ಕಿರುಕುಳ-ಕಾಟವನ್ನು ಸದಾ ಎದುರಿಸುತ್ತಲೇ ಇರಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಆದರೆ ತನ್ನ ನಡುವಳಿಕೆ, ವಿನಯವಂತಿಕೆ, ವಿವೇಕ ಬುದ್ಧಿಯಿಂದ ಸುತ್ತಮುತ್ತಲಿನ ಮತ್ತು ನೆಂಟರಿಷ್ಟರ ಮನಸ್ಸು ಗೆಲ್ಲಬಲ್ಲವಳಾಗಿರುತ್ತಾಳೆ. ತನ್ನ ಕೂಡು ಕುಟುಂಬದಲ್ಲಿ ನಡೆಯುವ ಮೈದುನ ರಾಮಸ್ವಾಮಿ, ಸುಬ್ರಮಣ್ಯ ಮತ್ತು ನಾದಿನಿ ಸೀತೆಯ ಮದುವೆಗಳೆಲ್ಲ ಅಪ್ರಾಪ್ತ ವಯಸ್ಸಿನಲ್ಲೇ ನೆರವೇರುತ್ತವೆ. ಆಗ ಅವನ್ನು ತಡೆಯಲಾಗದೆ ಅಸಹಾಯಕಳಾಗಿ ಏನೂ ಮಾಡದ ಸ್ಥಿತಿಯಲ್ಲಿರುತ್ತಾಳೆ. ಅವಳು ತನ್ನ ವಿದ್ಯೆ, ವಿವೇಕ, ಬುದ್ಧಿ ಯಾವುದನ್ನೂ ತನ್ನ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮಾತ್ರವಲ್ಲ ಆಕೆ ತನ್ನ ಬಳಕೆಯ ವ್ಯಾಪ್ತಿಯಲ್ಲಿರುವ ಜನರಲ್ಲಿ ವಿವೇಕವನ್ನು ತುಂಬಿ ಮದುವೆಗಳು ಪ್ರಾಪ್ತ ವಯಸ್ಸಿನಲ್ಲಿ ಮಾತ್ರ ನಡೆಯಬೇಕಾದ ಆಚರಣೆಗಳು ಎಂಬ ತಿಳಿವನ್ನು ಮೂಡಿಸಲೂ ಆಗುವುದಿಲ್ಲ. ವಿಧವೆಯಾದ ಕಿರಿಯ ನಾದಿನಿ ಸೀತೆಯ ಮರುಮದುವೆ ಕುರಿತು ಸತ್ಯವತಿ ಮಾಡುವ ಪ್ರಸ್ತಾಪ ನಿಜರೂಪಕ್ಕೆ ಬರಲಾರದೆ ಹೋಗುತ್ತದೆ.

ಸ್ತ್ರೀಯರ ನಡುವೆ ಭಿನ್ನಾಭಿಪ್ರಾಯವಿಲ್ಲದೆ ಐಕ್ಯಮತವುಂಟಾಗಬೇಕಾದರೆ ವಿದ್ಯಾಭ್ಯಾಸ ಅಗತ್ಯ, ವಿದ್ಯಾಭ್ಯಾಸದಿಂದ ಮಾತ್ರ ಸ್ತ್ರೀಯರು ವಿವೇಕದಿಂದಿರಲು ಸಾಧ್ಯ ಎಂದು ನಿರೂಪಕರು ಅಲ್ಲಲ್ಲಿ ನಿರೂಪಣೆಯ ಮಧ್ಯೆ ಮೂಗು ತೂರಿಸಿ ಸ್ತ್ರೀ ಶಿಕ್ಷಣದ ಪರವಾಗಿ ಧ್ವನಿ ಎತ್ತುತ್ತಾರೆ. ಆದರೆ ಮನುಷ್ಯನಿಗಿರಬೇಕಾದ ಸಂಸ್ಕಾರದ ಬಗ್ಗೆ ಮೌನವಹಿಸುತ್ತಾರೆ.

ಸತ್ಯವತಿಯ ಅತ್ತೆ ಕಾಯಿಲೆಯಿಂದ ಹಾಸಿಗೆ ಹಿಡಿದಾಗ ಆಕೆಯ ಔಷಧೋಪಚಾರದ ಖರ್ಚುವೆಚ್ಚಗಳ ಸಂದರ್ಭದಲ್ಲಿ ಹಳೆಯ ಕಹಿ ಅನುಭವಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ತನ್ನ ತವರು ಮನೆಯವರು ಕೊಟ್ಟ ಒಡವೆಗಳನ್ನು ಮಾರಿ ವೈದ್ಯೋಪಚಾರಕ್ಕೆ ಸಹಕರಿಸುತ್ತಾಳೆ. ಇದನ್ನು ಅವಳ ಅಕ್ಷರ ವಿದ್ಯೆಯಿಂದ ಮೂಡಿದ ವಿವೇಕವೆಂದು ಹೇಳಬಹುದು.

ಸತ್ಯವತಿಯ ತವರು ಮನೆ ಒಂದು ವಿದ್ಯಾವಂತ ಕುಟುಂಬವಾಗಿದೆ. ಅವಳ ತಾಯಿ ಶ್ಯಾಮಲಾಂಬೆ, ಅತ್ತಿಗೆ ಜಾನಕಮ್ಮ ಎಲ್ಲರೂ ವಿದ್ಯಾವಂತರಾಗಿದ್ದು ಪರಸ್ಪರ ಗೌರವ, ಅನ್ಯೋನ್ಯತೆಯಿಂದ

ಬಾಳುವುದನ್ನು ಚಿತ್ರಿಸಿದೆ. ಶಿಕ್ಷಣ ಜೀವನದ ಮೇಲೆ ಸಕಾರಾತ್ಮಕವಾಗಿ ಬೀರಿದ ಪ್ರಭಾವವನ್ನು ಕಟ್ಟಿಕೊಡುತ್ತದೆ.

ಗರ್ಭಿಣಿಯಾದ ಸತ್ಯವತಿ ಗ್ರಹಣ ಕಾಲದಲ್ಲಿ ಯಾವ ಹಿಂಜರಿಕೆಯಿಲ್ಲದೆ ಮುಕ್ತವಾಗಿ ಓಡಾಡಿದರೂ ಸಾಂಪ್ರದಾಯಿಕ ಮನೋಭಾವವನ್ನು ಮೀರಲಾಗದ ನಿರೂಪಣೆ ಇದೆ. ಆಕೆಯ ಶೈಕ್ಷಣಿಕ ವಿವೇಕ, ವೈಜ್ಞಾನಿಕ ಮನೋಭಾವದ ಮೇಲೆ ಇದು ಮಸಕು ಹಾಕುತ್ತದೆ. ಸತಿ ಸಹಗಮನದ ಬಗ್ಗೆ ಕಥೆಯೊಂದನ್ನು ಕೇಳಿ ಬೆಚ್ಚಿ ಬೀಳುವ ಸತ್ಯವತಿ ಹಿರಿಯ ತಲೆಮಾರಿನ ಸ್ತ್ರೀ ವಿರೋಧಿ ನಿಲುವಿನ ಮೇಲೆ ಬೆಳಕು ಚೆಲ್ಲುವಲ್ಲಿ ವಿಫಲಳಾಗುತ್ತಾಳೆ.

ಗಂಡ ನಾರಾಯಣಮೂರ್ತಿ ಅನಾರೋಗ್ಯದಿಂದ ನರಳಿದ ಸಂದರ್ಭದಲ್ಲಿ ಆಕೆಯ ಇಡೀ ಕುಟುಂಬ ಆರ್ಥಿಕ ಮುಗ್ಗಟ್ಟಿಗೆ ಸಿಲುಕುತ್ತದೆ. ಆಗ ಸತ್ಯವತಿ ಜೀವ ಬಿಗಿಹಿಡಿದು ಮನೆ ವ್ಯವಹಾರ ನಡೆಸುತ್ತಾಳೆ. ಖರ್ಚುಗಳನ್ನು ಕಡಿತಗೊಳಿಸುವುದಲ್ಲದೆ ಗಂಡನ ಆರೈಕೆಯನ್ನು ಮಾಡುತ್ತಾಳೆ. ಇಡೀ ಕುಟುಂಬದ ಹೊರೆಯನ್ನು ನಾಜೂಕಿನಿಂದ ವಿವೇಕತನದಿಂದ ನಿಭಾಯಿಸುತ್ತಾಳೆ. ತನ್ನ ವಿದ್ಯಾಬಲವನ್ನು ಆಕೆ ಸಮರ್ಪಕವಾಗಿ ಬಳಸಿಕೊಳ್ಳುತ್ತಾಳೆ. ಇದರಿಂದ ಕುಟುಂದ ಸಂಕಷ್ಟಗಳು ಕೊನೆಗೊಂಡು ಸುಸ್ಥಿತಿಗೆ ತಲುಪುತ್ತವೆ. ಮೈದುನ ಸುಬ್ರಮಣ್ಯನ ದುರ್ವ್ಯಸನಗಳನ್ನು ಬಿಡಿಸುವಲ್ಲಿ ಮತ್ತು ಅವನ ಸಂಸಾರ ನೇರಗೊಳಿಸುವಲ್ಲಿ ತನ್ನ ಎಲ್ಲ ವಿವೇಕವನ್ನು ಬಳಸಿ ಅವನಲ್ಲಿ ನೈತಿಕತೆ, ಕುಟುಂಬದ ಜವಾಬ್ದಾರಿಯನ್ನು ಬೆಳೆಸುವಲ್ಲಿ ಯಶಸ್ಸು ಕಾಣುತ್ತಾಳೆ. ಬಹುಶಃ ಸತ್ಯವತಿ ವಿದ್ಯಾವತಿಯಾದ ಫಲ ಈ ಘಟನೆಯಲ್ಲಿ ಕಾಣಬಹುದು. ಈ ವಿದ್ಯಾವತಿಯ ಚರಿತೆಯಾದ ಪ್ರಸ್ತುತ ಕಾದಂಬರಿ ಅಂತಿಮವಾಗಿ ಇಂಗ್ಲಿಷ್ ಶಿಕ್ಷಣ ಪಡೆದ ಹಿಂದೂ ಸ್ತ್ರೀಯೊಬ್ಬಳ ಅತಂತ್ರ ಸ್ಥಿತಿಯನ್ನು ಓದುಗರ ಮುಂದಿಡುತ್ತದೆ.

ಚಿಲಕಮರ್ತಿಯವರ ಅಹಲ್ಯಾಬಾಯಿ ಐತಿಹಾಸಿಕ ಕಾದಂಬರಿಯಲ್ಲಿ ನಾಯಕಿಯನ್ನು 'ವಿದ್ಯಾವತಿ' ಎಂಬ ಗುಣ ವಿಶೇಷದಿಂದ ಪರಿಚಯಿಸಲಾಗಿದೆ. ಈ ಒಂದು ಪದವನ್ನು ಹೊರತುಪಡಿಸಿ ಅಹಲ್ಯಾಬಾಯಿಯ ಶಿಕ್ಷಣ ಕುರಿತು ಯಾವ ವಿವರವೂ ಇಲ್ಲ. ಸಾಮಾನ್ಯವಾಗಿ ಭಾರತದ ರಾಜಮನೆತನಗಳಲ್ಲಿ ರಾಜಕುಮಾರರಿಗೆ ಜೀವನದ ಸಕಲ ವಿಚಾರಗಳನ್ನು ಒಳಗೊಂಡ ೬೪ ವಿದ್ಯೆಗಳನ್ನು ಕಲಿಸಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಅಹಲ್ಯಾಬಾಯಿ ಮರಾಠ ರಾಜಮನೆತನದಲ್ಲಿ ಹುಟ್ಟಿದ ರಾಜಕುಮಾರಿಯಾಗಿ ಯಾವ ಬಗೆಯ ವಿದ್ಯೆ ಪಡೆದಿದ್ದಳೆಂಬುದನ್ನು ಚರಿತ್ರೆ ಮೊದಲಾದ ಅನ್ಯಜ್ಞಾನಗಳಿಂದ ತಿಳಿದುಕೊಳ್ಳಬೇಕಾಗಿದೆ. ಭಾರತದಲ್ಲಿ ಆಳಿಹೋದ ರಾಣಿಯರಾದ ಝಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ ಮೊದಲಾದ ರಾಜ ಮನೆತನದ ಮಹಿಳೆಯರು ಇಲ್ಲಿ ನೆನಪಿಗೆ ಬರುತ್ತಾರೆ. ಇವರ ಸಾಲಿನಲ್ಲಿ ಅಹಲ್ಯಾಬಾಯಿ ಹೋಳ್ಕರ್ ಕೂಡ ತನ್ನ ಪ್ರಾಂತ್ಯವನ್ನು ಮುನ್ನಡೆಸಿದ ಧೀರ ಮಹಿಳೆಯಾಗಿದ್ದಾಳೆ. ಇಡೀ ರಾಜ್ಯದ ಹೊಣೆಗಾರಿಕೆಯನ್ನು ಹೊತ್ತ ರಾಜ

ಅಥವಾ ರಾಣಿಯ ಸ್ಥಾನವನ್ನು ತುಂಬಲು ಸಾಂಪ್ರದಾಯಿಕವಾಗಿ ನೀಡುತ್ತಿದ್ದ ವಿದ್ಯೆಗಳನ್ನು ಅಹಲ್ಯಾಬಾಯಿ ಕೂಡ ಪಡೆದಿದ್ದಳು ಎಂಬುದನ್ನು 'ವಿದ್ಯಾವತಿ' ಎಂಬ ಪದ ಅರ್ಥೈಸುತ್ತದೆ.

ಈ ವಿದ್ಯಾಕ್ರಮದಲ್ಲಿ ಪುರುಷರ ಅಗತ್ಯಗಳನ್ನು ಗಮನಿಸಿಯೇ ೬೪ ವಿದ್ಯೆಗಳಲ್ಲಿ ಸೇರಿಸಬೇಕಾದ ಎಲ್ಲಾ ಕ್ಷೇತ್ರಗಳನ್ನು ಒಳಪಡಿಸಲಾಗಿದೆ. ಆದರೆ ರಾಜಕುಮಾರಿಯರಿಗೆ ಶಿಕ್ಷಣ ನೀಡುವ ಸಂದರ್ಭದಲ್ಲಿ ಅವರ ಅಗತ್ಯಗಳಿಗೆ ಅನುಗುಣವಾಗಿ ಲಿಂಗಭೇದ ಗಮನಿಸದೆ ವಿದ್ಯೆಯನ್ನು ನೀಡಲಾಗುತ್ತಿತ್ತೇ ಅಥವಾ ಲಿಂಗಭೇದಕ್ಕನುಗುಣವಾಗಿ ರಾಜಕುಮಾರಿಯರ ವಿದ್ಯಾಭ್ಯಾಸದಲ್ಲಿ ವ್ಯತ್ಯಾಸ ಇರುತ್ತಿತ್ತೆ ಎಂಬ ಯಾವ ವಿವರಗಳೂ ಈ ಕೃತಿಯಲ್ಲಿ ದೊರೆಯುವುದಿಲ್ಲ. ತನ್ನ ವಿದ್ಯಾಬಲದಿಂದ ಅಹಲ್ಯಾಬಾಯಿ ರಾಜ್ಯದ ಶತ್ರುಗಳನ್ನಷ್ಟೇ ಅಲ್ಲದೆ, ಅಧಿಕಾರಕ್ಕಾಗಿ ಕುತಂತ್ರ ನಡೆಸುವ ಒಳಸಂಚುಗಾರರನ್ನೂ, ಲಿಂಗಭೇದಕ್ಕೆ ಆದ್ಯತೆ ನೀಡಿ ಪುರುಷ ಅಹಂಕಾರವನ್ನು ಮೆರೆವ ತನ್ನ ಸುತ್ತಲ ಜನರನ್ನೂ ಮಣಿಸುವಲ್ಲಿ ಮೇಲುಗೈ ಸಾಧಿಸಿದಳು ಎಂಬ ಚಿತ್ರಣ ದೊರೆಯುತ್ತದೆ. ಇಷ್ಟು ಮಾತ್ರದಿಂದಲೇ ಅಹಲ್ಯಾಬಾಯಿಯ ಶಿಕ್ಷಣ ಸಾಂಪ್ರದಾಯಿಕ ಮಿತಿಯಲ್ಲಿ ನಡೆದಿದ್ದರೂ ಅದು ರಾಜ್ಯದ ಹೊಣೆ ಹೊತ್ತವರ ಅಗತ್ಯಗಳನ್ನು ಪೂರೈಸುವ ಶಿಕ್ಷಣವಾಗಿತ್ತು ಅಥವಾ ಅಂತಹ ಅಗತ್ಯಗಳನ್ನು ಪೂರೈಸಿಕೊಳ್ಳಲು ಉತ್ತೇಜಿಸುವ ಶಿಕ್ಷಣವಾಗಿತ್ತು ಎಂದು ಹೇಳಬಹುದು.

ಚಿಲಕಮರ್ತಿಯವರ ರಾಜರತ್ನಮು ಕಾದಂಬರಿಯ ನಾಯಕಿ ರಾಜರತ್ನಮು. ಅವಳ ವಿದ್ಯಾಭ್ಯಾಸ ಆಕೆಯ ಗ್ರಾಮದ ಶಾಲೆಯಲ್ಲಿದ್ದ ತರಗತಿಗಳ ವರೆಗೆ ನಡೆಯುತ್ತದೆ. ತನ್ನ ಐದನೆಯ ವಯಸ್ಸಿನಿಂದ ಒಂಬತ್ತನೆಯ ವಯಸ್ಸಿನವರೆಗೆ ಶಾಲೆಗೆ ಹೋಗಿ ಅಧಿಕೃತವಾಗಿ ಕಲಿಕೆಯಲ್ಲಿ ಪಾಲ್ಗೊಳ್ಳುತ್ತಾಳೆ. ಆಕೆ ಬುದ್ಧಿವಂತಳಾಗಿದ್ದು, ಚುರುಕಾಗಿ ಕಲಿಯುವ ಸ್ವಭಾವದವಳಾಗಿದ್ದರೂ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅವಳು ಹೆಣ್ಣು ಎಂಬ ಕಾರಣಕ್ಕಾಗಿ ಮುಂದಿನ ಊರಿಗೆ ಹೋಗದೆ ಅಷ್ಟಕ್ಕೆ ನಿಂತುಬಿಡುತ್ತದೆ. ಸಾಂಪ್ರದಾಯಿಕ ಮನಸ್ಸುಗಳ ಹಿಂಜರಿತ ಅವಳ ವಿದ್ಯೆಯನ್ನು ಮೊಟಕುಗೊಳಿಸುತ್ತದೆ. ಆದರೆ ರಾಜರತ್ನಂಳ ಸೋದರ ಕೇಶವರಾಜು ಗಂಡು ಹುಡುಗನಾದ್ದರಿಂದ ಉನ್ನತ ವ್ಯಾಸಂಗಕ್ಕಾಗಿ ಬೇರೆ ಊರಿಗೆ ಹೋಗುತ್ತಾನೆ. ಆತ ಎಸ್.ಎಸ್.ಸಿ., ಇಂಟರ್‌ಮಿಡಿಯಟ್, ಬಿ.ಎ., ಬಿ.ಎಲ್. ತರಗತಿಗಳನ್ನು ಓದಿ ಸರ್ಕಾರದ ಕಲೆಕ್ಟರ್ ಹುದ್ದೆಯಂಥ ಅಧಿಕಾರದ ಉನ್ನತ ಪದವಿಗೆ ಏರುತ್ತಾನೆ. ಊರಿನಲ್ಲೇ ಉಳಿದ ರಾಜರತ್ನಂ ತನ್ನ ಬಿಡುವಿನ ವೇಳೆಯಲ್ಲಿ ರುಕ್ಮಿಣಿ ಕಲ್ಯಾಣ, ಗಜೇಂದ್ರ ಮೋಕ್ಷ, ನರಸಿಂಹಾವತಾರ ಘಟ್ಟ ಮೊದಲದ ಪೌರಾಣಿಕ ಕೃತಿಗಳನ್ನು ತನ್ನ ತಂದೆಗಾಗಿ ಓದುವುದು, ವಿವರಣೆ ನೀಡುವುದು ಮತ್ತು ಅವನ್ನು ರಾಗವಾಗಿ ಹಾಡುವಲ್ಲಿ ಮಾತ್ರ ನಿರತಳಾಗಿರುತ್ತಾಳೆ. ಇಂಥ ಕೃತಿಗಳಲ್ಲಿ ತನಗೆ ಅರ್ಥವಾಗದ ಸಂದರ್ಭಗಳನ್ನು ಮನೆಗೆ ಬಂದ ಶಾಸ್ತ್ರಿಗಳ ಜೊತೆ ಚರ್ಚಿಸಿ ತನ್ನ ಗ್ರಹಿಕೆಯ ಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಾಳೆ. ಅವಳ ಓದು ಭಾರತ, ಭಾಗವತ, ರಾಮಾಯಣದಂತಹ

ಧಾರ್ಮಿಕ ಪಠ್ಯಗಳ ಓದಿಗೆ ಸೀಮಿತಗೊಳ್ಳುತ್ತದೆ. ದಿನನಿತ್ಯದ ವ್ಯವಹಾರದಲ್ಲಿ ಆಕೆ ಪತ್ರ ವ್ಯವಹಾರ ನಡೆಸಬಲ್ಲವಳಾಗಿದ್ದಳು. ತಂದೆ ರಾಮಲಿಂಗಸ್ವಾಮಿ ಅಂಗಡಿ ಲೆಕ್ಕ ಮಾಡುವ ಕರಣಿಕನಾಗಿದ್ದನು. ಅವನಿಗೆ ಸಹಾಯಕಳಾಗಿ ಲೆಕ್ಕ ಮಾಡುವುದು, ಬಡ್ಡಿ ನಿರ್ಧರಿಸುವುದು ಮೊದಲಾದ ಕಾರ್ಯಗಳಲ್ಲೂ ಚತುರಳಾಗಿದ್ದಳೆಂದು ವಿವರಿಸಲಾಗಿದೆ. ಇಂತಹ ಚುರುಕು ಬುದ್ಧಿಯ ರಾಜರತ್ನಂಗಾಗಿ ಇಂಗ್ಲಿಷ್ ಕಲಿತು ಸರ್ಕಾರಿ ಉದ್ಯೋಗದಲ್ಲಿರುವ ಹುಡುಗನೊಂದಿಗೆ ಮದುವೆ ಮಾಡಬೇಕೆಂಬುದು ಅವಳ ತಂದೆ ಬಯಸುತ್ತಾನೆಯೆ ಹೊರತು ಅವಳನ್ನೆ ಸರ್ಕಾರಿ ಹುದ್ದೆಗೆ ಅರ್ಹಳನ್ನಾಗಿ ಮಾಡುವುದಿಲ್ಲ.

ಅಣ್ಣ-ತಂಗಿಯರಾದ ಕೇಶವರಾಜು, ರಾಜರತ್ನಂ ನಡುವೆ ಕಲಿಕೆಯ ಕ್ರಮಗಳಾದ ಗ್ರಹಿಕೆ, ಅರ್ಥೈಸುವಿಕೆ, ಅಭಿವ್ಯಕ್ತಿ ಇವುಗಳಲ್ಲಿ ಯಾವ ಹಂತದಲ್ಲೂ ವ್ಯತ್ಯಾಸಗಳಿದ್ದಂತೆ ಕಂಡು ಬರುವುದಿಲ್ಲ. ರಾಜರತ್ನಂ ಹೆಣ್ಣುಮಗಳಾದ ಕಾರಣಕ್ಕೆ ಕಲಿಕೆಗಾಗಿ ಮನೆಯಿಂದ, ಊರಿನಿಂದ ಹೊರಗೆ ಹೋಗಲು ಸಾಧ್ಯವಾಗುವುದಿಲ್ಲ. ಇದರಿಂದ ಸಾಂಪ್ರದಾಯಿಕ ಹಿಂದೂ ಸಮಾಜದ ಧಾರ್ಮಿಕ ಪಠ್ಯಗಳ ಮಿತಿಯಲ್ಲೇ ಆಲೋಚಿಸುವಂತೆ ಅವಳನ್ನು ಕಟ್ಟಿ ಹಾಕಲಾಗುತ್ತದೆ. ಬಹುಶಃ ಇದಕ್ಕೆ ಸಾಂಪ್ರದಾಯಿಕ ಮನಸ್ಸುಗಳು ಜಾತಿ ಮರ್ಯಾದೆಯನ್ನು ಕಾಪಾಡಿಕೊಳ್ಳುವ ಧೋರಣೆಯನ್ನು ಸ್ತ್ರೀಯರ ವಿಷಯದಲ್ಲಿ ಹೆಚ್ಚು ಪ್ರಜ್ಞಾಪೂರ್ವಕವಾಗಿದ್ದುದೇ ಕಾರಣ ಇರಬಹುದು. ಇಂಗ್ಲಿಷ್ ಶಿಕ್ಷಣದಿಂದ ಸ್ತ್ರೀ ಪುರುಷ ಸಂಬಂಧದ ಬಗ್ಗೆ ಮುಕ್ತವಾಗಿ ಆಲೋಚಿಸುವ ಶಕ್ತಿ ಮತ್ತು ತಮಗೆ ಸರಿ ಕಂಡ ವಿಚಾರವನ್ನು ಕಾರ್ಯರೂಪಕ್ಕೆ ಇಳಿಸುವ ಕ್ರಿಯಾಶಕ್ತಿ ಬರುತ್ತದೆ ಎಂಬ ಅಧೈರ್ಯವೂ ಕೆಲಸ ಮಾಡಿರುವಂತೆ ಕಾಣುತ್ತದೆ. ಕಾದಂಬರಿಯಲ್ಲಿ ಜಗನ್ನಾಥನ ಸೋದರಮಾವ ಇಂಗ್ಲಿಷ್ ಶಿಕ್ಷಣದ ಬಗ್ಗೆ ತಳೆವ ಅಭಿಪ್ರಾಯ ಮತ್ತು ಕೇಶವರಾಜು ತನ್ನ ಗೆಳೆಯನ ಜೊತೆಯಲ್ಲಿ ಹಂಚಿಕೊಳ್ಳುವ ಅಭಿಪ್ರಾಯ ಈ ಮಾತಿಗೆ ಪುಷ್ಟಿ ಕೊಡುವಂತೆ ಇದೆ. ಅವು ಹೀಗಿವೆ.:

"ಎಲ್ಲಿಂದ ಬಂತು ಈ ಪ್ರೀತಿ ಪ್ರೇಮ? ಈ ಇಂಗ್ಲೀಷ್ ಶಿಕ್ಷಣದಿಂದ ಇಂತಹ ಚಿತ್ರ ವಿಚಿತ್ರಗಳು ಕಾಣಿಸುಕೊಳ್ಳುತ್ತವೆ. ನಮ್ಮ ಕಾಲದಲ್ಲಿ ಇವೆಲ್ಲ ನಮಗೆ ಗೊತ್ತಿರಲಿಲ್ಲ. ನಮಗೆ ಹೆಂಡತಿಯಂದರೆ ಮೈಮೇಲಿನ ವಸ್ತ್ರಗಳಿದ್ದಂತೆ"(ಪು.೧೩೩).

"ಯೋಚಿಸಬೇಡ, ಧೈರ್ಯ ತಂದುಕೋ. ನಾವು ಓದಿದ ಇಂಗ್ಲಿಷ್ ಗ್ರಂಥಗಳಲ್ಲಿ, ಪುರಾಣಗಳಲ್ಲಿ ನ್ಯಾಯವಂತರಿಗೆ ಎಷ್ಟೋ ಕಷ್ಟಗಳು ಸಂಭವಿಸಿರುವುದು ಕಾಣುತ್ತೇವೆ. ಧೈರ್ಯವನ್ನು ಊರುಗೋಲಾಗಿ ಬಳಸಿಕೊಂಡು ಕಷ್ಟಗಳನ್ನು ದಾಟಬೇಕು"(ಪು.೧೭೨).

ಸಾಂಪ್ರದಾಯಿಕ ಮನಸ್ಸು ಸ್ತ್ರೀಯರು ಸಂಸ್ಕೃತಿಯ ಸಂರಕ್ಷರು ಎಂದು ತಿಳಿಯುತ್ತದೆ. ಇದರಿಂದಾಗಿಯೆ ಹೆಣ್ಣುಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ನೀಡಲು ಅದು ಹಿಂಜರಿದಿದೆ. ಸಾಂಪ್ರದಾಯಿಕ ಮನಸ್ಸುಗಳ ಪ್ರಕಾರ ತಾವು ರೂಪಿಸಿದ ಪರಂಪರೆ, ಸಂಪ್ರದಾಯ, ಸಂಸ್ಕೃತಿಯನ್ನು ಮಹಿಳೆಯರು

ಕಟ್ಟುನಿಟ್ಟಾಗಿ ಪಾಲಿಸುವ ಹೊಣೆ ಹೊತ್ತಿದ್ದಾರೆ. ಹಾಗಾಗಿ ಮಹಿಳೆಯರು ತಮ್ಮ ಪರಂಪರೆಯಾಚೆಗಿನ ವಿದ್ಯೆ, ತಿಳುವಳಿಕೆ, ಅರಿವು, ಜ್ಞಾನವನ್ನು ಪಡೆದು ಬಿಟ್ಟರೆ ತಮ್ಮ ಸಂಸ್ಕೃತಿಯ ಅಸ್ತಿತ್ವಕ್ಕೆ ಧಕ್ಕೆ ಒದಗಬಹುದೆಂಬ ಹೆದರಿಕೆ ಕಾರ್ಯನಿರ್ವಹಿಸಿದಂತೆ ಇದೆ.

ಈ ಭಯ ಗಂಡುಮಕ್ಕಳ ವಿಚಾರದಲ್ಲಿ ಕಾರ್ಯನಿರ್ವಹಿಸಿದಂತೆ ಕಾಣುವುದಿಲ್ಲ. ಆದ್ದರಿಂದ ಕೇಶವರಾಜು ಬಿ.ಎಲ್.ಮಟ್ಟದ ಇಂಗ್ಲಿಷ್ ಶಿಕ್ಷಣ ಪಡೆಯಲು ಸಾಧ್ಯವಾಗಿ ಕಲೆಕ್ಟರ್ ಹುದ್ದೆಯಂತಹ ಉನ್ನತ ಅಧಿಕಾರದ ಸ್ಥಾನ ಪಡೆಯಲು ಸಾಧ್ಯವಾಗುತ್ತದೆ. ಸ್ತ್ರೀಯರು ಹಿಂದೂ ಸಮಾಜದ ಪುರುಷರನ್ನಲ್ಲದೆ ಅನ್ಯ ಪುರುಷರೊಂದಿಗೆ ಸಂಪರ್ಕಕ್ಕೆ ಒದಗಬಾರದು. ಅನ್ಯ ಧರ್ಮ/ಜಾತಿಯ ಪುರುಷರೊಂದಿಗೆ ಮದುವೆಯ ಮೂಲಕ ತಮ್ಮ ಜೀವನ ಕಟ್ಟಿಕೊಳ್ಳಬಾರದು ಎಂಬುದು ಈ ಸಂಸ್ಕೃತಿಯ ರಕ್ಷಣೆಯ ಹಿಂದೆ ಕಾರ್ಯನಿರ್ವಹಿಸಿರುವ ಚಿಂತನೆಯಾಗಿರುವಂತಿದೆ. ಹೆಣ್ಣುಮಕ್ಕಳನ್ನು ತಮ್ಮ ಬಿಗಿಮುಷ್ಟಿಯಲ್ಲಿ ಇಟ್ಟುಕೊಳ್ಳುವ ಉಪಾಯವಾಗಿ ಅವರನ್ನು ಅವರ ಎಲ್ಲ ಬಗೆಯ ಸಾಮರ್ಥ್ಯದಿಂದ ವಂಚಿತರನ್ನಾಗಿ ಮಾಡಿರುವಂತೆ ತೋರುತ್ತದೆ. ಇದು ರಾಜರತ್ನಂ ಪಾತ್ರದಲ್ಲೂ ಅನ್ವಯವಾಗುವ ಅಂಶವಾಗಿದೆ.

ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಕಾದಂಬರಿಯ ಮುಖ್ಯ ಪಾತ್ರವಾಗಿರುವ ಇಂದಿರಾಬಾಯಿ ಮನೆಯ ಚೌಕಟ್ಟಿನಲ್ಲಿ ಸಾಂಪ್ರದಾಯಿಕ ಶಿಕ್ಷಣವನ್ನು, ಹೊರಗೆ ಆಧುನಿಕ ಶಿಕ್ಷಣ ಪಡೆಯುವುದನ್ನು ಚಿತ್ರಿಸಲಾಗಿದೆ. ಅವಳ ಮದುವೆ ಎಂಟನೆಯ ವಯಸ್ಸಿನಲ್ಲಿ ಆಗುವ ಹೊತ್ತಿಗೆ ತಾಯಿ ಅಂಬಾಬಾಯಿ ತನ್ನ ಮನೆಯಲ್ಲಿ ಹೆಣ್ಣು ಮಕ್ಕಳು ತಮ್ಮ ಹಿರಿಯರಿಂದ ಕಲಿತ ಹಾಡುಗಳನ್ನು, ಪೌರಾಣಿಕ ಕತೆಗಳನ್ನು, ತಕ್ಕ ಮಟ್ಟಿಗೆ ಅಡುಗೆಯ ಕೆಲಸಗಳನ್ನು, ಅವಶ್ಯವಿದ್ದಷ್ಟು ಬರಹವನ್ನು ಅವಳಿಗೆ ಕಲಿಸಿದ್ದಳು ಎಂದು ಹೇಳಿದೆ. ಒಂದು ಹೆಣ್ಣು ಜೀವನದಲ್ಲಿ ಕಲಿಯಬೇಕಾದುದು ಇಷ್ಟೇ ಎಂಬುದು ಅಂಬಾಬಾಯಿಯ ಕಲ್ಪನೆಯಾಗಿದೆ. ಮನೆಕೆಲಸಕ್ಕೆ ಸೀಮಿತಳಾದ ಹೆಣ್ಣು ಕೆಲಸದ ಬೇಸರವನ್ನು ನೀಗಿಸಲು ಹಾಡಿಕೊಳ್ಳತಕ್ಕ ಹಾಡುಗಳು, ತಾನು ಒಬ್ಬ ಹೆಣ್ಣಾಗಿ ಗಂಡನಿಗೆ ನಿಷ್ಠೆಯನ್ನು ತೋರಿಸುವಂತಹ ಕತೆಗಳು, ಹಿಂದೂ ಪುರಾಣದಲ್ಲಿ ನಿರೂಪಿತ ದೈವದ ಮಹಿಮೆಯನ್ನು ಸಾರುವ ಕತೆಗಳು, ಗೆಳತಿಯರೊಂದಿಗೆ, ನೆರೆಹೊರೆಯವರೊಂದಿಗೆ ಮನೋರಂಜನೆಗಾಗಿ ಹಾಡಬಹುದಾದಂತಹ ಹಾಡುಗಳು ಮತ್ತು ಅವನ್ನು ಚೆನ್ನಾಗಿ ನೆನಪಿನಲ್ಲಿಟ್ಟು ಕೊಳ್ಳಲು ಹಾಗೂ ತಪ್ಪಿಲ್ಲದೆ ಕಲಿತುಕೊಳ್ಳಲು ಅವಶ್ಯವಿದ್ದಷ್ಟು ಮಾತ್ರ ಬರವಣಿಗೆ ಮಾಡುವುದನ್ನು ಕಲಿಯುವುದು ಇವಿಷ್ಟೇ ಒಂದು ಹೆಣ್ಣಿನ ಬಾಳಿಗೆ ಅಗತ್ಯವಾಗಿದ್ದುದು ಎಂದು ನಿರ್ಧರಿಸಲಾಗಿದೆ. ಆಕೆಯ ತಿಳುವಳಿಕೆ ಸೀಮಿತವಾಗಿರಬೇಕು. ಜಾತಿ ಮತ್ತು ಧರ್ಮದ ಗಡಿರೇಖೆಗಳನ್ನು ಮೀರುವಂತಿರಬಾರದು. ಅದಕ್ಕಾಗಿ ಮತ ಸಂಬಂಧಿ ವಿಚಾರಗಳನ್ನು ಸಮರ್ಥಿಸಲು ಮತ್ತು ಅನುಸರಿಸಲು ಅಗತ್ಯವಿದ್ದಷ್ಟು ಮಾತ್ರ ಕಲಿಯುವ ಅವಕಾಶ

ಒದಗಿಸಲಾಗಿದೆ. ಹೆಣ್ಣಿಗೆ ಹೆಚ್ಚಿನ ವಿದ್ಯೆಯನ್ನು ನೀಡಿದಲ್ಲಿ ಆಕೆ ಸ್ವತಂತ್ರ ಚಿಂತಕಳಾಗಿ ಬೆಳೆಯುತ್ತಾಳೆ. ಆಗ ಪ್ರತಿಯೊಂದು ವಿಚಾರವನ್ನು ಅದು ಸ್ವಧರ್ಮದ್ದಿರಲಿ, ಅನ್ಯದ್ದಾಗಿರಲಿ ಅಥವಾ ಅದರ ಮೂಲ ಯಾವುದೆಂದು ಗಮನಿಸದೆ, ಅದರ ಸಾಧಕ ಬಾಧಕಗಳು, ಒಳಿತು ಕೆಡಕುಗಳು, ಸಕಾರಾತ್ಮಕ ಮತ್ತು ನಕಾರಾತ್ಮಕ ನೆಲೆಗಳು ಎಲ್ಲವನ್ನು ಅದರ ಪ್ರತಿಯೊಂದು ಆಯಾಮವನ್ನು ಪರಿಶೀಲಿಸಿ, ವಿವೇಚಿಸಿ ಯಾವುದು ಉತ್ತಮ ವಿಚಾರ, ಯಾವುದು ಅಲ್ಲ, ಯಾವುದು ಒಪ್ಪತಕ್ಕ ವಿಚಾರ, ಯಾವುದು ನಿರಾಕರಿಸತಕ್ಕ ವಿಚಾರ ಎಂದು ತನ್ನದೇ ನಿಲುವನ್ನು ತಳೆಯುವ ಬೌದ್ಧಿಕ ಶಕ್ತಿ ಪಡೆದುಕೊಳ್ಳುತ್ತಾಳೆ. ಆದರೆ ತನ್ನ ಮತ ಧರ್ಮವನ್ನು ಅನುಸರಣೆ ಮಾಡಲು ತಕ್ಕಷ್ಟು ಮಾತ್ರ ಅಲ್ಪ ಪ್ರಮಾಣದಲ್ಲಿ ವಿದ್ಯೆ ನೀಡಿದರೆ ತನ್ನ ಜಾತಿ-ಧರ್ಮದ ಕಟ್ಟುಕಟ್ಟಳೆಗಳನ್ನು ಪ್ರಶ್ನಿಸುವ, ಮೀರುವ ಸಂದರ್ಭವೆ ಎದುರಾಗದಂತೆ ಮಾಡಬಹುದು. ಅಲ್ಪ ವಿದ್ಯೆಯಿಂದ ಹೆಣ್ಣನ್ನು ತನ್ನ ಹಿಡಿತದಲ್ಲೆ ಇಟ್ಟುಕೊಳ್ಳುವ ಪ್ರಯತ್ನವಾಗಿ ಇಂತಹ ಸಾಂಪ್ರದಾಯಿಕ ಕಲಿಕೆ ನೀಡಿರುವುದನ್ನು ಗುರುತಿಸಬಹುದು. ಇದರಿಂದ ಮನೆಯ ಮಟ್ಟದಲ್ಲಿ ಹೆಣ್ಣುಮಕ್ಕಳಿಗೆ ನೀಡಲಾಗುವ ಸಾಂಪ್ರದಾಯಿಕ ಕಲಿಕೆ ಅವಳನ್ನು ವಿವೇಚನಾಶೀಲೆಯನ್ನಾಗಿ ಮಾಡುವಲ್ಲಿ ಸಮರ್ಥವಾಗಿರುವುದಿಲ್ಲ ಎಂದು ಕಂಡುಬರುತ್ತದೆ.

ಇಂದಿರಾಬಾಯಿ ಜಾತಿ ಮರ್ಯಾದೆ ಕಾಪಾಡುವ ಇಂತಹ ವಿದ್ಯೆಯನ್ನು ಪಡೆದು ಬಾಲ್ಯ ವಿವಾಹವಾಗಿ, ವಿಧವೆಯಾಗಿ ತನ್ನ ಹಿತಾಸಕ್ತಿಯನ್ನು ಸಾಧಿಸಲು ವಿಫಲಳಾಗುವ ಚಿತ್ರ ಕಾದಂಬರಿಯಲ್ಲಿ ನಿರೂಪಿತವಾಗಿದೆ. ಆಕೆ ತನ್ನ ಹಿತವನ್ನು ಕಾಪಾಡಿಕೊಳ್ಳಲು ತನ್ನ ತಂದೆತಾಯಿಯರನ್ನು ಮತ್ತು ಅವರ ಸುತ್ತಲ ಜನರನ್ನು ಬಿಟ್ಟು ಹೊರಡುವ ನಿರ್ಧಾರವನ್ನು ಅನಿವಾರ್ಯವಾಗಿ ತೆಗೆದುಕೊಳ್ಳುತ್ತಾಳೆ. ಏಕೆಂದರೆ ಆಕೆಗೆ ತನ್ನ ಗೆಳತಿಯರಿಂದ 'ಸ್ತ್ರೀಧರ್ಮನೀತಿ', 'ಏಸೋಪನ ನೀತಿಕತೆಗಳು', 'ಪಂಚತಂತ್ರ', 'ಸತ್ಯವತೀಚರಿತ್ರೆ' ಮೊದಲಾದ ಪುಸ್ತಕಗಳನ್ನು ಪಡೆದು ಓದುವ ಮೂಲಕ ತನ್ನ ಸ್ವಂತ ಬುದ್ಧಿಯನ್ನು ತನ್ನ ವಶದಲ್ಲಿಟ್ಟುಕೊಂಡಿರುತ್ತಾಳೆ. ಹೀಗಿದ್ದರೂ ಈ ಎಲ್ಲವನ್ನು ಓದುವುದೆಂದರೆ ಜಾತಿ ಕೆಡುವ ವಿಚಾರಗಳನ್ನು ತಿಳಿಯುವುದೇ ಆಗಿದೆ ಎಂಬುದು ಸಂಪ್ರದಾಯದ ನಿಲುವಾಗಿದೆ. ಆದ್ದರಿಂದಲೇ ತನ್ನ ಓದಿನ ವಿರುದ್ಧ ಆಕ್ಷೇಪಣೆ ಎತ್ತಲಾಗುತ್ತಿತ್ತೆಂದು ಅವಳಿಗೆ ತಿಳಿದಿದೆ. ಅಂಬಾಬಾಯಿಗೆ ಈ ಸಂದರ್ಭದಲ್ಲಿ ಸಂಪ್ರದಾಯವಾದಿಗಳ ಬಾಯಿ ಕಟ್ಟಿಹಾಕುವಂತೆ ಉತ್ತರಿಸುವ ಇಂದಿರಾಬಾಯಿಯ ಮಾತುಗಳು ಜೀವನದ ಅನುಭವ ಮತ್ತು ವಿಚಾರಗಳು ಸೀಮಿತ ದೃಷ್ಟಿಕೋನಕ್ಕೆ ಒಳಪಟ್ಟಿದ್ದಲ್ಲ ಎಂದು ಸೂಚಿಸುತ್ತವೆ. ಆ ಮಾತುಗಳು ಹೀಗಿವೆ.

"ನಮ್ಮ ಕೊರತೆಗಳು ನಮಗೆ ಕಾಣಿಸುವುದಿಲ್ಲ. ನಮಗೆ ಕಾಣಿಸುವುದು ಪರರ ಗುಣದೋಷಗಳು ತಾನೆ. ಆದುದರಿಂದ ಪರರ ಒಳ್ಳೇ ನಡತೆ ಯಾವುದೆಂದು ತಿಳಿದುಕೊಂಡು, ನಮ್ಮ ನಡತೆಯನ್ನು ತಿದ್ದುವುದು ಉತ್ತಮವಷ್ಟೇ?" (ಪು.೧೪೪).

ತಿಳುವಳಿಕೆ ಯಾವ ಮೂಲದಿಂದಲಾದರೂ ಬರಲಿ ಅದನ್ನು ಸ್ವೀಕರಿಸುವ ಮನೋಭಾವವನ್ನು ಇಂದಿರಾಬಾಯಿ ಹೊಂದಿದ್ದಾಳೆ. ಅವಳಿಗೆ ತಿಳುವಳಿಕೆ ಪಡೆಯುವುದು ಮುಖ್ಯವೇ ಹೊರತು, ಆ ತಿಳುವಳಿಕೆ ಎಲ್ಲಿಂದ ಬಂತೆಂಬುದು ಅಮುಖ್ಯವಾಗಿ ತಿಳಿದಂತಿದೆ. ಹಾಗಾಗಿಯೇ ವಿಧವೆಯಾದ ಅವಳಿಗೆ ವಿರಕ್ತಭಾವ ಮೂಡಿಸಲು ಪ್ರಯತ್ನಿಸುವ ಅವಳ ತಂದೆತಾಯಿಯರೂ ಸಂತಭಜನ ಮಂಡಳಿಯವರೂ ಸಂತ ಸನ್ಯಾಸಿಯರೂ ನಡೆಸುವ ಪ್ರಯತ್ನವನ್ನು ಆಕೆ ನಿರರ್ಥಕಗೊಳಿಸುತ್ತಾಳೆ. ಬಹುಶಃ ಅಂತಹ ತಿಳುವಳಿಕೆ ತನ್ನ ಜೀವನವನ್ನು ಸರಿಪಡಿಸುವ ಬದಲು ಮತ್ತಷ್ಟು ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂಬ ತನ್ನ ವಿವೇಕ ಬುದ್ಧಿಯನ್ನು ಆಕೆ ಅನುಸರಿಸಿರಬೇಕು. ಆದ್ದರಿಂದ ಇಂದಿರಾಬಾಯಿಗೆ ಅಮೃತರಾಯ ಮತ್ತು ಜಲಜಾಕ್ಷಿಯರಲ್ಲಿದ್ದ ಇಂಗ್ಲಿಷ್ ಶಿಕ್ಷಣ ತಂದುಕೊಟ್ಟ ಮುಕ್ತ ಮನೋಭಾವ ಅಷ್ಟೇ ಅಲ್ಲದೆ ಕಷ್ಟದಲ್ಲಿದ್ದವರಿಗೆ ಆಶ್ರಯ ನೀಡಿ ಬೆಂಬಲಿಸುವ ಗುಣ ಸ್ವಭಾವವನ್ನು ಗುರುತಿಸಲು ಸಾಧ್ಯವಾಗುತ್ತದೆ. ಮಾತ್ರವಲ್ಲ ಅವರ ಆಶ್ರಯದಲ್ಲೆ ತನ್ನ ಮುಂದಿನ ಜೀವನದ ದಾರಿ ಕಂಡುಕೊಳ್ಳಲು ನಿರ್ಧರಿಸುಲ್ಲಿ ಧೈರ್ಯ ವಹಿಸುತ್ತಾಳೆ. ಇದರ ಫಲವಾಗಿ ಆಕೆ "ವಿದ್ಯೆ ಕಲಿಯುವುದರಿಂದ ಯಾವುದೊಂದು ಕೇಡಿಲ್ಲ, ಮಾತ್ರವಲ್ಲ ಎಲ್ಲಾ ಕೇಡಿನಿಂದಲೂ ತಪ್ಪಿಸಿಕೊಳ್ಳಬಹುದು. ನಮ್ಮ ಬುದ್ಧಿಗೆ ಮಾತ್ರ ಒಳ್ಳೇ ಸ್ಥಿರತೆಬೇಕು. ನಮ್ಮ ಹೃದಯವೂ ನಿರ್ಮಲವಾಗಿರಬೇಕು" (ಪು.೧೮೨) ಎಂದು ತನ್ನ ನಿಲುವನ್ನು ಸ್ಪಷ್ಟ ಪಡಿಸಿಕೊಂಡು ಸತಾರ ನಗರದಲ್ಲಿ ಪಂಡಿತ ಆನಂದೀಬಾಯಿ ಎಂಬುವಳು ಚಿಕ್ಕ ಪ್ರಾಯದಲ್ಲಿ ವಿಧವೆಯರಿಗಾಗಿ ನಡೆಸುತ್ತಿದ್ದ ಸರಸ್ವತಿ ಮಂದಿರವೆಂಬ ಶಾಲೆಯಲ್ಲಿ ಇಂಗ್ಲಿಷ್, ಸಂಸ್ಕೃತ, ಗಣಿತಶಾಸ್ತ್ರ, ಚರಿತ್ರೆ, ಸ್ತ್ರೀಧರ್ಮನೀತಿ ಮುಂತಾದ ವಿಷಯಗಳನ್ನು ತೆಗೆದುಕೊಂಡು ಮೆಟ್ರಿಕುಲೇಷನ್ ಕಲಿಯಲು ಹೋಗುತ್ತಾಳೆ. ಈ ಎರಡು ವರ್ಷದ ವಿದ್ಯಾಭ್ಯಾಸದಿಂದ ಇಂದಿರಾಬಾಯಿಯಲ್ಲಿ ಆತ್ಮವಿಶ್ವಾಸ ಇಮ್ಮಡಿಸುತ್ತದೆ. ಪ್ರತಿಯೊಂದು ಸಣ್ಣ ಪುಟ್ಟ ವಿಚಾರವನ್ನು ಆಮೂಲಾಗ್ರವಾಗಿ ವಿವೇಚಿಸಿ ಸರಿ ನಿರ್ಣಯ ಮಾಡುವ ಶಕ್ತಿ ದುಪ್ಪಟ್ಟಾಗುತ್ತದೆ. ಯಾವ ವಿಚಾರ ನ್ಯಾಯೋಚಿತವಾದುದು, ಯಾವುದು ಒಪ್ಪತಕ್ಕದು, ಯಾವುದನ್ನು ಪರಾಮರ್ಶಿಸಬೇಕು, ಯಾವ ವಿಚಾರವನ್ನು ಮತ್ತಷ್ಟು ಸೂಕ್ಷ್ಮವಾಗಿ ಆಲೋಚಿಸಬೇಕು ಎಂಬೆಲ್ಲ ವಿಚಾರಗಳಲ್ಲಿ ಇಂದಿರಾಬಾಯಿ ಕುಶಾಲಾಗ್ರ ಮತಿಯಾಗುತ್ತಾಳೆ. ಅಮೃತಾರಾಯ ಮತ್ತು ಜಲಜಾಕ್ಷಿಯರು ತನ್ನ ಮರುಮದುವೆಗೆ ನೀಡುವ ಸೂಚನೆಯಲ್ಲಿರುವ ಜೀವನದ ಸಕಾರಾತ್ಮಕ ಆಂಶವನ್ನು ಅರ್ಥಮಾಡಿಕೊಳ್ಳುತ್ತಾಳೆ ಮತ್ತು ಅವರ ಅಭಿಪ್ರಾಯವನ್ನು ಮನ್ನಿಸುತ್ತಾಳೆ. ಇದರಿಂದ ಆಕೆಗೆ ಆಶ್ರಯ ನೀಡಿದ್ದ ಅಮೃತರಾಯ-ಜಲಜಾಕ್ಷಿಯರೇ ನೆರವು ನೀಡಿ ವಿದ್ಯಾಭ್ಯಾಸ ಕೊಡಿಸಿದ್ದ ಭಾಸ್ಕರರಾಯನನ್ನು ಮನಸಾರೆ ಇಷ್ಟಪಟ್ಟು ಮದುವೆಯಾಗುತ್ತಾಳೆ.

ಈ ಎಲ್ಲ ಬೆಳವಣಿಗೆ ಬದುಕನ್ನು ವಿಶಾಲವಾಗಿ ನೋಡಬೇಕೆಂದು ಆಧುನಿಕ ಶಿಕ್ಷಣ ಒದಗಿಸಿದ ನೋಟದಲ್ಲಿದೆ. ಇದರಿಂದ ಬಾಲವಿಧವೆಯಾಗಿ ತನ್ನ ಜೀವಮಾನವಿಡೀ ಬತ್ತಿ ಹೊಸೆದು

ನವೆಯಬೇಕಾಗಿದ್ದ ಇಂದಿರಾಬಾಯಿ ಹೊಸಜೀವನ ಕಟ್ಟಿಕೊಳ್ಳುವ ಸಂದರ್ಭ ಒದಗುತ್ತದೆ. ಈ ಕಥನ ಸಾಂಪ್ರದಾಯಿಕ ಶಿಕ್ಷಣ ಹೇಗೆ ಸ್ತ್ರೀಯರನ್ನು ತನ್ನ ಉದ್ದೇಶಕ್ಕೆ ಅನುಗುಣವಾಗಿ ಹಿಡಿದಿಟ್ಟುಕೊಳ್ಳುವ ದೃಷ್ಟಿ ಹೊಂದಿದೆ ಮತ್ತು ಆಧುನಿಕ ವಿದ್ಯಾಭ್ಯಾಸ ಹೇಗೆ ತಮ್ಮ ಸಮಸ್ಯೆಗಳನ್ನು ಬಿಡಿಸಿಕೊಳ್ಳುವಲ್ಲಿ ಬದುಕಿನ ನಿಜ ಸ್ವರೂಪವನ್ನು ಅರಿತುಕೊಳ್ಳಲು ನೆರವಾಗುತ್ತದೆ ಎಂಬುದನ್ನು ಚಿತ್ರಿಸಿದೆ. ಮೊದಲನೆಯದು ಸ್ತ್ರೀಯರ ಸಮಸ್ಯೆಯನ್ನು ಕಗ್ಗಂಟು ಮಾಡುವಂತೆ ಇದ್ದರೆ ಎರಡನೆಯದು ಅವರ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವ ಮಾರ್ಗದ ಬಗ್ಗೆ ಉತ್ತೇಜಿಸುವುದನ್ನು ಕಾಣಬಹುದು.

ಇಂದಿರಾಬಾಯಿ ತನ್ನ ಮನೆಯಲ್ಲಿ ತನ್ನ ತಾಯಿಯಿಂದ ಪಡೆದ ಕಲಿಕೆಯಲ್ಲಿ ತನ್ನ ಹಿತಾಸಕ್ತಿಯನ್ನು ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಅಂತಹ ಉದ್ದೇಶ ಸಾಂಪ್ರದಾಯಿಕ ಸ್ವರೂಪದಲ್ಲಿ ಇಲ್ಲದಿರುವುದೇ ಕಾರಣವಾಗಿದೆ ಅದು ತಿಳುವಳಿಕೆಯನ್ನು ನೀಡುವ ಬದಲು ತಿಳುವಳಿಕೆ ನೀಡುವ ನೆಪದಲ್ಲಿ ಪುರುಷ ಹಿತಾಸಕ್ತಿಯನ್ನು ಕಾಪಾಡುವ ಪಣ ತೊಟ್ಟುಬಿಟ್ಟಿದೆ. ಆದರೆ ಕಲಿಯುವ ವ್ಯಕ್ತಿಯ ತಿಳುವಳಿಕೆಯ ವಿಚಾರವನ್ನು ವಿಸ್ತರಿಸುವ ಮತ್ತು ಹಿತಾಹಿತ ಮೀರಿದ ಅರಿವನ್ನು ಉಂಟುಮಾಡಲು ಆಧುನಿಕ ಶಿಕ್ಷಣ ತೊಡಗಿದಂತೆ ಇದೆ. ಹಾಗಾಗಿ ಅವರವರ ಶಕ್ತಿಗೆ ಅನುಸಾರ ಅವರವರ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಆಧುನಿಕ ಶಿಕ್ಷಣ ಅವಕಾಶ ಒದಗಿಸಿಕೊಟ್ಟು ತಮ್ಮ ಸಮಸ್ಯೆಗಳಿಗೆ ಹೊರದಾರಿ ಕಂಡುಕೊಳ್ಳಲು ಪ್ರೇರಕವಾಗಿದೆ.

ಕೆರೂರು ವಾಸುದೇವಾಚಾರ್ಯರ ಇಂದಿರಾ ಕಾದಂಬರಿಯಲ್ಲಿ ಕೇಂದ್ರ ಪಾತ್ರವಾಗಿರುವ ಇಂದಿರೆಯೊಂದಿಗೆ ದೇವಯಾನಿ, ಕಮಲ ಮತ್ತು ರಾಧಾಬಾಯಿ ಪಾತ್ರಗಳು ಮುಖ್ಯನೆಲೆಯಲ್ಲಿ ಚಿತ್ರಿತವಾಗಿವೆ.

ದೇವಯಾನಿ ರಮಾಕಾಂತನ ತಂದೆಯ ಪ್ರೀತಿಗೆ ಪಾತ್ರಳಾದವಳು. ಆಕೆ ತನ್ನ ಬಾಲ್ಯಾವಸ್ಥೆಯಲ್ಲಿ ದೇಶ ಭಾಷೆಯ ಶಾಲೆಗಳಲ್ಲಿ ದೊರಕುವಷ್ಟು ವಿದ್ಯೆಯನ್ನು ಪಡೆದುಕೊಂಡಿದ್ದ ತೀಕ್ಷ್ಣ ಬುದ್ಧಿಶಾಲಿ. ತಾನು ಹದಿನಾಲ್ಕನೆಯ ವಯಸ್ಸಿನಲ್ಲಿ ವಿಧವೆಯಾದ ನಂತರ ಉನ್ನತ ಶಿಕ್ಷಣ ಪಡೆದು ಚಿತ್ರಕಲೆ, ಕಶೀದೆ (ದೇವರನಾಮ) ಮುಂತಾದವನ್ನು ಕಲಿತುಕೊಂಡಿದ್ದಳು. ಆಕೆಯ ತಂದೆ ಸಮಾಜ ಸುಧಾರಕನಾಗಿದ್ದು, ವಿಧವಾ ವಿವಾಹ, ಸ್ತ್ರೀಶಿಕ್ಷಣ ಪಕ್ಷಪಾತಿಯಾಗಿದ್ದನು. ತಂದೆಯ ವಿಚಾರಗಳ ಪ್ರಭಾವಕ್ಕೆ ಒಳಗಾಗಿದ್ದ ದೇವಯಾನಿ ತನ್ನ ಮರುಮದುವೆಯ ಬಗ್ಗೆ ಮುಕ್ತ ಮನಸ್ಸನ್ನು ಇರಿಸಿಕೊಂಡಿದ್ದಳು. ಕಮಲಾಕಾಂತನೊಂದಿಗಿನ ತನ್ನ ಮರುಮದುವೆಯ ಅವಕಾಶವನ್ನು ಜಯರಾಯನಿಂದಾಗಿ ಕಳೆದುಕೊಂಡ ದೇವಯಾನಿ ಜೀವಮಾನವಿಡೀ ಏಕಾಂಗಿಯಾಗಿ ಕಳೆಯುತ್ತಾಳೆ.

ಆಕೆ ಆಧುನಿಕ ಶಿಕ್ಷಣ ಪಡೆದಿದ್ದರೂ ತಾನು ಇಷ್ಟ ಪಟ್ಟ ವ್ಯಕ್ತಿಯನ್ನು ಒಪ್ಪಿಸುವಲ್ಲಿ ಮತ್ತು ತನ್ನ ವಿರುದ್ಧ ಸಂಚುಮಾಡಿದವರನ್ನು ಬಯಲಿಗೆಳೆಯುವಲ್ಲಿ ವಿಫಲಳಾಗುತ್ತಾಳೆ. ಶೈಕ್ಷಣಿಕ ವಿವೇಕ,

ಕಲಾವಿದೆಯ ಸೂಕ್ಷ್ಮತೆ ಇವು ಯಾವುವೂ ತನ್ನ ಜೀವನವನ್ನು ತನಗೆ ಅನುಕೂಲಕರವಾಗುವ ರೀತಿಯಲ್ಲಿ ಕಟ್ಟಿಕೊಳ್ಳಲು ಅವಳ ನೆರವಿಗೆ ಬರುವುದಿಲ್ಲ. ಇದಕ್ಕೆ ಆಕೆಯ ವಿದ್ಯಾ ಸಂಪನ್ನತೆಗಿಂತಲೂ ಸಾಮಾಜಿಕ ಅಡೆತಡೆಗಳು ಕಾರಣವಾಗಿದೆ. ಆಕೆ ಇದನ್ನು ತನ್ನ ಬಾಳಿನ ನಿರಾಸೆಯೆಂದು ಭಾವಿಸದೆ ಚಿತ್ರಕಲೆಯಲ್ಲಿ ಮತ್ತು ತನ್ನ ಸಂಪರ್ಕಕ್ಕೆ ಬಂದವರೊಂದಿಗೆ ತನ್ನ ಮನಸ್ಸಿನ ಆಳದಿಂದ ಒಪ್ಪಿಸಿಕೊಳ್ಳುತ್ತ ತಾನೂ ಸಮಾಧಾನದ ನೆಲೆಗೆ ಏರುವುದಲ್ಲದೆ ತನ್ನ ಸುತ್ತಲಿನ ಜನರಲ್ಲಿ ಪ್ರೀತಿ–ವಾತ್ಸಲ್ಯವನ್ನು ಬೆಳೆಸುತ್ತಾಳೆ.

ದೇವಯಾನಿಯ ಶಿಕ್ಷಣ ಅವಳ ಜೀವನವನ್ನು ಹೇಗೆ ಸಾರ್ಥಕತೆಯ ಹಾದಿಯಲ್ಲಿ ಮುನ್ನಡೆಸಿತು ಎಂಬುದನ್ನು ವಿ.ಎಂ.ಇನಾಂದಾರ್ ಅವರು ಹೀಗೆ ವಿವರಿಸಿದ್ದಾರೆ. "ರಮಾಕಾಂತ ಮತ್ತು ಇಂದಿರೆ ಇವರಿಬ್ಬರಿಗೂ ನೈತಿಕ ಪೋಷಣೆಯನ್ನು ಒದಗಿಸಿ ಅವರ ಹಿತರಕ್ಷಣೆಯನ್ನು ಮಾಡುವ ದೇವಯಾನಿಯಲ್ಲಿ ಇನ್ನೂ ಆಳವಾಗಿ ಧ್ವನಿತವಾಗುತ್ತವೆ. ಆಕೆಯ ಬಾಲವೈಧವ್ಯ, ಮರುಮದುವೆಯನ್ನು ಮಾಡಿಕೊಳ್ಳಬೇಕೆಂದಾಗ ಎದುರಿಸಬೇಕಾಗಿ ಬಂದ ನಿರಾಸೆ, ಅದನ್ನು ಗೆದ್ದು ಬೆಳೆಯಿಸಿಕೊಂಡ ಸಾತ್ವಿಕ ಮನೋಧರ್ಮ, ಕಲಾಭಿರುಚಿ, ತನ್ನ ಬದುಕಿನ ನೋವು ನಿರಾಶೆಗಳನ್ನು ಮರೆತು ಅದರ ಆಕಾಂಕ್ಷೆಗಳನ್ನು ತನಗೆ ಹತ್ತಿರವಾಗಿದ್ದವರ ಬದುಕಿನ ಸಫಲತೆಯಲ್ಲಿ ಈಡೇರಿಸಿಕೊಳ್ಳುವ ಮನಸ್ಸಿನ ಔದಾರ್ಯ ಆಕೆಯನ್ನು ನಿಜವಾದ 'ವಿದ್ಯಾವತಿ'ಯನ್ನಾಗಿಸಿವೆ" (ಪು.೪೫–೪೬).

ಇನಾಂದಾರರು ಸ್ತ್ರೀಯ ಅಗತ್ಯವನ್ನು ಪುರುಷಾಧೀನ ಸ್ಥಿತಿಯಲ್ಲಿಯೇ ಕಂಡ ಪರಿಣಾಮವಾಗಿ ಅಕೆಯ ಮನಸ್ಥಿತಿಯನ್ನು ನಿರಾಶದಾಯಕವಾಗಿ ಕಂಡರಿಸಿದ್ದಾರೆ. ಆದರೆ ಅಕೆ ಪುರುಷಾಧೀನತೆಯನ್ನು ಮೀರಿ ಬೆಳೆದ ವ್ಯಕ್ತಿತ್ವವನ್ನು ರೂಢಿಸಿಕೊಂಡವಳಾಗಿ ಕಾಣುತ್ತಾಳೆ.

ದೇವಯಾನಿ ಆಧುನಿಕ ಶಿಕ್ಷಣ ಮತ್ತು ತನ್ನ ತಂದೆಯ ಸುಧಾರಕ ಮನೋಭಾವ ಇವೆರಡರಿಂದ ತನ್ನ ಮನಸ್ಸನ್ನು ತಿದ್ದಿಕೊಳ್ಳುತ್ತಾಳೆ. ಬದುಕಿನ ವಿಶಾಲತೆಯನ್ನು ಪ್ರೀತಿಯಲ್ಲಿ ಅರ್ಥಮಾಡುಕೊಳ್ಳುತ್ತಾ ಮತ್ತು ಹಂಚಿಕೊಳ್ಳುತ್ತಾ ತನ್ನ ಸಂಸ್ಕಾರದ ಮಟ್ಟವನ್ನು ಎಲ್ಲರಿಗಿಂತ ಉನ್ನತ ಸ್ಥಾನಕ್ಕೆ ಏರಿಸಿಕೊಳ್ಳುತ್ತಾಳೆ. ಇದು ಆಕೆ ಕಾಲೇಜು ಪಠ್ಯಪುಸ್ತಕಗಳಿಂದ ಕಲಿತದ್ದಕ್ಕಿಂತ ಜೀವನದಲ್ಲಿ ಮಾಗಿ ಪರಿಪೂರ್ಣೆಯಾದ ರೀತಿಯನ್ನು ಕಾಣಿಸುತ್ತದೆ.

ದೇವಯಾನಿ ಜಯರಾಯನ ಸ್ವಹಿತಾಸಕ್ತಿಗೆ ಬಲಿಯಾಗಿದ್ದರೂ ಆಕೆ ಬದುಕಿನ ವಿಶಾಲತೆ ಮತ್ತು ಉದಾರತೆಗೆ ತೆರೆದುಕೊಂಡು ಬಿಡುತ್ತಾಳೆ. ಇದರ ಪರಿಣಾಮವಾಗಿ ಜಯರಾಯನ ಸ್ವಹಿತಾಸಕ್ತಿಯೆ ಅವನನ್ನು ಸಣ್ಣ ವ್ಯಕ್ತಿತ್ವದವನನ್ನಾಗಿ ಮಾಡಿಬಿಡುತ್ತದೆ. ಆಕೆ ನೊಂದ ನೋವೆ ಅವಳನ್ನು ಪುರುಷ ಹಿತಾಸಕ್ತಿಯಿಂದ ಬಿಡುಗಡೆಗೊಳಿಸುತ್ತದೆ, ಆಕೆಯನ್ನು ಉನ್ನತ ವ್ಯಕ್ತಿತ್ವದ ಕಡೆಗೆ ಚಲಿಸುವಂತೆ ಮಾಡುತ್ತದೆ. ಹೀಗೆ ದೇವಯಾನಿ ಪುರುಷ ಸಮಾಜದೊಳಗಿದ್ದೂ ಪುರುಷ ಸಮಾಜದಿಂದ ಮುಕ್ತಿ ಪಡೆದ ಕತೆಯಾಗಿ ನಿರೂಪಿತವಾಗಿದೆ.

ಈ ಕಾದಂಬರಿಯಲ್ಲಿ ಬರುವ ರಾಧಾಬಾಯಿ ವಿಧವೆಯರ ಶಾಲೆಯಾದ ಸರಸ್ವತಿ ಸದನದ ಚಾಲಕಳು. ಈಕೆ ಮುಂಬೈ ಮತ್ತು ಬಂಗಾಳ ಪ್ರಾಂತಗಳಲ್ಲಿ ಸುಧಾರಣಾ ಚಳವಳಿಯಲ್ಲಿ ಈ ಎರಡೂ ಪ್ರಾಂತಗಳಿಗೆ ಸಂಬಂಧಿಸಿದವಳು. ಅಷ್ಟರ ಮಟ್ಟಿಗೆ ರಾಧಾಬಾಯಿ ಸ್ತ್ರೀ ಸಮಸ್ಯೆಗಳು ಮತ್ತು ಸುಧಾರಣಾ ಚಳವಳಿಗೆ ತನ್ನ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ತೆರೆದುಕೊಂಡಿದ್ದಾಳೆ. ಈಕೆ ಮೂಲತ: ಪುಣೆಯ ಕಾಶೀನಾಥ ಶಾಸ್ತ್ರೀಯ ಮಗಳಾಗಿ ಶಾಸ್ತ್ರೀಯ ಕುಲದಲ್ಲಿಯೇ ಮೊದಲು ಮದುವೆಯಾದಳು. ಇದರಿಂದ ಅವಳಿಗೆ ತಕ್ಕಮಟ್ಟಿಗೆ ಸಂಸ್ಕೃತ ಭಾಷೆಯ ತಿಳುವಳಿಕೆ ಪಡೆಯಲು ಸಾಧ್ಯವಾಯಿತು. ಆಢ್ಯತೆಯ ಸ್ವಭಾವದವಳೂ, ತನಗೆ ತಾನಲ್ಲದೆ ಮತ್ತೊಬ್ಬರ ಒಡೆತನವನ್ನು ಒಪ್ಪದವಳಾದ ರಾಧಾಬಾಯಿ ತನ್ನ ಗಂಡನ ಮನೆಯಲ್ಲಿ ತೊತ್ತುಗಳಂತೆ ದುಡಿಯುವ ಹೆಂಗಸರು ಗಂಡಸರಿಗೆ ಅಂಜಿ ಬಾಳುವೆ ಮಾಡುವುದು, ಮನೆಯಲ್ಲಿ ಕಾರಣವಿಲ್ಲದೆ ಮಡಿ, ಮೈಲಿಗೆ ಆಚರಿಸುವುದು ಮುಂತಾದ ಅರ್ಥಹೀನ ಪದ್ಧತಿಗಳಿಂದ ಬೇಸತ್ತು ಹೋಗಿದ್ದಳು. ತನ್ನ ಪತಿಯ ಅಕಾಲಿಕ ಸಾವಿನ ಬಳಿಕ ಮರಳಿ ಸ್ವಾತಂತ್ರ್ಯ ಪಡೆದ ರಾಧಾಬಾಯಿ ಪುನರ್ವಿವಾಹ, ಸ್ತ್ರೀಸ್ವಾತಂತ್ರ್ಯ ಮುಂತಾದ ವಿಷಯ ಕುರಿತು ಸಮರ್ಥವಾಗಿ ಪ್ರತಿಪಾದನೆ ಮಾಡಬಲ್ಲ ವಿಚಾರವಾದಿಯಾಗಿದ್ದಳು. ಅವಳ ಈ ಉನ್ನತ ವಿಚಾರಗಳಿಗೆ, ವಿದ್ವತ್ ಆಲೋಚನೆಗಳಿಗೆ ಅಚ್ಚರಿಪಟ್ಟು ಗೋವಿಂದ ರಾನಡೆ, ಮರೋಪಂತ ಭಿಡೆ ಮುಂತಾದ ಸುಧಾರಕರು ಅವಳಿಗೆ ಪಂಡಿತ ಎಂಬ ಬಿರುದು ಕೊಡುವಷ್ಟು ಪ್ರಭಾವಶಾಲಿ ಎನಿಸಿದಳು. ಆಕೆ ಕೇಶವಚಂದ್ರ ಸೇನರು ಸ್ಥಾಪಿಸಿದ ಬ್ರಹ್ಮೋಪಂಥಕ್ಕೆ ಸೇರಿ ಸಾಮಾಜಿಕ ಸಮಸ್ಯೆಗಳನ್ನು ಆಮೂಲಾಗ್ರವಾಗಿ ಪರಿಚಯಿಸಿಕೊಂಡಳು. ಅಲ್ಲಿಂದ ಅವಳು ಬಂಗಾಳದಲ್ಲಿ ಮಹಾರಾಷ್ಟ್ರಕ್ಕಿಂತ ಹೆಚ್ಚು ಪ್ರಸಿದ್ಧಿಗೆ ಬಂದಳು. ನಂತರ ಅಮೇರಿಕಕ್ಕೆ ಹೋಗಿ ಪವಿತ್ರ ಶಾಸ್ತ್ರದ ಅಧ್ಯಯನ ಮಾಡಿದಳು. ಮತ್ತೆ ಭಾರತಕ್ಕೆ ಮರಳಿದ ರಾಧಾಬಾಯಿ ಸರಸ್ವತೀ ಸದನ, ಉಪಾಸನಾ ಸಮಾಜ ಮುಂತಾದ ಲೋಕೋಪಯುಕ್ತ ಸಂಸ್ಥೆಗಳನ್ನು ಸ್ಥಾಪಿಸಿ ಅವನ್ನು ಮುನ್ನಡೆಸುತ್ತಿದ್ದಳು. ಹೆಣ್ಣು ತನಗೆ ತಾನೆ ಒಡತಿಯಾಗಿದ್ದಾಳೆ. ಆಕೆ ಪುರುಷನಿಗಾಗಲಿ ಅಥವಾ ಮತ್ತೊಬ್ಬ ವ್ಯಕ್ತಿಗಾಗಲಿ ಯಾರಿಗೂ ಅಧೀನಳಲ್ಲ, ಪುರುಷರ ಸೇವೆಯಲ್ಲಿ ಆಕೆ ದಾಸಿಯಲ್ಲ ಎಂಬುದನ್ನು ತನ್ನ ಜೀವನಮಾನವಿಡೀ ಸಾರಿದಳು. ಸ್ತ್ರೀಯರು ಎದುರಿಸುತ್ತಿದ್ದ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಸುಧಾರಕ ಧೋರಣೆಯನ್ನು ಹೊಂದಿದ್ದ ಅಪರೂಪದ ಮಹಿಳೆಯಾಗಿದ್ದಾಳೆ. ಆದರೆ ಆಕೆ ಹಿಂದೂ ಸಮಾಜದ ಜಾತಿ ಮತ್ತು ಲಿಂಗಭೇದದ ಕಟ್ಟಳೆಯನ್ನು ಕಡೆಗಣಿಸಿ ಸ್ತ್ರೀ ಸಮುದಾಯದ ಸ್ವಾತಂತ್ರ್ಯ ಮತ್ತು ಘನತೆ ಗೌರವವನ್ನು ಎತ್ತಿ ಹಿಡಿದು ಪ್ರಚುರ ಪಡಿಸುವ ಕಾರ್ಯ ಕಾದಂಬರಿಯ ನಿರೂಪಣೆಯಲ್ಲಿ ವಕ್ರದೃಷ್ಟಿಗೆ ಗುರಿಯಾಗಿದೆ. ಇದು ನಿರೂಪಕನ ಸೀಮಿತ ಸಾಂಪ್ರದಾಯಿಕ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ ಎಂದಷ್ಟೇ ಹೇಳಬಹುದು.

ವಿಧವೆ ಕಮಲಾಬಾಯಿ ಪಂಡಿತೆ ರಾಧಾಬಾಯಿಯ ಶಿಷ್ಯೆಯಾಗಿ ಸರಸ್ವತಿ ಸದನದಲ್ಲಿ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಳು. ಸ್ತ್ರೀಯರ ಸಾಮಾಜಿಕ ಸಮಸ್ಯೆಗಳನ್ನು ಆಧರಿಸಿ

ಹಿಂದೂ ಸಮಾಜದ ಸ್ತ್ರೀ ಸಮುದಾಯದ ಹಕ್ಕು, ಸ್ವಾತಂತ್ರ್ಯ, ಸಮಾನತೆಗಳನ್ನು ಕುರಿತು ಸುದೀರ್ಘ ಭಾಷಣ ಮಾಡಬಲ್ಲ ಸುಧಾರಕಿಯಾಗಿದ್ದಳು. ಹಿಂದೂ ಸಮಾಜದ ಪುರುಷಶಾಹಿ ಧೋರಣೆಗಳ ವಿರುದ್ಧ ಸೆಟೆದು ನಿಂತ, ಶೋಷಿತರ ಪರವಾಗಿ ದನಿ ಎತ್ತಿದ ಹೋರಾಟಗಾರ್ತಿ. ಈಕೆ ರಮಾಕಾಂತನ ಸಾಂಪ್ರದಾಯಿಕ ನಿಲುವನ್ನು ಗ್ರಹಿಸದೆ ಅವನನ್ನು ಮದುವೆ ಮಾಡಿಕೊಳ್ಳಲು ಇಷ್ಟಪಟ್ಟು ನಿರಾಸೆಗೆ ಒಳಗಾಗುತ್ತಾಳೆ. ಕಮಲಾಬಾಯಿಯ ಸ್ತ್ರೀಪರ ಧೋರಣೆ "ಅಸಂಬದ್ಧ ಮಾತು"ಗಳೆಂದು ಕಾದಂಬರಿಯಲ್ಲಿ ನಿರೂಪಿತವಾಗಿರುವುದು ನಿರೂಪಕನ ಸಾಂಪ್ರದಾಯಿಕ ಧೋರಣೆಯನ್ನು ಸ್ಪಷ್ಟಪಡಿಸುತ್ತದೆ.

ಕಾದಂಬರಿಯ ನಾಯಕಿ ಇಂದಿರೆ. ಇಡೀ ಜಗತ್ತು ತನ್ನ ಅನುಕೂಲಕ್ಕೆ ತಕ್ಕಂತೆ ಇರಬೇಕು ಎಂದು ಬಯಸುವ ಜಯರಾಯನ ಮಗಳು. ಮೈಸೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿದ ಇಂದಿರೆ ತಾಯಿಯನ್ನು ಕಳೆದುಕೊಂಡು ದೇವಯಾನಿಯ ಪ್ರೀತಿಗೆ ಪಾತ್ರಳಾದವಳು. ಜಯರಾಯನ ವ್ಯಕ್ತಿತ್ವದ ವಕ್ರದೃಷ್ಟಿ ಧೋರಣೆಯನ್ನು ಅರಿಯಲಾಗದ ಮತ್ತು ಅದರಿಂದ ಪ್ರಭಾವಿತಳಾಗದ ಇಂದಿರೆ ತಾನು ತಳೆಯುವ ನಿಲುವಿನಲ್ಲಿ ತಂದೆಯ ವ್ಯಕ್ತಿತ್ವದ ಛಾಯೆ ಹೊಂದಿದವಳು. ರಮಾಕಾಂತನನ್ನು ಇಷ್ಟ ಪಟ್ಟರೂ ತನ್ನ ತಂದೆಯಿಂದಲೇ ಎದುರಾಗುವ ವಿರೋಧ ಮತ್ತು ಅಡೆತಡೆಗಳನ್ನು ಮೀರಿ ನಿಂತು ಆತನನ್ನೇ ಮದುವೆಯಾಗುವ ದಿಟ್ಟ ನಿರ್ಧಾರವನ್ನು ಕೊನೆಯಲ್ಲಿ ತೆಗೆದುಕೊಳ್ಳುತ್ತಾಳೆ. ತನಗೆ ಸರಿ ಕಂಡದ್ದನ್ನು ಮಾಡುವ ಸ್ವತಂತ್ರ ಪ್ರವೃತ್ತಿಯನ್ನು ಪ್ರಕಟಿಸುವ ಮೂಲಕ ತನ್ನ ತಂದೆ ಪ್ರತಿನಿಧಿಸುವ ಸಾಂಪ್ರದಾಯಿಕ ಜೀವನ ಮೌಲ್ಯಗಳಿಗೆ ತಿರುಗೇಟು ನೀಡುತ್ತಾಳೆ. ಆದರೂ ಆಕೆಯ ಬೌದ್ಧಿಕ ಮಟ್ಟ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳ ನಿಜ ಮೂಲವನ್ನು ಅರಿಯುವಲ್ಲಿ ಸೋತಿರುವಂತೆ ಕಾಣುತ್ತದೆ. "ನೀವು ಯಾತಕ್ಕೆ ಸ್ವಾತಂತ್ರ್ಯವೆಂದೆನ್ನುತ್ತೀರೋ? ವಿವಾಹವಾದ ಕೂಡಲೆ ಬರಿಗೈಯಿಂದ ನಾವು ಅತ್ತೆ ಮನೆಗೆ ಹೋಗುವವರು. ಅಲ್ಲಿ ನಮ್ಮ ಅನ್ನ, ವಸ್ತ್ರ, ಆಭರಣಾಧಿಕಾರಗಳನ್ನು ನಮ್ಮ ಪತಿರಾಯರ ಆಸ್ತಿಯ ಯೋಗ್ಯತೆಯ ಮೇರೆಗೆ ಅನುಭವಿಸುತ್ತೇವೆ. ಹೀಗಿದ್ದು ನಾವು ಯಾರಿಂದ ಸ್ವತಂತ್ರರಾಗಿರಬೇಕು? ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಸಂರಕ್ಷಿಸುವ ಪ್ರಾಣೇಶ್ವರರ ಕೂಡೆ ಹುರ್‍ರೆಂದು ಜಗಳಾಡುವುದು ಸ್ವಾತಂತ್ರ್ಯವೇನು? ಸದ್ಯಃ ಸ್ಥಿತಿಯ ಕಡೆಗೆ ನಾವು ನೋಡಿದರೆ ಸುಕುಮಾರ್ತಿಯರಾದ ಅರ್ಧಾಂಗಿಯ ವಶವರ್ತಿಗಳಾಗಿ ದೀನರಾಗಿರುವ ಪತಿಗಳ ಸಂಖ್ಯೆಯೇ ಹೆಚ್ಚಾಗಿರುವುದು. ಮನೆಯಲ್ಲಿಯ ಎಲ್ಲ ವಸ್ತುಗಳ ಸ್ವಾಮಿತ್ವವನ್ನು ಹೊಂದಿ ಪತಿಗಳನ್ನು ಸೂತ್ರಗೊಂಬೆಗಳಂತೆ ಕುಣಿಸುತ್ತಿರುವ ಗೃಹಿಣೀ ಜನರಿಗೆ ಸ್ವಾತಂತ್ರ್ಯ ಬೇಕೋ? ಏನು, ತನ್ನಾಪ್ತರಿಷ್ಟರಿಗೆ ಎರವಾಗಿ ತನ್ನ ಮನೆಯಲ್ಲಿ ತಾನೇ ದಾಸನಾಗಿರುವ ಬಡಪತಿಗೆ: ಹೇಳಿರಿ" (ಪು.೧೪೦).

ಇಂದಿರೆ ಎಷ್ಟು ಮುಗ್ಧೆ, ಅನನುಭವಸ್ಥೆ, ಅಮಾಯಕ ಹೆಣ್ಣುಮಗಳೆಂಬುದು ಅವಳ ಈ ಮಾತುಗಳಿಂದ ತಿಳಿಯುತ್ತದೆ. ಹೆಣ್ಣನ್ನು ಗಂಡಿನ ಸ್ಥಾನದಲ್ಲೂ, ಗಂಡನ್ನು ಹೆಣ್ಣಿನ ಸ್ಥಾನದಲ್ಲೂ ಇರಿಸಿ, ಹೆಣ್ಣಿನ ಸ್ಥಾನವನ್ನು ಗಂಡಿನ ಸ್ಥಾನಕ್ಕೆ ಪಲ್ಲಟಗೊಳಿಸಿ ನೋಡಿದ ರೀತಿ ಇದಾಗಿದೆ. ಅದರ

ಜೊತೆಗೆ ಆಕೆ ಹಿಂದೂ ಸಮಾಜದ ಪುರುಷಪರ ಮೌಲ್ಯಗಳ ಪ್ರಭಾವದಲ್ಲಿ ಉಳಿದಿರುವುದು ಅವಳಲ್ಲಿ ಹೆಣ್ಣಿನ ವಾಸ್ತವ ಅನುಭವಗಳ ಕೊರತೆ ಇರುವುದರ ಸೂಚಕವಾಗಿದೆ. ಅವಳು ಪಡೆದ ಸ್ನಾತಕೋತ್ತರ ಶಿಕ್ಷಣ ಆಕೆಯ ಬುದ್ಧಿಯನ್ನು ಹರಿತಗೊಳಿಸದೆ ಸಮಾಜದ ಸಮಸ್ಯೆಗಳನ್ನು ಅರಿಯಲಾಗದೆ ಹೋದ ಮೇಲುಮಟ್ಟಿನದಾಗಿ ತಿಳಿಯುತ್ತದೆ.

ತಾನು ಇಷ್ಟಪಟ್ಟ ರಮಾಕಾಂತನ ಸೆಳೆತಕ್ಕೆ ಸಿಕ್ಕಿಯೂ ಅವನ ನಿಕಟ ಭೇಟಿ, ಸಂಪರ್ಕಗಳು ಸಾಧ್ಯವಾಗದೆ ಹೋಗುವಲ್ಲಿ ತನ್ನ ವಿರುದ್ಧ ಸ್ವತಃ ತನ್ನ ತಂದೆಯೇ ರೂಪಿಸಿದ ತಂತ್ರೋಪಾಯಗಳನ್ನು ಇಂದಿರೆ ಅರಿಯಲಾಗದೆ ಹೋಗುತ್ತಾಳೆ. ತಂದೆ ಜಯರಾಯ ಗೊತ್ತು ಮಾಡಿದ ಶ್ರೀಮಂತ ಹುಡುಗ ಶ್ರೀಕಂಠನಿಗೂ ತನಗೂ ವಿಚಾರದ ಮಟ್ಟದಲ್ಲಾಗಲಿ, ಸಂವೇದನೆಯ ಮಟ್ಟದಲ್ಲಾಗಲಿ, ಪರಸ್ಪರ ಅರ್ಥಮಾಡಿಕೊಳ್ಳುವ ಮಟ್ಟದಲ್ಲಾಗಲಿ ಯಾವುದರಲ್ಲೂ ತಾಳಿಕೆ, ಹೊಂದಿಕೆ ಆಗುವುದಿಲ್ಲವೆಂದು ಅರಿತಿದ್ದರೂ ಇಂದಿರೆ ತನ್ನ ಮನಸಾಕ್ಷಿಯನ್ನು ಅನುಸರಿಸಿ ತನ್ನ ಗಟ್ಟಿ ನಿಲುವನ್ನು ನೇರ ಹೇಳಲಾಗದೆ ಹೋಗುತ್ತಾಳೆ ಮತ್ತು ಶ್ರೀಕಂಠೇಶನ ಸಂಬಂಧವನ್ನು ನಿರಾಕರಿಸಲಾಗದೆ ಉಳಿಯುತ್ತಾಳೆ. ಇಂದಿರೆಯ ಈ ಇಕ್ಕಟ್ಟಿನ ನಡವಳಿಕೆ ಮತ್ತು ನಿಲುವಿನಲ್ಲಿ ಆಕೆಯ ಮನೋಸಂಸ್ಕಾರದ ಮಟ್ಟ ನಿರೂಪಿತವಾಗಿದೆ.

ಸ್ತ್ರೀಯರ ಸ್ವಾತಂತ್ರ್ಯ, ಶಿಕ್ಷಣ ಎಲ್ಲವೂ ಪುರುಷಪರಾಧೀನತೆಯನ್ನು ಪ್ರಶ್ನಿಸದ ರೀತಿಯಲ್ಲಿರಬೇಕು ಎಂಬ ನಿಲುವು ಪ್ರಕಟವಾಗಿದೆ. ಕಾದಂಬರಿಕಾರರ ಈ ನಿಲುವು ಇಂದಿರೆಯ ಪಾತ್ರ ಚಿತ್ರಣದಲ್ಲೂ ಮೂಡಿದೆ. ಹಾಗಾಗಿ ಇಂದಿರೆ ಲೇಖಕರ ಕೈಗೊಂಬೆಯಂತೆ ಕಾಣುತ್ತಾಳೆ. ಆಕೆ ಉನ್ನತ ಶಿಕ್ಷಣ ಹೊಂದಿದ್ದರೂ ಉನ್ನತ ವಿಚಾರವಾಗಿ ಒಂದು ಜೀವಿ ತನ್ನ ಹುಟ್ಟಿನಿಂದ ಪಡೆಯುವ ಎಲ್ಲಾ ಹಕ್ಕುಗಳನ್ನು ಪಡೆಯಲು ಸ್ತ್ರೀ ಕೂಡ ಅರ್ಹಳೆಂಬ ನಿಲುವಿಗೆ ಬದ್ಧಳಾಗಲು ಸೋಲುತ್ತಾಳೆ. ಕಾದಂಬರಿಯ ಪ್ರಗತಿಪರ ಧೋರಣೆಯುಳ್ಳ ಪಾತ್ರಗಳಂತೆ ಚಿತ್ರಿಸಲಾದ ದೇವಯಾನಿ, ರಾಧಬಾಯಿ ಮತ್ತು ಕಮಲಾ ಪಾತ್ರಗಳ ಚಿತ್ರಣದಲ್ಲಿ ಆ ಪಾತ್ರಗಳ ಸುಧಾರಕ ಆಶಯಗಳು ಈಡೇರದಂತೆ ಇಲ್ಲವೆ ಅವರ ಜೀವನ ಧೋರಣೆಯನ್ನು ವ್ಯಂಗ್ಯಕ್ಕೆ ಗುರಿಪಡಿಸುವ ಮೂಲಕ ಕೀಳುಗೆಳೆದು ನೋಡಲಾಗಿದೆ.

ಲೇಖಕರು ತಮ್ಮ ಪ್ರಾಥಮಿಕ ನಿರೂಪಣ ಎಂಬ ಮುನ್ನುಡಿಯಲ್ಲಿ ಸ್ತ್ರೀಯರ ಸ್ವಾತಂತ್ರ್ಯ ಕುರಿತು ಪ್ರಸ್ತಾಪಿಸಿರುವ ಮಾತುಗಳು ಇಲ್ಲಿ ಗಮನಿಸಬಹುದು. ಕಾದಂಬರಿಕಾರರ ಪ್ರಕಾರ ಸ್ತ್ರೀಯರು ತಮ್ಮ ಹಕ್ಕುಗಳನ್ನು ಪಡೆಯುವದೆಂದರೆ "ಸ್ತ್ರೀಯರು ಪುರುಷರಿಗಿಂತಲೂ ಒಂದು ತೂಕ ಹೆಚ್ಚು ಸ್ವತಂತ್ರರಾಗಿರಬೇಕು. ಇದುವರೆಗೆ ಪುರುಷರಿಗೆ ಸಲ್ಲುತ್ತಾ ಬಂದ ಮರ್ಯಾದೆಯು ಇನ್ನು ಮುಂದವರಿಗೆ ಸಲ್ಲಲವಶ್ಯವಿಲ್ಲ" ಎಂಬ ಗ್ರಹಿಕೆಯಲ್ಲಿ ಇದೆ. ಅಂದರೆ ಪುರುಷರು ಸ್ತ್ರೀಯರನ್ನು ಅಧೀನದಲ್ಲಿರಿಸಿಕೊಂಡಂತೆ ಸ್ತ್ರೀಯರು ಪುರುಷರಿಗಿಂತ ಅಧಿಕತರವಾಗಿ ಇರುವುದು ಎಂಬ ಧೋರಣೆಯಲ್ಲಿ ಅರ್ಥೈಸಿಕೊಳ್ಳಲಾಗಿದೆ.

ಆದ್ದರಿಂದ ಅವರು ಹೀಗೆ ಹೇಳುತ್ತಾರೆ. "ನಮ್ಮ ಕುಲ ಧರ್ಮಗಳೂ, ನಮ್ಮ ದೇಶಾಚಾರಗಳು ನಮ್ಮ ಸ್ತ್ರೀಯರಿಂದಲೇ ಯಥಾಸ್ಥಿತವಾಗಿವೆ. ಸಮಾಜದಲ್ಲಿ ಸ್ಥಿತಿ ಸ್ಥಾಪಕತೆಯನ್ನುಂಟು ಮಾಡಿ, ಸಂಸಾರ ಸುಖದಲ್ಲಿ ಕೊರತೆ ಬಾರದಂತೆ ನೋಡಿಕೊಂಡು ಹೋಗುವ ಶ್ರೇಯಸ್ಸು ನಮ್ಮರ್ಧಾಂಗಿಯರಲ್ಲದೆ ಮತ್ತ್ಯಾರದ್ದು? ಆದಕಾರಣ ಸ್ತ್ರೀ ಶಿಕ್ಷಣದ ಕ್ರಮದಲ್ಲಿದ್ದ ದೋಷಗಳನ್ನು ತೆಗೆದುಹಾಕಿ ಅವನ್ನು ಉಚ್ಚಸ್ಥಿತಿಗೆ ತರುವ ಮಹತ್ಕಾರ್ಯದಲ್ಲಿ ಎಷ್ಟೋ ಜನ ವಿಚಾರಶಾಲಿಗಳಾದ ದೇಶಸೇವಕರು ನಿರತರಾಗಿದ್ದಾರೆ." ಪುರುಷ ಸಮಾಜದ ಎಲ್ಲ ಕುಲಾಚಾರಗಳು ಸ್ತ್ರೀಯರಿಂದಲೇ ನಡೆದುಕೊಂಡು ಬರುತ್ತಿದ್ದು, ಕುಟುಂಬದ ಹೊಣೆ ಕೂಡ ಆಕೆಯ ಮೇಲೆ ಇದೆ. ಹಾಗಾಗಿ ಆಕೆ ಪುರುಷಾಧೀನತೆಯನ್ನು ಕಳೆದುಕೊಳ್ಳದಂತೆ ನೀಡುವ ಶಿಕ್ಷಣ ಉಚ್ಚತರದ್ದಾಗಿರುತ್ತದೆಂದು ಭಾವಿಸಲಾಗಿದೆ. ಸ್ತ್ರೀ-ಪುರುಷರಿಬ್ಬರೂ ಪರಸ್ಪರ ಅವಲಂಬಿಗಳು ಹಾಗೂ ಅವರಿಬ್ಬರಿಗೂ ಸಮಾನ ಹಕ್ಕು, ಅಧಿಕಾರ, ಸ್ವಾತಂತ್ರ್ಯ, ಸ್ವಾಭಿಮಾನ, ಗೌರವಗಳಿವೆ ಎಂದು ಲೇಖಕರು ಮಾನ್ಯ ಮಾಡುವುದಿಲ್ಲ. ಆದ್ದರಿಂದ ಪುರುಷಾಧೀನತೆಯಿಂದ ಹೊರಬರಲು ಬಯಸುವ ಸ್ತ್ರೀಯರ ಧೋರಣೆಯನ್ನು "ಸ್ವೈರಿಣಿಯರು" ಎಂದು ಟೀಕಿಸುತ್ತಾರೆ.

ನಂಜನಗೂಡು ತಿರುಮಲಾಂಬಾ ಅವರ ನಭಾ ಮತ್ತು **ವಿರಾಗಿಣಿ** ಕಾದಂಬರಿಯಲ್ಲಿ ಕೇಂದ್ರ ಪಾತ್ರವಾಗಿರುವ ನಭಾ ವಿಧವೆಯಾಗಿ ಸಮಸ್ಯೆಗಳನ್ನು ಎದುರಿಸುವ ಚಿತ್ರಣವಿದೆ. ಇದರ ಭಾಗವಾಗಿ ನಭಾ ಶಿಕ್ಷಣ ಪಡೆಯುವ ವಿವರಗಳಿವೆ. ತನ್ನ ವಿದ್ಯಾಬಲದಿಂದ ಶಿಕ್ಷಕಿಯಾಗಿ ಆರ್ಥಿಕವಾಗಿ ತನ್ನ ಕಾಲಮೇಲೆ ನಿಂತು ವಿಧವೆಯ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಸಾಮಾನ್ಯವಾಗಿ ಶಿಕ್ಷಣದ ಅವಧಿ ವಿವಾಹಪೂರ್ವ ಮತ್ತು ಬಾಲ್ಯ ಕಾಲದ ಅವಧಿಯಲ್ಲಿ ನಡೆಯುವ ಕ್ರಮವಾಗಿದೆ. ಇದರಿಂದ ಒಬ್ಬ ವ್ಯಕ್ತಿಯ ಶಿಕ್ಷಣ ಆತನ ವ್ಯಕ್ತಿತ್ವ ರೂಪಿಸುವ ಸಾಧನವೂ ಆಗಿ ಪರಿಣಮಿಸುತ್ತದೆ. ಅಂತಹ ಸಂದರ್ಭದಲ್ಲಿ ಸಮಾಜದ ಪಟ್ಟಭದ್ರ ಹಿತಾಸಕ್ತಿಗಳು, ಪುರುಷ ಸ್ವಹಿತಾಸಕ್ತಿಗಳು ಕಾರ್ಯ ನಿರ್ವಹಿಸುವ ಕ್ರಮವೂ ಒಳಗೊಂಡಿರುತ್ತದೆ. ಆದರೆ ನಭಾ ಕಾದಂಬರಿಯಲ್ಲಿ ಸಮಾಜದ ಪಟ್ಟಭದ್ರಗಳ ಹಿತಾಸಕ್ತಿಗಳು ಮತ್ತು ಪುರುಷ ಹಿತಾಸಕ್ತಿಗಳ ಕೈಯಿಂದ ಬಿಡಿಸಿಕೊಳ್ಳಲು ವಿಧವೆಯೊಬ್ಬಳು ಹೋರಾಟ ಮಾಡುವ ಸಲುವಾಗಿ ಶಿಕ್ಷಣ ಪಡೆಯುವ ಸಂದರ್ಭವಿದೆ. ಆಕೆ ತನ್ನ ವಿದ್ಯಾಬಲದಿಂದಲೂ ಸ್ತ್ರೀ ಸಮಸ್ಯೆಯ ಸಾಮಾಜಿಕ ಸಮಸ್ಯೆಯನ್ನು ಸಮರ್ಥವಾಗಿ ಗುರುತಿಸುವಲ್ಲಿ ಮತ್ತು ಅದರ ಮೂಲ ಕಾರಣವನ್ನು ಪತ್ತೆ ಮಾಡುವಲ್ಲಿ ಅಸಫಲಳಾಗುತ್ತಾಳೆ. ಸ್ತ್ರೀಯ ಸ್ವಾಭಿಮಾನ, ಗೌರವ, ಸ್ವಾತಂತ್ರ್ಯ, ಜೀವಿತದ ಹಕ್ಕುಗಳು ಅದ್ವಿತೀಯವಾದುದು ಮತ್ತು ಒಬ್ಬ ಹೆಣ್ಣು ಈ ಎಲ್ಲವನ್ನು ತಾನೇ ಸ್ವತಃ ಮತ್ತೊಬ್ಬರ ಹಂಗಿಲ್ಲದೆ ಪಡೆದುಕೊಳ್ಳವಂತಹದ್ದು ಎಂಬ ನಂಬಿಕೆಯಿಲ್ಲದವಳಾಗಿ ಕಾಣುತ್ತಾಳೆ. ವಿಧವೆಯಾದ ಆಕೆ ಮರುವಿವಾಹವಾಗಲು ತನ್ನ ಒಪ್ಪಿಗೆ ನೀಡಲು ವಿಫಲವಾಗುವಲ್ಲಿಯೆ ಇದಕ್ಕಿರುವ ಕಾರಣಗಳನ್ನು ಗುರುತಿಸಬಹುದು.

ಅವಿವಾಹಿತ ತರುಣ ರಾಜಶೇಖರ ನಭಾಳಲ್ಲಿ ಅನುರಕ್ತನಾಗುವುದು, ಆಕೆ ಪ್ರತಿಯಾಗಿ ಅವನಿಗೆ ಸ್ಪಂದಿಸದೆ ಅದನ್ನು ಉಪಟಳವೆಂದು ಭಾವಿಸುವುದು, ಅಲ್ಲಿಂದ ಯಾರಿಗೂ ಹೇಳದೆ ಹೊರಟು ಹೋಗುವುದು– ಈ ಎಲ್ಲ ಸಂಗತಿಗಳು ಸ್ವತಃ ಹೆಣ್ಣಾದ ನಭಾಳಿಗೆ ಹೆಣ್ಣಿನ ಸ್ವಹಿತಾಸಕ್ತಿ ಯಾವುದು ಮತ್ತು ಯಾವುದರಲ್ಲಿದೆ ಎಂದು ಗುರುತಿಸುವಲ್ಲಿನ ದೋಷದಿಂದಾಗಿ ಸಂಭವಿಸುತ್ತದೆ. ನಭಾ ಒಬ್ಬ ಪುರುಷನಂತೆ ಮದುವೆಯಾದ ಹೆಣ್ಣು ಅನ್ಯರಲ್ಲಿ ಆಸಕ್ತಿ ತಾಳುವ ವಿರುದ್ಧವೂ ವಿಧವೆಯಾದವಳು ಮರುಮದುವೆಯಾಗುವುದರ ವಿರುದ್ಧವೂ ಆಲೋಚಿಸುವಂತೆ ನಡೆದುಕೊಳ್ಳುತ್ತಾಳೆ. ಪುರುಷನೊಬ್ಬ ತನ್ನ ಹೆಂಡತಿಯಾದವಳು ಅನ್ಯ ಪುರುಷನೊಂದಿಗೆ ಸ್ನೇಹದಿಂದಿರುವುದು, ಮಾತನಾಡುವುದು ಮೊದಲಾದವನ್ನು ತನ್ನ ಸ್ವಹಿತಾಸಕ್ತಿ ಕಾಪಾಡಿಕೊಳ್ಳಲು ವಿರೋಧಿಸುತ್ತಾನೆ. ಇಂತಹ ಪುರುಷಪರ ಜೀವನ ಮೌಲ್ಯವನ್ನು ಹೆಣ್ಣು ವಿರೋಧಿಸುವುದು ತಪ್ಪೆಂದು ತಿಳಿದಿರುವ ನಭಾ ಸ್ವತಃ ಒಬ್ಬ ಹೆಣ್ಣಾಗಿ ಸ್ತ್ರೀಯ ಪ್ರತಿನಿಧಿಯಾಗಿರದೆ ಒಬ್ಬ ಪುರುಷ ಪ್ರತಿನಿಧಿಯಾಗಿ ಕಾಣುತ್ತಾಳೆ. ಒಬ್ಬ ಹೆಣ್ಣಿನ ಜೀವಪರ ನಿಲುವು ಯಾವುದೆಂದು ಅರಿಯದವಳಂತೆ ಚಿತ್ರಿತಳಾಗಿದ್ದಾಳೆ.

ನಭಾ ವಿಧವೆಯಾಗಿ ಇಂಗ್ಲಿಷ್ ಶಿಕ್ಷಣದಿಂದಲೂ ತನ್ನ ಜೀವನದ ಯಾವ ಸೂಕ್ಷ್ಮಗಳನ್ನು ಗ್ರಹಿಸಿದಂತೆ ಕಾಣುವುದಿಲ್ಲ. ತನ್ನನ್ನೇ ಪ್ರಕೃತಿ ನಿಯಮಕ್ಕನುಗುಣವಾಗಿ ಅರಿಯಲು ವಿಫಲಳಾಗುವ ನಭಾ ತನ್ನ ಸುತ್ತಲ ಜನರ ಸಣ್ಣ ಪುಟ್ಟ ದೋಷಗಳನ್ನು ಮತ್ತು ಸಂಕುಚಿತ ಮನೋಭಾವವನ್ನು ಹೋಗಲಾಡಿಸಲು ಪ್ರಯತ್ನ ಪಡುತ್ತಾಳೆ. ಕಲಿಕೆ ಒಬ್ಬ ವ್ಯಕ್ತಿಯ ಅಂತರಂಗದ ನಿಗೂಢತೆ ಬಗ್ಗೆ, ತನ್ನ ಸುತ್ತಲಿನ ಪರಿಸರದ ಬಗ್ಗೆ ಅರಿವನ್ನು ಮೂಡಿಸಬೇಕು. ಅದನ್ನು ಪಡೆಯಲಾಗದ ನಭಾ ಒಬ್ಬ ಅಧ್ಯಾಪಕಿಯಾಗಿ ತನ್ನ ಕಿರಿಯ ಜನಾಂಗವನ್ನು ತಿದ್ದಲು ಪ್ರಯತ್ನಿಸಿ ಯಾವುದು ಸರಿ ಯಾವುದು ಸರಿಯಲ್ಲ ಎಂಬ ವಿವೇಚನೆಯನ್ನು ಮೂಡಿಸಲು ಸಾಧ್ಯವಾದಂತೆ ಕಾಣುವುದಿಲ್ಲ. ಕಲಿಕೆಯ ಸಾರ್ಥಕತೆಯೆ ಪ್ರಕೃತಿಯ ಮೂಲಾಂಶ ಸ್ವರೂಪವನ್ನು ಸಮರ್ಪಕವಾಗಿ, ಸಮರ್ಥವಾಗಿ ಅರಿಯುವುದರಲ್ಲಿದೆ. ನಭಾ ತನ್ನ ಜೀವನದಲ್ಲಾಗಲಿ, ತನ್ನ ಕಲಿಕೆಯ ರೀತಿ–ನೀತಿಗಳಲ್ಲಾಗಲಿ ಈ ಯಾವುದನ್ನೂ ಸಾಧಿಸಿದಂತೆ ತೋರುವುದಿಲ್ಲ. ನಭಾ ಒಬ್ಬ ಹೆಣ್ಣಾಗಿ ಪುರುಷ ಸಮಾಜ ತನ್ನ ಸ್ವಹಿತಾಸಕ್ತಿಗಾಗಿ ಹೆಣ್ಣಿನ ಮೇಲೆ ಹೇರಿದ ಪುರುಷಪರ ಜೀವನ ಮೌಲ್ಯ ಹೇಗೆ ಸ್ತ್ರೀ ವಿರೋಧಿಯಾಗಿದೆ ಎಂದು ಅರಿಯುವಲ್ಲಿಯೆ ಸೋತಿರುವುದು ಕೇವಲ ಒಂದು ಪಾತ್ರ ಅಥವಾ ವ್ಯಕ್ತಿಯ ಚಿತ್ರಣವಾಗಿರದೆ ಮೇಲ್ಜಾತಿಯ ಸ್ತ್ರೀ ಸಮುದಾಯ ಪುರುಷ ವಿರೋಧಿಯಾಗದ ನಿಲುವಿನ ಪ್ರತೀಕವಾಗಿ ಚಿತ್ರಿತವಾದಂತಿದೆ. ಹಾಗಾಗಿ ನಭಾ ಪಾತ್ರ ಸ್ತ್ರೀ ಶಿಕ್ಷಣದ ಸಾಮಾಜಿಕ ಸಮಸ್ಯೆಯನ್ನು ಪರಿಹರಿಸಲು ಒಲ್ಲದ ಪುರುಷಪರ ಹೆಣ್ಣಾಗಿ ಹಿಂದೂ ಸಮಾಜದ ಸಾಂಪ್ರದಾಯಿಕ ಶಿಕ್ಷಣದ ಪ್ರತಿರೂಪವಾಗಿ ನಿಲ್ಲುತ್ತಾಳೆ.

ಕೇತವರಪು ವೆಂಕಟಶಾಸ್ತ್ರಿಯವರ ಲಕ್ಷ್ಮೀಪ್ರಸಾದಮು ಕಾದಂಬರಿಯಲ್ಲಿ ಸ್ತ್ರೀ ಶಿಕ್ಷಣ ಕುರಿತ ಸಂದರ್ಭ ಬರುವುದಿಲ್ಲ. ಪ್ರಸಾದನ ತಾಯಿ ರಾಜೇಶ್ವರಮ್ಮ ಶಿಕ್ಷಣದ ಬಗ್ಗೆ ತಳೆದ ಧೋರಣೆ

ಕಾದಂಬರಿಯನ್ನು ಹೊಸ ದಿಕ್ಕಿನತ್ತ ಮುನ್ನಡೆಸುತ್ತದೆ. ಇಂಗ್ಲಿಷ್ ಶಿಕ್ಷಣದಿಂದ ಫಲಿತವಾಗುವ ಲೌಕಿಕ ಸೌಲಭ್ಯಗಳಿಂದ ರಾಜೇಶ್ವರಮ್ಮ ಪ್ರಭಾವಿತಳಾಗಿದ್ದಾಳೆ. ಹಾಗಾಗಿ ತೆಲುಗು, ಸಂಸ್ಕೃತಗಳ ಕಲಿಕೆ ಅವಳ ದೃಷ್ಟಿಯಲ್ಲಿ ನಿಷ್ಪ್ರಯೋಜಕವಾಗಿ ಮತ್ತು ಇಂಗ್ಲಿಷ್ ಶಿಕ್ಷಣ ಲಾಭದಾಯಕವಾಗಿ ಕಂಡಿದೆ. ಇದಕ್ಕೆ ಬಹುಶಃ ಆಕೆ ಇಂಗ್ಲಿಷ್ ಸರ್ಕಾರದ ಅಧಿಕಾರಿಯ ಹೆಂಡತಿಯಾಗಿದ್ದುದು ಕಾರಣವಾಗಿರಬಹುದು. ಆಕೆ ತನ್ನ ಗಂಡನ ಇಂಗ್ಲಿಷ್ ಸಹೋದ್ಯೋಗಿಗಳ ಮನೆಯಲ್ಲಿ ಭೌತಿಕ ಅನುಭೋಗ ವಸ್ತುಗಳ ಆಧುನಿಕ ಸೌಕರ್ಯದಿಂದ ಪ್ರಭಾವಿತಳಾಗಿದ್ದಾಳೆ. ಅಂತಹ ಜೀವನವೇ ಸುಖಕರ ಜೀವನವೆಂಬ ಅಭಿಪ್ರಾಯ ತಳೆದಂತೆ ಇದೆ. ಇಂತಹ ಭೌತಿಕ ಅನುಭೋಗ ಜೀವನ ಇಂಗ್ಲಿಷ್ ಶಿಕ್ಷಣ ಪಡೆದಲ್ಲಿ ಮಾತ್ರ ದೊರೆಯುವುದೆಂಬ ವಾಸ್ತವ ಪ್ರಜ್ಞೆಯೂ ಅವಳಲ್ಲಿದೆ. ಹಾಗಾಗಿ ಆಕೆ ತನ್ನ ಮಕ್ಕಳಿಗೆ ಮತ್ತು ತನ್ನ ನೆಂಟರಿಷ್ಟರ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣವನ್ನೇ ನೀಡಲು ಅಧಿಕತರವಾಗಿ ಪ್ರೋತ್ಸಾಹಿಸುತ್ತಾಳೆ. ರಾಜೇಶ್ವರಮ್ಮ ತನ್ನ ಮಗನ ಇಂಗ್ಲಿಷ್ ಶಿಕ್ಷಣ ಕುರಿತು ಹೇಳುವ ಮಾತು ಗಮನಾರ್ಹವಾಗಿವೆ. "ಈ ಕಾಲದಲ್ಲಿ ಇಂಗ್ಲಿಷ್ ಓದದಿದ್ದರೆ ಏನೂ ಕೆಲಸಕ್ಕೆ ಬರಲಾರರು. ಆದ್ದರಿಂದಲೇ ನನ್ನ ದೊಡ್ಡ ಮಗನನ್ನು ಇಂಗ್ಲಿಷ್ ಬಿಟ್ಟು ಬೇರೇನನ್ನೂ ಕಲಿಸಲಿಲ್ಲ. ಅವನ ಓದಿಗಾಗಿ ಎಷ್ಟು ಹಣವನ್ನಾದರೂ ಖರ್ಚು ಮಾಡಬಲ್ಲೆವು. ಅವನು ಪಿ.ಸಿ.ಯಸ್. ಓದುತ್ತಿದ್ದಾನೆ"(ಪು.೨೪).

ರಾಜೇಶ್ವರಮ್ಮ ದೇಶ ಭಾಷೆಗಳ ಮತ್ತು ಸಂಸ್ಕೃತ ಕಲಿಕೆಯ ನಿಷ್ಪ್ರಯೋಜಕತೆಯನ್ನು ಇಂಗ್ಲಿಷ್ ಶಿಕ್ಷಣದ ಹಿನ್ನೆಲೆಯಲ್ಲಿ ಮನಗಂಡಿದ್ದಾಳೆ. ಭೌತಿಕ ಅನುಭೋಗ ವಾದದ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ಶಿಕ್ಷಣದ ನಿರರ್ಥಕತೆಯನ್ನು ಎತ್ತಿ ಹಿಡಿದಿದ್ದಾಳೆ. ಸಾಂಪ್ರದಾಯಿಕ ಶಿಕ್ಷಣ ಪುರುಷಪರವಾದ್ದುದರಿಂದಲೂ ಆಕೆಯೊಬ್ಬ ಸ್ತ್ರೀಯಾಗಿ ಅದನ್ನು ನಿರಾಕರಿಸಿದ್ದಾಳೆ. ಸಾಂಪ್ರದಾಯಿಕ ಶಿಕ್ಷಣದಲ್ಲಿ ಸ್ತ್ರೀಯರ ಹಿತಾಸಕ್ತಿಗಳಿಗೆ ಅವಕಾಶವಿರಲಿಲ್ಲವೆಂದು ಇದರಿಂದ ಅರ್ಥವಾಗುತ್ತದೆ.

ಇಂಗ್ಲಿಷ್ ಶಿಕ್ಷಣ ರಾಜೇಶ್ವರಮ್ಮನಿಗೆ ಆಧುನಿಕ ಸೌಲಭ್ಯಗಳ ಮೂಲಕ ಮನುಷ್ಯನ ಸುಖಕರ ಜೀವನದ ಕಲ್ಪನೆಯನ್ನು ವಾಸ್ತವಗೊಳಿಸಿದಂತೆ ಕಂಡಿದೆ. ಒಡವೆ, ವಸ್ತು, ಸಂಪತ್ತು, ಶ್ರೀಮಂತಿಕೆ ಮೊದಲಾದ ಸುಖಕರ ಜೀವನದ ಸಾಂಪ್ರದಾಯಿಕ ಕಲ್ಪನೆ ಬದಲಿಗೆ ಇಂಗ್ಲಿಷ್ ಶಿಕ್ಷಣದಿಂದ ದೊರಕುವ ಅನುಭೋಗ ಸಂಸ್ಕೃತಿಯ ಸುಖಕರ ಜೀವನದ ಕಲ್ಪನೆ ಮಾನವನ ಕೆಲಸ ಕಾರ್ಯಗಳ ಶ್ರಮವನ್ನು ತಗ್ಗಿಸುವುದು, ಅಂದ-ಚೆಂದಗಳನ್ನು ಎದ್ದು ಕಾಣುವಂತೆ ಮಾಡುವುದು, ನೂತನತೆಯನ್ನು ತಂದು ಕೊಡುವುದು, ಅಧಿಕಾರದ ಒಣಪ್ರತಿಷ್ಠೆಯನ್ನು ಒದಗಿಸುವುದೂ ಆಗಿದ್ದುದರಿಂದ ಹೆಚ್ಚು ಆಕರ್ಷಕವೂ ಅನುಸರಣೆ ಯೋಗ್ಯವೂ ಆಗಿ ಕಂಡಿದೆ. ಈ ಎಲ್ಲ ಹಿನ್ನೆಲೆಯಲ್ಲಿ ರಾಜೇಶ್ವರಮ್ಮ ತನ್ನ ಮಗನ ಇಂಗ್ಲಿಷ್ ಶಿಕ್ಷಣಕ್ಕೆ ತಗಲುವ ಖರ್ಚುವೆಚ್ಚಗಳು ಎಷ್ಟು ದೊಡ್ಡ ಪ್ರಮಾಣದಲ್ಲಿದ್ದರೂ ಅದನ್ನು ತನ್ನ ಆಸ್ತಿ ಮಾರಿಯಾದರೂ ಸರಿತೂಗಿಸಲು ಯತ್ನಿಸುವುದನ್ನು ಕಾಣಬಹುದು.

ಈ ಮೂಲಕ ಇಂಗ್ಲಿಷ್ ಶಿಕ್ಷಣದ ಅಗತ್ಯತೆ, ಮಹತ್ವ ಮತ್ತು ಕಾರ್ಯ ಸಾಧ್ಯತೆಗಳನ್ನು ರಾಜೇಶ್ವರಮ್ಮ ಒಬ್ಬ ಸ್ತ್ರೀಯಾಗಿ ಅರಿತು ಕಾರ್ಯರೂಪಕ್ಕೆ ತರುವ ಚಿತ್ರಣ ಇಲ್ಲಿದೆ. ಇದು ನೇರವಾಗಿ ಸ್ತ್ರೀಯ ಶಿಕ್ಷಣದ ಸಾಮಾಜಿಕ ಸಮಸ್ಯೆಯನ್ನು ಕುರಿತದ್ದಲ್ಲವೆಂದು ಮೇಲು ನೋಟಕ್ಕೆ ಕಾಣುತ್ತದೆ. ಆದರೆ ಒಬ್ಬ ಸ್ತ್ರೀ ಆಧುನಿಕ ಶಿಕ್ಷಣದ ಲಾಭಗಳನ್ನು ಬಳಸಿಕೊಳ್ಳುವ ಚಿತ್ರಣವಿದು. ಇದರ ಮೂಲಕ ಸ್ತ್ರೀ ಶಿಕ್ಷಣದ ಮೂಲ ಸಮಸ್ಯೆಯಾದ ಹಿಂದೂ ಸಮಾಜದ ಪುರುಷಪರ ಧೋರಣೆಗೆ ನೇರವಾಗಿ ಪ್ರತಿಕ್ರಿಯಿಸಿರುವಂತೆ ಇದೆ.

ಸ್ತ್ರೀ ಶಿಕ್ಷಣ ಸಮಸ್ಯೆಯ ಪರಿಶೀಲನೆಯಲ್ಲಿ **ರಾಜಶೇಖರ ಚರಿತ್ರೆ** ಮತ್ತು **ಸತ್ಯವತೀ ಚರಿತ್ರೆ** ಕೃತಿಗಳು ಸ್ತ್ರೀಯರ ಶಿಕ್ಷಣದ ಅಗತ್ಯತೆಯನ್ನು ದೊಡ್ಡ ಧ್ವನಿಯಲ್ಲಿ ಮಾತಾಡುವಂತೆ ತೋರುತ್ತದೆ. ಆದರೆ ಸಮಸ್ಯೆಯ ಮೂಲವನ್ನು ಮರೆಮಾಚಿಬಿಟ್ಟಿವೆ. **ಅಹಲ್ಯಾಬಾಯಿ** ಆಳುವ ವರ್ಗದ ಸ್ತ್ರೀಯರಿಗೆ ಒದಗಿಸುತ್ತಿದ್ದ ಶಿಕ್ಷಣದ ಕ್ರಮ ಕುರಿತ ಸುಳುಹುಗಳನ್ನು ನೀಡುತ್ತದೆ. **ರಾಜರತ್ನಮು** ಕಾದಂಬರಿ ಲಿಂಗಭೇಧವನ್ನನುಸರಿಸಿ ಸ್ತ್ರೀಯರು ಶಿಕ್ಷಣದಿಂದ ವಂಚಿತರಾದ ಕ್ರಮ ನಿರೂಪಿಸಿದೆ. **ಇಂದಿರಾಬಾಯಿ** ಕಾದಂಬರಿ ಸಾಂಪ್ರದಾಯಿಕ ಮತ್ತು ಆಧುನಿಕ ಶಿಕ್ಷಣದ ಫಲಾಫಲಗಳನ್ನು ಚಿತ್ರಿಸಿದಂತಿದೆ. **ಇಂದಿರಾ** ಸ್ತ್ರೀಯರ ಪುರುಷಾಧೀನತೆಯನ್ನು ಬಿಟ್ಟು ಕೊಡಲಾಗದ ಮನಸ್ಥಿತಿಯನ್ನು ಕಟ್ಟಿಕೊಡುತ್ತದೆ. **ನಭಾ** ಕಾದಂಬರಿ ಶಿಕ್ಷಣ ಹೇಗೆ ವಿಧವೆಯರ ಬಾಳಿನಲ್ಲಿ ಊರುಗೋಲಾಗಬಹುದೆಂದು ಕಾಣಿಸುತ್ತದೆ. **ಲಕ್ಷ್ಮೀಪ್ರಸಾದಮು** ಕಾದಂಬರಿ ಆಧುನಿಕ ಶಿಕ್ಷಣದ ಲಾಭಗಳಿಂದ ಪ್ರೇರಿತಳಾದ ಮಹಿಳೆ ಇಂಗ್ಲಿಷ್ ಶಿಕ್ಷಣ ವ್ಯಾಪಕಗೊಳಿಸುವಲ್ಲಿ ಶ್ರಮಿಸುವ ಕಥನವಿದೆ. ಸಂಧಿಕಾಲದ ಈ ಕಾದಂಬರಿಗಳು ಸ್ತ್ರೀಯರ ಶಿಕ್ಷಣ ಕುರಿತು ನಿಸ್ಸಂದಿಗ್ಧ ನಿಲುವು ತಾಳದೆ ಡೋಲಾಯಮಾನವಾಗಿವೆ.

ವರದಕ್ಷಿಣೆ

ವಿವಾಹ ಸಂಸ್ಥೆ ಪ್ರಾಪ್ತವಯಸ್ಕರಾದ ಹೆಣ್ಣು ಗಂಡನ್ನು ಒಟ್ಟುಗೂಡಿಸಿ ಹೊಸ ಕುಟುಂಬವೊಂದನ್ನು ಹುಟ್ಟು ಹಾಕುತ್ತದೆ. ಬೇರೆ ಬೇರೆ ಕುಟುಂಬಗಳಿಗೆ ಸೇರಿದ ಮದುಮಕ್ಕಳಲ್ಲಿ ಯಾರಾದರೊಬ್ಬರು ತಮ್ಮ ಮನೆಯನ್ನು ಬಿಟ್ಟು ಬರುವುದು ಮತ್ತು ಮತ್ತೊಬ್ಬರ ಮನೆಯನ್ನು ಸೇರಿಕೊಳ್ಳುವುದು ಅಗತ್ಯವೂ ಅನಿವಾರ್ಯವೂ ಆಗುತ್ತದೆ. ಮಾತೃ ಪ್ರಧಾನ ಸಮಾಜದಲ್ಲಿ ಮದುವೆಯಾದ ಗಂಡು ಹೆಣ್ಣಿನ ಮನೆಗೆ ಹೋಗಬೇಕಿತ್ತು. ಪುರುಷ ಪ್ರಧಾನ ಸಮಾಜದಲ್ಲಿ ಮದುವೆಯಾದ ಹೆಣ್ಣು ಗಂಡನ ಮನೆಗೆ ಬರುವ ಸಂಪ್ರದಾಯವಿದೆ. ಒಂದು ಕಾಲಘಟ್ಟದಲ್ಲಿ ಗಂಡಿನ ಮನೆಯವರು ಹೆಣ್ಣಿನ ಮನೆಯವರಿಗೆ ತೆರ ಕೊಟ್ಟು ಹೆಣ್ಣನ್ನು ಮದುವೆ ಮಾಡಿಕೊಂಡು ಬರುವ ಪದ್ಧತಿ ಇತ್ತು. ಅದು ತನ್ನ ಮನೆ ಬೆಳಗುವ ಹೆಣ್ಣಿಗೆ ಜನ್ಮ ನೀಡಿ, ಸಾಕಿ, ಸಲುಹಿ, ದೊಡ್ಡವಳನ್ನಾಗಿ ಮಾಡಿದ ಹೆಣ್ಣಿನ ಮನೆಯವರಿಗೆ ಅವರ ಪೋಷಕಶಕ್ತಿಯನ್ನು ಗೌರವಿಸಿ ಮತ್ತು ಕೃತಜ್ಞತೆ ಸೂಚಿಸುವ ಸಂಕೇತವಾಗಿತ್ತು ಎಂದು ಹೇಳಬಹುದು. ಕಾಲಕ್ರಮದಲ್ಲಿ ತೆರ ಪದ್ಧತಿ ಕಾಣೆಯಾಗಿ ವರದಕ್ಷಿಣೆ ಪದ್ಧತಿ ಕಾಣಿಸಿಕೊಂಡಿತು.

ಹೆಣ್ಣಿಗೆ ತಂದೆಯ ಆಸ್ತಿಯಲ್ಲಿ ಸಮಾನ ಹಕ್ಕು ಹಿಂದೂ ಸಮಾಜದಲ್ಲಿ ಇದ್ದಿರಲಿಲ್ಲವಾದರೂ ಹೆತ್ತವರು ತಮ್ಮ ಹೆಣ್ಣು ಮಕ್ಕಳಿಗೆ ತಮ್ಮ ಆಸ್ತಿಯಲ್ಲಿ ಒಂದು ಪಾಲನ್ನು ಸ್ವ ಇಚ್ಛೆಯ ಮೇರೆಗೆ ಕೊಡುತ್ತಿದ್ದುದು ಕಂಡುಬರುತ್ತದೆ. ಹೆಣ್ಣು ತನ್ನ ತವರು ಮನೆಯಿಂದ ಪಡೆದು ತಂದ ಆಸ್ತಿ ಸಂಪತ್ತಿನ ಮೇಲೆ ಅಧಿಕಾರ ಹೊಂದಿರುತ್ತಿದ್ದಳು. ಪುರುಷ ಸಮಾಜ ಕಾಲಕ್ರಮದಲ್ಲಿ ಮದುವೆಯಾದ ಹೆಣ್ಣು ಗಂಡನ ಆಸ್ತಿಯೆಂತಲೂ, ಮದುವೆಯಾದ ನಂತರ ಹೆಂಡತಿಯ ಆಸ್ತಿಯ ಮೇಲೆ ಗಂಡನಿಗೆ ಸರ್ವ ಅಧಿಕಾರ ಲಭಿಸುವುದೆಂದೂ ಸ್ವಹಿತ ವಾದವನ್ನು ಚಾಲ್ತಿಗೆ ತಂದಿತು. ಇದರಿಂದ ಹೆಣ್ಣು ತಾನು ತನ್ನ ತರಿನಿಂದ ಪಡೆದು ತಂದ ಆಸ್ತಿಯ ಮೇಲಿನ ಹಕ್ಕು ಅಧಿಕಾರವನ್ನು ಕಳೆದುಕೊಂಡು ತನ್ನ ಗಂಡನಿಗೆ ಬಿಟ್ಟು ಕೊಡುವ ಕ್ರಮ ಮೊದಲಿಟ್ಟಿತು. ಇದು ಮದುವೆಯಾದ ಗಂಡ–ಹೆಂಡತಿಯರು ಬೇರೆ ಬೇರೆಯಲ್ಲ ಎಂಬ ನೆಲೆಯಲ್ಲಿ ಒಪ್ಪಿತವಾಯಿತು. ಮದುವೆಯ ಮೂಲಕ ಹೆಣ್ಣು ತರುವ ಹಣ ಸಂಪತ್ತಿನ ಮೇಲೆ ಗಂಡನ ಮನೆಯಲ್ಲಿ ಲೋಭತನ ಹುಟ್ಟಿಕೊಂಡಿತು. ಇದು ಕಾಲಕ್ರಮದಲ್ಲಿ ಬೇಡಿಕೆಯಾಗಿ ಪರಿವರ್ತನೆ ಹೊಂದಿ ಮದುವೆಯಾಗಿ ಬರುವ ಹೆಣ್ಣು ನೆಪ ಮಾತ್ರವಾದಳು. ಅದರ ಮೇಲೆ ಆಕೆ ಹೊಂದಿರುವ ಹಕ್ಕು ಅಧಿಕಾರವನ್ನು ಮೂಲೆಗುಂಪು ಮಾಡಲಾಯಿತು. ಪುರುಷಾಧೀನತೆಯಲ್ಲಿ ಹೆಣ್ಣನ್ನು ಹೆತ್ತವರು, ಒಡಹುಟ್ಟಿದವರು, ಮತ್ತು ಕಟ್ಟಿಕೊಂಡ ಗಂಡ ಆಕೆಯ ಮೇಲು ಖರ್ಚಿಗಾಗಿ ನೀಡಬಹುದಾದ ಕೈ ದುಡ್ಡು ಅಷ್ಟೇ ಸ್ತ್ರೀಯರ ಪಾಲಿನ ಆಸ್ತಿಯಾಗಿದೆ. ನಂತರದಲ್ಲಿ ವರದಕ್ಷಿಣೆ ವ್ಯಾವಹಾರಿಕ ಸ್ವರೂಪ ತಳೆದು ಹೆಣ್ಣು ಹೆತ್ತ ಬಡ ಕುಟುಂಬಗಳಿಗೂ, ಹೆಣ್ಣು ಮಕ್ಕಳಿಗೂ ಅವರ ಜೀವನದಲ್ಲಿ ಸಮಸ್ಯೆಯ ಮೂಲವಾಗಿ ಪರಿಣಮಿಸಿತು. ಭಾರತದಲ್ಲಿ ಬಡ ಕುಟುಂಬಗಳ ಸಂಖ್ಯೆ ಹೇರಳವಾಗಿದ್ದು ವರದಕ್ಷಿಣೆ ನೀಡಿ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡುವುದು, ಇಲ್ಲದ ಸಂಕಷ್ಟಗಳನ್ನು ಮೈಮೇಲೆ ಎಳೆದುಕೊಳ್ಳುವ ನೆಲೆಯಾಗಿ ಸಾಮಾಜಿಕ ಸ್ವರೂಪ ಪಡೆಯಿತು. ಬಡ ಕುಟುಂಬಗಳಿಂದ ಬಂದ ಹೆಣ್ಣು ಮಕ್ಕಳು ತಮ್ಮ ಗಂಡನ ಮನೆಯಲ್ಲಿ ಕಿರುಕುಳ, ಕಾಟ, ಹಿಂಸೆ ನಿರಂತರವಾಗಿ ಎದುರಿಸುವಂತಾಯಿತು. ಸೊಸೆಯನ್ನು ಕೆಲಸದ ಆಳಿನಂತೆ ನಡೆಸಿಕೊಳ್ಳುವುದು, ಮನೆಯಿಂದ ಹೊರಗೆ ಹಾಕುವುದು, ಸುಡುವುದು, ವೈವಾಹಿಕ ಜೀವನವನ್ನು ನಿರಾಕರಿಸುವುದು, ವಿಚ್ಛೇದನ ನೀಡಿ ಹೆಚ್ಚು ವರದಕ್ಷಿಣೆ ನೀಡುವಲ್ಲಿ ಮರುಮದುವೆಯಾಗುವುದು ಮುಂತಾದ ಸಮಸ್ಯೆಗಳು ಸಮಾಜದಲ್ಲಿ ಅಧಿಕತರವಾಗಿ ಕಾಣಿಸಿಕೊಂಡವು. ಇದು ಹೆಣ್ಣುಮಗು ಹೆತ್ತಾಗ ಅವಳಿಗಾಗಿ ಮದುವೆ, ಬಾಣಂತನ ಮುಂತಾದ ಸಂದರ್ಭಗಳಲ್ಲಿ ಮಾಡಲಬೇಕಾದ ವೆಚ್ಚಗಳಿಗಾಗಿ ಹೆದರಿ ಹೆಣ್ಣು ಭ್ರೂಣಹತ್ಯೆ ಮಾಡುವ ಮತ್ತೊಂದು ಸಮಸ್ಯೆ ಸಮಾಜದಲ್ಲಿ ಹುಟ್ಟಿಕೊಳ್ಳಲು ಕಾರಣವಾಯಿತು. ಮಾತ್ರವಲ್ಲದೆ ಸಮಾಜದಲ್ಲಿ ಲಿಂಗ ಅನುಪಾತ ಪ್ರಮಾಣದ ಮೇಲೆ ಪರಿಣಾಮ ಬೀರಿತು. ೨೦೧೨ನೇ ಸಾಲಿನಲ್ಲಿ ಲಿಂಗ ಅನುಪಾತ ಪ್ರಮಾಣ ಪ್ರತಿ ೧೦೦೦ ಗಂಡಸರಿಗೆ ೯೪೦ ಹೆಂಗಸರು ಇದ್ದಾರೆಂದು ವರದಿ ಹೇಳುತ್ತದೆ. ನಿಸರ್ಗದತ್ತ

ಲಿಂಗ ಅನುಪಾತದ ಅನುಸಾರ ಪ್ರತಿ ೧೦೦೦ ಗಂಡಸರಿಗೆ ೧೦೦೦ಕ್ಕಿಂತ ಹೆಚ್ಚು ಹೆಂಗಸರು ಇರಬೇಕು ಎಂದು ಹೇಳಲಾಗುತ್ತದೆ. ಸಮಾನ ಲಿಂಗ ಅನುಪಾತದ ನೆಲೆಯಿಂದಲೂ ಪ್ರತಿ ೧೦೦೦ ಗಂಡಸರಿಗೆ ೬೦ ಹೆಂಗಸರು ಕಾಣೆಯಾಗಿದ್ದಾರೆ. ಈ ಅನುಪಾತವನ್ನು ಸರಿದೂಗಿಸಲು ಸಮಾಜದಲ್ಲಿ ಸ್ತ್ರೀಯರ ಹಕ್ಕು, ಅಧಿಕಾರ, ಸ್ವಾತಂತ್ರ್ಯ, ಘನತೆ, ಗೌರವ ಪರವಾದ ಜೀವನ ಮೌಲ್ಯಗಳು ರೂಢಗೊಳ್ಳಬೇಕಾದ ಅಗತ್ಯ ಮತ್ತು ಸ್ತ್ರೀ ಸಮಸ್ಯೆಗಳನ್ನು ಪರಿಹರಿಸಲೇ ಬೇಕಾದ ಒತ್ತಡ ಇದೆ.

ಭಾರತ ರಾಜಕೀಯ ಸ್ವತಂತ್ರ ಪಡೆದು ೬೬ ವರ್ಷ ಕಳೆದ ಇಂದಿನ ದಿನಮಾನದಲ್ಲೂ ವರದಕ್ಷಿಣೆಯ ಪಿಡುಗು ಹೇರಳವಾಗಿದೆ. ಬಡ ಹೆಣ್ಣುಮಕ್ಕಳ ಜೀವನ ಅತಂತ್ರ ಸ್ಥಿತಿಯಲ್ಲಿದೆ, ನರಕಮಯವಾಗಿದೆ. ಈ ಕುರಿತು ಸುಪ್ರಿಂ ಕೋರ್ಟ್ ಕುಟುಂಬದ ಸೊಸೆಯನ್ನು ಮನೆಮಗಳಾಗಿ ಪರಿಗಣಿಸುವಂತೆ ತಾಕೀತು ಮಾಡಿರುವುದು (ಪ್ರವಾ.೧೭.೦೫.೨೦೧೩) ಈ ಸಾಮಾಜಿಕ ಸಮಸ್ಯೆಯ ಗಂಭೀರತೆಯನ್ನು ಸಾರಿ ಹೇಳುತ್ತದೆ. ಇಂದು ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ವರದಕ್ಷಿಣೆ ಪಿಡುಗು ಪ್ರಮುಖವಾಗಿದೆ. ಪ್ರಸ್ತುತ ಅಧ್ಯಯನದ ಕೃತಿಗಳು ಈ ಕುರಿತು ಮಂಡಿಸಿರುವ ನಿಲುವನ್ನು ಪರಿಶೀಲಿಸಬಹುದು.

ಚಿಲಕಮರ್ತಿಯವರ ರಾಜರತ್ನಂ ಕಾದಂಬರಿ ವರದಕ್ಷಿಣೆ ಸಮಸ್ಯೆಯನ್ನು ತನ್ನ ವಸ್ತುವನ್ನಾಗಿ ಹೊಂದಿದೆ. ಜಗನ್ನಾಥರಾಯನಿಗೆ ಮದುವೆಯ ಹಲವಾರು ಪ್ರಸ್ತಾಪಗಳು ಬರುತ್ತವೆ. ಮಧ್ಯಸ್ಥಿಕೆದಾರರು ಮೊದಲಿಗೆ ಡಿ.ಸಿ. ಮಗಳ ಸಂಬಂಧ ತರುತ್ತಾರೆ. ಹೆಣ್ಣಿನ ಕಡೆಯವರು ವರನಿಗೆ ೨೦೦೦ ರೂ. ನಗದು ಹಣ ಮತ್ತು ಇತರೆ ಎಲ್ಲ ಉಪಚಾರಗಳೊಂದಿಗೆ ಮದುವೆ ಮಾಡಿಕೊಡುವುದಾಗಿ ಸೂಚಿಸುತ್ತಾರೆ. ನಂತರದಲ್ಲಿ ತಹಸಿಲ್ದಾರರ ಮಗಳ ಸಂಬಂಧ ಪ್ರಸ್ತಾಪವಾಗುತ್ತದೆ. ಇವರು ೨೫೦೦ ರೂ. ನಗದು ಹಣ ವರದಕ್ಷಿಣೆ ನೀಡುವುದಲ್ಲದೆ, ಎರಡೂ ಕಡೆಯ ಮದುವೆ ಖರ್ಚು ಮಾಡಿ ಗಂಡಿನ ಮನೆಯವರಿಗೆ ಹೋಗಿ ಬರುವ ಖರ್ಚು ನೀಡಲು ಒಪ್ಪಿಕೊಳ್ಳುತ್ತಾರೆ. ಆದರೆ ಈ ಎಲ್ಲಾ ಪ್ರಸ್ತಾಪಗಳನ್ನು ನಿರಾಕರಿಸಿದ ಜಗನ್ನಾಥ ತಾನು ಇಷ್ಟಪಟ್ಟ ತನ್ನ ಸ್ನೇಹಿತನ ತಂಗಿ ಒಂಬತ್ತು ವರ್ಷದ ರಾಜರತ್ನಂಳನ್ನು ಮದುವೆಯಾಗಲು ಹಟ ತೊಡುತ್ತಾನೆ. ಹೆಚ್ಚು ವರದಕ್ಷಿಣೆ ನೀಡುವ ಮೇಲಿನೆರೆಡು ಸಂಬಂಧಗಳು ತನ್ನ ತಂದೆ ಸೂಚಿಸಿದವು ಆಗಿವೆ. ಇದರಿಂದ ತನ್ನ ತಂದೆಗೆ ಹೆಣ್ಣಿನ ಕಡೆಯವರು ನೀಡುವ ವರದಕ್ಷಿಣೆಯೇ ವಿವಾಹದಲ್ಲಿ ಮುಖ್ಯವೆಂದು ತಿಳಿದುಕೊಂಡಿದ್ದನ್ನು ಅರ್ಥಮಾಡಿಕೊಳ್ಳುತ್ತಾನೆ. ತಂದೆಯ ಈ ದೌರ್ಬಲ್ಯವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ನಿರ್ಧರಿಸುತ್ತಾನೆ. ತಾನು ಪ್ರೀತಿಸಿದ ರಾಜರತ್ನಂಳ ತಂದೆ ಗುಮಾಸ್ತ ರಾಮಲಿಂಗಸ್ವಾಮಿ ತನ್ನ ತಂದೆಗೆ ನೀಡಬೇಕಾದ ವರದಕ್ಷಿಣೆಯ ಮೊತ್ತವನ್ನು ತಾನೇ ಸಾಲದ ರೂಪದಲ್ಲಿ ಕೊಡಿಸಿ ರಾಜರತ್ನಂಳನ್ನೇ ಮದುವೆಯಾಗುತ್ತಾನೆ. ಆ ಸಂದರ್ಭದಲ್ಲಿ ಜಗನ್ನಾಥನ ತಂದೆ ವರದಕ್ಷಿಣೆ

ರೂಪದಲ್ಲಿ ವರನಿಗೆ ೧೬೦೦ ರೂಪಾಯಿ ನಗದು ಹಣ, ಬೆಳ್ಳಿ ಪಾತ್ರೆಗಳು, ರೇಷ್ಮೆ ಧೋತ್ರ, ಐದು ದಿನದ ಮದುವೆಯಲ್ಲಿ ಹೆಣ್ಣಿನ ಅತ್ತೆ ನಾದಿನಿಯರಿಗೆ ಪ್ರತಿದಿನ ಪ್ರತಿಯೊಬ್ಬರಿಗೂ ಒಂದೊಂದು ದೊಡ್ಡ ಉಡುಗೊರೆ, ಬಾಜಭಜಂತ್ರಿಯವರ ವೆಚ್ಚ, ವರನ ಕಡೆಯಿಂದ ಬರುವ ವೈದಿಕ ಬ್ರಾಹ್ಮಣರು ಮತ್ತು ಸ್ನೇಹಿತ-ಸಂಬಂಧಿಕರಿಗೆ ಅವರವರ ತಾರತಮ್ಯತೆಗೆ ಅನುಸಾರವಾಗಿ ಬಟ್ಟೆಯ ಉಡುಗೊರೆ, ಮದುವೆಯ ಸಂದರ್ಭದಲ್ಲಿ ಗಂಡಿನ ಕಡೆಯವರು ಹೋಗಿ ಬರಲು ತಗಲುವ ವೆಚ್ಚ ಹಾಗೂ ವರನಿಗೆ ಹತ್ತು ರೂಪಾಯಿಗಿಂತ ಕಡಿಮೆಯಿಲ್ಲದ ಉಡುಗೊರೆ ಪಡೆಯುತ್ತಾನೆ.

ಜಗನ್ನಾಥರಾಯ ತನ್ನ ಬಿ.ಎಲ್.ತರಗತಿಯ ಸಹಪಾಠಿ ಮತ್ತು ಸ್ನೇಹಿತ ಕೇಶವರಾಜುವಿನ ಸಂಪರ್ಕದಲ್ಲಿ ಅವನ ತಂಗಿ ರಾಜರತ್ನಂಳನ್ನು ಕಂಡು ಮೆಚ್ಚುವುದು, ಇಷ್ಟಪಡುವುದು, ತಂದೆಯ ವರದಕ್ಷಿಣೆಯ ಲೋಭತನಕ್ಕೆ ಈಡಾಗದೆ ಹಟ ಹಿಡಿದು ಅವಳನ್ನೇ ಮದುವೆಯಾಗುವುದು, ಸ್ತ್ರೀ ಪುರುಷರ ನಡುವಿನ ಪ್ರೇಮ ಭಾವನೆಗಳಿಗೆ ಆದ್ಯತೆ ನೀಡಿದ ಪರಿಣಾಮವಾಗಿದೆ. ಅದು ಅವನಲ್ಲಿ ಹುಟ್ಟಿದ ಪ್ರೀತಿಯ ದ್ಯೋತಕವಾಗಿದೆ. ಹಿಂದೂ ಸಾಂಪ್ರದಾಯಿಕ ಸಮಾಜದಲ್ಲಿ ಅಂದು ಪ್ರೀತಿ ಪ್ರೇಮ ಸಾಮಾಜಿಕ ಮೌಲ್ಯವಾಗಿ ಅಸ್ತಿತ್ವದಲ್ಲಿಲ್ಲದ ಸಂಗತಿಯಾಗಿತ್ತು. ಅಂತಹ ಕಾಲದಲ್ಲಿ ಜಗನ್ನಾಥರಾಯನಿಗೆ ತಾನು ಕಂಡ ಹೆಣ್ಣನ್ನು ಪ್ರೀತಿಸುವ ಮತ್ತು ಅವಳನ್ನೇ ತನ್ನ ಬಾಳಸಂಗಾತಿಯನ್ನಾಗಿಸಿಕೊಳ್ಳುವ ಭಾವನೆ, ಚಿಂತನೆ, ಸಾಧಿಸಿಕೊಳ್ಳುವ ಧೈರ್ಯ ಮತ್ತು ಸಹನೆ ಅವನಿಗೆ ತನ್ನ ಇಂಗ್ಲಿಷ್ ಶಿಕ್ಷಣದ ಓದಿನಲ್ಲಿ ಉದಿಸಿದ ವಿವರವನ್ನು ಕಾದಂಬರಿಯಲ್ಲಿ ಕಾಣುತ್ತೇವೆ.

ಜಗನ್ನಾಥರಾಯನ ತಂದೆ ತನ್ನ ಮನೆಗೆ ಬರುವ ಸೊಸೆಯ ಗುಣಸ್ವಭಾವಗಳಿಗಿಂತ ಆಕೆ ಮದುವೆಯ ಮೂಲಕ ತನ್ನ ಕುಟುಂಬದ ಚರ-ಸ್ಥಿರಾಸ್ತಿಗೆ ತಂದು ಸೇರಿಸುವ ವರದಕ್ಷಿಣೆ ಪಾಲು ಎಷ್ಟು ಎಂಬುದು ಮುಖ್ಯವಾಗಿದೆ. ಹಾಗಾಗಿ ತನ್ನ ಮಗ ಜಗನ್ನಾಥರಾಯ ತಾನು ಇಷ್ಟ ಪಟ್ಟ ಹುಡುಗಿಯನ್ನು ಮದುವೆಯಾಗುವ ಸಲುವಾಗಿ ಹೆಣ್ಣಿನ ಮನೆಯವರು ತನಗೆ ವರದಕ್ಷಿಣೆ ನೀಡಲು ಅನುಕೂಲವಾಗುವಂತೆ ಸ್ವತಃ ತಾನೇ ಸಾಲ ಕೊಡಿಸಿರುವನೆಂದು ನಂತರದಲ್ಲಿ ಅವನಿಗೆ ತಿಳಿದು ಬಿಡುತ್ತದೆ. ಹಾಗಾಗಿ ಆ ಸಾಲದ ಮೊತ್ತವನ್ನು ಹೆಣ್ಣಿನ ಮನೆಯವರೆ ತೀರಿಸಿಕೊಳ್ಳಬೇಕೆಂದು ಪಟ್ಟು ಹಿಡಿಯುತ್ತಾನೆ. ಆದರೆ ಕೇವಲ ಗುಮಾಸ್ತನಾದ ರಾಜರತ್ನಂಳ ತಂದೆ ಆ ಸಾಲದ ಹೊರೆಯನ್ನು ತೀರಿಸಲು ತಾನು ಅಸಮರ್ಥನೆಂದು ಅಷ್ಟೇ ಗಟ್ಟಿಯಾಗಿ ಪ್ರತಿಪಾದಿಸುತ್ತಾನೆ. ಜಗನ್ನಾಥರಾಯನ ತಂದೆ ತನ್ನೊಂದಿಗೆ ವರದಕ್ಷಿಣೆ ಪಡೆದುಕೊಂಡು ಬರದ ಹೆಣ್ಣು ತನ್ನ ಮನೆಯ ಸೊಸೆಯಾಗಲು ಸಾಧ್ಯವಿಲ್ಲವೆಂಬ ಖಡಾಖಂಡಿತ ಮಾತುಗಳಿಂದ ಆಕೆಯನ್ನು ತನ್ನ ಮನೆ ತುಂಬಿಸಿಕೊಳ್ಳಲು ನಿರಾಕರಿಸುತ್ತಾನೆ. ತನ್ನ ಮಗ ಜಗನ್ನಾಥರಾಯನಿಗೆ ಎರಡನೆಯ ಮದುವೆ ಮಾಡಲು ಸಿದ್ಧನಾಗಿ ಮಗನ ಮುಂದೆ ತನ್ನ ಸಾವಿನ ವಿಚಾರ ಪ್ರಸ್ತಾಪಿಸಿ ಅವನನ್ನು ಒಪ್ಪಿಸುತ್ತಾನೆ. ಮೊದಲ ಮದುವೆಯ

ಸತ್ಯಾಂಶ ತಿಳಿಯದ ಹೆಣ್ಣಿನವರು ವರನಿಗೆ ೩೦೦೦ ರೂ. ನಗದು ಹಣ, ಗಂಡಿನ ಕಡೆಯವರು ಮದುವೆಗೆ ಹೋಗಿ ಬರುವ ದಾರಿ ಖರ್ಚು, ಗಂಡಿನ ಕಡೆಯ ನೆಂಟರಲ್ಲಿನ ಮಹಿಳೆಯರಿಗೆ ಉಡುಗೊರೆ, ಬೆಳ್ಳಿ ನಾಣ್ಯಗಳು, ಬೆಳ್ಳಿ ಪಾತ್ರೆಗಳು, ಬೆಳ್ಳಿ ತಟ್ಟೆಗಳು, ರೇಷ್ಮೆ ಧೋತ್ರ, ವರನಿಗೆ ೫೦೦ ರೂ, ಉಡುಗೊರೆ ಅಲ್ಲದೆ ಭೂಮಿಯನ್ನು ಬರೆದುಕೊಡಲು ಮುಂದೆ ಬರುತ್ತಾರೆ. ಅಷ್ಟರಲ್ಲಿ ಜಗನ್ನಾಥರಾಯ ತನ್ನ ತಂದೆಯ ವರದಕ್ಷಿಣೆಯ ವ್ಯಾಮೋಹ ಕುರಿತು ಗೆಳೆಯನಿಗೆ ಬರೆದ ಪತ್ರದಿಂದಾಗಿ ಗಂಡಿನ ಮೊದಲ ವಿವಾಹದ ಸತ್ಯಾಂಶ ಹೆಣ್ಣಿನ ಮನೆಯವರಿಗೆ ತಿಳಿದು ಮದುವೆ ಮುರಿದು ಬೀಳುತ್ತದೆ.

ತನ್ನ ಹದಿಮೂರನೆಯ ವಯಸ್ಸಿನಲ್ಲಿ ಗಂಡನ ಮನೆ ಸೇರಿದ ರಾಜರತ್ನಂಳಿಗೆ ಮಾವ ಸಾಕಷ್ಟು ಕಿರುಕುಳ ಕೊಡುವುದಲ್ಲದೆ, ಅವಳಿಗೆ ವಿಷವುಣಿಸುವ ಪ್ರಯತ್ನ ಮಾಡುತ್ತಾನೆ. ಮಾವನ ಅಪರಾಧವನ್ನು ಪೋಲಿಸರಿಗೆ ತಿಳಿಸದೆ ರಾಜರತ್ನಂ ಅವನಿಗೆ ಒದಗಬಹುದಾದ ಜೈಲುವಾಸವನ್ನು ತಪ್ಪಿಸುತ್ತಾಳೆ. ಇದರಿಂದ ಮನಕರಗಿ ರಾಜರತ್ಮಂಳನ್ನು ಸೊಸೆಯಾಗಿ ಸ್ವೀಕರಿಸುತ್ತಾನೆ.

ವರದಕ್ಷಿಣೆ ಪಿಡುಗನ್ನು ಪಾಶ್ಚಾತ್ಯ ಶಿಕ್ಷಣದಿಂದ, ವಿವಾಹ ಪೂರ್ವ ಪ್ರೀತಿ ಪ್ರೇಮದ ಜೀವನ ಮೌಲ್ಯದ ಮೂಲಕ ನಿವಾರಿಸಲು ಸಾಧ್ಯ ಎಂಬ ನೋಟವೊಂದನ್ನು ಈ ಕಾದಂಬರಿ ನೀಡುತ್ತದೆ. ಆದರೆ ಹೆಣ್ಣು ತನ್ನ ಪಾಲಿನ ಆಸ್ತಿಯ ಭಾಗವನ್ನು ತಂದು ಗಂಡನ ಮನೆಗೆ ಸೇರ್ಪಡೆ ಮಾಡದೆಯೆ ಆಕೆ ತನ್ನ ಗಂಡನ ಮನೆಯ ದುಡಿಮೆ ಸಂಪತ್ತನ್ನು ಆಧರಿಸಿ ಜೀವನ ನಡೆಸಲು ಅವಕಾಶ ಕೊಡದ ಪುರುಷ ನೀತಿ ಸೃಷ್ಟಿಸಿದ ಸಮಸ್ಯೆಯನ್ನು ಕೈಗೆತ್ತಿಕೊಳ್ಳುವುದೇ ಇಲ್ಲ. ಹಾಗಾಗಿ ಈ ಕಾದಂಬರಿ ವರದಕ್ಷಿಣೆಯ ಸಮಸ್ಯೆಯ ಸಾಮಾಜಿಕ ಸ್ವರೂಪವನ್ನು ಅರಿಯಲು ಮತ್ತು ಸಮರ್ಥವಾಗಿ ಭೇದಿಸಲು ಸಾಧ್ಯವಾಗಿಲ್ಲವೆಂದು ಹೇಳಬಹುದು. ಬಾಲ್ಯ ವಿವಾಹವನ್ನು ಸ್ತ್ರೀ ಸಮಸ್ಯೆಯೆಂದು ಅರಿಯಲಾಗದೆ ಹೋಗಿರುವ ಲೇಖಕರಿಗೆ ವರದಕ್ಷಿಣೆ ಕೂಡ ಸ್ತ್ರೀ ಸಮಸ್ಯೆಯ ಭಾಗವಾಗಿ ಕಾಣಲು ಸಾಧ್ಯವಾಗಿಲ್ಲ.

ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಕಾದಂಬರಿಯಲ್ಲಿ ಇಂದಿರಾಬಾಯಿಯ ಅಪ್ರಾಪ್ತ ವಯಸ್ಸಿನ ಮದುವೆಯ ಸಂದರ್ಭದಲ್ಲಿ ವರದಕ್ಷಿಣೆಯ ಪ್ರಸ್ತಾಪ ವ್ಯಕ್ತವಾಗಿದೆ. ಸಾಂಪ್ರದಾಯಿಕ ಏಳು ದಿನಗಳ ಹಿಂದೂ ಮದುವೆಯಲ್ಲಿ ಹೆಣ್ಣಿನವರು ತಮ್ಮ ಮಗಳಿಗೆ ಎಲ್ಲ ಬಗೆಯ ಚಿನ್ನದ ಆಭರಣಗಳನ್ನು ಮಾಡಿ ಕೊಡಿಸುವ ರೂಢಿಯಂತೆ ಇಂದಿರಾಬಾಯಿಗೂ ನೀಡಲು ಒಪ್ಪಿಕೊಳ್ಳಲಾಗುತ್ತದೆ. ಎರಡು ಸಾವಿರ ನಗದು ಹಣ ವರದಕ್ಷಿಣೆಯನ್ನು ಹೆಣ್ಣಿನ ಕಡೆಯವರೇ ನೀಡುವ ಸಂದರ್ಭ ವಿವರಿತವಾಗಿದೆ.

ವರದಕ್ಷಿಣೆಯನ್ನು ಸಂಪ್ರದಾಯದ ಭಾಗವಾಗಿ ಹೆಣ್ಣಿನ ಕಡೆಯವರು ನೀಡುವ ವಿವರವಿದೆ. ವರನ ಕಡೆಯವರು ಶ್ರೀಮಂತರಾಗಿದ್ದರೂ ವರದಕ್ಷಿಣೆಗಾಗಿ ಅತ್ಯಧಿಕ ಸಂಪತ್ತನ್ನು ಅಪೇಕ್ಷಿಸುವ ಬದಲು ಹೆಣ್ಣಿನವರು ನೀಡುವ ವರದಕ್ಷಿಣೆ ಮೊತ್ತವನ್ನು ಹುಡುಗನಿಗೆ ನೀಡುವ ಗೌರವವೆಂದು ತಿಳಿದು ನಡೆದುಕೊಳ್ಳುವ ಕ್ರಮ ಶ್ರೀಮಂತರ ಮದುವೆಯ ರೀತಿಯನ್ನು ಸೂಚಿಸುತ್ತದೆ. ಇಂದಿರಾಬಾಯಿ ಮತ್ತು ವಿಠಲರಾಯನ ಮದುವೆ ಉಳ್ಳವರ ಮದುವೆಯಾಗಿರುವುದರಿಂದಲೆ ಈ ಮದುವೆಯಲ್ಲಿ ನೀಡಲಾಗುವ ವರದಕ್ಷಿಣೆ ಕೂಡ ಎರಡೂ ಕಡೆಯವರ ಘನತೆ ಗೌರವಗಳನ್ನು ಮೆರೆಯುವಂತಹದ್ದೇ ಆಗಿದೆ. ಹಾಗಾಗಿ ಇಲ್ಲಿ ವರದಕ್ಷಿಣೆಯ ಪಿಡುಗು ಸಾಮಾಜಿಕ ಸಮಸ್ಯೆಯ ರೂಪದಲ್ಲಿರುವುದಕ್ಕಿಂತ ಅಂತಹ ಸಮಸ್ಯೆಯನ್ನು ಹುಟ್ಟುಹಾಕಬಲ್ಲ ಉತ್ತೇಜನದಿಂದ ಕೂಡಿದೆ ಎನ್ನಬಹುದು.

ಎಂ.ಎಸ್, ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯಲ್ಲಿ ಚಿತ್ರಿತವಾಗಿರುವ ತಿಮ್ಮಮ್ಮ-ಸದಾಶಿವ ದೀಕ್ಷಿತ ಮತ್ತು ಸೀತೆ-ಮಹಾದೇವರ ಮದುವೆಗಳಲ್ಲಿ ಮದುವೆಯ ಸಂದರ್ಭದಲ್ಲಿ ವರೋಪಚಾರ ವರನಿಗೆ ನೀಡುವ ವರದಕ್ಷಿಣೆಯ ರೂಪದಲ್ಲಿ ಇರುವಂತೆ ಕಂಡು ಬರುವುದಿಲ್ಲ. ಈ ಎರಡೂ ಮದುವೆಗಳಲ್ಲಿ ಮೇಲ್ಜಾತಿಯ, ಉಳ್ಳವರ ಘನತೆ ಗೌರವ, ಸಾಮಾಜಿಕ ಸ್ಥಾನಮಾನ ಮೆರೆಯುವ ಸಾಂಪ್ರದಾಯಿಕ ಮದುವೆ ಭಾಗವಾಗಿ ನೀಡುವುದನ್ನು ಕಾಣಬಹುದು. ತಿಮ್ಮಮ್ಮಳ ಮದುವೆ ನಂತರದ ಕಾಲದಲ್ಲಿ ಅವಳ ತಂದೆ ನೀಲಕಂಠ ಜೋಯಿಸ ತನ್ನ ಬಾಳಿನ ಕೊನೆಯ ಕ್ಷಣದಲ್ಲಿ ತನ್ನ ಇಡೀ ಆಸ್ತಿಯನ್ನು ಅಳಿಯನಿಗೆ ಒಪ್ಪಿಸಿ ಅದನ್ನು ತನಗೆ ಸರಿಕಂಡ ರೀತಿಯಲ್ಲಿ ಬಳಸಲು, ಅಭಿವೃದ್ಧಿ ಪಡಿಸಲು ಸಂಪೂರ್ಣ ಅಧಿಕಾರ ನೀಡಿ, ತನ್ನ ಮನೆಯ ಜವಾಬ್ದಾರಿಯನ್ನು ನಿರ್ವಹಿಸಲು ಕೇಳಿಕೊಳ್ಳುತ್ತಾನೆ. ಇದು ಒಂದು ಬಗೆಯಲ್ಲಿ ಮನೆಯ ಅಳಿಯನಾಗಿ ಹೆಂಡತಿಯ ತವರು ಮನೆಯ ಸಮಸ್ತ ಜವಾಬ್ದಾರಿಯನ್ನು ನೋಡಿಕೊಳ್ಳುವ ಕ್ರಮವಾಗಿದೆ. ಇದಕ್ಕೆ ಕಾರಣ ಮಗ ಬುದ್ಧಿವಂತನಿಲ್ಲದೇ ಇರುವುದು. ಮನೆಯ ಯಜಮಾನಿಕೆ ಪುರುಷರ ವಶದಲ್ಲಿ ಇರಬೇಕು ಎಂಬ ಪುರುಷಾಧಿಕಾರದ ಕಲ್ಪನೆ ತಂದೆಯಿಂದ ಮಗನಿಗೆ ಎಂಬುದು ಇಲ್ಲಿ ಮಾವನಿಂದ ಅಳಿಯನಿಗೆ ಎಂಬಂತಾಗಿದೆ ಅಷ್ಟೆ. ಕುಟುಂಬದಲ್ಲಿ ಪುರುಷ ಅಧಿಕಾರ ಮಾತ್ರ ಅಬಾಧಿತವಾಗಿ ಮುಂದುವರೆದಿರುವುದನ್ನು ಕಾಣಬಹುದು.

ಸೀತಮ್ಮ-ಮಹಾದೇವನ ಮದುವೆಯ ನಂತರ ಹೆಣ್ಣು ಋತುಮತಿಯಾಗಿ ಅತ್ತೆಯ ಮನೆಗೆ ಹೋಗುವ ಸಂದರ್ಭದಲ್ಲಿ ಹೆಣ್ಣಿನ ಮನೆಯವರು ಅಳಿಯನಿಗೂ ಮಗಳಿಗೂ ಚಿನ್ನ ಬೆಳ್ಳಿ ಸಾಮಾನುಗಳೇ ಮೊದಲಾಗಿ ಅನೇಕ ಪದಾರ್ಥಗಳನ್ನು, ವಸ್ತ್ರಗಳನ್ನು ಬಳುವಳಿಯಾಗಿ ಕೊಟ್ಟ ನಿರೂಪಣೆ ಇದೆ. ಇಲ್ಲಿ ಕೂಡ ಹೆಣ್ಣಿನ ಮನೆಯವರು ತಮ್ಮ ಘಗಳ ಕುಟುಂಬಕ್ಕೆ ಅಗತ್ಯವಾದ ಸಾಮಾನು, ಒಡವೆ-ವಸ್ತ್ರ ಮುಂತಾದ ಎಲ್ಲವನ್ನು ಪ್ರೀತಿಯಿಂದ ಪೂರೈಸುವ ಸಾಂಪ್ರದಾಯಿಕ

ಮದುವೆಯ ಭಾಗವಾಗಿ ನೀಡಿದ ವಿವರವಿದೆ. ಇದು ವರದಕ್ಷಿಣೆ ಮದುವೆಯ ಅನ್ಯೋನ್ಯ ಭಾಗವೆಂಬಂತೆ ಕಾಣಿಸಿದೆ. ವರೋಪಚಾರದ ಮುಖೇನ ಪುರುಷ ಕ್ರೇಂದಿತ ಸಾಮಾಜಿಕ ಆಚರಣೆಯ ಭಾಗವಾಗಿ ವರದಕ್ಷಿಣೆ ಇದ್ದುದನ್ನು ಕಾಣಿಸುತ್ತದೆ. ಅಲ್ಲದೆ ಸಮಾಜದ ಇತರ ಬಡ ಸಮುದಾಯಗಳು ತಮ್ಮ ವಿವಾಹ ಕ್ರಮದಲ್ಲಿ ಅನುಸರಿಸುವಂತೆ ಉತ್ತೇಜಿಸುವ ಕ್ರಮದಲ್ಲಿದೆ.

ಕೇತವರಪು ವೆಂಕಟಶಾಸ್ತ್ರಿಯವರು ಲಕ್ಷ್ಮೀಪ್ರಸಾದಂ ಕಾದಂಬರಿ ಬರೆದ ಉದ್ದೇಶಗಳಲ್ಲಿ, ವರದಕ್ಷಿಣೆಯಿಂದ ಕಷ್ಟಗಳು ಒದಗುವ ಹಾಗೆ ಇಂಗ್ಲಿಷ್ ಶಿಕ್ಷಣ ನೀಡುವ ಕುಟುಂಬಗಳೂ ಕೂಡ ಕಷ್ಟ ಪರಂಪರೆಯನ್ನು ಎದುರಿಸಬೇಕಾಗುತ್ತದೆ. ಹಾಗಾಗಿ ಕೃಷಿಕನಾಗುವುದರಿಂದ ಈ ಯಾವ ಸಮಸ್ಯೆಗಳೂ ಉಂಟಾಗುವುದಿಲ್ಲವೆಂದು ಸೂಚಿಸಿದೆ.

ಈ ಕಾದಂಬರಿಯಲ್ಲಿ ವರದಕ್ಷಿಣೆ ಒಂದು ಸ್ತ್ರೀ ಸಮಸ್ಯೆಯಾಗಿ ಹೇಗೆ ಅವಳ ಬದುಕನ್ನು ನರಕಗೊಳಿಸುತ್ತದೆ ಎಂಬುದು ಮುಖ್ಯವಾಗಿಲ್ಲ. ಇಂಗ್ಲಿಷ್ ಶಿಕ್ಷಣ ಪಡೆಯಲು ಮಾಡುವ ಹೆಚ್ಚಿನ ವೆಚ್ಚಗಳು ವರದಕ್ಷಿಣೆ ಪಿಡುಗಿಗೆ ಕಾರಣವಾಗಿದೆ ಎಂದು ಗುರುತಿಸುವ ಪ್ರಯತ್ನವಿದೆ. ಹಾಗಾಗಿ ರಾಜೇಶ್ವರಮ್ಮ ತನ್ನ ಮಗ ಪ್ರಸಾದನಿಗೆ ತನ್ನ ಅಣ್ಣನ ಮಗಳು ಲಕ್ಷ್ಮಿಯ ಜೊತೆ ಅವರ ಬಾಲ್ಯದಲ್ಲಿಯೇ ಮದುವೆ ಮಾಡಿದ್ದರೂ ಅವಳನ್ನು ತನ್ನ ಸೊಸೆ ಎಂದು ಒಪ್ಪಿಕೊಳ್ಳಲು ಸಿದ್ಧವಿಲ್ಲದ ಚಿತ್ರಣವಿದೆ. ಆಕೆ ತನ್ನ ಮಗನಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸುವ ಮೋಹಕ್ಕೆ ಬಿದ್ದು ವಿದೇಶಕ್ಕೆ ಕಳುಹಿಸಿ ಅದರ ಖರ್ಚು ವೆಚ್ಚಗಳನ್ನು ನಿಭಾಯಿಸಲು ಆಸ್ತಿ ಮಾರಿ ಅದನ್ನು ತುಂಬಿಸಿಕೊಳ್ಳಲು ಮದುವೆ ಮಾಡಿಕೊಂಡಿರುವ ಸೊಸೆ ಮನೆ ತುಂಬಬೇಕಾದರೆ ವರದಕ್ಷಿಣೆ ಪಡೆದು ಬರಬೇಕು ಎಂದು ಕರಾರು ಹಾಕುತ್ತಾಳೆ. ಹಾಗಾಗಿ ಸೊಸೆ ಮೈನೆರೆತು ಮನೆಗೆ ಬಂದಾಗ ಅವಳನ್ನು ಮನೆ ತುಂಬಿಸಿಕೊಳ್ಳದೆ ವರದಕ್ಷಿಣೆಗಾಗಿ ಒತ್ತಾಯಿಸುತ್ತಾಳೆ. ಆದರೆ ಅದನ್ನು ಸಾಧಿಸುವಲ್ಲಿ ವಿಫಲಳಾಗುವ ರಾಜೇಶ್ವರಮ್ಮ ಸೊಸೆಗೆ ಕಿರುಕುಳ ಕೊಡುವುದಲ್ಲದೆ ಅವಳ ಜೀವ ಕೊನೆಗೊಳಿಸಲು ಪ್ರಯತ್ನಿಸುತ್ತಾಳೆ. ಆ ಪ್ರಯತ್ನದಲ್ಲಿ ತನ್ನ ಮಗಳನ್ನು ಕಳೆದುಕೊಂಡು, ಸೊಸೆಯನ್ನು ಹೊರಹಾಕುತ್ತಾಳೆ.

ಶಿಕ್ಷಣವನ್ನು ಪೂರ್ತಿಗೊಳಿಸದೆಯೆ ವಿದೇಶದಿಂದ ಮರಳಿ ಬಂದ ಮಗ ತನ್ನ ಹೆಂಡತಿಯನ್ನು ಹುಡುಕುತ್ತ ಅವಳ ಹಂಬಲದಲ್ಲಿದ್ದರೆ, ವರದಕ್ಷಿಣೆಯ ದುರಾಸೆಗೆ ಬಿದ್ದ ತಾಯಿ ಅವನ ಎರಡನೇ ಮದುವೆ ಮಾಡಲು ಆಲೋಚಿಸುತ್ತಾಳೆ. ಅಂತಿಮವಾಗಿ ಸೊಸೆಯನ್ನು ಮನೆ ತುಂಬಿಸಿಕೊಳ್ಳುವುದ ರೊಂದಿಗೆ ಈ ಕಾದಂಬರಿ ವರದಕ್ಷಿಣೆಯ ಭೀಕರ ಸ್ವರೂಪವನ್ನು ಚಿತ್ರಿಸುತ್ತದೆ.

ವರದಕ್ಷಿಣೆ ಸಮಸ್ಯೆಯ ಪುರುಷಪರ ಚಿಂತನೆಯನ್ನು ಮಸಕು ಮಾಡುವ ಮೂಲಕ ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿದೆ. ಬದಲಾದ ಕಾಲಕ್ಕೆ ಅನುಗುಣವಾಗಿ ಸಮಾಜ ಹೊಸದರತ್ತ ಸಾಗುವುದು ಮತ್ತು ಅದರ ಕಡೆಗೆ ತುಡಿಯುವುದು ಸಹಜ ಪ್ರಕ್ರಿಯೆಯಾಗಿದೆ. ಆದರೆ ಈ

ಕಾದಂಬರಿ ವರದಕ್ಷಿಣೆಯ ಸಮಸ್ಯೆಯನ್ನು ಮುಂದಿಟ್ಟುಕೊಂಡು ಈ ಸಮಸ್ಯೆಗೆ ಇಂಗ್ಲಿಷ್ ಶಿಕ್ಷಣ ಹೇಗೆ ಕಾರಣವಾಗಿದೆ ಎಂಬುದನ್ನು ಚಿತ್ರಿಸಲು ಪ್ರಯತ್ನಿಸಿದೆ. ಇಂಗ್ಲಿಷ್ ಶಿಕ್ಷಣ ವಿರುದ್ಧ ಕೃಷಿಯನ್ನು ಆದರ್ಶೀಕರಿಸಲು ಪ್ರಯತ್ನಿಸಿದೆ. ಸಮಾಜ ಮುಮ್ಮುಖ ಚಲನೆಯಲ್ಲಿ ಇದ್ದರೆ ಕಾದಂಬರಿಕಾರರು ಹಿಮ್ಮುಖ ಚಲನೆಯಲ್ಲಿ ಚಿಂತಿಸಿದ ಫಲವಾಗಿ ಈ ಕಾದಂಬರಿ ಮೂಡಿರುವುದನ್ನು ಗುರುತಿಸಬಹುದು.

ವರದಕ್ಷಿಣೆ ಸಮಸ್ಯೆಯ ಪರಿಶೀಲನೆಯಲ್ಲಿ ಈ ಕೆಳಗಿನ ಅಂಶಗಳನ್ನು ಗುರುತಿಸಬಹುದು. ತೆಲುಗಿನ ಕಾದಂಬರಿಗಳಾದ ರಾಜರತ್ನಮು ಮತ್ತು ಲಕ್ಷ್ಮಿಪ್ರಸಾದಮು ವರದಕ್ಷಿಣೆಯ ಸಮಸ್ಯೆಯನ್ನು ಪ್ರಧಾನವಾಗಿ ಕೈಗೆತ್ತಿಕೊಂಡರೂ ಸಮಸ್ಯೆಯ ಮೂಲವನ್ನು ಮತ್ತೊಂದು ನೆಲೆಯಲ್ಲಿ ಹುಡುಕುತ್ತವೆ.

ಕನ್ನಡದ ಇಂದಿರಾಬಾಯಿ ಮತ್ತು ಮಾಡಿದ್ದುಣ್ಣೋ ಮಹಾರಾಯ ಈ ಪಿಡುಗನ್ನು ಸಾಮಾಜಿಕ ಸಮಸ್ಯೆಯ ಪೂರ್ವದಲ್ಲಿದ್ದ ಸ್ಥಿತಿಯಲ್ಲಿ ಮದುವೆಯ ಸಾಂಪ್ರದಾಯಿಕ ಆಚರಣೆಯ ಭಾಗವಾಗಿ ಇದ್ದುದನ್ನು ಚಿತ್ರಿಸುತ್ತವೆ. ಈ ಎರಡೂ ಬಗೆಯ ಪ್ರಯತ್ನಗಳು ವರದಕ್ಷಿಣೆಯ ಪುರುಷ ಹಿತಾಸಕ್ತಿಯ ಬೇರೆ ಬೇರೆ ಮುಖಗಳನ್ನು ಪರಿಚಯಿಸುತ್ತವೆ.

ಸತಿ ಸಹಗಮನ

ಹಿಂದೂ ಸಮಾಜದಲ್ಲಿ ಅನುಲೋಮ ವಿವಾಹ ಪದ್ಧತಿ (ಮನುಸ್ಮೃತಿ. ಶ್ಲೋಕ ೧೦. ೧೦) ಮತ್ತು ವಿಲೋಮ ಅಥವಾ ಪ್ರತಿಲೋಮ ವಿವಾಹ ಪದ್ಧತಿ (ಮನುಸ್ಮೃತಿ ಶ್ಲೋಕ.೧೦.೨೮)ಗಳು ಜಾರಿಯಲ್ಲಿದ್ದವು. ಈ ವಿವಾಹ ಪದ್ಧತಿಗಳ ಮೂಲಕ ಜಾತಿ ಮತ್ತು ಲಿಂಗ ಶ್ರೇಣೀಕರಣವನ್ನು ಸ್ಥಾಪಿಸಲಾಗಿತ್ತು. ಅನುಲೋಮ ವಿವಾಹ ಪದ್ಧತಿ ಮೇಲ್ಜಾತಿ ಪುರುಷರಿಗೆ ತಮ್ಮ ಸ್ವಜಾತಿ ಮತ್ತು ಇತರ ಎಲ್ಲ ಕೆಳಜಾತಿಗಳ ಹೆಣ್ಣು ಮಕ್ಕಳನ್ನು ಕ್ರಮವಾಗಿ ಪತ್ನಿ ಮತ್ತು ಉಪಪತ್ನಿಯರನ್ನಾಗಿ ಹೊಂದುವ ಅಧಿಕಾರ ನೀಡಿತ್ತು. ಇದಕ್ಕೆ ಪ್ರತಿಯಾಗಿ ವಿಲೋಮ ಅಥವಾ ಪ್ರತಿಲೋಮ ವಿವಾಹ ಪದ್ಧತಿ ಕೆಳಜಾತಿಯ ಪುರುಷರ ಮೇಲೆ ತಮ್ಮ ಮೇಲ್ಜಾತಿಯ ಹೆಣ್ಣಿನೊಂದಿಗೆ ವಿವಾಹದ ಮೂಲಕ ಲೈಂಗಿಕ ಸಂಬಂಧ ಹೊಂದುವುದನ್ನು ನಿಷೇಧಿಸಿತ್ತು.

ಸಜಾತೀಯ ಮಹಿಳೆಯರನ್ನು ಶೀಲ, ಚಾರಿತ್ರ್ಯ, ಪಾತಿವ್ರತ್ಯ, ಮುತ್ತೈದೆ ಸೌಭಾಗ್ಯ, ಸತೀತ್ವ ಮುಂತಾದ ಕಲ್ಪನೆಗಳ ಮೂಲಕ ಆಕೆ ಪ್ರತಿಲೋಮ ವಿವಾಹ ಪದ್ಧತಿಗೆ ಒಳಪಡದ ಹಾಗೆ ನಿರ್ಬಂಧಿಸಿತ್ತು ಮತ್ತು ಮರುವಿವಾಹಕ್ಕೂ ಅವಕಾಶವಿಲ್ಲದಂತೆ ಮಾಡಿತ್ತು. ಹಾಗಾಗಿ ಗಂಡನೊಂದಿಗಿನ ಹೆಂಡತಿಯ ಬಾಳು ಎಷ್ಟು ಸಾರ್ಥಕವೋ ಗಂಡನಿಲ್ಲದ ಹೆಂಡತಿಯ ಬಾಳು ಅಷ್ಟೇ ನಿರರ್ಥಕ ಎಂಬ ಸಂಗತಿಯನ್ನು ಮುತ್ತೈದೆ ಸಾವು ಕಲ್ಪನೆಯ ಮೂಲಕ ಕಟ್ಟಿಕೊಟ್ಟಿತ್ತು.

ಹೆಣ್ಣು ಪುರುಷನಿಗೆ ಅನುಕೂಲೆಯಾಗಿ ಇದ್ದಲ್ಲಿ ಮಾತ್ರ ಆಕೆಯ ಜೀವ ಮತ್ತು ಜೀವನವನ್ನು ಗೌರವದಿಂದ ಕಾಣುತ್ತಿತ್ತು. ಇಲ್ಲದಿದ್ದಲ್ಲಿ ಅಂತಹ ಹೆಣ್ಣನ್ನು ತನ್ನ ಪತಿಯೊಂದಿಗೆ ಜೀವಂತವಾಗಿ

ಸುಡಬೇಕು ಎಂಬ ಸ್ತ್ರೀ ವಿರೋಧಿ ನಿಲುವನ್ನು ಸಾಮಾಜಿಕ ಪದ್ಧತಿಯಾಗಿ ಆಚರಣೆಗೆ ತಂದಿತು. ಇದರಿಂದ ಹೆಣ್ಣಿನ ಜೀವ ಮತ್ತು ಜೀವನ ಪುರುಷ ಸಮಾಜದಲ್ಲಿ ನಗಣ್ಯವಾಯಿತು. ಇದು ಜೀವ ವಿರೋಧಿ ನೆಲೆಯಿಂದ ಹೊರಟದ್ದಾಗಿದೆ.

ಹೆಂಡತಿ ಕಳೆದುಕೊಂಡ ಗಂಡನಿಗೆ ಮರುಮದುವೆ ಮಾಡಿಕೊಳ್ಳುವ ಹಕ್ಕು ಮತ್ತು ಅಧಿಕಾರ ನೀಡಿರುವ ಹಿಂದೂ ಸಮಾಜ ತನ್ನ ಸಾಮಾಜಿಕ ಆಚರಣೆಯಲ್ಲಿ ವಿಧವೆಯರು ಜೀವದಿಂದಿರುವುದೇ ಘೋರ ಅಪರಾಧವಾಗಿ ಪರಿಗಣಿಸಿತು. ಗಂಡ ಕಳೆದುಕೊಂಡ ಹೆಣ್ಣಿನ ಲೈಂಗಿಕ ಜೀವನ ಪವಿತ್ರವಾಗಿರಬೇಕು. ಇಲ್ಲದಿದ್ದಲ್ಲಿ ಪುರುಷ ವಂಶದ ಪರಂಪರೆ, ಪಾವಿತ್ರ್ಯ, ವಂಶವಾಹಿ ಸಂಕರಗೊಳ್ಳುತ್ತದೆ. ಅದರಿಂದಾಗಿ ಆಕೆ ಅನ್ಯ ಪುರುಷರ ಕಣ್ಣಲ್ಲಿ ಆಕರ್ಷಕವಾಗಿ ಮತ್ತು ಮೋಹ ಹುಟ್ಟಿಸುವ ಹಾಗೆ ಇರಬಾರದು. ಅಂತಹವರು ಅರಿಷಿಣ-ಕುಂಕುಮ, ಬಳೆ-ಆಭರಣ, ತಾಳಿ, ಹೂವು ಮತ್ತು ಬಣ್ಣದ ಬಟ್ಟೆ ಮುಂತಾದ ಮುತ್ತೈದೆಯ ಲಕ್ಷಣಗಳ ಮೇಲೆ ನಿಷೇಧ ಹೇರಿತು. ಮಾತ್ರವಲ್ಲ ವಿಧವೆಯರ ಮಂಡೆ ಬೋಳಿಸಿ ಅವರನ್ನು ವಿರೂಪವೂ ಮಾಡಿತು. ಗಂಡ ಸತ್ತ ಬಳಿಕ ಮರುಮದುವೆ ಮಾಡಿಕೊಳ್ಳುವುದನ್ನು ಖಡಾಖಂಡಿತವಾಗಿ ವಿರೋಧಿಸಿತು. ವಿಧವೆ ಯಾವುದೇ ಪುರುಷರೊಂದಿಗೆ ಯಾವುದೇ ಬಗೆಯ ಸಂಪರ್ಕ ಹೊಂದಲು ಸಾಧ್ಯವೆ ಇರಲಿಲ್ಲ. ಹೀಗಿದ್ದರೂ ಎಳೆವಯಸ್ಸಿನಲ್ಲಿಯೆ ವಿಧವೆಯರಾದವರು ತಮ್ಮ ಯೌವ್ವನದಲ್ಲಿ ದೇಹದ ಪ್ರಕೃತಿ ಧರ್ಮವನ್ನು ಮೀರಲಾಗದೆ ಸ್ವಜಾತಿ/ಕೆಳಜಾತಿಯ ಅನ್ಯ ಪುರುಷರೊಂದಿಗೆ ದೈಹಿಕ ಸಂಪರ್ಕ ಹೊಂದುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿರಲಿಲ್ಲ. ಮನು ಧರ್ಮಶಾಸ್ತ್ರ ವಿಧಿಸಿದ ಪ್ರತಿಲೋಮ ವಿವಾಹ ಪದ್ಧತಿಗೆ ಇದು ವಿರುದ್ಧವಾಗಿತ್ತು. ಈ ಸಾಮಾಜಿಕ ಆಚರಣೆಯಲ್ಲಿ ಉಂಟಾಗಬಹುದಾದ ಲೋಪ ಮುಂದುವರೆದಿದ್ದರೆ ಅದು ಅಂತಿಮವಾಗಿ ಪ್ರತಿಲೋಮ ವಿವಾಹದ ಹೆಚ್ಚಳಕ್ಕೆ ಕಾರಣವಾಗಿರುತ್ತಿತ್ತು. ಕೊನೆಗದು ಹಿಂದೂ ಮೇಲ್ಜಾತಿ ಪುರುಷ ಸಮಾಜದಲ್ಲಿ ಅವರ ಹಕ್ಕು, ಅಧಿಕಾರಗಳಿಗೆ ದೊಡ್ಡ ಪೆಟ್ಟು ನೀಡುವಂತಹದ್ದಾಗಿತ್ತು. ಗಂಡ ಸತ್ತ ಹೆಣ್ಣನ್ನು ಸತ್ತ ಗಂಡನೊಂದಿಗೆ ಜೀವಂತ ಸುಡುವ ಮೂಲಕ ಬಹುಸಮುದಾಯಗಳ ಮೇಲಿನ ಜಾತಿ ಮತ್ತು ಲಿಂಗಭೇದ ಮೇಲಿನ ಬಿಗಿ ಕಟ್ಟಳೆಗಳು ಅಮಾನವೀಯ ರೂಪ ತಳೆಯಿತು. ಇದರಿಂದ ಮೇಲ್ಜಾತಿ ಪುರುಷರ ಸಾಮಾಜಿಕ ಜೀವನ ಮೌಲ್ಯಗಳು ಶಿಥಿಲಗೊಳ್ಳದಂತೆ ಕಾಪಾಡಿಕೊಳ್ಳುವ ಪ್ರಯತ್ನ ಮಾಡಿತು.

ಸತಿಸಹಗಮನ ಪದ್ಧತಿ ಮೇಲ್ಜಾತಿ ಪುರುಷ ವಂಶದ ಪಾವಿತ್ರ್ಯ ಕಾಪಾಡಿಕೊಳ್ಳುವ ನೆಪದಲ್ಲಿ ಮಹಿಳೆಯರ ಲೈಂಗಿಕ ಜೀವನವನ್ನು ಗುರಿಯಾಗಿ ಇರಿಸಿತು. ಗಂಡ ಜೀವಂತ ಇದ್ದಾಗ ಪಾತಿವ್ರತ್ಯ ಕಲ್ಪನೆಯ ಮೂಲಕ ಹೆಣ್ಣು ಗಂಡನ ಲೈಂಗಿಕ ಜೀವನದಲ್ಲಿ ನಿಷ್ಠಳಾಗಿರುವಂತೆ ನೋಡಿಕೊಂಡಿತು. ಗಂಡ ಸತ್ತ ನಂತರ ಆಕೆಯನ್ನೇ ಕೊಲ್ಲುವ ತಂತ್ರವನ್ನು ಜಾರಿಗೆ ತಂದಿತು.

ಪ್ರಚಲಿತ ಆಧುನಿಕ ಭಾರತದಲ್ಲಿ ಮರ್ಯಾದ ಹತ್ಯೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಇದು ಜಾತಿ ಕಟ್ಟಳೆಯ ಮರ್ಯಾದೆ ಮೀರಿ ವಿವಾಹವಾಗಬಯಸುವ ಹೆಣ್ಣು ಮಕ್ಕಳನ್ನು ಮನೆಯವರೆ ಹತ್ಯೆ ಮಾಡುವ ಕ್ರಮ. ಇದಕ್ಕೂ ಸತಿ ಪದ್ಧತಿಯ ಮೂಲಕ ಹೆಣ್ಣನ್ನು ಹತ್ಯೆ ಮಾಡುತ್ತಿದ್ದ ಕ್ರಮಕ್ಕೂ ಮೂಲ ಉದ್ದೇಶದಲ್ಲಿ ವ್ಯತ್ಯಾಸವಿರುವಂತೆ ಕಾಣುವುದಿಲ್ಲ. ಈ ಆಚರಣೆಯಲ್ಲಿ ಅಡಕವಾಗಿರುವ ಜೀವ ವಿರೋಧಿ ನಿಲುವು ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ಹೇಳುವ ಸೂಚಕವಾಗಿರದೆ ಅವಹೇಳನಕಾರಿ ರೂಪ ಪಡೆದುಕೊಂಡಿದೆ. ಸಮಾಜದಲ್ಲಿ ಸ್ತ್ರೀಯರನ್ನು ಅವರ ಸಾಮಾಜಿಕ ಸ್ಥಾನಮಾನಗಳ ಸ್ಥಿತ್ಯಂತರದ ಹಿನ್ನೆಲೆಯಲ್ಲಿ ಅವರ ಅಸ್ತಿತ್ವವನ್ನೇ ಕೊನೆಗಾಣಿಸುವ ಈ ಆಚರಣೆ ಮಾನವನ ಸಾಂಘಿಕ ಜೀವನದ ಮೂಲ ಉದ್ದೇಶವನ್ನು ಪ್ರಶ್ನಿಸುವಂತಹದ್ದಾಗಿದೆ. ಈ ಆಚರಣೆ ಬರ್ಬರವೂ ಅನಾಗರಿಕವೂ ಆಗಿದ್ದು ವಸಾಹತುಶಾಹಿ ಆಡಳಿತದಲ್ಲಿ ಹಿಂದೂ ಸಮಾಜ ತೀವ್ರ ಸುಧಾರಣೆಗೆ ಒಳಗಾಗಬೇಕಾದ ಅಗತ್ಯವನ್ನು ಮನಗಾಣಿಸಿತು ಮತ್ತು ಸಮಾಜ ಸುಧಾರಕರನ್ನು ಹುಟ್ಟು ಹಾಕುವುದರೊಂದಿಗೆ ಸರಕಾರ ಇಂತಹ ಪದ್ಧತಿಗಳನ್ನು ನಿಷೇಧಿಸಿ ಕಾನೂನು ಜಾರಿ ಮಾಡುವ ಹಂತ ತಲುಪಿತು.

ಈ ಸಮಸ್ಯೆಯನ್ನು ಪ್ರಸ್ತುತ ಅಧ್ಯಯನಕ್ಕಾಗಿ ಆರಿಸಿಕೊಂಡಿರುವ ಕೃತಿಗಳು ಮೂಡಿಸುವ ಬಗೆಯನ್ನು ಪರಿಶೀಲಿಸಬಹುದು.

ವೀರೇಶಲಿಂಗಂ ಪಂತುಲು ಅವರ ಸತ್ಯವತೀ ಚರಿತ್ರೆಯಲ್ಲಿ ಸತ್ಯವತಿ ತನ್ನ ತವರಿಗೆ ಹೆರಿಗೆಗೆಂದು ಹೋಗುತ್ತಾಳೆ. ಅಲ್ಲಿ ಆಕೆಯ ಅಜ್ಜಿ ಪಾರ್ವತಮ್ಮ ನವಪೀಳಿಗೆಯ ಹೆಣ್ಣುಮಕ್ಕಳಿಗೆ ಹಿರಿಯರ ಬಗ್ಗೆ ಗೌರವವಿಲ್ಲ, ತಗ್ಗಿಬಗ್ಗಿ ನಡೆಯುವುದಿಲ್ಲವೆಂದು ಆಕ್ಷೇಪಿಸಿ ಜಾತಿ ಕೆಡಿಸಿದ ಕುಂಪಣಿ ಸರಕಾರ ಸಹಗಮನ ಪದ್ಧತಿ ತೊಡೆದು ಹಾಕಿದ್ದಕ್ಕಾಗಿ ಶಾಪ ಹಾಕುತ್ತ ಸಹಗಮನದ ಘಟನೆಯೊಂದನ್ನು ನೆನಪಿಸಿಕೊಳ್ಳುತ್ತಾಳೆ. ಆ ಅಜ್ಜಿ ತನ್ನ ಕಣ್ಣಾರೆ ಕಂಡ ಸಹಗಮನ ಪದ್ಧತಿಯ ಆಚರಣೆಯನ್ನು ಹೀಗೆ ವಿವರಿಸುತ್ತಾಳೆ. "ನಮ್ಮ ನಂಟನೇ ಒಬ್ಬನು ಎಪ್ಪತ್ತು ವರುಷದವನು ಸತ್ತು ಹೋದನು. ಆತನ ಮೂರನೆ ಮದುವೆಯ ಹೆಂಡತಿ ಇನ್ನೂ ದೊಡ್ಡವಳಾಗಿರಲಿಲ್ಲ. ಆಗ ಆಕೆಗೆ ಏಳು ವರುಷ. ಆದಕಾರಣ ಗಂಡನು ಸತ್ತು ಹೋದರೆ ಚೆನ್ನಾಗಿ ಅಳುವುದೂ ಅವಳಿಗೆ ತಿಳಿಯದು. ಅವಳ ತಂದೆ ಶ್ರೋತ್ರಿಯನು. ಆತನು ನಿತ್ಯಕರ್ಮಗಳೆಲ್ಲ ಮುಗಿದ ಬಳಿಕ ಅಪರಾಹ್ಣ ತಿರುಗಿದ ಹೊರತು ಊಟ ಮಾಡತಕ್ಕವನಲ್ಲ. ಗಂಡನು ಸತ್ತು ಹೋದಾಗ ಆ ಹುಡುಗಿ ಬೀದಿಯಲ್ಲಿ ಆಡುತ್ತಿದ್ದಳು. ಆಗ ಅವಳ ತಂದೆ ಅವಳನ್ನು ಎತ್ತಿಕೊಂಡು ಒಳಗೆ ಹೋಗಿ ಅಮ್ಮಾ ನೀನು ಸಹಗಮನ ಮಾಡಿದರೆ ಯಾವಾಗಲೂ ಸ್ವರ್ಗದಲ್ಲಿ ಗಂಡನೊಂದಿಗೆ ಸುಖಪಡಬಹುದು ಮತ್ತು ಗಂಡನ ವಂಶದವರನ್ನೂ ನಿನ್ನ ತಂದೆಯ ಕುಲದವರನ್ನೂ ಉದ್ಧಾರ ಮಾಡಬಹುದು ಎಂದು ಹೇಳಿದನು. ಆಗ ಆ

ಹುಡುಗಿ ಸಹಗಮನವೆಂದರೆ ಏನೋ ಅದನ್ನು ತಿಳಿಯದೆ ಒಳ್ಳೇದು ಆಗಲಿ ಎಂದು ಒಪ್ಪಿಕೊಂಡಳು. ಕೂಡಲೆ ಆ ಹುಡುಗಿಗೆ ಮೈತುಂಬಾ ಒಡವೆಗಳನ್ನು ಇಡಿಸಿ, ಒಳ್ಳೆ ಸೀರೆಯನ್ನು ಉಡಿಸಿ ಹೊಸ ಮದುವಣಗಿತ್ತಿಯಂತೆ ಸಿಂಗರಿಸಿ ಬಾಜಾ ಬಜಂತ್ರಿ ಮುಂತಾದವುಗಳಿಂದ ಹೆಣದೊಂದಿಗೆ ಮೆರವಣಿಗೆ ಮಾಡಿಸುತ್ತಾ ದೂರವಾಗಿರುವ ಗೋದಾವರೀ ತೀರಕ್ಕೆ ತೆಗೆದುಕೊಂಡು ಹೋದರು. ಅದನ್ನು ನೋಡುವುದಕ್ಕಾಗಿ ಊರಿಂದ ಸಾವಿರಾರು ಮಂದಿಗಳು ಹೋದರು. ಅರಿಸಿನ ಕುಂಕುಮ ತಂದುಕೊಳ್ಳುವುದಕ್ಕಾಗಿ ಊರಲ್ಲಿದ್ದ ಮುತ್ತೈದೆಯರೆಲ್ಲರೂ ಹೋದರು. ಮೊತ್ತ ಮೊದಲು ಬ್ರಾಹ್ಮಣರು ಗಂಡನ ತಲೆಯನ್ನು ಆ ಹುಡುಗಿಯ ತೊಡೆಯ ಮೇಲೆ ಇರಿಸಿ ಮಂತ್ರ ಹೇಳುತ್ತಾ ಏನೇನೋ ಕರ್ಮಗಳನ್ನು ಮಾಡಿಸಿದರು. ಆಮೇಲೆ ಆ ಹುಡುಗಿಯ ತಂದೆ ನಗಗಳನ್ನೆಲ್ಲಾ ತೆಗೆಯಿಸಿ ಬ್ರಾಹ್ಮಣರಿಗೆಲ್ಲರಿಗೂ ಹಂಚಿಕೊಟ್ಟನು.....ಜನ್ಮಾಂತರಗಳಲ್ಲಿಯೂ ಮುತ್ತೈದೆತನ ಬರುವುದೆಂದು ಆಗ ಅರಿಸಿನ ಕುಂಕುಮಗಳನ್ನು ನಾನೂ ತೆಗೆದುಕೊಂಡೆನು. ಬ್ರಾಹ್ಮಣರು ಚಿತೆಯ ಮೇಲೆ ಆ ಹುಡುಗಿಯನ್ನು ಗಂಡನ ಮಗ್ಗುಲಲ್ಲಿ ಮಲಗಿಸಿ ಸುಮ್ಮನೆ ಮಂತ್ರ ಹೇಳುತ್ತಿದ್ದರು. ಆಗ ವಾದ್ಯದ ಶಬ್ದ ತಾನೇ ತಾನಾಗಿ ಹರಡಿಕೊಂಡು ಬೇರೆ ಯಾವ ಶಬ್ದವೂ ಕಿವಿಗೆ ಕೇಳದಂತೆ ಮಾಡಿತ್ತು. ಆಗ ತಂದೆಯೇ ಇರಬಹುದು. ನಾಲ್ಕು ಕಡೆಯೂ ಬೆಂಕಿ ಹೊತ್ತಿಸುವಾಗ್ಗೆ ನಾನು ಹೇಳಲಾರೆನು; ಅದು ಈಗಲೂ ಕಣ್ಣಿಗೆ ಕಟ್ಟಿದಂತಿದೆ. ನನ್ನ ಮೈಯೆಲ್ಲಾ ನಡಗುತ್ತದೆ... ಚಿತೆಗೆ ಬೆಂಕಿ ಹಾಕುವಾಗ್ಗೆ ನನ್ನ ಮೈಯೆಲ್ಲಾ ಬೆವರಿ ಮರಣಕಂಪನವೆತ್ತಿ ನಿಲ್ಲಲಾರದೆ ಹಿಂದಿರುಗಿ ಬಂದು ಬಸವಳಿದು ಕೆಳಗೆ ಬಿದ್ದೆನು. ಮೈಗೆ ಉರಿ ಸೋಕಿದೊಡನೆಯೇ ಆ ಹುಡುಗಿ ಕಿರ್ರೆಂದು ಗಟ್ಟಿಯಾಗಿ ಅರಚಿಕೊಂಡು ಬೆಚ್ಚಿಬಿದ್ದು ಎದ್ದು ಅಳುತ್ತಾ ಕೆಳಕ್ಕೆ ಧುಮುಕಿದಳು. ಆಗ ತಂದೆ ಅವಳನ್ನು ಎಷ್ಟೋ ಬೈದು ಜಾವ ಹೊತ್ತಿನವರೆಗೆ ಶಾಸ್ತ್ರದಲ್ಲಿ ಹೇಳಿದ ಪ್ರಾಯಶ್ಚಿತಗಳನ್ನೆಲ್ಲಾ ಮಾಡಿಸಿ ಪುನಃ ಮಲಗಿಸಿದರಂತೆ. ನಾನು ಅದನ್ನು ನೋಡದೆ ಮನೆಗೆ ಓಡಿ ಬಂದೆನು. ಆ ರಾತ್ರಿಯೇ ನನಗೆ ಜ್ವರ ಬಂತು. ಹತ್ತು ದಿನಗಳವರೆಗೆ ನಿದ್ದೆಯಲ್ಲಿಯೂ ಬೆಚ್ಚಿಬೀಳುತ್ತಿದ್ದೆನು. ಅದು ಇನ್ನೂ ಮರೆಯಲಿಲ್ಲ. ಈಗಲೂ ಆ ಸಂಗತಿ ನೆನಪಿಗೆ ಬಂದರೆ ಭಯದಿಂದ ಮೈಯೆಲ್ಲಾ ಬೆವರುತ್ತದೆ. ಬಳಿಕ ತಿರುಗಿ ಮಲಗಿಸಿದ ಮೇಲೆ ಪುನಃ ಎದ್ದು ಬಾರದಂತೆ ಬ್ರಾಹ್ಮಣರು ಬಿದರು ಕಡ್ಡಿಗಳಲ್ಲಿ ಗಟ್ಟಿಯಾಗಿ ಅವುಕಿ ಹಿಡಿದುಕೊಂಡು ಅಳುವ ಸದ್ದು ಕೇಳಿಸದಂತೆ ವಾದ್ಯಗಳನ್ನು ಬಾರಿಸಿರಿ ಎಂದು ವೇದಮಂತ್ರಗಳನ್ನು ಗಟ್ಟಿಯಾಗಿ ಹೇಳುತ್ತಾ ಒಂದು ನಿಮಿಷದೊಳಗೆ ದಹನ ಮಾಡಿಸಿದರಂತೆ" (ಪು.೪೯-೫೧).

ಅಜ್ಜಿ ಪಾರ್ವತಮ್ಮ ತಾನು ಕಂಡ ಘಟನೆಯನ್ನು ನೆನಪಿಸಿಕೊಂಡು ಹೇಳಲು ಬಸವಳಿದು ಹೋದರೂ ಇಂದಿನ ಕಾಲದ ಹೆಣ್ಣುಮಕ್ಕಳು ಹಗಲು ಹೊತ್ತಿನಲ್ಲೇ ತಮ್ಮ ಗಂಡಂದಿರೊಂದಿಗೆ ಗುಸುಗುಸು ಗುಡುವುದು ಪತಿವ್ರತೆಯರ ಲಕ್ಷಣವಲ್ಲವೆಂದು ಅಭಿಪ್ರಾಯ ಪಡುತ್ತಾ ಪುರುಷಪರ

ಧೋರಣೆಯನ್ನು ಸಮರ್ಥಿಸುವುದು ಹೆಣ್ಣಿನ ಜೀವಿತದ ಹಕ್ಕುಗಳ ಬಗ್ಗೆ ಅರಿವಿಲ್ಲದಿರುವುದನ್ನು ಕಾಣಿಸುತ್ತದೆ. ಇದು ಹೆಣ್ಣು ಪರಂಪರಾಗತವಾಗಿ ಪುರುಷಾಧೀನತೆಯಲ್ಲಿ ಉಳಿದು ತನ್ನಂತೆ ತಾನು ಆಲೋಚನೆಯ ಕ್ರಮ ಕಳೆದುಕೊಂಡು ಗುಲಾಮತನದ ಮನಸ್ಥಿತಿಯೆ ಆಗಿದೆ.

ಸತ್ತ ಗಂಡ ಎಪ್ಪತ್ತು ವರುಷದವನಾಗಿದ್ದು ಅವನ ಮೂರನೆ ಹೆಂಡತಿ ಏಳು ವರುಷದ ಎಳೆಯ ಬಾಲಕಿಯನ್ನು ಅವಳ ತಂದೆಯೇ ಗಂಡನೊಂದಿಗೆ ಮಲಗಿಸಿ ಬೆಂಕಿ ಹಚ್ಚಿರುವ ಸಂಗತಿ ಪುರುಷಪರ ಮೌಲ್ಯಗಳು ಕ್ರೌರ್ಯದ ಅಂತಿಮ ಘಟ್ಟ ತಲುಪಿದ್ದನ್ನು ಕಾಣಿಸುತ್ತದೆ. ಆ ಮುಗ್ಧ ಎಳೆಯ ಬಾಲಕಿಯ ಮೈಗೆ ಬೆಂಕಿಯ ಉರಿ ಹತ್ತಿ ಅದರ ನೋವು ಸಹಿಸದೆ ಚಿತೆಯಿಂದ ಹೊರಗೆ ಧುಮುಕಿ ಜೀವ ಉಳಿಸಿಕೊಳ್ಳುವ ದಾರುಣ ಚಿತ್ರ ಎಂಥವರ ಮೈಯಲ್ಲೂ ನಡುಕವನ್ನು ಹುಟ್ಟಿಸುತ್ತದೆ. ಆದರೂ ಅವಳನ್ನು ಪುನಃ ಎದ್ದು ಬಾರದಂತೆ ಬ್ರಾಹ್ಮಣರು ಬಿದಿರು ಕಡ್ಡಿಗಳಿಂದ ಅವುಕಿ ಹಿಡಿದು ಬೇಟೆಯಾಡಿದ ಮೃಗವನ್ನು ಸುಡುವ ರೀತಿ ಆ ಹೆಣ್ಣು ಮಗಳ ರೋದನ ಕಿವಿಗೆ ಕೇಳಿಸದ ಹಾಗೆ ವೇದಮಂತ್ರಗಳನ್ನು ಗಟ್ಟಿಯಾಗಿ ಅರಚುತ್ತ, ತಮಟೆ-ನಗಾರಿಗಳನ್ನು ಬಾರಿಸುತ್ತ ಜೀವಂತವಾಗಿ ಕೊಲ್ಲುತ್ತಾರೆ. ಇದು ಹೆಣ್ಣನ್ನು ದೇವತೆ ಎಂದು ಪೂಜಿಸುವ ನಾಡಿನಲ್ಲಿ ಆಕೆಯನ್ನು ಬೇಟೆಯಾಡುತ್ತಿದ್ದ ಬಗೆಯಾಗಿ ಚಿತ್ರಿತವಾಗಿದೆ.

ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ ಕಾದಂಬರಿಯಲ್ಲಿ ನಾಯಕಿ ಗಂಡನನ್ನು ಕಳೆದುಕೊಂಡು ಬಾಲವಿಧವೆಯಾಗುತ್ತಾಳೆ. ಆ ಸಂದರ್ಭದಲ್ಲಿ ಶವ ಸಂಸ್ಕಾರ ಮಾಡುವ ಮೊದಲೆ ಹುಡುಗಿಯ ಕೂದಲು ತೆಗೆಸಲು ಬ್ರಾಹ್ಮಣ ಅವಸರ ಪಡಿಸುತ್ತಾನೆ. ತಂದೆ ಭೀಮರಾಯ ಆ ಕಾರ್ಯ ನಂತರದಲ್ಲಿ ನಡೆಯವ ಕಟ್ಟಳೆಯೆಂದು ತಡೆದು ಇಂದಿರಾಬಾಯಿಯ ಕೇಶ ಮುಂಡನ ಮಾಡುವ ಆಚರಣೆಯನ್ನು ಮುಂದೂಡುತ್ತಾನೆ. ಆಗ ಬ್ರಾಹ್ಮಣನು ಹೇಳುವ ಮಾತುಗಳು ಹೀಗಿವೆ. "ಪತಿಯ ಮರಣಾನಂತರ ಪತ್ನಿಯು ಕೇಶಛೇದನವಾಗದೆ ಸ್ನಾನ ಮಾಡಿದರೆ, ಒಂದೊಂದು ಸಾರಿ ಸ್ನಾನ ಮಾಡುವಾಗ ಆಕೆಯ ಒಂದೊಂದು ಕೂದಲಿನಿಂದ ಎಷ್ಟು ಹನಿ ನೀರನ್ನು ಭೂಮಿಯ ಮೇಲೆ ಬೀಳಿಸುವಳೋ ಅಷ್ಟು ವರುಷಗಳ ಪರ್ಯಂತ ಪತಿಯು ಅಘೋರವಾದ ನರಕದಲ್ಲಿ ಯಾತನೆಯನ್ನನುಭವಿಸುವನೆಂದು ಶಾಸ್ತ್ರವಿಧಿ ಇದೆ"(ಪು.೧೪೭) ಸತ್ತ ವ್ಯಕ್ತಿಯ ನರಕದ ಘೋರ ಯಾತನೆಯ ಕಲ್ಪನೆಯನ್ನು ಕಪೋಲ ಕಲ್ಪಿತವಾಗಿ ಮಂಡಿಸಿ ಜೀವ ಇರುವವರ ಜೀವ ತೆಗೆವ ಪುರೋಹಿತಶಾಹಿಗಳ ಕ್ರೂರ ಮನಸ್ಥಿತಿ ಇದಾಗಿದೆ. ಕೇಶಮುಂಡನ ಕ್ರಿಯೆಯನ್ನು ಮುಂದೂಡಲು ಸಿದ್ಧನಿಲ್ಲದ ಬ್ರಾಹ್ಮಣ ಪುರೋಹಿತಶಾಹಿ ಹೇಗೆ ಜೀವ ವಿರೋಧಿಯೆಂದು ಆತನಾಡಿದ ಮುಂದಿನ ಮಾತುಗಳೆ ಕಟ್ಟಿ ಕೊಡುತ್ತವೆ. "ಪ್ರಾಚೀನ ಕಾಲದಲ್ಲಿ ಪತ್ನಿಯು ಸಹಗಮನವಾಗಿ ಚಿತೆಯಲ್ಲಿ ಹಾರಿ ಪತಿ ಸಂಗಡವೇ ದಹನವಾಗಬೇಕೇಂಬ ಶೃತಿವಾಕ್ಯವನ್ನನುಸರಿಸಿ, ಎಷ್ಟೋ ಪತಿವ್ರತಾ ಸ್ತ್ರೀಯರು

ಸಹಗಮನವಾಗಿದ್ದರು. ಈಗ ಮ್ಲೇಂಛರಿಗೆ ರಾಜ್ಯವಾದ ಮೇಲೆ ಆ ಪದ್ಧತಿಯು ನಿಂತಿದೆ. ಆದರೂ ಅನೇಕ ಸ್ತ್ರೀಯರು ಸ್ಮಶಾನದವರೆಗೆ ಹೋಗಿ ಚಿತೆಗೆ ಅಗ್ನಿ ಕೊಡುವಷ್ಟರ ಮಟ್ಟಿಗಿನ ಕಟ್ಟಳೆಯಾದರೂ ಇತ್ತೀಚಲಾಗಿ ಕೆಲವು ದಿವಸಗಳವರೆಗೆ ನಡೆದು ಬಂದಿದೆ" (ಪು.೧೪೨).

ಜಾತಿ ಕಟ್ಟಳೆಯನ್ನು ಜೀವಕ್ಕಿಂತ ಮಿಗಿಲಾಗಿ ಪ್ರೀತಿಸುವ ಬ್ರಾಹ್ಮಣ ಪುರೋಹಿತ ವರ್ಗ ಅವರ ಶೃತಿ, ಆಗಮ ವೇದಗಳು ಎಲ್ಲ ಕೆಡಕುಗಳ ಮೂಲವಾಗಿರುವುದನ್ನು ಅವರ ಮಾತುಗಳೇ ಕಾಣಿಸುತ್ತದೆ. ಸ್ತ್ರೀಯರು ಪತಿವ್ರತೆ ಎಂಬ ಕಲ್ಪನೆಯಲ್ಲಿ ಹಿಂದೂ ಪುರುಷರ ಗುಲಾಮರಾಗಿದ್ದು, ಅವರ ಮರಣದ ನಂತರ ಅವರ ಚಿತೆಯೊಂದಿಗೆ ದಹನವಾಗುವ ಜೀವನ, ಭೂಮಿಯ ಮೇಲೆ ಹುಟ್ಟಿದ ಎಲ್ಲ ಜೀವಿಗಳಿಗಿಂತ ಹೀನಾಯವಾಗಿತ್ತೆಂದು ಗಮನಿಸಬಹುದು.

ಎಂ.ಎಸ್.ಪುಟ್ಟಣ್ಣನವರ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯಲ್ಲಿ ಸೀತೆಗೆ ವೆಂಕಮ್ಮ ತನ್ನ ತಾಯಿ ಅರುಂದಮ್ಮ ಹೇಗೆ ಅಪ್ರತಿಮ ಪತಿವ್ರತೆಯಾಗಿದ್ದಳು, ತನ್ನ ಗಂಡ ಸತ್ತಾಗ ಹೇಗೆ ಧೀರಳಾಗಿ ಗಂಡನ ಚಿತೆಯೇರಿದಳು ಎಂಬುದನ್ನು ಹೀಗೆ ವಿವರಿಸುತ್ತಾಳೆ.

"...ಅರೆಗಳಿಗೆ ಹೋದಮೇಲೆ ಕಂಣಾಗಾಲದಿಂದ ಬಂದಿದ್ದ ಪುರೋಹಿತರನ್ನು ಕರೆದು- ಸ್ವಾಮಿ ನಾನು ನನ್ನ ಪತಿಯನ್ನು ಬಿಟ್ಟಿರಲಾರೆ; ನನ್ನ ಪತಿಯ ಸಂಗಡಲೇ ನಾನೂ ಅಗ್ನಿ ಪ್ರವೇಶವನ್ನು ಮಾಡಬೇಕೆಂದು ನಿಶ್ಚೈಸಿದ್ದೇನೆ. ಆ ಕರ್ಮಕ್ಕೆ ಬೇಕಾದ ಗ್ರಂಥಗಳನ್ನೆಲ್ಲಾ ಸಿದ್ಧಮಾಡಿಕೊಳ್ಳಿ. ಬೇಕಾದ ಸಾಮಾನುಗಳನ್ನು ಜಾಗ್ರತೆಯಾಗಿ ತರಿಸಿ ಇರಿಸಿಕೊಳ್ಳಿ. ಕಾಲ ಮೀರಿಹೋಗುವಂತೆ ಮಾಡಬೇಡಿ ಎಂದು ಹೇಳಿದಳು. ಆಗ ಈ ಮಾತನ್ನು ನಾನೂ ನನ್ನ ತಮ್ಮನೂ ಕೇಳಿ ನಮಗೆ ದು:ಖ ಉಬ್ಬಿ ಉಬ್ಬಿ ಬಂತು. ನಾವು ತಡೆಯಲಾರದೆ ಹೋದೆವು,- ಅಮ್ಮ ಯಜಮಾನರಂತೂ ಈ ಲೋಕವನ್ನು ಬಿಟ್ಟರು. ನೀನೂ ಹೋಗಿ ನಮ್ಮನ್ನು ಶುದ್ಧವಾಗಿ ತಬ್ಬಲಿಗಳನ್ನು ಮಾಡಬೇಡಮ್ಮ ಎಂದು ಎಳೇ ಮಕ್ಕಳ ಹಾಗೆ ಅತ್ತೆವು. ನಮ್ಮಮ್ಮನು ಪುನ: ನಮ್ಮ ಸಂಗಡ ಇನ್ನೊಂದು ಮಾತನ್ನು ಕೂಡ ಆಡಲಿಲ್ಲ. ಗಂಡನ ಪಾದವನ್ನು ಬಿಟ್ಟು ಅಡ್ಡಾಡಲಿಲ್ಲ. ಪುರೋಹಿತರು ಬಂದು – ತಾಯಿ, ಸುಬೇದಾರರಿಗೆ ಮೊದಲೇ ಈ ಸಂಗತಿಯನ್ನು ತಿಳಿಸಬೇಕಂತೆ ಎಂದರು. ಆಗ ನಮ್ಮಮ್ಮನು – ಬೇಕಾದವರಿಗೆ ತಿಳಿಸಿ, ಎಂದಳು. ಹೀಗೆ ಸಹಗಮನ ಮಾಡಿದರೆ, ಸರ್ಕಾರದಿಂದ ಅರಿಶಿನ ಕುಂಕುಮ, ತಾಂಬೂಲ, ಹೂವು, ಧೋತ್ರದ ಜೊತೆ, ಹಳದೀ ಪತ್ತಲ ಇವೇ ಮೊದಲಾದ್ದದ್ದೂ ಅಲ್ಲದೆ, ಗಂಡನ ಸಂಗಡಲೇ ಜೀವ ಸಹಿತ ಚಿತಿಯನ್ನು ಏರಿದ ಹೆಂಗಸು ಉರಿಯನ್ನು ತಡೆಯಲಾರದೆ ಈಚೆಗೆ ಎದ್ದು ಓಡಿಬಂದಲ್ಲಿ ರಾಜ್ಯಕ್ಕೆ ಹಾನಿ ತಟ್ಟುವುದೆಂದು ಅದಕ್ಕೆಲ್ಲಾ ಅಡ್ಡಿಯಾಗಿರುವ ಹಾಗೆ ಮದ್ದು ತುಂಬಿದ ಗಡಿಗೆಗಳು ಬಾಣಗಳು ಎಣ್ಣೆತುಪ್ಪದ ಗಡಿಗೆಗಳು ಇವುಗಳೆಲ್ಲವನ್ನೂ ಚಿತಿಯ ಮಧ್ಯಭಾಗದಲ್ಲಿಯೂ ಪಕ್ಕಗಳಲ್ಲಿಯೂ ಇರಿಸುವುದಕ್ಕಾಗಿ ಬೇಕಾದ್ದನ್ನೆಲ್ಲಾ ಕೊಡಿಸುತ್ತಾ

ಇದ್ದರು. ಆ ಸಾಮಾನುಗಳೆಲ್ಲವನ್ನೂ ತೆಗೆಯಿಸಿಕೊಂಡು ತಾಲ್ಲೋಕಿನ ವಿಶಿಷ್ಟ ಉದ್ಯೋಗಸ್ಥರೂ ಬಂದರು. ಬೆಳಿಗ್ಗೆ ಐದು ಗಳಿಗೆಯೊಳಗಾಗಿ ಸುತ್ತಮುತ್ತಲಿನ ಗ್ರಾಮದ ಜನರೆಲ್ಲಾ ಬಂದು ನೆರೆಯಿತು. ನನ್ನ ಕಂಣಿಗೆ ೨೦-೨೫ ಸಾವಿರದ ಮೇಲೆ ಜನ ಬಂದು ಸೇರಿದ್ದ ಹಾಗೆ ತೋರಿತು. ಮುಂದಿನ ಕರ್ಮ ನಡೆಯುವುದಕ್ಕೆ ಎಲ್ಲಾ ಸಿದ್ಧವಾಯಿತು.

ನಮ್ಮ ಅಮ್ಮನು ಲೇಶವು ಮನಸ್ಸಿನಲ್ಲಿ ಕಳವಳಗೊಳ್ಳದೆ ಸ್ನಾನವನ್ನು ಮಾಡಿ ತುಂಬಾ ಅರಿಶಿನವನ್ನು ತೊಡೆದುಕೊಂದು ಹಳದೀಪತ್ತಲವನ್ನುಟ್ಟು ಎಂದೂ ಇಡುವಂತೆ ಎರಡು ಬೆಟ್ಟಗಲಕ್ಕೆ ಹಣೆಗೆ ಕುಂಕುಮವನ್ನು ಇಟ್ಟು ಅದರ ಕೆಳಗೆ ಚಂದ್ರವನ್ನು ಹತ್ತಿಸಿಕೊಂಡು ಹೂಮುಡಿದುಕೊಂಡು ಗಂಧವನ್ನು ತೊಡೆದುಕೊಂಡು ಬ್ರಾಹ್ಮಣರಿಗೆ ಬೇಕಾದ ದಾನಗಳನ್ನು ಕೊಟ್ಟು ಮುತ್ತೈದೆಯರಿಗೆ ಅರಿಶಿನ ಕುಂಕುಮ ಗಂಧ ಹುವ್ವ ಸೀರೆ ಕುಪ್ಪಸ ಮರದ ಬಾಗಿನ ಫಲದಾನ ದಕ್ಷಿಣೆ ತಾಂಬೂಲ ಮೊದಲಾದ್ದೆಲ್ಲವನ್ನೂ ಕೊಟ್ಟು ಪುರೋಹಿತರು ಹೇಳಿದ ವಿಧಿಗಳನ್ನೆಲ್ಲಾ ಅನುಸರಿಸಿ ಮಾಡಬೇಕಾದ ಕರ್ಮಗಳನ್ನು ಮಾಡಿ ಚಿಕ್ಕವರನ್ನೆಲ್ಲಾ ಹರಿಸಿ ದೊಡ್ಡವರಿಗೆಲ್ಲಾ ನಮಸ್ಕಾರ ಮಾಡಿ ಅವರ ಅಪ್ಪಣೆಯನ್ನು ಪಡೆದು ಹೂವ್ವಿನ ಮಾಲೆಯನ್ನು ಹಾಕಿಕೊಂಡು ಕೈಯಲ್ಲಿ ನಿಂಬೇಹಣ್ಣುಗಳನ್ನು ಹಿಡಿದು ಅಮ್ಮಾಲೇ ಚೆಂಡಾಡುತಾ ನಿಂತಳು. ನಮ್ಮ ತಂದೆಯನ್ನು ಚಿತಿಯ ಮೇಲೆ ಮಲಗಿಸಿ ಅದನ್ನು ಎತ್ತಿದರು. ಚಿತಿಯ ಮೇಲಿನಿಂದ ಒಂದು ವಾಸಸ್ಸನ್ನು ತಂದು ನಮ್ಮಮ್ಮನ ಕತ್ತಿಗೆ ಹಾಕಿದರು. ಒಂದು ಕೈಯಲ್ಲಿ ಗಂಡನ ಪಾದವನ್ನು ಹಿಡಿದು ಇನ್ನೊಂದು ಕೈಯಲ್ಲಿ ನಿಂಬೆಹಣ್ಣಿನಿಂದ ಅಮ್ಮಾಲೇ ಚೆಂಡಾಡುತಾ ಅಮ್ಮ ತೆರಳಿದಳು. ಈ ಮಹತ್ತನ್ನು ನೋಡುವುದಕ್ಕೆ ಗ್ರಾಮಾಂತರಗಳಿಂದ ಮಂದಿ ಗುಂಪು ಗುಂಪಾಗಿ ಬರುತ್ತಲೇ ಇತ್ತು. ಚಿತಿ ಒಡ್ಡಿ ಸಿದ್ಧವಾಗಿತ್ತು. ಸ್ಮಶಾನದಲ್ಲಿ ಮಾಡಬೇಕಾದ ಕರ್ಮಗಳೆಲ್ಲವೂ ಮುಗಿದ ತರುವಾಯ ಶವವನ್ನು ಚಿತಿಯ ಮೇಲಿಟ್ಟರು. ಅದರ ಮೇಲೆ ಗೊತ್ತಾದ ಸ್ಥಾನದಲ್ಲಿ ನಮ್ಮಮ್ಮನನ್ನೂ ಮಲಗಿಸಿದರು. ಸಹಗಮನ ಮಾಡುವ ಸತಿಯ ಬೆಂಕಿಯನ್ನು ತಡೆಯಲಾರದೆ ಚಿತ್ತ ಚಂಚಲವಾದಾಗ್ಯೂ ಅವಳು ಎದ್ದು ಈಚೆಗೆ ಬಾರದಂತೆ ಬೇಕಾದ ಕಟ್ಟುಗಳನ್ನು ಹಾಕಿ ಭಾರವನ್ನು ಹೇರಿದರು. ಅಗ್ನಿಯು ನಾಲ್ಕು ದಿಕ್ಕಿನಲ್ಲಿಯೂ ಹತ್ತಿಕೊಳ್ಳುವುದಕ್ಕೆ ಮೊದಲಾಯಿತು. ಆ ಚಿತಿಯ ಮೇಲೆ ದೂರದಿಂದ ಎಣ್ಣೆಯನ್ನು ಆಗಾಗ್ಯ ಚೆಲ್ಲುತಾ ಬಂದರು. ಮಹಾಪತಿವ್ರತೆ ಎಂಬ ಕೂಗು ಜನರ ಹಾಹಾಕಾರವು ಹೆಚ್ಚಾಯಿತು. ದಾರಿಯುದ್ದಕ್ಕೂ ನಮ್ಮಮ್ಮ ಹೆಜ್ಜೆ ಇಟ್ಟುಕೊಂಡು ಬಂದ ಸ್ಥಳದ ದೂಳನ್ನು ಗೋರಿ ಗೋರಿ ತೆಗೆದು ಕಣ್ಣಿಗೆ ಒತ್ತಿಕೊಳ್ಳುವವರು ಎಷ್ಟೋ, ಹಣೆಗೆ ಇಟ್ಟುಕೊಳ್ಳುವವರೆಷ್ಟೊ, ಜಯಜಯ ಮಹಾತಾಯಿ ಆದಿಲಕ್ಷ್ಮಿ ಜಯಜಯ, ಎಂದು ಕೂಗತಕ್ಕವರೆಷ್ಟೊ ಇಂಥ ಮಹಾತ್ಮಳು ಹೋದಳಲ್ಲಾ ಎಂದು ಅಷ್ಟು ದು:ಖದಿಂದಲೂ ಅಷ್ಟು ಭಕ್ತಿಯಿಂದಲೂ ಕಣ್ಣಿನಲ್ಲಿ ನೀರ ಹಾಕುತ್ತಾ ಗೊಳ್ ಎನ್ನುವವರೆಷ್ಟೋ, ಗೊತ್ತಿಲ್ಲದ ಹಾಗೆ ಕೊಲಾಹಲ ಹುಟ್ಟಿತು. ಅಲ್ಲಿದ್ದ ಎಲ್ಲರ ದೃಷ್ಟಿಯೂ ಚಿತೆಯ ಮೇಲೆ ನೆಟ್ಟುಹೋಗಿತ್ತು. ಆದರೆ ಆಗ ಅದ್ಭುತವಾದ ಸಂಗತಿಯೊಂದು ನಡೆಯಿತು.

ಅಲ್ಲಿ ನೆರೆದಿದ್ದ ಜನರೆಲ್ಲಾ ನೋಡುತ್ತಿರುವಾಗಲೇ ಸ್ವಲ್ಪವಾಗಿ ಚಿತಿ ಅಲುಗಿತು. ಅದರ ಮೇಲೆ ಹೇರಿದ್ದ ಸೌದೆಯ ಭಾರವೂ ಕಲ್ಲುಗಳ ಭಾರವೂ ಯಾವುದೂ ನಿಲ್ಲಲಿಲ್ಲ. ಅರುಂಧತಿಗೆ ಸಮಾನವಾದ ನಮ್ಮ ಅಮ್ಮನು ತಟ್ಟನೆ ಎದ್ದಳು. ಈಕೆ ಚಿತಿಯ ಮೇಲೆ ಎದ್ದ ಕೂಡಲೆ, ರಾಜ್ಯಕ್ಕೆ ದೊಡ್ಡ ವಿಪತ್ತು ಬಂತೆಂದು ಯೋಚಿಸಿ ಚಿತಿಯ ಸಮೀಪದಲ್ಲಿ ಇದೇ ಕೆಲಸಕ್ಕಾಗಿ ಕಾದುಕೊಂಡಿದ್ದ ಜನರೆಲ್ಲಾ ಅವಳನ್ನು ಅಲ್ಲಿಯೇ ಬೆಂಕಿಯೊಳಕ್ಕೆ ತಳ್ಳಬೇಕೆಂದು ಯತ್ನಿಸಿದರು. ಅಲ್ಲಿದ್ದ ಮಾಮಲೇದಾರ ಮೊದಲಾದ ಉದ್ಯೋಗಸ್ಥರೂ ಪುರೋಹಿತ ಮೊದಲಾದ ವೈದಿಕರೂ ಇತರರೂ ಸಹಾ–ಅಯ್ಯೋ ಏನೋ ವಿಪರೀತವಾಯಿತು ಎಂದು ಕೂಗಿಕೊಂಡರು. ಅಲ್ಲಿ ನೆರೆದಿದ್ದ ಗುಂಪೆಲ್ಲಾ ಗಡಗಡನೆ ನಡುಗಿ ಹೋಯಿತು. ಆದರೆ ಆ ಅದ್ಭುತವನ್ನು ಏನ ಹೇಳಲಿ! ಕ್ಷಣ ಮಾತ್ರದಲ್ಲಿ ಆ ಕಡೆಯಿಂದ ಈ ಕಡೆಗೆ ತಿರುಗಿ ನೋಡುವಷ್ಟರಲ್ಲಿಯೇ ನಮ್ಮ ತಂದೆಯ ಕಾಲಮೇಲೆ ನಮ್ಮಮ್ಮನು ತಲೆಯನ್ನು ಇರಿಸಿ ಮಲಗಿಕೊಂಡಿದ್ದಳು. ಕೂಡಲೇ ಅವಳ ತಲೆ ಸಿಡಿದುಹೋಯಿತು. ಸ್ವಲ್ಪ ಹೊತ್ತಿನ ಮೇಲೆ ನಮ್ಮ ತಂದೆಯ ತಲೆ ಸಿಡಿಯಿತು. ಈ ಆಶ್ಚರ್ಯವನ್ನು ಕಂಡು ಅಲ್ಲಿದ್ದ ಜನರೆಲ್ಲರೂ ನಮ್ಮ ತಾಯಿಯ ಹೆಸರನ್ನು ಹೇಳಿ ನಮಸ್ಕಾರ ಮಾಡಿದರು. ಇವರಿಬ್ಬರನ್ನೂ ಸುಟ್ಟ ಕಡೆ ಜೋಡಾಗಿ ಬೃಂದಾವನವನ್ನು ಜನರು ತಾವೇ ಕಟ್ಟಿಸಿದರು. ಅದಕ್ಕೆ ಈಗಲೂ ಈ ಗ್ರಾಮದವರು ಪೂಜೆ ಮುಂತಾದ್ದನ್ನು ಮಾಡಿ ಹರಕೆ ಹೊತ್ತುಕೊಳ್ಳುವ ವಿಚಾರ ನಿಮಗೆಲ್ಲರಿಗೂ ತಿಳಿದೇ ಇದೆ. ಅವರವರು ಹರಸಿಕೊಂಡ ಹಾಗೆಲ್ಲಾ ಅವರಿಗೆ ಕೆಲಸಗಳು ಕೈಗೂಡುವವು. ನಮ್ಮ ಮನೆಯ ಹಿತ್ತಲ ಬಾಗಿಲಲ್ಲಿ ನಿಂತುಕೊಂಡರೆ ಒಂದು ಕಲ್ಲು ಎಸಗೇ ದೂರದಲ್ಲಿ ಜೋಡಾಗಿ ಎರಡು ಬೃಂದಾವನಗಳು ಕಾಣುವವು".(ಪು.೯೬–೯೯)

ಪಾತಿವ್ರತ್ಯದ ಭೂತವನ್ನು ಆವಾಹಿಸಿಕೊಂಡಿದ್ದ ಅರುಂದಮ್ಮ ತನ್ನ ಗಂಡನ ಸಾವಿನ ನಂತರ ತನ್ನನ್ನೇ ಆಹುತಿ ಮಾಡಿಕೊಳ್ಳುವ ವಿಭ್ರಮೆಗೆ ಒಳಗಾಗಿದ್ದನ್ನು ಈ ಚಿತ್ರಣ ಕಟ್ಟಿಕೊಡುತ್ತದೆ. ಸಹಗಮನದ ಸಂದರ್ಭದಲ್ಲಿ ಪ್ರಾಂತೀಯ ಆಡಳಿತ ವ್ಯವಸ್ಥೆ ಬ್ರಾಹ್ಮಣ ಪುರೋಹಿತ ಶಾಹಿಯೊಂದಿಗೆ ಕೈಜೋಡಿಸಿ ಈ ಆಚರಣೆಯನ್ನು ಸಾಂಗವಾಗಿ ಮತ್ತು ಯಶಸ್ವಿಯಾಗಿ ನಿರ್ವಹಿಸಲು ಅಗತ್ಯವಾದ ಸಾಮಾಗ್ರಿಗಳನ್ನು ಒದಗಿಸುವುದು ಹಿಂದೂ ರಾಜರ ಪುರೋಹಿತಶಾಹಿ ಬಾಲಬಡುಕತನವನ್ನು ಸೂಚಿಸುತ್ತದೆ. ಅರುಂದಮ್ಮ ಎಲ್ಲರ ಮುಂದೆ ಧೀರಳಾಗಿ ಚಿತೆ ಹತ್ತಿದ್ದರೂ ಆಕೆ ಈಚೆ ಬಾರದಂತೆ ಬಿಗಿಕಟ್ಟುಗಳನ್ನು ಹಾಕಿ ಅವಳ ಮೇಲೆ ಭಾರ ಹೇರಿದ್ದುದು ಆಕೆಯ ವಿಭ್ರಮ ಸ್ಥಿತಿಯನ್ನು ಸತಿ ಪದ್ಧತಿಯ ವೈಭವೀಕರಣಕ್ಕೆ ಸೂಕ್ತವಾಗಿ ಬಳಸಿಕೊಂಡಂತಿದೆ. ಉರಿವ ಚಿತೆಯಲ್ಲಿ ಜೀವಂತ ಸುಡುವ ಉರಿಯ ಬೇಗೆಯನ್ನು ಸಹಿಸಲಾಗದೆ ಅರುಂದಮ್ಮ ಹೇರಿದ ಭಾರವನ್ನೆಲ್ಲ ನೂಕೆದ್ದು ಬಲಗುಂದಿ ಕುಸಿದು ವಿರುದ್ಧ ದಿಕ್ಕಿನಲ್ಲಿ ಉರುಳಿ ಬೆಂದು ಹೋಗುವ ಸಂದರ್ಭದ ವಿವರಣೆ ಸಂಪ್ರದಾಯ ಪ್ರತಿಪಾದಿಸುವ ಕ್ರಮವಾಗಿ ನಿರೂಪಣೆ ಇದೆ. ಅರುಂದಮ್ಮನ ಆತ್ಮಾಹುತಿಗೆ ಮರುಳಾದ

ಸಾಮಾನ್ಯ ಜನರು ಆ ಘಟನೆಯಲ್ಲಿ ದಿಗ್ಭ್ರಮೆಗೆ ಒಳಗಾದವರಂತೆ ಉನ್ನತ ಸ್ವರದಲ್ಲಿ ವೈಭವೀಕರಿಸಿ ನಡೆದುಕೊಳ್ಳುವುದನ್ನು ಚಿತ್ರಿಸಲಾಗಿದೆ. ಈ ವೈಭವೀಕರಣದ ನಿರೂಪಣೆ ಜನ ಸಾಮಾನ್ಯರ ವಿವೇಚನೆಯಿಲ್ಲದ ಮತ್ತೇರಿದ ಸ್ಥಿತಿಯೋ, ಪುರೋಹಿತಶಾಹಿಗಳ ಕುಟಿಲೋಪಾಯದ ಪ್ರಚಾರವೋ, ಸರಕಾರಿ ಆಡಳಿತ ಯಂತ್ರದ ನಾಗರಿಕ ಪ್ರಜ್ಞೆ ದಿವಾಳಿ ಎದ್ದ ಸ್ಥಿತಿಯೋ ಯಾವುದು ಎಂಬ ವಿವರಣೆ ಇಲ್ಲದೆ ಸಂಪ್ರದಾಯದ ಭಾಗವಾಗಿ ಹೋಗಿದೆ. ಒಂದು ಕಾಲಘಟ್ಟದಲ್ಲಿ ನಶಿಸಿ ಹೋದ ಸಮಾಜದ ಜೀವನ ಪದ್ಧತಿಯ ಚಿತ್ರಣದಂತೆ ನಮ್ಮ ಕಣ್ಣ ಮುಂದೆ ಬರುತ್ತದೆ.

ಸತಿ ಪದ್ಧತಿಯನ್ನು ಹಿಂದೂ ಸಂಸ್ಕೃತಿಯ ಹಿರಿಮೆಯ ಪ್ರತೀಕವಾಗಿ ಕಂಡು ಅರಸುವುದಾದರೆ ಇತ್ತೀಚಿನ ದಿನಗಳಲ್ಲಿ ತಲೆ ಎತ್ತಿರುವ ಅದರ ಮತ್ತೊಂದು ಸ್ವರೂಪವಾದ ಮರ್ಯಾದ ಹತ್ಯೆಯನ್ನು ಕೂಡ ಮೆರೆಸಬೇಕಾಗಿದೆ. ಹಾಗಾದಲ್ಲಿ ಇಂತಹ ಸಮಾಜವನ್ನು ನಾಗರಿಕ ಸಮಾಜವೆಂದು ಕರೆಯಬೇಕೋ, ಅರಣ್ಯ ನ್ಯಾಯ ಚಾಲ್ತಿಯಲ್ಲಿರುವ ಕಾಡು ಜೀವನವೆಂದು ಹೆಸರಿಸಬೇಕೋ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಹೆಣ್ಣು ಮಕ್ಕಳು ತಮ್ಮ ಪುರುಷರನ್ನು ನಂಬಲರ್ಹರು, ಗೌರವಿಸುವವರು, ಪ್ರೀತಿಪಾತ್ರರು, ಆಶ್ರಯದಾತರು ಎಂಬುದನ್ನು ಮರೆತು ತಮ್ಮ ಸ್ವಹಿತಾಸಕ್ತಿ ಸಾಧನೆಗಾಗಿ ಕುಟುಂಬದ ಆತ್ಮೀಯರನ್ನು ಬಲಿ ತೆಗೆದುಕೊಳ್ಳಲು ಸಿದ್ಧರಿರುವ ಪಾತಕಿಗಳು ಎಂದು ಒಪ್ಪಿಕೊಳ್ಳಬೇಕಾಗಿದೆ.

ಒಟ್ಟಿನಲ್ಲಿ ತೆಲುಗಿನ ಸತ್ಯವತೀ ಚರಿತ್ರೆ ಮತ್ತು ಕನ್ನಡದ ಮಾಡಿದ್ದುಣ್ಣೋ ಮಹಾರಾಯ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಸತೀ ಪದ್ಧತಿಯ ಚಿತ್ರಣ ಪುರುಷಶಾಹಿಯ ಕ್ರೌರ್ಯ ಮತ್ತು ದಬ್ಬಾಳಿಕೆಯ ಸ್ವರೂಪ ಹೇಗೆ ಹಿಂದೂ ಸಮಾಜದಲ್ಲಿ ನೆಲೆಸಿತ್ತು ಎಂಬುದನ್ನು ದಾಖಲಿಸಿದೆ. ಇಂದಿರಾಬಾಯಿ ಕಾದಂಬರಿಯಲ್ಲಿ ಪ್ರಸ್ತಾಪವಾಗುವ ಸತೀಪದ್ಧತಿ ಬದಲಾಗುತ್ತಿರುವ ಸಮಾಜದಲ್ಲಿ ಅದೊಂದು ಕೇವಲ ನೆನಪಾಗಿ ಮೂಡಿ ಬಂದಿದೆ. ಅಲ್ಲದೆ ಆಚರಣೆಯಿಂದ ದೂರ ಸರಿದಿರುವ ರೀತಿಯನ್ನು ಕೂಡ ಕಟ್ಟಿಕೊಡುತ್ತದೆ. ಈ ದೃಷ್ಟಿಯಿಂದ ಇಂದಿರಾಬಾಯಿ ಉಳಿದೆರೆಡು ಕಾದಂಬರಿಗಳಿಗಿಂತ ಆಧುನಿಕ ಕಾಲದ ವಿಚಾರಗಳಿಗೆ ಸ್ಪಂದಿಸಿರುವುದನ್ನು ಕಾಣಬಹುದು.

ವಿಧವಾ ವಿವಾಹ

ಮರುಮದುವೆ ಮಾಡಿಕೊಳ್ಳುವ ಹಕ್ಕು ಪುರುಷರಿಗೆ ನೀಡಿದ ಸಮಾಜ ಮಹಿಳೆಯರಿಗೆ ನಿರಾಕರಿಸಿದೆ. ತನ್ನ ಪ್ರಾಪ್ತ ವಯಸ್ಸಿನಲ್ಲಿ ಗಂಡ ಕಳೆದುಕೊಂಡ ಹೆಣ್ಣು ತನ್ನ ಇಡೀ ಜೀವನವನ್ನು ಒಬ್ಬಂಟಿಯಾಗಿ ಬಾಳಬೇಕು ಎಂದು ಶಾಸ್ತ್ರ ವಿಧಿಸಿದೆ. ಇದು ಪ್ರಕೃತಿ ನಿಯಮಕ್ಕೆ ವಿರುದ್ಧವಾದ ಸಾಮಾಜಿಕ ನಿಯಮವಾಗಿ ಕಾಣುತ್ತದೆ. ಪ್ರಾಣಿ ವರ್ಗಗಳಲ್ಲಿ ಮಾನವನಿಗೆ ಮಾತ್ರ ವರ್ಷದ ಎಲ್ಲ ಕಾಲಗಳಲ್ಲಿ ಲೈಂಗಿಕ ಜೀವನ ನಡೆಸುವ ಶಕ್ತಿ ಮತ್ತು ಸಾಮರ್ಥ್ಯವನ್ನು ಪ್ರಕೃತಿ ಒದಗಿಸಿದೆ. ಆದರೆ ಕೆಲವು ಪ್ರಾಣಿಗಳಲ್ಲಿ ವರ್ಷದ ನಿರ್ದಿಷ್ಟ ಕಾಲಾವಧಿಯಲ್ಲಿ ಮಾತ್ರ ಲೈಂಗಿಕ ಜೀವನ ನಡೆಸುವ

ಸಾಮರ್ಥ್ಯ ಒದಗಿಸಿದೆ. ಈ ಪ್ರಕೃತಿ ನಿಯಮವನ್ನು ಸಾಮಾಜಿಕ ನಿಯಮ ಲಿಂಗ ಭೇದ ನೀತಿಗನುಗುಣವಾಗಿ ರೂಪಿಸಿಕೊಂಡಿರುವಂತಿದೆ. ಆದರೆ ಮನುಷ್ಯನ ಮತ್ತೊಂದು ಲಿಂಗದ ಹಿತಾಸಕ್ತಿಯನ್ನು ಬಲಿಕೊಟ್ಟಿರುವ ಸಾಮಾಜಿಕ ನಿಯಮ ವಿಧವೆಯ ವಿವಾಹವನ್ನು ಕಡೆಗಣಿಸಿ ಆಕೆಯನ್ನು ದಮನಿತ ಸ್ಥಿತಿಯಲ್ಲಿಟ್ಟಿದೆ.

ವಿವಾಹ – ಮೊದಲ ವಿವಾಹವಾಗಿರಲಿ, ಮರುಮದುವೆಯಾಗಿರಲಿ – ಲೈಂಗಿಕ ಜೀವನದ ಅಸ್ತಿಭಾರವಾಗಿದೆ. ಹೆಣ್ಣು ಪ್ರಾಪ್ತ ವಯಸ್ಕಳಾಗಿ, ಮದುವೆಯಾಗಿ, ಲೈಂಗಿಕ ಜೀವನ ನಡೆಸಿ ಗಂಡನನ್ನು ಕಳೆದುಕೊಂಡ ಮಾತ್ರಕ್ಕೆ ಆಕೆ ತನ್ನ ಉಳಿದ ಜೀವನದ ಬದುಕನ್ನು ತ್ಯಜಿಸಬೇಕು ಎಂಬ ನಿಯಮ ಜೀವವಿರೋಧವಾಗಿದೆ. ಸ್ತ್ರೀ ಪುರುಷರಲ್ಲಿ ಯಾರೊಬ್ಬರು ಕೂಡ ಪ್ರಕೃತಿ ನಿಯಮವನ್ನು ಮೀರಲು ಸಾಧ್ಯವಿಲ್ಲ. ಹೀಗಿದ್ದಾಗ ಮರುಮದುವೆಗೆ ಅವಕಾಶ ಇಲ್ಲದಂತಾದರೆ ಅದರಿಂದ ಅನೈತಿಕ ಮತ್ತು ಅಡ್ಡ ಸಂಬಂಧಗಳಿಗೆ ಕಾರಣವಾಗಿ ಸಮಾಜದಲ್ಲಿ ಇತರ ಸಮಸ್ಯೆಗಳಿಗೆ ಮೂಲವಾಗುತ್ತದೆ.

ಸ್ತ್ರೀ ಮೇಲಿನ ನಿಷೇಧ ಪುರುಷ ವಂಶದ ಪಾವಿತ್ರ್ಯದ ಹಿನ್ನೆಲೆಯಲ್ಲಿ ಸ್ತ್ರೀಯರ ಲೈಂಗಿಕ ಪಾವಿತ್ರ್ಯವನ್ನು ಕಾಪಾಡುವಂತಹದ್ದಾಗಿದೆ. ಪುರುಷ ವಂಶದ ಘನತೆ, ಗೌರವ, ಪ್ರತಿಷ್ಠೆ, ಪಾವಿತ್ರ್ಯ ಉಳಿಸಲು ಅಥವಾ ಸಂರಕ್ಷಿಸಲು ಸ್ತ್ರೀ ತನ್ನ ದೇಹ ಪ್ರಕೃತಿಯ ನಿಯಮವನ್ನು ಮೀರಿ ನಡೆಯಬೇಕು ಎಂಬುದು ಪುರುಷಪರ ಜೀವನ ಮೌಲ್ಯವಾಗಿದೆ. ಒಬ್ಬ ಹೆಣ್ಣು ಜೈವಿಕವಾಗಿ ಇಬ್ಬರು ಪುರುಷರ ಸಂತಾನಕ್ಕೆ ಕಾರಣವಾಗಿದ್ದಲ್ಲಿ ಆ ಸಂತಾನ ಆಯಾ ಪುರುಷನ ವಂಶವಾಹಿಯನ್ನು ಹೊಂದಿರುತ್ತದೆಯೇ ಹೊರತು ಅದರಲ್ಲಿ ಸಂಕರಗೊಳ್ಳುವ ಸಾಧ್ಯತೆಯೇ ಇರುವುದಿಲ್ಲ. ಆದರೆ ಇಂತಹ ಸಾಧ್ಯತೆಗಳು ಸ್ತ್ರೀ ಕೇಂದ್ರಿತ ಸಮಾಜ ನಿರ್ಮಾಣಕ್ಕೆ ಕಾರಣವಾಗಬಹುದಾಗಿದೆ. ಇದನ್ನು ಹಿಂದೂ ಪುರುಷಪರ ಸಮಾಜ ಅಪಮೌಲ್ಯೀಕರಿಸಿ ನೋಡುತ್ತದೆ. ಅಲ್ಲದೆ ಜಾತಿ ಕಟ್ಟಳೆಯನ್ನು ಮರ್ಯಾದೆಯ ಆಚೆಗಿನ ಸಂಗತಿಯಾಗಿ ಕಂಡು ನಿಷೇಧಿಸುತ್ತದೆ. ಜಾತಿ ಕಟ್ಟಳೆ ಮುರಿಯುವುದು ಅಂದರೆ ಪ್ರತಿಲೋಮ ವಿವಾಹ ಪದ್ಧತಿಯನ್ನು ಒಪ್ಪಿಕೊಂಡಂತೆಯೇ ಎಂಬ ಪ್ರಜ್ಞೆ ಹಿಂದೂ ಸಮಾಜದ ಸುಪ್ತ ಪ್ರಜ್ಞೆಯಲ್ಲಿ ಗಟ್ಟಿಯಾಗಿ ಬೇರೂರಿದೆ. ಇದು ಅಂತಿಮವಾಗಿ ಜಾತಿ ರಹಿತ ಮತ್ತು ಸ್ತ್ರೀ ಕೇಂದ್ರಿತ ಸಮಾಜವಾಗಿ ರೂಪುಗೊಳ್ಳಬಹುದಾದ ಆತಂಕ ಮತ್ತು ಭಯದೊಂದಿಗೆ ತನ್ನ ಸ್ಥಾನಮಾನದಲ್ಲಿ ಉಂಟಾಗುವ ಪಲ್ಲಟದ ಬಗ್ಗೆ ಸದಾ ಜಾಗೃತವಾಗಿರುವಂತೆ ಕಾಣುತ್ತದೆ. ಹಾಗಾಗಿ ಹೆಣ್ಣು ಕುಟುಂಬ ವ್ಯವಸ್ಥೆಯೊಳಗೆ ಪತಿವ್ರತೆಯಾಗಿ, ಗಂಡ ಸತ್ತ ಬಳಿಕ ವಿಧವೆಯಾಗಿ ಉಳಿಯಬೇಕು ಎಂದು ಪುರುಷ ಹಿತಾಸಕ್ತಿ ಕೇಂದ್ರಿತ ನೆಲೆಯನ್ನು ಸದಾ ಪ್ರತಿಪಾದಿಸುತ್ತದೆ.

ವಿಧವೆಯರು ವಿವಾಹವಾಗದೆ ಉಳಿದಲ್ಲಿ ಅವರ ಅಗತ್ಯಗಳು ಸಾಮಾಜಿಕ ನೆಲೆಯಲ್ಲಿ ನ್ಯಾಯ ಪಡೆದುಕೊಳ್ಳದೆ ಹೋಗುತ್ತವೆ. ಸಮಾಜದಲ್ಲಿ ವಿವಿಧ ಬಗೆಯ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ.

ವಿಧವೆಯರನ್ನು ಪುರುಷ ಸಮಾಜದ ಸಲಕರಣೆಗಳನ್ನಾಗಿ ನೋಡಿ ನಡೆಸಿಕೊಳ್ಳುವುದು ಅವರಿಗೆ ನ್ಯಾಯ ಒದಗಿಸುವುದಿಲ್ಲ. ಅವರನ್ನು ಮಾನವ ಜೀವಿಗಳನ್ನಾಗಿ ಕಾಣುವುದು ತುರ್ತಿನದಾಗಿದೆ. ವಿವಾಹ ಮತ್ತು ಕುಟುಂಬ ವ್ಯವಸ್ಥೆಯೊಳಗೆ ಪುರುಷ ಹೊಂದಿರುವ ಎಲ್ಲ ಹಕ್ಕು, ಅಧಿಕಾರ ಮತ್ತು ಸ್ಥಾನಗಳನ್ನು ಮಹಿಳೆಯರಿಗೂ ಪಡೆಯುವ ಅವಕಾಶ ಮಾಡಿ ಕೊಟ್ಟಲ್ಲಿ ಆಕೆಯ ಎಲ್ಲ ಸಮಸ್ಯೆಗಳಿಗೆ ಪರಿಹಾರ ದೊರಕಿಸಿ ಕೊಟ್ಟಂತಾಗುತ್ತದೆ. ಈ ಸಮಸ್ಯೆಯನ್ನು ಕೃತಿಗಳು ಚಿತ್ರಿಸಿರುವ ಬಗೆಯನ್ನು ಪರಿಶೀಲಿಸಬಹುದು.

ವೀರೇಶಲಿಂಗಂ ಪಂತುಲು ಅವರ ಸತ್ಯವತೀ ಚರಿತ್ರ ಕೃತಿಯ ಕೊನೆಯಲ್ಲಿ ವಿಧವಾ ವಿವಾಹದ ಪ್ರಸ್ತಾಪವೊಂದನ್ನು ಮಾಡಲಾಗಿದೆ. ಸತ್ಯವತಿಯ ಕಿರಿಯ ನಾದಿನಿಯಾದ ಸೀತೆಯ ಮದುವೆ ಅಪ್ರಾಪ್ತ ವಯಸ್ಸಿನಲ್ಲಿಯೇ ಜರುಗಿ ಆಕೆ ತವರು ಮನೆಯಲ್ಲಿದ್ದಾಗಲೆ ವಿಧವೆಯಾಗುತ್ತಾಳೆ. ಸತ್ಯವತಿಗೆ ತನ್ನ ಇಬ್ಬರು ನಾದಿನಿಯರಲ್ಲಿ ತನ್ನ ಹಿರಿಯ ನಾದಿನಿ ಸಾವಿತ್ರಿ ವಿಧವೆಯಾಗಿದ್ದರೂ ಆಕೆಯ ಪ್ರಶ್ನೆಯನ್ನು ಕೈಬಿಟ್ಟು ಕಿರಿಯ ನಾದಿನಿ ಸೀತೆಗೆ ಮರುಮದುವೆ ಮಾಡಲು ಉತ್ಸುಕಳಾಗಿರುತ್ತಾಳೆ. ಈ ಕುರಿತ ನಿರೂಪಣೆ ಕಾದಂಬರಿಯಲ್ಲಿ ಹೀಗಿದೆ.

"ಸೀತೆಗೆ ಸಂಭವಿಸಿದ ದುರವಸ್ಥೆಯನ್ನು ಆಕೆಯ ಪುನರ್ವಿವಾಹದೊಂದಿಗೆ ಉತ್ತಮಗೊಳಿಸಬೇಕೆಂದು ಧೃಢವಾಗಿ ಸತ್ಯವತಿ ನಿಶ್ಚಯಿಸಿದ್ದಳು. ಆದರೆ ಪೂರ್ವಕಾಲದಿಂದಲೂ ಈ ಸಂಪ್ರದಾಯ ಆಚರಣೆಯಲ್ಲಿರಲಿಲ್ಲ. ಆದ್ದರಿಂದ ಸಮಾಜದ ದ್ವೇಷ ಕಟ್ಟಿಕೊಳ್ಳಲು ಆಕೆ ಸಿದ್ಧಳಿರಲಿಲ್ಲ. ಶಂಕರಾಚಾರ್ಯರು ಮರುಮದುವೆಯಾದವರಿಗೆ ಬಹಿಷ್ಕಾರ ಹಾಕುವುದಾಗಿ ಪತ್ರಿಕಾ ಪ್ರಕಟನೆ ಹೊರಡಿಸಿದ್ದರು. ಆ ಭಯದಿಂದ ಅವಳು ತನ್ನ ಅಭಿಪ್ರಾಯವನ್ನು ಯಾರಿಗೂ ಹೇಳದೇ ಸುಮ್ಮನಿದ್ದಳು. ಸೀತೆ ಮತ್ತು ಸೋಮಸುಂದರರ ಮರುವಿವಾಹ ಸಂಭವಿಸುವುದೋ ಇಲ್ಲವೋ ಅದನ್ನು ಈಗ ನಿಶ್ಚಯಿಸಿ ಹೇಳಲಾಗುವುದಿಲ್ಲ. ಈ ರೀತಿಯ ವಿಷಯಗಳಲ್ಲಿ ಕಾರ್ಯ ಸಂಭವಿಸುವವರೆಗೆ ಏನನ್ನು ನಂಬಲಾಗುವುದಿಲ್ಲ. ಅವರ ವಿವಾಹ ಜರುಗಿದರೆ ನಿಮಗೆಲ್ಲರಿಗೆ ತಿಳಿಯದೆ ಹೋಗದು" (ಪು.೧೩೬).

ಸೀತೆಯ ಮರುವಿವಾಹ ಯಾರೊಂದಿಗೆ ಮಾಡಬೇಕೆಂದು ಸತ್ಯವತಿ ನಿಶ್ಚಯಿಸಿದ್ದಾಳೆ. ಅವಳ ದುರವಸ್ಥೆಯ ಕುರಿತು ಅನುಕಂಪವಿದೆ. ಆದರೆ ಸಂಪ್ರದಾಯವಾದಿಗಳ ದುಂಡಾವರ್ತನೆಗೆ ಹೆದರಿದ್ದಾಳೆ. ಸಮಾಜ ಕಾರ್ಯಕರ್ತರಿದ್ದಿರಬಹುದಾದ ಶಂಕರಾಚಾರ್ಯ ಎಂಬುವವರ ಪತ್ರಿಕಾ ಪ್ರಕಟಣೆಯಿಂದ ಹಿಂಜರಿದು ತನ್ನ ಕಾರ್ಯಯೋಜನೆಯನ್ನು ಅಮಾನತುಗೊಳಿಸುತ್ತಾಳೆ.

ಸತ್ಯವತಿಯಂತಹ ವಿದ್ಯಾವಂತ ಮಹಿಳೆ ಸ್ತ್ರೀಯರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರಿಯಾದ ದಾರಿಯಲ್ಲಿ ಆಲೋಚಿಸುತ್ತಾಳೆ. ಆದರೆ ಅದನ್ನು ಕಾರ್ಯಗತಗೊಳಿಸುವಲ್ಲಿ ದಿಟ್ಟತನದ ಕೊರತೆ

ಎದ್ದು ಕಾಣುತ್ತದೆ. ಸತ್ಯವತಿಯ ವ್ಯಕ್ತಿತ್ವ ಸಂಪ್ರದಾಯದ ವಿರುದ್ಧ ಸೆಟೆದು ನಿಲ್ಲಲಾಗದೆ ತನ್ನ ಸುಧಾರಕ ದಾರಿಯಲ್ಲಿ ಹೆಜ್ಜೆಯಿಡಲು ಸೋಲುವುದನ್ನು ಕಾಣುತ್ತೇವೆ.

ಈ ಸೋಲು ಸತ್ಯವತಿಯ ಪಾತ್ರಕ್ಕೆ ಒದಗಿಬಂದ ಸೋಲಾಗಿರದೆ ಇಡೀ ಕಾದಂಬರಿಯಲ್ಲಿ ದೊಡ್ಡ ದನಿಯಲ್ಲಿ ಪ್ರಕಟಪಡಿಸಿದ ಪ್ರಗತಿಪರ ಧೋರಣೆಗೆ ಸಂದ ತಾತ್ವಿಕ ಸೋಲಾಗಿ ಗೋಚರಿಸುತ್ತದೆ. ಹಾಗಾಗಿ ಸ್ತ್ರೀಯರ ಸಮಸ್ಯೆಗಳು ಪ್ರಸ್ತಾಪಿತವಾದರೂ ಅವು ಬಗೆಹರಿಯಲಾರದೆ ಉಳಿದು ಹೆಣ್ಣಿಗೆ ನ್ಯಾಯ ದೊರಕದೆ ಹೋಗುತ್ತದೆ.

ಗುಲ್ವಾಡಿ ವೆಂಕಟರಾಯರ ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ ಕಾದಂಬರಿಯಲ್ಲಿ ವಿಧವೆಯಾದ ಬಾಲಕಿ ಇಂದಿರೆ ತನ್ನ ಎಳೆಯ ವಯಸ್ಸಿನಲ್ಲಿಯೇ ವಿರಕ್ತತೆಯನ್ನು ಮೈಗೂಡಿಸಿಕೊಳ್ಳಲು ನಿರಾಕರಿಸುತ್ತಾಳೆ. ಇಡೀ ಕಮಲಾಪುರದಲ್ಲಿಯೇ ಪ್ರಗತಿಪರ ದೋರಣೆಗೆ ಹೆಸರಾಗಿದ್ದ ಅಮೃತರಾಯ ಮತ್ತು ಜಲಜಾಕ್ಷಿಯರ ಆಶ್ರಯ ಬಯಸುತ್ತಾಳೆ. ಅಲ್ಲಿ ತಾನು ಬಯಸಿದಂತೆ ಮೆಟ್ರಿಕ್ಯುಲೇಶನ್‌ವರೆಗಿನ ಶಿಕ್ಷಣವನ್ನು ಪಡೆದುಕೊಳ್ಳುತ್ತಾಳೆ. ಇಂದಿರೆಯ ತಂದೆ–ತಾಯಿಯರಿಂದಲೇ ಹತ್ಯೆಯಾದ ಸುಂದರರಾಯನ ಮಗ ಭಾಸ್ಕರರಾಯ ತನ್ನ ಅಸಹಾಯ ಸ್ಥಿತಿಯಲ್ಲಿ ಇದೇ ಅಮೃತರಾಯ ಮತ್ತು ಜಲಜಾಕ್ಷಿಯರ ಆಶ್ರಯ ಪಡೆದು ತನ್ನ ಇಡೀ ವಿದ್ಯಾಭ್ಯಾಸವನ್ನು ಭಾರತ ಮತ್ತು ವಿದೇಶದಲ್ಲಿ ಮುಗಿಸಿ ಕಲೆಕ್ಟರ್ ಹುದ್ದೆಗೆ ಏರಿದವನಾಗಿರುತ್ತಾನೆ. ಇಂದಿರಾಬಾಯಿ ಮತ್ತು ಭಾಸ್ಕರರಾಯ ಇಬ್ಬರೂ ತಾವು ಪಡೆದ ಇಂಗ್ಲಿಷ್ ಶಿಕ್ಷಣದಿಂದ ಬದುಕಿನ ಉನ್ನತ ಮತ್ತು ಉದಾತ್ತ ಗುಣಗಳನ್ನೂ ಸಾಮಾಜಿಕ ನಿಯಮಗಳ ಸೀಮಿತತೆ ಮತ್ತು ಮಾನವೀಯ ಸಂಬಂಧಗಳ ಮಹತ್ವವನ್ನೂ ಅರಿತಿರುತ್ತಾರೆ. ಅಮೃತರಾಯ ಮತ್ತು ಜಲಜಾಕ್ಷಿ ಇಂದಿರಾಬಾಯಿಗೆ ಮರುಮದುವೆಯ ಸಾಧ್ಯತೆಯನ್ನು ಮೊದಲ ಬಾರಿಗೆ ಸೂಚಿಸುತ್ತಾರೆ. ಆಗ ಇಂದಿರಾಬಾಯಿ ಯಾವ ಹಿಂಜರಿತ ಇಲ್ಲದೆ ಅದನ್ನು ತನ್ನ ಜೀವನದ ಹಕ್ಕು ಎಂಬಂತೆ ಹೆಣ್ಣಿನ ನಾಚಿಕೆ, ಸಂಕೋಚ ಸ್ವಭಾವಗಳ ಮೂಲಕ ತನ್ನ ಒಪ್ಪಿಗೆಯನ್ನು ನೀಡುತ್ತಾಳೆ. ಭಾಸ್ಕರರಾಯನ ಕುರಿತು ಅವರಿಬ್ಬರು ಸೂಚ್ಯವಾಗಿ ಮಾತನಾಡುವಾಗ ಆ ಕುರಿತು ಇಂದಿರಾಬಾಯಿ ಕುತೂಹಲ, ಆಸಕ್ತಿ ಮತ್ತು ಉತ್ಸುಕತೆಯಿಂದ ತುಡಿಯುತ್ತಾಳೆ. ಅಲ್ಲದೆ ಭಾಸ್ಕರರಾಯನ ಭಾವಚಿತ್ರವನ್ನು ನೋಡಿದ ಮೇಲೆ ಅವನ ಜೀವನ ಸಾಧನೆ, ವಿದ್ಯಾ ಕುಶಲತೆ, ಆರ್ದ್ರ ವ್ಯಕ್ತಿತ್ವ ಕುರಿತು ತಿಳಿದುಕೊಳ್ಳುತ್ತಾಳೆ. ಅಲ್ಲದೆ ತನ್ನಲ್ಲಿ ಅವನ ಬಗ್ಗೆ ಪ್ರೇಮ ಭಾವನೆಯನ್ನು ಬೆಳೆಸಿಕೊಳ್ಳುತ್ತಾಳೆ.

ಭಾಸ್ಕರರಾಯ ಕಮಲಾಪುರಕ್ಕೆ ಬಂದ ಕೂಡಲೆ ಅಮೃತರಾಯ ಅವನಲ್ಲಿ ಮದುವೆಯ ಪ್ರಸ್ತಾಪ ಮಾಡುತ್ತಾನೆ. ಅಮೃತರಾಯ ಮತ್ತು ಜಲಜಾಕ್ಷಿಯರನ್ನು ಗೌರವ, ಆದರ, ಪ್ರೀತಿಗಳಿಂದ ತನ್ನ ಹೆತ್ತವರಷ್ಟೇ ಸಮಾನವಾಗಿ ಆತ ನೋಡುತ್ತಿದ್ದುದರಿಂದ ಅವರ ಮಾತಿಗೆ ಒಪ್ಪಿಗೆ ಸೂಚಿಸುತ್ತಾನೆ. ಇಂದಿರಾಬಾಯಿ ನಂತರದಲ್ಲಿ ತಾನು ಮದುವೆಯಾಗುವ ಹುಡುಗಿಯ ಬಗ್ಗೆ ವಿವರ ತಿಳಿದು ಬರುತ್ತದೆ.

ಮರುಮದುವೆಯಾಗುವ ಎಲ್ಲ ಹಕ್ಕು, ಅಧಿಕಾರವನ್ನು ಪಡೆದಿರುವಳೆಂದೇ ಭಾಸ್ಕರರಾಯನ ಭಾವನೆ ಕೂಡ ಆಗಿರುತ್ತದೆ. ಇವರ ವಿವಾಹವನ್ನು ಭಾಸ್ಕರರಾಯ ನೇಮಕ ಹೊಂದಿರುವ ಹುದ್ದೆಗೆ ಸೇರಿಕೊಳ್ಳುವ ಮೊದಲೇ ನಡೆಯಬೇಕೆಂದು ನಿರ್ಧರಿಸಲಾಗುತ್ತದೆ. ಅಮೃತರಾಯ ಒಬ್ಬ ವಕೀಲನಾಗಿ ಇಂದಿರಾಬಾಯಿಯ ವಿಧವಾ ವಿವಾಹಕ್ಕೆ ವಹಿಸಬೇಕಾದ ಎಲ್ಲ ಬಗೆಯ ಎಚ್ಚರ ಮತ್ತು ಸಮಾಜದ ಸಮಸ್ತ ಗಣ್ಯರನ್ನು ಆಹ್ವಾನಿಸಿ ಒಂದು ಮಹತ್ವಪೂರ್ಣ ಸಾರ್ವಜನಿಕ ಸಮಾರಂಭವನ್ನಾಗಿ ಜರುಗಿಸಲು ಅಗತ್ಯವಾದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾನೆ. ಈ ವಿಧವಾ ವಿವಾಹಕ್ಕೆ ಹಾಜರಾದ ಜನವರ್ಗ ಮತ್ತು ಸಂಖ್ಯೆ ಕುರಿತ ವಿವರಣೆ ಅದರ ವಿಜೃಂಭಣೆಯನ್ನು ದಾಖಲಿಸಿದೆ.

"ಕಮಲಾಪುರದಲ್ಲಿ ಇದು ಮೊದಲನೇ ವಿಧವಾ ವಿವಾಹವಾದುದರಿಂದಲೂ ವಧುವರರ ಕೀರ್ತಿಯನ್ನು ಸರ್ವರೂ ಕೇಳಿದ್ದುದರಿಂದಲೂ, ಆ ದಂಪತಿಗಳನ್ನು ಕಣ್ಣಾರೆ ಕಾಣಬೇಕೆಂಬ ಕುತೂಹಲದಿಂದ (ಭೀಮರಾಯನ ಮನೆಯವರು ಕಟ್ಟಳೆಯ ಪಕ್ಷದ ಇನ್ನೂ ಕೆಲವರು ಹೊರತು) ಆಮಂತ್ರಣ ಹೊಂದಿದ ಬೇರೆ ಎಲ್ಲಾ ಮನೆಗಳಿಂದ ಸ್ತ್ರೀ ಪುರುಷರೆಲ್ಲರೂ ಶಿಶ್ಯುಬಾಲರೊಡನೆ ವಿವಾಹವನ್ನು ನೋಡುವುದಕ್ಕೆ ಬಂದರು. ಸರದಾರ ಸಾಹೇಬರೂ ದೊರೆಸಾನಿಗಳೂ ಜನರು ಲಗ್ನ ಮುಹೂರ್ತಕ್ಕೆ ಒಂದು ಗಳಿಗೆ ಮುಂಚಿತವಾಗಿಯೇ ಬಂದು ಮುಟ್ಟಲು, ಅಮೃತರಾಯನು ಅವರೆಲ್ಲರನ್ನು ಸನ್ಮಾನಿಸಿ, ತಾರತಮ್ಯಾನುಸಾರವಾಗಿ ಕುಳ್ಳಿರಿಸಿದನು. ಲಗ್ನದ ಮುಹೂರ್ತವು ಬಂತು. ವರನಿಗೆ ಒಂದು ಕಡೆಯಲ್ಲಿ ಅವನ ಸ್ನೇಹಿತರು ಅಮೂಲ್ಯವಾದ ವಸ್ತ್ರಾಲಂಕಾರಗಳನ್ನು ಮಾಡಿದರು. ವಧುವಿಗೆ ಮತ್ತೊಂದು ಕಡೆಯಲ್ಲಿ ಸ್ತ್ರೀಯರು ನಾನಾ ತರದ ಉಡಿಗೆ ಆಭರಣಗಳಿಂದಲೂ ಪುಷ್ಪಗಳಿಂದಲೂ ಶೃಂಗರಿಸಿದರು" (ಪು.೨೨೮).

ನಂತರ ವಿವಾಹ ಮಂಟಪಕ್ಕೆ ಒಂದು ಕಡೆಯಿಂದ ಭಾಸ್ಕರರಾಯನನ್ನು ಮತ್ತೊಂದು ಕಡೆಯಿಂದ ಇಂದಿರಾಬಾಯಿಯನ್ನೂ ಇಂಗ್ಲಿಷ್ ಬ್ಯಾಂಡ್ ವಾದ್ಯದ ಘೋಷ, ದೇಶೀಯ ವಾದ್ಯದ ಘೋಷ ಮತ್ತು ವೇದ ಮಂತ್ರದ ಘೋಷದೊಂದಿಗೆ ಮದುವೆ ಮಂಟಪಕ್ಕೆ ಕರೆತರಲಾಗುತ್ತದೆ. ವೇದಶಾಸ್ತ್ರ ವಿಧಿಗಳಿಗನುಸಾರವಾಗಿ ಇಂದಿರಾಬಾಯಿಯನ್ನು ಭಾಸ್ಕರರಾಯನಿಗೆ ಧಾರೆ ಎರೆದು ಕೊಟ್ಟ ವಿವರಗಳಿವೆ. ಇಂದಿರಾಬಾಯಿಯ ವಿಧವಾ ವಿವಾಹ ಹೇಗೆ ಅದ್ದೂರಿಯಿಂದ ಕೊನೆಗಂಡಿತು ಎಂದು ಕಾದಂಬರಿಯ ನಿರೂಪಣೆ ಹೀಗೆ ವಿವರಿಸಿದೆ.

"ಅದನ್ನೆಲ್ಲ ನೋಡಿ ಕೂಡಿದ ಸಭೆಯವರೆಲ್ಲರೂ ಸಂತೋಷದಿಂದ ಕೇಕೇ ಬಡೆದು ಮಹಾ ಘೋಷವನ್ನುಂಟು ಮಾಡಿದರು. ಆ ಬಳಿಕ ಸಾಹೇಬರೂ ದೊರೆಸಾನಿಗಳೂ ಕೂಡಿರುವಲ್ಲಿ ಅನೇಕ ವಿಧದ ಫಲಾಹಾರಗಳು, ಕಾಫಿ, ಚಾ, ಶರ್ಬತ್ ಮುಂತಾದ ಪಾನಕಗಳು, ಬಗೆಬಗೆಯ ಪುಷ್ಪಗಳು, ಸುಗಂಧ ದ್ರವ್ಯಗಳು ಮುಂತಾದ ವಿವಿಧ ಪದಾರ್ಥಗಳನ್ನು ತಂದಿಡುವುದು ಬೇರೆ ಬೇರೆ ಜಾತಿಯವರಿಗೆ

ಅವರವರ ಇಷ್ಟಾನುಸಾರವಾದ ಫಲಹಾರ ಪಾನಕಗಳನ್ನೂ ಸುಗಂಧ ಪದಾರ್ಥಗಳನ್ನೂ ವೀಳ್ಯ ತಾಂಬೂಲಗಳನ್ನು ಕೊಟ್ಟು ಉಪಚರಿಸುವುದು ಈ ಮುಂತಾದ ಕಾರ್ಯಗಳೆಲ್ಲ ಸಾಂಗವಾಗಿ ನಡೆದವು. ಆ ಬಳಿಕ ಪ್ರಥಮತಃ ಜಡ್ಜಿ ದೊರೆ ಅವರ ದೊರೆಸಾನಿ, ಅವರ ಹಿಂದೆ ಕಲೆಕ್ಟರ್ ದೊರೆ, ಅವರ ದೊರೆಸಾನಿ ಆಮೇಲೆ ಒಬ್ಬೊಬ್ಬರಾಗಿ ಬೇರೆ ಸರದಾರ ಸಾಹೇಬರು ಅವರ ದೊರೆಸಾನಿಗಳು ಸಹ ಮಂಟಪದ ಹತ್ತಿರಕ್ಕೆ ಬಂದು, ಅವರ ಭಾಷೆಯಿಂದ ಸುಖಸಮೃದ್ಧಿಯೂ ದೀರ್ಘಾಯಸ್ಸೂ, ಪುತ್ರ ಸಂತತಿಯೂ ಆಗಲೆಂದು ವಧೂವರರಿಗಾಶೀರ್ವದಿಸಿ, ಒಬ್ಬನು ವರನಿಗೆ ವಜ್ರದುಂಗುರ, ಒಬ್ಬಳು ವಧುವಿಗೆ ಕುತ್ತಿಗೆಯ ಪದಕ ಹೀಗೆಲ್ಲರೂ ತಮತಮಗೆ ಯುಕ್ತ ಕಂಡ ಉಡುಗೊರೆಗಳನ್ನು ಮಾಡಲು, ವರನು ಸರದಾರ ಸಾಹೇಬರಿಗೂ, ವಧುವು ದೊರೆಸಾನಿಗಳಿಗೂ ಹೂವಿನ ಮಾಲೆಯನ್ನು ಹಾಕಿ ಮರ್ಯಾದೆಯಿಂದ ನಮಸ್ಕರಿಸಿದರು. ಅವರೆಲ್ಲರೂ ಅಮೃತರಾಯ ಜಲಜಾಕ್ಷಿ ಇವರೊಡನೆ ಮಾತನಾಡಿ, ತಂತಮ್ಮ ಬಂಡಿಗಳನ್ನೇರಿ ಬಂಗಲಾಗಳಿಗೆ ಹೋದರು. ಆ ಬಳಿಕ, ಉಳಿದ ಸಭೆಯವರಲ್ಲಿ ಅನೇಕ ಪುರುಷರೂ, ಸ್ತ್ರೀಯರೂ ಭರ್ಜರಿ ಶಾಲುಗಳೊ, ಚಿತ್ರವಿಚಿತ್ರವಾದ ಸೀರೆ ಕಂಚುಕಗಳೊ, ಆಭರಣಗಳೊ, ನಾಣ್ಯಗಳೊ, ಹೀಗೆಲ್ಲ ಅಮೂಲ್ಯವಾದ ಉಡುಗೊರೆಗಳನ್ನು ಮಾಡಿದರು. ಈ ಗದ್ದಲವೆಲ್ಲ ತೀರಿದ ನಂತರ ಮಂಟಪದಲ್ಲಿ ಆಗಲಿಕ್ಕಿದ್ದ ಬೇರೆ ಕ್ರಮಗಳು, ಅಂದರೆ ಸೇಸೆ ಮಂಗಳಾರತಿ ಮುಂತಾದ ವಧೂವರರ ಉಪಚಾರಗಳು ನಡೆಯಲೆಂದು ರಾಮಕೃಷ್ಣ ಅವಧಾನಿಯು ಜಲಜಾಕ್ಷಿಗೂ ಕೂಡಿದ ಬೇರೆ ಸ್ತ್ರೀಯರ ಸಮೂಹಕ್ಕೂ ಕರೆದು ಹೇಳಲು, ಪ್ರಥಮತಃ ಮೂರು ಮಂದಿ ಸುಮಂಗಲೆಯರು ಸೇಸೆಯನ್ನು ಸುರಿದು ಆ ಬಳಿಕ ಜಲಜಾಕ್ಷಿಯು ಚಿನ್ನದ ಹರಿವಾಣದಲ್ಲಿ ಒಂಬತ್ತು ಚಿನ್ನದ ನೀರಾಂಜನಗಳಲ್ಲಿ ದೀಪಗಳನ್ನುರಿಸಿ, ಮಂಗಳ ಶೋಭವನ್ನು ಹಾಡುತ್ತಾ ವಧೂವರರಿಗೆ ಮಂಗಳಾರತಿಯನ್ನು ನಿವಾಳಿಸಿದರು. ಹಾಗೆಯೇ ಇನ್ನಿಬ್ಬರು ಸುಮಂಗಲೆಯರು ಅದೇ ರೀತಿಯಲ್ಲಿ ಅದೇ ಆರತಿಯನ್ನು ನಿವಾಳಿಸಿದರು".(ಪು.೨೩೦)

ಈ ಸಂದರ್ಭದಲ್ಲಿ ಕೆಲವರು ಹಾಡಿದರು, ಕೆಲವರು ಸಂಸ್ಕೃತ ಶ್ಲೋಕಗಳನ್ನು ಪಠಿಸಿದರು. ವಿವಾಹ ನಡೆಸಿಕೊಟ್ಟ ಅವಧಾನಿ ಮಂಗಳಾಕ್ಷತೆ ಸುರಿದು ಮಧುಮಕ್ಕಳನ್ನು ವಾದ್ಯಘೋಷದೊಂದಿಗೆ ಮಂಟಪದಿಂದ ಇಳಿಸಿ ಹೆಣ್ಣಿನ ಬಲಗೈಯನ್ನು ಗಂಡಿನ ಬಲಗೈಯಿಂದ ಹಿಡಿಸಿ ಹೆಂಗಸರ ಗುಂಪಿನೊಂದಿಗೆ ಮನೆಯೊಳಗೆ ಕರೆದುಕೊಂಡು ಹೋದರು. ಇಂದಿರಾಬಾಯಿಯ ವಿಧವಾ ವಿವಾಹ ಅದ್ದೂರಿಯಿಂದ ಕೊನೆಗೊಂಡ ವರ್ಣನೆಗಳನ್ನು ಕಾದಂಬರಿಯ ನಿರೂಪಣೆ ಹೀಗೆ ವಿವರಿಸಿದೆ. "ಮರುದಿವಸ ಅಮೃತರಾಯನಲ್ಲಿ ಸ್ವಜಾತಿಯವರೆಲ್ಲರಿಗೂ, ಬೇರೆ ಜಾತಿಯವರಿಗೆ ಅವರವರ ದೇವಾಲಯಗಳಲ್ಲಿಯೂ ಪಂಚಭಕ್ಷ್ಯಪರಮಾನ್ನಗಳಿಂದ ಊಟಗಳಾದವು. ಅನಂತರ ಅಮೃತರಾಯನು ಐನೂರು ರೂಪಾಯಿಯ ವಿಧ ವಿಧವಾದ ವಸ್ತ್ರಗಳನ್ನು ತರಿಸಿ, ತನ್ನ ಮನೆಯ ಎಲ್ಲ ಸೇವಕರಿಗೂ

ಭೀಮರಾಯ ಸುಶೀಲೆ ಇವರಲ್ಲಿಯ ಸೇವಕರಿಗೂ ಹಂಚಿಕೊಡಲು, ಅವರೆಲ್ಲರೂ ಸಂತೋಷಪಟ್ಟು ವಧೂವರರಿಗಾಶೀರ್ವದಿಸಿದರು".(ಪು.೨೩೨)

ಇದರಿಂದಲೆ ಇದು ವಿಧವಾ ವಿವಾಹವೆಂಬ ಅಮಂಗಳ ಕಾರ್ಯವೆಂದಾಗಲೀ, ಪಾಪ ಪ್ರಜ್ಞೆಯಾಗಲೀ, ಕದ್ದು ಮುಚ್ಚಿ ಹೇಗಾದರೂ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂಬ ಕಳ್ಳತನದ ಸ್ವಭಾವವಾಗಲೀ ಈ ಯಾವುದೂ ಗೋಚರವಾಗುವುದಿಲ್ಲ. ಬಾಲ್ಯ ವಿವಾಹವನ್ನು ಅಕ್ಷತ ಕನ್ಯೆಯ ವಿವಾಹದ ಹಾಗೆ ಸಂಭ್ರಮದಿಂದ, ವಿಜೃಂಭಣೆಯಿಂದ, ಉತ್ಸಾಹದಿಂದ, ಸಮಾಜದ ಸಕಲ ವರ್ಗದವರು ಭಾಗವಹಿಸಿ ಆಶೀರ್ವಾದ ಪೂರ್ವಕವಾಗಿ ಎಲ್ಲರೂ ಮಾನ್ಯ ಮಾಡುವ ಹಾಗೆ ಜರುಗುತ್ತದೆ. ನಾವಿಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಸಂಪ್ರದಾಯವಾದಿಗಳ ಆತಂಕಕ್ಕೆ ಈಡು ಮಾಡುವ ಜಾತಿಕಟ್ಟಳೆಯ ಮರ್ಯಾದೆ ಹೇಗೆ ವೇದಶಾಸ್ತ್ರ ವಿಧಿಗಳಿಗನುಸಾರವಾಗಿ ಕಾಪಾಡಿಕೊಳ್ಳಲಾಯಿತು ಎಂಬುದು. ಸಮಾಜದ ಅನಿಷ್ಟಗಳನ್ನು ತೊಡೆದು ಹಾಕುವಲ್ಲಿ ಮತ್ತು ಸಮಾಜದ ಸಕಾರಾತ್ಮಕ ಬೆಳವಣಿಗೆಯಲ್ಲಿ ಆಧುನಿಕ ಶಿಕ್ಷಣ ಒಂದು ವರವಾಗಿ ಪರಿಣಮಿಸುತ್ತದೆ. ಇದರಿಂದ ಸಂಪ್ರದಾಯವಾದಿಗಳ ಕಳವಳಕ್ಕೆ ಕಾರಣವಿಲ್ಲವೆಂಬುದನ್ನು ಕೂಡ ನಿರೂಪಿಸುತ್ತದೆ. ಆದ್ದರಿಂದ ಈ ಕಾದಂಬರಿ ಬಾಲ್ಯ ವಿವಾಹ, ವಿಧವಾ ವಿವಾಹ ಮುಂತಾದ ಸ್ತ್ರೀಯರ ಪ್ರಶ್ನೆಗಳನ್ನೆತ್ತಿಕೊಂಡು ಇದರ ಬಗ್ಗೆ ಸಮಾಜ ನಡೆಯಬೇಕಾದ ಮಾರ್ಗವನ್ನು ತೋರಿಸಿದ ಕೃತಿಯಂತೆ ಇದೆ.

ಕೆರೂರು ವಾಸದೇವಾಚಾರ್ಯರ ಇಂದಿರಾ ಕಾದಂಬರಿಯಲ್ಲಿ ತಮ್ಮ ಪ್ರಾಥಮಿಕ ನಿರೂಪಣೆ ಎಂಬ ಮುನ್ನುಡಿಯಲ್ಲಿ "ವಿಧವೆಯರ ಪುನರ್ವಿವಾಹ ಶಾಸ್ತ್ರಗಳೊಪ್ಪುತ್ತವೆಂತಲೂ, ಕೆಲವು ಸ್ಥಿತಿಯಲ್ಲಿದ್ದ ವಿಧವೆಯರ ಪುನರ್ವಿವಾಹವನ್ನು ಮಾಡಬೇಕೆಂತಲೂ ಸಾಮಾಜಿಕ ಸುಧಾರರಣೇಚ್ಛುಗಳು ಪ್ರತಿಪಾದಿಸುತ್ತಾರೆ. ಮದ್ರಾಸ, ಪುಣೆ, ಕಲ್ಕತ್ತಾ ಮುಂತಾದ ಸ್ಥಳಗಳಲ್ಲಿ ಈ ವಿಷಯದ ಮೇಲೆ ಪ್ರಚಂಡವಾದ ವಾಗ್ವಾದ ನಡೆದು ಕಡೆಗೇನೂ ನಿರ್ಣಯವಾಗದಿದ್ದರೂ ಸಾವಿರಾರು ವಿಧವೆಯರು ಹೊಸ ಗಂಡಂದಿರನ್ನು ಸಂಪಾದಿಸಿಕೊಂಡಿರುವರು.

"ಪುನರ್ವಿವಾಹವು ಕರ್ತವ್ಯವಿರಲಿ ಇರದೇ ಇರಲಿ, ವಿಧವೆಯರ ವಪನವು ಅನಾಚಾರವಾದದ್ದೆಂದು ಕೆಲ ಪಂಡಿತರ ಮತವಿರುತ್ತದೆ. ವಿಧವೆಯರ ಎಳೆ ಮಕ್ಕಳ ಕ್ಷೌರವನ್ನು 'ಅಶುಭಸ್ಯ ಕಾಲ ಹರಣಂ' ಎಂಬ ನ್ಯಾಯಕ್ಕನುಸರಿಸಿ ಬಹುಶಃ ಮುಂದೆ ಮುಂದಕ್ಕೆ ಹಾರುವ ಪರಿವಾರ ಬಿದ್ದು ಹೋಗಿದೆ. ಪ್ರೌಢ ವಿಧವೆಯರ ಮುಂಡನವನ್ನು ಕೂಡ ಕೆಲವು ಮನೆತನದವರು ನಿಲ್ಲಿಸಿ ಬಿಟ್ಟಿರುವರು." ವಿಧವಾ ವಿವಾಹದ ಪರವಾದ ವಾದಗಳನ್ನು ನಿರಾಕರಿಸಿದ ಮೇಲಿನ ಅಭಿಪ್ರಾಯವನ್ನೂ ಒಮ್ಮತದಿಂದ ಒಪ್ಪಿಕೊಂಡಂತೆ ಇಲ್ಲ. ಅದು ವಿಧವೆಯರ ಕೇಶಮುಂಡನವನ್ನು

ಮಾತ್ರ ನಿಂತು ಹೋಗಿದ್ದು ಅದನ್ನು ಮುಂದುವಹಿಸಬಹುದಾದ ಬಗ್ಗೆ ಏಕ ಅಭಿಪ್ರಾಯ ತಳೆದಂತಿದೆ. ಈ ಧೋರಣೆಯನ್ನು ಕಾದಂಬರಿಯ ನಿರೂಪಣೆಯಲ್ಲೂ ಕಾಣಬಹುದು.

ಪ್ರಸ್ತುತ ಕಾದಂಬರಿಯಲ್ಲಿ ವಿಧವಾ ವಿವಾಹದ ಪ್ರಸ್ತಾಪವನ್ನು ದೇವಯಾನಿ ಮತ್ತು ರಾಧಾಬಾಯಿ ಪಾತ್ರಗಳು ಎದುರಿಸುತ್ತವೆ. ದೇವಯಾನಿ ಬಳ್ಳಾಪುರ ಸುಬ್ಬರಾಯನೆಂಬ ಸುಧಾರಕ ಪಂಥವನ್ನು ಅನುಸರಿಸುವವನ ಮಗಳು, ಸ್ವತಃ ಸುಧಾರಕ ಪಂಥದವನಾಗಿದ್ದು ಮಗಳು ದೇವಯಾನಿಗೆ ಬಾಲ್ಯವಿವಾಹ ಮಾಡುವುದು ನಿರೂಪಣೆಯಲ್ಲಿನ ವೈರುಧ್ಯವನ್ನು ಕಾಣಿಸುತ್ತದೆ. ಅದೇನೇ ಇದ್ದರೂ ಸುಬ್ಬರಾಯ ತನ್ನ ಮಗಳು ದೇವಯಾನಿಗೆ ವಿಧವಾ ವಿವಾಹ ಮಾಡಲು ಮುಕ್ತ ಮನಸ್ಸನ್ನು ಹೊಂದಿರುತ್ತಾನೆ. ಮಗಳಿಗೆ ಉನ್ನತ ವ್ಯಾಸಂಗ ಮಾಡಿಸುತ್ತಾನೆ. ಅಲ್ಲದೆ ಚಿತ್ರಕಲೆಯಲ್ಲೂ ಆಕೆಯ ಅಭಿರುಚಿಗೆ ಅನುಗುಣವಾಗಿ ವಿದ್ಯೆ ಪಡೆಯಲು ಅವಕಾಶ ಮಾಡಿಕೊಡುತ್ತಾನೆ. ದೇವಯಾನಿ ತನ್ನ ತಂದೆಯ ಮನಸ್ಸನ್ನರಿತು ತನ್ನ ಮರುಮದುವೆ ಬಗ್ಗೆ ಮಾನಸಿಕವಾಗಿ ಸಿದ್ಧವಾಗುತ್ತಾಳೆ. ಈ ವಿಚಾರದಲ್ಲಿ ತನ್ನ ಸಂಪರ್ಕಕ್ಕೆ ಬಂದ ಕಮಲಾಕಾಂತ ಮತ್ತು ಜಯರಾಯರಲ್ಲಿ ಕಮಲಾಕಾಂತನ ಕಡೆಗೆ ಒಲವು ತೋರುತ್ತಾಳೆ. ಆದರೆ ತನ್ನದಲ್ಲದ ತಪ್ಪಿಗೆ ಕಮಲಾಕಾಂತನನ್ನು ಕಳೆದುಕೊಂಡು ತನ್ನ ಜೀವಮಾನವಿಡೀ ವಿಧವೆಯಾಗಿ ಒಬ್ಬಂಟಿಯಾಗಿ ಜೀವಿಸುತ್ತಾಳೆ. ತಂದೆ ಮಗಳು ಇಬ್ಬರೂ ಮರುಮದುವೆಯ ಬಗ್ಗೆ ಸಕಾರಾತ್ಮಕವಾಗಿ ಇದ್ದರೂ ಮದುವೆ ಮಾಡಿಕೊಳ್ಳುವ ಹುಡುಗರಲ್ಲಿ ಮತ್ಸರ ಉಂಟಾಗುತ್ತದೆ. ಇದರಿಂದ ದೇವಯಾನಿ ತನ್ನ ಮರುವಿವಾಹದ ಮೂಲಕ ಜೀವನದಲ್ಲಿ ಮತ್ತೊಂದು ಕುಟುಂಬವನ್ನು ಹೊಂದಲು ಸಾಧ್ಯವಾಗದೇ ಹೋಗುತ್ತದೆ.

ವಿಧವೆಯರು ಮರುಮದುವೆ ಮಾಡಿಕೊಳ್ಳುವ ಕುರಿತು ಲೇಖಕರಲ್ಲಿ ಸದಾಶಯ ಇಲ್ಲದಿರುವುದೆ ಮೂಲ ಕಾರಣವಾಗಿ ಸಮಾಜದಲ್ಲಿ ವಿಧವೆಯರ ಮರುವಿವಾಹ ಅಪ್ರಸ್ತುತವೆಂದು ಕಾಣಿಸುವಂತೆ ದೇವಯಾನಿಯ ಪಾತ್ರಕ್ಕೆ ನ್ಯಾಯ ದೊರೆಯದೆ ಹೋಗಿದೆ. ತಮ್ಮ ಸಮಕಾಲೀನ ಸಂಧಿಕಾಲದ ಸಮಾಜದಲ್ಲಿ ಸ್ತ್ರೀ ಸಮಸ್ಯೆ ಕುರಿತು ಜರುಗುತ್ತಿದ್ದ ವಾದವಿವಾದಗಳನ್ನು ಪ್ರಸ್ತಾಪ ಮಾಡಿ ಆ ಕುರಿತು ಕಾದಂಬರಿಕಾರರು ತಮ್ಮ ನಿಲುವು ಧೋರಣೆಯನ್ನು ಪಾತ್ರ ಚಿತ್ರಣ ಮೂಲಕ ಸ್ಪಷ್ಟಪಡಿಸುವಂತೆ ಚಿತ್ರಿತವಾಗಿದೆ. ಹಾಗಾಗಿ ಇದೇ ಬಗೆಯ ಧೋರಣೆ ರಾಧಾಬಾಯಿ ಪಾತ್ರ ಚಿತ್ರಣದಲ್ಲೂ ಕಾಣಬಹುದು.

ರಾಧಾಬಾಯಿ ಮಣೆಯ ಕಾಶೀನಾಥ ಶಾಸ್ತ್ರಿಗಳ ಮಗಳಾಗಿ ಸಜಾತಿಯ ಶಾಸ್ತ್ರೀ ಕುಲದ ವರನೊಂದಿಗೆ ಮದುವೆಯಾಗುತ್ತದೆ. ಆಕೆ ತನ್ನ ಗಂಡನ ಮನೆಯಲ್ಲಿ ಸಂಸ್ಕೃತ ಜ್ಞಾನ ಪಡೆದರೂ ಅಲ್ಲಿ ಅವಳಿಗೆ ಗಂಡಸರಿಗೆ ಅಂಜಿ ತನ್ನ ಹಕ್ಕು, ಅಧಿಕಾರ, ಸ್ವಾತಂತ್ರ್ಯವನ್ನು ಕಳೆದುಕೊಂಡು ದಾಸಿಯ ಹಾಗೆ ಜೀವಿಸಲು ಸಾಕುಸಾಕಾಗುತ್ತದೆ. ಆ ಹೊತ್ತಿಗೆ ತನ್ನ ಗಂಡನನ್ನು ಕಳೆದುಕೊಂಡ ರಾಧಾಬಾಯಿ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ವಿದ್ವತ್ ಪೂರ್ಣವಾಗಿ

ಮಾತನಾಡಿ ಸಮಕಾಲೀನ ಸಮಾಜ ಸುಧಾರಕ ಧುರೀಣರ ಮನಸ್ಸು ಗೆಲ್ಲುತ್ತಾಳೆ. ನಂತರ ಕಲ್ಕತ್ತಾದಲ್ಲಿ ಪಂಜಾಬಿ ಕುಸ್ತಿ ಪಟುವಾದ ರಣಧೀರಸಿಂಗ್‌ನೊಡನೆ ಎರಡನೆಯ ವಿವಾಹ ನಡೆಯುತ್ತದೆ. ಕೆಲವೇ ಕಾಲದಲ್ಲಿ ಆಕೆಯ ಎರಡನೆಯ ಪತಿಯೂ ಮರಣ ಹೊಂದಿ ಬ್ರಹ್ಮೋಪಂಥ ಸೇರುತ್ತಾಳೆ. ಬಂಗಾಳದಲ್ಲಿ ಪ್ರಸಿದ್ಧಿಗೆ ಬರುತ್ತಾಳೆ. ಅಲ್ಲಿಂದ ಅಮೇರಿಕಾಗೆ ಹೋಗಿ ಪವಿತ್ರ ಶಾಸ್ತ್ರ ಅಧ್ಯಯನ ಮಾಡುವ ಸಂದರ್ಭದಲ್ಲಿ ಫಾದರ್ ಕನ್ನಿಂಗ್ ಹ್ಯಾಮ್ ಎಂಬುವನನ್ನು ತನ್ನ ಮೂರನೇ ಪತಿಯಾಗಿ ಸ್ವೀಕರಿಸುತ್ತಾಳೆ. ಆಕೆಯ ಸಮಾಜ ಸುಧಾರಕ ವ್ಯಕ್ತಿತ್ವ ಆಕೆಯನ್ನು ಸದಾ ಚಟುವಟಿಕೆಯಲ್ಲಿರಿಸುತ್ತದೆ. ಹಾಗಾಗಿ ಆಕೆ ಸರಸ್ವತಿ ಸದನ, ಉಪಾಸನಾ ಸಮಾಜ ಮುಂತಾದ ಕಷ್ಟದಲ್ಲಿ ಸಿಲುಕಿದ ಮಹಿಳೆಯರಿಗೆ ಉಪಯುಕ್ತ ಕಾರ್ಯ ಮಾಡುವ ಸಂಸ್ಥೆಗಳನ್ನು ಸ್ಥಾಪಿಸುತ್ತಾಳೆ. ರಾಧಾಬಾಯಿಯ ಸಮಾಜ ಸುಧಾರಕತನದಲ್ಲಿ ತೀವ್ರತೆ ಮತ್ತು ಪಾರಂಪರಿಕ ಹಿಂದೂ ಸಮಾಜದ ಮೌಲ್ಯಗಳನ್ನು ಕಡೆಗಣಿಸುವುದರಿಂದ ಆಕೆ ನಿರೂಪಕನ ವಕ್ರದೃಷ್ಟಿಗೆ ಬಿದ್ದ ಪಾತ್ರವಾಗಿ ಚಿತ್ರಿತಳಾಗಿದ್ದಾಳೆ. ಆದರೆ ರಾಧಾಬಾಯಿ ಹಿಂದೂ ಸಮಾಜದ ಎಲ್ಲಾ ಹಂಗುಗಳನ್ನು ತೊರೆದು ನಿಷ್ಠೂರವಾಗಿ ಸ್ತ್ರೀ ಸ್ವಾತಂತ್ರ್ಯವನ್ನು ಸ್ವತಃ ಮೂರು ಮದುವೆಗಳನ್ನು ಮಾಡಿಕೊಳ್ಳುವ ಮೂಲಕ, ಸೇವಾ ಸಂಸ್ಥೆಗಳನ್ನು ವ್ಯಾಪಿಸುವ ಮೂಲಕ ಮತ್ತು ವೇದಿಕೆಗಳನ್ನು ಹತ್ತಿ ಭಾಷಣಗಳನ್ನು ಮಾಡುವುದರ ಮೂಲಕ ಪ್ರತಿಪಾದಿಸುತ್ತಾಳೆ. ಇದು ಪುರುಷ ಸಂಪ್ರದಾಯವಾದಿಗಳಿಗೆ ಅತಿರೇಕವಾಗಿ ಕಂಡು ಹಗುರ ವ್ಯಕ್ತಿತ್ವದವಳನ್ನಾಗಿ ಕಾಣಿಸುತ್ತದೆ. ಆದರೂ ರಾಧಾಬಾಯಿಯ ಸ್ತ್ರೀಪರ ಕಾಳಜಿ ನಾಗರಿಕ ಸಮಾಜದ ಪ್ರಜ್ಞೆಯನ್ನು ಎಚ್ಚರಿಸುವಂತಹದ್ದಾಗಿದೆ.

ನಂಜನಗೂಡು ತಿರುಮಲಾಂಬಾ ಅವರ ನಭಾ ಮತ್ತು ವಿರಾಗಿಣಿ ಕಾದಂಬರಿಯಲ್ಲಿ ಬಾಲ್ಯವಿವಾಹಕ್ಕೆ ಒಳಗಾಗಿ ವಿಧವೆಯಾದ ಕೃತಿಯ ನಾಯಕಿ ಎದುರಿಸಿದ ವಿಧವಾ ಸಮಸ್ಯೆಯ ಬಗೆಯನ್ನು ಕಟ್ಟಿಕೊಡುತ್ತದೆ. ವಿಧವೆಯ ಒಂಟಿತನ, ಅವಲಂಬನೆಯ ದೌರ್ಬಲ್ಯ ಮುಂತಾದ ಸಮಸ್ಯೆ ಮರುಮದುವೆಯಿಂದ ನಿವಾರಣೆಯಾಗುವುದಿಲ್ಲ ಎಂಬುದು ನಭಾಳ ಗಟ್ಟಿಯಾದ ನಂಬಿಕೆಯಾಗಿದೆ. ಹಾಗಾಗಿ ಆಕೆ ತನ್ನ ನೆಂಟರಲ್ಲಿ ಆಶ್ರಯ ಪಡೆದಿದ್ದಾಗ ಎದುರಿಸಿದ ಅಭದ್ರತೆಯಿಂದ ಪಾಠ ಕಲಿತು ಅವರನ್ನು ಅಗಲಿ ದೂರ ಬರುತ್ತಾಳೆ. ನಂತರ ತನ್ನಂಥ ಮಹಿಳೆಯ ದಾರಿಯಲ್ಲಿ ಶಿಕ್ಷಣ ಪೂರಕ ಆಗಬಲ್ಲುದು ಎಂದು ನಂಬಿ ಈ ದಿಕ್ಕಿನಲ್ಲಿ ಸಾಗಿ ಸ್ವತಃ ಶಿಕ್ಷಕಿಯೂ ಆಗುತ್ತಾಳೆ. ಅಷ್ಟರಿಂದಲೆ ವಿಧವೆಯಾದ ನಭಾ ತನ್ನ ಎಲ್ಲ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಅವಳನ್ನು ಇಷ್ಟಪಡುವ ರಾಜಶೇಖರ ಅವಳ ಪಾಲಿಗೆ ತಲೆನೋವಾಗಿ ಪರಿಣಮಿಸುತ್ತಾನೆ. ಅವನಿಂದ ತಪ್ಪಿಸಿಕೊಳ್ಳಲು ಊರು ಬಿಟ್ಟು ಹೋಗುತ್ತಾಳೆ. ವೈರಾಗ್ಯತನವೊಂದೆ ವಿಧವೆಯರ ಸಮಸ್ಯೆಯನ್ನು ಸೂಕ್ತವಾಗಿ ಪರಿಹರಿಸಬಲ್ಲುದು ಎಂಬ ವಿಚಾರವನ್ನು ನಭಾ ಕಾದಂಬರಿಯ ಮುಂದಿನ ಭಾಗವಾದ ವಿರಾಗಿಣಿ ನಿರೂಪಿಸುತ್ತದೆ. ಹೆಣ್ಣಿನ ಬಾಳಿನಲ್ಲಿ ಮದುವೆ ಎಂಬುದು ಒಂದು ಸಲ ಮಾತ್ರ

ಘಟಿಸುವಂತಹದ್ದು ಎಂದು ನಂಬಿರುವುದೇ ಆಕೆಯ ಇಂತಹ ವಿಚಾರಗಳ ಇತಿಮಿತಿಯಾಗಿದೆ. ವಿವಾಹವೆಂಬುದು ಲೈಂಗಿಕ ಜೀವನಕ್ಕೆ ಅಡಿಪಾಯ ಹಾಕುವ ಸಂಸ್ಥೆಯಾಗಿದ್ದರೂ ಒಂದು ವಿವಾಹದಲ್ಲಿ ಸಾರ್ಥಕಗೊಳ್ಳದ ಸಂಬಂಧಗಳನ್ನು ಮತ್ತೊಂದು ವಿವಾಹದ ಮೂಲಕ ಕಂಡುಕೊಳ್ಳುವುದು ಮಾನವ ಸಾಮಾಜಿಕ ಜೀವನಕ್ಕೆ ಮಾರಕವೆಂದು ನಂಬಿರುವ ನಭಾ ವರ್ಣಾಶ್ರಮ ಧರ್ಮದಲ್ಲಿ ಹೇಳಿರುವ ವೈರಾಗ್ಯ ಜೀವನದ ಮೌಲ್ಯವನ್ನು ಎತ್ತಿ ಹಿಡಿಯುತ್ತಾಳೆ. ಇದು ಪ್ರಕೃತಿ ನಿಯಮಕ್ಕೆ ಒಳಪಟ್ಟು ನಡೆಯಬಹುದಾದ ಜೀವನ ಕ್ರಮವಾಗಿ ಕಾಣದೆ ಹಿಂದೂ ಪುರುಷ ಸಮಾಜ ಪ್ರತಿಪಾದಿಸಿದ ಪುರುಷಾರ್ಥ ಸಾಧನೆಗಳಾದ ಧರ್ಮ, ಅರ್ಥ, ಕಾಮ, ಮೋಕ್ಷ ಕಲ್ಪನೆಗಳ ಭಾಗವಾಗಿ ವೈರಾಗ್ಯ ಕಲ್ಪನೆಯನ್ನು ಪ್ರತಿಪಾದಿಸಿದಂತೆ ಕಾಣುತ್ತದೆ. ಹೀಗಿದು ಕರ್ಮಸಿದ್ಧಾಂತದ ಆಲೋಚನಾ ಗತಿಯನ್ನು ಹಿಂದೂ ಪುರುಷ ಸಮಾಜ ತನಗೆ ಅನುಕೂಲಕ್ಕೆ ತಕ್ಕಂತೆ ಅನುಸರಿಸಿದ್ದು, ಅದನ್ನು ಸ್ತ್ರೀಯರ ವಿಧವಾ ಸಮಸ್ಯೆಗೂ ಅನ್ವಯಿಸಿ ಚಿತ್ರಿಸಿರುವ ಕೃತಿಯಾಗಿದೆ.

ಸತ್ಯವತೀ ಚರಿತ್ರೆ ಸೀತೆಯ ಮರುವಿವಾಹವನ್ನು ಮಾಡಲು ಬಯಸುತ್ತದೆ, ಆದರೂ ಮಾಡಲು ಸಾಧ್ಯವಿಲ್ಲದೆ ಕೈಚೆಲ್ಲುತ್ತದೆ. ಸದಾಶಯವೇ ವಾಸ್ತವ ಜೀವನದಲ್ಲಿ ಉತ್ತಮ ಜೀವನ ರೂಪಿಸಲಾರದು ಎಂಬುದನ್ನು ಕಾಣಿಸುತ್ತದೆ. ಇಂದಿರಾಬಾಯಿ ಕಾದಂಬರಿಯಲ್ಲಿ ವಿಧವಾವಿವಾಹ ಘನತೆ ಗೌರವದೊಂದಿಗೆ ನಿರೂಪಿತವಾಗಿದೆ. ಅದನ್ನು ವಿಧವೆಯರ ಬಾಳಿನಲ್ಲಿ ಹೊಸ ಬೆಳಕಾಗಿ ಕಂಡು ಅನುಸರಿಸಬೇಕಾದ ಆಚರಣೆ ಎಂಬಂತೆ ಚಿತ್ರಿಸಿದೆ. ಸ್ತ್ರೀಯರ ಸಮಸ್ಯೆ ಮತ್ತು ಅದರ ಪರಿಹಾರೋಪಾಯ ಕುರಿತು ಸಕಾರಾತ್ಮಕ ಧೋರಣೆ ತಳೆದಿದೆ. ಇಂದಿರಾ ಕಾದಂಬರಿ ವಿಧವಾ ವಿವಾಹದ ಬಗ್ಗೆ ನಕಾರಾತ್ಮಕ ಧೋರಣೆ ಹೊಂದಿದ್ದು ದೇವಯಾನಿಯ ಜೀವನದಲ್ಲಿ ಆಗು ಮಾಡಲು ಎಳೆಯಿಲ್ಲದಂತೆ ಚಿತ್ರಿಸಿದರೆ ರಾಧಾಬಾಯಿಯನ್ನು ವಕ್ರದೃಷ್ಟಿಯಿಂದ ಕಂಡು ಹೀನಾಯವಾಗಿ ಕಾಣುತ್ತದೆ. ನಭಾ ಕಾದಂಬರಿ ಹಿಂದೂ ಸಮಾಜದ ಪುರುಷಪರ ಆಲೋಚನೆಯನ್ನೇ ಮುಂದಿಡುತ್ತದೆ. ಹೀಗೆ ವಿಧವಾ ವಿವಾಹ ಸಮಸ್ಯೆಯ ಪರಿಶೀಲನೆಯಲ್ಲಿ ಸ್ತ್ರೀ ಪರವಾಗಿ ದನಿ ಎತ್ತುವ ಸಂಖ್ಯೆ ತೀರ ವಿರಳವಾಗಿರುವುದನ್ನು ಗುರುತಿಸಬಹುದು.

ಪ್ರಸ್ತುತ ಅಧ್ಯಾಯದಲ್ಲಿ ಸ್ತ್ರೀಯರ ಸಮಸ್ಯೆಗಳಾದ ಬಾಲ್ಯವಿವಾಹ, ಸ್ತ್ರೀ ಶಿಕ್ಷಣ, ವರದಕ್ಷಿಣೆ, ಸತಿ ಪದ್ಧತಿ ಮತ್ತು ವಿಧವಾವಿವಾಹ ಸಮಸ್ಯೆಗಳನ್ನು ನೋಡುವಲ್ಲಿ ಸಾಂಪ್ರದಾಯಿಕ ದೃಷ್ಟಿಕೋನಕ್ಕೂ ಕೃತಿ ನಿರೂಪಣೆಯ ದೃಷ್ಟಿಗೂ ಅಂತಹ ವ್ಯತ್ಯಾಸಗಳು ಕಂಡು ಬರುವುದಿಲ್ಲ. ಸ್ತ್ರೀಪರ ದನಿ ಅಲ್ಲಲ್ಲಿ ಎತ್ತಲಾಗಿದ್ದರೂ ಅವಳ ಸಮಸ್ಯೆಗೆ ಪರಿಹಾರವನ್ನು ಸಮರ್ಥವಾಗಿ ಕಾಣಿಸುವಲ್ಲಿ ಅಸ್ಪಷ್ಟತೆಯೇ ಇರುವಂತೆ ಕಾಣುತ್ತದೆ. ಇಲ್ಲಿ ಮಂಡಿತವಾದ ವಿಚಾರಗಳೆಲ್ಲ ಸ್ತ್ರೀ ಸಮಸ್ಯೆಗಳೇ ಆದರೂ ಮೂಡಿಸಿದ ಕ್ರಮ ಮಾತ್ರ ಪುರುಷ ಪರವಾಗಿ ಇರುವಂತೆ ಇದೆ. ಹಾಗಾಗಿ ಸ್ತ್ರೀಯ ಸಮಸ್ಯೆಗಳ ಸ್ವರೂಪದಲ್ಲಿ ತೀವ್ರತೆ ಕಡಿಮೆಯಾದಂತೆ ಕಂಡರೂ ಮೂಲ ಸಮಸ್ಯೆ ಹಾಗೆಯೇ ಉಳಿದಂತಿದೆ.

ಅಧ್ಯಾಯ ೫

ಕನ್ನಡ ತೆಲುಗು ಕಾದಂಬರಿಗಳಲ್ಲಿ ಚಿತ್ರಿತ ಸಂಘರ್ಷ ಮತ್ತು ಅನುಸಂಧಾನ ನೆಲೆಗಳು

೧. ರಾಜಶೇಖರ ಚರಿತಮು

೨. ಸತ್ಯವತೀ ಚರಿತ್ರೆ

೩. ಅಹಲ್ಯಾಬಾಯಿ

೪. ರಾಜರತ್ನಮು

೫. ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ

೬. ವಾಗ್ದೇವಿ

೭. ಇಂದಿರಾ

೮. ನಭಾ ಮತ್ತು ವಿರಾಗಿಣಿ

೯. ಮಾಡಿದ್ದುಣ್ಣೋ ಮಹಾರಾಯ

೧೦. ಲಕ್ಷ್ಮೀಪ್ರಸಾದಂ

ಅಧ್ಯಾಯ ೫

ಕನ್ನಡ ತೆಲುಗು ಕಾದಂಬರಿಗಳಲ್ಲಿ ಚಿತ್ರಿತ ಸಂಘರ್ಷ ಮತ್ತು ಅನುಸಂಧಾನ ನೆಲೆಗಳು

ಎರಡು ಭಿನ್ನ ಸಂಸ್ಕೃತಿಗಳು ಪರಸ್ಪರ ಪ್ರಭಾವ ಬೀರಬಲ್ಲ ಏರು ಸ್ಥಿತಿಯಲ್ಲಿದ್ದಾಗ ಅವು ಒಂದನ್ನೊಂದು ಒಪ್ಪಿಕೊಳ್ಳುವ ಮೊದಲು ತಮ್ಮನ್ನು ಪ್ರಬಲವಾಗಿ ಸಮರ್ಥಿಸಿಕೊಳ್ಳುವ ಮತ್ತು ತಮ್ಮ ಪ್ರಭಾವವನ್ನು ವಿಸ್ತರಿಸುವ ಎಲ್ಲ ತಂತ್ರೋಪಾಯಗಳನ್ನು ಅನುಸರಿಸುತ್ತವೆ. ಯಾವುದೇ ಸಂಸ್ಕೃತಿಯಲ್ಲಿ ಕಂಡುಬರುವ ದೌರ್ಬಲ್ಯ ಅದರ ಮೇಲೆ ಮತ್ತೊಂದು ಸಂಸ್ಕೃತಿ ತನ್ನ ಉನ್ನತಿಯನ್ನು ಸ್ಥಾಪಿಸಲು ಪಡೆಯುವ ಅವಕಾಶವಾಗಿದೆ. ಇಂತಹ ಸಂದರ್ಭದಲ್ಲಿ ಸಂಸ್ಕೃತಿಯೊಂದರ ಔನ್ನತ್ಯದ ಬಿಂದುಗಳಾದ ದಾರ್ಶನಿಕತೆ, ತಾತ್ವಿಕತೆಯ ನೆಲೆಗಳೊಂದಿಗೆ ಸಾಮಾಜಿಕ ಪದ್ಧತಿಗಳೂ ಆಚರಣೆಗಳೂ ಶೈಕ್ಷಣಿಕ ಸ್ಥಿತಿಗತಿಗಳೂ ಆರ್ಥಿಕ ಬಲಾಬಲಗಳೂ ಮತ್ತು ಅಂತಿಮವಾಗಿ ರಾಜಕೀಯ ಸ್ಥಿತಿಗತಿಗಳೂ ಮುನ್ನೆಲೆಗೆ ಬಂದು ಪ್ರಭಾವದ ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತದೆ. ಒಂದು ಸಂಸ್ಕೃತಿ ಯಾವುದೇ ಒಂದು ನೆಲೆಯಲ್ಲಿ ದುರ್ಬಲವಾಗಿದ್ದಲ್ಲಿ ಆ ನಿರ್ದಿಷ್ಟ ಕ್ಷೇತ್ರದಲ್ಲಿ ಮತ್ತೊಂದು ಸಂಸ್ಕೃತಿ ತನ್ನ ಛಾಪನ್ನು ಒತ್ತುತ್ತದೆ. ಇಂತಹ ಸ್ಥಿತಿಯಲ್ಲಿ ಸ್ವೀಕರಿಸುವ ಸಂಸ್ಕೃತಿ ಮೊದಲಿಗೆ ಸ್ವೀಕರಿಸುವ ನೆಲೆಯನ್ನು ತಲುಪದೆ ಪ್ರತಿರೋಧವನ್ನು ತೋರುತ್ತದೆ. ಪ್ರಭಾವಿಸುವ ಸಂಸ್ಕೃತಿ ತನ್ನ ಪ್ರಬಲತೆಯ ಪ್ರದರ್ಶನವನ್ನು ಅಧಿಕತರವಾಗಿ ನಡೆಸುತ್ತದೆ. ಈ ಹಂತದಲ್ಲಿ ಪರಸ್ಪರ ನಂಬಿಕೆ, ವಿಚಾರ, ಆಚಾರ, ಪದ್ಧತಿ, ವಿಧಿ-ನಿಷೇಧ ಮೊದಲಾಗಿ ತಾತ್ವಿಕ ನೆಲೆಯಲ್ಲಿ ನಡೆಯುವ ತಿಕ್ಕಾಟ ಅಥವಾ ವಿಚಾರದ ನೂಕು ನುಗ್ಗಲು ಪರಸ್ಪರ ಅಪನಂಬಿಕೆಯ ಭೂಮಿಕೆಯಲ್ಲಿ ಇರುತ್ತವೆ. ಈ ಹಂತವನ್ನು ಸಂಘರ್ಷಾತ್ಮಕ ನೆಲೆಯೆಂದು ಗ್ರಹಿಸಬಹುದು.

ಪ್ರಭಾವಿಸುವ ಮತ್ತು ಪ್ರಭಾವಕ್ಕೊಳಗಾಗುವ ಹಂತಗಳು ಯಾವುದೇ ಸಂಸ್ಕೃತಿಯಲ್ಲಿ ಏಕ ಪ್ರಕಾರವಾಗಿರುವುದಿಲ್ಲ. ಪ್ರಭಾವಿಸುವ ಸಂಸ್ಕೃತಿಯೆ ಪ್ರಭಾವಕ್ಕೂ ಒಳಗಾಗುವ ನೆಲೆಗಳು ಕಾರ್ಯನಿರತವಾಗಿರುತ್ತವೆ. ಯಾವ ಸಂಸ್ಕೃತಿಯೂ ತನ್ನಷ್ಟಕ್ಕೆ ತಾನೇ ಶ್ರೇಷ್ಠವೂ ಆಗಿರುವುದಿಲ್ಲ ಕನಿಷ್ಠವೂ ಆಗಿರುವುದಿಲ್ಲ. ಸಂಸ್ಕೃತಿ ಎಂದರೇನೆ ಸಂಸ್ಕರಿಸುವ ಗುಣವನ್ನು ಹೊಂದಿರುವಂತಹದ್ದು.

ಸಂಸ್ಕಾರ ನೀಡುವ ಗುಣ ಸಾಮರ್ಥ್ಯ ಎರಡು ಭಿನ್ನ ಸಂಸ್ಕೃತಿಗಳಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧಿತವಾಗಿದ್ದು, ಪ್ರತಿಯೊಂದೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪಾರಮ್ಯ ಸಾಧಿಸಿದ್ದಿರಬಹುದು. ಆಗ ಎರಡೂ ಸಂಸ್ಕೃತಿಗಳು ಪರಸ್ಪರ ಪ್ರಭಾವಿಸುವ ಮತ್ತು ಪ್ರಭಾವಕ್ಕೊಳಗಾಗುವ ಕ್ರಿಯೆಗಳಲ್ಲಿ ತೊಡಗುತ್ತವೆ. ಪ್ರತಿಯೊಂದೂ ಒಂದಕ್ಕೊಂದು ಕೊಡುವ ಮತ್ತು ಕೊಳ್ಳುವ ಈ ಪ್ರಕ್ರಿಯೆಯನ್ನು ಅನುಸಂಧಾನದ ನೆಲೆ ಎಂದು ಗುರುತಿಸಬಹುದು.

ಭಾರತ ಇಂಗ್ಲಿಷರ ವಸಾಹತು ಆಗಿದ್ದ ಸಂದರ್ಭದಲ್ಲಿನ ಬೆಳವಣಿಗೆಗಳಿಗೆ ಈ ಸಾಂಸ್ಕೃತಿಕ ಚಟುವಟಿಕೆಗಳನ್ನು ಅನ್ವಯಿಸಬಹುದು. ಇಂಗ್ಲಿಷರ ಪಾಶ್ಚಾತ್ಯ ಸಂಸ್ಕೃತಿ ಭಾರತದ ದೇಶೀಯ ಸಂಸ್ಕೃತಿಯ ಮೇಲೆ ಪ್ರಭಾವದ ಮುದ್ರೆ ಒತ್ತಿದಂತೆಯೇ ಅದು ಪ್ರಭಾವಕ್ಕೂ ಒಳಗಾಯಿತು.

ದೇಶೀಯ ಸಂಸ್ಕೃತಿಯ ಜಾತಿ ಮತ್ತು ಲಿಂಗಬೇಧ ನೆಲೆಯಲ್ಲಿನ ಸಾಮಾಜಿಕ ತಾರತಮ್ಯದ ಮೇಲೆ ಪಾಶ್ಚಾತ್ಯ ಸಂಸ್ಕೃತಿ ಬೀರಿದ ಪ್ರಭಾವದಿಂದಾಗಿ ಸಮಾಜ ಸುಧಾರಣ ಚಳವಳಿ ಹುಟ್ಟು ಹಾಕಿದ್ದನ್ನು ಚರಿತ್ರೆಯ ಪುಟಗಳಲ್ಲಿ ವಿವರಿಸಿದೆ. ಹಾಗೆಯೇ ಅಸಹಕಾರ ಮತ್ತು ಅಹಿಂಸೆಯಿಂದಲೆ ದಾಸ್ಯತನವನ್ನು ತೊಡೆದು ಹಾಕಿ ಸ್ವಾತಂತ್ರ್ಯ ಪಡೆದುಕೊಳ್ಳುವ ಬಗೆಯನ್ನು ಭಾರತದ ದೇಶೀಯ ಸಂಸ್ಕೃತಿ ಪಾಶ್ಚಾತ್ಯ ಸಂಸ್ಕೃತಿಗೆ ಮಾತ್ರವಲ್ಲದೆ ಇಡೀ ವಿಶ್ವ ಸಂಸ್ಕೃತಿಗೆ ಇಂದಿಗೂ ಮಾರ್ಗದರ್ಶಿ ಸ್ಥಾನದಲ್ಲಿದೆ.

ಪ್ರಸ್ತುತ ಅಧ್ಯಯನದಲ್ಲಿ ಸ್ತ್ರೀಯರ ಸ್ಥಾನಮಾನ, ಸ್ವಾತಂತ್ರ್ಯ ಮುಂತಾದ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಅಧ್ಯಯನಕ್ಕೆತ್ತಿಕೊಂಡ ಕೃತಿಗಳಲ್ಲಿ ಕಂಡುಬರುವ ಎರಡು ಭಿನ್ನ ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನದ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದು.

೧. ರಾಜಶೇಖರ ಚರಿತಮು

ತೆಲುಗಿನ ಮೊದಲ ಕಾದಂಬರಿಕಾರರಾದ ಕಂದುಕೂರಿ ವೀರೇಶಲಿಂಗಂ ಪಂತುಲು ಅವರು ಇಂಗ್ಲಿಷ್ ಕಾದಂಬರಿಗಳಿಂದ ಪ್ರೇರಿತರಾಗಿ ತನ್ನ ಸಮಕಾಲೀನ ಸಮಾಜದ ಆಗು ಹೋಗುಗಳನ್ನು ಕಾದಂಬರಿಯ ವಸ್ತುವನ್ನಾಗಿಸಿಕೊಂಡು ಬರೆದ ಮೊದಲ ಕಾದಂಬರಿ ಇದು.

ಹೋರಾಟಗಾರನ ಬದುಕು

ರಾಜಶೇಖರ ಒಬ್ಬ ಆಗರ್ಭ ಶ್ರೀಮಂತ. ಆತನ ಪ್ರಗತಿಪರ ಧೋರಣೆಗಳಿಗಿಂತ ಶ್ರೀಮಂತಿಕೆಗೆ ಜನ ಹೆಚ್ಚು ಪ್ರಾಧಾನ್ಯತೆ ನೀಡುತ್ತಿದ್ದರು. ಅವನಿಂದ ತಮಗಾಗುವ ನೆರವು, ಅನುಕೂಲಗಳನ್ನು ಪಡೆಯಲು ಉತ್ಸುಕರಾಗಿದ್ದರು. ಹಾಗಾಗಿ ಆತ ಬಡವನಾಗುವವರೆಗೆ ಸಾಂಪ್ರದಾಯಿಕ ಸಮಾಜದಲ್ಲಿದ್ದುಕೊಂಡೇ ತನ್ನ ಪ್ರಗತಿಪರ ಧೋರಣೆಯನ್ನು ಸಾಧಿಸಲು ಮತ್ತು ವಿಸ್ತರಿಸಲು

ಯಾವ ಅಡ್ಡಿ ಆತಂಕಗಳು ಅವನಿಗೆ ಎದುರಾಗುವುದಿಲ್ಲ. ಆತ ಬಡವನಾದ ಕೂಡಲೆ ಆತನ ಆಧುನಿಕ ಮತ್ತು ವೈಜ್ಞಾನಿಕ ಮನೋಭಾವ ಸಮಾಜ ವಿರೋಧಿಯಾಗಿ ಪರಿಣಮಿಸುತ್ತದೆ. ಹೀಗೆ ಬಡತನಕ್ಕೂ ಸಾಮಾಜಿಕ ಜೀವನಕ್ಕೂ ನಂಟಿರುವುದನ್ನು ಕಾಣಿಸಲಾಗಿದೆ.

ಸಂಪ್ರದಾಯ ಸಮಾಜದ ಬಹಿಷ್ಕಾರಕ್ಕೆ ಒಳಗಾಗುವ ಮೊದಲೆ ಕಾಶೀಯಾತ್ರೆಗೆ ಹೊರಡುವ ರಾಜಶೇಖರ ಮೊದಲಿಗೆ ತಾನು ನಂಬುವ ಮಠ ಮಾನ್ಯಗಳಿಗೆ ಭೇಟಿ ಕೊಡುತ್ತಾನೆ. ಅಲ್ಲಿ ಮಠದ ಸನ್ಯಾಸಿಗಳಲ್ಲಿ ಕಾಶಿಗೆ ಹೋಗುವ ದಾರಿಯ ಕುರಿತು ತಿಳಿಯ ಬಯಸುತ್ತಾನೆ. ಅವರು ತೋರಿಸಿದ ಮಾರ್ಗವನ್ನು ಹಿಡಿದು ಮುಂದೆ ಸಾಗಿದಾಗ ದಾರಿ ಮಧ್ಯದಲ್ಲಿ ಕಳ್ಳಕಾಕರು ಅವನನ್ನು ದೋಚುತ್ತಾರೆ. ತನ್ನನ್ನು ದೋಚಿದ ಕಳ್ಳರೂ ಮಠದ ಸನ್ಯಾಸಿಗಳೂ ಬೇರೆಯಾಗಿರದೆ ಸಂದರ್ಭಕ್ಕನುಗುಣವಾಗಿ ಬೇರೆ ಬೇರೆ ವೇಷ ಹಾಕಿಕೊಂಡು ವಂಚನೆ ಮಾಡಿದವರೆಂದು ಅವನಿಗೆ ಮನದಟ್ಟಾಗುತ್ತದೆ. ಸನ್ಯಾಸಿಗಳು ಕಳ್ಳರೂ ಆಗಿರುವ ಹೊಸ ಅನುಭವ ಹೊತ್ತುಕೊಂಡು ಮುಂದಿನ ದಾರಿ ಕ್ರಮಿಸುತ್ತಾನೆ. ನಂತರ ಸಿಕ್ಕಿದ ಒಂದು ಚಿಕ್ಕ ಹಳ್ಳಿಯಲ್ಲಿ ಊರಿನ ಜನರೆಲ್ಲ ಮೂರ್ಛೆ ಬಿದ್ದ ಬ್ರಾಹ್ಮಣನ ಸುತ್ತ ನೆರೆದಿದ್ದನ್ನು ಕಾಣುತ್ತಾನೆ. ಒಂದು ಜೀವಕ್ಕಿಂತ ಜಾತಿ ದೊಡ್ಡದಲ್ಲ ಎಂಬ ರಾಜಶೇಖರನ ವೈಜ್ಞಾನಿಕ ದೃಷ್ಟಿಕೋನ ಸಂಪ್ರದಾಯವಾದಿಗಳಿಗೆ ಗ್ರಹಿಸಲು ಸಾಧ್ಯವಾಗುವುದಿಲ್ಲ. ಅವರು ತಮ್ಮ ಮೇಲ್ಜಾತಿಗಳು ಕಾಲಾನುಕಾಲದಿಂದ ಪ್ರತಿಪಾದಿಸುತ್ತ, ಒಪ್ಪಿಸುತ್ತ ಬಂದ ಕರ್ಮಸಿದ್ಧಾಂತ ಮತ್ತು ಜನ್ಮಾಂತರದಲ್ಲಿ ಅನುಭವಿಸಬೇಕಾದ ಶಿಕ್ಷೆಯ ಕಲ್ಪನೆಯನ್ನು ಆತನ ಮುಂದಿಟ್ಟು ಜೀವಕ್ಕಿಂತ ಜಾತಿ ಮುಖ್ಯ ಎಂಬ ಸಾಂಪ್ರದಾಯಿಕ ನಿಲುವನ್ನೇ ತಳೆಯುತ್ತಾರೆ.

ಆತನ ಪಯಣ ಮುಂದಿನ ಊರಿಗೆ ಸಾಗುತ್ತದೆ. ಅಲ್ಲಿನ ಪುರುಷ ಸಮಾಜ ಸ್ತ್ರೀಯರ ಮೇಲಿನ ದಬ್ಬಾಳಿಕೆಯನ್ನು ನಿರಂತರವಾಗಿ ನಡೆಸುತ್ತಲೇ ಇರುತ್ತದೆ. ಸ್ತ್ರೀ ಪುರುಷರು ಸಮಾನರು, ಸ್ತ್ರೀಯರಿಗೂ ಪುರುಷರಷ್ಟೇ ಸ್ವಾತಂತ್ರ್ಯ, ಗೌರವ, ಆದರ ತೋರಬೇಕು ಎಂಬ ರಾಜಶೇಖರನ ಧೋರಣೆ ಯಾರಿಗೂ ಸರಿಕಾಣುವುದಿಲ್ಲ. ಸ್ತ್ರೀಯರ ದಮನಿತ ಸ್ಥಿತಿಯನ್ನು ಪುರುಷಪರವಾದ ನಿಲುವಿನಿಂದ ಸಮರ್ಥಿಸಲಾಗುತ್ತದೆ. ದೆವ್ವಭೂತಗಳು ಮತ್ತು ಗ್ರಹಣಗಳ ಕುರಿತು ಜನರ ಮೂಢನಂಬಿಕೆ ತೊಲಗಿಸಿ ವಾಸ್ತವದ ವೈಜ್ಞಾನಿಕ ಅರಿವು ಮೂಡಿಸಲು ಸಾಧ್ಯವಾಗದೆ ಹೋಗುತ್ತದೆ.

ರಾಜಶೇಖರನ ವೈಜ್ಞಾನಿಕ ಮನೋಭಾವ ಆಧುನಿಕ ಶಿಕ್ಷಣದಿಂದ ಮೂಡಿದುದಾಗಿದೆ. ಅದರ ಮೌಲ್ಯ ಮತ್ತು ಮಹತ್ವ ಅವನಿಗೆ ತಿಳಿದಿದೆ. ತನ್ನ ಅರಿವನ್ನು, ತಿಳಿವನ್ನು ಸಮಾಜದ ಸಮಸ್ತರೊಂದಿಗೆ ಹಂಚಿಕೊಳ್ಳಲು ಆತ ಮುಂದಾಗುತ್ತಾನೆ. ಸಾಂಪ್ರದಾಯಿಕ ಸಮಾಜದಲ್ಲಿ ಮೌಢ್ಯ, ವಂಚನೆ, ಸುಳ್ಳು, ತಟವಟ, ಕಪಟತನ ಮೊದಲಾದ ಹುಸಿ ಮೌಲ್ಯಗಳೇ ಏರುಗತಿಯಲ್ಲಿದ್ದು ರಾಜಶೇಖರ ಅದರ ಸ್ಥಾನದಲ್ಲಿ ವಿವೇಕ, ವಿವೇಚನಾ ಪ್ರಜ್ಞೆ, ವಾಸ್ತವ ಸ್ಥಿತಿಯ ಅರಿವು, ವೈಜ್ಞಾನಿಕ

ಮನೋಭಾವ, ಸ್ತ್ರೀ ಪುರುಷ ಸಮಾನತೆ ಮೊದಲಾದ ಆಧುನಿಕ ಜೀವನದ ಮೌಲ್ಯಗಳನ್ನು ನೆಲೆಗೊಳಿಸುವಲ್ಲಿ ಸೋಲುತ್ತಾನೆ. ಈ ಸಾಂಪ್ರದಾಯಿಕ ಮತ್ತು ಆಧುನಿಕ ಜೀವನ ಮೌಲ್ಯಗಳ ಸಂಘರ್ಷದ ನೆಲೆಯಲ್ಲಿ ರಾಜಶೇಖರನ ಸಾವು ಸಂಭವಿಸುತ್ತದೆ.

ಇದು ಮೇಲುನೋಟಕ್ಕೆ ಆಗ ತಾನೆ ಪ್ರವೇಶ ಪಡೆಯುತ್ತಿರುವ ಆಧುನಿಕತೆಯ ಮೇಲೆ ಸಂಪ್ರದಾಯದ ವಿಜಯವೆಂಬಂತೆ ತೋರುತ್ತದೆ. ಆದರೆ ಕತೆಯ ಮುಂದಿನ ನೋಟ ರಾಜಶೇಖರನ ಮಗಳು ರುಕ್ಮಿಣಿಯ ಸುತ್ತ ಸುತ್ತುತ್ತದೆ. ಕಾಶೀಯಾತ್ರೆಯ ನಡುವೆ ನಡುಹಾದಿಯಲ್ಲಿ ರುಕ್ಮಿಣಿ ದಾರಿ ತಪ್ಪಿ ಕಳೆದು ಹೋಗುತ್ತಾಳೆ. ಪುರುಷ ಸಮಾಜದಲ್ಲಿ ಅಬಲೆಯಾದ ಹೆಣ್ಣಿನ ರಕ್ಷಣೆ ಅಪಾಯಕರ ಸ್ಥಿತಿಯಲ್ಲಿರುವುದನ್ನು ಮನಗಂಡು ಪುರುಷವೇಷ ಹಾಕುತ್ತಾಳೆ. ಆಕೆ ತನ್ನ ತಂದೆಯಿಂದ ಪಡೆದ ವಿದ್ಯೆಯ ಬಲದಿಂದ ತನಗೆ ಎದುರಾದ ಎಲ್ಲ ಸಂದರ್ಭಗಳನ್ನು ಜಾಣ್ಮೆಯಿಂದ ಎದುರಿಸುತ್ತಾಳೆ. ಅಗಲಿ ಹೋಗಿದ್ದ ಪತಿಯನ್ನು ಆಕೆ ಮರಳಿ ಪಡೆಯುತ್ತಾಳೆ. ಇವೆಲ್ಲವೂ ಆಕೆಯ ಶಿಕ್ಷಣ ತಂದುಕೊಟ್ಟ ಫಲವಾಗಿದೆ. ಇದರಿಂದ ಪ್ರಭಾವಿತರಾದ ಜನ ತಮ್ಮ ಸಾಂಪ್ರದಾಯಿಕ ಜೀವನದಲ್ಲಿನ ಕುಂದುಕೊರತೆಗಳನ್ನು ಕಂಡು ರಾಜಶೇಖರ ಪ್ರತಿಪಾದಿಸಿದ ಆಧುನಿಕ ಜೀವನ ಮೌಲ್ಯಗಳನ್ನು ಅಪ್ಪಿಕೊಳ್ಳಲು ಸಿದ್ಧರಾಗುತ್ತಾರೆ. ಹೀಗೆ ಇಡೀ ಕಾದಂಬರಿ ಸಂಪ್ರದಾಯ ಮತ್ತು ಆಧುನಿಕತೆಗಳ ಸಂಘರ್ಷವನ್ನು ನಿರೂಪಿಸುವ ಕತೆಯಾಗಿದೆ.

ಹುಸಿ ಹೋದ ಸ್ವ ಸಮರ್ಥನೆ

ಸಾಂಪ್ರದಾಯಿಕ ಜೀವನದಲ್ಲಿ ಆದುನಿಕ ಚಿಂತನೆಗಳ ಪರವಾದ ಹೋರಾಟಮಯ ಜೀವನ ಸಾಗಿಸುವ ರಾಜಶೇಖರ ತನ್ನ ಹೆಂಡತಿಗೆ ಪಾಕಶಾಸ್ತ್ರ ಪ್ರವೀಣೆಯಾಗಬಲ್ಲಷ್ಟು ಮಾತ್ರ ವಿದ್ಯೆ ನೀಡುತ್ತಾನೆ. ಮಗಳು ರುಕ್ಮಿಣಿಗೆ ಸಂಸ್ಕೃತದ ಕೆಲವು ಕಾವ್ಯ ಗ್ರಂಥಗಳು ಪುರಾಣಗಳಿಗೆ ಸೀಮಿತವಾದ ವಿದ್ಯೆ ನೀಡುತ್ತಾನೆ. ಸ್ತ್ರೀಯರ ಶಿಕ್ಷಣವನ್ನು ಸಾರಿ ಹೇಳುವ ರಾಜಶೇಖರ ತನ್ನ ಮನೆಯ ಹೆಂಗಸರಿಗೆ ಸಕಲ ಶಾಸ್ತ್ರಗಳಲ್ಲಿ ಪ್ರವೀಣರನ್ನಾಗಿ ಮಾಡುವುದಿಲ್ಲವೆಂಬುದು ಗಮನಿಸತಕ್ಕ ಅಂಶವಾಗಿದೆ.

ಆತ ಸ್ವತಃ ಇಂಗ್ಲಿಷ್ ಶಿಕ್ಷಣ ಪಡೆದು ಆಧುನಿಕ ವಿಜ್ಞಾನದ ಪರಿಚಯವುಳ್ಳವನು. ಆದರೆ ಹಿಂದೂ ಸಮಾಜದ ಎಲ್ಲ ನಿರ್ಬಂಧಗಳನ್ನು ಮೀರಿ ತನ್ನ ಹೆಣ್ಣುಮಕ್ಕಳಿಗೆ ನೀಡುವ ವಿದ್ಯೆ ಸಂಸ್ಕೃತ ಭೂಯಿಷ್ಠವಾದುದು. ಇಂಗ್ಲಿಷ್ ಶಿಕ್ಷಣದ ವೈಜ್ಞಾನಿಕ ಚಿಂತನಾ ಕ್ರಮಗಳಿಗೂ ಸಂಸ್ಕೃತದ ಪಾಕಶಾಸ್ತ್ರ, ಪುರಾಣ ಕತೆಗಳು, ಕಾವ್ಯ ಗ್ರಂಥಗಳು ಒಳಗೊಂಡಿರಬಹುದಾದ ವೈಚಾರಿಕ ಕ್ರಮಗಳಿಗೂ ಎಲ್ಲಿಯೂ ತಾಳೆ ಬೀಳುವುದಿಲ್ಲವೆಂಬುದು ಅಷ್ಟೇ ಮುಖ್ಯವಾದ ಅಂಶವಾಗಿದೆ. ಸ್ತ್ರೀ ಪರವಾದ ದನಿ ಎತ್ತುವ ರಾಜಶೇಖರ ಮನುಸ್ಮೃತಿ ವಿಧಿಸಿದ ನಿಯಮವನ್ನು ಮೀರದೆ ತನ್ನ ಮಗಳಿಗೆ ಅಪ್ರಾಪ್ತ ವಯಸ್ಸಿನಲ್ಲಿಯೇ ಮದುವೆ ಮಾಡಿರುವುದು ಸ್ತ್ರೀ ವಿಚಾರ ಪರವಾಗಿ ತಾನು ಅನ್ಯರಿಗೆ ಉಪದೇಶಿಸುವುದಕ್ಕೂ ಅದನ್ನು ತಾನೇ ಪಾಲಿಸುವುದಕ್ಕೂ ಇರುವ ವ್ಯತ್ಯಾಸವನ್ನು ಕಾಣಿಸುತ್ತದೆ.

ಮಗಳು ರುಕ್ಮಿಣಿ ತನ್ನ ಗಂಡ ಊರು ಬಿಟ್ಟು ಹೋದ ಚಿಂತೆಯಲ್ಲಿದ್ದಾಗ ಮಗಳ ಮನಸ್ಸನ್ನು ರಾಜಶೇಖರ ಅರಿಯಲಾಗದೇ ಹೋಗುತ್ತಾನೆ. ಮಂತ್ರವಾದಿಗಳು ಅವನ ಮಗಳಿಗೆ ದೆವ್ವ ಹಿಡಿದಿದೆಯೆಂದು ಸೂಚಿಸಿದಾಗ ಅದನ್ನು ನಂಬುತ್ತಾನೆ. ಅಲ್ಲದೆ ಪೂಜೆ ಪುನಸ್ಕಾರ ತಾಯಿತಗಳ ಮೂಲಕ ಮಗಳ ಮನೋವ್ಯಥೆಯನ್ನು ಅಥವಾ ವ್ಯಾಕುಲತೆಯನ್ನು ನಿವಾರಿಸುವೆವೆಂದು ಹೇಳಿಕೊಳ್ಳುವ ಮಂತ್ರವಾದಿಗಳನ್ನು ನಂಬುತ್ತಾನೆ. ಅವರಿಗೆ ತಮ್ಮ ಪೂಜೆ ಪುನಸ್ಕಾರ ಮಾಡಲು ಅವಕಾಶ ಒದಗಿಸುತ್ತಾನೆ. ಇದು ರಾಜಶೇಖರನ ವೈಜ್ಞಾನಿಕ ಅಥವಾ ವೈಚಾರಿಕ ನಿಲುವನ್ನು ಅನುಮಾನಿಸಿ ನೋಡುವಂತೆ ಮಾಡುತ್ತದೆ.

ಅಲ್ಲದೆ ಹಿಂದೂ ಸಮಾಜದಲ್ಲಿ ಜಾತಿಭೇದ ನೀತಿಯನ್ನು ಕಟ್ಟುಗ್ರವಾಗಿ ಹೇರಿದ ಮೇಲ್ಜಾತಿಯ ವ್ಯಕ್ತಿ ಪ್ರಜ್ಞೆ ಕಳೆದುಕೊಂಡು ಬಿದ್ದಿದ್ದಾಗ ಅನ್ಯ ಜಾತಿಯವರಿಗೆ ಜಾತಿಗಿಂತ ಜೀವ ಮುಖ್ಯ ಎಂದು ಉಪದೇಶಿಸಿ ಅವರ ಮನಃಪರಿವರ್ತನೆ ಮಾಡಲು ಪ್ರಯತ್ನ ಪಡುವ ರಾಜಶೇಖರ ಸಮಾಜದ ಸಾಂಪ್ರದಾಯಿಕ ಬೇರುಗಳ ಮೂಲವನ್ನು ಗುರುತಿಸುವಲ್ಲಿ ವಿಫಲನಾಗುವುದು ಅವನ ಆಧುನಿಕ ವೈಚಾರಿಕತೆಯ ಸ್ವರೂಪದಲ್ಲಿ ಸಾಂಪ್ರದಾಯಿಕ ಮನೋಭಾವ ಅಡಕವಾಗಿರುವುದನ್ನು ಕಾಣಿಸುತ್ತದೆ.

ರಾಜಶೇಖರನ ವ್ಯಕ್ತಿತ್ವದಲ್ಲಿ ಕಾಣಿಸುವ ಈ ಎಲ್ಲ ನ್ಯೂನತೆ ಅಥವಾ ಕುಂದುಕೊರತೆಗಳು ಅವನನ್ನು ಒಬ್ಬ ಅಪ್ರತಿಮ ಸುಧಾರಕನನ್ನಾಗಿ ಚಿತ್ರಿಸುವುದಿಲ್ಲ. ಆತ ಸಾಂಪ್ರದಾಯಿಕ ಜೀವನ ಮೌಲ್ಯಗಳ ಬಗ್ಗೆ ಸಹಾನುಭೂತಿ ಹೊಂದಿದ ಮತ್ತು ಅದರೊಂದಿಗೆ ರಾಜಿ ಮಾಡಿಕೊಂಡ ಪಾತ್ರವಾಗಿ ಗೋಚರಿಸುತ್ತಾನೆ. ರಾಜಶೇಖರ ಸಾಂಪ್ರದಾಯಿಕ ಜೀವನ ಮೌಲ್ಯಗಳೊಂದಿಗೆ ಮಾಡಿಕೊಂಡ ಈ ಅನುಸಂಧಾನದ ನೆಲೆಗೆ ಅವನ ತೋರಿಕೆಯ ಹುಸಿ ಆಧುನಿಕ ಚಿಂತನೆಗಳೇ ಕಾರಣವಾಗಿರುವಂತೆಯೂ ಕಾಣುತ್ತದೆ.

೨. ಸತ್ಯವತೀ ಚರಿತ್ರೆ

ಸತ್ಯವತೀ ಚರಿತ್ರೆ ಪ್ರಕಟವಾದ ಕಾಲದಲ್ಲಿಯೇ ದಕ್ಷಿಣ ಭಾರತದ ಇತರ ಭಾಷಾ ಪ್ರಾಂತಗಳಲ್ಲೂ ಪ್ರಸಿದ್ಧಿ ಪಡೆದ ಮತ್ತು ಪ್ರಭಾವ ಬೀರಿದ ಕೃತಿಯಾಗಿದು ಗೋಚರಿಸುತ್ತದೆ. ೧೮೯೯ರಲ್ಲಿ ಪ್ರಕಟವಾದ ಇಂದಿರಾಬಾಯಿ ಕಾದಂಬರಿಯಲ್ಲಿ ನಾಯಕಿ ಇಂದಿರಾಬಾಯಿ ತನ್ನ ಅಭಿರುಚಿಗೆ ತಕ್ಕಂತೆ ಓದಲು ಆರಿಸಿಕೊಂಡ ಹಲವು ಕೃತಿಗಳಲ್ಲಿ 'ಸತ್ಯವತೀ ಚರಿತ್ರೆ'ಯೂ ಒಂದೆಂದು ಕಾದಂಬರಿ ನಿರೂಪಿಸಿದೆ. ಅಂದರೆ ಸತ್ಯವತೀ ಚರಿತ್ರೆ ಸಮಾಜ ಮುನ್ನಡೆಯುವ ಮಾರ್ಗ ಸೂಚಕ ಕೃತಿಯೆಂದು ಆಗಿನ ಕಾಲಕ್ಕೇ ಹೆಸರು ಪಡೆದಂತಿದೆ. ಈ ಕೃತಿಯ ಲೇಖಕರು "ಅಸತ್ಯವನ್ನು ಚೆಂಡಾಡಿ ಪ್ರಗತಿಪಥದ ನಿರ್ಮಾಣಕ್ಕಾಗಿ ಹೋರಾಡಿದರು" ಎಂದು ರಾಜಾಜಿ ಅವರಿಂದ ಬಣ್ಣನೆಗೆ ಒಳಪಟ್ಟಿದ್ದೂ ಆಂಧ್ರದ ಅಗ್ರ ಸಮಾಜ ಸುಧಾರಕರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿದ್ದೂ ಕಾರಣವಿದ್ದಿರಬಹುದು. ಅದೇನೆ

ಇದ್ದರೂ ವೀರೇಶಲಿಂಗಂ ಪಂತುಲು ಅವರು ತಮ್ಮ ಸಾಹಿತ್ಯ ಬರಹವನ್ನು ಸಾಮಾಜಿಕ ಸುಧಾರಣೆಗಾಗಿ ಸಮರ್ಥವಾಗಿ ಬಳಸಿಕೊಂಡವರಲ್ಲಿ ಮೊದಲಿಗರು ಎಂದು ಹೆಸರು ಪಡೆದಿದ್ದಾರೆ. ಅವರು ೧೮೭೬ರಲ್ಲಿ ಜನಜಾಗೃತಿ ಮಾಡಿಸಲೆಂದೇ ವಿವೇಕವರ್ಧಿನಿ, ಹಾಸ್ಯ ಸಂಜೀವಿನಿ, ಮೊದಲಾದ ಪತ್ರಿಕೆಗಳನ್ನು ಆರಂಭಿಸಿದ್ದಷ್ಟೇ ಅಲ್ಲದೆ ಮಹಿಳೆಯರಲ್ಲಿ ಜಾಗೃತಿಯನ್ನು ತರಲು ಮಹಿಳೆಯರಿಗಾಗಿಯೇ ಸತಿ ಹಿತೈಷಿಣಿ ಎಂಬ ಪತ್ರಿಕೆಯನ್ನು ೧೮೮೩ರಲ್ಲಿ ಹೊರಡಿಸಿದ್ದು ಸ್ವತಃ ಸಮಾಜ ಸುಧಾರಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರ ದ್ಯೋತಕವಾಗಿದೆ.

ಇದರ ಛಾಯೆಯನ್ನು ಸತ್ಯವತೀ ಚರಿತ್ರೆಯ ಆರಂಭದಲ್ಲಿ ನಿರೂಪಕರ ಮಾತುಗಳಲ್ಲಿ ಕಾಣಬಹುದು. "ಕನ್ಯಾವರರು ಯಾವಜ್ಜೀವವೂ ಸುಖದು:ಖಗಳಿಗೆ ಭಾಗಿಗಳಾಗಿ ಇರಬೇಕು. ಇದು ಸಹಜ. ಆದರೆ ಅವರ ಇಷ್ಟಾನುಸಾರ ಮದುವೆಯಾಗುವ ಕಾಲ ಹೋಯಿತು"(ಪು–೧). ಸ್ತ್ರೀ ಪುರುಷರು ಯಾವ ಕಾಲಕ್ಕೂ ಪರಸ್ಪರ ಅವಲಂಬಿತರು ಎಂಬುದು ಪ್ರಕೃತಿ ಸಹಜ ನಿಯಮವಾಗಿದೆಯೆಂದೂ ತಮ್ಮ ಪ್ರಾಪ್ತ ವಯಸ್ಸಿನಲ್ಲಿ ತಾವು ಇಷ್ಟ ಪಟ್ಟ ವ್ಯಕ್ತಿಯೊಂದಿಗೆ ತಮ್ಮ ಬಾಳ ಸಂಗಾತಿಯನ್ನು ಆರಿಸಿಕೊಳ್ಳುವ ಸಮಾಜದ ಜೀವನ ಮೌಲ್ಯಗಳು ಬದಲಾಗಿ ಹೋಗಿವೆ ಎಂದೂ ಅವನ್ನು ಸಮಾಜದಲ್ಲಿ ಮರುಸ್ಥಾಪಿಸುವ ಉಮೇದಿನಿಂದಲೇ ಹೇಳಿರುವಂತಿದೆ. ಅವರ ಈ ಮಾತುಗಳಲ್ಲಿ ಸಮಾಜ ಸುಧಾರಕತನದ ಸುಪ್ತ ಬಯಕೆ ಅಡಗಿದೆ. ಅದರಲ್ಲೂ ವಿಶೇಷವಾಗಿ ಸ್ತ್ರೀಯರ ವಿಚಾರಗಳೂ ಸುಧಾರಣೆಗೆ ಒಳಪಡತಕ್ಕದಾಗಿವೆ ಎಂದು ಅವರು ಸೂಚಿಸಬಯಸಿದಂತಿದೆ. ಇಂತಹ ಆಶಯದೊಂದಿಗೆ ಸತ್ಯವತೀ ಚರಿತ್ರೆಯನ್ನು ಅವರು ಬರೆದಂತೆ ಕಾಣುತ್ತದೆ. ಸತ್ಯವತೀ ಪಾತ್ರದ ಗುಣಾತಿಶಯಗಳು ಆದರ್ಶಮಯವಾಗಿದ್ದು ಅವನ್ನು ಜನಸಾಮಾನ್ಯರು ಅನುಸರಿಸಬೇಕೆಂಬ ಉದ್ದೇಶ ನಿರೂಪಕರಿಗೆ ಇದೆ.

ಅತ್ತೆ ವರ್ಸಸ್ ಸೊಸೆ

ಡಿಸ್ಟ್ರಿಕ್ಟ್ ಮುನ್ಸಿಫ ರಾಘವಯ್ಯ ಮತ್ತು ಶ್ಯಾಮಲಾಂಬೆಯರ ಮಗಳಾದ ಸತ್ಯವತೀ ವಿದ್ಯಾವಂತರ ಕುಟುಂಬದಲ್ಲಿ ಹುಟ್ಟಿದವಳು. ಇಡೀ ಕುಟುಂಬ ಇಂಗ್ಲಿಷ್ ಶಿಕ್ಷಣ ಪಡೆದಿದ್ದು ಅದರ ಪ್ರತಿಫಲವನ್ನು ಅನುಭವಿಸುತ್ತಿತ್ತು. ಹಿರಿಯರು ತಮ್ಮ ಮಕ್ಕಳನ್ನೆಲ್ಲ ಇಂಗ್ಲಿಷ್ ಶಿಕ್ಷಣದ ಹಾದಿಯಲ್ಲೆ ಮುನ್ನಡೆಸಲು ಪ್ರಯತ್ನ ಪಟ್ಟರು. ಹೀಗಿದ್ದರೂ ಹೆಣ್ಣಿನ ಎಂಟನೆಯ ವಯಸ್ಸು ಸರಿಯಾದ ಮದುವೆ ವಯಸ್ಸು ಎಂಬ ಮನುಧರ್ಮಶಾಸ್ತ್ರದ ನಿಯಮವನ್ನು ಮುರಿದು ವಿದ್ಯಾವಂತೆಯಾದ ಮಗಳು ಸತ್ಯವತಿಗೆ ಅವಳ ೧೨ನೇ ವಯಸ್ಸಿನಲ್ಲಿ ಮದುವೆ ಮಾಡುತ್ತಾರೆ. ಅವರ ಕಾಲಕ್ಕೆ ಅದೇ ತಕ್ಕ ಮಟ್ಟಿನ ಸುಧಾರಣೆಯಂತೆ ಅವರಿಗೆ ಕಂಡಿದೆ. ಆದರೆ ಸತ್ಯವತಿಯನ್ನು ಮದುವೆ ಮಾಡಿ ಕೊಟ್ಟ ವರ ನಾರಾಯಣಮೂರ್ತಿ ಇಂಗ್ಲಿಷ್ ಶಿಕ್ಷಣ ಪಡೆದವನೂ ಇಂಗ್ಲಿಷ್ ಸರಕಾರದಲ್ಲಿ ಕೆಲಸ ಮಾಡುವವನು

ಆಗಿದ್ದರೂ ಅವನ ತಾಯಿ ಯಶೋದಮ್ಮ, ತಂದೆ ಲಕ್ಷ್ಮೀ ನಾರಾಯಣ, ಅಣ್ಣ ವೆಂಕಟೇಶ, ತಮ್ಮಂದಿರಾದ ರಾಮಸ್ವಾಮಿ, ಸುಬ್ರಮಣ್ಯ ತಂಗಿಯರಾದ ಸಾವಿತ್ರಿ ಮತ್ತು ಸೀತೆ ಇಂಗ್ಲಿಷ್ ಶಿಕ್ಷಣ ಪಡೆದವರೇನಲ್ಲ. ಅವರಲ್ಲಿ ಅವನ ಅಣ್ಣ ತಮ್ಮಂದಿರು ಸ್ವಲ್ಪ ಮಟ್ಟಿಗೆ ದೇಶೀ ಭಾಷೆಯನ್ನು ಕಲಿತವರಾಗಿದ್ದರೂ ಹೆಣ್ಣು ಮಕ್ಕಳು ಮತ್ತು ತಾಯಿ ನಿರಕ್ಷಸ್ಥರಾಗಿದ್ದರು. ಅಂತಹ ಸಂಪ್ರಾದಾಯಿಕ ಗತಿಸ್ಥಿತಿಯುಳ್ಳ ಕುಟುಂಬದ ಸೊಸೆಯಾಗಿ ಸತ್ಯವತಿ ಅವರ ಮನೆ ಸೇರುತ್ತಾಳೆ.

ಆಧುನಿಕ ಮನೋಭಾವವುಳ್ಳ ಸತ್ಯವತಿ ಸಂಪ್ರದಾಯನಿಷ್ಠ ಮನೋಭಾವದ ಪರಿಸರದಲ್ಲಿ ಮೂಢನಂಬಿಕೆ ತುಂಬಿದ ಮನೆ ಯಜಮಾನಿಕೆಯ ದಬ್ಬಾಳಿಕೆಗಳನ್ನು ಎದುರಿಸಬೇಕಾಗುತ್ತದೆ. ಇದು ಆಧುನಿಕತೆ ಮತ್ತು ಸಂಪ್ರದಾಯಗಳು ನಡೆಸಿದ ಸಂಘರ್ಷದ ಸ್ವರೂಪದಲ್ಲಿ ಚಿತ್ರಿತವಾಗಿದೆ. ಅತ್ತೆ ಯಶೋದಮ್ಮ ಕುಟುಂಬದ ಅಧಿಕಾರ ಮತ್ತು ಯಜಮಾನಿಕೆಯ ಪ್ರತಿರೂಪವಾಗಿ, ಸಂಪ್ರದಾಯದ ಪ್ರತಿನಿಧಿಯಾಗಿ ಸತ್ಯವತಿಯ ನಡವಳಿಕೆಯಲ್ಲಿ ಐದು ಅಪರಾಧಗಳನ್ನು ಗುರುತಿಸಿ ಆರೋಪಿಸುತ್ತಾಳೆ. ಯಶೋದಮ್ಮಳ ಕಣ್ಣಲ್ಲಿ ಹೆಣ್ಣು ಹಗಲಿನಲ್ಲಿ ಗಂಡನೊಡನೆ ಮಾತನಾಡುವುದು, ಸ್ವಚ್ಛತೆಯಿಂದ ಇರುವುದು, ಪುಸ್ತಕಗಳನ್ನು ಓದುವುದು, ವ್ರತಗಳನ್ನು ಪಾಲಿಸದಿರುವುದು, ಹಣಕಾಸು ವ್ಯವಹಾರ ಮಾಡುವುದು ಸಂಪ್ರದಾಯ ವಿರೋಧಿಯಾಗಿ ಕಾಣುತ್ತದೆ. ಆಧುನಿಕ ಮನೋಧರ್ಮದ ಸತ್ಯವತಿಗೆ ಇವೆಲ್ಲವೂ ದಿನನಿತ್ಯದ ವ್ಯವಹಾರದ ವೈಜ್ಞಾನಿಕ ಕ್ರಮವಾಗಿದೆ. ಈ ಜೀವನ ವಿಧಾನವನ್ನು ಮತ್ತೊಬ್ಬರು ವಿರೋಧಿಸಿದ ಕಾರಣದಿಂದಲೆ ಅವನ್ನು ಪಾಲಿಸದೇ ಇರಲು ಸಾಧ್ಯವಿಲ್ಲ. ತನ್ನ ಆಧುನಿಕ ವೈಜ್ಞಾನಿಕ ಮನೋಧರ್ಮಕ್ಕೆ ಅನುಗುಣವಾಗಿ ತನ್ನ ಓರಗಿತ್ತಿ ಸುಂದರಮ್ಮನ ಬಾಣಂತನವನ್ನು ಸಂಪ್ರದಾಯ ಬದ್ಧವಾಗಿ ಕತ್ತಲಕೋಣೆಯಲ್ಲಿ ಇರಿಸದೆ, ಕಿಟಕಿ ಬಾಗಿಲುಗಳನ್ನು ಮುಚ್ಚದೆ, ಅನ್ನ ನೀರನ್ನು ಒದಗಿಸದೆ ಇರುವ ಬದಲು ಅದಕ್ಕೆ ವಿರುದ್ಧವಾಗಿ ವ್ಯವಸ್ಥೆ ಮಾಡಿ ಹೆರಿಗೆ ಮತ್ತು ಬಾಣಂತನವನ್ನು ಸುಸೂತ್ರವಾಗಿ ನಡೆಸುತ್ತಾಳೆ. ಇದು ಸತ್ಯವತಿಯ ಅತ್ತೆ ಮನೆಯ ಸಂಪ್ರದಾಯಬದ್ಧ ಜೀವನದ ಮೇಲೆ ಆಧುನಿಕತೆಯ ಮೇಲುಗೈ ಸಾಧಿಸುವ ಕ್ರಮವಾಗಿದೆ.

ಸತ್ಯವತಿ ಅತ್ತೆಯ ಸಾಂಪ್ರದಾಯಿಕ ಮನೋಭಾವನ್ನು ಪ್ರಶ್ನೆ ಮಾಡದೆ, ಚರ್ಚೆ ಮಾಡದೆ, ವಾದ-ವಿವಾದಕ್ಕಿಳಿದು ಕುಟುಂಬದೊಳಗಿನ ಸಂಬಂಧಗಳನ್ನು ವಿಷಮಗೊಳಿಸುವುದಿಲ್ಲ. ಅಂತಹ ಸಂದರ್ಭವನ್ನು ಆಕೆ ಮೌನದಿಂದ, ವಿವೇಕದಿಂದ ಮತ್ತು ಜಾಣ್ಮೆಯಿಂದ ಎದುರಿಸಿ ಮಾತಿನ ಸಂಘರ್ಷವನ್ನು ತಪ್ಪಿಸುತ್ತಾಳೆ. ಅಂದರೆ ಸಂಪ್ರದಾಯ ಮತ್ತು ಆಧುನಿಕತೆಯ ಸಂಘರ್ಷ ಅವರ ಕುಟುಂಬದಲ್ಲಿ ತಣ್ಣನೆಯ ಸ್ವರೂಪ ಪಡೆದುಕೊಳ್ಳುತ್ತದೆ. ಸತ್ಯವತಿ ತನ್ನ ನಡವಳಿಕೆಯಿಂದಲೇ ಕುಟುಂಬದ ಸದಸ್ಯರನ್ನಷ್ಟೇ ಅಲ್ಲದೆ ನೆರೆಹೊರೆಯವರ, ನೆಂಟರಿಷ್ಟರ ಮನಸ್ಸನ್ನು ಗೆಲ್ಲುತ್ತಾಳೆ. ತನ್ನ ಅತ್ತೆ ಆರೋಪಿಸಿದ ಐದು ಅಪರಾಧಗಳ ಬಲದಿಂದಲೇ ತನ್ನ ಗಂಡ ನಾರಾಯಣಮೂರ್ತಿ ತೀವ್ರ

ಕಾಯಿಲೆಯಿಂದ ಹಾಸಿಗೆ ಹಿಡಿದ ಸಂದರ್ಭದಲ್ಲಿ ಇಡೀ ಕುಟುಂಬದ ಜವಾಬ್ದಾರಿಯನ್ನು ಹೊತ್ತುಕೊಂಡು ಎದುರಾದ ಸಂಕಟದಿಂದ ಪಾರು ಮಾಡುತ್ತಾಳೆ. ಮಾತ್ರವಲ್ಲ ತನ್ನ ಹಾದಿ ತಪ್ಪಿದ್ದ ಮೈದುನ ಸುಬ್ರಮಣ್ಯನ ಕುಟುಂಬವನ್ನೂ ಸರಿದಾರಿಗೆ ತರುವಲ್ಲಿ ಕೊನೆಗೂ ಮೇಲುಗೈ ಸಾಧಿಸುತ್ತಾಳೆ. ಹೀಗೆ ಈ ಕಾದಂಬರಿ ಸಂಪ್ರದಾಯ ಬದ್ಧ ಜೀವನದೊಂದಿಗೆ ಆಧುನಿಕತೆ ಸಂಘರ್ಷ ನಡೆಸಿ ತನ್ನ ಹಿಡಿತ ಸಾಧಿಸಿದ ಕ್ರಮವಾಗಿ ನಿರೂಪಿತವಾಗಿದೆ.

ಇಡೀ ಸಮಾಜ ಸತ್ಯವತಿಯ ಗುಣಾತಿಶಯಗಳನ್ನು ತಿಳಿದಿರಬೇಕೆಂದು ಲೇಖಕರು ಬಯಸಿರುವುದು ಆಕೆ ಆಧುನಿಕತೆಯ ವೈಜ್ಞಾನಿಕ ಮತ್ತು ವಿವೇಚನಾ ಪೂರ್ಣ ಜೀವನವನ್ನು ಹೇಗೆ ವಾಸ್ತವಗೊಳಿಸುತ್ತಾಳೆ ಎನ್ನುವುದನ್ನು ಅರಿಯಲಿ ಎಂಬ ಉದ್ದೇಶದಿಂದಲೆ ಆಗಿದೆ. ಸಂಪ್ರದಾಯಬದ್ಧ ಸಮಾಜದಲ್ಲಿ ಮೌಢ್ಯತೆ ತೊಲಗಿ ವಿವೇಚನಾ ಪೂರ್ಣ ನಡವಳಿಕೆ ರೂಢಿಸಬೇಕೆಂಬ ಆಶಯ ಲೇಖಕರದಾಗಿರುವಂತೆ ಕಾಣುತ್ತದೆ.

ಮದುವೆ-ಮರುಮದುವೆ

ಈ ಕಾದಂಬರಿಯ ಮತ್ತೊಂದು ನೆಲೆಯೆಂದರೆ ಮದುವೆ, ಮರುಮದುವೆಗಳದೆಂದು ಹೇಳಬಹುದು. ಮನುಸ್ಮೃತಿ ಹೆಣ್ಣಿನ ವಿವಾಹ ವಯಸ್ಸನ್ನು ಎಂಟನೇ ವಯಸ್ಸಿಗೂ ಗಂಡಸಿನ ವಿವಾಹ ವಯಸ್ಸನ್ನು ೨೪ಕ್ಕೂ ನಿಗದಿ ಪಡಿಸಿರುವುದು ಸರಿಯಷ್ಟೇ. ಈಗಾಗಲೆ ಹೇಳಿರುವಂತೆ ಸತ್ಯವತಿಯ ಮದುವೆ ಈ ನಿಯಮವನ್ನು ಮುರಿದಿದೆ. ಆದರೆ ಸಾವಿತ್ರಿ, ಸೀತೆ, ಮುಂತಾದವರ ಮದುವೆಗಳು ಮನುಸ್ಮೃತಿ ವಿಧಿಸಿದ ನಿಯಮವನ್ನು ಪಾಲಿಸಿವೆ. ಸಾವಿತ್ರಿಯ ಮದುವೆ ೭೦ ವರ್ಷದ ಮುದುಕನೊಂದಿಗೆ ನಡೆದರೆ, ಸೀತೆಯ ಮದುವೆ ಹದಿನಾರು ವರ್ಷದ ಅಪ್ರಾಪ್ತನೊಂದಿಗೆ ಜರುಗುತ್ತದೆ. ಇಬ್ಬರೂ ಮದುವೆಯಾದ ನಂತರ ಗಂಡನ ಮನೆಗೆ ಹೋಗುವ ಮೊದಲೆ ವಿಧವೆಯರಾಗಿ ತವರು ಮನೆಯಲ್ಲಿಯೇ ಉಳಿಯತ್ತಾರೆ. ತಾಯಿ ಯಶೋದಮ್ಮ ಸತ್ಯವತಿಗೆ ನೀಡುವ ಕಿರುಕುಳದೊಂದಿಗೆ ತಾನೂ ಹಿಂಸೆ ನೀಡುವ ಮೂಲಕ ಸಾವಿತ್ರಿ ತನ್ನ ವೈಯಕ್ತಿಕ ಜೀವನದ ಸಂಕಟವನ್ನು ಪರಿಹರಿಸಿಕೊಂಡು ಮಾನಸಿಕ ತೃಪ್ತಿ ಹೊಂದುವಂತೆ ಕಾಣುತ್ತದೆ. ಇದು ಸಾಂಪ್ರದಾಯಿಕ ಕುಟುಂಬದಲ್ಲಿ ಅತ್ತೆ-ಸೊಸೆ ಮತ್ತು ಅತ್ತಿಗೆ-ನಾದಿನಿಯರ ನಡುವೆ ಬಗೆಹರಿಯದ ಸಮಸ್ಯೆಗಳು ಮತ್ತು ವಿದ್ವೇಷಗಳು ಪ್ರಗತಿಪರ ಧೋರಣೆಯ ಪ್ರಸ್ತುತ ಕಾದಂಬರಿಯಲ್ಲೂ ಚಿತ್ರಿತವಾಗುವುದರಲ್ಲಿ ಮುಖ್ಯ ಪಾತ್ರ ವಹಿಸುವ ಉದ್ದೇಶವನ್ನು ಮುಂಚೂಣಿಗೆ ತಂದು ನಿಲ್ಲಿಸುತ್ತದೆ.

ಕೂಡು ಕುಟುಂಬದಲ್ಲಿ ದುಡಿಯುವ ಅಣ್ಣಂದಿರು ಮತ್ತು ಅವಲಂಬಿತ ತಮ್ಮಂದಿರು ಸಂಪ್ರದಾಯಬದ್ಧ ಕುಟುಂಬದ ಮತ್ತೊಂದು ಸಾಮಾನ್ಯ ಚಿತ್ರವಾಗಿದೆ. ಈ ಕಾದಂಬರಿಯಲ್ಲೂ ಮೈದುನರಾದ ರಾಮಸ್ವಾಮಿ ಮತ್ತು ಸುಬ್ರಮಣ್ಯ ಮದುವೆಯಾದ ಮೇಲೂ ದುಡಿಯುವ ಸತ್ಯವತಿಯ

ಗಂಡ ನಾರಾಯಣಮೂರ್ತಿಯನ್ನೇ ಅವಲಂಬಿಸಿ ಜೀವನ ಸಾಗಿಸುವುದು; ಕುಟುಂಬದ ಜವಾಬ್ದಾರಿಯ ಹೊರೆ ಹೊತ್ತುಕೊಳ್ಳದೆ ದುಷ್ಟ ಹವ್ಯಾಸಗಳಿಗೆ ಬಲಿಯಾಗುವುದು ಮತ್ತು ಮನೆಯ ಸೊಸೆಯಾದ ಸತ್ಯವತಿ ಇವರನ್ನೆಲ್ಲ ಸರಿದಾರಿಗೆ ತರಲು ಹೆಣಗುವುದು-ಇವೆಲ್ಲ ಸಾಂಪ್ರದಾಯಿಕ ಚಿತ್ರಗಳೇ ಆಗಿವೆ.

ಸತ್ಯವತಿಗೆ ಸಾವಿತ್ರಿಗಿಂತ ಸೀತೆಯ ಮೇಲೆ ಹೆಚ್ಚು ಅನುಕಂಪ ಮತ್ತು ಒಲವು ಇದೆ. ಆಕೆ ಆ ಮನೆಯ ಸೊಸೆಯಾಗಿ ಕಾಲಿಡುವ ಮೊದಲೆ ಸಾವಿತ್ರಿಯ ಮದುವೆಯಾಗಿ ಆಕೆ ವಿಧವೆಯಾಗಿದ್ದವಳು. ಸೀತೆಯ ಮದುವೆ ಸತ್ಯವತಿಯ ಕಣ್ಣಮುಂದೆಯೆ ಜರುಗುತ್ತದೆ. ಆದರೆ ಅದನ್ನು ತಡೆಯುವ ಪ್ರಯತ್ನವಾಗಲಿ, ಮುಂದೂಡುವಲ್ಲಿ ಇತರರನ್ನು ಮನವೊಲಿಸುವುದರಲ್ಲಾಗಲಿ, ಯಾವ ಹಂತದಲ್ಲೂ ಸತ್ಯವತಿ ತನ್ನ ಆಧುನಿಕ ಮನೋಭಾವನ್ನು ವ್ಯಕ್ತಪಡಿಸುವುದಿಲ್ಲ. ಆದರೆ ಆಕೆಯ ಮರುವಿವಾಹ ಮಾಡಲು ಸೋಮಸುಂದರನೆಂಬ ಹುಡುಗನನ್ನು ಪತ್ತೆ ಹಚ್ಚಿ ಎಲ್ಲ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುತ್ತಾಳೆ. ಆದರೆ ಸಾಂಪ್ರದಾಯಿಕ ಸಮಾಜದ ಪ್ರತಿಭಟನೆ, ಬಹಿಷ್ಕಾರದಂತಹ ಕಾರ್ಯಗಳನ್ನು ಎದುರಿಸಲು ಹಿಂದೇಟು ಹಾಕುತ್ತಾಳೆ. ಸೀತೆಯ ಬಾಳು ಹಸನಾಗಬೇಕು ಎಂಬುದಕ್ಕಿಂತ ಸಾಂಪ್ರದಾಯಿಕ ಸಮಾಜದ ಒಲವು ನಿಲುವುಗಳು ಮುಖ್ಯವಾಗುವುದನ್ನು ಇಲ್ಲಿ ಗಮನಿಸಬಹುದು. ಕಾದಂಬರಿಯ ಕೊನೆಗೆ ಸೀತೆಯ ವಿಧವಾ ವಿವಾಹ ನಡೆದಲ್ಲಿ ಅದು ಓದುಗರಿಗೆ ತಿಳಿಯುವುದೆಂಬುದು ನಿರೂಪಕನ ಅಸಂಗತ ನಿಲುವಾಗಿದೆ. ಇದು ಕಾದಂಬರಿಕಾರರ ಸುಧಾರಕ ಮನೋಭಾವದ ಪ್ರತೀಕವಾಗಿರಲು ಸಾಧ್ಯವಿಲ್ಲ. ನಿರೂಪಕ ಕಾದಂಬರಿಯ ಆರಂಭದಲ್ಲಿ ಹೇಳಿದ "ಕನ್ಯಾವರರು ಯಾವಜ್ಜೀವವೂ ಸುಖದು:ಖಗಳಿಗೆ ಭಾಗಿಯಾಗಿರಬೇಕು. ಇದು ಸಹಜ" ಎಂಬ ನಿಲುವು ಅಡ್ಡಗೋಡೆಯ ಮೇಲಿನ ಸ್ಥಿತಿಯಂತಾದ ಸೀತೆಯ ವಿಧವಾ ವಿವಾಹವನ್ನು ಇದು ಸಮರ್ಥಿಸುವುದಿಲ್ಲ.

ಈ ಎಲ್ಲ ಸಂದರ್ಭಗಳಲ್ಲಿ ಸುಧಾರಕ ಮನೋಭಾವದವರಾದ ಕಾದಂಬರಿಕಾರ, ನಿರೂಪಕ ಮತ್ತು ಸತ್ಯವತಿ ಪಾತ್ರ ಎಲ್ಲರೂ ಸಾಧಿಸಬೇಕಾದ ಗುರಿ ಕಣ್ಣ ಮುಂದಿದ್ದರೂ ಅದನ್ನು ಸಾಧಿಸಲಾಗದೆ ಹೋಗುತ್ತಾರೆ. ಈ ಮೂಲಕ ಸ್ತ್ರೀಯರ ವಿಧವಾ ಸಮಸ್ಯೆಯನ್ನು ಯಥಾಸ್ಥಿತಿಯಲ್ಲಿಡಲು ಪ್ರಯತ್ನಿಸಿರುವುದು ಮೇಲುನೋಟಕ್ಕೆ ಕಾಣುತ್ತದೆ. ಇದು ಹಿಂಜರಿಕೆಯಂತೆ ಕಂಡರೂ ಸಾಂಪ್ರದಾಯಿಕ ಜೀವನದೊಂದಿಗೆ ಮಾಡಿಕೊಂಡ ಸಂಧಾನವಾಗಿದೆ.

ಸ್ತ್ರೀಯರ ಶಿಕ್ಷಣದಿಂದ ಮಹಿಳೆಯರಲ್ಲಿ ಉಂಟಾಗಬಹುದಾದ ಜಾಗೃತಿ ಅವರು ಎದುರಿಸುತ್ತಿದ್ದ ಹಲವಾರು ಬಗೆಯ ಸಮಸ್ಯೆಗಳಿಗೆ ಸಮರ್ಥ ಉತ್ತರವಾಗಬಹುದೆಂಬುದು ಸಮಾಜ ಸುಧಾರಕರ ನಿರೀಕ್ಷೆಯಾಗಿತ್ತು. ಸತ್ಯವತಿ ಸ್ತ್ರೀ ಶಿಕ್ಷಣ ಪಡೆದ ಮಹಿಳೆಯರ ಪ್ರತೀಕವಾಗಿ ಚಿತ್ರಿತವಾಗಿದೆ. ಆದರೂ ಆಕೆಯ ಆಧುನಿಕ ಮನೋಭಾವ ಸಾಂಪ್ರದಾಯಿಕ ಜೀವನ ಮೌಲ್ಯಗಳೊಂದಿಗೆ ತಾಕಲಾಟ ನಡೆಸಲಾಗದೆ ಅವನ್ನು ಒಪ್ಪಿಕೊಳ್ಳುತ್ತದೆ. ಈ ಕೃತಿಯ ನಾಯಕಿಯ ಪಾತ್ರದ ಮೂಲಕ ಆದರ್ಶೀಕರಿಸ

ಬಯಸಿದ ಆಧುನಿಕತೆಯ ಜೀವನ ಮೌಲ್ಯಗಳು ಆಕೆ ಸಾಂಪ್ರದಾಯಿಕ ಜೀವನ ಮೌಲ್ಯಗಳೊಂದಿಗೆ ರಾಜಿ ಸಂಧಾನ ಮಾಡಿಕೊಳ್ಳುವುದರ ಮೂಲಕ ಇಡೀ ಕಾದಂಬರಿ ಪ್ರಗತಿಪರ ಧೋರಣೆಯನ್ನು ಬಿಟ್ಟು ಕೊಟ್ಟು ಗತಿಹೀನವಾದ ಚಿತ್ರ ಓದುಗರ ಮುಂದೆ ನಿಲ್ಲುತ್ತದೆ.

ಹಾಗಾಗಿ ಈ ಕಾದಂಂಬರಿಯಲ್ಲಿ ಸ್ತ್ರೀಯರ ಸಮಸ್ಯೆ ಕುರಿತು ಪ್ರಗತಿಪರ ಧೋರಣೆಯನ್ನು ಬಿಂಬಿಸುವಂತೆ ತೋರಿಸುವ ಆದರೆ ತನ್ನ ಆಳದಲ್ಲಿ ಸಾಂಪ್ರದಾಯಿಕ ಜೀವನ ಮೌಲ್ಯಗಳನ್ನು ಕದಲಿಸಲು ಬಯಸದ ಸಂಪ್ರದಾಯ ಪರವಾದ ನಿಲುವು ಇದೆ. ಸ್ತ್ರೀಪರ ಆಶಯಗಳು ಸ್ತ್ರೀ ವಿರೋಧಿ ನೆಲೆಯಲ್ಲಿಯೇ ತನ್ನ ಅಸ್ತಿತ್ವ ಕಳೆದುಕೊಂಡಂತೆ ತೋರಿಬರುತ್ತದೆ.

೩. ಅಹಲ್ಯಾಬಾಯಿ

ಚರಿತ್ರೆ ಗತಿಸಿ ಹೋದ ಸಮಾಜದ ಯಥಾವತ್ತು ಚಿತ್ರಣವಲ್ಲ, ಆದರೂ ಗತಕಾಲದ ಆಕರಗಳನ್ನಾಧರಿಸಿದ ದಾಖಲೆಗಳ ಒಂದು ನಿರ್ಮಾಣ. ಸಾಹಿತ್ಯ ಲೇಖಕನ ಆಲೋಚನ ಮತ್ತು ಭಾವನಾ ಜಗತ್ತಿನ ರೂಪಕ. ಆತನ ಕಲ್ಪನಾ ಶಕ್ತಿಗೆ ಅನುಗುಣವಾಗಿ ರಚಿಸಿದ ವಾಸ್ತವವಲ್ಲದ ಕೃತಿ. ಹೀಗಿದ್ದರೂ ಸಾಹಿತ್ಯ ಕೃತಿಯೊಂದು ತನ್ನ ಸಮಕಾಲೀನ ಸಮಾಜದ ಸ್ಥಿತಿಗತಿಗಳನ್ನು ಬಿಂಬಿಸುವ ಪ್ರತಿಕೃತಿಯೂ ಅಗಿರುತ್ತದೆ. ಲೇಖಕ ತನ್ನ ವೈಯಕ್ತಿಕ ಜೀವನದ ಅನುಭವ, ಕಲ್ಪನೆ, ಸಾಮಾಜಿಕ ಅನುಭವಗಳೆಲ್ಲವನ್ನು ತನ್ನ ಆಶಯಕ್ಕೆ ಅನುಗುಣವಾಗಿ ಹದವಾಗಿ ಬೆರೆಸಿದ ಕಲ್ಪನಾ ಚಿತ್ರವಾಗಿರುತ್ತದೆ. ಒಂದು ಐತಿಹಾಸಿಕ ಕಾದಂಬರಿ ಮೂಲತಃ ಸಾಹಿತ್ಯ ಕೃತಿಯಾಗಿದೆ. ಲೇಖಕನ ಆಲೋಚನಾ ಮತ್ತು ಭಾವನಾ ಗತಿಗೆ ಅನುಗುಣವಾಗಿ, ತನ್ನ ಸ್ವಾನುಭವ ಮತ್ತು ಸಾಮೂಹಿಕ ಅನುಭವದ ಹಿನ್ನೆಲೆಯಲ್ಲಿ, ಸಮಕಾಲೀನ ಸಮಾಜದ ಸಮಸ್ಯೆಯನ್ನು ಐತಿಹಾಸಿಕ ನೆಲೆಯಲ್ಲಿ ಮಂಡಿತವಾಗಿರುತ್ತದೆ. ಅದು ಕಾಣಿಸುವ ಆಶಯ ಈಗಾಗಲೇ ಘಟಿಸಿ ಹೋದ ಕಾಲ ಮತ್ತು ಸಂಗತಿಯಿಂದ ಪ್ರತಿಪಾದಿತವಾದ ಸತ್ಯ ಎಂದು ನಂಬಿಸುವ ವಿಧಾನವನ್ನು ಅನುಸರಿಸಿರುತ್ತದೆ. ಹಾಗಾಗಿ ಐತಿಹಾಸಿಕ ಕಾದಂಬರಿ ಎಂದ ಕೂಡಲೆ ಓದುಗನಿಗೆ ಈ ಹಿಂದೆ ಘಟಿಸಿದ ಸಂಗತಿಗಳನ್ನು ಆಧರಿಸಿ, ಅದನ್ನೆ ಮರುಕಟ್ಟಿ ಕೊಟ್ಟ ಕಥನ ನಿರೂಪಣೆಯೆಂದು ನಂಬಿಕೆ ಹುಟ್ಟುತ್ತದೆ. ವಾಸ್ತವದಲ್ಲಿ ಇತಿಹಾಸವೆ ಇತಿಹಾಸ ಬರಹಗಾರನ ದೃಷ್ಟಿಕೋನಕ್ಕನುಗುಣವಾಗಿ ರಚಿತವಾದುದ್ದಾಗಿದೆ. ಇತಿಹಾಸ ದಾಖಲಿಸಿದ ಪ್ರಮುಖ ಘಟನೆಗಳಲ್ಲಿ ಆ ಕಾಲದಲ್ಲಿ ವಾಸ್ತವವಾಗಿದ್ದ ಹಲವಾರು ಆಯಾಮಗಳು ಮರೆಮಾಚಿ ಹೋಗಿರುತ್ತವೆ. ಒಬ್ಬ ಕಾದಂಬರಿಕಾರ ತಾನು ಆಯ್ಕೆ ಮಾಡಿಕೊಂಡ ಕಥಾವಸ್ತು ಮತ್ತು ಆಶಯಗಳಿಗನುಗುಣವಾಗಿ ಪೂರಕವಾದ ಐತಿಹಾಸಿಕ ಸಂದರ್ಭವನ್ನು ಆರಿಸಿಕೊಂಡು ತನ್ನ ಸಮಕಾಲೀನ ಸಮಾಜದ ಅನುಭವಗಳು, ಆಶಯಗಳು, ಸಮಸ್ಯೆಗಳಿಗೆ ಅನುಗುಣವಾಗಿ ತನ್ನ ಕೃತಿಯನ್ನು ಮರು ರೂಪಿಸುತ್ತಾನೆ. ಅಂದರೆ ಇತಿಹಾಸದಲ್ಲಿ ದಾಖಲಾದ ಗತಕಾಲದ ಘಟನೆ, ಕಾದಂಬರಿಯ ಚೌಕಟ್ಟು ಮತ್ತು

ಸಮಕಾಲೀನ ಸಮಾಜ ಈ ಮೂರೂ ಅಂಶಗಳು ಪರಸ್ಪರ ವಾಸ್ತವವೂ ಅಲ್ಲದ ಪೂರಕವೂ ಅಲ್ಲದ, ಘಟಿಸಿದ ಘಟನೆಯೂ ಅಲ್ಲದೆ ಇರುವುದನ್ನು ವಾಸ್ತವವೂ, ಪರಸ್ಪರ ಪೂರಕವೂ ಮತ್ತು ಘಟಿಸಿದುದೂ ಎಂದು ನಂಬಿಸುತ್ತದೆ. ಹೀಗೆ ಐತಿಹಾಸಿಕ ಕಾದಂಬರಿಯೆಂದು ಹೆಸರಿಸಲಾದ ಕಲಾಕೃತಿಯಲ್ಲಿ ಸಮಾನ ಹೋಲಿಕೆಯ ಅಂಶಗಳು ಪರಸ್ಪರ ಸಂಬಂಧ ಪಡದಿದ್ದರೂ ಸಂಬಂಧ ಪಟ್ಟಂತೆ ರಚನೆಯಾಗಿರುತ್ತವೆ.. ಈ ಹಿನ್ನೆಲೆಯಲ್ಲಿ ಅಹಲ್ಯಾಬಾಯಿ ಹೋಳ್ಕರ್ ಕುರಿತ ಕಾದಂಬರಿಯ ವಸ್ತು ಆಶಯವನ್ನು ಪರಿಶೀಲಿಸಲು ಇತಿಹಾಸ ಪುಟಗಳ ವಿವರವನ್ನು ಅಗತ್ಯವಾಗಿ ನೋಡಬಹುದು.

ಅಹಲ್ಯಾಬಾಯಿ ಹೋಳ್ಕರ್– ಇಂದಿನ ಮಹಾರಾಷ್ಟ್ರದ ಚೌಂಡಿ ಎಂಬ ಹಳ್ಳಿಯಲ್ಲಿ ಕ್ರಿ.ಶ.೧೭೨೫ ಮೇ ೩೧ ರಂದು ಧನಗರ್(ದನಕಾಯುವ) ಕುಟುಂಬದಲ್ಲಿ ಹಳ್ಳಿಯ ಪಾಟೀಲನಾಗಿದ್ದ ಮಿಂಕೋಜಿ ಶಿಂಧೆಯ ಮಗಳಾಗಿ ಹುಟ್ಟಿದಳು. ಅವಳು ಸಾಂಪ್ರದಾಯಿಕ ಶಿಕ್ಷಣ ಪಡೆಯಲಿಲ್ಲವಾದರೂ ಅವಳ ತಂದೆಯೇ ಆಕೆಗೆ ಓದು–ಬರಹ ಕಲಿಸಿದನು. ದಂತಕಥೆಯ ಪ್ರಕಾರ ಪೇಶ್ವೆ ಬಾಜಿರಾಯನ ಸೈನ್ಯದಲ್ಲಿ ದಳಪತಿಯಾಗಿದ್ದ ಮಲ್‌ಹರ್‌ರಾವ್ ಹೋಳ್ಕರ್ ಮಾಳ್ವದಿಂದ ಪುಣೆಗೆ ಹೋಗುವ ಮಾರ್ಗದಲ್ಲಿ ಚೌಂಡಿಯಲ್ಲಿ ಒಮ್ಮೆ ತಂಗಿದನು. ಆಗ ಆ ಹಳ್ಳಿಯ ಗುಡಿಯಲ್ಲಿ ಎಂಟು ವರ್ಷದ ಅಹಲ್ಯಾಬಾಯಿ ಧಾರ್ಮಿಕ ಶ್ರದ್ಧೆ ಮತ್ತು ಭಕ್ತಿಯಿಂದ ಸೇವೆ ಸಲ್ಲಿಸುತ್ತಿದ್ದಳು. ಅದನ್ನು ಕಂಡ ಮಲ್‌ಹರ್‌ರಾವ್ ತನ್ನ ಮಗ ಖಂಡೇರಾವನಿಗೆ ಹೆಂಡತಿಯಾಗಿ ತಂದುಕೊಳ್ಳಲು ಅವಳನ್ನು ತನ್ನೊಂದಿಗೆ ಕರೆದುಕೊಂಡು ಹೋದನು. ೧೭೩೩ರಲ್ಲಿ ಖಂಡೇರಾವ್‌ನೊಂದಿಗೆ ಅವಳನ್ನು ಮದುವೆ ಮಾಡಿದನು. ಖಂಡೇರಾವ್ ೧೭೫೪ರಲ್ಲಿ ನಡೆದ ಕುಂಭೇರ್ ಯುದ್ಧದಲ್ಲಿ ಭಾಗವಹಿಸಿ ಸಾವನ್ನಪ್ಪಿದನು. ಗಂಡ ತೀರಿದ ೧೨ ವರ್ಷದ ನಂತರ (೧೭೬೬) ಮಾವ ಮಲ್‌ಹರ್‌ರಾವ್ ಹೋಳ್ಕರ್ ಕಾಲವಶನಾದನು. ಅದರ ಮುಂದಿನ ವರ್ಷವೆ (೧೭೬೭) ಅಹಲ್ಯಾಬಾಯಿ ಮಾಳ್ವ ರಾಜ್ಯದ ರಾಣಿಯಾಗಿ ಪಟ್ಟಾಭಿಷಿಕ್ತಳಾದಳು. ಅವಳು ತನ್ನ ಆಳ್ವಿಕೆಯಲ್ಲಿ ಥಗ್ಗರು ಮತ್ತು ದರೋಡೆಕೋರರ ಉಪಟಳವನ್ನು ಯಶಸ್ವಿಯಾಗಿ ಬಗ್ಗು ಬಡಿದಳು. ತನ್ನ ಸೇನಾಧಿಪತಿಯಾಗಿ ತುಕೋಜಿರಾವ್ ಹೋಳ್ಕರ್‌ನನ್ನು ನೇಮಿಸಿಕೊಂಡಳು. ತನ್ನ ರಾಜ್ಯದಲ್ಲಿ ವಿಧವೆಯರಾದ ಹೆಣ್ಣುಮಕ್ಕಳಿಗೆ ಗತಿಸಿ ಹೋದ ತಮ್ಮ ಗಂಡನ ಆಸ್ತಿಯನ್ನು ಪಡೆಯಲು ಮತ್ತು ದತ್ತು ಪುತ್ರನನ್ನು ನೇಮಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಳು. ತಾನು ಜುಲೈ೧೩,೧೭೯೫ರಂದು ಮರಣ ಹೊಂದುವವರೆಗೆ ಆಳ್ವಿಕೆ ನಡೆಸಿ ಜನಹಿತ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಳು. ಆಕೆ ತನ್ನ ರಾಜ್ಯದಲ್ಲಷ್ಟೇ ಅಲ್ಲದೆ ರಾಜ್ಯದ ಹೊರಗೂ ದೇಶದ ಎಲ್ಲ ಪ್ರಮುಖ ಯಾತ್ರಾಸ್ಥಳಗಳಲ್ಲಿ ಪ್ರವಾಸಿಗರಿಗೆ ಉಚಿತ ಛತ್ರಗಳನ್ನು ನಿರ್ಮಿಸಿದಳು. ತನ್ನ ರಾಜಧಾನಿಯನ್ನು ಮಾಳ್ವದಿಂದ ಇಂದೋರಿನ ನರ್ಮದಾ ತೀರದ ಮಾಹೇಶ್ವರಕ್ಕೆ ಬದಲಾಯಿಸಿದಳು. ಅಲ್ಲಿ ಭದ್ರವಾದ ಕೋಟೆಯೊಂದನ್ನು ಕಟ್ಟಿಸಿದಳು.

ತನ್ನ ಎಂಟನೆ ವಯಸ್ಸಿನಲ್ಲಿಯೇ ಮದುವೆಯಾದ ಆಕೆ ಜೀವಮಾನವಿಡೀ ವೀರ ವನಿತೆಯಾಗಿ ಬಾಳಿದಳು. ಯುದ್ಧಗಳಲ್ಲಿ ತಾನೇ ನೇರವಾಗಿ ಪಾಲ್ಗೊಳ್ಳುತ್ತಿದ್ದಳು. ಅವಳ ಹೆಸರಲ್ಲಿ ದೇವಾಲಯವನ್ನು ನಿರ್ಮಿಸಿದ ಜನತೆ ಇಂದಿಗೂ ಅವಳನ್ನು ಪೂಜಿಸುವರೆಂದು ಇತಿಹಾಸದ ಪುಟಗಳಲ್ಲಿ ಉಲ್ಲೇಖವಿದೆ. ಐತಿಹಾಸಿಕವಾದ ಈ ಅಂಶಗಳು ಕಾದಂಬರಿಯ ರೂಪದಲ್ಲಿ ಹಲವಾರು ಬದಲಾವಣೆಗೆ ಒಳಗಾಗಿರುವುದನ್ನು ಕಾಣಬಹುದು.

ಸ್ತ್ರೀಯರ ಉನ್ನತ ಅಧಿಕಾರ ಮತ್ತು ಪುರುಷಾಧಿಕಾರ

ಅಹಲ್ಯಾಬಾಯಿ ತಾನು ಮದುವೆಯಾದ ಎಳೆಯ ವಯಸ್ಸಿನಲ್ಲಿಯೇ ರಾಜನೂ ಮುದುಕನೂ ಆಗಿದ್ದ ಗಂಡನನ್ನೂ ಜೊತೆಗೆ ತನ್ನ ಮಗನನ್ನೂ ಕಳೆದುಕೊಂಡಳು. ಆ ದುಃಖದ ಸಂದರ್ಭದಲ್ಲಿ ಮೈದುನ ದೌಲತ್‌ರಾವ್ ರಾಜ್ಯದ ಉತ್ತರಾಧಿಕಾರಿಯಾಗಲು ಪುರುಷ ಸಮಾಜದ ಎಲ್ಲ ಸಾಮಾಜಿಕ ನಿಯಮಗಳನ್ನು ಬಳಸಿಕೊಳ್ಳುತ್ತಾನೆ. ತನ್ನ ಪರವಾಗಿ ಮಾತಾಡುವ ಜನರನ್ನು ಎತ್ತಿಕಟ್ಟುತ್ತಾನೆ. ಆದರೆ ಅಹಲ್ಯಾಬಾಯಿ ತನ್ನ ಗಂಡನ ಕನಸಿನಂತೆ ರಾಜ್ಯವನ್ನು ತಾನೇ ಆಳಬೇಕೆಂದು ಬಯಸುತ್ತಾಳೆ. ಪುರುಷಪರ ನಿಲುವುಗಳನ್ನು ವಿರೋಧಿಸದೆಯೇ ಅವುಗಳ ಮೇಲೆ ಮೇಲುಗೈ ಸಾಧಿಸುತ್ತಾಳೆ. ತಾನು ತನ್ನ ಗಂಡನ ಆಸೆಯನ್ನು ಪೂರೈಸಲು ರಾಜ್ಯದ ಅಧಿಕಾರ ಕೈಗೆತ್ತಿಕೊಂಡಿರುವುದಾಗಿಯೂ ಈ ದೇಶದ ರಾಜ ತನ್ನ ಗಂಡನೇ ಆಗಿದ್ದಾನೆಂದೂ ವಾದಿಸುತ್ತಾಳೆ. ಪತಿಯ ಪರವಾಗಿ ತಾನು ರಾಜ್ಯಭಾರ ನಡೆಸುತ್ತಿದ್ದರೂ ಅದು ಸ್ತ್ರೀಯರ ಸಾಮ್ರಾಜ್ಯವಲ್ಲವೆಂದೂ ಪ್ರತ್ಯುತ್ತರ ನೀಡಿ ಪುರುಷಪರ ರಾಜಕಾರಣಗಳನ್ನು ಒಡೆದು ಹಾಕುತ್ತಾಳೆ. ಅಹಲ್ಯಾಬಾಯಿ ಗಂಡನನ್ನು ಕಳೆದುಕೊಂಡ ವಿಧವೆಯಾಗಿ, ಮಗನನ್ನು ಕಳೆದುಕೊಂಡ ಅನಾಥೆಯಾಗಿ, ಮಾವನನ್ನು ಕಳೆದುಕೊಂಡ ನಿರಾಶ್ರಿತೆಯಾಗಿ ದುಃಖದ ಆಳದಲ್ಲಿ ಮುಳುಗಿ ಹೋಗಿರುತ್ತಾಳೆ. ಆದರೂ ಆಕೆ ದೇಶವಾಳುವ ದುರಾಸೆ ಹೊತ್ತ ಹೆಣ್ಣಾಗಿದ್ದಾಳೆಂಬ ದೌಲತ್‌ರಾವ್‌ನ ಆರೋಪಗಳಿಗೆ ಮೌನವಾಗಿಯೆ ಪ್ರತಿಕ್ರಿಯಿಸುತ್ತಾಳೆ. ಅಹಲ್ಯಾಬಾಯಿಯಂತಹ ದುರಾದೃಷ್ಟದ ಹೆಣ್ಣು ದೇಶವನ್ನು ಮುನ್ನಡೆಸುವ ಸ್ಥಾನದಲ್ಲಿ ಇರುವುದರಿಂದ ದೇಶ ದುರವಸ್ಥೆಗೆ ಈಡಾಗುತ್ತದೆ. ಇಂತಹ ಕಳಂಕಿತ ಹೆಣ್ಣಿನ ರಾಜ್ಯಭಾರದಲ್ಲಿ ಗಂಡಸರು ಯಾರೂ ಅವಳ ಅಧಿಕಾರವನ್ನು ಸಹಿಸಿಕೊಳ್ಳುವುದು ಸಾಧ್ಯವಿಲ್ಲ. ಆಕೆಗೆ ಅಧೀನರಾಗಿ ಗುಲಾಮರಾಗಿರಲು ಆಗದು. ರಾಜಮನೆತನದಲ್ಲಿ ರಾಜನ ತಮ್ಮಂದಿರೇ ಇರಬೇಕಾದರೆ ವಿಧವೆ ಅಹಲ್ಯಾಬಾಯಿಯ ಅಧಿಕಾರ ದಾಹ ಪ್ರಶ್ನಾರ್ಹವಾಗಿದೆ. ಇಂಥ ಪುರುಷಪರ ವಿಚಾರವನ್ನು ಆಕೆ ಲೆಕ್ಕಿಸದೆ ಆಡಳಿತದಲ್ಲಿ ಮುಂದುವರಿಯುತ್ತಾಳೆ.

ಸೈನಿಕರಾದ ಶ್ಯಾಮಸುಂದರ ದತ್ತ ಮತ್ತು ರಾಧಾಕಾಂತಾರಾವ್ ಅಹಲ್ಯಾಬಾಯಿಯ ಜೀವಕ್ಕೆ ಅಪಾಯ ಎದುರಾದಾಗ ಹಲವು ಬಾರಿ ಕಾಪಾಡುತ್ತಾರೆ. ಅವಳು ದೇಶ ಪರಿಪಾಲನೆ ಮಾಡುವುದನ್ನು ಪ್ರೋತ್ಸಾಹಿಸುತ್ತಾರೆ. ಅವಳಲ್ಲಿ ಧೈರ್ಯ, ಸಾಹಸ, ಉತ್ಸಾಹಗಳನ್ನು ತುಂಬಿ ಅವಳಿಗೆ ಬೆನ್ನೆಲುಬಾಗಿ ನಿಲ್ಲುತ್ತಾರೆ.

ಅಹಲ್ಯಾಬಾಯಿಯ ಸೇನಾಧಿಪತಿ ಜಸ್ವಂತ್‌ಸಿಂಗ್ ಮೈದುನ ದೌಲತ್‌ರಾವ್‌ನ ಕೂಟ ಸೇರುತ್ತಾನೆ. ಅಹಲ್ಯಾಬಾಯಿಯ ಆಳ್ವಿಕೆಯನ್ನು ಕೀಳು ದೃಷ್ಟಿಯಿಂದ ಕಾಣುತ್ತಾನೆ. ತಾವು ಪುರುಷರ ಹಿರಿಮೆಯನ್ನು ಸಾರುವಂಥವರಾಗಿ ಹೆಣ್ಣಿನ ಆಡಳಿತದಲ್ಲಿ ಆಕೆಯ ಗುಲಾಮರಾಗಿರುವ ಸ್ಥಿತಿಯನ್ನು ವಿರೋಧಿಸುತ್ತಾರೆ. ಹೇಗಾದರೂ ಮಾಡಿ ಅವಳನ್ನು ಸಿಂಹಾಸನದಿಂದ ಕೆಳಗಿಳಿಸಬೇಕೆಂದು ಸಂಚು ಹೂಡುತ್ತಾರೆ.

ಇಡೀ ರಾಜ್ಯದಲ್ಲಿ ಶಾಂತಿ ಮತ್ತು ಭದ್ರತೆ ನೆಲೆಸಿರಲು ಶ್ಯಾಮಸುಂದರದತ್ತನೇ ಕಾರಣನಾಗಿದ್ದಾನೆ. ಅವನ ಬಲದಿಂದಲೇ ಅಹಲ್ಯಾಬಾಯಿ ಯಶಸ್ವಿಯಾಗಿ ರಾಜ್ಯಭಾರ ನಡೆಸಲು ಕಾರಣವಾಗಿದೆ. ಇದನ್ನು ಆಧರಿಸಿ ರಾಣಿಯ ಕಣ್ಣಲ್ಲಿ ಅವನನ್ನು ದುಷ್ಟನನ್ನಾಗಿ ಮಾಡಲು ಉಪಾಯ ಮಾಡುತ್ತಾರೆ. ಶತ್ರು ರಾಜರು ತಮ್ಮ ರಾಜ್ಯದ ಮೇಲೆ ದಾಳಿ ಮಾಡಲು ಚಿತಾವಣೆ ನಡೆಸಿ ಅವರನ್ನು ಹುರಿದುಂಬಿಸುತ್ತಾರೆ. ಆದರೆ ಅದಕ್ಕೆ ಶ್ಯಾಮಸುಂದರದತ್ತ ಕಾರಣನಾಗಿರುವನೆಂದು ರಾಣಿಯಲ್ಲಿ ದೂರುತ್ತಾರೆ. ಸುಳ್ಳು ಆರೋಪದ ಮೇಲೆ ಸೆರೆಮನೆ ಸೇರಿದ ಶ್ಯಾಮಸುಂದರ ದತ್ತನಿಗೆ ರಾಣಿಯ ವಿರುದ್ಧ ದಂಗೆಯೇಳಲು ದೌಲತ್‌ರಾವ್ ಪ್ರೇರೇಪಿಸುತ್ತಾನೆ. ಶ್ಯಾಮಸುಂದರ ದತ್ತ ಅಹಲ್ಯಾಬಾಯಿಯ ನಿರ್ಧಾರದಿಂದ ತೊಂದರೆಗೆ ಒಳಗಾಗಿದ್ದರೂ ತನ್ನ ರಾಣಿಯ ಬೆನ್ನುಗಾವಲಿಗೆ ಸದಾ ನಿಲ್ಲುತ್ತಾನೆ. ಇದರಿಂದ ಅಹಲ್ಯಾಬಾಯಿ ವಿರುದ್ಧದ ಪುರುಷಶಾಹಿಯ ಸಂಚುಗಳೆಲ್ಲ ವಿಫಲವಾಗುತ್ತವೆ.

ಅಹಲ್ಯಾಬಾಯಿ ಪುರುಷಾಧಿಕಾರವನ್ನು ಪ್ರಶ್ನೆ ಮಾಡದಿದ್ದರೂ ಪುರುಷಶಾಹಿ ರಾಜ್ಯದ ಉನ್ನತ ಸ್ಥಾನದಲ್ಲಿ ಸ್ತ್ರೀಯೊಬ್ಬಳು ಅಧಿಕಾರದಲ್ಲಿರುವುದನ್ನು ಸಹಿಸದೆ ಸಂಘರ್ಷಕ್ಕಿಳಿಯುತ್ತದೆ. ಪುರುಷ ಸಮಾಜದಲ್ಲಿ ಪುರುಷಪರ ಮೌಲ್ಯಗಳು ಸ್ತ್ರೀಯರು ತಮ್ಮ ಅಧೀನದಲ್ಲೇ ಉಳಿಯಬೇಕೆಂದು ಬಯಸುತ್ತವೆ. ಹಾಗಾಗಿ ಅವಳ ವಿರುದ್ಧ ತಾನೇ ಸದಾ ಕುದಿವ ಬಿಂದುವಾಗಿ ಸೆಣಿಸುತ್ತಲೆ ಇರುತ್ತದೆ. ಅಹಲ್ಯಾಬಾಯಿ ಆಳ್ವಿಕೆ ವಿರುದ್ಧದ ಸಂಘರ್ಷದ ಸಂಕೇತಕ್ಕೆ ನಿದರ್ಶನವಾಗಿ ಪುರುಷಾಧಿಕಾರ ನಿಲ್ಲುತ್ತದೆ. ಅದು ಸ್ತ್ರೀಯರ ನಿರ್ವ್ಯಾಜ್ಯ ಸ್ವಭಾವದಿಂದಾಗಿಯೆ ಸೋಲನ್ನೂ ಅನುಭವಿಸುತ್ತದೆ ಎಂದೂ ಕಾಣಿಸಿದೆ.

ಉನ್ನತ ಸ್ಥಾನದ ಅಧಿಕಾರಗಳನ್ನು ನಿರ್ವಹಿಸಲು ಸಾಮಾಜಿಕ ನಿಯಮಗಳು ಅರ್ಹತೆಯನ್ನಾಗಲಿ, ಅನರ್ಹತೆಯನ್ನಾಗಲಿ ಉಂಟುಮಾಡದೆ ವ್ಯಕ್ತಿಯ ಘನ ವ್ಯಕ್ತಿತ್ವವನ್ನು ಅವಲಂಬಿಸಿರುತ್ತದೆ. ಸ್ತ್ರೀಯರ ಕುರಿತ ಸಾಮಾಜಿಕ ನಿಯಮಗಳು ಸ್ತ್ರೀಯರು ಹುಟ್ಟಿನಿಂದ ಪಡೆದುಬಂದ ಶಕ್ತಿ, ಸಾಮರ್ಥ್ಯ, ಅರ್ಹತೆಗಳನ್ನು ದಮನದಲ್ಲಿಡುವ ಉಪಕರಣಗಳಾಗಿ ಇರುವುದನ್ನು ಕಾಣಿಸುತ್ತದೆ. ಅವು ಎಂದಿಗೂ ಸ್ತ್ರೀಯರ ಪರವಾಗಿ ಕನಿಷ್ಟ ಸಹಾನುಭೂತಿಯನ್ನು ಕೂಡ ತೋರದಷ್ಟು ಕ್ರೌರ್ಯವಾಗಿ ವರ್ತಿಸುತ್ತವೆ. ಸ್ತ್ರೀಯರು ದುರ್ಬಲರಾಗದೆ ಪ್ರಬಲರಿದ್ದಲ್ಲಿ ಅವರ ವಿರುದ್ಧ ಪುರುಷಪರ ನಿಲುವುಗಳು ಮೊಂಡಾಗಿಬಿಡುವ ರೀತಿಯನ್ನು ಅಹಲ್ಯಾಬಾಯಿ ಕಾದಂಬರಿಯಲ್ಲಿ ಕಾಣಬಹುದು. ಅಹಲ್ಯಾಬಾಯಿ ತನ್ನ ಪುರುಷ

ಸಮಾಜದ ರೀತಿನೀತಿಯಂತೆ ಬಾಲ್ಯವಿವಾಹಿತೆಯಾಗಿ, ವಿಧವೆಯಾಗಿ, ಶೋಷಿತೆಯಾಗಿ ತನ್ನ ಮೇರು ವ್ಯಕ್ತಿತ್ವದಿಂದ ಅವನ್ನೆಲ್ಲ ಮೀರುವ ಕ್ರಮ ಸಾಂಪ್ರದಾಯಿಕ ಸ್ತ್ರೀಯರಿಗೆ ಆದರ್ಶವಾಗಿ ಚಿತ್ರಿತವಾಗಿದೆ. ಆಕೆಯ ಸ್ತ್ರೀ ಪರ ಧೋರಣೆ ಕಮಲೆಗೆ ನ್ಯಾಯ ಒದಗಿಸುವುದರ ಮೂಲಕ ಕಾಣುವುದು.

ಸ್ತ್ರೀಯರ ಅಸ್ತಿತ್ವ ಮತ್ತು ಪುರುಷಜೀವನ ಮೌಲ್ಯಗಳ ವಿರುದ್ಧ ಪುರುಷ ಪರಜೀವನ ಮೌಲ್ಯಗಳು

ಅಹಲ್ಯಾಬಾಯಿ ಉನ್ನತ ಅಧಿಕಾರ ಪಡೆದ ಮಹಿಳೆಯಾಗಿದ್ದರೆ ಕಮಲಾ ಸಾಮಾನ್ಯ ಮಹಿಳೆಯಾಗಿದ್ದಾಳೆ. ಅಹಲ್ಯಾಬಾಯಿಯ ಮಗಳ ಗೆಳತಿಯಾಗಿ ಆಕೆಯನ್ನು ಕಾದಂಬರಿ ಪರಿಚಯಿಸುತ್ತದೆ. ಆಕೆ ತನ್ನ ಚಿಕ್ಕ ವಯಸ್ಸಿನಲ್ಲಿಯೆ ರಾಜ ಪರಿವಾರದವರಿಂದ ಅಪಹರಣಕ್ಕೊಳಗಾಗಿ ಅರಮನೆ ಸೇರುತ್ತಾಳೆ. ಆಕೆಯನ್ನು ಅಪಹರಿಸಿದಾತ ತನ್ನನ್ನು ಮದುವೆಯಾಗೆಂದು ಒತ್ತಾಯ ಪಡಿಸುತ್ತಿದ್ದನಾದರೂ ಕೆಲಕಾಲದಲ್ಲೆ ಮರಣವನ್ನಪ್ಪುತ್ತಾನೆ. ಅರಮನೆಯಲ್ಲಿನ ಬಹಳಷ್ಟು ಪುರುಷರು ಆಕೆಯಿಂದ ಆಕರ್ಷಿತರಾಗುತ್ತಾರೆ. ಅವರಲ್ಲಿ ಅಹಲ್ಯಾಬಾಯಿಯ ಮೈದುನ ದೌಲತ್‌ರಾವ್ ಕೂಡ ಒಬ್ಬ. ಕಮಲೆ ಪುರುಷರ ಉಪಟಳದಿಂದ ತಪ್ಪಿಸಿಕೊಳ್ಳಲು ತಾನು ಯಾರ ಹೆಂಡತಿಯಲ್ಲದಿದ್ದರೂ ತನ್ನನ್ನು ಅರಮನೆಗೆ ಕರೆದು ತಂದ ವ್ಯಕ್ತಿಯನ್ನೇ ಗಂಡನೆಂದು ಹೇಳಿಕೊಂಡು ವಿಧವೆಯಂತೆ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಿರುತ್ತಾಳೆ. ದೌಲತ್‌ರಾವ್ ಆಕೆಯನ್ನು ವಿಧವೆ ಎಂದು ನಂಬಿದರೂ ಕನ್ಯೆಯೆಂದೆ ವಾದಿಸಿ ವಿವಾಹ ಮಾಡಿಕೊಳ್ಳಲು ಜಾಲ ಹೆಣೆಯುತ್ತಾನೆ.

ರಾಣಿ ಅಹಲ್ಯಾಬಾಯಿ ತನ್ನ ಸಮಕಾಲೀನ ಸಮಾಜದ ರೀತಿ–ನೀತಿಯಂತೆ ವಿಧವಾ ವಿವಾಹವನ್ನು ಸಮರ್ಥಿಸುವುದಿಲ್ಲ. ಕಮಲೆ ಕುರಿತು ತನ್ನ ಮೂಗಿನ ನೇರಕ್ಕೆ ಮಂಡಿಸಿದ ಯಾವ ಮಾತನ್ನು ನಂಬುವುದಿಲ್ಲ. ಅಲ್ಲದೆ ವಿಧವೆ ಕಮಲೆಯೊಂದಿಗೆ ವಿವಾಹವಾಗಲು ದೌಲತ್‌ರಾವ್ ಒಪ್ಪಿಗೆ ನೀಡುವುದಿಲ್ಲ. ದೌಲತ್‌ರಾವ್ ತನ್ನ ಆಟ ನಡೆಯದಂತಾದಾಗ ಅಹಲ್ಯಾಬಾಯಿ ಮೇಲೆ ಕುಪಿತಗೊಂಡು ಅವಳನ್ನು ಕೊಲ್ಲುವ ವಿಫಲ ಪ್ರಯತ್ನ ಮಾಡುತ್ತಾನೆ. ಕಮಲೆ ಪುರುಷವೇಷ ಧರಿಸಿ ದೌಲತ್‌ರಾವ್‌ನ ಹಿಡಿತದಿಂದ ಪಾರಾಗುವ ಪ್ರಯತ್ನದಲ್ಲಿ ಅವನ ಸೈನ್ಯ ಸೇರಿಕೊಳ್ಳುತ್ತಾಳೆ. ಊರು ಬಿಟ್ಟು ಕಾಡು ಸೇರುತ್ತಾಳೆ. ಸ್ತ್ರೀಯರ ಪ್ರಾಕೃತಿಕ ಸ್ಥಿತಿಗತಿಗಳಿಂದಾಗಿ ಅವಳು ಅನೇಕ ಸಮಸ್ಯೆಗಳನ್ನು ಎದುರಿಸಿಯೂ ತನ್ನ ಪುರುಷವೇಷವನ್ನು ಕಾಪಾಡಿಕೊಳ್ಳಲು ಸಾಧ್ಯವಾಗದೆ ಹೋಗುತ್ತದೆ. ಆದರೂ ರಾಣಿ ಅಹಲ್ಯಾಬಾಯಿ ಮಗಳ ಸ್ನೇಹಿತೆಯಾಗಿ ಮತ್ತೆ ಅರಮನೆ ಸೇರಿಕೊಳ್ಳುತ್ತಾಳೆ. ಕಮಲೆ ಸತ್ತು ಹೋದಳೆಂದು ದೌಲತ್‌ರಾವ್ ಭಾವಿಸುತ್ತಾನೆ. ಅಹಲ್ಯಾಬಾಯಿಯ ಅರಿವಿಗೆ ಕಮಲೆಯ ಗತಜೀವನ, ಧೈರ್ಯ, ಸಾಹಸವೆಲ್ಲ ಬರುತ್ತದೆ. ದೌಲತ್‌ರಾವ್‌ಗೆ ಕಠಿಣ ಶಿಕ್ಷೆ ವಿಧಿಸಿದರೆ ಸೆರೆಮನೆಯಿಂದ ಬಿಡುಗಡೆ ಮಾಡಿದ ಶ್ಯಾಮಸುಂದರ ದತ್ತನನ್ನು ಕಮಲೆಯೊಂದಿಗೆ ಮದುವೆ ಮಾಡುತ್ತಾಳೆ.

ಅಹಲ್ಯಾಬಾಯಿಯ ಸಮಕಾಲೀನ ಸಮಾಜದಲ್ಲಿನ ಜೀವನ ಮೌಲ್ಯಗಳನ್ನೆ ಆಧರಿಸಿ ಹೆಣ್ಣು ತನ್ನನ್ನು ರಕ್ಷಿಸಿಕೊಳ್ಳುವಲ್ಲಿ ಜಾಣತನ ಮೆರೆಯುವ ಪಾತ್ರವಾಗಿ ಕಮಲೆ ಚಿತ್ರಿತವಾಗಿದ್ದಾಳೆ. ಪುರುಷಪರ ಮೌಲ್ಯವೆಂಬುದು ಎರಡಲಗಿನ ಕತ್ತಿಯಂತಿದ್ದು ಸ್ತ್ರೀಯರನ್ನು ಹೇಗೆ ಸಿಕ್ಕಿದರೂ ಅವರನ್ನು ಘಾಸಿ ಮಾಡುತ್ತದೆ. ಈ ಎರಡಲಗಿನ ಕತ್ತಿಯ ತಂತ್ರವನ್ನೆ ಸ್ತ್ರೀಯರು ಪುರುಷರಿಂದ ರಕ್ಷಿಸಿಕೊಳ್ಳುವ ಉಪಾಯ ಮಾಡಿಕೊಂಡಿದ್ದನ್ನು ಕಮಲೆಯ ಕತೆ ನಿರೂಪಿಸುತ್ತದೆ. ಇದು ಸಾಂಪ್ರದಾಯಿಕ ಹೆಣ್ಣು ತನ್ನ ಉಳಿವಿಗಾಗಿ ಸಾಂಪ್ರದಾಯಿಕ ಪುರುಷ ಸಮಾಜದಲ್ಲಿ ನಡೆಸಿದ ಅನುಸಂಧಾನದಂತೆ ಕಾಣುತ್ತದೆ.

ಕಮಲೆಯ ಪಾತ್ರ ಚಿತ್ರಣ ಐತಿಹಾಸಿಕ ಅಂಶಗಳಿಂದ ಕೂಡಿರದಿದ್ದರೂ ಅಹಲ್ಯಾಬಾಯಿಯ ಚಾರಿತ್ರಿಕ ಹಿನ್ನೆಲೆಯಲ್ಲಿ ಆಧುನಿಕ ಮಹಿಳೆಯರು ಹೇಗೆ ಪುರುಷ ಮೌಲ್ಯಗಳನ್ನು ಪುರುಷ ಮೌಲ್ಯಗಳ ವಿರುದ್ಧ ಬಳಸಿಕೊಳ್ಳಬಹುದು ಮತ್ತು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದು ಎಂಬುದನ್ನು ಕಾಣಿಸುತ್ತದೆ. ಅಹಲ್ಯಾಬಾಯಿ ವಿಧವೆಯರ ಪರವಾಗಿ ಗಂಡನ ಆಸ್ತಿ ಹೊಂದುವ ಮತ್ತು ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಅವಕಾಶ ನೀಡಿ ಸ್ತ್ರೀಯರ ಸಮಸ್ಯೆಗಳನ್ನು ನಿವಾರಿಸುವ ಪ್ರಯತ್ನ ಮಾಡಿದ್ದನ್ನು ಚರಿತ್ರೆಯ ಪುಟಗಳು ಕಾಣಿಸುತ್ತವೆ. ಆದರೆ ಈ ಕಾದಂಬರಿ ಅಂಥ ಯಾವ ವಿವರಗಳನ್ನು ಹೊಂದಿರದಿದ್ದರೂ ಸ್ವತ: ಅಹಲ್ಯಾಬಾಯಿಯ ಪಾತ್ರ ಚಿತ್ರಣ ಮತ್ತು ಆಕೆ ಕಮಲೆಗೆ ನೀಡುವ ಆಶ್ರಯ ಅಹಲ್ಯಾಬಾಯಿಯ ಚಾರಿತ್ರಿಕ ಅಂಶಗಳನ್ನು ಕಾದಂಬರಿ ರೂಪದಲ್ಲಿ ಪರಿವರ್ತಿಸಿಕೊಂಡಂತೆ ಕಾಣುತ್ತದೆ.

೪. ರಾಜರತ್ನಮು

ಸಮಾಜವೊಂದು ಚಾರಿತ್ರಿಕ ಒತ್ತಡಕ್ಕೆ ಮಣಿದು ತನ್ನದಲ್ಲದ ಆಚಾರ-ವಿಚಾರಗಳನ್ನು ಒಪ್ಪಿಕೊಂಡು ಅನಿವಾರ್ಯವಾಗಿ ಬದಲಾವಣೆಗೆ ಒಳಗಾದ ಸಂದರ್ಭದಲ್ಲಿ ತನ್ನನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಂತೆ ತೋರಿಸಿಕೊಂಡರೂ ವಾಸ್ತವಿಕವಾಗಿ ಬಿಟ್ಟುಕೊಟ್ಟ ಪ್ರಮಾಣವೆಷ್ಟುವೆಂಬುದು ನಿಗೂಢವಾಗಿರುತ್ತದೆ. ಹಾಗೆಯೇ ತಾನು ಅಳವಡಿಸಿಕೊಂಡ ಹೊಸ ಆಚಾರ-ವಿಚಾರಗಳ ಪ್ರಮಾಣ ತೋರಿಸಿಕೊಳ್ಳುವಷ್ಟು ಇರುತ್ತದೆ ಎಂಬುದು ಕೂಡ ನಿಖರವಾಗಿ ಹೇಳಲು ಸಾಧ್ಯವಿಲ್ಲದಂತೆ ಇರುತ್ತದೆ. ತನ್ನದನ್ನು ಬಿಟ್ಟುಕೊಟ್ಟಿದ್ದು ಬಿಟ್ಟುಕೊಡದಂತೆಯೂ ಹೊಸದನ್ನು ಅಳವಡಿಸಿಕೊಂಡಿದ್ದು ಅಳವಡಿಸಿಕೊಳ್ಳದಂತೆಯೂ ಇರಬಲ್ಲುದಾಗಿರುತ್ತದೆ. ಕೆಲವೊಮ್ಮೆ ಅನ್ಯಮಾರ್ಗಗಳನ್ನನುಸರಿಸಿ ತೋರಿಕೆಗೆ ಬಿಟ್ಟುಕೊಟ್ಟದ್ದನ್ನು ಭದ್ರವಾಗಿ ಅನುಸರಣೆಯಲ್ಲಿ ಉಳಿಸಿಕೊಂಡಿರುತ್ತದೆ. ಹೊಸತಾದುದನ್ನು ಪರಂಪರೆಯ ಭಾಗವಾಗಿ ಆಚರಣೆಯಲ್ಲಿ ತಂದುಕೊಳ್ಳುತ್ತದೆ. ಉದಾಹರಣೆಗೆ ಇಂಗ್ಲಿಷ್ ಶಿಕ್ಷಣ ತಂದುಕೊಡುವ ಲಾಭವನ್ನು ನಿರಾಕರಿಸದೆ, ಅದು ನೀಡುವ ಪಾಶ್ಚಾತ್ಯ ಆಚಾರ-ವಿಚಾರ, ತಾರ್ಕಿಕತೆ, ಜೀವನ ದೃಷ್ಟಿಕೋನ ಮೊದಲಾದವನ್ನು ಯಥಾವತ್ತಾಗಿ ಅನುಸರಿಸದೆ ಪಾಲಿಸುತ್ತದೆ. ಈ ಪ್ರಕ್ರಿಯೆ ಸ್ಥಿತ್ಯಂತರಕ್ಕೊಳಪಟ್ಟ ಯಾವುದೇ ಸಮಾಜದಲ್ಲಿ ಸೂಕ್ಷ್ಮ ನೆಲೆಯಲ್ಲಿ ನಡೆಯುತ್ತದೆ.

ಚಿಲಕಮರ್ತಿ ಲಕ್ಷ್ಮೀನರಸಿಂಹ ಅವರ ರಾಜರತ್ನಮು ತೋರಿಕೆಗೆ ಸ್ತ್ರೀಯರ ವೈವಾಹಿಕ ಜೀವನದಲ್ಲಿ ಸಮಸ್ಯೆಯನ್ನು ಉಂಟುಮಾಡುವ ಪುರುಷ ಸಮಾಜದ ವರದಕ್ಷಿಣೆಯನ್ನು ವಸ್ತುವಾಗಿ ಹೊಂದಿದೆ. ಆಧುನಿಕ ಶಿಕ್ಷಣ ಹೇಗೆ ಈ ಸಮಸ್ಯೆಯನ್ನು ಪರಿಹರಿಸಬಲ್ಲುದು ಎಂದು ಆಧುನಿಕ ಶಿಕ್ಷಣದ ಪರವಾಗಿ ದೊಡ್ಡ ದನಿಯಲ್ಲಿ ಓದುಗರನ್ನು ಪ್ರಭಾವಿಸಿದಂತಿದೆ. ಆದರೆ ವರದಕ್ಷಿಣೆಯ ಸಮಸ್ಯೆ ಇಂಗ್ಲಿಷ್ ಶಿಕ್ಷಣದಿಂದ ಪರಿಹರಿಸಬಲ್ಲುದ್ದಾಗಿದ್ದರೆ ಆ ಸಮಸ್ಯೆಯ ಮೂಲಕ್ಕೂ ಆಧುನಿಕ ಶಿಕ್ಷಣಕ್ಕೂ ಸಂಬಂಧವಿರುವ ಬಗ್ಗೆ ಅನುಮಾನ ಹುಟ್ಟುತ್ತದೆ. ಕಾದಂಬರಿಕಾರರು ವರದಕ್ಷಿಣೆ ಸಮಸ್ಯೆಗೆ ಪರಿಹಾರವನ್ನು ಸೂಚಿಸುತ್ತಿರುವುದು ನಿಖರವಿದ್ದರೂ ಅದರ ಮೂಲ ಸಮಸ್ಯೆಯನ್ನು ಮುಟ್ಟದೆ ಮುಂದುವರೆದಂತೆಯೂ ಸಂದೇಹವುಂಟು ಮಾಡುತ್ತದೆ. ಸಂಧಿಕಾಲದಲ್ಲಿರುವ ಸಮಾಜ ತನ್ನ ಸಂಪ್ರದಾಯ ಮತ್ತು ಆಧುನಿಕ ಅಂಶಗಳನ್ನು ಯಾವ ರೀತಿಯಲ್ಲಿ ಅನುಸರಿಸುತ್ತದೆ, ಉಳಿಸಿಕೊಳ್ಳುತ್ತದೆ, ಅಳಿಸಿಹಾಕಿಕೊಳ್ಳುತ್ತದೆ ಎಂಬುದು ಆಯಾ ಕಾಲಘಟ್ಟದ ಚಾರಿತ್ರಿಕ ಒತ್ತಡಗಳು ಮತ್ತು ಅವನ್ನು ಎದುರಿಸಿದ ಮನೋಸ್ಥೈರ್ಯವನ್ನನುಸರಿಸುತ್ತದೆ. ಅಂದಿನ ಒತ್ತಡಗಳ ಆಶಯಗಳಿಗೆ ಅನುಗುಣವಾಗಿ ಪರಿಹಾರವೊಂದನ್ನು ಸೂಚಿಸುವಂತೆ ಕಂಡರೂ ಒಳ ಆಶಯ ಮತ್ತೊಂದು ಆಗಿರುವಂತಿದೆ. ಈ ಕೃತಿ ಬಾಲ್ಯವಿವಾಹವನ್ನು ಅನಾಚೂನವಾಗಿ ನಡೆದುಕೊಂಡು ಬಂದಂತೆ ಕಾಣಿಸಿದೆ. ಬಾಲ್ಯವಿವಾಹ ಸಮಸ್ಯೆಯಾಗಿ ಕಾಣದೆ, ವರದಕ್ಷಿಣೆಯನ್ನು ಸಮಸ್ಯೆಯಾಗಿ ಕಂಡಿರುವ ಕಾದಂಬರಿ ಸಂಧಿಕಾಲದ ಸೂಕ್ಷ್ಮತೆಯನ್ನು ಕಟ್ಟಿಕೊಡುತ್ತದೆ. ಕಾದಂಬರಿಕಾರ ತನ್ನ ಕೃತಿಯ ಮೂಲಕ ಬಿಂಬಿಸಿರುವ ಸ್ತ್ರೀ ಸಮಸ್ಯೆಗಳ ಸ್ವರೂಪ ಮತ್ತು ಆಶಯವನ್ನು ಒಳಗೊಂಡಿದೆ.

ಹಿರಿಯ ಮತ್ತು ಕಿರಿಯ ತಲೆಮಾರು

ಇಂಗ್ಲಿಷ್ ಶಿಕ್ಷಣ ಪಡೆದ ಜಗನ್ನಾಥ ತನ್ನ ಗೆಳೆಯನ ತಂಗಿ ರಾಜರತ್ನಂಳನ್ನು ಕಂಡು ಅವಳಲ್ಲಿ ಆಕರ್ಷಿತನಾಗುವುದು ಮತ್ತು ಆಕೆ ಕುರಿತು ಪ್ರೀತಿ ಭಾವವನ್ನು ಬೆಳೆಸಿಕೊಳ್ಳುವುದು, ತನ್ನ ಕಲಿಕೆಯ ಮೂಲಕ ಉಂಟಾದ ಮನೋಸಂಸ್ಕಾರ ಕ್ರಮಕ್ಕೆ ಅನುಗುಣವಾಗಿದೆ. ಇಂಗ್ಲಿಷ್ ಸಾಹಿತ್ಯದಲ್ಲಿ ಚಿತ್ರಿತವಾದ ರಮ್ಯ, ಪ್ರಣಯ ಭಾವನೆಗಳನ್ನು ಗಟ್ಟಿಗೊಳಿಸಿಕೊಂಡ ಜಗನ್ನಾಥ ಅದನ್ನು ರಾಜರತ್ನಂಳಲ್ಲಿ, ವ್ಯಕ್ತಿಗತ ನೆಲೆಯಲ್ಲಿ ಅನುಭವಿಸುತ್ತಾನೆ. ಅದರ ರೋಮಾಂಚನದಲ್ಲಿ ಮಿಂದೇಳುತ್ತಾನೆ. ಮೊದಲ ಪ್ರೇಮದ ಈ ಅನುಭವ ಅವನನ್ನು ರಾಜರತ್ನಂಳಲ್ಲಿ ನಿಷ್ಠ ಭಾವ ಹೊಂದುವಂತೆ ಮಾಡುತ್ತದೆ. ಹಾಗಾಗಿ ಆತ ತಾನು ಇಷ್ಟ ಪಟ್ಟ ಹುಡುಗಿಯನ್ನೇ ಮದುವೆಯಾಗಲು ಹಟ ತೊಡುತ್ತಾನೆ. ತನ್ನ ನಿರ್ಧಾರಕ್ಕೆ ವಿರುದ್ಧವಾಗಿ ಎದುರಾದ ಸಂದರ್ಭಗಳಲ್ಲಿ ಆತನಿಗೆ ದಾರಿ ತೋಚದಂತಾಗುತ್ತದೆ. ರಾಜರತ್ನಂಳ ಅಣ್ಣ ಕೇಶವರಾಜು ಪಾಶ್ಚಾತ್ಯ ಮಹಾಕಾವ್ಯಗಳ ನಾಯಕರ ಧಿರೋದಾತ್ತ ಗುಣಗಳನ್ನು, ಶೌರ್ಯ-ಸಾಹಸ ಸಾಧಿಸುವ ಹಟವನ್ನು ವಿವರಿಸಿ ಜಗನ್ನಾಥನಲ್ಲಿ

ಸಹನೆ, ಧೈರ್ಯ ಮತ್ತು ಆತ್ಮವಿಶ್ವಾಸ ಕಂಡುಕೊಳ್ಳುವಲ್ಲಿ ನೆರವಾಗುತ್ತಾನೆ. ಇದರಿಂದ ತನ್ನನ್ನು ತಾನು ಕಂಡುಕೊಳ್ಳುವಲ್ಲಿ ಮತ್ತು ಅವನ್ನು ಗಟ್ಟಿಗೊಳಿಸುವಲ್ಲಿ ಜಗನ್ನಾಥನ ಶಕ್ತಿ ಇಮ್ಮಡಿಯಾಗುತ್ತದೆ. ಅವನು ಅಚಲ ಮನೋಭಾವದವನಾಗಿ ದೃಢಗೊಳ್ಳುತ್ತಾನೆ.

ಹಾಗಾಗಿಯೇ ತಂದೆ ಮಾಧವರಾಯ ಮಧ್ಯವರ್ತಿಗಳ ಮೂಲಕ ತಂದ ಎರಡು ಮದುವೆಯ ಸಂಬಂಧಗಳನ್ನು ತಿರಸ್ಕರಿಸುತ್ತಾನೆ. ಮಾಧವರಾಯನ ಪ್ರಕಾರ ಆ ಎರಡು ಸಂಬಂಧಗಳು ಅತ್ಯುತ್ತಮ ಸಂಬಂಧಗಳಾಗಿವೆ. ಏಕೆಂದರೆ ಮೊದಲ ಸಂಬಂಧದ ಹೆಣ್ಣು ಜಿಲ್ಲಾಧಿಕಾರಿಯ ಮಗಳಾಗಿದ್ದಳು. ಹೆಣ್ಣಿನ ಕಡೆಯಿಂದ ವರನಿಗೆ ೨೦೦೦ರೂ. ನಗದು ಹಣ ವರದಕ್ಷಿಣೆಯಾಗಿ ಬರುವುದಿತ್ತು. ಮದುವೆ ಮಾತುಕತೆಗೆ ಕುಳಿತಾಗ ಅವರಿಂದ ಮತ್ತಷ್ಟು ವಸ್ತು ಒಡವೆಗಳನ್ನು ಪಡೆಯಬಹುದೆಂಬುದು ಜಗನ್ನಾಥನ ತಂದೆಯ ಆಲೋಚನೆಯಾಗಿತ್ತು. ನಂತರ ಪ್ರಸ್ತಾಪವಾದ ಎರಡನೆಯ ಹೆಣ್ಣಿನ ಸಂಬಂಧ ತಹಶೀಲ್ದಾರನ ಮಗಳಾಗಿದ್ದಳು. ಅವರಿಂದ ವರನಿಗೆ ೨೫೦೦ರೂ. ನಗದು ಹಣ, ಮದುವೆ ಖರ್ಚು, ವರನ ಕುಟುಂಬದವರ ಓಡಾಟದ ಖರ್ಚು ಸಿಗುವುದಿತ್ತು. ಹೀಗೆ ತಂದೆ ಮಾಧವರಾಯ ಹುಡುಕಿದ ಎಲ್ಲ ಸಂಬಂಧಗಳು ಇಂಗ್ಲಿಷ್ ಶಿಕ್ಷಣ ಪಡೆದು, ಇಂಗ್ಲಿಷ್ ಸರಕಾರದಲ್ಲಿ ಉನ್ನತ ಅಧಿಕಾರ ಸ್ಥಾನದಲ್ಲಿದ್ದವರ ಸಂಬಂಧಗಳೇ ಆಗಿದ್ದುದು ಗಮನಾರ್ಹ. ಹುಡುಗಿಯ ತಂದೆಯ ಸಾಮಾಜಿಕ ಸ್ಥಾನಮಾನಗಳು ತನ್ನ ಮಗನ ಸ್ಥಾನಮಾನವನ್ನು ಹೆಚ್ಚಿಸುವುದರೊಂದಿಗೆ, ಅಂತಹ ಸಂಬಂಧಗಳಿಂದ ತಮ್ಮ ಕುಟುಂಬಕ್ಕೆ ಆಗುವ ಆರ್ಥಿಕ ಲಾಭದ ಮೇಲೂ ಕಣ್ಣಿತ್ತು.

ಇದನ್ನರಿತುಕೊಳ್ಳುವಷ್ಟು ಸೂಕ್ಷ್ಮನಾಗಿದ್ದ ಜಗನ್ನಾಥ ತಾನೇ ಸಾಲಮಾಡಿ ಅದನ್ನು ರಾಜರತ್ನಂಳ ತಂದೆಗೆ ಕೊಡುತ್ತಾನೆ. ಹೆಣ್ಣಿನ ಕಡೆಯವರು ವರನಿಗೆ ನೀಡಬೇಕಾದ ವರದಕ್ಷಿಣೆ ಮತ್ತು ಮಾಡಬೇಕಾದ ವರೋಪಚಾರಗಳಿಗೆ ನೆರವು ನೀಡುತ್ತಾನೆ. ಇದು ಜಗನ್ನಾಥನ ಪ್ರೀತಿಯ ನಿಷ್ಠೆಯನ್ನು, ಅವನ ತಂದೆಯ ಪುರುಷ ಸಮಾಜದ ಸಾಂಪ್ರದಾಯಿಕ ನಿಲುವನ್ನು ಕಟ್ಟಿಕೊಡುತ್ತದೆ. ವಾಸ್ತವ ಸ್ಥಿತಿ ಬಯಲಾದ ಮೇಲೆ ಮಾಧವರಾಯ ತನ್ನ ಮಗನಿಗೆ ಮತ್ತೊಂದು ಮದುವೆಯನ್ನು ಮಾಡಲು ಮುಂದಾಗುತ್ತಾನೆ. ಆ ಮೂಲಕ ತನ್ನ ಮನೆಗೆ ಸೊಸೆಯಾಗಿ ಬರುವ ಹೆಣ್ಣಿನ ಮೂಲಕ ದೊರಕುವ ಸಂಪತ್ತನ್ನು ಸಂಗ್ರಹಿಸುವ ಪ್ರಯತ್ನ ಮುಂದುವರೆಸುತ್ತಾನೆ. ಆದರೆ ಮೊದಲ ಮದುವೆಯ ವಿವರಗಳು ಎರಡನೆಯ ಮದುವೆ ಮಾಡಲು ಹೊರಟ ಹೆಣ್ಣಿನ ಕಡೆಯವರಿಗೆ ತಿಳಿದು ಈ ಎಲ್ಲ ಪ್ರಯತ್ನಗಳು ನಿಷ್ಫಲಗೊಳ್ಳುತ್ತವೆ. ಇದರಿಂದ ತಂದೆ ಮತ್ತು ಮಗನ ನಿಲುವುಗಳು ಪರಸ್ಪರ ಎದುರು ಬದುರಾಗುತ್ತವೆ. ಆಧುನಿಕತೆಯ ಕಿರಿಯ ಜನಾಂಗದ ಎದುರು ಸಾಂಪ್ರದಾಯಿಕತೆಯ ಹಿರಿಯ ಜನಾಂಗ ಹಿಂದುಳಿಯುತ್ತದೆ. ರಾಜರತ್ನಂ ಗಂಡನ ಮನೆ ಸೇರುತ್ತಾಳೆ. ಮಾಧವರಾಯ ತನ್ನ ಸೊಸೆಯನ್ನು ಒಪ್ಪಿಕೊಳ್ಳಲು ವಿವರಿಸಿದ ಸಂಗತಿಗಳು ನಾಟಕೀಯವಾಗಿದ್ದು, ಸಾಂಪ್ರದಾಯಿಕ

ಪುರುಷ ಸಮಾಜದ ನಿಲುವಿಗೆ ಸೋಲುಂಟಾದ ಬಗೆಯನ್ನು ಕಾಣಿಸುತ್ತದೆ. ಹಿರಿಯ ಮತ್ತು ಕಿರಿಯ ತಲೆಮಾರಿನ ನಡುವಿನ ಅಂತರ ಮತ್ತು ಸಂಘರ್ಷ ವರದಕ್ಷಿಣೆಯ ವಿಚಾರದಲ್ಲಿ ಮುನ್ನೆಲೆಗೆ ಬರುತ್ತದೆ. ಆದರೆ ಸ್ತ್ರೀಯರು ಸಂಪ್ರದಾಯ ಸಮಾಜದಲ್ಲಿ ಎದುರಿಸುತ್ತಿದ್ದ ಸಮಸ್ಯೆಗಳನ್ನು ಇದು ಒಳಗೊಳ್ಳದೆ ಹೋಗುತ್ತದೆ.

ಸಾಂಪ್ರದಾಯಿಕ ಪುರುಷ ಸಮಾಜ ಮತ್ತು ಆಧುನಿಕತೆ

ಮನೆಗೆ ಸೊಸೆಯಾಗಿ ಬರುವ ಹೆಣ್ಣು ಮದುವೆಯ ಮೂಲಕ ತನ್ನ ಪಾಲಿನ ಹಣ, ಸಂಪತ್ತನ್ನು ಜೊತೆಯಲ್ಲಿ ತರಬೇಕು. ಇಲ್ಲದಿದ್ದಲ್ಲಿ ಗಂಡನ ಮನೆಯಲ್ಲಿ ಆಕೆಯ ಸೊಸೆ ಸ್ಥಾನ ಕೇವಲ ಕೆಲಸದವಳಾಗಿ ಬದಲಾಗುತ್ತದೆ. ಗಂಡಿನ ಮನೆಯವರು ಅವಳಿಗೆ ಒಂದು ತುತ್ತು ಅನ್ನ ಹಾಕಲು ಆಕೆಯನ್ನು ಕುಟುಂಬದ ಹೊರಗಿನ ಅನ್ಯವ್ಯಕ್ತಿಯಂತೆ ನಡೆಸಿಕೊಳ್ಳುತ್ತಾರೆ. ಬರಿಗೈಯಲ್ಲಿ ಮನೆ ತುಂಬಿದ ಸೊಸೆ ಗಂಡನ ಮನೆಯ ಆಸ್ತಿ ಅಥವಾ ದುಡಿಮೆಯ ಪಾಲುಗಾರಳಾಗಲು ಸಾಂಪ್ರದಾಯಿಕ ಪುರುಷ ಸಮಾಜ ಒಪ್ಪುವುದಿಲ್ಲ. ಹಾಗಾಗಿ ಅದು ಮದುವೆಯ ಸಂದರ್ಭದಲ್ಲಿ ಹೆಣ್ಣಿನ ಪಾಲನ್ನು ವರದಕ್ಷಿಣೆಯ ರೂಪದಲ್ಲಿ ಪಡೆಯುವುದು ತನ್ನ ಹಕ್ಕೆಂದು ತಿಳಿಯುತ್ತದೆ. ಆಧುನಿಕತೆ ಭಾರತದ ಸಾಂಪ್ರದಾಯಿಕ ಪುರುಷ ಸಮಾಜದ ಸ್ತ್ರೀಯರ ಸ್ಥಿತಿಗತಿಗಳನ್ನು ಸುಧಾರಿಸಲು ಪ್ರಯತ್ನಿಸಿದೆ. ಆಧುನಿಕ ಶಿಕ್ಷಣ ಸ್ವೀಕರಿಸಿದ ಸಾಂಪ್ರದಾಯಿಕ ಸಮಾಜ ಅದರಿಂದ ದೊರಕುವ ಸಾಮಾಜಿಕ ಮತ್ತು ಆರ್ಥಿಕ ಲಾಭಗಳ ಮೇಲೆ ಕಣ್ಣಿಟ್ಟಿತು. ಆಧುನಿಕತೆ ಸ್ತ್ರೀ ಸಮಸ್ಯೆಯನ್ನು ಸಂವೇದನಾಶೀಲವಾಗಿ ನೋಡಬಯಸಿದ್ದನ್ನು ಸಂಪ್ರದಾಯ ಸಮಾಜ ತನ್ನ ಜಡ್ಡುಗಟ್ಟಿದ ಸ್ಥಿತಿಯಲ್ಲೆ ಪಕ್ಕಕ್ಕಿರಿಸಿದ್ದು ರಾಜರತ್ನಂಳ ಬಾಲ್ಯವಿವಾಹ ಸ್ಪಷ್ಟಪಡಿಸುತ್ತದೆ. ಜಗನ್ನಾಥನ ತಂದೆ ತನ್ನ ಮಗನಿಗೆ ಹುಡುಕುವ ಮೂರೂ ಸಂಬಂಧಗಳ ಕುಟುಂಬಗಳು ಇಂಗ್ಲಿಷ್ ಶಿಕ್ಷಣ ಪಡೆದವುಗಳೇ ಆಗಿವೆ. ಅದರಿಂದ ಲಾಭ ಪಡೆದು ಸರ್ಕಾರದ ಉನ್ನತ ಅಧಿಕಾರ ಸ್ಥಾನದಲ್ಲಿ ಇರುವ ಸಂಬಂಧಗಳೇ ಆಗಿವೆ. ಇದು ಸಾಂಪ್ರದಾಯಿಕ ಪುರುಷ ಸಮಾಜದ ಜೀವನ ಮೌಲ್ಯಗಳು ಹೇಗೆ ಆಧುನಿಕತೆಯ ಅನುಕೂಲಗಳನ್ನು ತನ್ನದನ್ನಾಗಿಸಿಕೊಳ್ಳುವಲ್ಲಿ ಅನ್ಯ ಸಂಸ್ಕೃತಿಯ ಆಚಾರ-ವಿಚಾರಗಳನ್ನು ತನ್ನದಾಗಿ ಒಪ್ಪಿಕೊಳ್ಳಲು ಮತ್ತು ಅನುಸರಿಸಲು ತೊಡಗುತ್ತವೆ ಎಂಬುದನ್ನು ತೋರಿಸುತ್ತದೆ. ಈ ಅನುಸಂಧಾನ ಹಿಂದೂ ಪುರುಷ ಸಮಾಜದ ಹಿತಾಸಕ್ತಿಗೆ ಅನುಗುಣವಾಗಿದೆ. ಹಾಗೆಯೆ ತನ್ನ ಹಿತಾಸಕ್ತಿಗೆ ವಿರುದ್ಧವಾದ ಸ್ತ್ರೀಯರ ವಯಸ್ಕ ವಿವಾಹವನ್ನು ಒಪ್ಪಿಕೊಳ್ಳದಿರುವುದು ಗಮನಿಸತಕ್ಕ ವಿಚಾರವಾಗಿದೆ. ಈ ಕಾದಂಬರಿಯಲ್ಲಿ ಸ್ತ್ರೀ ಸಮಸ್ಯೆ ನೆಪ ಮಾತ್ರವಾಗಿರುವಂತೆ ಇದೆ. ಅದರ ನೆಪದಲ್ಲಿ ಹಿಂದೂ ಪುರುಷ ಸಮಾಜ ಬದಲಾದ ಸಂದರ್ಭದಲ್ಲೂ ತನ್ನ ಹಿತಾಸಕ್ತಿಯನ್ನು ಹೇಗೆ ಕಾಪಾಡಿಕೊಳ್ಳುತ್ತದೆ ಎಂಬ ಚಿತ್ರಣ ಇದೆ.

೫. ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ

ಕನ್ನಡದ ಈ ಮೊದಲ ಕಾದಂಬರಿ ಸಶಕ್ತವಾಗಿ ಸ್ತ್ರೀ ಸಮಸ್ಯೆಗಳನ್ನು ಕೇಂದ್ರೀಕರಿಸಿದೆ. ಮಾತ್ರವಲ್ಲದೆ ಅಂದಿನ ಸಮಾಜ ಎದುರಿಸುತ್ತಿದ್ದ ಸ್ತ್ರೀ ಸಮಸ್ಯೆಗಳಿಗೆ ಹಾದಿ ತೋರಿಸುವಂತಹ ಆಶಯವನ್ನು ಹೊಂದಿರುವಂತೆ ಇದೆ. ಇಂತಹ ತನ್ನ ಸುಧಾರಕ ಸ್ವಭಾವ ಅಥವಾ ಪ್ರಗತಿಪರ ಧೋರಣೆಯಿಂದ ಇದು ಮುಖ್ಯ ಕೃತಿಯಾಗಿ ಕಾಣುತ್ತದೆ. ಈ ಕಾದಂಬರಿಯ ಇಂತಹ ಸಧೃಢ ಆಶಯಗಳ ಹಿಂದೆ ಬಂಗಾಳದಲ್ಲಿ ಅಂದು ನಡೆಯುತ್ತಿದ್ದ ವೈಚಾರಿಕ ಚಿಂತನೆಗಳ ಹೊಸ ಹುಟ್ಟು ಅನುವಾದದ ಮೂಲಕ ಕನ್ನಡವನ್ನು ತಲುಪಿದ್ದೂ ಕಾರಣವೆಂದು ಗುರುತಿಸಲಾಗುತ್ತದೆ. ಬಂಗಾಳಿ ಸಾಹಿತ್ಯದ ನೇರ ಪ್ರಭಾವ ಕನ್ನಡದಲ್ಲಿ ರೂಪುಗೊಂಡಿದ್ದು ಸ್ವಸಮರ್ಥನೆಯ ಹಾದಿಯಲ್ಲೋ, ಆತ್ಮ ನಿರೀಕ್ಷಣೆಯ ಪರಿಯಲ್ಲೋ ಎಂಬುದು ನಿಜಕ್ಕೂ ಅಚ್ಚರಿ ಪಡುವಷ್ಟು ಎತ್ತರದಲ್ಲಿ ಈ ಕೃತಿಯಿದೆ. ಹಾಗಾಗಿಯೇ ಜಿ.ಎಸ್. ಆಮೂರ ಅವರಂತಹ ಕನ್ನಡದ ಸಮರ್ಥ ವಿಮರ್ಶಕರಿಗೂ ಇದು ಗೊಂದಲವನ್ನುಂಟು ಮಾಡಿರುವಂತೆ ಕಾಣುತ್ತದೆ. ಅವರು ಈ ಕಾದಂಬರಿಯ ಕುರಿತು ಹೀಗೆ ಅಭಿಪ್ರಾಯ ತಾಳುತ್ತಾರೆ. "ಇಂದಿರೆಯ ಮರುವಿವಾಹ ಒಂದು ಕನಸಿನ ಕಥೆಯೆ. ಏಕೆಂದರೆ ವಾಸ್ತವ ಜೀವನದಲ್ಲಿ ವಿಧವಾ ವಿವಾಹ ಎಷ್ಟು ಕಠಿಣವಾಗಿತ್ತೆನ್ನುವುದನ್ನು ಮಹಾದೇವ ರಾನಡೆಯಂಥವರ ಜೀವನದಿಂದ ಸ್ಪಷ್ಟವಾಗುತ್ತದೆ. ವಿಧವಾ ವಿವಾಹವನ್ನು ಸಮರ್ಥಿಸಿದ ರಾನಡೆಯವರಿಗೆ ಮನಸ್ಸಿರದಿದ್ದರೂ ಅವರು ಎರಡನೆಯ ಸಲ ಮದುವೆಯಾದದ್ದು ಒಬ್ಬ ಕನ್ಯೆಯನ್ನು. ಆದರೆ ಇಂದಿರಾಬಾಯಿಯಲ್ಲಿ ಇಂದಿರಾ ಹಾಗೂ ಭಾಸ್ಕರರ ಮದುವೆ ಸಹಜವಾಗಿ ನಡೆಯುತ್ತದಷ್ಟೇ ಅಲ್ಲದೆ ಅದು ಸಮಾಜಕ್ಕೆ ಒಪ್ಪಿತವೂ ಆಗುತ್ತದೆ" (೨೦೦೬:೨೪).

ಆಮೂರರು ಈ ಕಾದಂಬರಿಯನ್ನು ಕನಸಿನ ಕಥೆ ಎಂದು ಸೂಚಿಸುವ ಮೂಲಕ ಈ ಕೃತಿ ಚಿತ್ರಿಸುವ ಆಶಯ ಸಮಾಜದ ವಾಸ್ತವ ಸ್ಥಿತಿಯಲ್ಲ ಎಂಬುದರ ಕಡೆ ಗಮನ ಸೆಳೆಯುತ್ತಾರೆ. ಯಾವುದೇ ಕಲಾಕೃತಿ ಅದು ವಾಸ್ತವವಾದಿ ಕಾದಂಬರಿಯಾಗಲಿ ಅಥವಾ ಇನ್ನಾವುದೇ ಶೈಲಿಯ ಕಾದಂಬರಿಯಾಗಲಿ ವಾಸ್ತವ ಸ್ಥಿತಿಯನ್ನು ಕಟ್ಟಿಕೊಡುವುದಿಲ್ಲ ಎಂಬುದರಲ್ಲಿ ಎರಡು ಮಾತಿಲ್ಲ. ಅದು ಏನಿದ್ದರೂ ಕಾದಂಬರಿಕಾರನ ಕನಸಿನ (ಕಾಣ್ಕೆಯ) ಸ್ಥಿತಿಯೆ ಎಂದು ಸಮರ್ಥಿಸಬೇಕಾದ ಅಗತ್ಯವೂ ಇಲ್ಲ. ಆಮೂರರು ಅಂದಿನ ಕಾಲದ ಸ್ತ್ರೀಯ ಸಾಮಾಜಿಕ ಸಮಸ್ಯೆ ಮತ್ತು ಜೀವನ ಮೌಲ್ಯ ಕುರಿತು ಮಾತನಾಡಿದ್ದಾರೆ. ಅದಕ್ಕಾಗಿ ಅವರು ಎತ್ತಿಕೊಂಡಿರುವ ಉದಾಹರಣೆ ಸಮಾಜ ಸುಧಾರಕರಲ್ಲಿ ಪ್ರಮುಖ ನಾಯಕರಲ್ಲೊಬ್ಬರಾದ ಮಹಾದೇವ ರಾನಡೆಯವರ ಜೀವನದ ಸಂಗತಿಯಾಗಿದೆ. ರಾನಡೆಯವರಿಗೆ ವಿಧವಾ ವಿವಾಹವೆಂಬುದು ಕೇವಲ ವೇದಿಕೆಯ ಮೇಲೆ ನಿಂತು ಭಾಷಣ ಮಾಡಬಲ್ಲ ಒಂದು ವಿಷಯ ಮಾತ್ರವಾಗಿತ್ತು ಎಂಬುದನ್ನು ಈ ಹಿಂದೆಯೇ ಉಲ್ಲೇಖಿಸಿದೆ.

ರಾನಡೆಯವರಿಗೆ ವಿಧವೆಯಾದ ತಮ್ಮ ತಂಗಿಗೆ ಮರುಮದುವೆ ಮಾಡಲು ಕಷ್ಟವಾಗಿದ್ದು, ತಾವು ಮಾತ್ರ ಎರಡನೆಯ ಸಲ ಒಬ್ಬ ಕನ್ಯೆಯೊಡನೆಯೆ ಮದುವೆ ಮಾಡಿಕೊಂಡಿದ್ದು ಯಾವ ಬಗೆಯ ಸುಧಾರಕತನವೆಂಬುದು ಸೂಚಿತವಾಗುತ್ತದೆ. ಹಿಂದಿನ ಅಧ್ಯಾಯದಲ್ಲಿ ಶೃಂಗೇರಿ ಮಠದ ಕಡತಗಳಿಂದ ಆಧರಿಸಿ ಅಂದಿನ ಸ್ತ್ರೀಯರ ಸ್ಥಾನಮಾನ ಕುರಿತು ಚರ್ಚಿಸಲಾಗಿದೆ. ಸ್ತ್ರೀಯರ ಸ್ಥಿತಿಗಳು ಮಾನವೀಯ ನೆಲೆ ಕಳೆದುಕೊಂಡು ಎಷ್ಟು ಕಠಿಣಕರವಾಗಿತ್ತೆಂಬುದನ್ನು ಕೂಡ ಕಂಡಿದ್ದೇವೆ. ಅವರ ಹೀನಸ್ಥಿತಿಯ ಮುಂದೆ ರಾನಡೆಯವರ ಸುಧಾರಕತನ ಎಷ್ಟು ಹುಸಿ ಎಂಬುದು ಗೋಚರವಾಗುತ್ತದೆ. ಇಲ್ಲಿನ ಪ್ರಶ್ನೆಯಿರುವುದು ಕೃತಿಯೊಂದು ವಾಸ್ತವ ಸಮಾಜದ ವಸ್ತುಸ್ಥಿತಿಯನ್ನು ಒಳಗೊಂಡಿರಬೇಕೋ ಅಥವಾ ವಾಸ್ತವ ಸಮಾಜದ ಸಮಸ್ಯೆಗಳಿಗೆ ಆ ಕೃತಿ ಹೊಸದಿಕ್ಕು ತೋರಿಸುವಂತಹ ಆಶಯ ಹೊಂದಿರಬೇಕೊ ಇಲ್ಲವೋ ಎಂಬುದು. ಕಾದಂಬರಿಯ ವಾಸ್ತವ ಶೈಲಿ ಸಮಾಜದ ವಸ್ತುಸ್ಥಿತಿಯ ವಾಸ್ತವವಲ್ಲ ಎಂದು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ. ಈ ಹಿನ್ನೆಲೆಯಲ್ಲಿ ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ ಪ್ರಕಟಪಡಿಸಲು ಬಯಸುವ ಆಶಯವಾದರೂ ಏನು ಎಂಬುದನ್ನು ಪರಿಶೀಲನೆ ಮಾಡಬಹುದು.

ಸಂಧಿಕಾಲದ ಸ್ಥಿತ್ಯಂತರ

ಕಾದಂಬರಿಯ ಆರಂಭದ ಪುಟಗಳು ದೊಡ್ಡ ವ್ಯವಹಾರಸ್ಥನಾದ ನರಸಿಂಹಶಾಸ್ತ್ರಿಯ ಬಳಿ ಬಡ ಭೀಮರಾಯ ಕೆಲಸಕ್ಕೆ ಸೇರುವುದು, ಸ್ವಹಿತಾಸಕ್ತಿ ಸಾಧಿಸುವಲ್ಲಿ ಚತುರಮತಿಯಾದ ಅಂಬಾಬಾಯಿಯೊಂದಿಗೆ ಮದುವೆಯಾಗುವುದು, ನಂತರದಲ್ಲಿ ಅವರ ಸ್ಥಿತಿಗತಿಗಳು ಸುಧಾರಣೆಯಾಗಿ ಸಂಪತ್ತು ಶೇಖರವಾಗುವುದು ಮತ್ತು ಸುಂದರರಾಯನಂತಹ ನಿಷ್ಠವ್ಯಕ್ತಿಯನ್ನು ಕೆಲಸಕ್ಕೆ ಇಟ್ಟುಕೊಳ್ಳುವ ವಿವರಗಳಿಂದ ತುಂಬಿಹೋಗಿವೆ. ತನ್ನ ಪಾತಿವ್ರತ್ಯವನ್ನು ಸಂದೇಹದಿಂದ ನೋಡಲು ಕಾರಣನಾದನೆಂಬ ಗುಮಾನಿಯಿಂದಾಗಿ ಕೆಲಸ ಖಾಯಂಗೊಳಿಸಲು ಬೇಡಿಕೊಳ್ಳುವ ನಿಷ್ಠ ಸುಂದರರಾಯನ ವಿರುದ್ಧ ಅಂಬಾಬಾಯಿ ಕೆರಳುತ್ತಾಳೆ. ಈ ಸಂದರ್ಭ ಇಡೀ ಕಾದಂಬರಿಯಲ್ಲಿ ಸಾಂಪ್ರದಾಯಿಕತೆ ಮತ್ತು ಆಧುನಿಕತೆಯ ಕವಲುಗಳು ಟಿಸಿಲೊಡೆದು ಬೆಳೆಯಲು ಮೂಲವಾಗಿದೆ. ನರಸಿಂಹಶಾಸ್ತ್ರಿ ತನ್ನೊಂದಿಗೆ ಸಂಬಂಧ ಇಟ್ಟಕೊಂಡಿರುವಂತೆ ಅಂಬಾಬಾಯಿಗೆ ತನ್ನ ನೆರೆಯ ಹೆಂಗಸರು ಅಣಕಿಸಿ ಆಕೆಯ ಪಾತಿವ್ರತ್ಯದ ಬಗ್ಗೆ ಅನುಮಾನ ಹುಟ್ಟುವಂತೆ ಮಾಡಲು ಸುಂದರರಾಯನೆ ಕಾರಣನೆಂಬ ಶಂಕೆ ಕತೆಯ ಮುಂದಿನ ಬೆಳವಣಿಗೆಗೆ ಕಾರಣವಾಗಿದೆ. ಇದರಿಂದ ಅಂಬಾಬಾಯಿಯ ಸಂಪ್ರದಾಯನಿಷ್ಠ ಪ್ರಜ್ಞೆ ಆಕೆಯ ಪಾತಿವ್ರತ್ಯ ಕಲ್ಪನೆಗೆ ಭಂಗವುಂಟಾದಂತೆ ಭಾವಿಸುತ್ತದೆ. ಅವಳ ಹಣಬಲ ಮತ್ತು ಜಾತಿನಿಷ್ಠೆ ಆಕೆಯ ಅಹಂ ಅನ್ನು ಕೆಣಕುತ್ತದೆ. ಕೊನೆಗೆ ಅದು ಸುಂದರರಾಯನ ಹತ್ಯೆಯಲ್ಲಿ ಕೊನೆಗಾಣುತ್ತದೆ. ನಿಷ್ಠನೂ ತನ್ನ ಕೆಲಸ ಖಾಯಂಗೊಂಡು ತನ್ನ ಬದುಕು ಸ್ಥಿರಗೊಳಿಸಲು

ಹೆಣಗಾಡುತ್ತಿದ್ದವನೂ ಆದ ಸುಂದರರಾಯ ಈ ಕೃತ್ಯದಲ್ಲಿ ಪಾಲುಗಾರನೋ ಅಲ್ಲವೋ ಎಂಬ ವಿವೇಚನೆ ಇಲ್ಲದೆ ಅವನನ್ನು ಗುರಿಪಡಿಸಲಾಗಿದೆ. ತನ್ನ ಸಾಂಪ್ರದಾಯಿಕ ಸ್ಥಾನಮಾನಗಳಿಗೆ ಚ್ಯುತಿ ತರಲು ಹವಣಿಸಿದನೆಂಬ ಸ್ವಹಿತ ದೃಷ್ಟಿ ಅಂಬಾಬಾಯಿಯನ್ನು ಸ್ವಕೇಂದ್ರಿತಳನ್ನಾಗಿಸಿದೆ. ಹಾಗಾಗಿ ತಾನು ಮಾಡಿದ ಕೊಲೆಯ ಅಪರಾಧವನ್ನು ಮುಚ್ಚಿ ಹಾಕಲು ಆಕೆ ಕಂಡ ಕಂಡವರಿಗೆಲ್ಲ ಹಣ ಚೆಲ್ಲುತ್ತಾಳೆ. ಸಾಕ್ಷಿ ಪ್ರಜ್ಞೆ ಕಳೆದುಕೊಂಡು ನ್ಯಾಯ ಮತ್ತು ನೈತಿಕತೆಯನ್ನು ಕೊಂಡುಕೊಳ್ಳಲು ಯತ್ನಿಸುತ್ತಾಳೆ. ಅವಳ ಸುತ್ತ ನೆರೆಯುವ ಜನ ಸಾಂಪ್ರದಾಯಿಕ ಜೀವನದ ಸ್ವಹಿತ, ಕಪಟತನ, ಅನೈತಿಕತೆ ಮತ್ತು ಹಗಲು ದರೋಡೆಗಾರರಂತೆ ಮತ್ತೊಬ್ಬರನ್ನು ದೋಚುವ ಪ್ರಜ್ಞೆಯುಳ್ಳವರಾಗಿ ಆಕೆಯಿಂದ ಲಾಭ ಪಡೆಯಲು ಸದಾ ಹವಣಿಸುತ್ತಾರೆ. ಆಕೆಯ ಈ ಹೀನಕೃತ್ಯದಿಂದ ಸುಂದರರಾಯನ ಕುಟುಂಬ ಅನಾಥರಾಗಿ ಬೀದಿ ಪಾಲಾಗುತ್ತದೆ. ಸುಂದರರಾಯನ ಮಗ ಭಾಸ್ಕರರಾಯ ತನ್ನ ಕುಟುಂಬದ ಬಡತನದಲ್ಲಿ ಶಿಕ್ಷಣವೊಂದೇ ಸುಸ್ಥಿತಿಗೆ ತರುವ ಮೂಲ ಆಧಾರವೆಂದು ನಂಬುತ್ತಾನೆ. ಅವನು ಕಮಲಾಪುರದ ವಕೀಲರಾದ ಅಮೃತರಾಯನ ನೆರವು ಪಡೆದು ತನ್ನ ವಿದ್ಯಾಭ್ಯಾಸ ಮುಂದುವರೆಸುತ್ತಾನೆ. ಈ ಬೆಳವಣಿಗೆ ಅಂಬಾಬಾಯಿಯ ಸಾಂಪ್ರದಾಯಿಕ ಜೀವನ ಮೌಲ್ಯಗಳಿಗೆ ವಿರುದ್ಧವಾಗಿ ಹೊಸ ಜೀವನ ಮೌಲ್ಯಗಳನ್ನು ಸಮಾಜಕ್ಕೆ ಪರಿಚಯಿಸಿ ಕೊಡುವ ಮಾರ್ಗವಾಗಿದೆ. ಇದಕ್ಕೆ ಪರ್ಯಾಯವಾಗಿ ಸುಂದರರಾಯನ ಕುಟುಂಬದ ಮೇಲಿನ ಅಂಬಾಬಾಯಿಯ ದ್ವೇಷ ಕಡಿಮೆಯಾಗುವುದಿಲ್ಲ. ತನ್ನ ಮಗಳು ಇಂದಿರೆಗೆ ತಮ್ಮ ಘನತೆ, ಗೌರವ, ಸ್ಥಾನಮಾನ, ಪ್ರತಿಷ್ಠೆಗಳಿಗೆ ತಕ್ಕಂತೆ ಬಾಲ್ಯವಿವಾಹ ಮಾಡುತ್ತಾಳೆ. ಭೀಮರಾಯ ಕಾಯಿಲೆ ಬಿದ್ದಾಗ, ಅಳಿಯ ರೋಗಿಷ್ಠನಾದಾಗ ಅವರಿಗೆ ಇಂಗ್ಲಿಷ್ ಔಷಧೋಪಚಾರ ನಡೆಸುವಲ್ಲಿ ವಿರೋಧ ಉಂಟಾಗುತ್ತದೆ. ಇಂಗ್ಲಿಷ್ ಔಷಧಿಯಿಂದ ಜಾತಿ ಕೆಡುವುದರಿಂದ ನಾಟಿ ವೈದ್ಯರನ್ನು ಅವಲಂಬಿಸುವದೇ ಉತ್ತಮವೆಂದು ಪ್ರತಿಪಾದಿಸಲಾಗುತ್ತದೆ. ತನ್ನ ಮಗಳು ಬಾಲವಿಧವೆಯಾದಾಗ ಆಕೆಯನ್ನು ವಿರಕ್ತತೆಯ ಹಾದಿಯಲ್ಲಿ ತರಲು ಯತ್ನಿಸಿ ಸೋಲುತ್ತಾಳೆ. ಎಲ್ಲವೂ ತಾನು ಬಯಸಿದಂತೆಯೆ ನಡೆಯಬೇಕೆಂಬ ಅಂಬಾಬಾಯಿಯ ಹಟ ಎಲ್ಲವೂ ಅವಳ ಕೈ ಮೀರಿ ಹೋಗುವಂತೆ ಮಾಡುತ್ತದೆ. ಮಗಳ ಮನಸ್ಸನ್ನು ಅರಿಯಲಾಗದೆ ಅವಳನ್ನು ತಾನು ಬಯಸಿದ ಸಾಂಪ್ರದಾಯಿಕ ಮೌಲ್ಯಗಳಿಗೆ ಅನುಗುಣವಾಗಿ ಬೆಳೆಸಲಾರದೆ ಹೋದರೂ ಅಂಬಾಬಾಯಿ ಸೋಲೊಪ್ಪಿಕೊಳ್ಳಲು ಸಿದ್ಧಳಿರುವುದಿಲ್ಲ. ಇದರ ಫಲವಾಗಿ ಇಂದಿರೆ ಹೆತ್ತವರ ಕೈಬಿಟ್ಟು ಹೊಸ ಬಾಳು ಹುಡುಕಿಕೊಂಡು ಅಮೃತರಾಯ ಮತ್ತು ಜಲಜಾಕ್ಷಿಯರ ಆಶ್ರಯ ಪಡೆಯುತ್ತಾಳೆ. ಅವರ ನೆರವಿನಿಂದ ಅರ್ಧಕ್ಕೆ ನಿಂತಿದ್ದ ಶಿಕ್ಷಣವನ್ನು ತನ್ನ ಬಯಕೆಯಂತೆ ಪೂರೈಸಿಕೊಂಡು ಸೂಕ್ಷ್ಮ ವಿವೇಚನಾ ಪ್ರಜ್ಞೆಯುಳ್ಳ ಒಬ್ಬ ಪ್ರೌಢ ಮಹಿಳೆಯಾಗಿ ಹೊರಹೊಮ್ಮುತ್ತಾಳೆ.

ನಂತರದಲ್ಲಿ ಸಂಪ್ರದಾಯ ಪ್ರಜ್ಞೆಯ ಅಂಬಾಬಾಯಿ ಮತ್ತು ಭೀಮರಾಯ ಆಧುನಿಕ ಪ್ರಜ್ಞೆಯ ತಮ್ಮ ಮಗಳ ಏಳಿಗೆಯನ್ನು ಸಹಿಸದೆ, ಆಕೆಯ ಜೀವನದ ಪ್ರತಿಯೊಂದು ಬೆಳವಣಿಗೆಯನ್ನು

ವ್ಯಂಗ್ಯವಾಗಿ ಅಣಕಿಸುತ್ತಾ ಪರಕೀಯರಂತೆ ನಡೆದುಕೊಳ್ಳುತ್ತಾರೆ. ಅದಕ್ಕೆ ತಮ್ಮ ಮಗಳು ತಮ್ಮನ್ನು ವಿರೋಧಿಸಿದ್ದು, ಜಾತಿ ಮರ್ಯಾದೆಯನ್ನು ಕೆಡಿಸಿದ್ದು, ತಮ್ಮ ವಿರೋಧಿ ಅಮೃತರಾಯನ ಆಶ್ರಯದಲ್ಲಿ ಇಂಗ್ಲಿಷ್ ಶಿಕ್ಷಣ ಪಡೆದದ್ದು ಕಾರಣವಾಗಿದೆ. ಇಡೀ ಕಾದಂಬರಿಯಲ್ಲಿ ಹೀಗೆ ಅಂಬಾಬಾಯಿ, ಭೀಮರಾಯ ಅವನ ಸುತ್ತ ನೆರೆವ ಸಕಲ ಸಮಾಜ ಸಂಪ್ರದಾಯ ಜೀವನದ ಪಟ್ಟಭದ್ರ ಹಿತಾಸಕ್ತಿಗಳ ಗುಂಪಾಗಿ ಚಿತ್ರಿತವಾಗಿದೆ. ಇನ್ನೊಂದು ಕಡೆ ತಮ್ಮ ಮಗಳು ಇಂದಿರಾಬಾಯಿ, ಶತ್ರು ಸುಂದರರಾಯನ ಮಗ ಭಾಸ್ಕರರಾಯ, ಅವರಿಗೆ ಬೆಂಬಲ ನೀಡಿದ ಅಮೃತರಾಯ ಮತ್ತು ಜಲಜಾಕ್ಷಿ ಮತ್ತು ಅವರ ಪರಿವಾರ ಆಧುನಿಕ ಜೀವನದ ಪ್ರತೀಕವಾಗಿ ಹೊಸ ವಿಚಾರದ ನೆಲೆಗಟ್ಟಿನಲ್ಲಿ ಜೀವನ ಕಟ್ಟುವ ಹೊಸ ವ್ಯಕ್ತಿಯಂತೆ ಕಂಗೊಳಿಸಿದ್ದಾರೆ. ಸಾಂಪ್ರದಾಯಿಕ ಜೀವನದ ಮೇಲೆ ಆಧುನಿಕ ಜೀವನ ಮೇಲುಗೈ ಸಾಧಿಸಿದ ರೀತಿ ಈ ಕಾದಂಬರಿಯ ಬೆಳವಣಿಗೆಯಲ್ಲಿ ಪ್ರತಿ ಹಂತದಲ್ಲೂ ಮೈ ಪಡೆಯುತ್ತಾ ಹೋಗುತ್ತದೆ. ಕಾದಂಬರಿಯ ಉತ್ತುಂಗ ಶಿಖರದಲ್ಲಿ ಅಂಬಾಬಾಯಿ ಮತ್ತು ಭೀಮರಾಯ ವಿರೋಧಿಸುವ ಭಾಸ್ಕರರಾಯ ಮತ್ತು ವಿಧವೆ ಮಗಳು ಇಂದಿರೆಯ ವಿವಾಹ ಸಾರ್ವಜನಿಕವಾಗಿ ಘನತೆ ಗೌರವದೊಂದಿಗೆ ನಡೆಯುತ್ತದೆ. ಇದರಿಂದ ಸಮಾಜದಲ್ಲಿ ಹೊಸ ಬೆಳವಣಿಗೆಗೆ ನಾಂದಿ ಹಾಕುತ್ತದೆ. ಹೀಗೆ ಕಾದಂಬರಿ ಸಾಮಾಜಿಕ ಸಮಸ್ಯೆಗಳಲ್ಲಿ ಕೊಳೆತು ನಾರುತ್ತಿದ್ದ ಹಿಂದೂ ಸ್ತ್ರೀಯರ ಜೀವನದಲ್ಲಿ ಹೊಸಬೆಳಕು ಮೂಡಿಸುವ ಆಧುನಿಕ ಜೀವನದ ಪ್ರವೇಶ ಮತ್ತು ಅದರ ಸಫಲತೆಯನ್ನು ಸಾರುವ ಕೃತಿಯಾಗಿ ಮಂಡಿತವಾದಂತಿದೆ.

ಇಡೀ ಕಾದಂಬರಿಯಲ್ಲಿ ಸಾಂಪ್ರದಾಯಿಕ ಜೀವನ ಪ್ರತಿಪಾದಿಸುವ ಪಾತ್ರಗಳನ್ನು ದುಷ್ಟರ ಕೂಟವನ್ನಾಗಿಯೂ ಸ್ತ್ರೀ ಶಿಕ್ಷಣ, ವಿಧವಾ ವಿವಾಹ ಮೊದಲಾದ ಹೊಸ ವಿಚಾರ ಮತ್ತು ಆಚಾರಗಳಿಂದ ಕೂಡಿದ ಆಧುನಿಕ ಜೀವನ ವಾಸ್ತವ ಜೀವನವೆಂದು ಕಟ್ಟಿಕೊಟ್ಟಂತಿದೆ. ಹಳೆಯ ಜೀವನ ಮೌಲ್ಯಗಳ ಮತ್ತು ಹೊಸ ಜೀವನ ಮೌಲ್ಯಗಳ ನಡುವಿನ ಸಂಘರ್ಷ, ಕೇವಲ ಸಂಘರ್ಷವಾಗಿರದೆ ಒಂದು ಇನ್ನೊಂದರ ಮೇಲೆ ವಿಜಯ ಸಾಧಿಸುವ ಕ್ರಮದಂತೆಯೂ ಇದೆ. ಸನಾತನ ಕಾಲದಿಂದ ಪರಂಪರೆಯಲ್ಲಿ ಬಂದ ಅಂಶಗಳು ಪ್ರತಿಪಾದಿತ ನೆಲೆಯಲ್ಲಿದ್ದರೂ ಅದು ತನ್ನ ನೆಲೆಯನ್ನು ಕಳೆದುಕೊಳ್ಳುವುದು ಮತ್ತು ಇತ್ತೀಚಿನ ದಿನಮಾನಗಳಲ್ಲಿ ಕಂಡು ಬಂದ ಹೊಸ ವಿದ್ಯಮಾನಗಳು ವಿರೋಧಿ ನೆಲೆಯಲ್ಲಿ ಕಂಡರೂ ಅದು ಗಟ್ಟಿಯಾಗಿ ಬೆಳೆದು ಭದ್ರವಾಗಿ ಬೇರು ಇಳಿಬಿಡುವುದು – ಇವೆರಡರ ಘರ್ಷಣೆಯ ಕ್ರಮವನ್ನು ಚಿತ್ರಿಸಿದೆ. ಯಥಾಸ್ಥಿತಿಯಲ್ಲಿರುವುದು ಮತ್ತು ಬದಲಾವಣೆಗೆ ಒಳಪಡುವುದು ಇವು ಯಾವುದೇ ಕಾಲದ ಸಮಾಜ ಎದುರಿಸುವ ಸಾಮಾನ್ಯ ಲಕ್ಷಣವಾಗಿದೆ. ಹೀಗಿದ್ದರೂ ಸುಧಾರಣೆಯ ತಿಳಿವಳಿಕೆಯಿಂದ ಪ್ರೇರಿತವಾದ ೧೯ನೇ ಶತಮಾನದ ಕೊನೆಯ ದಶಕಗಳ ಸಂಧಿಕಾಲದ ಸಮಾಜ ಈ ಅಂಶವನ್ನು ತೀವ್ರಗತಿಯಲ್ಲಿ ಪಡೆದುಕೊಂಡಿತ್ತು ಎಂಬುದನ್ನು ಈ ಕೃತಿ ಚಿತ್ರಿಸುತ್ತದೆ.

ಜಾತಿಮಠ ಮತ್ತು ಸ್ತ್ರೀ ಸುಧಾರಣೆ

ಈ ಕೃತಿಯ ಮುಖ್ಯ ಘಟನೆಗಳನ್ನು ಪರಿವರ್ತನೆಯ ಮುಖ್ಯ ನೆಲೆಯಲ್ಲಿ ಚಿತ್ರಿಸಿದಂತೆ ಕಾಣುತ್ತದೆ. ಅದರ ಒಳದನಿ ಕೃತಿಯ ಸಂವೇದನೆಯನ್ನು ಒಳಗೊಂಡಿರಬಹುದೆ ಎಂಬುದು ಕುತೂಹಲದ ಅಂಶವಾಗಿದೆ.

ಕಾದಂಬರಿಯ ಕೊನೆಯಲ್ಲಿ ಭೀಮರಾಯ ಮತ್ತು ಅಂಬಾಬಾಯಿ ತಮ್ಮ ಪ್ರತಿಷ್ಠೆ, ಘನತೆ, ಶ್ರೀಮಂತಿಕೆಯ ಗರ್ವ, ಸಂಪ್ರದಾಯ ಜೀವನ ಮೌಲ್ಯಗಳು, ಸ್ವಹಿತಾಸಕ್ತಿಯನ್ನು ಕಡೆಗಣಿಸಿ ನಡೆದುಕೊಳ್ಳುವಂತೆ ಚಿತ್ರಿತವಾಗಿದೆ. ತಮ್ಮ ವಿರೋಧಿ ಪಕ್ಷದ ಸುಂದರರಾಯನ ಮಗ ಭಾಸ್ಕರರಾಯ, ಅವಳ ತಾಯಿ ಸುಶೀಲೆ, ಭಾಸ್ಕರರಾಯನನ್ನೇ ಮದುವೆಯಾದ ಮಗಳು ಇಂದಿರೆ, ಇವರೆಲ್ಲರಿಗೂ ಬೆಂಬಲ, ನೆರವು, ಆಶ್ರಯ ನೀಡಿ ತಮ್ಮ ವಿರುದ್ಧ ತೊಡೆತಟ್ಟಿದ ಅಮೃತರಾಯ ಮತ್ತು ಜಲಜಾಕ್ಷಿ– ಇವರೆಲ್ಲರ ಕ್ಷಮೆಬೇಡಿ ಅವರೊಂದಿಗೆ ಸ್ನೇಹ ಮತ್ತು ಪ್ರೀತಿಯಿಂದ ನಡೆದುಕೊಳ್ಳಲು ಅವಕಾಶವಾಗುವಂತೆ ಅವರಿಗೆಲ್ಲ ಊಟೋಪಚಾರ ನೀಡಿ ರಾಜಿ ಮಾಡಿಕೊಳ್ಳುವ ಸಂಗತಿಯೊಂದು ಬಣ್ಣನೆಯಾಗಿದೆ. ಇದು ಕಾದಂಬರಿಯ ಅಷ್ಟು ಮುಖ್ಯ ಭಾಗವಾಗಿ ಕಾಣದಿದ್ದರೂ ಅಮುಖ್ಯವೆಂದು ಪರಿಗಣಿಸಲು ಆಗದಂತೆ ಇದೆ. ಎರಡೂ ಗುಂಪಿನವರು ಒಂದಾಗಿ ಅಂದಿನಿಂದ ಎಲ್ಲರೂ ಸುಖದಿಂದಿದ್ದರು ಎಂದು ಕತೆಯ ಕೊನೆಯಲ್ಲಿ ಹೇಳುವುದು ನಿರೂಪಕನ ಆಶಯವಿದ್ದಂತೆ ಕಂಡರೂ ಇದು ಕೇವಲ ರಾಜಿ ಸಂಧಾನವಾಗಿರಲಾರದು. ಅಷ್ಟು ಸುಲಭವಾಗಿ ಭೀಮರಾಯ ಮತ್ತು ಅಂಬಾಬಾಯಿ ರಾಜೀ ಸೂತ್ರಕ್ಕೆ ಒಪ್ಪಬಹುದಾಗಿದ್ದಲ್ಲಿ ಇಡೀ ಕಾದಂಬರಿ ನಿರೂಪಿಸುವ ಘಟನೆಗಳು, ಬೆಳವಣಿಗೆಗಳು, ಪರಿಣಾಮಗಳು ನಡೆಯಬೇಕಾಗಿದ್ದ ಅವಶ್ಯಕತೆ ಇರಲಿಲ್ಲ. ಇಲ್ಲವೆ ಅವೆಲ್ಲದರ ಒಟ್ಟು ಫಲಿತವಾಗಿ ಈ ಬೆಳವಣಿಗೆ ಉಂಟಾಗಿರಬಹುದು. ಈ ಕುರಿತ ಪ್ರಶ್ನೆಗಳು ಮತ್ತಷ್ಟು ಕುತೂಹಲ ಹೆಚ್ಚಿಸುವ ಅಂಶವಾಗಿ ಕಾಣುತ್ತವೆ.

ಅಂಬಾಬಾಯಿ ಮತ್ತು ಭೀಮರಾಯ ತಮ್ಮ ವಿರೋಧಿಗಳ ಮೇಲೆ ಆರೋಪ ಹೊರಿಸಿ ತೇಜೋವಧೆ ಮಾಡಲು ಅವರ ವಿರುದ್ಧ ಜಾತಿಮಠದ ಗುರುಗಳಿಗೆ ತಳ್ಳು ಅರ್ಜಿ, ಮೂಕ ಅರ್ಜಿಗಳನ್ನು ಬರೆಯುವುದು, ಬಲ್ಲವರ ಮೂಲಕ ಹೇಳಿಸಿ ಪ್ರಭಾವ ಬೀರುವುದು ಮುಂತಾದ ಹೀನಕಾರ್ಯಗಳ ಮೂಲಕ ತಮ್ಮ ಸಣ್ಣತನ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಜಾತಿ ಮಠಗಳನ್ನು ತಮ್ಮ ವಕ್ತಾರರಂತೆ ಬಳಸಿಕೊಂಡು ವಿರೋಧಿಗಳನ್ನು ಮಣಿಸಲು ನಿರಂತರ ಪ್ರಯತ್ನ ಮಾಡಿರುವುದು ಸಂಘರ್ಷದ ಭಾಗವಾಗಿ ಪ್ರಧಾನ ನೆಲೆಯಲ್ಲಿ ಚಿತ್ರಿತವಾಗಿದೆ. ಆದರೂ ಅವರ ಸತತ ಪ್ರಯತ್ನಗಳು ವಿಫಲಗೊಂಡಿವೆ. ಸಾಂಪ್ರದಾಯಿಕ ರೀತಿ–ನೀತಿಗಳನ್ನು ಉಳಿಸಿಕೊಳ್ಳುವಲ್ಲಿ ಜಾತಿಮಠಗಳು ಪ್ರಮುಖ ಪಾತ್ರ ವಹಿಸುವುದು ಸಾಮಾನ್ಯವಾದ ಅಂಶವಾಗಿದೆ. ಸಾರಸ್ವತ ಬ್ರಾಹ್ಮಣರ ಜಾತಿಮಠ ತನ್ನ

ಪರಂಪರೆಯನ್ನು ಉಳಿಸಿಕೊಳ್ಳುವುದರಲ್ಲಿ ನಿಚ್ಚಳ ಅಭಿಪ್ರಾಯ ಹೊಂದಿದ್ದರೂ ಅದು ವರ್ತಮಾನದ ಆಗುಹೋಗುಗಳನ್ನು ಕಡೆಗಣಿಸಿ ತಾನು ಸಮಾಜದಲ್ಲಿ ವಹಿಸಿಕೊಂಡು ಬಂದಿರುವ ಮಹತ್ವದ ಕೇಂದ್ರ ಪಾತ್ರವನ್ನು ಬಿಟ್ಟುಕೊಡಲು ಇಷ್ಟಪಟ್ಟಂತೆ ಕಾಣುವುದಿಲ್ಲ. ಹಾಗಾಗಿಯೆ ಅದು ಬದಲಾವಣೆಯ ಗತಿಯನ್ನು ಗುರುತಿಸುವಂತೆ, ಬೆಂಬಲಿಸುವಂತೆ ತೋರಿಸಿಕೊಂಡಿದೆ. ಆದರೆ ಸಮಾಜದ ಬದಲಾವಣೆಯ ಗತಿ ತನ್ನ ಅನುಕೂಲಕ್ಕೆ ತಕ್ಕಂತೆ ಇರಬೇಕು ಮತ್ತು ಬಳಸಿಕೊಳ್ಳಬೇಕು ಎಂಬ ಧೋರಣೆಯನ್ನು ಸ್ವಮತ ಪ್ರತಿಪಾದನೆಯ ಸೂಕ್ಷ್ಮ ನೆಲೆಯಲ್ಲಿ ಅನ್ವಯಿಸಿಕೊಂಡಂತಿದೆ. ಇದರಿಂದಾಗಿ ಅಂಬಾಬಾಯಿ ಮತ್ತು ಭೀಮರಾಯರ ತಳ್ಳು ಅರ್ಜಿಗಳು, ಬಿನ್ನಹ ಪತ್ರಗಳು ಮಹತ್ವ ಪಡೆಯಲಾಗದೆ ಹೋಗುತ್ತವೆ.

ಅವರು ಜಾತಿ ಮಠಕ್ಕೆ ಆಗ್ರಹಿಸಿದ ಅಂಶಗಳಲ್ಲಿ ಸಡಿಲವಾಗುತ್ತಿರುವ ಜಾತಿ ಕಟ್ಟಳೆ, ಕಳೆದು ಹೋಗುತ್ತಿರುವ ಜಾತಿ ಮರ್ಯಾದೆ, ಕಡೆಗಣಿಸುತ್ತಿರುವ ನಿಷೇಧಿತ ಸಮುದ್ರ ಪಯಣ, ಹಾಗೂ ಮುರಿದುಬಿದ್ದಿರುವ ವಿಧವಾವಿವಾಹ ನಿಷೇಧಗಳು ಸೇರಿವೆ. ಬ್ರಾಹ್ಮಣ ಜಾತಿಗೆ ಇದರಿಂದ ಸನ್ಮಾರ್ಗ ಇಲ್ಲದಂತಾಗಿದೆ ಎಂದು ಸ್ವಜಾತಿಕರು ವ್ಯಕ್ತಪಡಿಸಿದ ಆತಂಕ ಜಾತಿಮಠವನ್ನು ಕಟ್ಟಿಹಾಕುತ್ತದೆ. ಬಿನ್ನಹ ಪತ್ರವನ್ನು ಪರಿಗಣಿಸಿದ ಜಾತಿಮಠ ಜಾತಿ ಕಟ್ಟಲೆ ಮೀರಿದ ೩೬೫ ಜನರನ್ನು ಪಟ್ಟಿ ಮಾಡುತ್ತದೆ. ಧರ್ಮ ಮತ್ತು ಜಾತಿ ವಿರೋಧಿಯಾದ ಅವರವರ ಕಾರ್ಯಗಳಿಗೆ ಅನುಸಾರವಾಗಿ ಪೂರ್ಣ ಬಹಿಷ್ಕಾರ, ಮಹಾಪ್ರಾಯಶ್ಚಿತ, ಬಹಿಷ್ಕಾರ, ಅಲ್ಪ ಪ್ರಾಯಶ್ಚಿತ ಹೀಗೆ ವಿವಿಧ ರೀತಿಯಲ್ಲಿ ಶಿಕ್ಷೆ ನೀಡಲು ಮುಂದಾಗುತ್ತದೆ. ಆದರೆ ಜಾತಿಮಠ ಗುರುತಿಸಿದ ಜಾತಿ ವಿರೋಧಿ ಕಾರ್ಯಗಳು ಅಂದಿನ ಕಾಲದ ಸಾಮಾನ್ಯ ವಿದ್ಯಮಾನವಾಗಿತ್ತು. ಹಿಂದೂ ಸಮಾಜದ ಇತರ ಜಾತಿ ಮಠಗಳು ಅದುವರೆಗೂ ಈ ಕುರಿತು ತಮ್ಮ ಆಕ್ಷೇಪವೆತ್ತದೆ ದಂಡನೆ ಶಿಕ್ಷೆ ವಿಧಿಸದೆ ಸುಮ್ಮನಿದ್ದು ಬಿಟ್ಟಿದ್ದವು. ಈ ಕುರಿತು ಕಠಿಣಕ್ರಮ ಜರುಗಿಸಲು ಮುಂದಾದಲ್ಲಿ ತಾನೇ ಅವಮಾನ–ನಿಂದೆಗೆ ಗುರಿಯಾಗಬಹುದಿತ್ತು. ಈ ಹಿನ್ನೆಲೆಯಲ್ಲಿ ಅಂಥ ಸಂದರ್ಭವನ್ನು ತಾನೇ ಸೃಷ್ಟಿಸಿ ಇಕ್ಕಟ್ಟಿಗೆ ಸಿಲುಕಿಕೊಳ್ಳುವ ಬದಲು ಎಚ್ಚರ ವಹಿಸುತ್ತದೆ.

ಆದರೂ ಅಂದಿನ ದಿನಮಾನದಲ್ಲಿ ಜಾತಿಯ ಅಗತ್ಯ ಮತ್ತು ಅದರ ಮೌಲ್ಯಗಳ ಬೆಳವಣಿಗೆ ಕುರಿತು ಪತ್ರಿಕೆಗಳಲ್ಲಿ ವ್ಯಾಪಕ ಚರ್ಚೆ ನಡೆಯುತ್ತದೆ. ಜಾತಿಮಠಗಳು ಇದುವರೆಗೂ ವಿಧವೆಯರಿಂದ ಪುಕ್ಕಟೆ ಸೇವೆ ಮಾಡಿಸಿಕೊಂಡಿದ್ದು ಅದು ತಪ್ಪಿಹೋಗುವುದೆಂಬ ಸಂಕುಚಿತ ದೃಷ್ಟಿಯಿಂದ ವಿಧವೆಯರ ವಿವಾಹವನ್ನು ವಿರೋಧಿಸುತ್ತಿದೆ ಎಂಬ ಹೊಸ ವಿಚಾರವೊಂದು ಹರಿದಾಡತೊಡಗುತ್ತದೆ. ಇದು ಅಂತಿಮವಾಗಿ ಜಾತಿಮಠದ ಮೂಲಕ್ಕೆ ಬಂದು ತಲುಪಿದ ಕಾರಣ ಅದರ ವಿರುದ್ಧ ಭಿನ್ನಹ ಮಾಡಿದವರೆ ತಮ್ಮ ಆರೋಪಗಳನ್ನು ಸಾಬೀತು ಪಡಿಸಬೇಕೆಂಬ ಬೆಳವಣಿಗೆ ಪಡೆದುಕೊಳ್ಳುತ್ತದೆ. ಅಂಬಾಬಾಯಿ ಮತ್ತು ಭೀಮರಾಯರು ಇದು ಎಲ್ಲಿ ತಮ್ಮ ಮೈಮೇಲೆ ಬೀಳುವುದೋ ಎಂದು ಹೆದರಿ ಸುಮ್ಮನಾಗಿಬಿಡುತ್ತಾರೆ.

ಈ ಸಂಬಂಧ ಲೇಖನವೊಂದು ಪತ್ರಿಕೆಯೊಂದರಲ್ಲಿ ಪ್ರಕಟವಾಗಿ, ಹಿಂದೂ ಶಾಸ್ತ್ರದಲ್ಲಿ ವಿಧಿಸಿದ ಯಾವ ನಿಯಮವನ್ನೂ ಬ್ರಾಹ್ಮಣರು ಪಾಲಿಸುತ್ತಿಲ್ಲವೆಂದು, ವಿಧವೆಯರು ತಮ್ಮ ಉಳಿದ ಜೀವಿತ ಕಾಲದಲ್ಲಿ ಹೇಗಿರಬೇಕೆಂದು ವಿಧಿಸಿದ ಕ್ರಮಗಳನ್ನು ಯಾರೂ ನಡೆದುಕೊಳ್ಳುತ್ತಿಲ್ಲವೆಂದು ಸಹ ವಿವರಿಸಿರುತ್ತದೆ. ಇತಿಹಾಸ ಪುರಾಣಗಳಲ್ಲಿ ಬ್ರಾಹ್ಮಣರು ಮಾಂಸಾಹಾರಿಗಳೂ ಮದ್ಯಪಾನಿಗಳೂ ಆಗಿದ್ದರೆಂದು, ಪೂರ್ವಕಾಲದಲ್ಲಿ ಸಮುದ್ರ ಪ್ರಯಾಣ ಮಾಡಲು ಅವಕಾಶ ಇತ್ತೆಂದು, ವಿಧವೆಯರಿಗೆ ಮರುಮದುವೆಯಾಗುವ ಶಾಸ್ತ್ರವಿಧಿ ಇತ್ತೆಂದು ಆದರೆ ಅವನ್ನು ಯಾರೂ ಈಗ ಪಾಲಿಸುತ್ತಿಲ್ಲವೆಂದು; ಜಾತಿಮಠಗಳು ಇವನ್ನು ಕುರಿತು ಆಲೋಚಿಸಬೇಕೆಂದು ಆ ಲೇಖನ ವಿವೇಚನೆಯ ಹಾದಿಯೊಂದನ್ನು ತೋರಿಸುತ್ತದೆ. ಇದರಿಂದ ಪ್ರಭಾವಿತರಾದ ಜಾತಿಮಠದ ಗುರುಗಳು ಅದರಲ್ಲಿಯ ಹೊಸಸಂಗತಿಯನ್ನು ಕುರಿತು ಆಲೋಚನೆ ಮಾಡತಕ್ಕದ್ದೆಂದು ಭಾವಿಸಿ ಮುಂದಿನ ಮಠದ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲು ಸೂಚಿಸುತ್ತಾರೆ. ಆದರೆ ಅದು ಮಠದ ಮುಂದಿನ ಯಾವುದೆ ಸಭೆಯಲ್ಲಿ ಚರ್ಚೆಗೆ ಮಂಡಿಸದೆ ಹೋದುದನ್ನು ನಿರೂಪಣೆ ಕಾಣಿಸುತ್ತದೆ.

ಆಧುನಿಕತೆಯ ನೆಪದಲ್ಲಿ ಸಮಕಾಲೀನ ಸಮಾಜದಲ್ಲಿ ಆಗಿರುವ ಬೆಳವಣಿಗೆಗಳು ಪೂರ್ವಕಾಲದ ಹಿಂದೂ ಸಮಾಜದಲ್ಲಿ ನಡೆದಿದ್ದುದೇ ಆಗಿತ್ತು. ಆದರೆ ಬ್ರಾಹ್ಮಣ ಸಮಾಜ ಆ ಕುರಿತು ಶಾಸ್ತ್ರವಿಧಿ ನಿಯಮಗಳನ್ನು ಪಾಲಿಸದೆ ಸುಮ್ಮನೆ ಗದ್ದಲವೆಬ್ಬಿಸಿತ್ತು. ಆಧುನಿಕ ಸಮಾಜದ ಸ್ತ್ರೀ ಸುಧಾರಣಾ ಮನೋಭಾವ ಪೂರ್ವದ ಹಿಂದೂ ಸಮಾಜದಲ್ಲಿ ನೆಲೆಸಿತ್ತು ಎಂಬ ನಿಲುವು ಪ್ರಕಟಪಡಿಸುತ್ತದೆ. ಹಿಂದೂ ಸಂಸ್ಕೃತಿಯಲ್ಲಿ ಎಲ್ಲವೂ ಇತ್ತು. ಅದು ಯಾವುದನ್ನೂ ಅನ್ಯ ಸಂಸ್ಕೃತಿಯಿಂದ ಕಲಿತುಕೊಳ್ಳಬೇಕಾದ ಅಗತ್ಯವಿಲ್ಲವೆಂದು ತನ್ನ ಪೂರ್ವವನ್ನು ವೈಭವೀಕರಿಸಿ ತೋರಿಸುವ ಕ್ರಮ ಇದಾಗಿದೆ. ಆಧುನಿಕತೆಯ ಆಚಾರ ವಿಚಾರಗಳೆಲ್ಲ ತನ್ನ ಮೂಲ ಸ್ವಭಾವವೆಂದು ಬಿಂಬಿಸುವ ರೂಪದಲ್ಲಿ ಸ್ವಮತ ಪ್ರತಿಪಾದನೆ ಮಂಡಿತವಾಗಿದೆ. ಆದರೂ ಸಮಕಾಲೀನ ಜಾತಿಮಠ ಆ ಕುರಿತು ಯಾವ ನಿರ್ಣಯವನ್ನೂ ತೆಗೆದುಕೊಳ್ಳದಿರುವುದು ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲವೆಂಬುದನ್ನು ಸಾರುತ್ತದೆ. ಹಾಗಾಗಿ ಅಂಬಾಬಾಯಿ ಮತ್ತು ಭೀಮರಾಯರು ತಮ್ಮ ಬಿನ್ನಹವನ್ನು ಹಿಂದಕ್ಕೆ ಪಡೆದು ಮತ್ತು ಆಧುನಿಕ ಜೀವನ ಮೌಲ್ಯದೊಂದಿಗಿನ ತಮ್ಮ ಭಿನ್ನಮತವನ್ನು ಬಿಟ್ಟುಕೊಟ್ಟ ಪ್ರತೀಕವಾಗಿ ಕ್ಷಮೆ ಕೇಳಿ ಅವರೊಂದಿಗೆ ಕೈ ಜೋಡಿಸುವ ಕ್ರಮ ನಿರೂಪಿತವಾಗಿದೆ.

ಇದು ಸಂಪ್ರದಾಯ ಆಧುನಿಕತೆಯೊಂದಿಗಿನ ಅನುಸಂಧಾನವೋ ಅಥವಾ ಆಧುನಿಕತೆ ಸಂಪ್ರದಾಯದೊಂದಿಗಿನ ಅನುಸಂಧಾನವೋ ಯಾವುದು ಎಂಬುದು ನಿಚ್ಚಳವಾಗಿಲ್ಲದಿದ್ದರೂ ಜಾತಿಮತದೊಂದಿಗಿನ ಅನುಸಂಧಾನ ಮಾತ್ರ ಅಂತಿಮವಾಗಿ ನಡೆದಿರುವುದು ಕಾಣುತ್ತದೆ. ಹಾಗಾಗಿ ಇಂದಿರಾಬಾಯಿ ಕೃತಿಯಲ್ಲಿ ಬಾಲವಿಧವೆ ತನ್ನ ಜೀವನದಲ್ಲಿ ವಿಧವಾ ವಿವಾಹ ಮಾಡಿಕೊಂಡು

ಸಾಮಾಜಿಕವಾದ ಎಲ್ಲ ಸಮಸ್ಯೆಗಳಿಂದ ಬಿಡಿಸಿಕೊಂಡು 'ಗೆದ್ದ' ಕತೆಯಾಗಿರುವಂತೆಯೆ ಹಿಂದೂ ಸಮಾಜದಲ್ಲಿ ಯಾವುದು ಸದ್ಧರ್ಮವಾಗಿದೆಯೋ ಅದು ತನ್ನ 'ವಿಜಯ' ಸಾಧಿಸಿದ ಗಾಥೆಯೂ ಆಗಿರುವಂತೆ ಕಾಣಿಸುತ್ತದೆ.

೬. ವಾಗ್ದೇವಿ

ಕನ್ನಡದ ಆರಂಭಿಕ ಎರಡು ಕಾದಂಬರಿಗಳಲ್ಲಿ ಇಂದಿರೆಯೆ ಕೃತಿಯ ಶೀರ್ಷಿಕೆಯೂ ಕೇಂದ್ರ ಪಾತ್ರವೂ ಆಗಿರುವಂತೆ ವಾಗ್ದೇವಿ ಕಾದಂಬರಿಯಲ್ಲೂ ಕಾಣುತ್ತೇವೆ. ಈ ಮೂರು ಕಾದಂಬರಿಗಳ ಶೀರ್ಷಿಕೆಗಳಲ್ಲಿ ಒಂದು ಬಗೆಯ ಸಾಮ್ಯತೆ ಇದೆ. ಮೂರು ಕಾದಂಬರಿಗಳು ಸ್ತ್ರೀಯ ಪಾತ್ರವನ್ನು ಕೇಂದ್ರೀಕರಿಸಿವೆ, ಚಲನಶೀಲ ಸಮಾಜದ ಗತಿಯನ್ನು ಕಟ್ಟಿಕೊಡುವ ಆಶಯ ಹೊಂದಿವೆ. ಬ್ರಹ್ಮನ ರಾಣಿಯಾದ ಸರಸ್ವತಿಗೆ ಇಂದಿರೆ, ವಾಗ್ದೇವಿ ಎಂಬ ಪರ್ಯಾಯ ಹೆಸರುಗಳಿರುವುದು ಗಮನಾರ್ಹ. ಸೃಷ್ಟಿ ದೈವವೆಂದು ನಂಬಲಾದ ಬ್ರಹ್ಮನ ಹೆಂಡತಿಯೂ ಮಗಳೂ ಆದ ವಿದ್ಯಾಧಿದೇವತೆ ಶಾರದಾಂಬೆಯ ಪರ್ಯಾಯ ಹೆಸರುಗಳನ್ನು ಈ ಕಾಲ ಘಟ್ಟದ ಕಾದಂಬರಿಕಾರರು ತಮ್ಮ ಕಾದಂಬರಿಯ ಮುಖ್ಯ ಪಾತ್ರಗಳಿಗೆ ಹೆಸರಿಸಿರುವುದು ಹಿಂದೂ ಸಮಾಜದ ಇಡೀ ಸ್ತ್ರೀ ಸಮುದಾಯದ ಪ್ರತೀಕವಾಗಿ ಕಂಡು ಅರಸಿದಂತೆ ಇದೆ. ಇಂದಿರಾಬಾಯಿ ಸಾಂಪ್ರದಾಯಿಕತೆಯಿಂದ ಆಧುನಿಕತೆ ಕಡೆಗೆ ಚಲಿಸಿ ತನ್ನ ವೈಯಕ್ತಿಕ ಜೀವನವನ್ನು ಮರು ರೂಪಿಸಿಕೊಳ್ಳುವ ಪಾತ್ರವಾಗಿದೆ. ಇಂದಿರೆ ಈ ಯಾವ ಕಗ್ಗಂಟುಗಳಿಗೂ ಸಿಕ್ಕಿಕೊಂಡಿರದ ಆದರೆ ತಾನು ಇಷ್ಟಪಟ್ಟ ವ್ಯಕ್ತಿಯನ್ನು ವರಿಸಲು ಎದುರಾದ ಎಲ್ಲ ಅಡೆತಡೆಗಳನ್ನು ದಾಟುವ ಪಾತ್ರವಾಗಿದೆ. ಹೀಗಿದ್ದರೂ ಸಮಕಾಲೀನ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಕುರಿತು ನಡೆಯುತ್ತಿದ್ದ ಚರ್ಚೆಗಳ ಹಿನ್ನೆಲೆ ಕಾದಂಬರಿಗೆ ಭಿನ್ನ ಆಯಾಮವನ್ನು ತಂದುಕೊಟ್ಟಿದೆ. ವಾಗ್ದೇವಿ ಕೃತಿ ಸಂಧಿಕಾಲದ ಸ್ಥಿತ್ಯಂತರದಲ್ಲಿರುವ ಸಮಾಜದಲ್ಲಿನ ಸ್ತ್ರೀಯರ ಸ್ಥಾನಮಾನ ಕುರಿತ ಹೋರಾಟದ ಬದುಕನ್ನು ಚಿತ್ರಿಸುವುದಿಲ್ಲ. ಅದರ ಬದಲು ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಲ್ಲಿಯೆ ಸ್ತ್ರೀಯರ ಸ್ಥಿತಿಗತಿಗಳ ಕುರಿತು ಕೇಂದ್ರ ಗಮನ ಹರಿಸುತ್ತದೆ. ಮಾಡಿದ್ದುಣ್ಣೋ ಮಹಾರಾಯ ಕೂಡ ಸ್ತ್ರೀ ಪಾತ್ರಗಳ ಸುತ್ತಲೇ ಸುತ್ತುತ್ತದೆ. ಹೀಗೆ ಇವು ಮೇಲುನೋಟಕ್ಕೆ ಸ್ತ್ರೀ ವಿಷಯದಲ್ಲಿ ಸಾಮ್ಯತೆ ಇರುವಂತೆ ಕಾಣುತ್ತವೆ. ಆದರೂ ವಾಗ್ದೇವಿಯ ನಿರೂಪಣಾ ಧಾಟಿ ಮತ್ತು ವಸ್ತು ವಿನ್ಯಾಸದಲ್ಲಿ ಭಿನ್ನತೆ ಮೆರೆಯುವಂತೆ ಕಾಣುತ್ತದೆ. ವಿ. ಎಂ. ಇನಾಂದರರು ಈ ಕೃತಿಯನ್ನು ಹೀಗೆ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುತ್ತಾರೆ.

"ಇಂದಿರಾಬಾಯಿ"ಯಲ್ಲಿ ಸಾಧುಸಂತರು, ಮಠಾಧಿಪತಿಗಳು ಅನುಷಂಗಿಕವಾಗಿ ಬಂದರೆ ಬೋಳಾರ ಬಾಬೂರಾಯರ "ವಾಗ್ದೇವಿ"ಯಲ್ಲಿ ಒಬ್ಬ ಮಠಾಧೀಶರು ಮತ್ತು ಅವರು ಮೋಹಿಸಿ

ವಶವಾಗಿಸಿಕೊಂಡ ಮದುವೆಯಾದ ಹೆಂಗಸು ವಾಗ್ದೇವಿಯೇ ಕೇಂದ್ರ ಪಾತ್ರಗಳಾಗುತ್ತಾರೆ. ಧರ್ಮಪೀಠವೊಂದರಲ್ಲಿ ನಡೆಯುವ ಅನಾಚಾರ, ಪೀಠಾಧಿಕಾರ ಹಾಗೂ ಅದರ ಸ್ವತ್ತುಗಳಿಗಾಗಿ ನಡೆಯುವ ಒಳಜಗಳದ ರಾಜಕೀಯ, ಕಾವಿ ಬಟ್ಟೆಯ ತೆರೆಯ ಹಿಂದುಗಡೆಯಲ್ಲಿ ನಡೆಯುವ ಅನೇಕ ಸಂಚುಗಳ ನಾಟಕ ಈ ಕಾದಂಬರಿಗೆ ವಸ್ತುವಾಗಿದೆ. ಮೊದಲಿನದರಲ್ಲಿ ಸಾರಸ್ವತ ಸಮಾಜದ ಮಠಗಳಾದರೆ, ಎರಡನೆಯದರಲ್ಲಿ ಮಧ್ವ ಸಮಾಜ ಮತ್ತು ಮಠ ಕಾಣಿಸಿಕೊಳ್ಳುತ್ತದೆ. ತನ್ನಲ್ಲಿ ಹುಟ್ಟಿದ ಗಂಡು ಮಗುವನ್ನು ಯತಿ ಪೀಠದ ಉತ್ತರಾಧಿಕಾರಿಯಾಗಿಸಬೇಕೆಂಬ ಷರತ್ತಿನ ಮೇಲೆ ಮಠಾಧಿಪತಿಗಳೊಬ್ಬರಿಗೆ ವಶಳಾದ ವಾಗ್ದೇವಿ ಅವರ ಅನಾಚಾರದ ತನಿಖೆ ಮಾಡ ಬಂದವರನ್ನೇ ವಶಪಡಿಸಿಕೊಂಡು ಯತಿಯ "ಮರ್ಯಾದೆ"ಯನ್ನು ಉಳಿಸುತ್ತಾಳಲ್ಲದೆ ತನ್ನ ಮಗನ ನಿಮಿತ್ತವಾಗಿ ಮಠದಲ್ಲಿಯೇ ನಡೆದಿದ್ದ ಕೊಲೆಯೊಂದನ್ನು ಕೊತವಾಲ ಹಾಗೂ ಆತನ ಮೇಲಾಧಿಕಾರಿಯೊಡನೆ ಸ್ನೇಹ ಬೆಳೆಯಿಸಿ ಮುಚ್ಚಿ ಬಿಡುತ್ತಾಳೆ. ಯತಿಗಳು ಅಪಸ್ಮಾರಕ್ಕೆ ಬಲಿಯಾಗಿ ನಿಧನವಾದಾಗ ಆಕೆಯ ಮಗ ಅಧಿಕಾರ ವಹಿಸಿಕೊಳ್ಳುವುದಕ್ಕೆ ಇತರ ಮಠಗಳಿಂದ ತಡೆಯುಂಟಾಗುತ್ತದೆ. ವಾಗ್ದೇವಿ ಮಠದಲ್ಲಿಯ ಧನಕನಕಾದಿಗಳನ್ನು ಎತ್ತಿ ಮಗನೊಂದಿಗೆ ಓಡಿ ಹೋಗುತ್ತಾಳೆನ್ನುವುದು ಕಥೆಯಲ್ಲಿಯ ಮುಖ್ಯಾಂಶ. ಹೆಣ್ಣಿನ ಮೋಹಜಾಲದಲ್ಲಿ ಸಿಕ್ಕಿಬಿದ್ದ ಮಠಾಧಿಪತಿ ಹಾಗೂ ಇತರರು, ಅಂಥ ಬಲೆಯನ್ನು ಬೀಸುವ ಹೆಣ್ಣುಗಳು, ಆಸೆಬುರುಕ ಬ್ರಾಹ್ಮಣರು, ಭ್ರಷ್ಟರಾದ ಅಧಿಕಾರಿಗಳು ತಮ್ಮ ಜಾತಿಯ ಹಮ್ಮಿನಲ್ಲಿಯೇ ಮೆರೆಯುವ ದಿವಾನರು, ಅಲ್ಪ ಲಾಭಕ್ಕಾಗಿ ಅನಾಚಾರಗಳಲ್ಲಿ ಸಹಕರಿಸುವ ಪಾರುಪತ್ಯಗಾರರು; ಮಠದ ಸ್ವತ್ತಿನ ವಿಷಯದಲ್ಲಿಯ ವ್ಯಾಜ್ಯಗಳಲ್ಲಿ ಪಾಲುದಾರರಾಗಿ ಅಲ್ಲಿಯ ತೊಡಕುಗಳನ್ನು ಇನ್ನೂ ತೊಡಕಾಗಿಸುವ ಸಮಯ ಸಾಧಕರು, ಎಂಬಂಥ ಪಾತ್ರಗಳು ಜೀವಂತವಾಗಿ ಚಿತ್ರಿತವಾಗಿವೆ. ಕಥೆಯ ಸನ್ನಿವೇಶಗಳು ಕುತೂಹಲಕಾರಿಯಾಗಿ ಬೆಳೆಯುತ್ತ ಹೋಗುತ್ತವೆ. ಆದರೆ ಕಥೆಗಿಂತ ಮುಖ್ಯವಾದದ್ದು ಅದರಲ್ಲಿ ಎದ್ದು ಕಾಣುವ ಸಾಮಾಜಿಕ ಪ್ರವೃತ್ತಿಗಳ ಬಗೆಯಲ್ಲಿಯ ಲೇಖಕರ ದೃಷ್ಟಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಬೋಳಾರರದು ಕ್ರಾಂತಿಕಾರಿಯಾದ ಸುಧಾರಣಾವಾದವಲ್ಲ, ಅಷ್ಟೊಂದು ಬಗೆಯ ಅನಾಚಾರಗಳಿಗೆ ಆಶ್ರಯವಾಗಿದ್ದ ಮಠದ ವಿರುದ್ಧ ಯಾವ ಕ್ರಿಯೆಯೂ ನಡೆಯುವುದಿಲ್ಲ. ಆದರೆ ಇಂಥದು ನಡೆಯಬಾರದು ಎನ್ನುವುದು, ಅಂಥದೆಲ್ಲವನ್ನು ನಡೆಯಗೊಟ್ಟವರಿಗೆ, ಅದರಲ್ಲಿ ಸಹಕರಿಸಿದವರಿಗೆ, ಒದಗುವ ಗತಿ ಕಥೆಯ ಕೊನೆಯಲ್ಲಿ ವ್ಯಕ್ತವಾಗುತ್ತದೆ. ಯತಿಗಳು ಅಪಸ್ಮಾರಕ್ಕೆ ತುತ್ತಾಗುತ್ತಾರೆ; ಅಷ್ಟೆಲ್ಲ ಕಾರುಭಾರ ಮಾಡಿ ಮೆರೆದಿದ್ದ ವಾಗ್ದೇವಿ ಓಡಿ ಹೋಗಬೇಕಾಗುತ್ತದೆ. ಆಕೆಯ ಷರತ್ತು ಫಲಿಸುವುದಿಲ್ಲ. ನಡೆಯದಿರಬಹುದಾದ ಒಂದು ಘಟನಾವಳಿಯನ್ನು ದೂರ ನಿಂತು ಯಥಾವತ್ತಾಗಿ ಚಿತ್ರಿಸುವ ಈ ಕಾದಂಬರಿ ಓದುಗರನ್ನು ಸೆರೆಹಿಡಿಯಬಲ್ಲ ಒಂದು ಕಥೆಯನ್ನು ಹೇಳುವುದರ ಜೊತೆಗೆ ಸಮಕಾಲಿನ ಸಮಾಜ ವಿಮರ್ಶೆಗೊಂದು ಮಾಧ್ಯಮವಾಗಿಯೂ ನಿಲ್ಲುತ್ತದೆ. (ಇಂದಿರಾ ಮುನ್ನುಡಿ;೨೮.೨೯).

ಈ ಸಮೀಕ್ಷೆ ಸಮಕಾಲೀನ ಸಮಾಜದ ವಿಮರ್ಶೆಯನ್ನು ತನ್ನ ಆಶಯದಲ್ಲಿ ಕೇಂದ್ರವಾಗಿ ಇರಿಸಿಕೊಂಡಿದೆ ಎಂದು ಹೇಳಿದೆ. ಆದರೆ ಈ ಕಾದಂಬರಿಯಲ್ಲಿ ಸಮಕಾಲೀನ ಸಮಾಜದಲ್ಲಿ ನಡೆಯುತ್ತಿದ್ದ ಸ್ತ್ರೀ ವಿಷಯ ಕುರಿತ ವಾಗ್ವಾದಗಳ ಯಾವ ಛಾಯೆಯೂ ನುಸುಳಿದಂತೆ ಕಾಣುವುದಿಲ್ಲ. ಹೀಗಿದ್ದರೂ ಸ್ತ್ರೀ ವಿಷಯವೇ ಈ ಕೃತಿಯ ಕೇಂದ್ರ ಬಿಂದು ಎಂಬುದನ್ನು ಶೀರ್ಷಿಕೆಯೂ ಕಥಾ ನಿರೂಪಣೆಯೂ ಸಾರುತ್ತದೆ. ಆಧುನಿಕ ಚಿಂತನೆಗಳಾದ ಸ್ತ್ರೀಯರ ಹಕ್ಕು, ಸ್ವಾತಂತ್ರ್ಯ, ಸಮಾನತೆ, ಅವರು ಎದುರಿಸುತ್ತಿದ್ದ ಸಮಸ್ಯೆಗಳು, ಅವರ ಸ್ಥಾನಮಾನ ಈ ಯಾವ ವಿಷಯಗಳನ್ನು ಮುಟ್ಟದೆ ಸ್ತ್ರೀಯ ಸ್ಥಿತಿಗತಿಗಳನ್ನು ಕಟ್ಟಿಕೊಡುವ ಈ ಕೃತಿಯ ಸಾಂಸ್ಕೃತಿಕ ರಾಜಕಾರಣ ಯಾವುದೆಂಬುದು ಕುತೂಹಲ ಹುಟ್ಟಿಸುತ್ತದೆ. ಈ ಕಾದಂಬರಿಯಲ್ಲಿ ನೇಯ್ದಿರುವ ವಿಚಾರಧಾರೆಗಳ ಸ್ವರೂಪದಲ್ಲಿ ಇರಬಹುದಾದ ಸಂಘರ್ಷದ ನೆಲೆಗಳು ಅಥವ ಅನುಸಂಧಾನದ ಸ್ವರೂಪ ಯಾವ ಬಗೆಯದೆಂದು ನೋಡಬಹುದು.

ಪುರುಷಾರ್ಥ ಸಾಧನೆ ಮತ್ತು ಸ್ತ್ರೀ

ಚಂಚಲನೇತ್ರ ಮಧ್ವರ ಪಂಚಮಠಗಳಲ್ಲಿ ಒಂದಾದ ಕುಮುದಾಪುರದ ಯತಿ. ಮಠದಲ್ಲಿ ಮುದ್ರಾಧಾರಣೆ ನಡೆಯುತ್ತಿದ್ದ ಸಂದರ್ಭದಲ್ಲಿ ಆ ಮಠದ ಯತಿ ತನ್ನ ಪೂರ್ವಾಶ್ರಮದ ಅಣ್ಣನ ನಾದಿನಿ ವಾಗ್ದೇವಿಯನ್ನು ಕಂಡು ಮೋಹಿತನಾಗುತ್ತಾನೆ. ಮೂವತ್ತು ವರ್ಷದ ಆ ಯತಿ ತನ್ನ ತುಂಬು ಯೌವನದಲ್ಲಿ ಪ್ರಕೃತಿ ನಿಯಮವನ್ನು ಮೀರಲಾಗದೆ ಮಠದ ಪಾರುಪತ್ಯಗಾರ ಮತ್ತು ಆತ್ಮೀಯನಾದ ವೆಂಕಟಪತಿ ಆಚಾರ್ಯನಿಗೆ ತನ್ನ ಮನಸ್ಥಿತಿಯನ್ನು ವಿವರಿಸುತ್ತಾನೆ. ವಾಗ್ದೇವಿಯನ್ನು ಕೈವಶ ಮಾಡಿಕೊಳ್ಳಲು ಅವನ ಸಹಾಯ ಪಡೆಯುತ್ತಾನೆ. ವಾಗ್ದೇವಿ ಮದುವೆಯಾದ ಹೆಂಗಸಾಗಿದ್ದರೂ ಹೆಣ್ಣಿನ ಸಾಮಾಜಿಕ ನಿಯಮವನ್ನು ಮೀರಿ ಮಠಾಧಿಪತಿಯ ವಶಳಾಗುತ್ತಾಳೆ. ಇದರಿಂದ ಮಠದಲ್ಲಿ ಪುರಾಣ ಹೇಳುವ ವೃತ್ತಿ ಮಾಡುವ ವೇದವ್ಯಾಸ ಉಪಾಧ್ಯ ಎಂಬುವನು ಮಠದ ಯತಿಯ ವಿರುದ್ಧ ತಿರುಗಿ ಬೀಳುತ್ತಾನೆ. ಅವನ ಹೋರಾಟದ ನಡುವೆಯೆ ವಾಗ್ದೇವಿ ಯತಿಗೆ ಗಂಡುಮಗುವನ್ನು ಹೆತ್ತುಕೊಡುತ್ತಾಳೆ. ಯತಿಯ ಸಂಸಾರ ಸೋಗಿನ ಮುಸುಕಿನಲ್ಲಿ ಗುಪ್ತವಾಗಿ ನಡೆಯುತ್ತಿದ್ದರೆ ಆ ಮುಸುಕು ಸೆಳೆದು ಮಠದಲ್ಲಿ ಸಾಂಪ್ರದಾಯಿಕ ಜೀವನ ಮೌಲ್ಯಗಳನ್ನು ಸ್ಥಾಪಿಸಲು ನಿರಂತರ ಪ್ರಯತ್ನ ನಡೆಯುತ್ತದೆ. ಅದನ್ನು ವಾಗ್ದೇವಿ ವಿಫಲಗೊಳಿಸುವಲ್ಲಿ ಸದಾ ಮೇಲುಗೈ ಪಡೆಯುತ್ತಾಳೆ. ಮಗನಿಗೆ ಮಠದ ಉತ್ತರಾಧಿಕಾರಿಯನ್ನಾಗಿ ಮಾಡುವ ಸಂದರ್ಭದಲ್ಲಿ ಸ್ಥಿತಿ ಬಿಗಡಾಯಿಸುತ್ತದೆ. ಯತಿಯನ್ನು ಕಳೆದುಕೊಂಡ ವಾಗ್ದೇವಿ ಮಠಬಿಟ್ಟು ಹೊರ ಹೋಗುತ್ತಾಳೆ. ಮಗ ಅನ್ಯ ಜಾತಿಯ ಹುಡುಗಿಯನ್ನು ಕರೆದುಕೊಂಡು ದೇಶಾಂತರ ಹೋಗುತ್ತಾನೆ. ಆದರೂ ಮತ್ತೆ ಅವಳಿರುವಲ್ಲಿಗೆ ಮಗ ಬಂದು ಅವಳನ್ನು ತನ್ನಲ್ಲಿಗೆ ಕರೆದುಕೊಂಡು ಹೋಗಿ ನೆಲೆಸುತ್ತಾನೆ.

ಇದು ವಾಗ್ದೇವಿ ಕಾದಂಬರಿಯ ಮುಖ್ಯ ಮತ್ತು ಸರಳವಾದ ಎಳೆಯಾಗಿದೆ. ಹಿಂದೂ ಸಮಾಜದಲ್ಲಿ ವಾಗ್ದೇವಿ ಪುರುಷನೊಬ್ಬನನ್ನು ಮದುವೆಯಾದ ಅನ್ಯಸ್ತ್ರೀಯ ಸ್ಥಾನದಲ್ಲಿ ಇದ್ದಾಳೆ. ಯತಿ ಚಂಚಲನೇತ್ರ ಸನ್ಯಾಸತ್ವ ಪಡೆದು ಹದಿನೈದು ವರ್ಷಗಳ ನಂತರದ ಕಾಲದಲ್ಲಿ ನದಿಯಲ್ಲಿ ಸ್ನಾನ ಮಾಡುತ್ತಿದ್ದ ವಾಗ್ದೇವಿಯನ್ನು ಕಂಡು "ಆಹಾ! ಸಾಕ್ಷಾತ್ ಅಜನರಾಣಿಯೇ ಸರಿ" ಎಂದು ಉದ್ಗಾರ ತೆಗೆಯುತ್ತಾನೆ. ಯತಿ ಚಂಚಲನೇತ್ರ ವರ್ಣಾಶ್ರಮ ಧರ್ಮದ ಅನುಸಾರ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಆಶ್ರಮಗಳನ್ನು ಕಾಲಾನುಕ್ರಮದಲ್ಲಿ ಏರಿದವನಲ್ಲ. ಬಾಲ್ಯಾವಸ್ಥೆ ಕಳೆದು ಪ್ರೌಢವಸ್ಥೆಯ ಮೊದಲ ಘಟ್ಟದಲ್ಲಿಯೆ ಆತ ಸನ್ಯಾಸಿಯಾದವನು. ಮಧ್ವ ಸಮಾಜವನ್ನು ಸಂಘಟಿತ ರೂಪದಲ್ಲಿ ಮುನ್ನಡೆಸುವ ಜವಾಬ್ದಾರಿ ಆ ಮಠದ ಯತಿಯಾಗಿ ಅವನ ಮೇಲಿದೆ. ಇಡೀ ಮಧ್ವ ಸಮಾಜದ ಮೇಲಿನ ಅಧಿಕಾರ ಮತ್ತು ಮಠದ ಸಮಸ್ತ ಆಸ್ತಿಯನ್ನು ಉಪಭೋಗಿಸುವ ಹಕ್ಕು ಆ ಯತಿಗೆ ತನ್ನ ಸ್ಥಾನದಿಂದ ಲಭಿಸಿದೆ. ಹೀಗಾಗಿ ಆತ ಮಧ್ವ ಮತವನ್ನು ಪೊರೆಯುವವನೂ ಪೋಷಿಸುವವನೂ ಪ್ರತಿಪಾದಿಸುವವನೂ ಧರ್ಮಾನುಯಾಯಿಗಳಿಗೆ ಮಾರ್ಗದರ್ಶಕನೂ ಆಗಿದ್ದು ಧರ್ಮದ ಪುರುಷಾರ್ಥವನ್ನು ಸಾಧಿಸುವ ಹಾದಿಯಲ್ಲಿ ಇದ್ದಾನೆ.

ಅದರೊಂದಿಗೆ ಚಿಕ್ಕಪ್ರಾಯದಲ್ಲೆ ಸನ್ಯಾಸ ಪಡೆದು ಮಧ್ವ ಮತ ತತ್ವವನ್ನೂ ಸಮಾಜವನ್ನೂ ಮುನ್ನಡೆಸುತ್ತ; ಜೀವನದ ಸಾರ್ಥಕತೆಯನ್ನು ಸ್ವತಃ ತಾನು ಸಾಧಿಸುತ್ತ; ಆ ಹಾದಿಯಲ್ಲಿ ಇರುವ ಇತರರಿಗೂ ನೆರವಾಗುತ್ತ; ಮೋಕ್ಷದ ಪುರುಷಾರ್ಥ ಸಾಧನೆಯಲ್ಲಿ ಸಾರ್ವಜನಿಕ ಜವಾಬ್ದಾರಿ ಸಾಧಿಸುವ ಮತ್ತು ವೈಯಕ್ತಿವಾಗಿ ನಿರ್ವಹಿಸುವ ಹೊಣೆ ಹೊತ್ತಿದ್ದಾನೆ.

ಆತ ತನ್ನ ಮಠದ ಏಳಿಗೆಯನ್ನೂ ಸಾಧಿಸಬೇಕಿದೆ. ಸಮಾಜದ ವಿವಿಧ ಸಮುದಾಯಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವನಿದ್ದಾನೆ. ಮಧ್ವ ಸಮಾಜದ ಆಂತರಿಕ ವ್ಯವಹಾರವನ್ನು ನಿರ್ವಹಿಸುತ್ತಿದ್ದಾನೆ. ನಾಡಿನ ಅಧಿಕಾರ ವರ್ಗವನ್ನು ಮಠದ ಹಿರಿಮೆ ಶ್ರೇಯಸ್ಸನ್ನು ಸಾಧಿಸುವ ಹಾದಿಯಲ್ಲಿ ಬಳಸಿಕೊಳ್ಳುವುದು ಅಗತ್ಯವಿದೆ. ಅದಕ್ಕಾಗಿ ತಂತ್ರೋಪಾಯಗಳನ್ನು ಕಾಲದಿಂದ ಕಾಲಕ್ಕೆ ರೂಪಿಸುತ್ತ ಇಡೀ ಸಮಾಜದ ಮೇಲೆ ನಿಯಂತ್ರಣ ಸಾಧಿಸಲು ರಾಜತಾಂತ್ರಿಕ ಗುಣವನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಯತಿ ಚಂಚಲನೇತ್ರ ಅರ್ಥದ ಪುರುಷಾರ್ಥದಲ್ಲಿ ತೊಡಗಿದ್ದಾನೆ.

ಇದರೊಂದಿಗೆ ಆತ ಬದಲಾದ ಸಾಮಾಜಿಕ ನಿಯಮಗಳ ಸಂದರ್ಭದಲ್ಲಿ ಕಾಮ ಪುರುಷಾರ್ಥವನ್ನು ಸಾಧಿಸಲು ಸನ್ಯಾಸಿಯಾಗಿ ಮಠಪೀಠದ ಯತಿಯಾಗಿ ನಿರ್ಬಂಧಿತ ಸ್ಥಿತಿಯಲ್ಲಿದ್ದಾನೆ. ಆದರೆ ವಯೋಮಾನಕ್ಕನುಗುಣವಾದ ಸಹಜ ಪ್ರವೃತ್ತಿ ಆತನ ಸನ್ಯಾಸ ಮತ್ತು ಯತಿ ಸ್ಥಿತಿಯಿಂದ ಬಿಡುಗಡೆ ಪಡೆಯಲು ಪುಟಿದೇಳುತ್ತಿದೆ. ಮಾನವ ಜೀವನ ಸಾರ್ಥಕವಾಗುವುದು ಧರ್ಮ, ಅರ್ಥ,

ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳ ಸಾಧನೆಯಿಂದ ಮಾತ್ರ ಎಂಬುದು ಹಿಂದೂ ಸಮಾಜ ಸನಾತನ ಕಾಲದಿಂದ ಪ್ರತಿಪಾದಿಸುತ್ತ ಬಂದಿರುವ ಅಂಶ ಯತಿಯ ಸುಪ್ತ ಮನಸ್ಸಿನಲ್ಲಿ ಭದ್ರವಾಗಿದೆ. ಹಾಗಾಗಿಯೆ ಆತ ತನ್ನ ಅತ್ತಿಗೆಯ ತಂಗಿಯನ್ನು ಕಂಡ ಕೂಡಲೆ ಅವಳಿಂದ ಆಕರ್ಷಿತನಾಗಿ ಮೋಹಭಾವದಿಂದ ಉದ್ಗಾರ ತೆಗೆಯುತ್ತಾನೆ. ಇದು ಅಂತಿಮವಾಗಿ ಅವಳನ್ನು ತನ್ನ ಕಾಮ ಪುರುಷಾರ್ಥ ಸಾಧನೆಯ ಪರಿಕರವಾಗಿ ಬಳಸಿಕೊಳ್ಳಲು ಕಾರಣವಾಗುತ್ತದೆ.

ಕಾಮಸೂತ್ರ ಹೆಣ್ಣನ್ನು ೧. ಕನ್ಯೆ ೨. ವಿವಾಹಿತ ಸ್ತ್ರೀ ೩. ಅನ್ಯ ಸ್ತ್ರೀ ೪. ವೇಶ್ಯೆ ಎಂದು ನಾಲ್ಕು ಗುಂಪುಗಳಲ್ಲಿ ವಿಂಗಡಿಸಿದೆ. ಕಾಮಪ್ರಜ್ಞೆ ತುಂಬ ಬೇಕಾಗಿರುವ ಖಾಲಿ ಬುರುಡೆಯಾಗಿ ಅದು ಕನ್ಯೆಯನ್ನು ಕಾಣುತ್ತದೆ. ಪತಿಸೇವೆಯ ವ್ರತದಲ್ಲಿ ಆದರ್ಶಗೊಳ್ಳಬೇಕಾದ ದಾಸಿಯಾಗಿ ವಿವಾಹಿತ ಸ್ತ್ರೀಯನ್ನು ಅರಸುತ್ತದೆ. ಅನ್ಯ ಸ್ತ್ರೀಯನ್ನು ಮತ್ತೊಬ್ಬ ಪುರುಷ ವಶೀಕರಿಸಿಕೊಳ್ಳಬಹುದಾದ ಸಾರ್ವಜನಿಕ ಆಸ್ತಿಯಾಗಿ ಪರಿಗಣಿಸುತ್ತದೆ. ವೇಶ್ಯೆಯನ್ನು ರತಿ ಪ್ರಜ್ಞೆಯ ಕೇಂದ್ರವಾಗಿ ಕಂಡಿದೆ.

ವಿವಾಹಿತ ಸ್ತ್ರೀಯರಲ್ಲಿ ಅನ್ಯ ಸ್ತ್ರೀಯರ ಹೆಣ್ಣಿನ ಲಕ್ಷಣಗಳನ್ನು ಗುರುತಿಸುತ್ತದೆ. ಅವರು ಪರಪುರುಷರಿಗೆ ವಶವಾಗದಿರುವ ಕಾರಣಗಳನ್ನು ವಿವರಿಸಿದೆ, ಅದಕ್ಕೆ ಪರಿಹಾರಗಳನ್ನು ಸೂಚಿಸಿದೆ. ಸ್ತ್ರೀ ವಶೀಕರಣ ವಿದ್ಯೆಯಲ್ಲಿ ನುರಿತ ಪುರುಷನ ಲಕ್ಷಣಗಳನ್ನು ಹೇಳಿದೆ. ಸುಲಭವಾಗಿ ವಶವಾಗುವ ಸ್ತ್ರೀಯರ ಲಕ್ಷಣಗಳನ್ನು ನೀಡಿದೆ. ಅನ್ಯ ಸ್ತ್ರೀಯರ ಇಂಗಿತವನ್ನು ಅರಿಯುವ ಉಪಾಯಗಳನ್ನು ವಿವರಿಸಿದೆ. ಅನ್ಯ ಸ್ತ್ರೀಯರನ್ನು ದೂತಿಯರ ಮೂಲಕ ವಶಪಡಿಸಿಕೊಳ್ಳುವ ಕ್ರಮಗಳನ್ನು ನಿರೂಪಿಸಿದೆ.

ಯತಿ ತಾನು ಮೋಹಿಸಿದ ವಾಗ್ದೇವಿಯನ್ನು ವಶಪಡಿಸಿಕೊಳ್ಳಲು ತನ್ನ ಮಠದ ಪಾರುಪತ್ಯಗಾರನನ್ನು ದೂತನಾಗಿ ಬಳಸಿಕೊಳ್ಳುತ್ತಾನೆ. ಇದು ಯತಿ ಚಂಚಲನೇತ್ರನಿಗೆ ವಾತ್ಸಾಯನನ ಕಾಮಸೂತ್ರ ಗ್ರಂಥದ ಪರಿಚಯ ಮತ್ತು ತಾನು ವಶಪಡಿಸಿಕೊಳ್ಳಬೇಕಾದ ಹೆಣ್ಣಿನ ವಿಷಯದಲ್ಲಿ ಅನುಸರಿಸಬೇಕಾದ ಉಪಾಯ ಅರಿತಿದ್ದ ಸೂಚನೆ ಆಗಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಯತಿ ಮತ್ತು ಸನ್ಯಾಸಿ ಆದ ಚಂಚಲನೇತ್ರ ಸದ್ಯದ ಬದಲಾದ ಸಾಮಾಜಿಕ ನಿರ್ಬಂಧಗಳ ನಡುವೆಯೂ 'ಕಾಮ ಪುರುಷಾರ್ಥ ಸಾಧನೆಯ ಹಾದಿಯಲ್ಲಿ ದಿಟ್ಟ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾದಂತೆ ಕಾಣುತ್ತದೆ. ಸಮಕಾಲೀನ ಸಮಾಜದ ಸಾಮಾಜಿಕ ನಿಯಮಗಳನ್ನು ದಾಟುವ ನೈತಿಕ ಸ್ಥೈರ್ಯ ಮತ್ತು ಪಾಪ ಪ್ರಜ್ಞಾರಹಿತ ಸ್ಥಿತಿಗೆ ಚಂಚಲನೇತ್ರನನ್ನು ತಳ್ಳುವುದು ಮತ್ತು ವಾಗ್ದೇವಿ ಕುರಿತು ಉತ್ಕಟ ಭಾವಾವೇಶಕ್ಕೆ ಒಳಗಾಗುವ ಸ್ಥಿತಿ ಮುಟ್ಟುವುದು – ಯತಿಯೂ ಸನ್ಯಾಸಿಯೂ ಆದ ವ್ಯಕ್ತಿಗೆ ಇಷ್ಟೆಲ್ಲ ಕಾರಣವಿಲ್ಲದೆ ಸಾಧ್ಯವಾಗಿಲ್ಲವೆಂದು ಹೇಳಬಹುದು. ವಯೋಮಾನ ಸಹಜವಾದ ಪ್ರವೃತ್ತಿಯನ್ನು ಅದುಮಿಟ್ಟುಕೊಳ್ಳುವುದು; ಮಾನವಾತೀತ ಸ್ಥಿತಿಯನ್ನು ಆವಾಹಿಸಿಕೊಂಡು ಪರರ ಕಣ್ಣಲ್ಲಿ ದೈವಾಂಶ ಸಂಭೂತನಂತೆ ಕಾಣಿಸಿಕೊಳ್ಳುವುದು ಮತ್ತು ಅದು ವಾಸ್ತವವೆನ್ನುವಂತೆ ನಟಿಸುವುದು

– ಇವು ಮಾನವ ಸಹಜ ಸ್ಥಿತಿಯಲ್ಲವೆಂದು ಯತಿ ಚಂಚಲನೇತ್ರನಿಗೆ ಕಂಡಿರಬೇಕು. ಮಠದ ಯತಿಯೊಬ್ಬನಿಗೆ ವಿಧಿಸಿದ ಎಲ್ಲ ಬಗೆಯ ನಿಷೇಧ ನಿಯಮಗಳನ್ನು ಬಿಟ್ಟುಕೊಟ್ಟು ಅಂತರಂಗದಲ್ಲಿ ಸಹಜೀವನ ನಡೆಸುತ್ತ ಹೊರಗೆ ಅದರ ಸೋಂಕಿಲ್ಲದಂತೆ ಇರುವುದು ಕೂಡ ಸೋಗು ಜೀವನವೇ ಆಗಿದೆ. ಹೀಗಿದ್ದರೂ ಚಂಚಲನೇತ್ರ ತನ್ನ ಕಾಮ ಸಾಧನೆಯ ಆವೇಶವನ್ನು ತುಳಿದಿಡಲಾಗದೆ ವಾಗ್ದೇವಿಯನ್ನು ಮಠದಲ್ಲಿ ತಂದಿಟ್ಟುಕೊಳ್ಳುವ ಸಂಗತಿ ಘಟಿಸಿದೆ. ಇದು ಯತಿಯ ಕಾಮಪುರುಷಾರ್ಥ ಸಾಧನೆಯ ಭಾಗವಾಗಿ ನಡೆದಿರುವಂತೆ ಕಾಣುತ್ತದೆ.

ಸಾಮಾಜಿಕ ನಿಯಮಗಳಿಗೆ ವ್ಯತಿರಿಕ್ತವಾಗಿ ವಾಗ್ದೇವಿಯನ್ನು ಪಡೆದ ಫಲವಾಗಿ ಅನೇಕ ಬಗೆಯ ಇಕ್ಕಟ್ಟುಗಳಿಗೆ, ಪ್ರತಿರೋಧಗಳಿಗೆ, ಪ್ರತಿಭಟನೆಗಳಿಗೆ, ಸಂಚು, ಸಮಯ ಸಾಧಕತನಗಳಿಗೆ ಚಂಚಲನೇತ್ರ ಗುರಿಯಾಗಿ ಅವೆಲ್ಲದರಿಂದ ಬಿಡಿಸಿಕೊಳ್ಳಲು ಉಪಾಯ ಮಾಡುವುದರಲ್ಲೇ ಆತ ಜೀವನ ಕಳೆದು ಹೋಗುತ್ತದೆ. ವಾಗ್ದೇವಿಗೆ ಕೊಟ್ಟ ಮಾತಿನಂತೆ ಅವಳಲ್ಲಿ ಹುಟ್ಟಿದ ತನ್ನ ಮಗನಿಗೆ ಯತಿಪೀಠದ ಉತ್ತರಾಧಿಕಾರಿಯನ್ನಾಗಿಯೂ ಮಾಡುತ್ತಾನೆ. ವಾಗ್ದೇವಿ ಮಠದಲ್ಲಿರಲು ಆರಂಭಿಸಿದ ದಿನದಿಂದ ಮಠದಲ್ಲಿ ಪುರಾಣ ಓದುವ ವೃತ್ತಿ ಕಳೆದುಕೊಂಡ ವೇದವ್ಯಾಸ ಉಪಾಧ್ಯನಿಂದ ಆಗಾಗ ಉಂಟಾಗುತ್ತಿದ್ದ ಉಪಟಳಗಳನ್ನು ನಿವಾರಿಸಿಕೊಳ್ಳುವಲ್ಲಿ ಉಂಟಾಗುತ್ತಿದ್ದ ಮಾನಸಿಕ ಕ್ಷೋಭೆ ಮತ್ತು ವಯೋಮಾನ ಅನುಸಾರ ಕುಂದಿದ ದೇಹಶಕ್ತಿಗಳ ಪರಿಣಾಮವಾಗಿ ಆತ ರೋಗ ಪೀಡಿತನಾಗಿ ಸಾವನ್ನು ಅಪ್ಪುತ್ತಾನೆ. ಇದನ್ನು ಪುರುಷಾರ್ಥ ಸಾಧನೆಯ ಹಾದಿಯಲ್ಲಿ ಸಾಮಾಜಿಕ ನಿಯಮ ಮೀರಲು ಯತ್ನಿಸಿದ ಫಲವಾಗಿ ಉಂಟಾದ ಅವಘಡವೆಂದು ಹೇಳಬಹುದು.

ಸಾಮಾಜಿಕ ನಿಯಮ ಮೀರಲು ಯತಿಯೊಬ್ಬ ಮಾಡಿದ ಈ ಪ್ರಯತ್ನವನ್ನು ಅನಾಚಾರದ ಕೇಂದ್ರವಾಗಿ ಸಾಂಪ್ರದಾಯಿಕ ಮನಸ್ಸು ಬಿಂಬಿಸುತ್ತದೆ. ಸಾಮಾಜಿಕವಾಗಿ ಅಬಲೆಯಾದ ಹೆಣ್ಣನ್ನು ಅವಳ ಆ ಸ್ಥಿತಿಯಲ್ಲಿಯೇ ನಿಯಂತ್ರಿಸಬೇಕು. ಅವಳ ಮೋಹ ಜಾಲದಲ್ಲಿ ಸಿಕ್ಕಿ ಬಿದ್ದರೆ ಸಾಧಕ ಪುರುಷನೂ ಚಂಚಲನೇತ್ರನ ಹಾಗೆ ಅಧಃಪತನ ಹೊಂದುತ್ತಾನೆ. ಹೆಣ್ಣಿಗೆ ಸಮಾನತೆಯಾಗಲಿ, ಸ್ವಾತಂತ್ರ್ಯವಾಗಲಿ ನೀಡಿದ್ದೇ ಆದಲ್ಲಿ ಅದರಿಂದ ಸಮಾಜದಲ್ಲಿ ಅನಾಚಾರ, ದುರಾಡಳಿತ, ಪುರುಷ ದೌರ್ಬಲ್ಯಗಳು ಹೆಚ್ಚಾಗುತ್ತವೆ ಮತ್ತು ಅಂತಹ ವ್ಯಕ್ತಿ ಅಧೋಗತಿಗೆ ಇಳಿಯಬೇಕಾಗುತ್ತದೆ. ಇಂತಹ ಸೂಚನೆ ವೇದವ್ಯಾಸ ಉಪಾಧ್ಯಾನಂತಹ ಸಂಪ್ರದಾಯನಿಷ್ಠಪರ ಹೋರಾಟಗಾರನ ಧೋರಣೆಯಲ್ಲಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಸಮಕಾಲೀನ ಸಮಾಜದ ಸ್ತ್ರೀಯರ ಸುಧಾರಕ ಸ್ಥಿತಿಗತಿಗಳನ್ನು ಸಂಪ್ರದಾಯ ನಿಷ್ಠ ದೃಷ್ಟಿಯಿಂದ ರಚಿಸಿದ ವಿಡಂಬನಾ ಕೃತಿಯನ್ನಾಗಿಯೂ ಕಾಣಿಸುತ್ತದೆ. ಪುರುಷ ಕೇಂದ್ರಿತ ನೆಲೆ ಹೆಣ್ಣನ್ನು ತನ್ನ ಅಧಃಪತನದ ಮಾನದಂಡವಾಗಿ ಕಾಣುವ ನೋಟ ಇಂತಹ ದೃಷ್ಟಿಕೋನದಲ್ಲಿ ಅಡಗಿರುವಂತಿದೆ. ಇದು ಹಿಂದೂ ಸಮಾಜದ ಸಾಂಪ್ರದಾಯಿಕ ಜಾತಿ ಮರ್ಯಾದೆ ದೃಷ್ಟಿಕೋನವನ್ನು ಬಿಂಬಿಸುವ ಕ್ರಮವಾಗಿದೆ.

ಈ ನಿಟ್ಟಿನಲ್ಲಿ ಪುರುಷರು ಸ್ತ್ರೀಯರನ್ನು ತಮ್ಮ ಅನುಕೂಲ ಸಾಧನೆಗಾಗಿ ಒಂದು ಪರಿಕರವನ್ನಾಗಿ ಬಳಸಿಕೊಂಡಿದೆ. ಹೀಗಿದ್ದರೂ ಅದು ತನ್ನ ವಿಫಲತೆಗೆ ಹೆಣ್ಣೇ ಕಾರಣವೆಂದು ಬಿಂಬಿಸುತ್ತದೆ. ಸ್ತ್ರೀ ಪುರುಷರ ಸಾಮಾಜಿಕ ಸ್ಥಾನಮಾನಗಳಿಗಾಗಿ ಪರಸ್ಪರ ಹೋರಾಡುತ್ತಿದ್ದ ಆ ಸಂಧಿಕಾಲದ ಸ್ಥಿತಿಯಲ್ಲಿ ಪುರುಷ ಮನಸ್ಥಿತಿಯ ಚಿತ್ರಣವೂ ಇದಾಗಿದೆ.

ಸಹಜ ಜೀವನ ಮತ್ತು ಸ್ತ್ರೀ ಸ್ವಾತಂತ್ರ್ಯ

ಕಾದಂಬರಿಯ ಹೆಸರು ವಾಗ್ದೇವಿ ಎಂದಿದ್ದು, ಇದು ಮಧ್ವ ಸಮಾಜದ ಮಠದ ಯತಿಯೊಬ್ಬರ ಜೀವನ ಸಾಧನೆಯ ಹಾದಿಯಲ್ಲಿನ ಏಳುಬೀಳುಗಳನ್ನು ಚಿತ್ರಿಸುವ ಕತೆ ಇದ್ದಿರಲಾರದು. ಅದರ ಕೇಂದ್ರ ಗಮನ ವಾಗ್ದೇವಿಯ ಪಾತ್ರವೇ ಇದ್ದಿರಬೇಕು. ಮಠದ ಪಾರುಪತ್ಯಗಾರನಾದ ವೆಂಕಟಪತಿ ತನ್ನ ಯತಿಯ ಮನೋಭಿಲಾಷೆಯಂತೆ ವಾಗ್ದೇವಿಯನ್ನು ಒಪ್ಪಿಸಲು ಆಕೆಯ ಮನೆಗೆ ಹೋದ ಸಂದರ್ಭದಲ್ಲಿ ಬಿಚ್ಚಿಡುವ ಆಕೆಯ ಜೀವನದ ಅನೇಕ ಸಂಗತಿಗಳು ಈ ಅಂಶವನ್ನು ಸಮರ್ಥಿಸುವಂತೆ ಕಾಣುತ್ತದೆ.

ವಾಗ್ದೇವಿಯ ಪಾತಿವ್ರತ್ಯ ಕಲ್ಪನೆ ಸಾಮಾಜಿಕ ನಿಯಮವನ್ನು ಮೀರದೆ ತನ್ನ ಗಂಡನಿಗೆ ನಿಷ್ಠಳಿರಬೇಕಾದ ಬದ್ಧತೆ ಅವಳ ಮೇಲೆ ಇದೆ. ಆದರೆ ಅವಳ ವೈಯಕ್ತಿಕ ಬದುಕು ಸಾಮಾಜಿಕ ನಿಯಮಗಳಿಗೊಳಪಟ್ಟು ಏರುಪೇರಾಗಿದೆ. ಆಕೆ ತನ್ನ ವೈವಾಹಿಕ ಜೀವನದಲ್ಲಿ ತಪ್ತ ಸ್ಥಿತಿಯಲ್ಲಿದ್ದಾಳೆ. ಮೊದ್ದು ಜಂತುವೊಬ್ಬನನ್ನು ಗಂಡನನ್ನಾಗಿ ಪಡೆಯುವಂತೆ ಮಾಡಿದ ತಂದೆ ತಾಯಿಗಳ ಬಗ್ಗೆ ಆಕೆಗೆ ತೀವ್ರ ಅಸಮಾಧಾನವಿದೆ. ಅವಳ ಗಂಡನಿಗೆ ಕಾಲಕ್ಕೆ ಸರಿಯಾಗಿ ಊಟವೊಂದನ್ನು ಬಿಟ್ಟು ಬೇರಾವುದರ ಬಗ್ಗೆಯೂ ಗಮನವಿಲ್ಲ. ಮದುವೆಯಾಗಿ ಎಂಟು ವರ್ಷ ಕಳೆದರೂ ಹೆಂಡತಿಯ ಅಗತ್ಯವೇನೆಂದು ತಿಳಿಯುವ ಪ್ರಯತ್ನವನ್ನು ಆತ ಮಾಡಿದವನಲ್ಲ. ವಾಗ್ದೇವಿ ತನ್ನ ಬುದ್ಧಿಯಿಂದ ತನ್ನ ಆಸೆ-ಆಕಾಂಕ್ಷೆಗಳನ್ನು ತಕ್ಕಮಟ್ಟಿಗೆ ಪೂರೈಸಿಕೊಂಡಿದ್ದಾಳೆ. ಅದನ್ನು ಅವಳು ಹೇಗೆ ಪಡೆದುಕೊಂಡಳೆಂಬುದನ್ನು ಕೂಡ ಗಂಡನಾಗಿ ತಿಳಿಯುವ ಕುತೂಹಲ ಅವನಿಗಿಲ್ಲ. ಅವನ ಜಾಗದಲ್ಲಿ ಮತ್ತೊಬ್ಬ ಗಂಡಸು ಇದ್ದಿದ್ದರೆ ಅವಳ ಈ ಕಾರ್ಯವನ್ನು ಎಂದಿಗೂ ಕ್ಷಮಿಸುತ್ತಿರಲಿಲ್ಲ ಎಂದು ಆಕೆಯೇ ಹೇಳಿಕೊಳ್ಳುತ್ತಾಳೆ. ಹಿಂದೂ ಪುರುಷ ಸಮಾಜದ ಸಾಮಾಜಿಕ ನಿಯಮವನ್ನು ಕಡೆಗಣಿಸಿ ತನ್ನ ಯೌವ್ವನ ಸಹಜ ಬಯಕೆಗಳನ್ನು ಆಕೆ ಈಡೇರಿಸಿಕೊಳ್ಳುತ್ತಿದ್ದಳು ಎಂದು ಇದರಿಂದ ತಿಳಿಯುತ್ತದೆ. ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಆ ಮೂಲಕ ತಕ್ಕಮಟ್ಟಿಗೆ ಸಂಪಾದನೆಯನ್ನೂ ಮಾಡಿಕೊಳ್ಳುತ್ತಿದ್ದಳು ಎಂಬ ವಿವರವಿದೆ.

ಮಠದ ಪಾರುಪತ್ಯಗಾರ ಯತಿಯ ದೂತನಾಗಿ ವಾಗ್ದೇವಿಯ ಮನೆಗೆ ಬಂದ ಕೂಡಲೆ ಅಚ್ಚರಿ, ಸಂತೋಷ ವ್ಯಕ್ತವಾಗುತ್ತವೆ. ಇದು ವಾಗ್ದೇವಿಯ ಮನೆಯಲ್ಲಿ ಮಠದ ಜನರ ಬಗೆಗಿದ್ದ

ಗೌರವ, ಆದರ ಮತ್ತು ಅವರ ಬಡತನವನ್ನು ಸೂಚಿಸುತ್ತದೆ. ವಾಗ್ದೇವಿ ಆತನ ಕಾಲುಮುಟ್ಟಿ ನಮಸ್ಕಾರ ಮಾಡಿ ತನ್ನ ವಿನಯ ಮತ್ತು ವಿಧೇಯತೆಯನ್ನು ವ್ಯಕ್ತಪಡಿಸಿ ಏನೂ ಅರಿಯದ ಮುಗ್ಧ ಸಾಮಾನ್ಯ ಹೆಣ್ಣುಮಗಳಂತೆ ವರ್ತಿಸುತ್ತಾಳೆ. ಹೆಣ್ಣಿನ ಸಾಮಾಜಿಕ ಮಿತಿಗಳ ಪ್ರತಿರೂಪವಾಗಿ ಆಗ ಆಕೆ ತೋರಿಬರುತ್ತಾಳೆ. ಆತನ ಪ್ರಸ್ತಾಪದ ಮಾತುಗಳನ್ನು ಕೇಳಿ ಕೃತಜ್ಞತೆ ಸೂಚಿಸುವ ಕ್ರಮದಲ್ಲೂ ತಾನು ಜಾತಿಮಠಕ್ಕೆ ವಿಧೇಯಳಾಗಿರುವ ರೀತಿಯಲ್ಲಿ ಚಮತ್ಕಾರಿಕವಾಗಿ ನಡೆದುಕೊಳ್ಳುತ್ತಾಳೆ. ತನಗಿಂತ ಮಿಗಿಲಾದ ಅನೇಕ ಆಕರ್ಷಕ ಸ್ತ್ರೀಯರಿರುವಾಗ ಮಠದ ಯತಿ ಚಂಚಲನೇತ್ರ ತನ್ನನ್ನೇ ಮೋಹಿಸಲು ಕಾರಣವೇನೆಂದು ವಾಗ್ದೇವಿ ಅಚ್ಚರಿ ಪಡುತ್ತಾಳೆ. ಇದು ಜಾತಿ ಮಠಗಳಲ್ಲಿನ ಧರ್ಮಾಧಿಕಾರಿಗಳು ತನ್ನ ಸಮಾಜದಲ್ಲಿ ತಾವು ಇಷ್ಟಪಟ್ಟ ಮಹಿಳೆಯೊಂದಿಗೆ ಸಂಬಂಧ ಇಟ್ಟುಕೊಳ್ಳುತ್ತಿದ್ದ ರೂಢಿಯೊಂದು ಆಗಲೇ ಇದ್ದಿತ್ತೆಂದು ಕಾಣಿಸುತ್ತದೆ. ಇದರಿಂದ ವಾಗ್ದೇವಿಗೆ ತಾನು ಯತಿಯ ಮೋಹಕ್ಕೆ ಒಳಗಾದ ಸಂಗತಿ ಅಸಹಜ, ವಿಶೇಷ, ಅತ್ಯಪೂರ್ವವೆಂದಾಗಲೀ ಏನೊಂದೂ ಭಾಸವಾಗುವುದಿಲ್ಲ.

ದೂತ ಕಾರ್ಯ ನಡೆಸಲು ಬಂದ ವೆಂಕಟಪತಿ ತಾನು ಅನಧಿಕೃತ ಸಂಬಂಧವನ್ನು ಕುದುರಿಸಲು ಬಂದವನೆಂಬ ಅರಿವು ಉಳ್ಳವನಾಗಿದ್ದಾನೆ. ಕೊಡುಕೊಳ್ಳುವ ವ್ಯವಹಾರ ಸ್ಪಷ್ಟವಾಗದೆ ಸಂಬಂಧ ಕುದುರುವುದಿಲ್ಲ ಎಂದು ಆತ ಚೆನ್ನಾಗಿ ಬಲ್ಲವನೂ ಆಗಿದ್ದಾನೆ. ಇದರ ಸೂಕ್ಷ್ಮ ಅರಿತ ತಾಯಿ ಭಾಗೀರಥಿ ತಕ್ಷಣ ಮಾತುಕತೆಯ ಎಳೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತಾಳೆ. ಪರಪುರುಷನ ಮೋರೆ ನೋಡದ ವಾಗ್ದೇವಿಯ ಈ ಸಂಬಂಧದಲ್ಲಿ ಯಾರೂ ಲೋಕಾಪವಾದಕ್ಕೆ ಗುರಿಯಾಗಬಾರದು ಮತ್ತು ಎರಡೂ ಕಡೆಯವರ ಮರ್ಯಾದೆಗೆ ಹಾನಿಯಾಗಬಾರದು ಎಂದು ಎಚ್ಚರದ ಪೂರ್ವ ಪೀಠಿಕೆ ಹಾಕುತ್ತಾಳೆ. ಈ ಸಂಬಂಧದಲ್ಲಿ ಗಂಡಸರ ಮನಸ್ಸು ಕೆಸುವಿನ ಎಲೆಯ ಮೇಲೆ ನಿಂತ ನೀರಿನಂತೆ ಇರುವುದರಿಂದ ಅವರು ಯಾವುದೇ ಕ್ಷಣದಲ್ಲಿ ಮತ್ತೊಂದು ಹೆಣ್ಣಿನ ಸಂಗ ಮಾಡುವುದಿಲ್ಲವೆಂದು ಹೇಳಲಾಗದು ಎಂಬ ಸುಳಿವು ನೀಡಿ, ತಮ್ಮ ಅಪೇಕ್ಷೆಯ ವ್ಯವಹಾರವನ್ನು ಮುಂದಿಡುತ್ತಾಳೆ. ಅನ್ಯ ಹೆಣ್ಣಿನ ಮೋಹಪಾಶಕ್ಕೆ ಬಿದ್ದ ಪುರುಷರ ಸ್ವಭಾವವನ್ನು ಆಕೆ ಚೆನ್ನಾಗಿ ಬಲ್ಲವಳಾಗಿದ್ದಾಳೆ. ಈ ಹಿನ್ನೆಲೆಯಲ್ಲಿ ಕುಟುಂಬದ ಎಲ್ಲರಿಗೂ ಮಠದಲ್ಲಿ ವಾಸ್ತವ್ಯ ಹೂಡಲು ಮತ್ತು ಉದ್ಯೋಗ ಪಡೆಯಲು ಅವಕಾಶ ಒದಗಿಸಬೇಕು; ವಾಗ್ದೇವಿಯಲ್ಲಿ ಹುಟ್ಟುವ ಮಗುವನ್ನು ಯತಿ ಪೀಠದ ವಾರಸುದಾರನನ್ನಾಗಿ ಮಾಡುವ ವಾಗ್ದಾನ ಪೂರೈಸಬೇಕು ಎಂಬ ಅವಳ ಕರಾರಿಗೆ ಎರಡೂ ಕಡೆಯಿಂದ ಒಪ್ಪಿಗೆ ದೊರೆಯುತ್ತದೆ. ಈ ಮೂಲಕ ವಾಗ್ದೇವಿ ಮತ್ತು ಅವಳ ತಾಯಿ ತಮ್ಮ ದರಿದ್ರಾವಸ್ಥೆಯನ್ನು ನೀಗಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ತಾವು ಮಾಡುವ ವೃತ್ತಿ ಎಷ್ಟು ಹೀನವಾಗಿದ್ದರೂ ಅದರಲ್ಲೆ ಸುಖ ದೊರಕುವಷ್ಟು ಸೌಲಭ್ಯಗಳನ್ನು ಪಡೆಯ ಬಯಸುತ್ತಾರೆ. ತಾವು ಹೆಣ್ಣಿನ ಸಾಮಾಜಿಕ ನಿಯಮವನ್ನು ಮುರಿದು ಜೀವಿಸಲು ನಿರ್ಧರಿಸಿದ್ದರೂ ಲೋಕಾಪವಾದಕ್ಕೆ ಗುರಿಯಾಗದೆ ಮರ್ಯಾದೆಯ ಚೌಕಟ್ಟಿನಲ್ಲೇ ಉಳಿಯಲು ಅಗತ್ಯ ಎಚ್ಚರ ವಹಿಸಿರುವುದು ಕಾಣುತ್ತದೆ.

ಇವೆಲ್ಲ ವಾಗ್ದೇವಿ ಜೀವನವನ್ನು ಅನುಭವಿಸುವ ತೀವ್ರ ಉತ್ಕಟತೆ ಹೊಂದಿರುವುದನ್ನು ಕಾಣಿಸುವುದಲ್ಲದೆ, ಸುಖಕರ ಜೀವನ ಸಾಗಿಸಲು ಅಗತ್ಯವಾದ ಮೂಲ ಸೌಕರ್ಯಗಳಿಗೆ ಕೊರತೆಯುಂಟಾಗದಂತೆ ವಹಿಸಿದ ಎಚ್ಚರವೂ ಆಗಿದೆ. ಇದರಿಂದ ಆಕೆಯ ಜೀವ ಪ್ರೀತಿ ಮತ್ತು ಜೀವನ ಪ್ರೀತಿ ಎರಡೂ ಪರಿಚಯವಾಗುತ್ತದೆ. ಆಕೆ ಮದುವೆಯಾಗಿ ಎಂಟು ವರ್ಷದ ಅವಧಿಯಲ್ಲಿ ಜೀವನದ ಅಗತ್ಯಗಳು ಯಾವುವು, ಕೊರತೆಗಳು ಯಾವುವು, ಯಾವುದರಿಂದ ಜೀವನ ಸುಖಕರ, ದುಡಿಯಲು ಅವಕಾಶವಿಲ್ಲದ ಹೆಣ್ಣು ಮಕ್ಕಳು ಸ್ವತಃ ತಾವೇ ಪಡೆಯಲು ಮುಂದಾದಲ್ಲಿ ಇರುವ ಅಡ್ಡಿ ಆತಂಕಗಳು, ಸಾಮಾಜಿಕ ನಿರ್ಬಂಧಗಳು ಮತ್ತು ಅವನ್ನು ಮೀರಲು ಇರುವ ಅಡ್ಡ ಹಾದಿಗಳು–ಈ ಎಲ್ಲದರ ಕುರಿತು ಅರಿವು ಮತ್ತು ವಿವೇಕವನ್ನು ಆಕೆ ಬೆಳೆಸಿಕೊಂಡಂತೆ ಕಾಣುತ್ತದೆ. ಹಾಗಾಗಿ ಆಕೆ ತನ್ನ ಚಂಚಲನೇತ್ರನೊಂದಿಗಿನ ವ್ಯವಹಾರವನ್ನು ತನ್ನ ವೈಯಕ್ತಿಕ ಸುಖೋಪಭೋಗ ಜೀವನಕ್ಕೆ ಕೊರತೆಯಾಗದಂತೆ ಗಮನ ವಹಿಸಿದ್ದನ್ನು ಕಾಣಬಹುದು. ಇದರಿಂದ ಅವಳ ಜೀವನ ಮಾತ್ರವಲ್ಲದೆ, ಆಕೆಯ ತಂದೆ–ತಾಯಿಯರೂ ಸುಖದಿಂದ ಬಾಳಲು ಸಾಧ್ಯವಾಗುತ್ತದೆ. ಈ ಮೂಲಕ ಹುಟ್ಟಿದ ತನ್ನ ಸಂತಾನಕ್ಕೂ ಯಾವುದೇ ಸಾಮಾಜಿಕ ಸ್ಥಾನಮಾನ, ಭದ್ರತೆ ಇರುವುದಿಲ್ಲವಾದರೂ ಆಕೆ ಹಾಕಿದ ಕರಾರಿನಲ್ಲಿ ತನ್ನ ಮಗನಿಗೂ ಪ್ರಾಪ್ತವಾಗಲಿರುವ ಮಠದ ಉತ್ತರಾಧಿಕಾರಿ ಪಟ್ಟವನ್ನು ನೀಡಬೇಕೆಂದು ಪಟ್ಟು ಹಿಡಿಯುವುದು ಅವಳ ಚಾಣಾಕ್ಷತನವನ್ನು ಪರಿಚಯಿಸುತ್ತದೆ. ಇದರಿಂದ ತಾನು ಸಾಮಾಜಿಕ ನಿಯಮ ಮೀರಿದ ಸಂಬಂಧ ಹೊಂದಿದ್ದರೂ ಅದರ ದುಷ್ಪರಿಣಾಮಗಳನ್ನು ನಿಷ್ಫಲಗೊಳಿಸುವ ಮುಂಜಾಗ್ರತೆ ಕ್ರಮದ ದೂರದೃಷ್ಟಿ ಅವಳಲ್ಲಿ ಗುರುತಿಸಬಹುದು. ಆದರೂ ಚಂಚಲನೇತ್ರನ ಗುಪ್ತ ಸಂಸಾರದ ಒಡತಿಯಾಗಿದ್ದ ವಾಗ್ದೇವಿ ಅಪಮಾನದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಹೋಗುತ್ತದೆ. ಸ್ವಾಭಿಮಾನಿಯಾದ ವಾಗ್ದೇವಿ ತನಗಾದ ಮಾನಭಂಗವನ್ನು ಸಹಿಸದೆ ಚಂಚಲನೇತ್ರ, ಗೆಳೆಯ ತಿಪ್ಪಾಶಾಸ್ತ್ರಿಯ ಮುಂದೆ ಕಣ್ಣೀರಿಟ್ಟು ತನ್ನ ಮರ್ಯಾದೆಗೆ ಕುಂದು ತಂದ ಪೋಕರಿಗಳ ಸದ್ದು ಅಡಗಿಸಲು ಉತ್ತೇಜಿಸುತ್ತಾಳೆ. ಮಠದಲ್ಲಿ ಪುರಾಣ ಓದುತ್ತಿದ್ದ ಉಪಾಧ್ಯನ ಮನವಿ ನಿಷ್ಪ್ರಯೋಜಕವಾಗುವಂತೆ ಮಾಡುವಲ್ಲಿ ಭೀಮಾಚಾರ್ಯ ಮತ್ತು ಬಾಲಮುಕುಂದನನ್ನು ಕಂಡು ಉಪಚರಿಸಿ ಯಾವುದೇ ಸಂಗತಿ ತನ್ನ ವಿರುದ್ಧ ಮೇಲುಗೈ ಪಡೆಯದಂತೆ ನೋಡಿಕೊಳ್ಳುತ್ತಾಳೆ. ಮಠದಲ್ಲಿ ತನ್ನ ಸಂಗ್ರಹದಲ್ಲಿದ್ದ ಆಭರಣಗಳು ಕಳುವಾಗಿದ್ದನ್ನು ಕೊತ್ವಾಲನ ಸಹಾಯದಿಂದ ಮರಳಿ ಪಡೆಯತ್ತಾಳೆ. ಅಷ್ಟರಲ್ಲಿ ತನ್ನ ಚಿಕ್ಕ ತಾಯಿಯ ಮಗಳಾದ, ಪತಿಯಿಂದ ಪ್ರತ್ಯೇಕಳಾಗಿದ್ದ ಶೃಂಗಾರಿಯನ್ನು ತನಗೆ ನೆರವಾಗುಬಹುದೆಂದು ಎಣಿಸಿ ಕರೆಯಿಸಿಕೊಳ್ಳುತ್ತಾಳೆ. ವಾಗ್ದೇವಿ ಮತ್ತು ತಿಪ್ಪಾಶಾಸ್ತ್ರೀಯ ನಡುವೆ ಆಪ್ತತೆ ತಗ್ಗಿದ ಪರಿಣಾಮ ಆತ ಶೃಂಗಾರಿಯ ಮಮತೆ ಗಳಿಸುವಲ್ಲಿ ಉದ್ಯುಕ್ತನಾಗುತ್ತಾನೆ. ಈ ನಡುವೆ ತನಗೆ ಹುಟ್ಟಿದ ಮಗನಿಗೆ ಆಶ್ರಯ ನೀಡಲು ಯತಿ ಒಪ್ಪದಿದ್ದುದರಿಂದ ಅವನ ಮೇಲೆ ಮುನಿಸಿಕೊಂಡು ಮಠಬಿಟ್ಟು ತನ್ನ

ತಂಗಿಯೊಂದಿಗೆ ಪ್ರತ್ಯೇಕ ಬಿಡಾರ ಮಾಡುತ್ತಾಳೆ. ಪಾರುಪತ್ಯಗಾರನ ಸಂಧಾನದಲ್ಲಿ ವಾಗ್ದೇವಿಯ ಮಾತನ್ನು ನಡೆಸಿಕೊಡಲು ಒಪ್ಪಿದ ಚಂಚಲನೇತ್ರನನ್ನು ತನ್ನ ಕರಾರು ಮೀರದಂತೆ ಕಟ್ಟಿ ಹಾಕುತ್ತಾಳೆ. ನಂತರ ಮಗನಿಗೆ ಸನ್ಯಾಸ ನೀಡುವ ಆಚರಣೆಗೆ ಸಕಲ ಸಿದ್ಧತೆಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಎದುರಾಗಲಿರುವ ವಿಪತ್ತನ್ನು ಎದುರಿಸಲು ಸರಕಾರದಲ್ಲಿ ಪ್ರಬಲ ಅಧಿಕಾರಿಗಳಾದ ಶಾಬಯ್ಯ, ಕೊತ್ವಾಲ ಮತ್ತು ಭೀಮಾಜಿಯ ನೆರವನ್ನು ವಾಗ್ದೇವಿ ಪಡೆಯುತ್ತಾಳೆ. ಕೊತ್ವಾಲ ವಾಗ್ದೇವಿಯ ಅಭಿಮಾನಿಯಾಗಿ ಅವಳಿಗೆ ಒದಗುವ ಎಲ್ಲ ಕಷ್ಟ ಕಾಲಗಳಲ್ಲೂ ಆಸರೆಯಾಗಿ ನಿಲ್ಲುವಂತೆ ಅವನನ್ನು ವಶಪಡಿಸಿಕೊಳ್ಳುತ್ತಾಳೆ. ಇವೆಲ್ಲ ಸಾಂಗವಾಗಿ, ನಿರ್ವಿಘ್ನವಾಗಿ ನಡೆದ ಮೇಲೆ ಮಠದಲ್ಲಿ ಶೃಂಗಾರಿಯ ಸ್ನೇಹದಲ್ಲಿದ್ದ ನೇಮಿರಾಜ ಶೆಟ್ಟಿಯನ್ನು ಕಂಡ ತಿಪ್ಪಾಶಾಸ್ತ್ರಿ ಅದನ್ನು ಸಹಿಸಲಾಗದೆ ನೇಮಿರಾಜನನ್ನು ಚೂರಿಯಿಂದ ತಿವಿದು ಕೊಲೆ ಮಾಡುತ್ತಾನೆ. ಈ ಕೊಲೆಯನ್ನು ಮುಚ್ಚಿ ಹಾಕಿ ಮಠಕ್ಕೆ ತಗುಲಬಹುದಾದ ಕಳಂಕವನ್ನು ನಿವಾರಿಸಿ ಚಂಚಲನೇತ್ರರೊಂದಿಗಿನ ಸಂಬಂಧ ಎಂದಿನಂತೆ ಮುಂದುವರಿಯುವಲ್ಲಿ ವಾಗ್ದೇವಿ ಕೋತ್ವಾಲನ ರಕ್ಷಣೆಯನ್ನು ಸದುಪಯೋಗ ಪಡಿಸಿಕೊಳ್ಳುತ್ತಾಳೆ. ಈ ನಡುವೆ ತಾಯಿಯನ್ನು, ಗಂಡನನ್ನೂ ಕಳೆದುಕೊಳ್ಳುವ ವಾಗ್ದೇವಿ ಚಂಚಲನೇತ್ರ ರೋಗಪೀಡಿತನಾದ ಮೇಲೆ ಬಲಗುಂದಿದವಳಾಗುತ್ತಾಳೆ. ಅವನ ಮರಣದ ನಂತರ ವೇದವ್ಯಾಸನ ಮನವಿಗೆ ಹಿರಿಯ ನ್ಯಾಯಧಿಪತಿ ನೀಡಿದ ತೀರ್ಪಿನಿಂದ ಆಕೆ ಮಠದಲ್ಲಿ ಉಳಿಯಲು ಅವಕಾಶವಿಲ್ಲದಂತೆ ಆಗುತ್ತದೆ. ಆ ನಂತರದಲ್ಲಿ ವಯಸ್ಸಿಗೆ ಬಂದ ಅವಳ ಮಗ ಸೂರ್ಯನಾರಾಯಣ ತಾನು ಆಶ್ರಯ ಪಡೆದಿದ್ದ ಶಿವರಾಮ ಶೆಟ್ಟಿಯ ಕಿರಿಯ ತಂಗಿ ವೆಂಕಟಸುಬ್ಬಿಯನ್ನು ಕರೆದುಕೊಂಡು ದೇಶಾಂತರ ಹೋಗಿ ಅಲ್ಲಿಯೇ ನೆಲೆ ನಿಲ್ಲುತ್ತಾನೆ. ಕೊನೆಯಲ್ಲಿ ಅವನು ತಾಯಿ ವಾಗ್ದೇವಿಯನ್ನು ತನ್ನೊಂದಿಗೆ ಕರೆದುಕೊಂಡುಹೋಗುತ್ತಾನೆ.

ಭಾರತೀಯ ಹಿಂದೂ ಸಮಾಜ ಹೆಣ್ಣನ್ನು ಜೀವಮಾನವಿಡೀ ಬಾಲ್ಯದಲ್ಲಿ ತಂದೆಯ ವಶದಲ್ಲಿ, ಯೌವನದಲ್ಲಿ ಗಂಡನ ವಶದಲ್ಲಿ, ಮುಪ್ಪಿನಲ್ಲಿ ಮಗನ ವಶದಲ್ಲಿರಬೇಕೆಂದು ನಿಯಮಿಸಿದ್ದರೂ ವಾಗ್ದೇವಿ ತನ್ನ ಯೌವ್ವನ ಕಾಲದಲ್ಲಿ ಕೆಲಸಕ್ಕೆ ಬಾರದ ಗಂಡನನ್ನು ಪಡೆದ ಕಾರಣ ಸ್ವತಂತ್ರಳಾಗಿ ತನ್ನ ಜೀವನ ರೂಪಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ತನ್ನ ಜೀವನದುದ್ದಕ್ಕೂ ಪುರುಷರ ದೌರ್ಬಲ್ಯಗಳನ್ನು ಅರಿತು ಅವರವರ ಶಕ್ತಿ ಸಾಮರ್ಥ್ಯಗಳನ್ನು ತನ್ನ ಹೋರಾಟದ ಜೀವನದಲ್ಲಿ ಉಪಯುಕ್ತವಾಗುವಂತೆ ಬಳಸಿಕೊಳ್ಳುತ್ತಾಳೆ. ಇದು ಆಕೆಯ ಜಾಣ್ಮೆಯೂ, ಹೋರಾಟದ ಭಾಗವಾಗಿಯೂ ಇರುವಂತೆ ಕಾಣುತ್ತದೆ. ಪುರುಷ ಸಮಾಜದ ನಿಯಮಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಮರುರೂಪಿಸಿಕೊಳ್ಳುವಲ್ಲಿ ಆಕೆ ತನ್ನ ಸಂಪರ್ಕದಲ್ಲಿ ಉಳಿದ ಚಂಚಲನೇತ್ರ, ತಿಪ್ಪಾಶಾಸ್ತ್ರಿ, ಶಾಬಯ್ಯ, ಭೀಮಾಜಿ, ಕೊತ್ವಾಲ, ಬಾಲಮುಕುಂದ ಎಲ್ಲರನ್ನು ದುಡಿಸಿಕೊಳ್ಳುತ್ತಾಳೆ. ಮಠದ ಆವರಣದ ಹೊರಗೆ ಜೀವಿಸಬೇಕಾದ ಸಂದರ್ಭ ಆಕೆಗೆ ಒದಗಿದಾಗಲೂ ತನ್ನ ಮಗನನ್ನು ಜಾತಿ ಮರ್ಯಾದೆಯ

ಯಾವ ಕಟ್ಟಳೆಗಳಿಗೂ ಸಿಲುಕಿಸದೆ ಸ್ವತಂತ್ರ ಜೀವಿಯಂತೆ ಬದುಕಲು ಬಿಡುತ್ತಾಳೆ. ಕೃತಕ ಕಟ್ಟಳೆಗಳಾಚೆಗಿನ ಸಹಜ ಬದುಕು ಮತ್ತು ಅಂತಹ ಬದುಕನ್ನು ಕಟ್ಟಿಕೊಳ್ಳುವಲ್ಲಿ ಇರುವ ಮಾನವ ಪ್ರಯತ್ನ-ಇವೆಲ್ಲವನ್ನು ಪ್ರತಿಪಾದಿಸುವಂತೆ ಆಕೆ ಚಿತ್ರಿತಳಾಗಿದ್ದಾಳೆ. ಇದು ಸಹಜ ಬದುಕು ಪ್ರಕೃತಿ ನಿಯಮದ ಜೊತೆ ನಡೆಸಿದ ಅನುಸಂಧಾನದಂತಿದೆ.

ಚಂಚಲನೇತ್ರ ವಾಗ್ದೇವಿಯನ್ನು ಇಷ್ಟಪಟ್ಟು ವಶದಲ್ಲಿಟ್ಟುಕೊಳ್ಳುವುದು ಪುರುಷ ಸಾಧನೆಯ ಭಾಗವಾಗಿದೆ. ಆದರೆ ವಾಗ್ದೇವಿ ತನ್ನ ಉತ್ಕಟ ಜೀವನ ಪ್ರೀತಿಯನ್ನು ವಾಸ್ತವಗೊಳಿಸುವಲ್ಲಿ ಸಾಮಾಜಿಕ ನಿಯಮಗಳನ್ನು ಮುರಿಯುವುದು ಆಕೆ ಪ್ರಕೃತಿ ನಿಯಮಕ್ಕೆ ಅಧೀನಳಾಗಿ ನಡೆದುಕೊಳ್ಳುವ ಕ್ರಮವಾಗಿದೆ. ಹಾಗಾಗಿ ಆಕೆ ತನ್ನನ್ನು ಒಪ್ಪಿಸಿಕೊಂಡ ಚಂಚಲನೇತ್ರನಷ್ಟೇ ಪ್ರಾಮಾಣಿಕವಾಗಿ ತಿಪ್ಪಾಶಾಸ್ತ್ರಿ, ಕೊತ್ವಾಲ, ಭೀಮಾಜಿ ಮುಂತಾದವರ ಸುಪ್ತ ಬಯಕೆಯನ್ನು ನೋಟದಿಂದ, ಮಾತಿನ ಮಾಟದಿಂದ, ಮೈ ಮುಟ್ಟುವ ರೋಮಾಂಚನದಿಂದ ತಣಿಸಿ ಅವರ ಶಕ್ತಿಯನ್ನು ತನ್ನ ಶಕ್ತಿಯನ್ನಾಗಿ ಮಾಡಿಕೊಳ್ಳುತ್ತಾಳೆ. ಈ ಯಾವ ಸಂದರ್ಭದಲ್ಲೂ ಆಕೆ ನೈತಿಕ ನೆಲೆ ಕಳೆದುಕೊಳ್ಳದೆ ಸಹಜ ಮಾನವ ಜೀವಿಯಾಗಿ ಅವರೊಂದಿಗೆ ಮಿಡಿಯುತ್ತಾಳೆ. ಇದರಿಂದ ಅವರೆಲ್ಲ ಅವಳನ್ನು ತನ್ನದೇ ಮತ್ತೊಂದು ಅಂಶವಾಗಿ ಕಂಡು ಅವಳ ಕಷ್ಟದ ಕಾಲದಲ್ಲಿ ಅವಳೊಂದಿಗೆ ನಿಲ್ಲುತ್ತಾರೆ. ಈ ಎಲ್ಲ ಸಾಧ್ಯತೆಗಳು ವಾಗ್ದೇವಿಗೆ ಸಾಧ್ಯವಾಗುವಲ್ಲಿ ಆಕೆ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿ ಸಹಜ ಜೀವಿಯಂತೆ ಜೀವಿಸುವುದರಲ್ಲೆ ಇದೆ ಎಂದು ಕಾದಂಬರಿ ಕಾಣಿಸುತ್ತದೆ. ತನ್ನ ಮಗ ಮಧ್ವ ಕುಲದ ಸೂರ್ಯನಾರಾಯಣ ವೈಶ್ಯ ಕುಲದ ವೆಂಕಟಸುಬ್ಬಿಯನ್ನು ತನ್ನೊಂದಿಗೆ ಕರೆದುಕೊಂಡು ಹೋದಾಗ ಅವಳಿಗೆ ಅದು ಅಸಹಜವೆಂಬ ಯಾವ ಭಾವ ವಿಕಾರವೂ ಹುಟ್ಟುವುದಿಲ್ಲ. ಬದಲಿಗೆ ಅವನ ಕುಟುಂಬದೊಂದಿಗೆ ಸೇರಿಕೊಳ್ಳುವ ತವಕ ವ್ಯಕ್ತಪಡಿಸುತ್ತಾಳೆ. ವಾಗ್ದೇವಿ ಯಾವ ಪ್ರಮಾಣದಲ್ಲಿ ಅಕ್ಷರ ವಿದ್ಯೆ ಕಲಿತಿದ್ದಳೆಂಬ ವಿವರವಿಲ್ಲ. ಆದರೆ ತನ್ನ ಜೀವನವನ್ನು ಕಟ್ಟಿಕೊಳ್ಳುವಲ್ಲಿ, ನಿರ್ವಹಿಸುವಲ್ಲಿ ಮತ್ತು ಎದುರಾದ ಎಲ್ಲ ಸಂಕಷ್ಟಗಳನ್ನು ಜಯಿಸುವುದರಲ್ಲಿ ಆಕೆ ತನ್ನ ಸುತ್ತಲ ಜನರನ್ನು, ಪರಿಸರವನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಸಂಸ್ಕಾರವನ್ನು, ಅದರ ಸೂಕ್ಷ್ಮತೆಯನ್ನು ಹುಟ್ಟಿನಿಂದಲೇ ಪಡೆದಿದ್ದಳೆಂದು ತಿಳಿಯುತ್ತದೆ. ಹಾಗಾಗಿ ವಾಗ್ದೇವಿ ತನ್ನ ಬದುಕಿಗಾಗಿ ನಡೆಸುವ ಹೋರಾಟ ಮತ್ತು ಜೀವನ ಕ್ರಮ ಸಹಜ ಜೀವಿಯ ರೂಪದಲ್ಲಿದೆ. ಆಕೆ ಸಹಜ ಜೀವನ ಕ್ರಮಕ್ಕಾಗಿ ನಡೆಸಿದ ಅನುಸಂಧಾನದಂತಿದೆ.

೭. ಇಂದಿರಾ

ಯಾವುದೇ ಕಲಾಕೃತಿ ಸಮಕಾಲೀನ ಸ್ಥಿತಿಗತಿಗಳೊಂದಿಗೆ ಸ್ಪಂದಿಸುವ ಕ್ರಮದಲ್ಲಿಯೆ ಅದರ ಜೀವಂತಿಕೆ, ಸಂಗತತೆ ಅಡಗಿರುತ್ತದೆ. ಈ ಕಾದಂಬರಿಯ ಆರಂಭದಲ್ಲಿ ಗ್ರಂಥಕರ್ತರ ಪ್ರಾಥಮಿಕ

ನಿರೂಪಣವೂ ಎಂಬ ಬರಹ ತನ್ನ ಸಮಕಾಲೀನ ಸಮಾಜ ಬೌದ್ಧಿಕ ವಾಗ್ವಾದ ಅಥವಾ ತನಗೆದುರಾದ ಸಮಸ್ಯೆಗಳಲ್ಲಿ ಹುಡುಕಾಟದ ಕಾಣ್ಕೆಯ ಕ್ರಮವನ್ನು ಅಡಗಿಸಿಕೊಂಡಿದೆ. ಇದು ಓದುಗರಿಗೆ ಕಥಾ ನಿರೂಪಣದ ವಸ್ತು ವಿನ್ಯಾಸವನ್ನು ಸುಳುಹುದೋರುವಂತೆ ಮಾಡಿದೆ. ಈ ಮಾತು ಸ್ತ್ರೀ ಕೇಂದ್ರಿತವಾಗಿರುವುದು. ಇದುವರೆಗೆ ಕನ್ನಡದಲ್ಲಿ ಬಂದ ಸ್ತ್ರೀ ಕೇಂದ್ರಿತವೇ ಆದ ಕಾದಂಬರಿಗಳ ಬಗ್ಗೆ ತನ್ನ ಭಿನ್ನ ನೋಟ ಅಥವಾ ವಿಮರ್ಶೆಯನ್ನು ಈ ನಿರೂಪಣೆಯ ಮೂಲಕ ಮಾಡಿದೆ ಎಂದೆನ್ನಬಹುದು. ಬ್ರಹ್ಮನ ರಾಣಿಯಾದ ಇಂದಿರೆಯ ಹೆಸರನ್ನು ಕನ್ನಡದ ಆರಂಭದ ಎಲ್ಲ ಕಾದಂಬರಿಕಾರರು ತಮ್ಮ ಕೃತಿಗಳ ಶೀರ್ಷಿಕೆಯನ್ನಾಗಿ ಇಟ್ಟುಕೊಂಡು ಸ್ತ್ರೀ ಸಮಸ್ಯೆಗೆ ಪುರುಷ ದನಿ ಎತ್ತಿರುವುದು ವಿಭಿನ್ನವಾಗಿ ಕಾಣುತ್ತದೆ. ವೇದಗಳ ಕಾಲದಲ್ಲಿ ಸ್ತ್ರೀಯರ ಉನ್ನತ ಸ್ಥಿತಿಗತಿಗಳು, ಇಂಗ್ಲಿಷ್ ಶಿಕ್ಷಣದಿಂದ ಉಂಟಾಗಿರುವ ಪುರುಷರನ್ನು ನಿರ್ಲಕ್ಷಿಸುವಂಥ ಸ್ತ್ರೀ ಸ್ವಾತಂತ್ರ್ಯ, ದೇಶೀಯ ಸ್ತ್ರೀಯರು ಪುರುಷರನ್ನು ಮೀರಬಾರದ ವಿವೇಕ, ಮಹಿಳೆಯರ ವಯಸ್ಕ ವಿವಾಹ ಪದ್ಧತಿಗೆ ಶಾಸ್ತ್ರ ಗ್ರಂಥಗಳಲ್ಲಿರುವ ಒಪ್ಪಿಗೆ, ವಿಧವೆಯರ ವಿವಾಹಕ್ಕೆ ಶಾಸ್ತ್ರ ವಿಧಿಗಳಲ್ಲಿ ಒಪ್ಪಿಗೆಯಿದ್ದರೂ ಈ ಕುರಿತು ನಿರ್ಣಯವಾಗದಿರುವುದು ಮತ್ತು ಈ ನಡುವೆಯೂ ನಡೆದಿರುವ ವಿಧವಾ ವಿವಾಹಗಳು, ಮರುವಿವಾಹ ವಿವಾದಿತವಾಗಿದ್ದರೂ ವಿಧವೆಯರ ತಲೆ ಬೋಳಿಸುವ ಆಚರಣೆ ನಿಂತು ಹೋಗಿರುವುದು – ಇವು ಹಿಂದೂ ಸಮಾಜದ ಸಮಕಾಲೀನ ಸ್ಥಿತಿಯೆಂದು ಗುರುತಿಸಲಾಗಿದೆ. ಪ್ರಸ್ತುತ ಕಾದಂಬರಿ ಕೂಡ ಸ್ತ್ರೀಯರ ಮರುಮದುವೆ ವಿಚಾರವನ್ನು ಅಲ್ಲಲ್ಲಿ ಪ್ರಸ್ತಾಪಿಸಿರುವಂತೆ ಕತೆಯನ್ನು ಹೆಣೆದಿದೆ. ಈ ಕೃತಿಯಲ್ಲಿ ಸ್ತ್ರೀ ಸಮಸ್ಯೆಗಳ ಚರ್ಚೆ ಮತ್ತು ಇಷ್ಟಪಟ್ಟ ವ್ಯಕ್ತಿಯೊಂದಿಗೆ ಒಂದುಗೂಡಲು ನಡೆಸುವ ತಂತ್ರಗಳ ವಿರುದ್ಧದ ಹೋರಾಟ ಒಂದಕ್ಕೊಂದು ಹೆಣೆದುಕೊಂಡಿದೆ.

ಸ್ವಹಿತಾಸಕ್ತಿ ಮತ್ತು ಪ್ರೇಮಸಾಧನೆ

ತನ್ನ ತಂದೆಯ ಸ್ನೇಹಿತೆ ದೇವಯಾನಿಯನ್ನು ಕಾಣಲು ರಮಾಕಾಂತ ಶ್ರೀರಂಗಪಟ್ಟಣಕ್ಕೆ ಬರುತ್ತಾನೆ. ಆಗವನನ್ನು ರೈಲು ನಿಲ್ದಾಣದಲ್ಲಿ ಮೊದಲ ಸಲ ಇಂದಿರೆ ಭೇಟಿ ಮಾಡುತ್ತಾಳೆ. ಅವನನ್ನು ಮಾತನಾಡಿಸಿ ತನ್ನ ನೆರೆಯ ದೇವಯಾನಿ ಮನೆಗೆ ತನ್ನ ಗಾಡಿಯಲ್ಲೇ ಕರೆದುಕೊಂಡು ಬಿಡುತ್ತಾಳೆ. ಅಲ್ಲಿಂದ ಅವರಿಬ್ಬರ ಪರಿಚಯ ಗಾಢವಾಗಿ ಪರಸ್ಪರ ಇಷ್ಟಪಟ್ಟು ಹೇಳಿಕೊಳ್ಳಲಾರದ ಸ್ಥಿತಿ ತಲುಪುತ್ತಾರೆ. ಇದರ ಸುಳಿವು ಪತ್ತೆ ಹಚ್ಚಿದ ಇಂದಿರೆಯ ತಂದೆ ಜಯರಾಯ ಅವರಿಬ್ಬರನ್ನು ಕೌಟುಂಬಿಕ ಚೌಕಟ್ಟಿನಲ್ಲಿ ಒಂದಾಗಲು ಬಿಡಬಾರದೆಂದು ನಿರ್ಧರಿಸುತ್ತಾನೆ. ಅದಕ್ಕೆ ಜಯರಾಯನಿಗೆ ಎರಡು ಕಾರಣಗಳು ಇರುತ್ತವೆ. ಒಂದು ರಮಾಕಾಂತ ತನ್ನ ಸ್ನೇಹಿತ ಕಮಲಾಕಾಂತನ ಮಗನಾಗಿರುವುದು. ಎರಡನೆಯದು ತನ್ನ ಮಗಳನ್ನು ಶ್ರೀಮಂತ ಕುಟುಂಬದ ಸೊಸೆಯನ್ನಾಗಿ

ಮಾಡುವ ಮೂಲಕ ತನ್ನ ವೈಯಕ್ತಿಕ ಘನತೆ, ಗೌರವ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಎತ್ತರಿಸಿಕೊಳ್ಳುವ ಮಹತ್ವಾಕಾಂಕ್ಷೆಯನ್ನು ಜಯರಾಯ ಹೊಂದಿರುವುದು. ಹಾಗಾಗಿ ಜಯರಾಯ ತನ್ನ ಮಗಳಿಗೆ ಶ್ರೀಕಂಠನೆಂಬ ಜಹಗೀರದಾರನನ್ನು ಗೊತ್ತು ಮಾಡುತ್ತಾನೆ. ಈ ಸಂಬಂಧವನ್ನು ಮಗಳು ಒಪ್ಪಿಕೊಳ್ಳುವಂತೆ ಮಾಡುವಲ್ಲಿಯೂ ಯಶಸ್ವಿ ಆಗಿರುತ್ತಾನೆ. ಅವರಿಬ್ಬರೂ ಮುಕ್ತವಾಗಿ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಮತ್ತು ಆತ್ಮೀಯರಾಗಲು ಅನುಕೂಲವಾಗುವಂತೆ ಸಂದರ್ಭಗಳನ್ನು ನಿರ್ಮಿಸುತ್ತಿರುತ್ತಾನೆ. ಹಾಗೆಯೇ ರಮಾಕಾಂತ ಇಂದಿರೆಯರ ಭೇಟಿಯ ಸಂದರ್ಭಗಳು ಸಹಜವಾಗಿ ಮೂಡಿಬಂದರೂ ಅವರು ಪರಸ್ಪರ ಭೇಟಿಯಾಗದಂತೆ ತಡೆಗೋಡೆಯಾಗಿ ಕಾರ್ಯ ನಿರ್ವಹಿಸುತ್ತಾನೆ. ಇಬ್ಬರಲ್ಲೂ ವಿರುದ್ಧ ಭಾವ ಮೂಡುವಂತೆ ಪರಸ್ಪರರ ಬಗ್ಗೆ ತಪ್ಪು ಮಾಹಿತಿ ಒದಗಿಸುತ್ತ ಇರುತ್ತಾನೆ. ಇಷ್ಟರ ನಡುವೆ ಅವರಿಬ್ಬರೂ ಪರಸ್ಪರ ಒಬ್ಬರಿಗೊಬ್ಬರು ಹಂಬಲಿಸುತ್ತ ದೂರದಲ್ಲಿ ಇದ್ದರೂ ಪರಸ್ಪರ ಭೇಟಿ ಸಾಧ್ಯವಿಲ್ಲವೆಂದು ಭಾವಿಸುತ್ತಾರೆ. ತಾವು ಮದುವೆಯಾಗಲು ಸಮಯ ಸಂದರ್ಭಗಳು ಕೂಡಿ ಬರುವುದಿಲ್ಲವೆಂತಲೂ ಅಗಲಿಕೆಯೇ ತಮ್ಮ ವಾಸ್ತವವೆಂದು ತಿಳಿಯುತ್ತಲೂ ಒಬ್ಬರನ್ನೊಬ್ಬರು ಧ್ಯಾನಿಸುತ್ತಲೂ ಇರುತ್ತಾರೆ. ಆಗಾಗ ತಾತ್ಕಾಲಿಕ ತಡೆಗೋಡೆಗಳನ್ನು ಮೀರಿ ಭೇಟಿಯ ಸಾಧ್ಯತೆ ಉಂಟಾಗುತ್ತದೆ. ಅಂತಹ ಸಂದರ್ಭದಲ್ಲಿ ಅವರಿಬ್ಬರ ಮನಸ್ಸು ತೃಪ್ತಗೊಂಡು ಮುಂದಿನ ತಮ್ಮ ಭೇಟಿಯ ಅಸಾಧ್ಯತೆ ಕುರಿತು ಭಾವಿಸುತ್ತಾರೆ. ಇಂದಿರೆ ಮತ್ತು ಶ್ರೀಕಂಠರ ಮದುವೆ ನಡೆಯಲಿದ್ದು ರಮಾಕಾಂತ ಅವರಿಬ್ಬರ ನಡುವೆ ಮಧ್ಯೆ ಬರದೆ ದೇಶ ಬಿಟ್ಟು ಹೋಗಲೆಂದು ಆಶಿಸಿ ಜಯರಾಯ ತುರ್ತಾಗಿ ಕಾಶೀಯಾತ್ರೆ ನಿಯೋಜಿಸುತ್ತಾನೆ. ರಮಾಕಾಂತ ತನಗೆ ಇಂದಿರೆ ದಕ್ಕುವುದಿಲ್ಲವೆಂಬ ನಿರಾಸೆ ಮತ್ತು ಜಿಗುಪ್ಸೆಯಲ್ಲಿ ದೇಶಬಿಟ್ಟು ಹೋಗಬೇಕೆಂದು ನಿರ್ಧರಿಸಿ ನಂತರ ಸ್ನೇಹಿತರ ಸೂಚನೆಯ ಮೇರೆಗೆ ಮುಂದೂಡುತ್ತಾನೆ. ಜಯರಾಯನ ಸ್ವಹಿತಾಸಕ್ತಿಯ ಲೆಕ್ಕಾಚಾರಗಳು ತಲೆಕೆಳಗಾಗುತ್ತವೆ. ಇಂದಿರೆಗೆ ಶ್ರೀಕಂಠನನ್ನು ಮದುವೆಯಾಗುವ ಇಚ್ಛೆ ಇಲ್ಲವೆಂದು ಗೊತ್ತಾಗುತ್ತದೆ. ಇಂದಿರೆ ರಮಾಕಾಂತನನ್ನೆ ಮನಪೂರ್ವಕವಾಗಿ ಇಷ್ಟಪಟ್ಟಿರುವುದಾಗಿಯೂ ಆಕೆ ಮದುವೆಯಾಗುವುದಾದಲ್ಲಿ ಅವನೊಂದಿಗೆ ಮಾತ್ರವೆಂದೂ ಇಲ್ಲದಿದ್ದಲ್ಲಿ ಅವಿವಾಹಿತಳಾಗಿಯೇ ಉಳಿಯುವುದಾಗಿಯೂ ನಿರ್ಧರಿಸಿರುವುದು ತಿಳಿಯುತ್ತದೆ. ಪರಸ್ಪರ ಇಬ್ಬರ ಮನಸ್ಸುಗಳು ಒಬ್ಬರಿಗೊಬ್ಬರಿಗೆ ತಿಳಿಯಲು ಮತ್ತು ಇಬ್ಬರೂ ತಮ್ಮ ನಿರ್ಧಾರದಂತೆಯೇ ನಡೆಯಲು ನಿರ್ಣಯಿಸುವ ಹೊತ್ತಿಗೆ ಕಾದಂಬರಿಯ ಪುಟಗಳು ಮುಗಿದು ಮದುವೆಯ ವಿವರಗಳೊಂದಿಗೆ ಮುಕ್ತಾಯವಾಗುತ್ತದೆ.

ಇಂದಿರೆಯ ತಂದೆಯೆ ಪ್ರೇಮಿಗಳ ನಡುವೆ ಬರುವ ಖಳನಾಯಕನ ಪಾತ್ರ ನಿರ್ವಹಿಸಿದ್ದಾನೆ. ಆತನ ಸ್ವಹಿತಾಸಕ್ತಿಯ ಮುಂದೆ ಮತ್ತೊಬ್ಬರ ಹಿತಾಸಕ್ತಿ ಗೌಣವಾಗುತ್ತದೆ. ಆದರೆ ಆಕೆ ತನ್ನ ಹಿತಾಸಕ್ತಿಯನ್ನು ಪ್ರಧಾನ ಮಾಡಿಕೊಳ್ಳಲು ತಂದೆಯ ಹಿತಾಸಕ್ತಿಯನ್ನು ಕಡೆಗಣಿಸುತ್ತಾಳೆ. ಹೀಗೆ ಈ ಕಾದಂಬರಿ ಸ್ವಹಿತಾಸಕ್ತಿಗಳ ನಡುವಿನ ಸಂಘರ್ಷವಾಗಿ ಮಂಡಿತವಾಗಿರುವಂತೆ ಇದೆ. ಅಲ್ಲದೆ

ಹೆಣ್ಣಾದವಳು ತನ್ನ ಹಿತಾಸಕ್ತಿಯನ್ನು ಪ್ರಧಾನ ಮಾಡಿಕೊಳ್ಳದಿದ್ದಲ್ಲಿ ಇತರರ ಹಿತಾಸಕ್ತಿಗಳಿಗೆ ಅನುಗುಣವಾಗಿ ಜೀವಿಸಬೇಕಾಗುತ್ತದೆ ಎಂಬ ಸೂಚನೆ ಇದೆ. ಇಂದಿರೆ ಲೋಕಾಭಿರಾಮದ ಚರ್ಚೆಯಲ್ಲಿ ಪುರುಷ ಪ್ರಧಾನತೆಯನ್ನು ಒಪ್ಪಿಕೊಂಡರೂ ತನ್ನ ಜೀವನದ ದಿಕ್ಕು ದೆಸೆ ನಿರ್ಣಯಿಸುವಲ್ಲಿ ತನ್ನ ಹಿತಾಸಕ್ತಿ ಮುಂದಿಟ್ಟುಕೊಳ್ಳದಿದ್ದಲ್ಲಿ ತನ್ನ ಜೀವನದಲ್ಲಿ ಉಂಟಾಗುವ ಕೊರತೆಯ ಬಗ್ಗೆ ಪ್ರಜ್ಞಾವಂತಳಿದ್ದು ಸ್ವತಂತ್ರವಾಗಿ ತನ್ನ ದಾರಿಯನ್ನು ತಾನೇ ರೂಪಿಸಿಕೊಳ್ಳುತ್ತಾಳೆ. ಅಷ್ಟರ ಮಟ್ಟಿಗೆ ಈ ಕೃತಿ ಸ್ತ್ರೀಪರ ಧೋರಣೆಯನ್ನು ತಳೆದಿದೆ ಎಂದು ಹೇಳಬಹುದು.

ಇದಕ್ಕೆ ಪರ್ಯಾಯವಾಗಿ ದೇವಯಾನಿಯ ಕತೆಯೊಂದು ಪ್ರಧಾನ ಕತೆಗೆ ಉಪಕತೆಯಾಗಿ ಬಂದಿದೆ. ಈಕೆ ರಮಾಕಾಂತನ ತಂದೆ ಕಮಲಾಕಾಂತನನ್ನು ಇಷ್ಟ ಪಟ್ಟವಳು. ಕಮಲಾಕಾಂತನಿಗೆ ದೇವಯಾನಿಯ ಮೇಲೆ ಇಷ್ಟವಿದ್ದರೂ ಅವರಿಬ್ಬರೂ ತಮ್ಮಿಬ್ಬರ ನಡುವಿನ ಅಂತರ, ಗೊಂದಲ, ತಪ್ಪು ಗ್ರಹಿಕೆ ಮತ್ತು ತಪ್ಪು ತಿಳುವಳಿಕೆಗಳನ್ನು ನಿವಾರಿಸಿಕೊಳ್ಳುವಲ್ಲಿ ವಿಫಲರಾಗುತ್ತಾರೆ. ಹಾಗಾಗಿ ದೇವಯಾನಿ ಕಮಲಾಕಾಂತನ ಸವಿ ನೆನಪಲ್ಲಿ ತನ್ನ ಉಳಿದ ಜೀವನವನ್ನು ಬಾಲವಿಧವೆಯಾಗಿ ಕಳೆಯಬೇಕಾದ ಸ್ಥಿತಿ ಒದಗುತ್ತದೆ. ಕಮಲಾಕಾಂತ ತಮ್ಮ ನಡುವಿನ ಅಡ್ಡಗೋಡೆಗಳನ್ನು ಕೆಡವಿ ಹಾಕುವ ಬದಲು ಬೇರೆ ಮದುವೆ ಮಾಡಿಕೊಂಡು ದೇವಯಾನಿಯ ನೆನಪಿನಲ್ಲಿ ಉಳಿದುಬಿಡುತ್ತಾನೆ. ದೇವಯಾನಿ ಮುಖ್ಯವಾಗಿ ತನ್ನ ಹಿತಾಸಕ್ತಿ ಸಾಧಿಸಿಕೊಳ್ಳುವಲ್ಲಿ ವಿಫಲಳಾಗುವ ಚಿತ್ರವನ್ನು ಸಂಘರ್ಷದ ನೆಲೆಗಟ್ಟಿನಲ್ಲಿಯೇ ಕಾಣಬಹುದು. ಸ್ತ್ರೀಯರು ತಮ್ಮ ಹಿತಾಸಕ್ತಿ ಸಾಧಿಸಿಕೊಳ್ಳುವಲ್ಲಿ ಅಬಲೆಯರಾದರೆ ತಮ್ಮ ಜೀವನವೂ ಅನ್ಯರ ಹಿತಾಸಕ್ತಿಯಲ್ಲಿಯೇ ಸಾಗಿ ವಿಫಲವಾಗುತ್ತದೆ ಎಂಬುದನ್ನು ಕಾಣಿಸುತ್ತದೆ.

ಸ್ತ್ರೀ ಸ್ವಾತಂತ್ರ್ಯ ಮತ್ತು ವಿಧವೆಯರು

ರಾಧಾಬಾಯಿ ಮತ್ತು ಕಮಲಾ ಈ ಕಾದಂಬರಿಯಲ್ಲಿ ಬರುವ ಎರಡು ವಿಧವಾ ಪಾತ್ರಗಳು. ಇವರಿಬ್ಬರೂ ಸಮಸ್ಯೆಯ ಸುಳಿಗೆ ಬಿದ್ದ ಸ್ತ್ರೀಯರ ಜೀವನವನ್ನು ಸುಧಾರಿಸಬೇಕು ಎಂದು ಸಾರ್ವಜನಿಕವಾಗಿ ವೇದಿಕೆಗಳನ್ನು ಹತ್ತಿ ಅಭಿಪ್ರಾಯ ರೂಪಿಸಲು ಶ್ರಮಪಡುತ್ತಾರೆ. ಕಮಲಾಗಿಂತ ರಾಧಾಬಾಯಿ ಗಂಡನ ಮನೆಯಲ್ಲಿ ಸ್ತ್ರೀಯರ ಶೋಷಿತ ನೆಲೆಗಳನ್ನು ಅನುಭವಿಸಿದವಳು; ಒಂದಕ್ಕಿಂತ ಹೆಚ್ಚು ಮರು ವಿಧವಾವಿವಾಹ ಮಾಡಿಕೊಂಡವಳು. ವಾಕ್ಪಟುತ್ವದಲ್ಲಿ, ವಿಚಾರವಂತಿಕೆಯಲ್ಲಿ, ಸ್ತ್ರೀ ಸುಧಾರಣಾ ಸಂಸ್ಥೆಗಳನ್ನು ಸ್ಥಾಪನೆ ಮಾಡುವಲ್ಲಿ, ಅಧ್ಯಯನ ಶೀಲತೆಯಲ್ಲಿ, ಹೊರದೇಶ ಸುತ್ತಿ ಬಂದುದರಲ್ಲಿ ಹೆಚ್ಚು ಅನುಭವಸ್ಥೆ ಹಾಗೂ ಪರಿಪಕ್ವಳಂತೆ ಕಾಣುತ್ತಾಳೆ. ಹಾಗಾಗಿಯೇ ಕಮಲಾ ರಾಧಾಬಾಯಿಯ ಶಿಷ್ಯೆಯಾಗಿಯೇ ಗುರುತಾಗಿದ್ದಾಳೆ. ಈ ಪಾತ್ರಗಳು ಹಿಂದೂ ಸಮಾಜದ ಪುರುಷಪರ ಜೀವನ ಮೌಲ್ಯಗಳಿಂದ ಬೇಸತ್ತು ಸಿಡಿದೆದ್ದವರಾಗಿದ್ದಾರೆ. ಅದಕ್ಕಾಗಿ ಪಾಶ್ಚಾತ್ಯ ಧರ್ಮಗಳನ್ನು, ವಿಚಾರಗಳನ್ನು ಸ್ವೀಕರಿಸುವಲ್ಲಿ, ಅವನ್ನು ಭಾರತೀಯ ಮಹಿಳೆಯರಿಗೆ ಅನ್ವಯಿಸುವಲ್ಲಿ

ಸದಾ ಮುಂದೆ ಇದ್ದಾರೆ. ಇವರಲ್ಲಿ ಹಿಂದೂ ಸಮಾಜದ ಜಾತಿ ಮರ್ಯಾದೆ ಉಳಿಸುವ ಯಾವ ವಿಚಾರಗಳಿಲ್ಲ. ಸಮಾಜದಲ್ಲಿ ಸ್ತ್ರೀಯರು ಪುರುಷರಿಗಿಂತ ಹೆಚ್ಚು ಪ್ರಬಲರಾಗಬೇಕು ಎಂಬ ವಿಚಾರವೂ ಇದ್ದಂತೆ ಕಾಣುವುದಿಲ್ಲ. ಸ್ತ್ರೀಯರ ಸಮಸ್ಯೆಗಳನ್ನು ಪುರುಷರು ತಮ್ಮ ಸಹಜೀವಿಗಳ ಸಮಸ್ಯೆಗಳೆಂದು ಬಗೆದು ಅವುಗಳ ನಿವಾರಣೋಪಾಯಗಳಿಗೆ ಸಹಕರಿಸಬೇಕು ಎಂಬುದು ಅವರ ದೃಷ್ಟಿಯಾಗಿದೆ. ಸ್ತ್ರೀಯರು ಪುರುಷರಂತೆಯೇ ಮಾನವ ಜೀವಿಯಾಗಿದ್ದು, ಆಕೆಯ ಸಮಸ್ಯೆಗಳನ್ನು ಪುರುಷ ದೃಷ್ಟಿಕೋನದಿಂದ ನೋಡುವ ಬದಲು ಸ್ತ್ರೀಯರ ನೆಲೆಯಿಂದ ನೋಡಬೇಕೆಂದು ಒತ್ತಾಯಿಸಿ ವೇದಿಕೆ ಹತ್ತಿದ್ದಾರೆ. ಇಬ್ಬರ ವೈಯಕ್ತಿಕ ಬದುಕುಗಳು ಪುರುಷಾವಲಂಬನೆ ಇಲ್ಲದ ಸ್ಥಿತಿಯಲ್ಲಿದೆ. ಅವರು ತಮ್ಮ ಅಗತ್ಯವನ್ನು ಸಾಮಾಜಿಕ ನಿಯಮಗಳ ಚೌಕಟ್ಟಿನಲ್ಲಿ ನಿರಾಕರಿಸಿ ಸಂಪ್ರದಾಯವನ್ನು ಖಂಡಿಸಿದ್ದಾರೆ. ಅದಕ್ಕೆ ಪೂರಕವಾದ ಸಾಮಾಜಿಕ ನಿಯಮಗಳನ್ನು ರೂಪಿಸಬೇಕೆನ್ನುವುದು ಅವರ ವಾದ ಕ್ರಮವಾದಂತಿದೆ.

ಈ ಪಾತ್ರಗಳ ಎಲ್ಲ ವಿಚಾರಗಳು ವಸಾಹತುಶಾಹಿ ಸಂಸ್ಕೃತಿ ಹುಟ್ಟುಹಾಕಿದ ನೆಲೆಯಿಂದ ಬಂದುದಾಗಿದೆ. ಅಲ್ಲದೆ ಪಾಶ್ಚಾತ್ಯರಲ್ಲಿ ಪ್ರತಿಪಾದಿತವಾದ ಸ್ತ್ರೀಯರ ಸಮಾನ ಹಕ್ಕು, ಅಧಿಕಾರಗಳು ಭಾರತೀಯ ಸ್ತ್ರೀಯರಿಗೂ ಅನ್ವಯಿಸುವ ನೆಲೆಯಲ್ಲಿವೆ. ಇವನ್ನು ಹಿಂದೂ ಪುರುಷ ಸಮಾಜ ಒಪ್ಪಿಕೊಳ್ಳಬೇಕಾಗಿದೆ. ಪುರುಷರ ಸಹಕಾರವಿಲ್ಲದೆ ಸ್ತ್ರೀಯರ ಹಿತ ಕಾಪಾಡಲು ಸಾಧ್ಯವಿಲ್ಲ. ಸ್ತ್ರೀಯರ ಹಿತ ಕಾಪಾಡಲಾಗದೆ ಆಧುನಿಕ ಸಮಾಜ ನಿರ್ಮಾಣವಾಗುವುದಿಲ್ಲ ಎಂಬ ಧೋರಣೆಯದಾಗಿದೆ.

ಪಂಡಿತ ರಾಧಾಬಾಯಿ ಮತ್ತು ವಿಧವೆ ಕಮಲ ಅವರ ಈ ವಿಚಾರಗಳು ಭಾರತೀಯ ಹಿಂದೂ ಸಮಾಜದ ಸಾಂಪ್ರದಾಯಕತೆಯನ್ನು ಕಡೆಗಣಿಸಿ, ಪಾಶ್ಚಾತ್ಯ ಆಧುನಿಕ ಚಿಂತನೆಗಳನ್ನು ಒಪ್ಪಿ ಸ್ವೀಕರಿಸಿದ ಫಲವಾಗಿದೆ. ಇದು ತನ್ನ ಸಮಾಜದಲ್ಲಿನ ಕೊರತೆಯನ್ನು ತುಂಬಿಕೊಳ್ಳುವ ಫಲವಾಗಿ ಅನ್ಯ ವಿಚಾರಧಾರೆಗಳನ್ನು ಸ್ವೀಕರಿಸಿದ ರೀತಿಯಾಗಿದೆ. ಹೀಗಾಗಿ ಅನುಸಂಧಾನವೆಂಬುದು ಅನ್ಯರ ಲಾಭಕ್ಕೆ ಒಳಗಾಗುವ ಆಕರ್ಷಣೀಯ ಕ್ರಮವಾಗಿರದೆ ದೇಶೀಯ ಸಂಸ್ಕೃತಿಯ ಅರೆಕೊರೆಗಳು ತಿದ್ದುಪಡಿ ಮಾಡುವ ಕ್ರಮವಾಗಿ ಒಡಮೂಡಿದ ಸ್ವೀಕರಣೆಯಾಗಿ ಕಂಡುಬರುತ್ತದೆ.

ಈ ವಿಚಾರಗಳು ನಿರೂಪಕನ ವಕ್ರದೃಷ್ಟಿಗೆ ಒಳಗಾಗಿವೆ. ನಿರೂಪಕನ ಧೋರಣೆ ಸಂಘರ್ಷಾತ್ಮಕ ನೆಲೆ ತಲುಪಿದ ಸ್ಥಿತಿಯನ್ನು ವ್ಯಂಗ್ಯ ವಿಡಂಬನೆ ಕಾಣಿಸುತ್ತದೆ.

೮. ಸಭಾ ಮತ್ತು ವಿರಾಗಿಣಿ

ಭಾರತೀಯ ಪರಂಪರೆಯಲ್ಲಿ ಹೆಣ್ಣನ್ನು ಭೂಮಿಗೂ ಗಂಡನ್ನು ಬಾನಿಗೂ ಸಾಮಾನ್ಯವಾಗಿ ಹೋಲಿಸಲಾಗುತ್ತದೆ. ಈ ಕಲ್ಪನೆ ಭಾರತೀಯರಿಗಷ್ಟೆ ಸೀಮಿತವಾಗಿ ಉಳಿದಿಲ್ಲ. ಅನ್ಯದೇಶದ ಧಾರ್ಮಿಕ ನಂಬಿಕೆಗಳಲ್ಲಿ ಪುರುಷ ದೈವಗಳು ಆಕಾಶದಿಂದ ಅವತರಿಸುವುದು ಕಂಡು ಬರುತ್ತದೆ.

ಇದಕ್ಕೆ ವಿರುದ್ಧವಾಗಿ ಹೆಣ್ಣನ್ನು ಆಕಾಶಕ್ಕೆ ಹೋಲಿಸುವುದು ಅಥವಾ ಆಕಾಶದ ಪರ್ಯಾಯ ಹೆಸರಿನಿಂದ ಹೆಣ್ಣನ್ನು ಹೆಸರಿಸಿರುವುದು ಅಸಂಗತವಾಗಿ ಕಾಣುತ್ತದೆ.

ನಂಜನಗೂಡು ತಿರುಮಲಾಂಬಾ ಅವರು ತಮ್ಮ ನಭಾ ಮತ್ತು ವಿರಾಗಿಣಿ ಕೃತಿಗಳ ನಾಯಕಿಯ ಪಾತ್ರವನ್ನು ನಭಾ (ಆಕಾಶ) ಎಂದು ಹೆಸರಿಸಿರುವುದು ವಿಚಿತ್ರವಾಗಿ ಕಾಣುತ್ತದೆ. ಲೇಖಕಿ ಸ್ವತಃ ಮಹಿಳೆಯಾಗಿ ತನ್ನ ಸಮುದಾಯದ ಸಾಂಪ್ರದಾಯಿಕ ಜೀವನ ಮೌಲ್ಯಗಳಿಂದ ಬಾಧಿತಳಾಗಿ, ಪುರುಷಪರ ಸಮಾಜದ ಹಲವು ಆಯಾಮಗಳನ್ನು ಬಲ್ಲವರಾಗಿ ಹೀಗೆಯೇ ಚಿತ್ರಿಸಬಯಸಿದಂತೆ ಕಾಣುತ್ತದೆ.

ಹೆಣ್ಣು ಗಂಡಿನ ಸಂಬಂಧದಲ್ಲಿ ತಾಯಿ ಅಧಿಕೃತವಾದರೆ ತಂದೆ ನಂಬಿಕೆಯ ಭಾಗ ಮಾತ್ರ ಎಂದು ಹೇಳಲಾಗುತ್ತದೆ. ಹೆಣ್ಣು ಪೋಷಣೆ ತತ್ವದ ಪ್ರತಿರೂಪವಾಗಿದ್ದಾಳೆ. ತಾನು ಹೆರುವ ಮಕ್ಕಳಿಗೆ ತನ್ನ ದೇಹದ ಅಂಗಾಂಶಗಳನ್ನು ಹಂಚಿಕೊಂಡು ಜೀವ ಪೋಷಕಾಂಶಗಳನ್ನು ಉಣಿಸುತ್ತ ಜೀವ ತುಂಬುತ್ತಾಳೆ. ಮಕ್ಕಳ ಪೋಷಣೆಯಲ್ಲಿ ತನ್ನನ್ನು ತಾನೆ ಧಾರೆ ಎರೆದುಕೊಂಡು ತನ್ನ ಸ್ವಹಿತವನ್ನು ಬಿಟ್ಟು ಕೊಡುತ್ತಾಳೆ. ತಾಯಿಯ ಉತ್ಕಟತೆ, ಆರ್ದ್ರತೆ, ಆತ್ಮೀಯತೆ, ನಂಬಿಕೆ ಆಕೆಯ ಜೀವದ ಗುಣಗಳಾಗಿರುತ್ತವೆ. ಹೆಣ್ಣಿಗೆ ಹೆಣ್ಣೇ ಸಮಾನಳು. ತಾಯಿಯ ಸ್ಥಾನವನ್ನು ತಾಯಿಯಲ್ಲದೆ, ತಾಯಿಯಷ್ಟು ಸಮರ್ಥವಾಗಿ ತಂದೆ ತುಂಬಲು ಸಾಧ್ಯವಿಲ್ಲ. ಆದರೆ ತಂದೆಯಾದವನು ವ್ಯವಹಾರಸ್ಥ, ಜೊತೆಯಲ್ಲಿದ್ದೂ ಕೈಗೆಟುಕದ ಸ್ಥಿತಿಯಲ್ಲಿ ತನ್ನ ಜಗತ್ತಿನಲ್ಲಿರುತ್ತಾನೆ. ತಂದೆ ತನ್ನ ಮಕ್ಕಳ ಅಗತ್ಯಗಳನ್ನು ಪೂರೈಸಬಲ್ಲನಾದರೂ ತಾಯಿಯಂತೆ ಜೀವದ ಸಂಗಾತಿಯಲ್ಲ. ಆತನ ಪ್ರೀತಿ ತಾಯಿಯಂತೆ ವ್ಯಕ್ತವಲ್ಲ.

ಹೀಗಿದ್ದರೂ ಲೇಖಕಿ ಸ್ವತಃ ಒಬ್ಬ ಹೆಣ್ಣಾಗಿ ಹೆಣ್ಣಿನ ವಿಶೇಷಾಂಶಗಳನ್ನು ಅವಗಣನೆ ಮಾಡಿ ಗಂಡಿನ ವಿಶೇಷತೆಗಳಿಗೆ ಮಾರು ಹೋಗಬೇಕಾದ ಅಗತ್ಯ ಕುರಿತು ಸಾಂಸ್ಕೃತಿಕವಾಗಿ ತಮ್ಮನ್ನು ತೊಡಗಿಸಿಕೊಂಡಂತೆ ಈ ಕಾದಂಬರಿಗಳು ಕಾಣುತ್ತವೆ. ಪುರುಷ ಸಮಾಜ ಸ್ತ್ರೀಯರನ್ನು ತುಳಿದು ಅವರ ಮೇಲೆ ಸವಾರಿ ಮಾಡುವ ಅನುಭವಗಳನ್ನು ವಿಧವೆಯಾಗಿ ಅನುಭವಿಸಿಯೂ ಸ್ವತಃ ಸಂಗಾತಿಯಿರದಿದ್ದರೂ ಹೆಗಲೇರಿ ಕುಳಿತ ಪುರುಷ ವಿಶೇಷತೆಯನ್ನೆ ಕಂಡು ಅರಸಲಾಗಿದೆ.

ಒಂದು ಹೆಣ್ಣು ಹೆಣ್ಣಿನಂತಿರದೆ ಗಂಡಿನಂತಿರಬೇಕು ಎಂದು ಒಬ್ಬ ಮಹಿಳೆಯೇ ಆಶಿಸುವ ಈ ಬಗೆ ಸ್ತ್ರೀಯ ಮಹತ್ವವನ್ನು ಕಾಣಿಸುವಂತಹುದೋ ಅಥವಾ ಪುರುಷ ಮಹತ್ವವನ್ನು ಬಗೆದು ತೋರಿಸುವಂತಹದೋ ಎಂದು ಅಚ್ಚರಿ ಮೂಡುತ್ತದೆ. ಒಂದು ಹೆಣ್ಣು ಗಂಡಿನ ಗುಣವಿಶೇಷಗಳನ್ನು ಹೆಣ್ಣಿನದನ್ನಾಗಿ ಮಾಡಿಕೊಳ್ಳಬೇಕೆನ್ನುವ ಆಶಯದಲ್ಲಿ ಹೆಣ್ಣು ಗಂಡಿನ ಮಟ್ಟಕ್ಕೆ ಏರಬಲ್ಲಳೆಂಬ ವಿಶ್ವಾಸ ಹುಟ್ಟಿಸುವ ಉದ್ದೇಶವಿರಬಹುದು. ಅಥವಾ ಹೆಣ್ಣಿನ ಮೇಲೆ ಹೇರಲಾಗಿರುವ ಸಾಂಸ್ಕೃತಿಕ

ಒತ್ತಡದ ಭಾರವನ್ನು ಅಬಲೆಯಾದ ಹೆಣ್ಣು ಗಂಡಿನಂತಾಗುವ ಮೂಲಕ ಕಳೆದುಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಸೂಚಿಸುತ್ತಿರಬಹುದು. ಪುರುಷ ಸಮಾಜದಲ್ಲಿ ಹೆಣ್ಣಿನ ಇಕ್ಕಟ್ಟಿನ ಸ್ಥಿತಿಗಳು ಹೆಣ್ಣಾಗಿರುವವಳು ಮಾತ್ರ ಅರಿಯಬಲ್ಲಳು; 'ಬಂಜೆ ಬಲ್ಲಳೆ ಹೆರುವ ನೋವ' ಎಂಬರ್ಥದ ಅಕ್ಕಮಹಾದೇವಿಯ ಮಾತನ್ನು ಇಲ್ಲಿ ಅನ್ವಯಿಸಿಕೊಂಡಿರಬಹುದು. ತನ್ನ ತೊಡಕಿನ ದಾರಿಗೆ ಗಂಡೇ ಕಾರಣವಾಗಿರುವ ಹಿನ್ನೆಲೆಯಲ್ಲಿ, ಹೆಣ್ಣು ಗಂಡಾಗಿ ಇರುವುದು ಅದಕ್ಕೆ ಸರಿಯಾದ ಉತ್ತರವೆಂಬಂತೆ ಕಂಡಿರಬಹುದು. ಅದರ ಸರಿ ದಾರಿ ಯಾವುದೆಂದು ಹುಡುಕುತ್ತಿರುವ ಸಾಂಸ್ಕೃತಿಕ ಹುಡುಕಾಟವೂ ಆಗಿರಬಹುದು. ಹಾಗಾಗಿ ಹೆಣ್ಣು ಗಂಡಾಗುವ ಪರಿಯೊಂದನ್ನು ಇಲ್ಲಿ ಕಾಣಿಸುತ್ತಿರಬಹುದು.

ಆರ್ಯಕುಲಾಂಗನೆ ಮತ್ತು ವಿಧವಾ ಸಮಸ್ಯೆ

ಹದಿನೆಂಟನೆಯ ವಯಸ್ಸಿನಲ್ಲಿಯೆ ವಿಧವೆಯಾದ ನಭಾ ಹೆಣ್ಣಿಗೆ ತನ್ನ ಜೀವಮಾನದಲ್ಲಿ ಒಂದೇ ಮದುವೆ ಎಂಬ ಪುರುಷ ಸಮಾಜದ ಆದರ್ಶವನ್ನು ನೆಚ್ಚಿದ್ದಾಳೆ. ವೈಧವ್ಯ ಪೂರ್ವಜನ್ಮದ ಕರ್ಮಫಲವಾಗಿದೆ, ಅದು ತನ್ನ ಬಾಳಲ್ಲಿ ಒದಗಿ ಬಂದಿದೆ ಎಂದು ಅದನ್ನು ಏಕಮನಸ್ಸಿನಿಂದ ಸ್ವೀಕರಿಸಿದ್ದಾಳೆ. ಪುರುಷ ಸಮಾಜ ತನ್ನ ಅನುಕೂಲಕ್ಕೆ ಮಂಡಿಸಿದ ಪೂರ್ವಜನ್ಮದ ಕರ್ಮ ಸಿದ್ಧಾಂತವನ್ನು ಅದರ ಪುರುಷ ರಾಜಕಾರಣದ ಆಚೆಗೆ ಒಪ್ಪಿಕೊಂಡಿದ್ದಾಳೆ. ಹಾಗಾಗಿ ವೈಧವ್ಯದ ಕಷ್ಟಗಳನ್ನು ಈ ಜನ್ಮದಲ್ಲಿಯೆ ಅನುಭವಿಸಿ ಕಳೆದುಕೊಳ್ಳಬೇಕು, ವೈಧವ್ಯದ ಪರಿಹಾರಕ್ಕೆ ವಿಧವಾ ವಿವಾಹ ಉತ್ತರವಲ್ಲವೆಂದು ಗಟ್ಟಿಯಾಗಿ ನಂಬಿದ್ದಾಳೆ. ಈ ಮೂಲಕ ಸ್ತ್ರೀಯರು ಸ್ವಧರ್ಮ ಪಾಲಿಸುವ ಮೂಲಕ ಜಾತಿಮರ್ಯಾದೆಯನ್ನು ಮೀರತಕ್ಕದಲ್ಲ ಎಂದು ಭಾವಿಸಿದ್ದಾಳೆ. ವಿಧವಾ ವಿವಾಹ ಅನ್ಯ ಸಂಸ್ಕೃತಿಯ ಜೀವನ ವಿಧಾನವೆ ಹೊರತು, ಅದು ಹಿಂದೂ ಸಂಸ್ಕೃತಿಯದಲ್ಲವೆಂಬುದು ಅವಳ ದೃಷ್ಟಿಯಾಗಿದೆ. ಸ್ತ್ರೀಯಾದವಳು ತನಗೆ ಒದಗಿ ಬರುವ ಕಷ್ಟ ಪರಂಪರೆಗಳನ್ನು ತಾಳ್ಮೆಯಿಂದ, ಸಚ್ಚಾರಿತ್ರ್ಯದಿಂದ, ಸುಶೀಲ ನಡತೆಯಿಂದ, ಸುಸಂಸ್ಕೃತ ಆಚಾರ-ವಿಚಾರಗಳಿಂದ, ವಿದ್ಯಾಬಲದಿಂದ, ಮನೋಸ್ಥೈರ್ಯದಿಂದ ಎದುರಿಸಬೇಕು. ಈ ಮೂಲಕವೆ ಹೆಣ್ಣಿನ ಘನತೆಯನ್ನು ಎತ್ತಿ ಹಿಡಿಯಬೇಕು ಎಂಬ ನಿಲುವು ಆಕೆಯದು. ಹಾಗಾಗಿ ತನ್ನವರೆನ್ನುವ ತಂದೆ-ತಾಯಿ, ಗಂಡ ಯಾರೂ ಇಲ್ಲದ ನಭಾ ಚಿಕ್ಕಪ್ಪ ಶಂಕರನಾಥ ಮತ್ತು ಚಿಕ್ಕಮ್ಮ ಶರಾವತಿಯೊಂದಿಗೆ ಇರಬಯಸುತ್ತಾಳೆ. ನೆಂಟರಿಷ್ಟರು ಹೆತ್ತವರಂತೆ ಪೋಷಕರಾಗಲು, ಪತಿಯಂತೆ ಆಶ್ರಯ ನೀಡಲು ಸಾಧ್ಯವಿಲ್ಲವೆಂದು ಆಕೆಗೆ ಆದಷ್ಟು ಬೇಗ ಮನವರಿಕೆಯಾಗುತ್ತದೆ. ಬಂಧು-ಬಳಗವೆನ್ನುವರು ತನ್ನಲ್ಲಿ ಹಣ ಅಸ್ತಿ ಇದ್ದಾಗ ಉಪಯೋಗ ಪಡೆಯುವವರೇ ಹೊರತು ಇಲ್ಲದಿದ್ದಾಗ ಮನೆಯಿಂದ ಹೊರಗೆ ಅಟ್ಟುವ ಸ್ವಾರ್ಥಿಗಳು ಎಂದು ಅನುಭವಕ್ಕೆ ಬರುತ್ತದೆ. ಅವಳ ಚಿಕ್ಕಪ್ಪ ಚಿಕ್ಕಮ್ಮಳಿಗೆ ಅವಳ ಮೇಲಿನ ಪ್ರೀತಿಗಿಂತ ಅವಳ ತಂದೆ

ಅವಳ ಪಾಲಿಗೆ ನೀಡಿದ ಮನೆ, ಒಡವೆ, ಹಣದ ಮೇಲಿನ ಅಕ್ಕರೆಯೆ ಹೆಚ್ಚಾಗಿರುತ್ತದೆ. ಅದನ್ನು ತನ್ನಿಂದ ಕಬಳಿಸಲು ಪ್ರೀತಿಯ ನಟನೆ ಮಾಡುತ್ತಾರೆ. ತನ್ನ ಚಿಕ್ಕಪ್ಪ-ಚಿಕ್ಕಮ್ಮಳಿಂದ ವಂಚಿತಳಾದ ನಭಾ ಪುರುಷ ಸಮಾಜದ ಗಂಡಸಿನ ಹಾಗೆ ತಾನೂ ಸ್ವತಂತ್ರಳಾಗಿಯೇ ಇರಬೇಕು ಎಂದು ನಿರ್ಧರಿಸುತ್ತಾಳೆ. ನೆಂಟರಿಷ್ಟರು, ಆಪ್ತೇಷ್ಟರು ಯಾರನ್ನೇ ಅವಲಂಬಿಸಲಿ ಅವರ ಹಂಗಿನಲ್ಲಿ ಇರಬೇಕಾಗುತ್ತದೆ. ಅದಕ್ಕಾಗಿ ಅವರ ಸ್ವಾರ್ಥಕ್ಕೆ ಬಲಿಯಾಗಬೇಕಾಗುತ್ತದೆ. ಯಾರ ಹಂಗೂ ಇಲ್ಲದೆ ಪುರುಷನಂತೆ ಸ್ವತಂತ್ರಳಾಗಿರುವುದರಿಂದ ತನ್ನಿಚ್ಛೆಯಂತೆ ಬದುಕಲು ಸಾಧ್ಯವೆಂದು ಅಬಲೆಯಾದ ನಭಾ ಸಬಲೆಯಾಗಲು ಹೊರಡುತ್ತಾಳೆ.

ನಭಾಳ ಮತ್ತೊಬ್ಬ ಚಿಕ್ಕಪ್ಪ ಚಿದಾನಂದ ಅವಳಿಗೆ ಮರುಮದುವೆ ಮಾಡಿಕೊಳ್ಳಲು ಒತ್ತಾಯ ಮಾಡುತ್ತಾನೆ. ನಭಾಗೆ ಅನ್ಯ ಸಂಸ್ಕೃತಿಯ ಹೊಸ ವಿಚಾರಗಳು ತನ್ನ ಜೀವನವನ್ನು ತನ್ನಿಚ್ಛೆಯಂತೆ ರೂಪಿಸಿಕೊಳ್ಳಲು ಕಂಟಕವಾಗಿ ಕಂಡುಬರುತ್ತವೆ. ಅಲ್ಲದೆ ತನ್ನ ಹಿತೈಷಿಯಂತೆ ಮಾತಾಡುವ ಚಿಕ್ಕಪ್ಪ ಚಿದಾನಂದನ ಹಂಗಿನಿಂದಲೂ ಹೊರಬರಬೇಕೆಂದು ನಭಾ ಆಲೋಚಿಸುತ್ತಾಳೆ. ಹಾಗಾಗಿ ಆಕೆಗೆ ಇನ್ನೊಂದು ಮದುವೆಯಿಂದ ಒದಗುವ ಮತ್ತೊಬ್ಬ ಗಂಡನನ್ನು ನಂಬುವುದು ವ್ಯವಾಹಾರಿಕವಾಗಿ ಕಾಣುತ್ತದೆಯೋ ಹೊರತು, ಭಾರತೀಯ ಹೆಣ್ಣಿನ ಜೀವನ ಕ್ರಮವಾಗಿ ಕಾಣುವುದಿಲ್ಲ. ಹಾಗಾಗಿ ಚಿಕ್ಕಪ್ಪನ ಒತ್ತಾಯ ಕಾರ್ಯ ರೂಪಕ್ಕೆ ಬರಲು ಯಾವುದೇ ಅವಕಾಶ ಮಾಡಿಕೊಡುವುದಿಲ್ಲ.

ರಾಜಶೇಖರ ಎಂಬ ಯುವಕ ನಭಾಳಲ್ಲಿ ಅನುರಕ್ತನಾಗುತ್ತಾನೆ. ಅವಳನ್ನು ಮದುವೆಯಾಗಬೇಕೆಂದು ಬಯಸುತ್ತಾನೆ. ಅವಳ ನಿರುತ್ಸಾಹ, ನಿರುತ್ತೇಜಕ ಪ್ರತಿಕ್ರಿಯೆಗಳಿಗೆ ಬೇಸರಿಸದೆ ಅವಳ ಬೆನ್ನು ಹತ್ತುತ್ತಾನೆ. ಇಂಗ್ಲಿಷ್ ಆಡಳಿತ ಪ್ರಚುರಪಡಿಸಿದ ವಿಧವಾ ವಿವಾಹ ಪದ್ಧತಿ ಸಚ್ಚಾರಿತ್ರ ಹೆಣ್ಣು ಮಗಳಿಗೆ ಖಂಡಿತ ಅನ್ವಯವಾಗುವುದಿಲ್ಲ ಎಂದು ನಂಬಿದ್ದ ನಭಾ ತಾನು ಅದನ್ನು ಪಾಲಿಸುವ ಸಮಸ್ಯೆ ಎದುರಾಗಿಲ್ಲವೆಂದೇ ತಿಳಿಯುತ್ತಾಳೆ. ರಾಜಶೇಖರ ವಿಧವೆಯರಲ್ಲಿ ಆಸಕ್ತನಾಗಿದ್ದರೆ, ಆತ ವಿಧವಾಶ್ರಮಗಳ ದಾರಿ ಹುಡುಕಿಕೊಳ್ಳುವುದು ಉತ್ತಮವೆಂದೂ ಅವನಿಗೆ ತಾನು ದಕ್ಕುವುದಿಲ್ಲವೆಂದೂ ಸ್ಪಷ್ಟ ಸೂಚನೆ ನೀಡುತ್ತಾಳೆ. ಅವಳ ಈ ಮಾತಿನಲ್ಲಿ ಅಂದು ವಿಧವೆಯರು ವಿಧವಾಶ್ರಮ ಸೇರಿ ಅನ್ಯ ಪುರುಷರ ಸಂಬಂಧ ಇಟ್ಟುಕೊಳ್ಳುತ್ತಿದ್ದ ಸಾಧ್ಯತೆಯನ್ನು ಸೂಚಿಸುತ್ತದೆ. ವಿಧವೆಯರ ಸ್ಥಿತಿಗತಿಗಳನ್ನು ಪುರುಷರಂತೆ ಕೀಳುಗಳೆದು ನೋಡುವುದು ಮತ್ತು ಆ ಸ್ಥಿತಿ ತನಗೂ ಅನ್ವಯವಾಗಬಹುದಾದ ಸಾಧ್ಯತೆ ಬಗ್ಗೆ ಹೆದರಿರುವುದು ಇಲ್ಲಿ ಸ್ಪಷ್ಟವಿದೆ. ತಾನು ಅಂಥ ಸ್ತ್ರೀ ಸ್ವಭಾವದವಳು ಆಗಬಾರದು ಮತ್ತು ಅಂಥ ದುರ್ಗತಿಗೆ ತನ್ನನ್ನು ತಾನೇ ತಂದುಕೊಳ್ಳಲು ಸಿದ್ಧಳಾಗಬಾರದು ಎಂದು ತನಗೆ ತಾನೇ ಸಾರಿಕೊಳ್ಳುತ್ತಾಳೆ. ಆದರೆ ರಾಜಶೇಖರನಿಗೆ ನಭಾ ತನ್ನ ಜೀವನ ಕುರಿತು ತಳೆದ ವಿಚಾರ, ನಿಲುವು, ನಂಬಿಕೆ, ನಿರ್ಧಾರ, ಆಲೋಚನಾಕ್ರಮ, ಸಂಪ್ರದಾಯಶೀಲತೆ ಯಾವುದನ್ನೂ

ಅರ್ಥಮಾಡಿಕೊಳ್ಳಲು ಸಾಧ್ಯವಾಗದೆ ಹೋಗುತ್ತದೆ. ಅವನ ಸೋಲರಿಯದ ಹಟದ ಮುಂದೆ ನಭಾ ತನ್ನ ಆರ್ಯ ಕುಲಾಂಗನೆಯ ಆದರ್ಶ ವ್ಯಕ್ತಿತ್ವ ಉಳಿಸಿಕೊಳ್ಳುವ ಸಲುವಾಗಿ ಆಕೆ ಯಾರಿಗೂ ಸುಳಿವು ನೀಡದೆ ಅಲ್ಲಿಂದ ನಾಪತ್ತೆಯಾಗಿ ಬಿಡುತ್ತಾಳೆ.

ಪುರುಷ ಸಮಾಜದ ಪುರುಷನಂತೆ ಸ್ವಾತಂತ್ರ್ಯ ಬಯಸಿದ ವಿಧವೆ ನಭಾಗೆ ಆಧುನಿಕ ಚಿಂತನೆಗಳ ಫಲವಾದ ಹೊಸ ಆಚಾರಗಳು ಅವಳ ವ್ಯಕ್ತಿತ್ವಕ್ಕೆ ಸವಾಲು ಎಸೆಯುತ್ತವೆ. ಆಕೆ ಮರುಮದುವೆಗಿಂತ ಶಿಕ್ಷಣವೆ ಹೆಣ್ಣನ್ನು ಸಬಲಳನ್ನಾಗಿ ಮಾಡಬಲ್ಲುದೆಂದು ನಂಬಿ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ತೊಡಗುತ್ತಾಳೆ. ತನ್ನ ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ತಾನೇ ನಿರ್ಣಾಯಕಳಾಗಬೇಕು ಎಂದು ನಿರ್ಧರಿಸಿ ಹಾಗೆಯೇ ನಡೆದುಕೊಳ್ಳುತ್ತಾಳೆ. ನಭಾಳ ಸ್ವಾತಂತ್ರ್ಯದ ಇಚ್ಛೆ ಸಂಪ್ರದಾಯ ಚಿಂತನೆಗಳಾದ ಹಣೆಬರಹ ಮತ್ತು ಕರ್ಮಸಿದ್ಧಾಂತದ ಮೂಲಕ ಒಡಮೂಡಿದೆ. ಹಾಗಾಗಿ ಆಧುನಿಕ ಆಚಾರ–ವಿಚಾರಗಳಾದ ವಿಧವಾವಿವಾಹ ಆಕೆಗೆ ಕಂಟಕವಾಗಿ ಪರಿಣಮಿಸಿದೆ. ಅದರ ವಿರುದ್ಧ ಸಂಘರ್ಷಕ್ಕೆ ಇಳಿದ ಭಾಗವಾಗಿ ಮತ್ತು ಅದನ್ನು ಮೀರುವಲ್ಲಿ ಆಕೆ ಕಾಣೆಯಾಗಿ ಬಿಡುತ್ತಾಳೆ. ಹೀಗೆ ನಭಾಳ ಪಾಶ್ಚಾತ್ಯ ಸಂಸ್ಕೃತಿಯ ವಿರುದ್ಧದ ಸೆಣಸಾಟ ಆಕೆಯ ಅಚಲ ವ್ಯಕ್ತಿತ್ವದಿಂದ ಮೂಡಿದಂತೆ ಕಾಣುತ್ತದೆ.

ಸಂಪ್ರದಾಯ ಮತ್ತು ಲೋಕೋಪಕಾರ

ನಭಾ ಕಾದಂಬರಿಯಲ್ಲಿ ಕಾಣೆಯಾದ ನಭಾ ಯಾರಿಗೂ ತಿಳಿಯದಂತೆ ತನ್ನ ಹೆಸರನ್ನು ವಿರಾಗಿಣಿಯಾಗಿ ಬದಲಿಸಿಕೊಂಡು ಆಧುನಿಕ ಸಂಸ್ಕೃತಿಯಿಂದ ತನಗೆದುರಾದ ಸಮಸ್ಯೆಗಳಿಗೆ ಹೊರದಾರಿ ಕಂಡುಕೊಳ್ಳುತ್ತಾಳೆ. ಆಕೆ ತನ್ನ ಆರ್ಯಕುಲಾಂಗನೆ ಆದರ್ಶದಂತೆ ವಿರಕ್ತ ವಿಚಾರಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು, ಒಬ್ಬ ಆದರ್ಶ ವಿಧವೆಯಾಗಿ ತನ್ನ ಬಾಳನ್ನು ರೂಪಿಸಿಕೊಳ್ಳುತ್ತಾಳೆ. ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿಕೊಂಡು ಬಾಲಕಿಯರಿಗೆ ವಿದ್ಯಾಭ್ಯಾಸ ನೀಡುತ್ತ ಅವರ ಬೌದ್ಧಿಕ ಬಲ ಹೆಚ್ಚಲು ಶ್ರಮಿಸುತ್ತಾಳೆ. ಹಿಂದೂ ಸಮಾಜದ ಪುರುಷ ಸಂಸ್ಕೃತಿಯನ್ನು ಉಳಿಸಿಕೊಳ್ಳುವಲ್ಲಿ ಹೆಣ್ಣು ಮಕ್ಕಳು ವಹಿಸಬೇಕಾದ ಎಚ್ಚರದ ಬಗ್ಗೆ ಅವರಿಗೆ ತಿಳುವಳಿಕೆ ನೀಡುವ ಕಾರ್ಯ ಮಾಡುತ್ತಾಳೆ. ತನ್ನ ನೆರೆ ಹೊರೆಯಲ್ಲಿರುವ ದಂಪತಿಗಳ ನಡುವೆ ವಿರಸ, ಜಗಳ ಉಂಟಾದಲ್ಲಿ ಅವರಿಗೆ ಹಿಂದೂ ಆದರ್ಶ ದಂಪತಿಗಳಂತೆ ಹೊಂದಿಕೊಂಡು ಬಾಳುವ ಕ್ರಮವನ್ನು ವಿವರಿಸುವ ಚಿತ್ರಣಗಳೂ ಇವೆ. ತನ್ನ ಸುತ್ತಲ ಪುರುಷ ಸಮಾಜ ವಿಧವೆಯಾದ ವಿರಾಗಿಣಿಯನ್ನು ವಿಧವೆಯೆಂಬ ಕಾರಣಕ್ಕಾಗಿಯೇ ಆಕೆಯ ಮುಖ ನೋಡಲು, ಮಾತಾಡಲು ತಿರಸ್ಕರಿಸಿ ತೇಜೋವಧೆ ಮಾಡುತ್ತದೆ. ಹೆಣ್ಣಿನ ವಿಧವಾ ಸ್ಥಿತಿಗೆ ಕಾರಣವಾದ ಪುರುಷ ಸಮಾಜದ ಅವಹೇಳನವನ್ನೆಲ್ಲ ಸಹನೆಯಿಂದಲೆ ಸಹಿಸಿಕೊಳ್ಳುತ್ತಾಳೆ. ನಭಾ ತನ್ನ ಸುತ್ತಲ ಜನರ ಸಣ್ಣ ಪುಟ್ಟ ತಪ್ಪುಗಳನ್ನು ತಿದ್ದುವುದು, ಅವರ ನೆರವಿಗೆ ನಿಲ್ಲುವುದು ಮುಂತಾದ ಲೋಕೋಪಚಾರ ಕಾರ್ಯಗಳಲ್ಲಿ ತನ್ನ ಜೀವನದ ಸುಖವನ್ನು ಅರಸುತ್ತಾಳೆ.

ಸಾಂಪ್ರದಾಯಿಕ ಸಮಾಜ ವಿಧವೆಯೊಬ್ಬಳಲ್ಲಿ ಅಪೇಕ್ಷೆ ಪಡುವ ವಿರಕ್ತ ವಿಷಯಗಳಲ್ಲಿ ವಿರಾಗಿಣಿ ತನ್ನನ್ನು ತೊಡಗಿಸಿಕೊಳ್ಳುವುದಿಲ್ಲ. ಹೀಗಿದ್ದರೂ ಅಂತಹ ಕಲ್ಪನೆಗೆ ಅಪಚಾರವಾಗದ ಹಾಗೆ ಆಧುನಿಕ ಸಂಗತಿಗಳಿಗೆ ಬಲಿ ಬೀಳದೆ ಪಾಲಿಸಿಕೊಂಡು ಬರುತ್ತಾಳೆ. ಅವಳ ಈ ಗುಣ ಅವಳನ್ನು ಸಾಧ್ವಿ ಶಿರೋಮಣಿಯನ್ನಾಗಿ ಮಾಡುತ್ತದೆ. ಹಿಂದೂ ಸಮಾಜದ ಪುರುಷರ ಮೆಚ್ಚುಗೆಗೆ ಪಾತ್ರವಾಗುವಂತೆ ಮಾಡುತ್ತದೆ. ಹಿಂದೂ ಸಂಸ್ಕೃತಿಯ ಪಾಲನೆ-ಪೋಷಣೆ ಸ್ತ್ರೀಯರ ಕರ್ತವ್ಯ ಹೇಗೆಂಬುದನ್ನು ವಾಸ್ತವಗೊಳಿಸುವ ಮೂಲಕ ಆಕೆ ಒಂದು ಮೇರು ಉದಾಹರಣೆಯಾಗಿ ನಿಲ್ಲುತ್ತಾಳೆ. ವಿಧವೆಯಾಗಿದ್ದ ನಭಾ ವಿರಾಗಿಣಿಯಾಗಿ ಹಿಂದೂ ಸಮಾಜದ ವಿರಕ್ತ ಕಲ್ಪನೆಯನ್ನು ಮತ್ತಷ್ಟು ಸದೃಢಗೊಳಿಸುವ ಕಾರ್ಯದಲ್ಲಿ ತೊಡಗಿ, ಅಂತಹ ಚಿಂತನೆಗಳೊಂದಿಗೆ ಅನುಸಂಧಾನ ನಡೆಸುವುದು ಕಾಣುತ್ತದೆ.

ಪುರುಷ ಸಮಾಜದ ವಿರಕ್ತ ಕಲ್ಪನೆ ವಿಧವಾ ಸ್ತ್ರೀಯ ಪ್ರಕೃತಿ ಧರ್ಮವನ್ನು ದಮನ ಮಾಡುವಂಥದ್ದಾಗಿದ್ದರೂ ಆ ದಮನಿತ ಸ್ಥಿತಿಯನ್ನೇ ಆದರ್ಶೀಕರಿಸಿಕೊಂಡಿರುವ ನಭಾ ಒಂದು ಮಿತಿಯೊಳಗೆ ತನ್ನ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವ ಬಗೆ ಇಲ್ಲಿ ನಿರೂಪಿತವಾಗಿದೆ. ಅಷ್ಟರ ಮಟ್ಟಿಗೆ ಹೆಣ್ಣು ಸಾಂಪ್ರದಾಯಿಕ ಚೌಕಟ್ಟಿನಲ್ಲೆ ತನ್ನ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವ ಕ್ರಮವನ್ನು ವಿವರಿಸಿದಂತಿದೆ.

೯. ಮಾಡಿದ್ದುಣ್ಣೋ ಮಹಾರಾಯ

ಕನ್ನಡದ ಗಾದೆಯೊಂದನ್ನು ಶೀರ್ಷಿಕೆಯಾಗುಳ್ಳ ಈ ಕಾದಂಬರಿ ನೀತಿಕತೆಯ ಸ್ವರೂಪದಲ್ಲಿರುವ ಭ್ರಮೆಯನ್ನು ಹುಟ್ಟಿಸುತ್ತದೆ. ಪಠ್ಯ ನಿರೂಪಿತ ಕಥಾ ಸ್ವರೂಪಕ್ಕೂ ಅದರ ಶೀರ್ಷಿಕೆಗೂ ಅವಿನಾ ಸಂಬಂಧ ಏರ್ಪಟ್ಟಂತೆ ಕಾಣುವುದಿಲ್ಲವಾದರೂ ಸಂಸ್ಕೃತಿಯೊಂದು ತನ್ನ ಒಡಲೊಳಗೆ ಅವಿತಿಟ್ಟುಕೊಂಡಿರುವ ಅಪರಾಧಗಳಿಗೆ ಅದರ ಫಲಾಫಲವನ್ನು ತಾನೇ ಅನುಭವಿಸಬೇಕಲ್ಲದೇ ಅನ್ಯ ಸಂಸ್ಕೃತಿಯೊಂದು ಅದರ ಭಾರವನ್ನು ಹೊತ್ತುಕೊಳ್ಳಲಾರದು ಎಂಬ ಧ್ವನಿಯೊಂದು ಇದರಲ್ಲಿ ಅಡಗಿರುವಂತೆ ಕಾಣುತ್ತದೆ. ವಾಗ್ದೇವಿ ಕಾದಂಬರಿಯ ರಚನಾ ಸ್ವರೂಪದಂತೆ ಈ ಕೃತಿ ಕೂಡ ಸ್ತ್ರೀ ಕೇಂದ್ರಿತವಾಗಿದ್ದರೂ ಈ ಕುರಿತ ಸಮಕಾಲೀನ ವಾಗ್ವಾದಗಳಿಗೆ ತೆರೆದುಕೊಳ್ಳದೆ ಹಿಂದೂ ಸಂಸ್ಕೃತಿಯ ಒಡಲೊಳಗೆ ಸ್ತ್ರೀಯರು ಜೀವಂತ ಶವಗಳಾಗಿರುವ ಚಿತ್ರವನ್ನು ಕಟ್ಟಿಕೊಟ್ಟಂತೆ ಕಾಣುತ್ತದೆ. ಈ ಕೃತಿಯಲ್ಲಿ ಸಂಪ್ರದಾಯ ಮತ್ತು ಆಧುನಿಕತೆಗಳ ಪರ-ವಿರೋಧ ಚರ್ಚೆಗೆ ಅವಕಾಶವಿಲ್ಲದಂತೆ ಮೈಸೂರು ಸಂಸ್ಥಾನವೊಂದರ ದೂರದ ಹಳ್ಳಿಯಲ್ಲಿ ನಡೆಯುವ ಕತೆಯಂತೆ ನಿರೂಪಿತವಾಗಿದೆ.

ಶಿವರಾಮ ಪಡಿಕ್ಕಲ್ ತಮ್ಮ ನಾಡು-ನುಡಿಯ-ರೂಪಕ ಎಂಬ ಪಿ.ಎಚ್.ಡಿ ಪ್ರಬಂಧದಲ್ಲಿ ಈ ಕುರಿತು 'ನಾಶವಾಗುತ್ತಿರುವ ಆದರ್ಶ' ಎಂಬ ಉಪಶೀರ್ಷಿಕೆಯಡಿ ಚರ್ಚಿಸಿದ್ದಾರೆ. "ಪುಟ್ಟಣ್ಣನವರದು

ದೇಸೀ ಜೀವನದಲ್ಲಿ ನಡೆಯುತ್ತಿರುವ ಪಲ್ಲಟವನ್ನು ಮತ್ತು ಅದರ ಅನಿವಾರ್ಯತೆಯನ್ನು ಅರಿವಿಗೆ ತಂದುಕೊಂಡು ಅತ್ಯಂತ ವಿಷಾದದಿಂದ ದಾಖಲಿಸುವ ರೀತಿ. ಪುಟ್ಟಣ್ಣನವರ ಆದರ್ಶವಿರುವುದು ಭಾರತದ ಸಾಂಪ್ರದಾಯಿಕ ಜೀವನ ಕ್ರಮದ ನೈತಿಕತೆಯಲ್ಲಿ. ಆದರೆ ತಾವು ನಂಬಿರುವ ಈ ಸಾಂಪ್ರದಾಯಿಕ ಜೀವನ ಕ್ರಮ ಉಳಿಯುವುದಿಲ್ಲ ಎನ್ನುವ ಖಚಿತ ಅರಿವು ಅವರಿಗಿದೆ. ಒಂದು ಕಡೆ ತಮ್ಮ ನಂಬಿಕೆ ಮತ್ತು ಇನ್ನೊಂದೆಡೆ ಚಾರಿತ್ರಿಕ ಅನಿವಾರ್ಯತೆಯ ಅರಿವು-ಈ ಎರಡರ ಅಂತರ್ ಸಂಬಂಧದಲ್ಲಿ ಪುಟ್ಟಣ್ಣನವರ ಕಾದಂಬರಿಗಳ ಅಸ್ತಿತ್ವವಿದೆ. ಈ ಅರ್ಥದಲ್ಲಿ ಪುಟ್ಟಣ್ಣನವರ ಕಾದಂಬರಿ ಮಾರ್ಗವನ್ನು ನಾವು ಸಾಂಪ್ರದಾಯಿಕ ಕಾದಂಬರಿ ಮಾರ್ಗವೆಂದು ಕರೆಯಬಹುದು".(೨೦೦೧:೧೦೧) ಎಂದು ಅಭಿಪ್ರಾಯ ಪಡುತ್ತಾರೆ.

ಸೀತೆ, ಸದಾಶಿವ ದೀಕ್ಷಿತನ ಮನೆಗೆ ಸೊಸೆಯಾಗಿ ಬಂದ ಮೇಲೆ ಅತ್ತೆ ತಿಮ್ಮಮ್ಮನ ಕೈಯಲ್ಲಿ ಅನುಭವಿಸುವ ಕಿರುಕುಳ, ಹಿಂಸೆ; ಉಪಾಧ್ಯನ ವ್ಯಾಮೋಹಕ್ಕೆ ತುತ್ತಾಗಿ ನರಳುವ ನರಕಯಾತನೆ ಪಡಿಕ್ಕಲ್ ಅವರಿಗೆ ಆದರ್ಶವಾಗಿ ಕಂಡಿದೆ. ಅವರ ದೃಷ್ಟಿ ಪುರುಷ ಸಮಾಜದಲ್ಲಿ ಸ್ತ್ರೀಯರನ್ನು ಹೆಂಚಿನ ಮೇಲೆ ಹೊರಳಾಡಿಸಿ ಸುಟ್ಟು ಅನುಭೋಗಿಸುವುದರಲ್ಲಿ ಸುಖ ಪಟ್ಟಂತೆ ಕಾಣುತ್ತದೆ. ಮತ್ತೊಬ್ಬರನ್ನು ಹಿಂಸಿಸಿ ಖುಷಿ ಪಡುವ ಪಡಿಕ್ಕಲ್ ಅವರ ಈ ಮನಸ್ಥಿತಿ ಅನಾರೋಗ್ಯಕರವಾದದ್ದು ಎಂದು ನಿರ್ದಾಕ್ಷಿಣ್ಯವಾಗಿ ಹೇಳಬೇಕಾಗಿದೆ. ಇಂತಹ ಒಂದು ಆದರ್ಶ ಮತ್ತು ಸಂಪ್ರದಾಯ ನಾಶವಾಗುತ್ತಿರುವ ಬಗ್ಗೆ ಪಡಿಕ್ಕಲ್ ಅವರಿಗೆ ತುಂಬಾ ಕಳವಳ, ಆತಂಕ, ವಿಷಾದ ಮೂಡಿಸಿರಬಹುದು. ಆದರೆ ಪುಟ್ಟಣ್ಣ ಅವರು ಭಾರತೀಯ ನಾರಿಯರು ಸಾಂಪ್ರದಾಯಿಕ ಜೀವನದಲ್ಲಿ ಇರುವ ಸ್ಥಿತಿಗತಿಗಳನ್ನು ಓದುಗರ ಕರುಳು ಚುರುಕ್ ಎನ್ನುವಂತೆ ಕಟ್ಟಿಕೊಟ್ಟಿದ್ದಾರೆ. ಇದು ಹೀಗೆಯೇ ಮುಂದುವರಿಯಬೇಕು ಎಂಬುದು ಪುಟ್ಟಣ್ಣನವರಿಗೆ ಆದರ್ಶವಾಗಿದ್ದಲ್ಲಿ ಓದುಗರ ಹೊಟ್ಟೆ ಉರಿಸಿ ಈ ಸ್ಥಿತಿ ಬದಲಾಗಬೇಕೆಂಬ ಭಾವನೆಯನ್ನು ಉತ್ತೇಜಿಸುತ್ತಿರಲಿಲ್ಲ. ಪುಟ್ಟಣ್ಣ ಸಾಂಪ್ರದಾಯಿಕ ನಂಬಿಕೆಗಳು ಉಳಿಯಬೇಕೆಂದಾಗಲಿ, ಅದರ ಬದಲಾವಣೆ ಚಾರಿತ್ರಿಕ ಅನಿವಾರ್ಯವೆಂದಾಗಲಿ ಚಿತ್ರಿಸದೆ, ನಮ್ಮ ಹೆಣ್ಣು ಮಕ್ಕಳ ಸ್ಥಿತಿ ಹೀಗಿರುವುದು ಸರಿಯಲ್ಲವೆಂದು ಬದಲಾವಣೆಗೆ ಒತ್ತಾಯಿಸಿ ಕಟ್ಟಿಕೊಟ್ಟಿದ್ದಾರೆ. ಆದ್ದರಿಂದ ಅವರು ಹಿಂದೂ ಪುರುಷ ಸಮಾಜ ಮಾಡಿದ ಅಪರಾಧದ ಫಲವನ್ನು ತಾನೇ ಅನುಭವಿಸಬೇಕೆಂದು ವ್ಯಂಗ್ಯವಾಗಿ ಸೂಚಿಸಿದ್ದಾರೆ. ಶೀರ್ಷಿಕೆ ಮತ್ತು ಗಾದೆ ಪುರುಷ ವಾಚಕವಾಗಿರುವುದು ಪುರುಷ ಸಮಾಜವನ್ನು ನೇರವಾಗಿ ಉದ್ದೇಶಿಸಿದಂತಿದೆ. ಪಡಿಕ್ಕಲ್ ಅವರು ಯಾವುದು ಆದರ್ಶಮಯ ಸಂಪ್ರದಾಯವೆಂದು ಭಾವುಕರಾಗಿ ಚಿಂತಿಸಿದ್ದಾರೋ ಅದು ಪುಟ್ಟಣ್ಣನವರ ಕಣ್ಣಲ್ಲಿ ನಾಶವಾಗಬೇಕಾದ ವಾಸ್ತವವಾಗಿ ಚಿತ್ರಿತವಾಗಿದೆ. ಇಲ್ಲಿ ಸಂಪ್ರದಾಯವಾದಿಯೊಬ್ಬ ಜಾತಿ ಮರ್ಯಾದೆ ಉಳಿಸಿಕೊಳ್ಳುವ ಜಾತ್ಯಾಭಿಮಾನಿಯಂತೆ, ಪರಂಪರಾವಾದಿಯಂತೆ ಶಿವರಾಮ ಪಡಿಕ್ಕಲ್ ಕಾಣಿಸಿಕೊಂಡಿದ್ದಾರೆ. ಇವರ ಪುರುಷಪರ ನಿಲುವು ಸ್ತ್ರೀಯರನ್ನು ಜೀವದ ಗೊಂಬೆಯಂತೆ

ಹಿಂಸಿಸಿ ನಡೆಸಿಕೊಳ್ಳುವ ಸಾಂಪ್ರದಾಯಿಕ ನೆಲೆಗಳಲ್ಲಿ ತಳ ಊರಿರುವುದು ಗಮನಿಸಬೇಕಾದ ಅಂಶವಾಗಿದೆ. ಆಧುನಿಕ ಚಿಂತಕರೊಳಗೆ ಸಂಪ್ರದಾಯವಾದಿಯಾದ ಸ್ತ್ರೀ ವಿರೋಧಿ ನೆಲೆ ಅಡಕವಾಗಿರುವುದು ಇಂದಿಗೂ ಮಹಿಳೆಯರು ತಮ್ಮ ಹುಟ್ಟನಿಂದ ಪಡೆದುಕೊಂಡು ಬಂದಿರುವ ಹಕ್ಕು, ಅಧಿಕಾರಗಳನ್ನು ಸಂಪೂರ್ಣವಾಗಿ ಪಡೆದುಕೊಳ್ಳಲು ಸಾಧ್ಯವಾಗದೆ ಹೋಗಿರುವುದಕ್ಕೆ ಇರಬಹುದಾದ ಮೂಲ ಕಾರಣವನ್ನು ಸೂಚಿಸಿದಂತೆ ಕಾಣುತ್ತದೆ. ಆದರೂ ಈ ಕೃತಿಯಲ್ಲಿ ಅತ್ತೆ ತಿಮ್ಮಮ್ಮನ ಕೈಯಲ್ಲಿ ಮತ್ತು ಉಪಾಧ್ಯ ನಾರಪ್ಪಯ್ಯನ ಚಿತಾವಣೆಯಲ್ಲಿ ನಲುಗುವ ಸೀತೆಯ ಚಿತ್ರ ಸಾಂಪ್ರದಾಯಿಕ ಮಹಿಳೆಯ ಸ್ಥಿತಿಗತಿ ಸೂಚಿಸುವ ರೂಪಕವಾಗಿದೆ.

ಸಂಪ್ರದಾಯ ಸಮಾಜ ಮತ್ತು ಸ್ತ್ರೀ ಪ್ರತಿಭಟನೆ

ಸದಾಶಿವ ದೀಕ್ಷಿತನ ಎರಡನೆಯ ಹೆಂಡತಿ ತಿಮ್ಮಮ್ಮ ತನ್ನ ಸವತಿಯ ಮಗನ ಹೆಂಡತಿಯಾಗಿ ಮನೆ ತುಂಬಿದ ಸೀತೆಯ ಬಗ್ಗೆ ಮನದಲ್ಲಿ ವಿಷ ತುಂಬಿಕೊಂಡಿದ್ದಾಳೆ. ಮಗ ಮಹದೇವನಿಗೆ ಹೆಣ್ಣು ತರುವ ವಿಚಾರದಲ್ಲಿ ಹೆಂಡತಿ ತಿಮ್ಮಮ್ಮನ ಅಭಿಪ್ರಾಯ ಕೇಳುವ ಸೌಜನ್ಯವನ್ನು ಸದಾಶಿವದೀಕ್ಷಿತ ತೋರುವುದಿಲ್ಲ. ತನ್ನ ಸೋದರ ಮಾವ ಪಶುಪತಿ ಸಾಂಬಶಾಸ್ತ್ರಿಯೊಂದಿಗೆ ಮಾತನಾಡಿ ಆತನ ಮೊಮ್ಮಗಳು ಸೀತೆಯನ್ನು ಸೊಸೆಯಾಗಿ ತರಲು ಗೊತ್ತುಮಾಡುತ್ತಾನೆ. ತಿಮ್ಮಮ್ಮ ತನ್ನ ತವರು ಮನೆ ಕಡೆಯ ಸಂಬಂಧದಲ್ಲಿ, ಸೋದರ ಮಾವನ ಮೊಮ್ಮಗಳನ್ನು ಸೊಸೆಯಾಗಿ ತರಬೇಕೆಂದುಕೊಂಡು ಆಸೆ ಪಟ್ಟಿರುತ್ತಾಳೆ. ಆ ಕನ್ಯೆ ಲಕ್ಷಣವಾಗಿಲ್ಲ ಮತ್ತು ಆ ಸಂಬಂಧದ ಜನ ಜಗಳಗಂಟಿ ಸ್ವಭಾವದವರು ಎಂಬ ಕಾರಣದ ಮೇಲೆ ಸದಾಶಿವ ದೀಕ್ಷಿತ ಈ ವಿಚಾರವನ್ನು ಮನಸ್ಸಿಗೆ ಹಾಕಿಕೊಳ್ಳುವುದಿಲ್ಲ. ಹಾಗಾಗಿ ತಿಮ್ಮಮ್ಮ ತನ್ನ ಗಂಡ ಗೊತ್ತುಪಡಿಸಿದ ಮೈಸೂರು ನೆಂಟಸ್ಥಿಕೆಯ ಸೀತೆಯನ್ನು ವಿರೋಧಿಯಂತೆ ಕಾಣತೊಡಗುತ್ತಾಳೆ. ಸೀತೆ ಮೈನೆರೆದು ಗಂಡನ ಮನೆಗೆ ಬಂದಾಗ ತಿಮ್ಮಮ್ಮನಿಗೆ ಒಂಬತ್ತು ವರ್ಷದ ಮಗಳು ಸಾವಿತ್ರಿಯ ಹೊರತಾಗಿ ಅನ್ಯ ಮಕ್ಕಳಿರಲಿಲ್ಲವೆಂಬುದು ಗಮನಾರ್ಹ.

ಸೀತೆಯಾದರೂ "ಕಾರ್ಯೇಷು ದಾಸೀ ಕರಣೇಷು ಮಂತ್ರಿ ರೂಪೇಚ ಲಕ್ಷ್ಮೀ ಕ್ಷಮಯಾ ಧರಿತ್ರೀ ಭೋಜ್ಯೇಷು ಮಾತಾ, ಶಯನೇಷು ವೇಶ್ಯಾ ಷಡ್ಕಾರ್ಯಯುಕ್ತಾಕುಲ ಧರ್ಮಪತ್ನಿ" (ಪು.೬೮)ಯಂತೆ ಗಂಡನಲ್ಲಿ ವಿಶೇಷ ಪ್ರೀತಿಯನ್ನು ಹೊಂದಿದ್ದಳು ಮತ್ತು ಮಾವನ ಮನಸ್ಸನ್ನು ಗೆದ್ದಿದ್ದಳು. ಸೀತೆಯ ಈ ಸಂಪ್ರದಾಯಬದ್ಧ ವ್ಯಕ್ತಿತ್ವ ಅವಳನ್ನು ಎಲ್ಲರಿಗೂ ವಿಧೇಯಳನ್ನಾಗಿ ಮಾಡಿತ್ತು. ಮಾತ್ರವಲ್ಲ ಆಕೆ ಎಂಥ ಸಂದರ್ಭದಲ್ಲಿಯೂ ಸಂಪ್ರದಾಯ ಮೌಲ್ಯಗಳನ್ನು ವಿರೋಧಿಸಿ ಸೆಟೆದು ನಿಲ್ಲುವುದನ್ನು ಕನಸಿನಲ್ಲೂ ಎಣಿಸುವಂತಿರಲಿಲ್ಲ. ತಿಮ್ಮಮ್ಮನಿಗೆ ಇದರಿಂದ ಅಭದ್ರತೆಯ ಭಾವನೆಯೊಂದು ಅವಳ ಸುಪ್ತಮನದಲ್ಲಿ ತುಂಬಿಕೊಳ್ಳುತ್ತದೆ. ತನ್ನ ಸೋದರಮಾವನ ಸಂಬಂಧದ ಹುಡುಗಿಯಾಗಿದ್ದರೆ ಆಕೆಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡು ತನ್ನ ಜೀವನದ ಭದ್ರತೆಗೆ

ಯಾವ ಸವಾಲುಗಳೂ ಎದುರಾಗದಂತೆ ಮಾಡಿಕೊಂಡು ಭರವಸೆಯಲ್ಲಿ ಸಮಾಧಾನ ಹೊಂದುತ್ತಿದ್ದಳು. ಸೀತೆಯಿಂದಾಗಿ ತಿಮ್ಮಮ್ಮನಿಗೆ ತನ್ನ ಗಂಡ ಮತ್ತು ಸವತಿ ಮಗನ ಮೇಲಿನ ಹಿಡಿತ ಸಡಿಲಗೊಂಡಂತೆ ಭಾಸವಾಗಿತ್ತು.

ಆದರೆ ಈಗ ಮನೆ ತುಂಬಿದ ಸೊಸೆ ಸೀತೆಯನ್ನು ತನ್ನಂತೆ ಮಾಡಿಕೊಳ್ಳಲು ಆಕೆ ಹೇಗೆ ಪ್ರತಿಕ್ರಿಯಿಸುವಳೋ ಎಂದು ತಿಮ್ಮಮ್ಮಳಿಗೆ ಸಂದೇಹವಿತ್ತು. ಸೊಸೆಯನ್ನು ರಮಿಸಲು ತಾನು ಅತ್ತೆಯೆಂಬ ಹಿರಿತನದ ಘನತೆ ಮತ್ತು ಪ್ರತಿಷ್ಠೆಯೂ ಅಡ್ಡಿಯಾಗುತ್ತಿತ್ತು. ಸೀತೆಯನ್ನು ರಮಿಸದಿದ್ದಲ್ಲಿ ಆಕೆ ಎಲ್ಲಿ ತನ್ನ ಗಂಡ ಮತ್ತು ಮಾವನನ್ನು ತನ್ನ ವಿರುದ್ಧ ಯಾವ ಗಳಿಗೆಯಲ್ಲಾದರೂ ಎತ್ತಿ ಕಟ್ಟಬಲ್ಲಳೆಂಬ ಆತಂಕ ಸದಾ ಕಾಡುತ್ತಿತ್ತು. ಸೀತೆಯ ಗಂಡ ಮಹದೇವ ಮೊದಲೇ ಸವತಿಯ ಮಗನಾಗಿದ್ದು, ಅವನ ಪ್ರೀತಿ ಹೆತ್ತ ಮಗ ತೋರುವಷ್ಟು ನಂಬಲರ್ಹವಲ್ಲವೆಂದು ಅನುಮಾನಿಸುತ್ತಿತ್ತು. ಆಕೆ ಮೊದಲೇ ತವರು ಮನೆಯಿಲ್ಲದೆ ಅನಾಥೆಯಾಗಿದ್ದಳು. ಆಕೆಯ ತಂದೆ ತವರು ಮನೆಯ ಎಲ್ಲ ಆಸ್ತಿಯನ್ನು ಅವಳ ಗಂಡನಿಗೆ ಒಪ್ಪಿಸಿಬಿಟ್ಟಿದ್ದರಿಂದ ಅವಳಿಗೆ ಅದರ ಮೇಲೆ ಯಾವ ಹಿಡಿತವಾಗಲಿ, ಅಧಿಕಾರವಾಗಲಿ ಇರಲಿಲ್ಲ. ಹೆಣ್ಣಾದವಳು ಚಿಕ್ಕವಳಿದ್ದಾಗ ತಂದೆಯ ವಶದಲ್ಲೂ, ಯೌವ್ವನದಲ್ಲಿ ಗಂಡನ ವಶದಲ್ಲೂ, ಮುಪ್ಪಿನಲ್ಲಿ ಮಗನ ವಶದಲ್ಲೂ ಆಶ್ರಯದಲ್ಲಿರಬೇಕೆಂಬುದು ಕಾಲದಿಂದಲೂ ನಡೆದುಕೊಂಡು ಬಂದ ಪದ್ಧತಿಯಾಗಿತ್ತು. ಮಗ ಮಹದೇವ ಸ್ವಂತ ಮಗನೂ ಅಲ್ಲ, ಅವನ ಹೆಂಡತಿಯಾಗಿ ಬಂದವಳು ತನ್ನ ಸಂಬಂಧಿಯೂ ಅಲ್ಲ. ಈ ಸ್ಥಿತಿಯಲ್ಲಿ ತಿಮ್ಮಮ್ಮ ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಅನಾಥ ಮತ್ತು ಅಭದ್ರ ಸ್ಥಿತಿಯನ್ನು ತಲುಪಿದ್ದಳು. ತನ್ನ ಈ ಮನಸ್ಥಿತಿಯಲ್ಲಿ ತಿಮ್ಮಮ್ಮ ಸೊಸೆಯನ್ನು ವಿಷದಂತೆ ಕಾಣತೊಡಗಿದಳು. ಈ ಮೂಲಕ ಅವಳ ಮೇಲೆ ಹಗೆ ಸಾಧಿಸುವ, ಅವಳನ್ನು ದ್ವೇಷಾಸೂಯೆಗಳಿಂದ ಕಾಡಿಸುವ, ಅವಳ ಪ್ರತಿಯೊಂದು ಹೆಜ್ಜೆಯಲ್ಲೂ ತಪ್ಪುಗಳನ್ನು ಹುಡುಕಿ ಹೀನಾಯವಾಗಿ ಬಯ್ಯತೊಡಗಿ ತನ್ನ ಅಭದ್ರತೆಗೆ ಒಂದು ಹೊರದಾರಿಯನ್ನು ಕಂಡುಕೊಂಡಿದ್ದಳು. ಈ ಮೂಲಕ ಸೀತೆಯನ್ನು ಮತ್ತು ಅವಳ ಗಂಡನನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಭರವಸೆ ಇಟ್ಟುಕೊಂಡಳು. ಇದರಿಂದ ಕುಟುಂಬದಲ್ಲಿ ತಾನು ಆಶ್ರಯ ಕಳೆದುಕೊಳ್ಳಲಾರೆನೆಂಬ ಭದ್ರತೆಯ ಮನಸ್ಥಿತಿ ಅನುಭವಿಸತೊಡಗಿದ್ದಳು.

ಪುರುಷಾಧಿಕಾರ ಹುಟ್ಟು ಹಾಕಿದ ತಿಮ್ಮಮ್ಮನ ಈ ಅಭದ್ರ ಮನಸ್ಥಿತಿಯಿಂದ ಉಂಟಾದ ಇಕ್ಕಟ್ಟಿನ ಸಂದರ್ಭದಲ್ಲಿ, ಸಂಪ್ರದಾಯ ಕುಟುಂಬದ ಹುಡುಗಿಯಾದ ಸೀತೆ ಎದುರಾಡದೆ ಅನುಭವಿಸಿದ ಹಿಂಸೆ ವ್ಯಕ್ತಾತೀತವಾದದ್ದಾಗಿದೆ. ಆದರೆ ತಿಮ್ಮಮ್ಮನ ಈ ಮನಸ್ಥಿತಿ ಸಮಾಜದ ಪುರುಷಪರ ನೀತಿ ಧೋರಣೆಗಳು ಹೆಂಡತಿಯನ್ನು ಅವಗಣನೆಯಿಂದ ಕಂಡ ಪರಿಣಾಮವಾಗಿದೆ. ಕುಟುಂಬದ ಹಿರಿಯ ಸದಸ್ಯೆಯಾದ ಹೆಣ್ಣೊಬ್ಬಳು ತನ್ನನ್ನು ರಕ್ಷಿಸಿಕೊಳ್ಳಲು ಕಿರಿಯ ಸದಸ್ಯೆಯ ಮೇಲೆ ಹರಿಹಾಯುವುದು

ಮತ್ತು ಆ ಮೂಲಕ ಅವಳನ್ನು ಮೆಚ್ಚುವ, ಪ್ರೀತಿಸುವ ಗಂಡಸರನ್ನು ತನ್ನ ಹಿಡಿತದ ವ್ಯಾಪ್ತಿಗೆ ತಂದುಕೊಳ್ಳುವುದು– ತಿಮ್ಮಮ್ಮ ತನ್ನ ಸ್ವಹಿತಾಸಕ್ತಿ ಮೆರೆಯುವ ಕ್ರಮವಾಗಿದೆ. ಸಾಂಪ್ರದಾಯಿಕ ಸಮಾಜದಲ್ಲಿ ಅಧೀನ ಸ್ಥಾನದಲ್ಲಿರುವ ಹೆಣ್ಣು ತನ್ನ ಮನಸ್ಥಿತಿಯನ್ನು ಸಮತೂಕದಲ್ಲಿಟ್ಟುಕೊಳ್ಳಲು ನಡೆಸಿದ ಸಂಘರ್ಷಮಯ ಹೋರಾಟದ ಭಾಗವಾಗಿಯೂ ತಿಮ್ಮಮ್ಮಳ ಪಾತ್ರ ಚಿತ್ರಿತವಾದಂತೆ ಕಾಣುತ್ತದೆ.

ತಿಮ್ಮಮ್ಮ ಸಂಘರ್ಷ ನಡೆಸಿದ್ದು ಪುರುಷ ಸಮಾಜದ ರೀತಿ–ನೀತಿಗಳ ವಿರುದ್ಧವಾದರೂ ಅದರ ಹಿಂಸೆಯನ್ನು ಸಂಪ್ರದಾಯ ವಿರೋಧಿಯಲ್ಲದ ಮತ್ತೊಂದು ಹೆಣ್ಣು ಸೀತೆ ತನ್ನ ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ಅನುಭವಿಸಬೇಕಾಗಿ ಬಂದುದು ಹೇಗೆ ಸ್ತ್ರೀಯರ ಪುರುಷ ವಿರೋಧಿ ಹೋರಾಟ ಕೂಡ ಮತ್ತೊಂದು ಹೆಣ್ಣನ್ನು ಬಲಿ ತೆಗೆದುಕೊಳ್ಳುತ್ತದೆ ಎಂಬುದಕ್ಕೆ ಉತ್ತಮ ನಿದರ್ಶನವಾಗಿದೆ. ಹಾಗಾಗಿ ಸೀತೆ ಅನುಭವಿಸುವ ಹಿಂಸೆಯಾಗಲೀ ತಿಮ್ಮಮ್ಮ ಸಂಘರ್ಷಕ್ಕೆ ಇಳಿಯಬೇಕಾದಲ್ಲಿ ಅನುಭವಿಸಿದ ಮಾನಸಿಕ ಹಿಂಸೆಯಾಗಲೀ ಈ ಎಲ್ಲದಕ್ಕೂ ಮೂಲ ಪುರುಷ ಸಮಾಜವೇ ಆಗಿದೆ. ಹೆಣ್ಣಿನ ಹೋರಾಟವಾಗಲೀ ಅವಳ ಸಂಘರ್ಷದ ಬಿಸಿಯಾಗಲೀ ಪುರುಷರಿಗೆ ತಾಕದೇ ಇರುವುದು ಸ್ತ್ರೀಯರ ಅಧೀನ ಸ್ಥಿತಿಯ ದಾರುಣತೆಯೆಂದೆ ಹೇಳಬೇಕು.

ಪುರುಷ ಸಮಾಜ ಮತ್ತು ಹಿಂಸೆಯ ಸ್ವರೂಪ

ಉಪಾಧ್ಯ ನಾರಪ್ಪಯ್ಯ ಆ ಹಳ್ಳಿಯ ಮಠದ ಪಂತ(ಶಿಕ್ಷಕ). ಆತ ಹುಡುಗರಿಗೆ ಪಾಠ ಕಲಿತರೂ ಹೊಡೆಯುವ, ಪಾಠ ಕಲಿಯದಿದ್ದರೂ ಹೊಡೆಯುವ, ತುಂಟತನ ಮಾಡಿದರೂ ಹೊಡೆಯುವ, ಮಾಡದಿದ್ದರೂ ಹೊಡೆಯುವ ವಿಚಿತ್ರ ಮನೋಪ್ರವೃತ್ತಿಯವನು. ಮಕ್ಕಳಿಗೆ ಶಿಕ್ಷೆ ನೀಡುವುದೇ ಶಿಕ್ಷಣವೆಂದು ತಿಳಿದು ಅದರಂತೆ ನಡೆದವನು ನಾರಪ್ಪಯ್ಯ. ಹುಡುಗರು ನಾರಾಪ್ಪಯ್ಯನಿಂದ ಹೊಡೆತ ತಿಂದು ಜಡ್ಡುಗಟ್ಟಿ ಹೋಗಿದ್ದರು. ಗುರು ಕುರಿತು ಗೌರವ ಭಾವ ಕಳೆದುಕೊಳ್ಳುವಷ್ಟು ಆತ ದುರಾಚಾರಿ ಮತ್ತು ಅವಿವೇಕಿಯಾಗಿದ್ದ ಚಿತ್ರಣವಿದೆ. ಇಂಥ ಗುರುವಿಗೆ ತಿರುಮಂತ್ರ ಹಾಕಿದ ಹುಡುಗರು ಅವನನ್ನು ಮುಳ್ಳಿನ ಕೂಪಕ್ಕೆ ದೂಡಿಬಿಡುತ್ತಾರೆ. ಈ ವಿಪರೀತ ಸಂದರ್ಭದಲ್ಲಿ ಸದಾಶಿವ ದೀಕ್ಷಿತನ ಮಗ ಮಹಾದೇವ ಅವನನ್ನು ರಕ್ಷಿಸುವಲ್ಲಿ ತನ್ನ ತಂದೆಗೆ ಮೊರೆಹೋಗುತ್ತಾನೆ. ನಾರಪ್ಪಯ್ಯನಿಂದ ವಿನಾಕಾರಣ ಬಾಸುಂಡೆ ಏಳುವಂತೆ ಹೊಡೆತ ತಿಂದಿದ್ದ ಮಹಾದೇವ ಅದನ್ನು ಮರೆತು ಉಪಾಧ್ಯನ ದಯನೀಯ ಸ್ಥಿತಿಯಲ್ಲಿ ನೆರವಿಗೆ ಬರುತ್ತಾನೆ. ಹಾಗಾಗಿ ನಾರಪ್ಪಯ್ಯ ಸದಾಶಿವ ದೀಕ್ಷಿತನ ಮನೆಯಲ್ಲಿಯೆ ಆರೈಕೆ ಮತ್ತು ಆಶ್ರಯ ಪಡೆದು ಗುಣ ಹೊಂದುತ್ತಾನೆ.

ಕಳ್ಳತನದ ಹಾದಿಯಲ್ಲಿ ಹಳ್ಳಿಯ ಅಮ್ಮನ ಗುಡಿಯ ಪೂಜಾರಿಯಾಗಿದ್ದ ಪೂಜಾರಿ ಸಿದ್ದಪ್ಪ ಜನರಿಗೆ ಸಣ್ಣ ಪುಟ್ಟ ಉಪಕಾರ ಮಾಡುತ್ತ ಜನರ ಕಣ್ಣಲ್ಲಿ ಸಾತ್ವಿಕ ಹಾದಿಯಲ್ಲಿರುವ ಸಾಧಕನಂತೆ

ತೋರಿಸಿಕೊಂಡಿದ್ದನು, ಅಲ್ಲದೆ ಕಳ್ಳರ ಗುಂಪಿನ ಕಾರ್ಯಗಳಲ್ಲಿ ಪಾಲುಗಾರನೂ ಆಗಿದ್ದನು. ನಾರಪ್ಪಯ್ಯ ಇಂಥ ಪೂಜಾರಿ ಸಿದ್ಧನ ದುಷ್ಟ ಕೂಟದ ಸದಸ್ಯನಾಗುತ್ತಾನೆ. ಅವನ ಬಲಗೈ ಬಂಟನಾಗಿ ಅವನಿಗೆ ಅಡ್ಡ ಹಾದಿಯ ಎಲ್ಲ ಕುಯುಕ್ತಿಗಳನ್ನು ಉಪದೇಶಿಸುತ್ತಾನೆ.

ಒಮ್ಮೆ ಸದಾಶಿವ ದೀಕ್ಷಿತ ನಾರಪ್ಪಯ್ಯನಿಗೆ ಕ್ಷುಲ್ಲಕ ಕಾರಣಕ್ಕಾಗಿ ಬೈದ ವಿಷಯವನ್ನು ಮುಂದಿಟ್ಟುಕೊಂಡು ಹಗೆ ಸಾಧಿಸತೊಡಗುತ್ತಾನೆ. ಜನರನ್ನು ಮೋಸಗೊಳಿಸುವುದು, ಅವರ ಸಂಪತ್ತನ್ನು ಲೂಟಿ ಮಾಡುವುದು ಮುಂತಾದ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ನಿರತನಾಗಿದ್ದ ಮತ್ತು ಯಾವುದೇ ನೈತಿಕ ತಳಹದಿ ಇರದಿದ್ದ ಸಿದ್ದಪ್ಪನಂತಹ ವ್ಯಕ್ತಿಯನ್ನು ಸದಾಶಿವ ದೀಕ್ಷಿತನ ಕುಟುಂಬದ ಮೇಲೆ ದ್ವೇಷ ಸಾಧಿಸಲು ಅಸ್ತ್ರವನ್ನಾಗಿಸಿಕೊಳ್ಳುತ್ತಾನೆ. ಚಂಚಲ ಸ್ವಭಾವದ ಸಿದ್ದಪ್ಪನ ಗಮನ ಸೀತೆಯ ಮೇಲೆ ಹರಿಯುವಂತೆ ಮಾಡಿ ಅವನನ್ನು ಉತ್ತೇಜಿಸುತ್ತಾನೆ. ಸಂಪ್ರದಾಯಬದ್ಧಳಾದ ಸೀತೆ ಸಿದ್ದಪ್ಪನ ಯಾವ ಆಟೋಪಗಳಿಗೂ ಮಣಿಯದೆ ತನ್ನ ರಕ್ಷಣೆಯಲ್ಲಿ ಉಳಿಯುತ್ತಾಳೆ. ಆದರೂ ಮಾಟ ಮಂತ್ರ ವಿದ್ಯೆ ಮೂಲಕ ಅವಳನ್ನು ಕಟ್ಟಿಹಾಕಿ ನಿಸ್ತೇಜಗೊಳಿಸುವುದಲ್ಲದೆ, ತಮ್ಮ ಉದ್ದೇಶ ಈಡೇರಿಸಿಕೊಳ್ಳಲು ಎಲ್ಲ ಬಗೆಯ ಹೀನದಾರಿಗಳನ್ನು ತುಳಿಯಲು ನಾರಪ್ಪಯ್ಯ ಅವನಿಗೆ ಬೆನ್ನೆಲುಬಾಗುತ್ತಾನೆ. ಮನೆಯೊಳಗಿನ ಬೆಳವಣಿಗೆಗಳನ್ನು ಸಿದ್ದನಿಗೆ ಮುಟ್ಟಿಸುತ್ತ ಅವನು ಕೈಗೊಳ್ಳಬೇಕಾದ ಕಾರ್ಯವನ್ನೂ ಯೋಜಿಸಿ ಪ್ರೇರೇಪಿಸುತ್ತಾನೆ. ಹೀಗಾಗಿ ಸೀತೆ ಮಾಟ ಮಂತ್ರ ವಿದ್ಯೆಯ ವಶಕ್ಕೆ ಬಲಿಯಾಗಿ ಜೀವಂತ ಶವಳಾಗಿ ಉಳಿಯುವ ಸ್ಥಿತಿ ತಲುಪುತ್ತಾಳೆ. ಕೊನೆಗೆ ಜೀವದಿಂದಿರುವಾಗಲೆ ಸತ್ತಿರುವಳೆಂದು ಭಾವಿಸಿ ಆಕೆಯನ್ನು ಜೀವಂತ ಸುಡಲು ಸಕಲ ಸಿದ್ಧತೆಗಳಾಗುತ್ತವೆ. ಆ ಹೊತ್ತಿನಲ್ಲಿ ಬಂದ ಮಳೆಯಿಂದ ಶವಸಂಸ್ಕಾರಕ್ಕೆ ತಡೆಯುಂಟಾಗುತ್ತದೆ. ಆ ಹಾದಿಯಲ್ಲಿ ಬಂದ ಮಂತ್ರವಾದಿಗಳ ಜೀವ ಪ್ರೀತಿಯಿಂದ ಸೀತೆ ಮತ್ತೆ ಜೀವ ತಳೆದು ಬರುತ್ತಾಳೆ. ಕಾದಂಬರಿಯ ನಂತರದ ವಿವರಗಳಲ್ಲಿ ಸಿದ್ದಪ್ಪನ ಕಾರ್ಯಬಾಹುಳ್ಯ ಮತ್ತು ನಾರಪ್ಪಯ್ಯನ ಚಿತಾವಣೆಗಳು ಬಯಲಾಗುತ್ತವೆ.

ನಾರಪ್ಪಯ್ಯ ಸಾಂಪ್ರದಾಯಿಕ ಸಮಾಜದ ಮಠದ ಓಜನಾಗಿದ್ದು, ಆತ ತನ್ನ ಸಂಕಷ್ಟಗಳನ್ನು ತಾನೇ ತಂದುಕೊಳ್ಳುವಂಥಹ ಅವಿವೇಕಿಯೂ ದುರಹಂಕಾರಿಯೂ ಆಗಿದ್ದಾನೆ. ಇದರಿಂದಾಗಿ ಅವನು ಕಲಿಸುತ್ತಿದ್ದ ಮಠಕ್ಕೆ ಹುಡುಗರು ಯಾರೂ ಬಾರದಂತಾಗಿ ಮಠ ಮುಚ್ಚಬೇಕಾದ ಸ್ಥಿತಿ ತಲುಪುತ್ತದೆ. ಹುಡುಗರ ಪ್ರತಿಯೊಂದು ಹೆಜ್ಜೆಯಲ್ಲೂ ಬೆತ್ತದಿಂದ ದಂಡಿಸುತ್ತಿದ್ದ ಆತ ಮನುಷ್ಯ ಭಾವನೆಗಳನ್ನು ಕಳೆದುಕೊಂಡ ಕ್ರೂರ ಸ್ವಭಾವದವನಾಗಿದ್ದಾನೆ. ಸದಾಶಿವ ದೀಕ್ಷಿತನ ಮಾತನ್ನು ಆತನ ಮನೆಯ ಅನ್ನದ ಋಣಕ್ಕಾಗಿಯಾದರೂ ಮರೆಯದೆ ಪುರುಷ ಅಹಂಕಾರ ಮೆರೆದು ದ್ವೇಷ ಸಾಧಿಸುತ್ತಾನೆ. ಅದರ ಪರಿಣಾಮ ಸಾಂಪ್ರದಾಯ ನಿಷ್ಠತೆ ಮೆರೆಯಲು ಸತೀ ಹೋದ ಅರುಂದಮ್ಮಳ ಸಮಾಧಿಗೆ ಪೂಜೆ ಸಲ್ಲಿಸುತ್ತಿದ್ದ ಸೀತೆಯ ಮೇಲೆ ಎರಗುತ್ತದೆ.

ಹೆಣ್ಣನ್ನು ಕಾಮದ ಬೊಂಬೆಯಾಗಿ ಕಾಣುವ ಪುರುಷ ಸಮಾಜ ಸೀತೆಯನ್ನು ತನ್ನ ಕಾಮಸಾಧನೆಗಾಗಿ ಬಳಸಿಕೊಳ್ಳಲು ಯತ್ನಿಸುತ್ತದೆ. ಪುರುಷರ ಈ ತಂತ್ರಗಳಿಗೆ ಮಣಿಯದ ಸೀತೆಯನ್ನು ಮಂತ್ರ ಮಾಟದ ಮೂಲಕ ಕ್ರೂರವಾಗಿ ಹಿಂಸಿಸುತ್ತದೆ. ಪುರುಷ ಸಮಾಜದಲ್ಲಿ ಪುರುಷರ ನಡುವಿನ ದ್ವೇಷ ಸಾಧನೆಗೆ ಬಲಿಯಾಗುವವಳು ಕೂಡ ಸೀತೆಯೇ ಆಗಿದ್ದಾಳೆ. ನಾರಪ್ಪಯ್ಯ ಪುರುಷ ಅಹಂಕಾರದ ಪ್ರತೀಕವಾಗಿ ಪುರುಷಪರ ಜೀವನ ಮೌಲ್ಯಗಳ ಪ್ರತಿನಿಧಿ ಎನಿಸುತ್ತಾನೆ. ಆತನಿಗೆ ತನಗೆದುರಾಗುವ ಎಲ್ಲವನ್ನು ಮಣಿಸುವ ಮತ್ತು ಅದನ್ನು ತನ್ನ ಅಧೀನಕ್ಕೆ ಒಳಪಡಿಸುವ ಉತ್ಕಟ ಹಟವಿದೆ. ಹಾಗಾಗಿ ಆತ ತನ್ನ ಗುಂಪಿನ ಪೂಜಾರಿ ಸಿದ್ದನನ್ನು ಎತ್ತಿ ಕಟ್ಟಿ ಸೀತೆಯ ಜೀವದೊಂದಿಗೆ ಆಟವಾಡುತ್ತಾನೆ. ನಾರಪ್ಪಯ್ಯ ಪುರುಷ ಸಮಾಜದ ಸಮರ್ಥ ಪ್ರತಿನಿಧಿಯಾಗಿ ಚಿತ್ರಿತನಾಗಿಲ್ಲದಿದ್ದರೂ ಆತ ಪುರುಷಪರ ಜೀವನ ಮೌಲ್ಯಗಳೊಂದಿಗೆ ಅನುಸಂಧಾನ ನಡೆಸುತ್ತಾನೆ. ಈ ಅನುಸಂಧಾನ ಕಾರ್ಯ ಸಂಪ್ರದಾಯಬದ್ಧ ಸ್ತ್ರೀಯರ ವಿರುದ್ಧವೇ ಅವರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಮಣಿಸಲು ನಡೆಯುತ್ತದೆ.

ಸಾಂಪ್ರದಾಯಿಕ ಪುರುಷ ಸಮಾಜದಲ್ಲಿ ಹೆಣ್ಣೊಂದು ಪ್ರತಿಭಟಿಸಿ ಸಿಡಿದೆದ್ದು ನಿಂತರೆ ಅದರಿಂದ ನೋವಿಗೆ ಅಪಮಾನಕ್ಕೆ ಒಳಗಾಗುವವಳು ಮತ್ತೊಬ್ಬ ಮಹಿಳೆಯೇ ಆಗಿದ್ದಾಳೆ. ಅದೇ ರೀತಿ ಪುರುಷರು ತಮ್ಮ ಹಿತಾಸಕ್ತಿಯನ್ನು ಆವಾಹಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಪಟ್ಟಲ್ಲಿ ಅದರಿಂದಲೂ ಮಹಿಳೆಯರೇ ನೊಂದು ಬೆಂದು ಹೋಗುತ್ತಾರೆ. ಈ ಎರಡೂ ಬಗೆಯಲ್ಲಿ ಸ್ತ್ರೀಯರೇ ಶೋಷಣೆಗೆ ಒಳಗಾದ ಉತ್ತಮ ನಿದರ್ಶನವಾಗಿ ಈ ಕಾದಂಬರಿಯಲ್ಲಿ ಸೀತೆ ಓದುಗರ ಮುಂದೆ ನಿಲ್ಲುತ್ತಾಳೆ.

೧೦. ಲಕ್ಷ್ಮೀಪ್ರಸಾದಂ

ಕೇತವರಪು ವೆಂಕಟಶಾಸ್ತ್ರಿ ಅವರ ಲಕ್ಷ್ಮೀಪ್ರಸಾದಂ ಕೃತಿಗೂ ತೆಲುಗಿನ ಮೊದಲ ಕಾದಂಬರಿ ರಾಜಶೇಖರ ಚರಿತ್ರೆ ಕೃತಿಗೂ ೪೫ ವರ್ಷಗಳ ಅಂತರವಿದೆ. ರಾಜಶೇಖರ ಚರಿತ್ರೆ ಸ್ತ್ರೀ ಶಿಕ್ಷಣದ ಅಗತ್ಯವನ್ನು ತನ್ನ ವಸ್ತುವನ್ನಾಗಿ ಇರಿಸಿಕೊಂಡಿದ್ದರೆ, ಲಕ್ಷ್ಮೀಪ್ರಸಾದಂ ವರದಕ್ಷಿಣೆ ಸಮಸ್ಯೆಯನ್ನು ಕೈಗೆತ್ತಿಕೊಂಡಿದೆ. ೪೫ ವರ್ಷಗಳ ಅಂತರದಲ್ಲಿ ಆಧುನಿಕತೆ ಹಿಂದೂ ಸಮಾಜದಲ್ಲಿ ದಟ್ಟವಾಗತೊಡಗಿದ್ದನ್ನು ಲಕ್ಷ್ಮೀಪ್ರಸಾದಂ ಕಾದಂಬರಿಯಲ್ಲಿ ಕಾಣಬಹುದು. ಆದರೂ ಈ ಎರಡೂ ಕಾದಂಬರಿಗಳ ಧೋರಣೆಗಳಲ್ಲಿ ಕಾಣುವ ವ್ಯತ್ಯಾಸವನ್ನು ಸೀಮಿತಗೊಳಿಸಲು ಬರುವುದಿಲ್ಲ. ಜೀವನದಲ್ಲಿ ಹಣ ವಹಿಸುವ ಪ್ರಾಮುಖ್ಯತೆ, ಅದಕ್ಕಾಗಿ ಭ್ರಷ್ಟ ಮತ್ತು ಅನೈತಿಕ ಮಾರ್ಗಗಳ ಅನುಸರಣೆ, ಹಣದ ದುರಾಸೆ ಮತ್ತು ಆಧುನಿಕ ಶಿಕ್ಷಣದೊಂದಗಿನ ಸಂಬಂಧ ಇಂತಹ ಹಲವಾರು ಆಯಾಮಗಳನ್ನು ಈ ಕೃತಿ ಒಳಗೊಂಡಂತಿದೆ. ಕೃತಿಯ ಶೀರ್ಷಿಕೆಯೆ ಧನದ ಆರಾಧನೆಯ ಫಲವನ್ನು ಸೂಚಿಸುತ್ತದೆ.

ಪಾಶ್ಚಾತ್ಯ ಸಂಸ್ಕೃತಿ ಭೌತಿಕ ಜೀವನಕ್ಕೆ ಆದ್ಯತೆ ಕೊಟ್ಟು ಭಾರತೀಯ ಜೀವನದ ಮೇಲೆ ಪ್ರಭಾವಿಸಿದ ಮೊದಲ ಹಂತದ ಚಿತ್ರವೆಂದು ಈ ಕೃತಿಯನ್ನು ಕಾಣಬಹುದು. ಆದರೆ ಭಾರತೀಯ ಸಾಂಪ್ರದಾಯಿಕ ಮನೋವೃತ್ತಿ ಆಧುನಿಕತೆಯನ್ನು ಸ್ವೀಕರಿಸಿದ್ದು ಅಥವಾ ಪ್ರಭಾವಕ್ಕೆ ಒಳಗಾಗಿದ್ದು ಈ ಕ್ಷೇತ್ರಕ್ಕೆ ಸೀಮಿತವಲ್ಲದಿದ್ದರೂ ಅದನ್ನಿಲ್ಲಿ ಕೇಂದ್ರೀಕರಿಸಿರುವುದನ್ನು ಕಾಣಬಹುದು, ಬ್ರಾಹ್ಮಣರ ಆರ್ಥಿಕ ದುಸ್ಥಿತಿ, ವರದಕ್ಷಿಣೆ ಕೊಡಲಾಗದೆ ಮುರಿದುಹೋದ ಮದುವೆ ಸಂಬಂಧಗಳು, ಉನ್ನತ ಶಿಕ್ಷಣ ಪಡೆಯಲು ಪರದೇಶಗಳಿಗೆ ಹೋದವರು ಅಲ್ಲಿಯ ಸಮಾಜದ ರೀತಿನೀತಿಗಳನ್ನು ಅನುಸರಿಸುವುದು, ಅವರ ಕುಟುಂಬದ ಕಷ್ಟನಷ್ಟಗಳು, ಸ್ತ್ರೀ ಶಿಕ್ಷಣದ ಮಹತ್ವ ಮೊದಲಾದ ಅಂಶಗಳೆಲ್ಲ ಚಿತ್ರಿತವಾಗಿರುವುದು ಲೇಖಕರ ಪ್ರಮುಖ ದೃಷ್ಟಿಕೋನವನ್ನು ಬಿಂಬಿಸುತ್ತದೆ. ವರದಕ್ಷಿಣೆ ಹಿಂದೂ ಸಮಾಜದಲ್ಲಿ ಗಂಡು ಹೆತ್ತವರ- ವಿಶೇಷವಾಗಿ ತಾಯಿಯ ದುರಾಸೆಯ ಫಲವೆಂದು ಸೂಚಿಸ ಬಯಸುವ ಈ ಕೃತಿ ಸ್ತ್ರೀ ಸಮಸ್ಯೆಯನ್ನು ಯಾವ ರೀತಿ ನಿರ್ವಹಿಸಿದೆ ಎಂಬುದರ ಚಿತ್ರ ನೀಡುತ್ತದೆ.

ವರದಕ್ಷಿಣೆ ಮತ್ತು ಆಧುನಿಕತೆ

ತೆಲುಗಿನ ಆರಂಭಿಕ ಕಾದಂಬರಿಗಳ ಯಾವ ಲೇಖಕರಿಗೂ ಬಾಲ್ಯವಿವಾಹ ಸ್ತ್ರೀಯರು ಎದುರಿಸಿದ ಸಮಸ್ಯೆಯಾಗಿ ಕಂಡುಬಂದಿಲ್ಲ. ಸಂಸ್ಕೃತ ಪಂಡಿತರಾಗಿದ್ದ ಈ ಕೃತಿಯ ಲೇಖಕರೂ ಸಾಮಾಜಿಕ ಸಮಸ್ಯೆಯ ಈ ದೃಷ್ಟಿಕೋನದಿಂದ ಹೊರತಾಗಿರುವಂತೆ ಕಾಣುವುದಿಲ್ಲ. ಹಾಗಾಗಿ ರಾಜೇಶ್ವರಮ್ಮ ತನ್ನ ಮಗ ಪ್ರಸಾದನಿಗೂ ಅಣ್ಣನ ಮಗಳು ಲಕ್ಷ್ಮಿಗೂ ಬಾಲ್ಯದಲ್ಲಿಯೇ ಮದುವೆ ಮಾಡಿಬಿಡುತ್ತಾಳೆ.

ಇಂದು ಶಿಕ್ಷಣ ವ್ಯವಹಾರ-ಉದ್ಯಮವಾಗಿ ಬೆಳೆದಿದೆ. ಅದರ ಮೂಲವನ್ನು ಕಾಣಿಸುವಂತೆ ೨೦ನೆ ಶತಮಾನದ ಆರಂಭದ ಘಟ್ಟದಲ್ಲಿ ಇಂಗ್ಲಿಷ್ ಶಿಕ್ಷಣ ಕೊಡಿಸಲು ಹಣ ವೆಚ್ಚ ಮಾಡುವುದು, ಜೀವನದಲ್ಲಿ ನಡೆಸುವ ವ್ಯವಹಾರಗಳಿಗೆ ಬಂಡವಾಳ ಹೂಡಿದಂತೆ ಎಂಬ ಕಲ್ಪನೆಯೊಂದನ್ನು ರಾಜೇಶ್ವರಮ್ಮಳ ಪಾತ್ರದ ಮೂಲಕ ಚಿತ್ರಿಸಿದೆ. ಹಾಗಾಗಿ ತನ್ನ ಆರ್ಥಿಕ ಶಕ್ತಿ ಮೀರಿ ಮಗನ ವಿದೇಶದ ವಿದ್ಯಾಭ್ಯಾಸಕ್ಕಾಗಿ ಆಕೆ ಹಣ ಹೂಡುತ್ತಾಳೆ. ಅದನ್ನು ಬಡ್ಡಿ ಸಮೇತ ಅಥವಾ ಆಧಿಕ ಲಾಭದೊಂದಿಗೆ ಸೊಸೆ ತನ್ನ ಮನೆ ತುಂಬುವ ಸಂದರ್ಭದಲ್ಲಿ ವರದಕ್ಷಿಣೆ ರೂಪದಲ್ಲಿ ಹೊತ್ತು ತರಬೇಕು ಎಂದು ಅಪೇಕ್ಷೆ ಪಡುತ್ತಾಳೆ, ಬೇಡಿಕೆ ಇಡುತ್ತಾಳೆ, ಹಟ ತೊಡುತ್ತಾಳೆ, ಅದಕ್ಕಾಗಿ ದ್ವೇಷ ಸಾಧಿಸುತ್ತಾಳೆ. ಹೆತ್ತವರು ತಮ್ಮ ಮಕ್ಕಳ ಶಿಕ್ಷಣವನ್ನು ಅವರ ಮದುವೆಯ ಸಂದರ್ಭದಲ್ಲಿ ವರದಕ್ಷಿಣೆ ಕುದುರಿಸಲು, ವ್ಯವಹಾರ ಪುರುಷರಿಗೆ ಲಾಭದಾಯಕವಾಗಿಸಲು ಸಾಂಪ್ರದಾಯಿಕ ಪುರುಷ ಸಮಾಜ ಆಧುನಿಕ ಶಿಕ್ಷಣವನ್ನು ಸ್ವೀಕರಿಸಿದೆಯೆಂದು ಕಾಣಿಸಿದೆ. ಸ್ತ್ರೀಯರು ವರದಕ್ಷಿಣೆ

ಸಂಬಂಧದಲ್ಲಿ ಅನುಭವಿಸುವ ಸಮಸ್ಯೆಗಳಿಗೆ ಆಧುನಿಕ ಶಿಕ್ಷಣ ಪರಿಹಾರ ಒದಗಿಸುವುದೆಂದು ನಿರೀಕ್ಷಿಸಲಾಗಿತ್ತು. ಆದರೆ ಸ್ತ್ರೀಯರ ಸಮಸ್ಯೆ ಯಥಾಸ್ಥಿತಿಯಲ್ಲಿ ಉಳಿಯಲು ಅಥವಾ ಬೆಳೆಯಲು ಆಧುನಿಕ ಶಿಕ್ಷಣವೂ ಕೈ ಜೋಡಿಸಿದ ಚಿತ್ರವನ್ನು ಈ ಕೃತಿ ನೀಡುತ್ತದೆ. ಇದರಿಂದ ಸಾಂಪ್ರದಾಯಿಕ ಸಮಾಜ ಎದುರಿಸಿದ ಸಂಘರ್ಷ ಆಧುನಿಕ ಶಿಕ್ಷಣದೊಂದಿಗೋ ಸ್ತ್ರೀಯರೊಂದಿಗೋ ಎಂಬ ಸಂದೇಹ ಹುಟ್ಟುತ್ತದೆ. ಹಾಗಾಗಿಯೇ ಸೊಸೆಯನ್ನು ಅತ್ತೆ ಮನೆಯಿಂದ ಹೊರಗೆ ಹಾಕುವ ಕ್ರಮ ಈ ಕಾದಂಬರಿಯಲ್ಲಿಯೂ ಅದರ ಒಂದಂಗವಾಗಿ ಚಿತ್ರಿತವಾಗಿದೆ. ಹೆಣ್ಣೇ ಹೆಣ್ಣಿನ ಶತ್ರು ಎಂಬಂತೆ ಬಿಂಬಿಸಿ ಪುರುಷ ಸಮಾಜದ ಸ್ವಹಿತಾಸಕ್ತಿಯ ಜಾಣ ಆಟವನ್ನು ಬಯಲು ಮಾಡಿದೆ.

ಹೀಗಿದು ಹಣ, ಸಂಪತ್ತು ರೂಪದಲ್ಲಿ ಬರುವ ವರದಕ್ಷಿಣೆ ಪರವಾಗಿ ಅಣ್ಣ, ಅಣ್ಣನ ಮಗಳು, ಸೊಸೆ ಮೊದಲಾದ ಮನುಷ್ಯ ಸಂಬಂಧಗಳೊಂದಿಗೆ ಸಂಘರ್ಷಾತ್ಮಕ ನಿಲುವು ತಾಳುತ್ತದೆ. ಹಣ ದ್ವಿಗುಣಗೊಳಿಸುವ ವ್ಯವಹಾರ ಮನುಷ್ಯ ಸಂಬಂಧಗಳನ್ನು ಹೇಗೆ ನಾಶಗೊಳಿಸುಬಲ್ಲುದು, ಅನ್ಯರನ್ನಾಗಿಸಬಹುದು ಮತ್ತು ಸ್ವನಾಶಕ್ಕೂ ಕಾರಣವಾಗಬಲ್ಲುದು ಎಂದು ಚಿತ್ರಿಸಿದೆ.

ಸಂಪ್ರದಾಯ ಮತ್ತು ಸ್ವಾವಲಂಬನೆ

ರಾಜೇಶ್ವರಮ್ಮನ ಅಣ್ಣನಾದ ರಾಮಶರ್ಮ ತೆಲುಗು ಮತ್ತು ಸಂಸ್ಕೃತಗಳಲ್ಲಿ ಪಂಡಿತ ಹಾಗೂ ಕೃಷಿಕ ವೃತ್ತಿಯಲ್ಲಿ ಆಸಕ್ತನಾಗಿದ್ದಾನೆ. ಆಧುನಿಕ ಶಿಕ್ಷಣ ಬ್ರಿಟಿಷರ ಸರಕಾರದಲ್ಲಿ ಉನ್ನತ ಅಧಿಕಾರಿಯನ್ನಾಗಿ ಮಾಡುತ್ತಿತ್ತು. ಆದರೆ ಅದರೊಂದಿಗೆ ಸ್ವಾಭಿಮಾನ, ಸ್ವಾತಂತ್ರ್ಯ ಸ್ವಾವಲಂಬಿ ಗುಣಗಳನ್ನು ನಾಶಪಡಿಸಿ ಗುಲಾಮ ಮನೋಭಾವವನ್ನು ಬೆಳೆಸುತ್ತಿತ್ತು. ಹಾಗಾಗಿ ಆತ್ಮಾಭಿಮಾನಿಗಳಾಗಿದ್ದವರಿಗೆ ಇಂಗ್ಲಿಷ್ ಶಿಕ್ಷಣ ಹೇಳಿ ಮಾಡಿಸಿದ್ದಲ್ಲ. ಆಧುನಿಕ ಜೀವನ ಉಪಭೋಗ ಜೀವನವೇ ಹೊರತು ಅನುಕರಣೀಯವಲ್ಲ. ಒಬ್ಬ ವ್ಯಕ್ತಿ ಗೌರವ ಪಡೆಯುವುದು ತನ್ನ ಘನತೆಯಿಂದ ಮಾತ್ರ. ಘನವಾದ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಲು ಅಥವಾ ಸಾಧಿಸಿಕೊಳ್ಳಲು ಮತ್ತೊಬ್ಬರನ್ನು ಅನುಕರಿಸುವುದರಿಂದ ಸಾಧ್ಯವಿಲ್ಲ. ಆತ್ಮ ಗೌರವವನ್ನು ಗುರುತಿಸದವನು ಆತ್ಮಾಭಿಮಾನಿಯಾಗಲು ಸಾಧ್ಯವಿಲ್ಲ. ಆತ್ಮಾಭಿಮಾನ ಸ್ವಾವಲಂಬನೆಯನ್ನು ರೂಢಿಸುತ್ತದೆ. ಹಾಗಾಗಿ ರಾಮಶರ್ಮ ತಂಗಿ ರಾಜೇಶ್ವರಮ್ಮಳಿಗೆ ಇಂಗ್ಲಿಷ್ ಶಿಕ್ಷಣ ಕುರಿತು ಭ್ರಮಾಧೀನಳಾಗದಂತೆ ಎಚ್ಚರ ನೀಡುತ್ತಾನೆ. ಆದರೆ ಅವನ ತಂಗಿ ತನ್ನ ಮಗನ ವಿದೇಶಿ ವ್ಯಾಸಂಗಕ್ಕಾಗಿ ತನ್ನ ಗಂಡನನ್ನು ಲಂಚಕ್ಕೆ ಪ್ರೇರೇಪಿಸುವುದಲ್ಲದೆ ತನ್ನಲ್ಲಿದ್ದ ಎಲ್ಲ ಆಸ್ತಿ ಸಂಪತ್ತನ್ನೆಲ್ಲ ಕಳೆದುಕೊಳ್ಳುತ್ತಾಳೆ. ಆಕೆ ತನ್ನ ಮಾನವನ್ನೂ ಕಳೆದುಕೊಂಡು ಕಡು ಬಡವೆಯ ಜೀವನ ನಡೆಸಬೇಕಾಗುತ್ತದೆ.

ರಾಮಶರ್ಮ ತನ್ನ ಮಗಳ ಮದುವೆಯಲ್ಲಿ ತನ್ನ ಅಳಿಯನಿಗೆ ನೀಡಬೇಕಾದ ಎಲ್ಲ ವರೋಪಚಾರಗಳನ್ನು ನೀಡಿ, ಸಾಂಪ್ರದಾಯಿಕ ಪುರುಷ ಸಮಾಜದ ವಕ್ತಾರನಂತೆ ನಡೆದುಕೊಳ್ಳುತ್ತಾನೆ.

ರಾಮಶರ್ಮನಿಗೆ ಬಾಲ್ಯ ವಿವಾಹ, ವರದಕ್ಷಿಣೆ ಸ್ತ್ರೀಯರ ಸಮಸ್ಯೆಯಾಗಿ ಕಾಣುವುದಿಲ್ಲ. ಆಧುನಿಕತೆ ಮತ್ತು ಅದರ ಭಾಗವಾದ ಆಧುನಿಕ ವಿದ್ಯಾಭ್ಯಾಸ ಹಿಂದೂ ಸಮಾಜದಲ್ಲಿ ಸಮಸ್ಯೆಗಳನ್ನು ಉಂಟುಮಾಡುತ್ತಿದೆ ಎಂದು ತಿಳಿಯುತ್ತಾನೆ. ಹಾಗಾಗಿಯೆ ಆತ ತನ್ನ ತಂಗಿಗೆ ಆಧುನಿಕ ಶಿಕ್ಷಣ ಮತ್ತು ಅದರ ಭಾಗವಾದ ಆಧುನಿಕ ಜೀವನವನ್ನು ಆಡಂಬರ ಎಂದೂ ಇದರಿಂದ ನಂಬಲರ್ಹ ಜೀವನ ಅಸಾಧ್ಯವೆಂದೂ ಮನವರಿಕೆ ಮಾಡಿಕೊಡುವಲ್ಲಿ ಯಶ ಪಡೆಯುತ್ತಾನೆ. ಇದು ಪುರುಷಪರ ಹಿಂದೂ ಸಮಾಜ ಕಾಲಮಾನದ ಅಗತ್ಯಕ್ಕನುಗುಣವಾಗಿ ಮುಮ್ಮುಖವಾಗಿ ಹೆಜ್ಜೆಯಿಡುವ ಹೆಣ್ಣು ಮಕ್ಕಳನ್ನು, ಹೆಜ್ಜೆ ಹಿಂದೆ ಸರಿಸುವಂತೆ ಮತ್ತು ಸಂಪ್ರದಾಯದೊಂದಿಗೆ ಹಿಮ್ಮುಖವಾಗಿ ನಡೆಯುವಂತೆ ಪ್ರೇರೇಪಿಸಿ ಈ ದೆಸೆಯಲ್ಲಿ ಒಗ್ಗೂಡಿದ ಕ್ರಮವನ್ನು ಕಟ್ಟಿಕೊಟ್ಟಿದೆ. ಇದು ಸಾಂಪ್ರದಾಯಿಕ ಅಂಶಗಳು ವಿಘಟಿತವಾಗದ ಹಾಗೆ, ಆಧುನಿಕ ಅಂಶಗಳಲ್ಲಿ ಕಳೆದುಹೋಗದ ಹಾಗೆ, ಒಂದಾಗಿ ಉಳಿಯುವಲ್ಲಿ ಅನುಸಂಧಾನ ನಡೆಸಿದ ಪ್ರಕ್ರಿಯೆ ಎಂಬಂತೆ ಕಾಣುತ್ತದೆ.

ಹೀಗೆ ಈ ಕಾದಂಬರಿ ವರದಕ್ಷಿಣೆ ಸಮಸ್ಯೆಯನ್ನು ಆಧುನಿಕ ಶಿಕ್ಷಣ ಮತ್ತು ಆಧುನಿಕ ಜೀವನ ರೂಢಿಸಿದ ಸಾಮಾಜಿಕ ಸಮಸ್ಯೆಯಾಗಿ ಚಿತ್ರಿಸುತ್ತದೆ. ಇದು ಹಿಂದೂ ಸಮಾಜದ ಸಾಂಪ್ರದಾಯಿಕ ಜೀವನ ಮೌಲ್ಯಗಳನ್ನು ಪರೋಕ್ಷವಾಗಿ ಸಮರ್ಥಿಸುವ ಕ್ರಮವೂ ಆಗಿದೆ. ಈ ಮೂಲಕ ಮಹಿಳೆಯರ ಸಮಸ್ಯೆಗಳನ್ನು ತೋರುಗಾಣಿಕೆಗಾಗಿ ಕೃತಿಯ ವಸ್ತುವಾಗಿ ಬಳಕೆ ಮಾಡಿಕೊಂಡಿದೆ. ಹೊರತು ಅದರ ಮೂಲವಾಗಲಿ ಪರಿಹಾರವಾಗಲಿ ಯಾವುದನ್ನೂ ಸೂಚಿಸದೆ ಕೈಗೆತ್ತಿಕೊಂಡ ವಸ್ತುವಿಗೆ ನ್ಯಾಯ ಒದಗಿಸದೆ ಹೋಗಿದೆ. ಈ ಮೂಲಕ ಹೆಣ್ಣು ಮಕ್ಕಳು ಇನ್ನೂ ಬಾಧಿತರಾಗಿಯೇ ಉಳಿದಿರುವುದನ್ನು ಕಾಣಿಸಿ ಯಥಾಸ್ಥಿತಿವಾದವನ್ನು ಕಾಯ್ದುಕೊಂಡಂತೆ ಕಂಡುಬರುತ್ತದೆ.

ಪ್ರಸ್ತುತ ಅಧ್ಯಾಯದಲ್ಲಿ ಪರಿಶೀಲಿಸಲಾದ ಹತ್ತು ಕಾದಂಬರಿಗಳ ಲೇಖಕರಲ್ಲಿ ಒಬ್ಬರು ಮಾತ್ರ ಮಹಿಳಾ ಲೇಖಕಿಯಾಗಿರುವುದು ಅಚ್ಚರಿಯೂ ವಿಶೇಷವೂ ಅನಿಸದಷ್ಟು ಪುರುಷ ಲೇಖಕರೊಂದಿಗೆ ಕೈ ಜೋಡಿಸಿರುವುದು ಕಾಣುತ್ತದೆ. ವೀರೇಶಲಿಂಗಂ ಪಂತುಲು ಸ್ವತಃ ಸುಧಾರಕರಾಗಿ ಸ್ತ್ರೀಯರ ಸ್ಥಿತಿಗತಿಗಳನ್ನು ಸುಧಾರಿಸಿದ್ದರೂ ತಮ್ಮ ಕೃತಿಗಳಲ್ಲಿ ಸ್ತ್ರೀ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದಂತೆ ಕಂಡರೂ ಸ್ತ್ರೀ ಸಮಸ್ಯೆಗಳಿಗೆ ಪರಿಹಾರವನ್ನು ಓದುಗರ ಊಹೆಗೆ ಬಿಟ್ಟು ತಾವು ನಿಷ್ಕ್ರಿಯರಾಗಿರುವುದನ್ನು ಕಾಣಿಸಿದ್ದಾರೆ. ಚಾರಿತ್ರಿಕ ಪಾತ್ರವಾದ 'ಅಹಲ್ಯಾಬಾಯಿ' ಪುರುಷ ಸಮಾಜದ ಸಾಮಾಜಿಕ ನಿಯಮಗಳ ಮಿತಿಯಲ್ಲಿಯೇ ಅಸಾಮಾನ್ಯವಾಗಿ ಮೆರೆದ ಸ್ಥಿತಿಯನ್ನು ಸಾಂಪ್ರದಾಯಿಕ ಮಹಿಳೆಯರಿಗೆ ಆದರ್ಶವಾಗಿ ಚಿತ್ರಿಸುತ್ತದೆ. ತೆಲುಗಿನ 'ರಾಜರತ್ನಮು' ಕಾದಂಬರಿ ವರದಕ್ಷಿಣೆ ಸಮಸ್ಯೆಯನ್ನು ಕೈಗೆತ್ತಿಕೊಂಡರೂ ಸ್ತ್ರೀ ಪಾತ್ರವನ್ನೆ ಗೌಣವಾಗಿ ನಡೆಸಿಕೊಂಡು ಪುರುಷ ಕೇಂದ್ರಿತ ಚಿಂತನೆಯನ್ನು ಮಂಡಿಸಿದೆ. ಕನ್ನಡದ 'ಇಂದಿರಾಬಾಯಿ' ಸ್ತ್ರೀ ಸಮಸ್ಯೆಗಳಿಗೆ ಪರಿಹಾರ ನೀಡುವ

ಸೂತ್ರವನ್ನು ಆಧುನಿಕ ಜೀವನ ವಿಧಾನದಂತೆ ಬಗೆಹರಿಸಿದರೂ ಅದರ ಮೂಲವನ್ನು ಪೂರ್ವ ಹಿಂದೂ ಸಮಾಜದಲ್ಲಿ ನೆಲೆಸಿದ್ದಂತೆ ಕಾಣಿಸಿದೆ. ಅದರಂತೆ ನಡೆದಿದೆ ಎಂದು ತೋರಿಸಿ ಹಿಂದೂ ಸಮಾಜದ ಜಾತಿ ಮರ್ಯಾದೆಯನ್ನೂ ಪುರುಷಾಧಿಕಾರವನ್ನೂ ಜಾತ್ಯಾಭಿಮಾನನ್ನೂ ಉಳಿಸಿಕೊಂಡಿದೆ. 'ವಾಗ್ದೇವಿ' ಪುರುಷ ಸಮಾಜದಲ್ಲಿ ಅಬಲೆಯಾಗಿದ್ದರೂ ಸಬಲೆಯಾಗಿ ಹೋರಾಡಬೇಕಿದ್ದಲ್ಲಿ ಸ್ಥಾಪಿತ ಸಾಮಾಜಿಕ ನಿಯಮಗಳನ್ನೆಲ್ಲ ಮೀರಬೇಕಾದ ಅನಿವಾರ್ಯತೆಯನ್ನು ಮನಗಾಣಿಸುತ್ತದೆ. 'ಇಂದಿರಾ' ಸ್ತ್ರೀಯರ ಪ್ರಗತಿಪರ ಸ್ಥಿತಿಗತಿಗಳನ್ನು ವಿರೋಧಿಸುತ್ತದೆ. ಸಾಂಪ್ರದಾಯಿಕ ಮಿತಿಯಲ್ಲಿ ಸ್ತ್ರೀಯ ಸ್ವಾತಂತ್ರ್ಯವನ್ನು ಚಿತ್ರಿಸುತ್ತದೆ. ಪುರುಷಪರ ಚಿಂತನೆಗಳಿಗನುಗುಣವಾಗಿ ಹೆಣ್ಣು ತನ್ನ ಬಾಳನ್ನು ರೂಪಿಸಿಕೊಳ್ಳುವ ವಿಧವೆಯ ಕತೆಯನ್ನು 'ನಭಾ' ಮತ್ತು 'ವಿರಾಗಿಣಿ' ನೀಡಿದೆ. 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿ ಸಾಂಪ್ರದಾಯಿಕ ಜೀವನದಲ್ಲಿ ಪುರುಷ ಸಮಾಜದೊಳಗೆ ಪ್ರತಿಭಟಿಸಿದ ಹೆಣ್ಣಿನಿಂದಲೂ ಪುರುಷ ಸಮಾಜದ ಪುರುಷರ ಚಿತಾವಣೆಯಿಂದಲೂ ನರಳುವ ಚಿತ್ರ ಹೆಣ್ಣಿನ ಅಸಹಾಯಕ ಸ್ಥಿತಿ ಬದಲಾಗಬೇಕಾದ ಅನಿವಾರ್ಯತೆಯನ್ನು ಕಟ್ಟಿಕೊಡುತ್ತದೆ. ಭಾರತೀಯ ಸಮಾಜದಲ್ಲಿ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳಿಗೆ ಆಧುನಿಕ ಶಿಕ್ಷಣ ಮತ್ತು ಆಧುನಿಕ ಜೀವನವೇ ಕಾರಣವೆಂದು ಚಿತ್ರಿಸುವ ಸಾಂಪ್ರದಾಯಿಕ ನೋಟ 'ಲಕ್ಷ್ಮೀಪ್ರಸಾದಂ' ಕಾದಂಬರಿಯಲ್ಲಿದೆ. ಹೀಗೆ ಸ್ತ್ರೀಯ ನಿಜವಾದ ಸಮಸ್ಯೆ ಈ ಕಾದಂಬರಿಗಳ ಆಚೆಗೆ ಉಳಿದಂತೆ ಕಾಣುತ್ತದೆ.

ಅಧ್ಯಾಯ : ಆರು

ಸಮಾರೋಪ

ಅಧ್ಯಾಯ : ಆರು

ಸಮಾರೋಪ

ಸ್ವಾತಂತ್ರ್ಯ ಸಮಾನತೆ ಮತ್ತು ಸೋದರತೆ ಎಂಬ ವಿಚಾರಧಾರೆಗಳು ಫ್ರಾನ್ಸ್ ಕ್ರಾಂತಿಯ ಕಾಲದಲ್ಲಿ ಹುಟ್ಟಿ ವಿಶ್ವದ ಎಲ್ಲ ಸಮಾಜಗಳ ಮೇಲೆ ಪ್ರಭಾವ ಬೀರಿದ ಮತ್ತು ವಾಸ್ತವ ಜೀವನದಲ್ಲಿ ಅಳವಡಿಕೆಯಾಗಲು ಒತ್ತಾಯ ಪಡಿಸಿದ ಜೀವನ ಮೌಲ್ಯಗಳಾಗಿವೆ. ಪುರುಷಾಧೀನ ಸ್ಥಿತಿಯಲ್ಲಿದ್ದ ಪಾಶ್ಚಿಮಾತ್ಯ ದೇಶಗಳ ಮಹಿಳೆಯರು ತಮ್ಮ ಸ್ಥಾನಮಾನಗಳಿಗಾಗಿ ಹೋರಾಟ ಮಾಡಲು ಮತ್ತು ಚಿಂತನೆ ನಡೆಸಲು ಇವು ಪ್ರೇರಕವಾಗಿವೆ. ಈ ವಿಚಾರಧಾರೆಗಳ ಹಿನ್ನೆಲೆಯಲ್ಲಿ ಭಾರತದ ಹಿಂದೂ ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟ ಸಮುದಾಯಗಳಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಸುಧಾರಣಾ ಚಳವಳಿಯ ಕಾಲಕ್ಕೆ ಮುಂಚೂಣಿಗೆ ಬಂದವು. ಮಾತ್ರವಲ್ಲದೆ, ಹಿಂದೂ ಸಮಾಜದಲ್ಲಿ ಸುಧಾರಣಾ ಚಳವಳಿಯ ಪೂರ್ವ ಕಾಲದ ಸ್ತ್ರೀಯರು ಎದುರಿಸಿದ ಸಮಸ್ಯೆಗಳು ನಂತರದ ಕಾಲದಲ್ಲಿ ಬದಲಾವಣೆಗೂ ಒಳಗಾದವು. ದೇಶೀಯ ರೂಢಿಗತ ಆಚರಣೆಗಳ ವಿರುದ್ಧ ವಿದೇಶಿ ವಿಚಾರ ಮಾಲೆ ಮೇಲುಗೈ ಪಡೆಯಿತು. ಆದರೂ ಸ್ತ್ರೀಯರ ಸ್ಥಿತಿಗತಿಗಳ ಸುಧಾರಣೆಗೆ ಒಲವನ್ನು ವ್ಯಕ್ತಪಡಿಸುತ್ತಲೆ ದೇಶೀಯತೆ ಪ್ರತಿಪಾದಿತವಾಯಿತು. ಈ ಪ್ರಕ್ರಿಯೆ ಬಂಗಾಳದಿಂದ ಆರಂಭವಾದ ನಂತರ ಇಡೀ ದೇಶವನ್ನು ಆವರಿಸಿಕೊಂಡಿತು. ಸುಧಾರಣಾವಾದಿ ನಾಯಕರಲ್ಲಿ ಮೇಲುಜಾತಿಗೆ ಸೇರಿದವರು ಸ್ತ್ರೀಯರಿಗೆ ರೂಢಿಗತ ಪದ್ಧತಿಗಳಿಂದ ಬಿಡುಗಡೆಗೊಳಿಸಬೇಕಾದ ಅಗತ್ಯವನ್ನು ಏರುದನಿಯಲ್ಲಿ ಮಾತಾಡಿದರೂ ಅದನ್ನು ವಾಸ್ತವದಲ್ಲಿ ಕಾರ್ಯರೂಪಕ್ಕೆ ತರಲು ಹಿಂದೇಟು ಹಾಕಿದರು. ಅಂತಹವರ ಪ್ರತಿನಿಧಿಯಾಗಿ ರಾನಡೆ ಚರಿತ್ರೆಯಲ್ಲಿ ದಾಖಲಾಗಿದ್ದಾರೆ. ಆ ಕಾಲದಲ್ಲಿ 'ಬದಲಾಗದ' ಮತ್ತು 'ಬದಲಾಗಬೇಕಾದ' ಧೋರಣೆಗಳ ನಡುವೆ ತೀವ್ರತರವಾದ ತಿಕ್ಕಾಟ ನಡೆದಿದ್ದು ಅವು ಕನ್ನಡ–ತೆಲುಗು ಆರಂಭ ಕಾಲದ ಕೃತಿಗಳಲ್ಲಿ ಅಡಕವಾಗಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಗಮನಿಸಲಾಗಿದೆ. ಅಲ್ಲದೆ ಹಿಂದೂ ಸ್ತ್ರೀಯರು ಎದುರಿಸಿದ ಸಮಸ್ಯೆಗಳಿಗೆ ಇರುವ ಪರಿಹಾರ ಸಾಂಪ್ರದಾಯಿಕತೆಯಲ್ಲೋ ಅಥವಾ ಆಧುನಿಕತೆಯಲ್ಲೋ ಎಂಬುದನ್ನು ಪರಿಶೀಲಿಸಲಾಗಿದೆ. ಸ್ತ್ರೀಯರ ಸುಧಾರಣೆಯ ದಿಕ್ಕುದೆಸೆಗಳನ್ನು

ನಿರ್ಣಯಿಸುವಲ್ಲಿ ವಹಿಸಿದ ನಿಲುವುಗಳು, ತಳೆದ ಧೋರಣೆಗಳು ಯಾವ ಬಗೆಯವು ಎಂಬುದನ್ನು ಈ ಕೃತಿಗಳಲ್ಲಿ ಅರಸಲಾಗಿದೆ.

ಅದಕ್ಕಾಗಿ ಹಿಂದೂ ಸಮಾಜದ ಸಾಮಾಜಿಕ ನಿಯಮಗಳು ಹೇಗೆ ಪ್ರಾಕೃತಿಕ ನಿಯಮಗಳನ್ನು ಆಧರಿಸಿದ ಮತ್ತು ಸೂಕ್ತವಾಗಿ ಒಳಗೊಂಡ ಜೀವನ ಮೌಲ್ಯಗಳಾಗಿ ಒಪ್ಪಿತವಾಗಿವೆ, ಪುರುಷ ಸಮಾಜ ಆ ಮೂಲಕ ಹೇಗೆ ಸ್ತ್ರೀ ಸಮುದಾಯವನ್ನು ದಮನಿತ ಅಧೀನ ಸ್ಥಿತಿಯಲ್ಲಿರಿಸಿ ತನ್ನ ಪರಂಪರೆಯ ಹಿರಿಮೆಯನ್ನು ಕಟ್ಟಿಕೊಂಡಿದೆ ಎಂಬುದನ್ನು ಪರಿಕಲ್ಪನೆಯಾಗಿ ಕಂಡು ಪ್ರಸ್ತುತ ಅಧ್ಯಯನದಲ್ಲಿ ಅನ್ವಯಿಸಿದೆ. ಹಾಗೆಯೇ ಪ್ರಾಕೃತಿಕ ನಿಯಮಗಳನ್ನು ದಮನ ಮಾಡುವ ಅಥವಾ ನಿರಾಕರಣೆ ಮಾಡುವ ಸಾಮಾಜಿಕ ನಿಯಮಗಳು ಹೇಗೆ ಸ್ತ್ರೀಯರ ವಿಷಯದಲ್ಲಿ ಹಲವು ಬಗೆಯ ಸಮಸ್ಯೆಗಳನ್ನು ಹುಟ್ಟು ಹಾಕಿವೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸಿದೆ. ಅಂತಹ ಸಮಸ್ಯೆಗಳು ಹೇಗೆ ಸಾಮಾಜಿಕ ಪಿಡುಗುಗಳೂ ಆಗಿವೆ ಅಥವಾ ಅಂಥ ಸಮಸ್ಯೆಗಳನ್ನು ಗುರುತಿಸುವ ಬಗೆ ಯಾವುದು ಮತ್ತು ಅವನ್ನು ಪರಿವರ್ತನೆಗೆ ಒಳಪಡಿಸಲು ಅಗತ್ಯವಾದ ಒತ್ತಡಗಳು ಯಾವ ನೆಲೆಗಳಲ್ಲಿವೆ ಅಥವಾ ಕಾರ್ಯನಿರ್ವಹಿಸಿವೆ ಎಂಬುದನ್ನು ಪರಿಕಲ್ಪನೆಯಾಗಿ ಕಂಡು ಅದರ ಹುಡುಕಾಟ ನಡೆಸಿದೆ. ಈ ಹುಡುಕಾಟವನ್ನು ಪ್ರಸ್ತುತ ಅಧ್ಯಯನದಲ್ಲೂ ಅನ್ವಯಿಸಿಕೊಂಡಿದೆ. ಸ್ತ್ರೀಯರ ಸಮಸ್ಯೆಗಳು ಮತ್ತು ಸುಧಾರಣೆಗಳು ಕುರಿತು 'ಬದಲಾಗದ' ಮತ್ತು 'ಬದಲಾಗಬೇಕಾದ' ನಿಲುವುಗಳಲ್ಲಿ ಉಂಟಾದ ಭಿನ್ನಾಭಿಪ್ರಾಯಗಳಿಗೆ ಇರಬಹುದಾದ ಮೂಲ ಮತ್ತು ಸ್ತ್ರೀ ಸುಧಾರಣ ಪ್ರಕ್ರಿಯೆಯ ನಂತರವೂ ಸ್ತ್ರೀಯರು ಅಧೀನ ಸ್ಥಿತಿಯಲ್ಲೆ ಉಳಿದಿರಲು ಇರಬಹುದಾದ ಕಾರಣವನ್ನು ಹುಡುಕತೊಡಗಿ ಪ್ರಸ್ತುತ ಅಧ್ಯಯನದಲ್ಲಿ ಈ ಕೆಳಗಿನ ಅಂಶಗಳನ್ನು ಗುರುತು ಮಾಡಿದೆ.

ಅಧ್ಯಯನಕ್ಕೆ ಒಳಪಡಿಸಿದ ಎರಡೂ ಭಾಷೆಯ ಹತ್ತು ಕಾದಂಬರಿಗಳಲ್ಲಿ ಸ್ತ್ರೀಯರು ಎದುರಿಸಿದ ಬಾಲ್ಯವಿವಾಹ, ಸ್ತ್ರೀ ಶಿಕ್ಷಣ, ವರದಕ್ಷಿಣೆ, ಸತಿಸಹಗಮನ ಮತ್ತು ವಿಧವಾ ಸಮಸ್ಯೆಗಳನ್ನು ಎಲ್ಲ ಏಳು ಜನ ಪುರುಷ ಬರಹಗಾರರು ಮತ್ತು ಏಕೈಕ ಮಹಿಳಾ ಲೇಖಕಿ ಚಿತ್ರಿಸುವಲ್ಲಿ ತಳೆದ ನಿಲುವು ಮತ್ತು ಧೋರಣೆ ಬಹುಪಾಲು ಏಕಪ್ರಕಾರವಾಗಿದೆ.

ಅಧ್ಯಯನಕ್ಕೆ ಒಳಪಡಿಸಿದ ಎಲ್ಲ ಕೃತಿಗಳು ಬಾಲ್ಯವಿವಾಹವನ್ನು ಸ್ತ್ರೀ ಸಮಸ್ಯೆಯೆಂದೇ ಭಾವಿಸುವುದಿಲ್ಲ, ಚಿಂತಿಸುವುದಿಲ್ಲ, ಚಿತ್ರಿಸುವುದೂ ಇಲ್ಲ. ಮಹಿಳೆಯರಿಗೆ ಆಧುನಿಕ ಶಿಕ್ಷಣದ ಅಗತ್ಯವನ್ನು ಬಹುಪಾಲು ತೆಲುಗು ಕಾದಂಬರಿಗಳು ದೊಡ್ಡದನಿಯಲ್ಲಿ ಪ್ರತಿಪಾದಿಸುತ್ತವೆ. ಆದರೆ ಅದರ ಹಿಂದೆ ಅಡಗಿರುವ ಪುರುಷ ಹಿತಾಸಕ್ತಿಯನ್ನು ಮರೆಮಾಚುತ್ತವೆ. ವರದಕ್ಷಿಣೆ ಸಮಸ್ಯೆ

ಕನ್ನಡದ ಕಾದಂಬರಿಗಳಲ್ಲಿ ಸಂಪ್ರದಾಯ ಜೀವನದ ಒಂದು ಭಾಗವಾಗಿ ಚಿತ್ರಿತವಾಗಿದೆ. ಸ್ತ್ರೀಯರು ಎದುರಿಸುತ್ತಿರುವ ವರದಕ್ಷಿಣೆ ಸಮಸ್ಯೆಗೂ ಆಧುನಿಕ ಶಿಕ್ಷಣವೇ ಹೇಗೆ ಕಾರಣವಾಗಿದೆ ಎಂಬ ದಿಕ್ಕು ತಪ್ಪಿಸುವ ಚಿತ್ರಣ ತೆಲುಗು ಕಾದಂಬರಿಗಳಲ್ಲಿದೆ. ಹಾಗಾಗಿ ತೆಲುಗು ಕಾದಂಬರಿಗಳು ಪುರುಷ ಹಿತಾಸಕ್ತಿಯನ್ನು ಮರೆಮಾಚುವ ಮೂಲಕವೇ ಸಾಧಿಸುತ್ತವೆ. ಸತಿಸಹಗಮನ ಪದ್ಧತಿಯನ್ನು 'ಮಾಡಿದ್ದುಣ್ಣೋ ಮಹಾರಾಯ' ವೈಭವೀಕರಿಸಿದೆ, ಮತ್ತು ತನ್ಮೂಲಕ ಸಾಂಪ್ರದಾಯಿಕ ಸ್ತ್ರೀ ಪಾತ್ರಗಳನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ. 'ಇಂದಿರಾಬಾಯಿ' ಕಾದಂಬರಿಯಲ್ಲಿ ಗತವೈಭವದ ನೆನಪಿನಂತೆ ಹಾದು ಹೋಗುತ್ತದೆ. 'ಸತ್ಯವತೀ ಚರಿತ್ರೆ' ಸ್ತ್ರೀಯರ ಸಂವೇದನಾಶೀಲ ಪ್ರತಿಕ್ರಿಯೆಯನ್ನು ದಾಖಲಿಸಿದರೂ ಪುರುಷ ಗುಲಾಮ ಮನಸ್ಥಿತಿಯನ್ನು ಕಟ್ಟಿಕೊಡುತ್ತದೆ. ವಿಧವಾ ವಿವಾಹ 'ಸತ್ಯವತೀ ಚರಿತ್ರೆ'ಯಲ್ಲಿ ಕಾರ್ಯರೂಪಕ್ಕೆ ಬರದ ಆಶಯವಾಗಿದೆ. 'ಇಂದಿರಾಬಾಯಿ' ಹಿಂದೂ ಸಮಾಜದ ಜಾತಿ ಮರ್ಯಾದೆಯ ಒಳಗೆ ವಿಧವಾ ವಿವಾಹವನ್ನು ಒಪ್ಪಿಕೊಳ್ಳುತ್ತದೆ. ಆಧುನಿಕತೆಯ ಮುಖವಾಡ ಧರಿಸಿ ಪೂರ್ವಕಾಲದ ಸಂಪ್ರದಾಯವನ್ನು ಎತ್ತಿ ಹಿಡಿಯುತ್ತದೆ. 'ಇಂದಿರಾ' ಕಾದಂಬರಿಯಲ್ಲಿ ದೇವಯಾನಿಯ ಆಧುನಿಕ ಚಿಂತನೆಗಳು ವಾಸ್ತವವಾಗುವಲ್ಲಿ ಸೋಲುತ್ತವೆ. ಪಂಡಿತೆ ರಾಧಾಬಾಯಿ ಮತ್ತು ಅವಳ ಶಿಷ್ಯೆ ಕಮಲ ಹಲವು ಬಾರಿ ವಿಧವಾ ವಿವಾಹ ಮಾಡಿಕೊಂಡ ವಿವರಗಳು ನಿರೂಪಕನ ವಕ್ರದೃಷ್ಟಿಗೆ ಒಳಗಾಗಿದೆ. 'ನಭಾ' ಪುರುಷ ಸಮಾಜದ ಗುಲಾಮತನದಿಂದ ಹೊರಬರದ ಹೆಣ್ಣೊಬ್ಬಳು ಪುರುಷ ಆಶಯಗಳಿಗೆ ತೆತ್ತುಕೊಂಡ ಸ್ತ್ರೀ ವಿರೋಧಿ ಚಿತ್ರಣವಿದೆ. ಹೀಗೆ ಕನ್ನಡ ಕಾದಂಬರಿಗಳಲ್ಲಿ ಹೆಚ್ಚು ಪಾಲು ವಿಧವಾ ವಿವಾಹ/ಸಮಸ್ಯೆ ಮತ್ತು ಸ್ತ್ರೀಯರ ಸ್ಥಿತಿಗಳ ಸುಧಾರಣೆಯನ್ನು ಕುರಿತಿದ್ದರೆ, ತೆಲುಗು ಕಾದಂಬರಿಗಳು ಆಧುನಿಕ ಶಿಕ್ಷಣ ಮತ್ತು ಸ್ತ್ರೀಯರ ಸುಧಾರಣೆಯನ್ನು ಕೇಂದ್ರೀಕರಿಸಿವೆ.

ಎರಡೂ ಭಾಷೆಯ ಎಲ್ಲಾ ಕೃತಿಗಳ ಬರಹಗಾರರು ತಮ್ಮ ಕಥಾ ತಂತ್ರಗಾರಿಕೆಯಲ್ಲಿ ಭಿನ್ನತೆಯನ್ನು ಮೆರೆದಿದ್ದಾರೆಯೆ ಹೊರತು ಸ್ತ್ರೀಯರ ಹಕ್ಕು, ಸ್ವಾತಂತ್ರ್ಯ, ಗೌರವ, ಘನತೆ, ಹಿತಾಸಕ್ತಿಗಳಿಗೆ ಆದ್ಯತೆ ಕೊಟ್ಟಂತೆ ಕಾಣುವುದಿಲ್ಲ. ಆಧುನಿಕತೆಯನ್ನು ಅದು ತಂದುಕೊಡುವ ಸೌಲಭ್ಯ–ಸವಲತ್ತುಗಳಿಗಾಗಿ ಆದರಿಸಲಾಗಿದೆಯೆ ಹೊರತು ಅದರ ಮಾನವೀಯ ಪರವಾದ ಆಶಯಗಳನ್ನು ಕಡೆಗಣಿಸಲಾಗಿದೆ. ಈ ಮೂಲಕ ಹಿಂದೂ ಪುರುಷ ಸಮಾಜವನ್ನು ನಕಾರಾತ್ಮಕವಾಗಿ ಚಿತ್ರಿಸಿರುವಂತೆ ತೋರಿಸುತ್ತಲೇ ಅಂತಿಮವಾಗಿ ಅದರ ಹಿತಾಸಕ್ತಿಯ ಪರ ನಿಲ್ಲುವ ಧೋರಣೆಗಳೇ ಪ್ರತಿಪಾದಿತವಾಗಿವೆ.

ಅಧ್ಯಯನಕ್ಕೊಳಪಡಿಸಿದ ಪ್ರತಿಯೊಂದು ಕೃತಿಯನ್ನು ಬಿಡಿಯಾಗಿ ಪರಿಶೀಲಿಸಲಾಗಿದೆ. ಆಯಾ ಕೃತಿಯ ವಸ್ತು, ಆಶಯ, ತಂತ್ರಗಳಿಗನುಗುಣವಾಗಿ ಸಂಪ್ರದಾಯ ಮತ್ತು ಆಧುನಿಕತೆಗಳ ಪ್ರಕ್ರಿಯೆ ಅದರಲ್ಲಿ ಅಳಪಟ್ಟಿರುವ ಕ್ರಮವನ್ನು ಅಧ್ಯಯನ ಮಾಡಲಾಗಿದೆ. 'ರಾಜಶೇಖರ ಚರಿತಮು' ತನ್ನ ದ್ವಂದ್ವ ನಿಲುವಿನಲ್ಲಿ ತೊಳಲಾಡುವ ಸ್ಥಿತಿಯಿದೆ. 'ಸತ್ಯವತೀ ಚರಿತ್ರೆ' ಆಧುನಿಕ ಶಿಕ್ಷಣ ಪಡೆದ ಮಹಿಳೆ ಹೇಗೆ ಸಾಂಪ್ರದಾಯಿಕ ಜೀವನ ಮೌಲ್ಯಗಳಲ್ಲಿ ಬಂಧಿತಳಾಗುತ್ತಾಳೆ ಮತ್ತು ಬದುಕಿನ ಹೊಸ ಸಾಧ್ಯತೆಗಳಿಗೆ ಹೇಗೆ ತೆರೆದುಕೊಳ್ಳದೆ ಹೋಗುತ್ತಾಳೆ ಎಂಬ ಚಿತ್ರಣವಿದೆ. ಪುರುಷಪರ ಸಮಾಜದ ಆಶಯಗಳಿಗೆ ಕಿಂಚಿತ್ತೂ ಊನವಾಗದ ಹಾಗೆ ಸ್ತ್ರೀಯರು ತಮ್ಮ ಅಸೀಮ ಸಾಹಸವನ್ನು ಮೆರೆದು ಸಾಧನೆ ಮಾಡಬೇಕಾದ ಚಿತ್ರವನ್ನು 'ಅಹಲ್ಯಾಬಾಯಿ' ಕಟ್ಟಿಕೊಟ್ಟಿದೆ. ವರದಕ್ಷಿಣೆ ಸಮಸ್ಯೆಯಲ್ಲಿ ಅಡಗಿರುವ ಪುರುಷ ಹಿತಾಸಕ್ತಿಯನ್ನು 'ರಾಜರತ್ನಮು' ಮರೆಮಾಚಿದೆ. 'ಇಂದಿರಾಬಾಯಿ'ಯ ವಿಧವಾ ವಿವಾಹ ಹಿಂದೂ ಸಮಾಜದ ಜಾತಿ ಕಟ್ಟಳೆ ಮತ್ತು ಜಾತಿ ಮರ್ಯಾದೆಯ ಮಿತಿಯಲ್ಲಿ ನಿರೂಪಿಸಿ ಆಧುನಿಕ ಸ್ತ್ರೀ ವಿಚಾರಗಳನ್ನು ನಿರಾಕರಿಸಿ ಪುರುಷ ಪರ ಹಿತಾಸಕ್ತಿಯ ಜಾತ್ಯಾಭಿಮಾನವನ್ನೆ ಮೆರೆದಿದೆ. ಸ್ತ್ರೀ ಪುರುಷರಿಬ್ಬರೂ ಪ್ರಾಕೃತಿಕ ನಿಯಮಗಳಿಗೆ ಒಳಪಟ್ಟಿದ್ದರೂ ಸಮಾಜ ವಿಧಿಸಿದ ಸಾಮಾಜಿಕ ನಿಯಮ ಮೀರಿದರೆ ಎದುರಾಗುವ ಬದುಕಿನ ವಿಫಲತೆಯನ್ನು 'ವಾಗ್ದೇವಿ' ಎತ್ತಿ ಹಿಡಿದಿದೆ. ಈ ಮೂಲಕ ವೈದಿಕ ಹಿಂದೂ ಪುರುಷ ಪರ ಸಮಾಜದ ಸಾಮಾಜಿಕ ನಿಯಮಗಳನ್ನು ಮೌನವಾಗಿ ಪ್ರತಿಪಾದಿಸಿ ಅವುಗಳಿಗೆ ಮೆಲುದನಿಯಲ್ಲಿ ಚಾಲನೆ ನೀಡಿದೆ. ಸ್ತ್ರೀಯ ಸ್ವಾತಂತ್ರ್ಯ ಪುರುಷ ಹಿತಾಸಕ್ತಿಯ ಮಿತಿಯಲ್ಲಿಯೇ ಇರಬೇಕು ಎಂದು 'ಇಂದಿರಾ' ಗಟ್ಟಿದನಿಯಲ್ಲಿ ಸಾರಿದೆ. 'ನಭಾ' ಒಬ್ಬ ವಿಧವೆಯಾಗಿ ಸಮಾಜದಲ್ಲಿ ತನ್ನ ಜೀವಿತದ ಹಕ್ಕುಗಳನ್ನು ಕಳೆದುಕೊಂಡರೂ ಪುರುಷ ಸಮಾಜದ ಜೀವನಮೌಲ್ಯಗಳ ಪ್ರತಿಪಾದನೆಯಲ್ಲೆ ತನ್ನ ಸ್ವಹಿತ ಕಾಣುವ ಅತಂತ್ರ ಸ್ಥಿತಿಯ ಚಿತ್ರಣವಿದೆ. 'ಮಾಡಿದ್ದುಣ್ಣೋ ಮಹಾರಾಯ ಸಮಾಜದಲ್ಲಿ ನಡೆಯುವ ಸ್ತ್ರೀಯರ ಮೇಲಿನ ಅಕೃತ್ಯಗಳನ್ನು ಅಣಕವಾಡುವ ರೀತಿಯಲ್ಲಿ ಪುರುಷ ಸಮಾಜದ ಕಿವಿ ಹಿಂಡುವ ಕೆಲಸ ಮಾಡಿದೆ. ಆದರೂ ಸ್ತ್ರೀಯರ ಸ್ಥಿತಿಗತಿಗಳ ಸುಧಾರಣೆಯ ದಿಕ್ಕುದೆಸೆಗಳನ್ನು ಅದು ಹೊಂದಿಲ್ಲ. ಸ್ತ್ರೀಯರು ಎದುರಿಸುತ್ತಿರುವ ವರದಕ್ಷಿಣೆ ಸಮಸ್ಯೆಗಳಿಗೆ ಆಧುನಿಕ ಶಿಕ್ಷಣ ನೇರ ಕಾರಣವಾಗಿದೆಯೆಂದು ಚಿತ್ರಿಸುವ 'ಲಕ್ಷ್ಮೀಪ್ರಸಾದಮು' ಸಾಂಪ್ರದಾಯಿಕ ಜೀವನವನ್ನು ಪಾಲಿಸುವ ನೀತಿ ನಿರೂಪಣೆಯಡಿ ಪುರುಷ ಹಿತಾಸಕ್ತಿಯನ್ನು ತಣ್ಣಗೆ ಪ್ರತಿಪಾದಿಸಿದೆ.

ಹಿಂದೂ ಪುರುಷ ಸಮಾಜದ ಲಕ್ಷಣಗಳಾದ ಜಾತಿಕಟ್ಟಳೆ ಮತ್ತು ಜಾತಿ ಮಾರ್ಯಾದೆಯನ್ನು ಒಳಗೊಂಡ ಸ್ವಧರ್ಮ ಮತ್ತು ರಾಷ್ಟ್ರೀಯ ಹಿತಾಸಕ್ತಿಗೆ ಚ್ಯುತಿಬರದಂತೆ ಪುರುಷಾಧಿಕಾರವನ್ನು

ಉಳಿಸಿಕೊಂಡು ಜಾತ್ಯಾಭಿಮಾನವನ್ನು ಮರೆಯುವ ಯತ್ನ ಸ್ತ್ರೀ ಸಮಸ್ಯೆಗಳ ಸುಧಾರಣಾ ರೂಪದಲ್ಲಿ ನಡೆದಿದೆ ಎಂಬುದನ್ನು ಈ ಅಧ್ಯಯನ ಗುರುತಿಸುತ್ತದೆ. ಹಿಂದೂ ಸ್ತ್ರೀಯರ ಸುಧಾರಣೆಯ ಮೂಲಕ ವಸಾಹತುಶಾಹಿ ಆಡಳಿತ ಆಧುನಿಕತೆ ಹೆಸರಿನಲ್ಲಿ ಮುಂದು ಮಾಡಿದ ವಿಚಾರಗಳು ಮತ್ತು ಉಂಟುಮಾಡಿದ ಆತಂಕಗಳ ನಿವಾರಣೆಯೇ ಪ್ರಮುಖವಾಗಿ ಪರಿಗಣಿತವಾಗಿದೆ. ರಾನಡೆಯಂಥ ಮೇಲ್ಜಾತಿ ಪರವಾದ ಸುಧಾರಕರ ನಿಲುವು ಈ ಕಾದಂಬರಿಕಾರರಿಗೆಲ್ಲ ಆದರ್ಶವಾಗಿ ಉಳಿದಿದೆ.

ಹೀಗೆ ಮಾನವನ ಘನತೆ ಗೌರವ ಮತ್ತು ಆಜನ್ಮ ಹಕ್ಕುಗಳನ್ನು ಹಿಂದೂ ಸಮಾಜ ತನ್ನ ಸ್ತ್ರೀ ಸಮುದಾಯಕ್ಕೆ ಆಧುನಿಕತೆಯ ಹೆಸರಿನಲ್ಲಿ ನೀಡಲು ನಿರಾಕರಿಸಿದೆ. ವಸಾಹತುಶಾಹಿ ಎತ್ತಿದ ನಾಗರಿಕ ಪ್ರಜ್ಞೆಯ ಸವಾಲನ್ನು ಸ್ವೀಕರಿಸಿಯೂ ಸ್ತ್ರೀಯರ ಸ್ವಾತಂತ್ರ್ಯ, ಸಮಾನತೆ, ಹಕ್ಕುಗಳನ್ನು ತನ್ನ ಪುರುಷಾಧಿಕಾರದ ಅಧಿಪತ್ಯಕ್ಕೆ ಚ್ಯುತಿ ಬಾರದಂತೆ ನೀಡಲು ಯತ್ನಿಸಿದೆ. ಪುರುಷ ಹಿತಾಸಕ್ತಿ ಮೀರಿದ ಸ್ತ್ರೀಯರ ಸಮಾನತೆಯಿಂದ ಹಿಂದೂ ಸಮಾಜ ಅವರ ಮೇಲೆ ನಿಯಂತ್ರಣ ಇರಿಸಿಕೊಳ್ಳಲು ಸಾಧ್ಯವಾಗದೆಂದು ಭಯಪಟ್ಟಿದೆ. ಆ ಸ್ಥಿತಿಯಿಂದ ಸ್ತ್ರೀಯರ ಮೇಲೆ ಪುರುಷರ ಅಂಕುಶವಿಲ್ಲದಂತೆ ಉಂಟಾಗುತ್ತದೆ. ಪುರುಷರು ಮಹಿಳೆಯರಿಗಿಂತ ಅಧಿಕತರವಾದ ಸ್ಥಾನ ಹೊಂದಿದವರು ಎಂದು ಪ್ರತಿಪಾದಿಸಲು ಇದರಿಂದ ಪುರುಷರಿಗೆ ಅವಕಾಶ ಇಲ್ಲದಂತಾಗುತ್ತದೆ. ಪುರುಷ ಧರ್ಮ ಎಂದಿಗೂ ತನ್ನ ಸ್ವಹಿತಾಸಕ್ತಿಯ ವಿರುದ್ಧ ತಾನೇ ಕೈಕಟ್ಟಿ ಕೂಡುವುದಿಲ್ಲವೆಂದೇ ಇದರಿಂದ ಕಂಡುಬರುವ ಅಂಶವಾಗಿದೆ. ಹಿಂದೂ ಸಮಾಜದ ಪುರುಷ ವಂಶದ ಅಸ್ತಿತ್ವದ ಪ್ರಶ್ನೆಯಾಗಿ ಇದನ್ನು ಸ್ವೀಕರಿಸಿದಂತಿದೆ. ಇದಕ್ಕೆ ಹಿಂದೂ ಧರ್ಮದಲ್ಲಿ ಪುರುಷಾಧಿಕಾರವೆ ಪುರುಷ ಅಧಿಪತ್ಯದ ಪ್ರಮುಖ ಅಂಶವಾಗಿ ಪ್ರತಿಬಿಂಬಿತವಾಗಿರುವುದು ಕಾರಣವಿದ್ದಂತಿದೆ. ಅದು ಸದಾಕಾಲ ಪುರುಷಪರ ರಾಜಕಾರಣದಲ್ಲಿ ಸಕ್ರಿಯವಾಗಿ ಒಳಗೊಂಡಿರುತ್ತದೆ. ಸ್ತ್ರೀಯರು ತಮಗೆ ದತ್ತವಾದ ಹಕ್ಕು, ಸ್ವಾತಂತ್ರ್ಯ, ಸಮಾನತೆಯ ಅವಕಾಶವನ್ನು ಪಡೆದುಕೊಳ್ಳುವುದು ಅಂದರೇನೆ ಪುರುಷರ ಕಣ್ಣಲ್ಲಿ ತಮ್ಮ ವಿಶೇಷಾಂಶಗಳು ಮರೆಯಾಗುವುದೇ ಆಗಿದೆ. ಹಾಗಾಗಿ ಪುರುಷಾಧಿಕಾರ ಎಂಬುದು ಹಿಂದೂ ಸಮಾಜದಲ್ಲಿ ಪಟ್ಟಭದ್ರ ಹಿತಾಸಕ್ತಿಯಾಗಿ ರೂಪತಳೆದು ಬಿಟ್ಟಿದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಹಿಂದೂ ಸಮಾಜದ ಮಹಿಳೆಯರ ಪರವಾದ ಸುಧಾರಣಾ ಕ್ರಮಗಳು ಪುರುಷಾಧಿಕಾರದ ಹಿತಾಸಕ್ತಿಯನ್ನು ಕೇಂದ್ರವಾಗಿರಿಸಿಕೊಂಡೇ ನಡೆದಿರುವುದನ್ನು ಕಾಣಬಹುದು. ಈ ಮೂಲಕ ತನ್ನ ಸ್ವಧರ್ಮ ಹಿತ ಮತ್ತು ರಾಷ್ಟ್ರೀಯ ಹಿತವನ್ನು ಹಿಂದೂ ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೆ ಸಾಧಿಸಲು ಅದು ಸಾಧ್ಯಮಾಡಿಕೊಂಡಿದೆ. ಮಾತ್ರವಲ್ಲ, ಸ್ತ್ರೀ

ಕೇಂದ್ರಿತ ಮಹಿಳೆಯರ ಹಿತಾಸಕ್ತಿಗೆ ಅನುಗುಣವಾಗಿ ಸುಧಾರಣೆಯನ್ನು ಕೈಗೊಳ್ಳಲು ಹಿಂದೂ ಪುರುಷ ಸಮಾಜ ಹಿಂದೇಟು ಹಾಕಿದೆ. ಅಂಥ ಸುಧಾರಣಾ ಕ್ರಮವನ್ನು ಆಧುನಿಕ ವಿರೋಧಿ ನೆಲೆಯಲ್ಲಿ ಕಂಡು ಅರಸಿದೆ. ಸ್ತ್ರೀಯರ ಮೇಲಿನ ಪುರುಷರ ಹಿಡಿತ ತಪ್ಪಿ ಹೋಗಬಾರದೆಂಬ ಎಚ್ಚರ ಸದಾಕಾಲ ಜಾಗ್ರತ ಸ್ಥಿತಿಯಲ್ಲಿದ್ದು ಕಾರ್ಯನಿರ್ವಹಿಸಿರುವುದನ್ನು ಕಾಣಬಹುದು.

ಹಿಂದೂ ಸಮಾಜ ತಳೆದ ಪುರುಷಪರ ಧೋರಣೆಯಿಂದಾಗಿಯೆ ಅದು ತನಗೆ ಕಳಂಕವನ್ನುಂಟು ಮಾಡಿದ್ದ ಸ್ತ್ರೀಯರ ಸಮಸ್ಯೆಗಳಲ್ಲಿ ಬಹುಪಾಲು ಮಟ್ಟಿಗೆ ಬಾಲ್ಯವಿವಾಹವನ್ನು ಕಾಲಕ್ರಮದಲ್ಲಿ ಕೈಬಿಟ್ಟಿರುವಂತೆ ಕಾಣುತ್ತದೆ. ಸ್ತ್ರೀಯರಿಗೆ ಶಿಕ್ಷಣವನ್ನು ವ್ಯಾಪಕವಾಗಿ ನೀಡಿದೆಯಾದರೂ ಪುರುಷ ಹಿತಾಸಕ್ತಿಗೆ ವಿರುದ್ಧವಾಗದಂತೆ ನೋಡಿಕೊಂಡಿದೆ. ವರದಕ್ಷಿಣೆ ಈ ಹಿಂದಿಗಿಂತಲೂ ಇಂದು ಗಂಭೀರ ಸ್ವರೂಪ ತಳೆದಿದೆ. ಮದುವೆಯಾಗಿ ಬಂದ ಸೊಸೆ ಮನೆಮಗಳ ಹಾಗೆ ಕುಟುಂಬದ ಸದಸ್ಯಳೆ ಹೊರತು ಕೆಲಸದಾಳಲ್ಲ ಎಂದು ಈ ದೇಶದ ನ್ಯಾಯಾಂಗ ವ್ಯವಸ್ಥೆ ಅಭಿಪ್ರಾಯ ಪಡುವಷ್ಟು ವರದಕ್ಷಿಣೆಯ ಸಮಸ್ಯೆ ಜ್ವಲಂತವಾಗಿ ಮಹಿಳೆಯರನ್ನು ಬಲಿ ತೆಗೆದುಕೊಳ್ಳುತ್ತಿದೆ. ವರದಕ್ಷಿಣೆ ಸಂಬಂಧ ವಧು ದಹನ, ಕಿರುಕುಳ, ಹಿಂಸೆ, ಮನೆಯಿಂದ ಹೊರಹಾಕುವಿಕೆ ಸಾಮಾನ್ಯವಾಗಿಬಿಟ್ಟಿವೆ. ಸ್ತ್ರೀಯರ ಸ್ವಾತಂತ್ರ್ಯ, ಸಮಾನತೆ, ಹಕ್ಕುಗಳೆಲ್ಲ ಪುರುಷ ಹಿತಾಸಕ್ತಿಯ ಅಡಿಯಲ್ಲಿ ಉಳಿದಿರುವುದರಿಂದ ವರದಕ್ಷಿಣೆ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಸಾಗುತ್ತಿದೆ. ಸತಿಸಹಗಮನ ಪದ್ಧತಿ ಬಹುಪಾಲು ನಿಷೇಧಕ್ಕೆ ಒಳಪಟ್ಟಿದೆ. ಹೀಗಿದ್ದರೂ ಈ ಸಮಸ್ಯೆಯ ಹಿಂದೆ ಕಾರ್ಯ ನಿರ್ವಹಿಸಿದ್ದ ಜಾತಿ ಕಟ್ಟಳೆ ಮತ್ತು ಜಾತಿ ಮರ್ಯಾದೆಯನ್ನು ಇನ್ನೂ ಬಿಗಿಯಾಗಿಯೆ ಪುರುಷ ಸಮಾಜ ಪಾಲಿಸುತ್ತಿದೆ. ಇದರ ಪರಿಣಾಮವಾಗಿ ಸತಿ ಪದ್ಧತಿಯ ಸ್ಥಾನದಲ್ಲಿ ಮರ್ಯಾದಾ ಹತ್ಯೆಗಳೂ ಹೆಣ್ಣು ಭ್ರೂಣ ಹತ್ಯೆಗಳೂ ಹೆಚ್ಚು ಹೆಚ್ಚು ಜರುಗುತ್ತಿವೆ. ಸ್ತ್ರೀಯರ ವಿರುದ್ಧ ಪ್ರತಿ ಇಪ್ಪತ್ತು ನಿಮಿಷಕ್ಕೊಂದು ಅತ್ಯಾಚಾರ, ಪ್ರತಿ ಗಂಟೆಗೊಂದು ವರದಕ್ಷಿಣೆ ಸಾವು, ಅರ್ಧ ಗಂಟೆಗೊಂದು ಮಾನಭಂಗ ನಡೆಯುತ್ತಿದೆ. ಪ್ರತಿದಿನ ಐವತ್ತಕ್ಕೂ ಹೆಚ್ಚು ಮಹಿಳೆಯರ ಅಪಹರಣವಾಗುತ್ತಿದೆ. ಸ್ತ್ರೀಯರ ವಿರುದ್ಧ ನಡೆಯುತ್ತಿರುವ ಇನ್ನಿತರ ದೌರ್ಜನ್ಯಗಳು ಲೆಕ್ಕವಿಲ್ಲದಷ್ಟು ಜರುಗುತ್ತಿವೆ. ೨೦೧೧ರಲ್ಲಿ ಮಹಿಳೆಯರು ತಮ್ಮ ಗಂಡನ ಮನೆಯಲ್ಲಿ ಅನುಭವಿಸಿದ ಕಿರುಕುಳ, ಹಿಂಸೆಗಳಿಂದಾಗಿ ೬೬೧೯ ಪ್ರಕರಣಗಳು ದಾಖಲಾಗಿವೆ. ಅಲ್ಲದೆ ಸ್ತ್ರೀಯರನ್ನು ಮಾರಾಟ ಮಾಡಿದ ೧೧೩ ಪ್ರಕರಣಗಳು ಹಾಗೂ ಕೊಂಡುಕೊಂಡ ೨೭ ಪ್ರಕರಣಗಳು ೨೦೧೧ರಲ್ಲಿ ದಾಖಲಾಗಿರುವುದು ವರದಿಯಾಗಿದೆ. ಅನಾಗರಿಕರಾದ ಭಾರತೀಯರು ಆಳಿಸಿಕೊಳ್ಳಲು ಯೋಗ್ಯರೇ ಹೊರತು ಸ್ವತಃ ಆಳಿಕೊಳ್ಳಲು

ಅಲ್ಲವೆಂದು ಬ್ರಿಟಿಷರು ತಮ್ಮ ಆಡಳಿತ ಭದ್ರ ಪಡಿಸಿಕೊಳ್ಳಲು ಹದಿನೇಳು ಹದಿನೆಂಟನೆಯ ಶತಮಾನದಲ್ಲಿ ಭಾರತೀಯರ ಬಗ್ಗೆ ತಳೆದ ಅಭಿಪ್ರಾಯ ಇಂದಿಗೂ ಅನ್ವಯವಾಗುವಷ್ಟು ನಮ್ಮ ಸಮಾಜದಲ್ಲಿ ಅನಾಗರಿಕತೆ ಉಳಿದುಕೊಂಡಿದೆ. ಹೀಗಿದ್ದರೂ ವಿಧವೆಯರಿಗೆ ವಿಧಿಸಲಾಗಿದ್ದ ಕ್ರೂರ ಆಚರಣೆಗಳೆಲ್ಲ ಇಂದು ಕೈ ಬಿಟ್ಟು ಹೋಗಿವೆ. ವಿಧವೆಯ ಮರುವಿವಾಹ ವ್ಯಾಪಕವಾಗಿ ರೂಢಿಗೆ ಬಂದಿಲ್ಲದಿದ್ದರೂ ಸಮಾನ ಆಸಕ್ತರಿಗೆ ವಿಧವಾ ವಿವಾಹ ಮಾಡಿಕೊಳ್ಳಲು ಯಾವ ಅಡ್ಡಿ ಆತಂಕಗಳೂ ಇಲ್ಲದಂತಹ ಪರಿಸರವಿದೆ. ಮಹಿಳೆಯರ ಸ್ಥಿತಿಗತಿಗಳ ಈ ಚಿತ್ರ ಅವರ ಸ್ಥಾನಮಾನಗಳಲ್ಲಿ ಹೆಚ್ಚಿನ ವ್ಯತ್ಯಾಸ ಉಂಟು ಮಾಡಿರದಿದ್ದರೂ ಅದರ ಪರಿಣಾಮಗಳು ದೇಶದ ಲಿಂಗಾನುಪಾತ ಮತ್ತು ಅಭಿವೃದ್ಧಿ ಪಥದ ಸೂಚಿಯ ಮೇಲೆ ಉಂಟಾಗಿದೆ. ಭಾರತದಲ್ಲಿ ಸ್ತ್ರೀಯರ ಲಿಂಗಾನುಪಾತ ೧೯೦೧ರಲ್ಲಿ ಪ್ರತಿ ೧೦೦೦ ಪುರುಷರಿಗೆ ೯೭೨ ಇದ್ದದ್ದು, ೧೯೧೧ರಲ್ಲಿ ೯೬೪, ೧೯೨೧ರಲ್ಲಿ ೯೫೫, ೧೯೩೧ರಲ್ಲಿ ೯೫೦, ೧೯೪೧ರಲ್ಲಿ ೯೪೫, ೧೯೫೧ರಲ್ಲಿ ೯೪೬, ೧೯೬೧ರಲ್ಲಿ ೯೪೧, ೧೯೭೧ರಲ್ಲಿ ೯೩೦, ೧೯೮೧ರಲ್ಲಿ ೯೩೪, ೧೯೯೧ರಲ್ಲಿ ೯೨೭, ೨೦೦೧ರಲ್ಲಿ ೯೩೩ ಮತ್ತು ೨೦೧೧ರಲ್ಲಿ ೯೪೦ರಷ್ಟಾಗಿ ಕ್ರಮೇಣ ಕುಸಿದುಹೋಗಿದೆ. ಕರ್ನಾಟಕದ ಸ್ತ್ರೀಯರ ಲಿಂಗಾನುಪಾತ ೧೯೦೧ರಲ್ಲಿ ೯೮೩ ಇದ್ದದ್ದು, ೧೯೧೧ ರಲ್ಲಿ ೯೮೧, ೧೯೨೧ರಲ್ಲಿ ೯೬೯, ೧೯೩೧ರಲ್ಲಿ ೯೬೫, ೧೯೪೧ರಲ್ಲಿ ೯೬೦, ೧೯೫೧ರಲ್ಲಿ ೯೬೬, ೧೯೬೧ರಲ್ಲಿ ೯೫೯, ೧೯೭೧ರಲ್ಲಿ ೯೫೭, ೧೯೮೧ರಲ್ಲಿ ೯೬೩, ೧೯೯೧ರಲ್ಲಿ ೯೬೦, ೨೦೦೧ರಲ್ಲಿ ೯೬೪ ಮತ್ತು ೨೦೧೧ರಲ್ಲಿ ೯೬೮ರ ಪ್ರಮಾಣದಲ್ಲಿ ಇಳಿಮುಖವಾಗಿದೆ. ಪ್ರತಿ ಸಾವಿರ ಪುರುಷರಿಗೆ ಸಾವಿರಕ್ಕಿಂತ ಹೆಚ್ಚು ಇರಬೇಕಾದ ಸ್ತ್ರೀಯರ ಪ್ರಮಾಣ ಸಾವಿರಕ್ಕಿಂತಲೂ ಕಡಿಮೆಯಾಗಿರುವುದು ದುರಂತಮಯ ಬೆಳವಣಿಗೆಯಾಗಿದೆ. ಪ್ರತಿ ಸಾವಿರ ಪುರುಷರಿಗೆ ೨೦ನೇ ಶತಮಾನದಲ್ಲಿ ಭಾರತದಲ್ಲಿ ೨೮ರಿಂದ ೪೦ ಮಹಿಳೆಯರು, ಕರ್ನಾಟಕದಲ್ಲಿ ೧೭ರಿಂದ ೩೭ ಮಹಿಳೆಯರು 'ಕಾಣೆಯಾಗಿ' ಇದ್ದಾರೆ. ಈ ಅಂಕಿ ಅಂಶ ಮಹಿಳೆಯರ ಆಜನ್ಮ ಹಕ್ಕನ್ನು ಕಸಿದುಕೊಂಡು, ಸ್ವಾತಂತ್ರ್ಯವನ್ನು ನಿಯಂತ್ರಿಸಿ, ಘನತೆ ಗೌರವಗಳನ್ನು ಕಳೆದು, ಭ್ರೂಣ ಹತ್ಯೆಯಲ್ಲಿ ನಿರತವಾಗಿ ದೇಶದ ಪ್ರಗತಿಯನ್ನು ಕುಂಠಿತಗೊಳಿಸುವಲ್ಲಿ ಹಿಂದೂ ಸಮಾಜದ ಜೀವನ ಮೌಲ್ಯಗಳು ಸಕ್ರಿಯವಾಗಿರುವುದನ್ನು ಕಾಣಿಸುತ್ತದೆ. ಜೀವನದಲ್ಲಿ ಪುರುಷನಷ್ಟೇ ಸಮಾನ ಪಾತ್ರವಹಿಸುವ ಸ್ತ್ರೀಯರು ೨೦ನೇ ಶತಮಾನದ ಪೂರ್ವಸ್ಥಿತಿಯಲ್ಲಿದ್ದುದಕ್ಕಿಂತ ಹೆಚ್ಚು ಹೆಚ್ಚು ಇಂದಿನ ದಿನಗಳಲ್ಲಿಯೆ ಅಭದ್ರಳಾಗಿದ್ದಾಳೆ, ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ, ಪುರುಷರ ಅತಿರೇಕಗಳಿಗೆ ಒಳಗಾಗಿದ್ದಾಳೆ ಎಂಬುದು ಇದರಿಂದ ತಿಳಿಯುತ್ತದೆ. ಇಂದಿಗೂ ಮಹಿಳೆ ಆಧುನಿಕ

ಪರಿಸರದಲ್ಲಿ, ಆಧುನಿಕ ಪರಿಕರಗಳ ನಡುವೆ, ಆಧುನಿಕವಾಗಿ ಉಸಿರಾಡುತ್ತಲೆ ಪುರುಷಾಧಿಕಾರದ ಸಂಪ್ರದಾಯದ ಭದ್ರ ಹಿಡಿತದಲ್ಲಿ ನಲುಗುತ್ತಿದ್ದಾಳೆ.

ಹಾಗಾಗಿಯೆ ಇಂದಿಗೂ ಜಾತಿ ಪೋಷಣೆಯ ಪಾತ್ರದಲ್ಲಿ ಹೆಣ್ಣನ್ನು ಪದೇ ಪದೇ ಗುರುತಿಸಲಾಗುತ್ತಿದೆ. ಜಾತಿಯ ಸಾಮಾಜಿಕ ಮತ್ತು ರಾಜಕೀಯ ಆಯಾಮಗಳ ಬದಲು ಅದರ ಸಾಂಸ್ಕೃತಿಕ, ಕೌಟುಂಬಿಕ ಮತ್ತು ವ್ಯಕ್ತಿಗತ ನೆಲೆಯಲ್ಲಿಯೆ ಹೆಣ್ಣನ್ನು ಬಳಸಿಕೊಳ್ಳಲಾಗುತ್ತಿದೆ. ಅಲ್ಲದೆ ಪರಂಪರಾಗತ ಪುರುಷಾಧಿಕಾರವನ್ನು ಭದ್ರಪಡಿಸುವ ಮತ್ತು ಕಾಪಾಡುವ ಮೂಲ ಶಕ್ತಿಯಾಗಿ, ಸಲಕರಣೆಯಾಗಿಯೂ ಆಕೆ ಇಂದು ಬದಲಾಗಿದ್ದಾಳೆ. ಪುರುಷ ಸಮಾಜ ಹೆಣ್ಣಿನ ವಿಷಯದಲ್ಲಿ ಅನುಸರಿಸಿಕೊಂಡು ಬರುತ್ತಿರುವ ವಿವೇಕ ಈ ಮಟ್ಟದ್ದಾಗಿದೆ.

ಈ ಸ್ಥಿತಿ ಹಿಂದೂ ಮಹಿಳೆಯರಿಗೆ ಸೀಮಿತಗೊಳ್ಳದೆ ಭಾರತದ ಮುಸ್ಲಿಂ ಮಹಿಳೆಯರಿಗೂ ಅನ್ವಯವಾಗುವಂತಿರುವುದು ಪುರುಷಾಧಿಕಾರ ನಿರ್ದಿಷ್ಟ ಮತ ಧರ್ಮಕ್ಕೆ ಸಂಬಂಧಿಸಿದ ಸಮಸ್ಯೆ ಆಗಿರದೆ ಎಲ್ಲ ಸಮಾಜಗಳಿಗೂ ಸಂಬಂಧಿಸಿ ಏಕಪ್ರಕಾರವಾಗಿ ಕಾರ್ಯನಿರ್ವಹಿಸುತ್ತಿರುವಂತೆ ಕಾಣುತ್ತದೆ.

ಸ್ತ್ರೀಯರ ಸ್ಥಿತಿಗತಿಗಳ ಸುಧಾರಣೆ ಪುರುಷ ಹಿತಾಸಕ್ತಿಗೆ ಅನುಗುಣವಾಗಿರಬೇಕು ಎಂಬುದು ಪ್ರಸ್ತುತ ಅಧ್ಯಯನದಿಂದ ಕಂಡುಬರುವ ಅಂಶವಾಗಿದೆ. ಇದು ಇಂದಿಗೂ ಸ್ತ್ರೀಯರು ತಮಗೆ ಆಜನ್ಮವಾಗಿ ದತ್ತವಾಗಿರುವ ಹಕ್ಕು, ಸ್ವಾತಂತ್ರ್ಯ, ಸಮಾನತೆಗಳನ್ನು ಪಡೆಯದೆ ಇರುವುದರ ಸೂಚಕವಾಗಿದೆ. ಸ್ತ್ರೀಯರ ಸುಧಾರಣೆಯ ಸ್ಥಿತಿಗತಿ ಸ್ತ್ರೀಯರ ಹಿತಾಸಕ್ತಿಗೆ ಅನುಗುಣವಾಗಿ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ನಡೆಯುವಂತಾಗಬೇಕಿದೆ. ಆಗ ಮಾತ್ರ ಸ್ತ್ರೀಯರ ಅಭಿವೃದ್ಧಿ ಮತ್ತು ದೇಶದ ಅಭಿವೃದ್ಧಿ ಏಕಕಾಲದಲ್ಲಿ ಏರುಗತಿ ಕಾಣಲು ಸಾಧ್ಯವೆಂದು ಹೇಳಬಹುದು. ಅದು ಮಾತ್ರ ಸ್ತ್ರೀಯರ ಸ್ಥಿತಿಗತಿಗಳಲ್ಲಿನ ಸುಧಾರಣೆಯಲ್ಲಿ ನಿಜವಾದ ಬೆಳವಣಿಗೆಯನ್ನು ತರಬಲ್ಲ ಏಕೈಕ ಆಶಾಕಿರಣವಾಗಿದೆ.

ಅನುಬಂಧಗಳು

ಅನುಬಂಧ ೧

ಆರಂಭದ ಕನ್ನಡ ಮತ್ತು ತೆಲುಗು ಕಾದಂಬರಿಗಳು

ಕನ್ನಡ ಕಾದಂಬರಿಗಳು

೧. ಇಂದಿರಾಬಾಯಿ – ಗುಲ್ವಾಡಿ ವೆಂಕಟರಾವ್ – ೧೮೯೯

೨. ಭಾಗೀರಥಿ ಅಥವಾ ಮೂರ್ಖತ್ವದ ಯಾತನೆಗಳು – ಗುಲ್ವಾಡಿ ವೆಂಕಟರಾವ್ – ೧೯೦೦

೩. ಗೃಹಿಣಿ – ಶಾಂತಾಬಾಯಿ ನೀಲಗಾರ – ೧೯೦೫

೪. ವಾಗ್ದೇವಿ – ಬೋಳರ ಬಾಬುರಾಯ – ೧೯೦೫

೫. ಇಂದಿರಾ – ಕೆರೂರು ವಾಸುದೇವಾಚಾರ್ಯ – ೧೯೦೮

೬ ಮೈತ್ರೇಯಿ – ಹೊಸ್ಕೆರೆ ಚಿದಂಬರಯ್ಯ – ೧೯೧೨

೭ ಸತಿರೋಹಿಣಿ – ನಂ. ಶ್ರೀಕಂಠಯ್ಯ – ೧೯೧೨

೮. ತಾರಾ – ಹುರುಳಿ ಭೀಮರಾವ್ – ೧೯೧೩

೯. ರಾಣಾರಾಜಸಿಂಹ – ಸಿದ್ದಗಿರಿಯಪ್ಪ ರೇವಪ್ಪ ಸಬರದ – ೧೯೧೩

೧೦. ಅದ್ಭುತ ಪ್ರೇಮ – ಜಿ.ಹೆಚ್. ಹೊನ್ನಾಪುರ ಮಠ – ೧೯೧೪

೧೧. ನಭಾ – ತಿರುಮಲಾಂಬಾ – ೧೯೧೪

೧೨. ದಕ್ಷಕನ್ಯಾ – ತಿರುಮಲಾಂಬಾ – ೧೯೧೫

೧೩. ನನ್ನ ಸಂಸಾರ – ಸಿ. ವೆಂಕಟರಮಣ ಶಾಸ್ತ್ರಿ – ೧೯೧೫

೧೪. ಮಾಡಿದ್ದುಣ್ಣೋ ಮಹಾರಾಯ – ಎಂ.ಎಸ್. ಪುಟ್ಟಣ್ಣ – ೧೯೧೫

೧೫. ಕಲ್ಯಾಣಿ – ಸಿದ್ದಗಿರಿಯಪ್ಪ ರೇವಪ್ಪ ಸಬರರು – ೧೯೧೭

೧೬. ಭೀಷಣ ಚಿತ್ರ – ಹಣಮಂತ ವೆಂಕಟೇಶ ಸವಣೂರ – ೧೯೧೯

೧೭. ವಿರಾಗಿಣಿ – ತಿರುಮಲಾಂಬ –೧೯೨೦

೧೮. ನಿರ್ಭಾಗ್ಯವನಿತೆ – ಆರ್. ಕಲ್ಯಾಣಮ್ಮ – ೧೯೨೧

ತೆಲುಗು ಕಾದಂಬರಿಗಳು

೧. ಶ್ರೀ ರಂಗರಾಜು ಚರಿತ್ರೆ – ಗೋಪಾಲಕೃಷ್ಣ ಶೆಟ್ಟಿ (೧೮೭೧)

೨ ರಾಜಶೇಖರ ಚರಿತ್ರಮು – ವೀರೇಶಲಿಂಗಂ ಪಂತುಲು (೧೮೭೮)

೩. ಸತ್ಯವತೀ ಚರಿತ್ರಮು - ವೀರೇಶಲಿಂಗಂ ಪಂತುಲು (೧೮೮೩)

೪. ಸತ್ಯರಾಜ ಪೂರ್ವದೇಶ ಯಾತ್ರುಲು - ವೀರೇಶಲಿಂಗಂ ಪಂತುಲು

೫. ಮಂಜುವಾಣಿ ವಿಜಯಮು - ಪನಪ್ಪಾಕಮು ಅನಂತಾಚಾರ್ಯುಲು (೧೮೯೨)

೬. ಧರ್ಮವತಿ ವಿಲಾಸಮುಲು - ಖಂಡವಿಲ್ಲಿ ರಾಮಚಂದ್ರುಡು (೧೮೯೩)

೭. ರಾಮಚಂದ್ರವಿಜಯಮು - ಚಿಲಕಮರ್ತಿ ಲಕ್ಷ್ಮೀನರಸಿಂಹ (೧೯೦೪)

೮. ಸಂಜೀವರಾಯ ಚರಿತ್ರಮು - ತಲ್ಲಾ ಪ್ರಗಡ ಸೂರ್ಯನಾರಾಯಣ (೧೮೯೩)

೯. ವಿವೇಕ ವಿಜಯಮು - ಗೋಟೇಟಿ ಕನಕರಾಜ (೧೮೯೪)

೧೦. ಮಾಲತಿ ರಾಘವೀಯಮು - ಖಂಡವಿಲ್ಲಿ ರಾಮಚಂದ್ರುಡು (೧೮೯೫)

೧೧. ಹೇಮಲತ - ಚಿಲಕಮರ್ತಿ ಲಕ್ಷ್ಮೀನರಸಿಂಹ (೧೮೯೬)

೧೨. ಲಕ್ಷ್ಮೀಸುಂದರ ವಿಜಯಮು - ಖಂಡವಿಲ್ಲಿ ರಾಮಚಂದ್ರುಡು (೧೮೯೬)

೧೩. ಅಹಲ್ಯಾಬಾಯಿ - ಚಿಲಕಮರ್ತಿ ಲಕ್ಷ್ಮೀನರಸಿಂಹ (೧೮೯೭)

೧೪. ಕಪಾಲಕುಂಡಲ - (೧೮೯೯)

೧೫. ಓಬಯ್ಯ - ವೇಲೂರಿ ಶಿವರಾಮಶಾಸ್ತ್ರಿ (೧೯೨೦)

೧೬. ಲಕ್ಷ್ಮೀಪ್ರಸಾದಂ - ಕೇತವರಪು ಲಕ್ಷ್ಮಣಶಾಸ್ತ್ರಿ (೧೯೨೩)

೧೭. ಮನೋರಮ - ರಾಜಾಮಂಡ್ರಿ ಪ್ರಗಡ ಭುಜಂಗರಾವು

೧೮. ರಾಜರತ್ನಮು - ಚಿಲಕಮರ್ತಿ ಲಕ್ಷ್ಮೀನರಸಿಂಹ

೧೯. ಮಾತೃಮಂದಿರಂ - ತಲ್ಲಾ ಪ್ರಗಡ ಸೂರ್ಯನಾರಾಯಣ

೨೦. ಗಣಪತಿ - ಚಿಲಕಮರ್ತಿ ಲಕ್ಷ್ಮೀನರಸಿಂಹ

೨೧. ಸೋಮಶರ್ಮಾಭ್ಯುದಯಮು - ಶ್ರೀನಿವಾಸಾಚಾರ್ಯುಲು

೨೨. ಕೇಸರಿ ವಿಲಾಸಮು - ರೆಂಟಾಲ ವೆಂಕಟಸುಬ್ಬರಾವು

೨೩. ಭಾಸ್ಕರ ವಿಲಾಸಮು -ಬುಲುಸು ಪಾಪಯ್ಯಶಾಸ್ತ್ರಿ

(ಕ್ರ.ಸಂ.೧೬ ರಿಂದ ೨೩ರವರೆಗೆ ಇರುವ ಕಾದಂಬರಿಗಳು ೧೮೭೨ ರಿಂದ ೧೯೩೦ರೊಳಗೆ ಪ್ರಕಟಗೊಂಡಿರುವುದಾಗಿ ದ್ವಾನಾ. ಶಾಸ್ತ್ರಿಯವರು ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ.)

ಅನುಬಂಧ ೨

ಪರಾಮರ್ಶನ ಗ್ರಂಥಗಳು

ಕನ್ನಡ ಕೃತಿಗಳು

೧. ಅಪ್ಪಾಜಿಗೌಡ ಎಸ್.ಬಿ. (೧೯೮೯) – ನಂ. ತಿರುಮಲಾಂಬ ಒಂದು ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨. ಅಮರೇಶ ಎನ್. (೧೯೯೮) – ಹೈದ್ರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಅಶೋಕ ಹೆಚ್.ಕೆ. ಸಂ. (೨೦೦೫) – ಶಂಕರ ಮೊಕಾಶಿ ಅವರ ಕಾದಂಬರಿಗಳಲ್ಲಿ ಸಂಪ್ರದಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಆಮೂರ ಜಿ.ಎಸ್. (೨೦೦೬) – ಕನ್ನಡ ಕಥನ ಸಾಹಿತ್ಯ–ಕಾದಂಬರಿ, ಭಾನುಮತಿ ಶಾಹ, ಸಪ್ನ ಹೌಸ್, ಗಾಂಧೀನಗರ, ಬೆಂಗಳೂರು

೫. ಕೃಷ್ಣಮೂರ್ತಿರಾವ್ (ಅನು) (ಮೂಲ; ಜವಾಹರಲಾಲ್ ನೆಹರು) (೨೦೦೭) – ಭಾರತ ದರ್ಶನ, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು.

೬. ಕೋದಂಡರಾಮ ಎಸ್.ಕೆ. (೧೯೯೬) – ಕನ್ನಡ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು

೭. ಗಿರೀಶ್‌ಭಟ್ ವಿ. (೨೦೦೬) – ಆಧುನಿಕತೆಯ ವ್ಯಾಖ್ಯಾನ ಡಿ.ಆರ್. ನಾಗರಾಜ ಮಾದರಿ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

೮. ಗುಲ್ವಾಡಿ ವೆಂಕಟರಾಯರು (೨೦೧೧) – ಇಂದಿರಾಬಾಯಿ, ಕನ್ನಡ ಮತ್ತು ಸಂಸ್ಕೃತಿ ವಿಭಾಗ,ಕನ್ನಡ ಭವನ, ಬೆಂಗಳೂರು

೯. ಚಕ್ರಕೋಡಿ ಈಶ್ವರಶಾಸ್ತ್ರಿ (೧೯೮೨)–ಮನುಸ್ಮೃತಿ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ

೧೦. ತಿರುಮಲಾಂಬಾ (೧೯೨೦) – ನಭಾ, ಸತಿ ಹಿತೈಷಿಣೀ ಗ್ರಂಥಮಾಲೆ, ಸತಿ ಮಾತೃಮಂದಿರ, ನಂಜನಗೂಡು

೧೧. ಧಾರವಾಡಕರ್ ರಾ.ಯು. (೧೯೩೫)–ಹೊಸಗನ್ನಡ ಸಾಹಿತ್ಯದ ಉದಯ ಕಾಲ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨. ನಟರಾಜ ಹುಳಿಯಾರ್ (೨೦೦೪) – ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ನರಹಳ್ಳಿ ಬಾಲಸುಬ್ರಮಣ್ಯ (೨೦೦೬) – ನೆಲ ಸಂಸ್ಕೃತಿ, ಬೆಂಗಳೂರು

೧೪. ನಾಗಣ್ಣ ಸಿ. ಅನು. (೨೦೦೦) – ದಕ್ಷಿಣ ಭಾರತದ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ (ಮೂ)–ಚಂದ್ರಶೇಖರ್ ಎಸ್. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫. ನಾಗಪ್ಪಗೌಡ (೨೦೦೨)–ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಸಾಂಸ್ಕೃತಿಕ ಪಲ್ಲಟದ ಸ್ವರೂಪಗಳು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

೧೬. ನಾಗರಾಜು (ಸಂ) – ಕನ್ನಡ ಬಂಡಾಯ ಕಾವ್ಯ ಮತ್ತು ತೆಲುಗು ವಿಪ್ಲವ ಕಾವ್ಯ ತೌಲನಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೭. ಪವಾರ್ ಎನ್.ಬಿ. (೧೯೯೪)–ಕನ್ನಡ ಕಾದಂಬರಿಗಳಲ್ಲಿ ದಲಿತ ಪ್ರಜ್ಞೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೮. ಪಾಟೀಲ್ ಎಸ್.ಡಿ. (೧೯೯೨) – ಕನ್ನಡ ಕಾದಂಬರಿಗಳಲ್ಲಿ ವರ್ಗ ಸಂಘರ್ಷ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೯. ಪುಟ್ಟಣ್ಣ ಎಂ.ಎಸ್. (೨೦೧೧) – ಮಾಡಿದ್ದುಣ್ಣೊ ಮಹಾರಾಯ, ಕನ್ನಡ ಮತ್ತು ಸಂಸ್ಕೃತಿ ವಿಭಾಗ,ಕನ್ನಡ ಭವನ, ಬೆಂಗಳೂರು

೨೦. ಬರಗೂರು ರಾಮಚಂದ್ರಪ್ಪ (೨೦೦೧)–ಸಂಸ್ಕೃತಿ:ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು

೨೧. ಬಸವರಾಜ ಸಾದರ (ಸಂ.) (೨೦೦೨) – ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಘಟ್ಟಗಳು, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

೨೨. ಬೆಳಗಲಿ ದು.ನಿಂ. (೧೯೮೫) – ಕನ್ನಡ ಕಾದಂಬರಿ ಸಾಹಿತ್ಯ, ಕರ್ನಾಟಕ ವಿಶ್ವವಿದ್ಯಾಲಯ, ಉಪನ್ಯಾಸ ಗ್ರಂಥಮಾಲೆ, ಧಾರವಾಡ.

೨೩. ಬೋಳಾರ ಬಾಬುರಾಯ (೧೯೮೫) – ವಾಗ್ದೇವಿ, ಕನ್ನಡ ಮತ್ತು ಸಂಸ್ಕೃತಿ ವಿಭಾಗ, ಬೆಂಗಳೂರು

೨೪ ಭಾಗ್ಯಲಕ್ಷ್ಮಿ (ಸಂ.) – ಬಳ್ಳಾರಿ ಪರಿಸರದ ಕನ್ನಡ–ತೆಲುಗು ದ್ವಿಭಾಷಿಕತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೫. ಭೈರಪ್ಪ ಕೆ. (೧೯೯೬) – ಭಾರತೀಯ ಸಮಾಜ,–

೨೬. ಮಹೇಶ್ವರಿ ಯು. (೨೦೦೧) – ಇದು ಮಾನುಷಿಯ ಓದು, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ವಿವೇಕಾನಂದ ಕಾಲೇಜು, ಪುತ್ತೂರು

೨೭. ಮುರಳೀಧರ ಜಗತಾಪ (೧೯೯೫)–ಸಮಾಜ ಸುಧಾರಕ ಮಹಾತ್ಮಫುಲೆ, ಕರ್ನಾಟಕ ಪ್ರಕಾಶನ,ಬೆಂಗಳೂರು

೨೮. ಮೋಹನ ಕುಂಟಾರ್ ಎ. (೧೯೯೪) – ಇನಾಂದಾರರ ಕಾದಂಬರಿಗಳು, ಶೇಣಿ ಪ್ರಕಾಶನ, ಉಕ್ಕಿನಡ್ಕ, ಕಾಸರಗೋಡು.

೨೯. ಮೋಹನ ಕುಂಟಾರ್ ಎ. (೨೦೧೧) – ಪರಿಗ್ರಹ, ಸಿ.ವಿ.ಜಿ., ಇಂಡಿಯಾ, ಕಸ್ತೂರಬಾ ಭವನ, ಗಾಂಧಿಭವನ ಕ್ಯಾಂಪಸ್, ಬೆಂಗಳೂರು.

೩೦. ರಂಗನಾಥ ಬಿ.ಆರ್. (೨೦೦೭) – ಕುವೆಂಪು ಕೃತಿಗಳಲ್ಲಿ ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೧. ರಹಮತ್ ತರಿಕೇರೆ (೨೦೦೧) – ಮಾತು ತಲೆ ಎತ್ತಿದ ಬಗೆ, ಸರಸ್ವತಿ ಪುಸ್ತಕ ಮಾರಾಟ ಮಳಿಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೨. ರಾಮಚಂದ್ರನ್ ಸಿ.ಎನ್. (೧೯೮೮) – ತೌಲನಿಕ ಸಾಹಿತ್ಯ ಮತ್ತು ಇತರ ಲೇಖನಗಳು, ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು

೩೩. ಲಕ್ಷ್ಮೀಪತಿ ಸಿ.ಜಿ. (೨೦೦೨) – ಕರ್ನಾಟಕದ ಸಾಮಾಜಿಕ ಬದಲಾವಣೆ, ಸಮಾಜಶಾಸ್ತ್ರ ಹಾಗೂ ಸಾಹಿತ್ಯ ನೋಡಿರುವ ಬಗೆ, ಕನ್ನಡ ಭಾಷೆ ಮತ್ತು ನಿಕಾಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೪. ಲಿಂಗರಾಜಯ್ಯ ಕೆ. (೧೯೯೯) – ಕನ್ನಡ ಕಾದಂಬರಿಗಳ ವಸ್ತು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೩೫. ಲೋಲಾಕ್ಷಿ ಎನ್.ಕೆ. (೨೦೦೬) – ಕನ್ನಡ ಪತ್ರಿಕೆಗಳು ಮತ್ತು ಮಹಿಳೆ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ

೩೬. ವಾಸುದೇವಾಚಾರ್ಯ (೧೯೮೦) – ಇಂದಿರಾ, (ಎರಡನೇ ಆವೃತ್ತಿ) ಉಷಾ ಸಾಹಿತ್ಯ ಮಾಲೆ, ಮೈಸೂರು

೨೭. ವಾಸುದೇವಾಚಾರ್ಯ ಕೆರೂರು (೨೦೦೨) – ಸಂ.೨, ಸಮಗ್ರ ಕಾದಂಬರಿ, ಮನೋಹರ ಗ್ರಂಥಮಾಲಾ, ಧಾರವಾಡ

೩೮. ವಿಜಯಾ ದಬ್ಬೆ ಅನು. (೧೯೮೬) – ಗುರಜಾಡ (ಮೂಲ ವಿ.ಆರ್.ನಾರ್ಲ) ಸಾಹಿತ್ಯ ಅಕಾಡೆಮಿ, ಹೊಸದೆಹಲಿ

೩೯. ವಿವೇಕ ರೈ ಬಿ.ಎ. (ಸಂ.) (೧೯೮೭) – ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ದಕ್ಷಿಣ ಕನ್ನಡ

೪೦. ವಿಶಾಲಕ್ಷ್ಮಮ್ಮ (ಸಂ.) (೨೦೦೭) – ಗಿರೀಶ ಕಾರ್ನಾಡರ ನಾಲ್ಕು ನಾಟಕಗಳಲ್ಲಿ ಸಂಸ್ಕೃತಿಗಳ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ವೆಂಕಟ ಜಿ. ಭಸ್ಮೆ (೧೯೯೪) – ವಾತ್ಸಾಯನ ಕಾಮಸೂತ್ರ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ

೪೨. ಶಾಂತಿನಾಥ ದೇಸಾಯಿ (೧೯೬೯) – ಕನ್ನಡ ಕಾದಂಬರಿ ನಡೆದು ಬಂದ ರೀತಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪೩. ಶಾಸ್ತ್ರಿ ಎ.ಕೆ. (೧೯೮೩)–ಶೃಂಗೇರಿ ಧರ್ಮಸಂಸ್ಥಾನ, ಪ್ರಕಾಶಕರು, ಶೃಂಗೇರಿ ಮಠ, ಶೃಂಗೇರಿ

೪೪. ಶಿವರಾಮ ಪಡಿಕ್ಕಲ್ (೨೦೦೧) – ನಾಡು ನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ, ದಕ್ಷಿಣ ಕನ್ನಡ

೪೫. ಶಿವರುದ್ರಪ್ಪ ಜಿ.ಎಸ್. (ಸಂ.) (೧೯೭೭) – ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ, ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೪೬. ಶ್ರೀಧರ ಪಿಸ್ಸೆ (೨೦೦೭) ಕನ್ನಡ ದಾಸ ಸಾಹಿತ್ಯ ಮತ್ತು ಸಾಂಸ್ಕೃತಿಕ ಪಲ್ಲಟ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು

೪೭. ಶ್ರೀಪತಿ ತಂತ್ರಿ (೧೯೯೩)– ಸನೂತನ ವಿಶ್ವಧರ್ಮ, ಎಸ್.ಬಿ.ಎಸ್.ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು

೪೮. ಶೇಷಗಿರಿರಾಯ (೧೯೫೭) – ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ, ಶಾರದ ಪ್ರಕಾಶನ, ಗಾಂಧಿನಗರ, ಬೆಂಗಳೂರು

೪೯. ಸಂತೋಷಕುಮಾರ ಗುಲ್ವಾಡಿ (೧೯೮೯) ಕನ್ನಡ ಕಾದಂಬರಿಗಳಲ್ಲಿ ಪಿತಾಮಹ ಗುಲ್ವಾಡಿ ವೆಂಕಟರಾವ್ - ಬದುಕು ಬರಹ, ಕರ್ನಾಟಕ ಸಂಘ, ಪುತ್ತೂರು.

೫೦. ಸೀತಾರಾಮಯ್ಯ ವಿ. (೧೯೬೭ - ಸಂಪ್ರದಾಯ ಮತ್ತು ಹೊಸಮಾರ್ಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೧. ಸುಂದರಂ ಆರ್ವಿಯಸ್ (೧೯೮೭) - ತೆಲುಗು ಭಾಷೆ ಮತ್ತು ಸಾಹಿತ್ಯ, ಪ್ರಸಾರಾಂಗ, ಮೈಸೂರು.

೫೨. ಹರಿಕೃಷ್ಣ ಭರಣ್ಯ (೧೯೯೦) - ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ, ಪ್ರಭಸ ಬಿಡುಗಡೆ, ಮಧುರೈ

ಅಪ್ರಕಟಿತ ಪಿಎಚ್.ಡಿ. ಪ್ರಬಂಧಗಳು

೧. ಅನುಸೂಯ (೨೦೦೨)- ಭಾರತೀಯ ಸ್ತ್ರೀಯರ ಶೋಷಿತ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಬೋಜಮ್ಮ (೨೦೦೭) - ಪರಂಪರೆ ಮತ್ತು ಆಧುನಿಕತೆಯ ನಡುವೆ ಕೊಡವ ಮಹಿಳೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೩. ಮ್ಯಾಗೇರಿ ಐ.ಜೆ. (೨೦೦೧) - ವಸಾಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಯಲ್ಲಮ್ಮ ಕೆ. - ಆರಂಭ ಘಟ್ಟದ ದಕ್ಷಿಣ ಭಾರತದ ಕಾದಂಬರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ತೆಲುಗು ಕೃತಿಗಳು

೧. ಅಕ್ಕಿರಾಜು ರಮಾಪತಿರಾವ್ (೧೯೧೦)- ವೀರೇಶಲಿಂಗಂ ಪಂತುಲು ಅವರ ಡೈರಿ ಮತ್ತು ಲೇಖನಗಳು

೨. ಅಕ್ಕಿರಾಜು ರಮಾಪತಿರಾವ್ (೧೯೬೫) - ವೀರೇಶಲಿಂಗಂ ಸಮಗ್ರ ಪರಿಶೀಲನ, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್ಳ

೩. ಅಕ್ಕಿರಾಜು ರಮಾಪತಿರಾವ್ (೧೯೮೮) - ತೆಲುಗು ವೈತಾಲಿಕುಲು, ನಿರ್ದೇಶಕರು, ತೆಲುಗು ವಿಶ್ವವಿದ್ಯಾಲಯ, ಹೈದ್ರಾಬಾದ್

೪. ಆನಂದರಾಮಂ ಸಿ. (೧೯೭೬) - ತೆಲುಗು ನವಲಲ್ಲೊ ಕುಟುಂಬ ಜೀವನಂ, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್

೫. ಕುಟುಂಬರಾವ್ ಬಿ.ವಿ. (೧೯೬೬) – ಆಂಧ್ರ ನವಲಾ ಪರಿಣಾಮಂ. ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್

೬. ಕೇತವರಪು ವೆಂಕಟಶಾಸ್ತ್ರಿ (೧೯೪೮) – ಲಕ್ಷ್ಮೀಪ್ರಸಾದಂ (ಎರಡನೇ ಆವೃತ್ತಿ), ಸರಸ್ವತಿ ಪವರ್ ಪ್ರೆಸ್, ರಾಜಮಂಡ್ರಿ

೭. ಚಿಲಕಮರ್ತಿ ಲಕ್ಷ್ಮೀನರಸಿಂಹ (೧೮೯೭) – ಅಹಲ್ಯಾಬಾಯಿ, ದುರ್ಗಾ ಬುಕ್ ಡಿಸ್ಟ್ರಿಬ್ಯೂಟರ್ಸ್,ಪಬ್ಲಿಷರ್ಸ್,ಬುಕ್ ಸೆಲ್ಲರ್ಸ್ ಅಂಡ್ ಏಜೆಂಟ್ಸ್, ಕಾಕಿನಾಡ

೮. ಚಿಲಕಮರ್ತಿ ಲಕ್ಷ್ಮಿನರಸಿಂಹ (೨೦೦೭) – ರಾಜರತ್ನಮು, ಮಾನಸ ಪ್ರಚುರಣಲು, ಗವರ್ನರುಪೇಟ, ವಿಜಯವಾಡ

೯. ನಾರಾಯಣರೆಡ್ಡಿ ಸಿ. (೧೯೮೯) – ಆಧುನಿಕಾಂಧ್ರ ಕವಿತ್ವಮು, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್

೧೦. ಭವಾನಿ ಪಿ. (೧೯೯೪) – ತೆಲುಗು ನವಲಲ್ಲೊ ವಾಸ್ತವಿಕತಾ, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್

೧೧. ಭಾರತಿ ಎ. (೧೯೮೮) – ಚಿಲಕಮರ್ತಿ ಸಾಹಿತ್ಯ ಸೇವ, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್

೧೨. ಮೃಣಾಲಿನಿ ಸಿ. (೧೯೮೧) – ತೆಲುಗು ಸಾಂಘಿಕ ನವಲಲ್ಲೊ ಕಥಾ ಕಥನ ಶಿಲ್ಪಂ, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್

೧೩. ರಂಗಾಚಾರಿ ಎಂ. (೧೯೯೩) – ತೆಲುಗು ನವಲಲ್ಲೊ ಆಧುನಿಕ ಸ್ತ್ರೀ, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್

೧೪. ರಾಮಯ್ಯ ಬಾಡಾಲ ಅನು. (೧೯೭೩) – ವೀರೇಶಲಿಂಗಂ (ತೆಲುಗು ಮೂಲ: ಬಿ.ಆರ್. ನಾರ್ಲ), ಸಾಹಿತ್ಯ ಅಕಾಡಮಿ, ಹೊಸ ದೆಹಲಿ

೧೫. ರಘುನಾಥ ಸ. ಅನು. (೨೦೦೭) – ಕಂದುಕೂರಿ ವೀರೇಶಲಿಂಗಂ, ಸಂಕ್ಷಿಪ್ತ ಆತ್ಮಕಥೆ (ಮೂಲ:ಕೊಡವಜಗಂಟಿ ಕುಟುಂಬರಾವ್), ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

೧೬. ಶ್ರೀ ರಾಮಮೂರ್ತಿ ಯು. (೧೯೭೭) – ಆಧುನಿಕ ತೆಲುಗು ನವಲಾರೀತುಲು, ಕೃಷ್ಣದೇವರಾಯ ವಿಶ್ವವಿದ್ಯಾಲಯ, ಅನಂತಪುರಂ

೧೭. ವೀರಭದ್ರರಾವ್ ಕೊತಪಲ್ಲಿ (೧೯೫೬) – ತೆಲುಗು ಪೈ ಪಾಶ್ಚಾತ್ಯ ಪ್ರಭಾವಮು, ಆಂಧ್ರ ವಿಶ್ವವಿದ್ಯಾಲಯ, ಹೈದ್ರಾಬಾದ್

೧೮. ವೀರೇಶಲಿಂಗಂ ಪಂತುಲು (೧೯೨೮) – ರಾಜಶೇಖರ ಚರಿತ್ರಮು, ಸರಸ್ವತಿ ಪವರ್ ಪ್ರೆಸ್, ರಾಜಮಂಡ್ರಿ

೧೯. ವೀರೇಶಲಿಂಗಂ ಪಂತುಲು (೧೯೮೫) – ಸತ್ಯವತೀ ಚರಿತ್ರಮು,(ಎರಡನೇ ಆವೃತ್ತಿ) ವಿಶಾಲಾಂಧ್ರ ಪಬ್ಲಿಷಿಂಗ್ ಹೌಸ್, ಹೈದ್ರಾಬಾದ್

೨೦. ಸಂಜೀವಮ್ಮ ಪಿ. (೧೯೮೨) – ತೆಲುಗು ನವಲಲ್ಲೊ ಸಾಮಾಜಿಕ ಚೈತನ್ಯಂ, ಉಸ್ಮಾನಿಯ ವಿಶ್ವವಿದ್ಯಾಲಯ, ಹೈದ್ರಾಬಾದ್

೨೧. ಸುದರ್ಶನಂ ಆರ್.ಎಸ್. (೧೯೭೭) – ಸಮಾಜಮು–ಸಾಹಿತ್ಯಮು ರಾಜಮಹೇಂದ್ರಿ

ಇಂಗ್ಲಿಷ್ ಕೃತಿ

೧. Meenakshi Mukharji (ed) (2001) - Early Novels in India, Sahitya Akademy, New Delhi